ಮಹಿಳಾ ಕಥಾಸಾಹಿತ್ಯ: ಮಹಿಳೆ ಮತ್ತು ಕುಟುಂಬ ವಿನ್ಯಾಸಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು
ಶಕೀಲಾ ಕೆ

ಮಾರ್ಗದರ್ಶಕರು
ಡಾ. ಅಮರೇಶ ಎನ್
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಮಹಿಳಾ ಕಥಾಸಾಹಿತ್ಯ: ಮಹಿಳೆ ಮತ್ತು ಕುಟುಂಬ ವಿನ್ಯಾಸಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿರುವ ಮಹಾಪ್ರಬಂಧ)

ಸಂಶೋಧಕರು

ಶಕೀಲಾ ಕೆ

ಮಾರ್ಗದರ್ಶಕರು

ಡಾ. ಅಮರೇಶ ಎನ್

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಮಹಿಳಾ ಕಥಾಸಾಹಿತ್ಯ: ಮಹಿಳೆ ಮತ್ತು ಕುಟುಂಬ ವಿನ್ಯಾಸಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಶಕೀಲಾ ಕೆ** ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಅಮರೇಶ ಎನ್)
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದಿನಾಂಕ:
ಸ್ಥಳ: ವಿದ್ಯಾರಣ್ಯ

ಪ್ರಮಾಣ ಪತ್ರ

ಮಹಿಳಾ ಕಥಾಸಾಹಿತ್ಯ: ಮಹಿಳೆ ಮತ್ತು ಕುಟುಂಬ ವಿನ್ಯಾಸಗಳು ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಅಮರೇಶ ಎನ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಭಾಷಾನಿಕಾಯದ **ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ:

ಸ್ಥಳ: ವಿದ್ಯಾರಣ್ಯ

(ಶಕೀಲಾ ಕೆ)

ಸಂಶೋಧನ ವಿದ್ಯಾರ್ಥಿನಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು ೧–೬

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ಮಹತ್ವ

೧.೪. ಅಧ್ಯಯನದ ವ್ಯಾಪ್ತಿ

೧.೫. ಅಧ್ಯಯನದ ವಿಧಾನ

ಅಧ್ಯಾಯ ಎರಡು ೭–೨೯

ಮಹಿಳೆ ಮತ್ತು ಕುಟುಂಬ: ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ ಮೂರು ೩೦–೧೨೨

ಸ್ವಾತಂತ್ರ್ಯಪೂರ್ವ ಮಹಿಳಾ ಕಥಾಸಾಹಿತ್ಯದಲ್ಲಿ
ಮಹಿಳೆ ಮತ್ತು ಕುಟುಂಬದ ಸ್ವರೂಪ

೩.೧. ಪ್ರವೇಶಿಕೆ

೩.೨ ಕೊಡಗಿನ ಗೌರಮ್ಮ

೩.೩. ಸರಸ್ವತಿಬಾಯಿ ರಾಜವಾಡೆ

೩.೪. ಶ್ಯಾಮಲಾದೇವಿ ಬೆಳಗಾಂವಕರ

೩.೫. ಸರಸ್ವತಿದೇವಿ ಗೌಡರ

೩.೬. ಜಯಲಕ್ಷ್ಮಿ ಆರ್. ಶ್ರೀನಿವಾಸನ್

೩.೭. ಸಾವಿತ್ರಮ್ಮ ಎಚ್.ವಿ.

೩.೮. ವಾಣಿ

೩.೯. ತ್ರಿವೇಣಿ

೩.೧೦. ಕಾತ್ಯಾಯಿನಿ

೩.೧೧. ಸರಿತಾ ಕುಸುಮಾಕರ ದೇಸಾಯಿ

೩.೧೨. ಗೀತಾ ಕುಲಕರ್ಣಿ

೩.೧೩. ಶಾಂತಾದೇವಿ ಕಣವಿ

೩.೧೪. ಅನುಪಮಾ ನಿರಂಜನ

ಅಧ್ಯಾಯ ನಾಲ್ಕು ೧೨೩–೧೮೪

ಸ್ವಾತಂತ್ರ್ಯೋತ್ತರ ಮಹಿಳಾ ಕಥಾಸಾಹಿತ್ಯದಲ್ಲಿ

ಮಹಿಳೆ ಮತ್ತು ಕುಟುಂಬದ ಸ್ವರೂಪ

೪.೧. ಪ್ರವೇಶಿಕೆ

೪.೨. ವೀಣಾ ಶಾಂತೇಶ್ವರ

೪.೩. ಗೀತಾ ನಾಗಭೂಷಣ

೪.೪. ವೈದೇಹಿ

೪.೫. ಸಾರಾ ಅಬೂಬಕರ

೪.೬. ಬಾನು ಮುಷ್ತಾಕ್

೪.೭. ನೇಮಿಚಂದ್ರ

ಅಧ್ಯಾಯ ಐದು ೧೮೫–೨೩೦

ಹೊಸ ಶತಮಾನದ ಕಥೆಗಾರ್ತಿಯರು:

ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬದ ಸ್ವರೂಪ

೫.೧. ಪ್ರವೇಶಿಕೆ

೫.೨. ಸುನಂದಾ ಪ್ರಕಾಶ ಕಡಮೆ

೫.೩. ಸುಮಂಗಲಾ

೫.೪. ಸಂಧ್ಯಾ ಹೊನಗುಂಟಿಕರ

೫.೫. ನೀಲಾ ಕೆ.

೫.೬. ಜಾಹ್ನವಿ ಬಿ.ಟಿ

೫.೭. ವಿನಯಾ

ಅಧ್ಯಾಯ ಆರು ೨೩೧–೨೪೪

ಸಮಾರೋಪ

ಫಲಿತಗಳು

ಅನುಬಂಧಗಳು

ಮೂಲ ಪಠ್ಯಗಳು

ಸಹಾಯಕ ಗ್ರಂಥಗಳು

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

೧.೧. ಪೀಠಿಕೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ಮಹತ್ವ

೧.೪. ಅಧ್ಯಯನದ ವ್ಯಾಪ್ತಿ

೧.೫. ಅಧ್ಯಯನದ ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಮತ್ತು ವಿಧಾನ

೧.೧. ಪೀಠಿಕೆ

'ಹೆಣ್ಣಿನ ಒಡಲು ಕಥೆಗಳ ಕಡಲು' ಎಂಬ ಗಾದೆಯಂತೆ ಹೆಣ್ಣಿಗೂ ಕಥೆಗೂ ಅವಿನಾಭಾವ ಬಾಂಧವ್ಯವಿದೆ. ಹೆಣ್ಣು ಅನಾದಿ ಕಾಲದಿಂದಲೂ ಕಥೆ ಹೇಳುವುದರಲ್ಲಿ ಕೇಳುವುದರಲ್ಲಿ ನಿಪುಣೆಯಾಗಿದ್ದಾಳೆ. ಹಾಗಾಗಿ ಇಂದಿನ ಇಪ್ಪತ್ತೊಂದನೆಯ ಶತಮಾನದಲ್ಲೂ ಮಹಿಳೆಯರು ಸಣ್ಣಕಥೆ ಪ್ರಕಾರಕ್ಕೆ ಹೆಚ್ಚು ಒಗ್ಗಿಕೊಂಡು ಕಥಾಪರಂಪರೆಯನ್ನು ತಮ್ಮದೇ ಆದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕಟ್ಟಿ ಪ್ರಚುರಪಡಿಸಿದ್ದಾರೆ. ಮಹಿಳೆ ಬರವಣಿಗೆಯಲ್ಲಿ ತೊಡಗಿದ್ದು ಒಂದು ಸಾಧನೆಯೆಂದೇ ಹೇಳಬೇಕು. ವಸಾಹತುಶಾಹಿ ಶಿಕ್ಷಣದಿಂದ ಜಾಗೃತರಾದ ಪುರುಷರಿಗೆ ಸಾಂಪ್ರದಾಯಿಕ ಪರಂಪರೆ, ಆಧುನಿಕ ವಿಚಾರಗಳು ಪರಸ್ಪರ ಲಭ್ಯವಾದವು ಮುಖಾಮುಖಿಯಾದವು. ಈ ಸಂದರ್ಭದಲ್ಲಿ ಸಾಂಪ್ರದಾಯಿಕತೆಯನ್ನು ಬಿಡದೆ, ಆಧುನಿಕ ವೈಚಾರಿಕತೆಯನ್ನು ಬೆಳೆಸಿಕೊಂಡು ಪರಸ್ಪರ ಕೊಡು-ಕೊಳ್ಳುವಿಕೆಯಲ್ಲಿ ತೊಡಗಿದರು. ಆದರೂ ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಮಹಿಳಿಯರು ವಸಾಹತು ಶಿಕ್ಷಣದಿಂದ ಸಮಾಜದಲ್ಲಿದ್ದ ಲಿಂಗಭೇದ ನೀತಿಯನ್ನು ಕುರಿತು ವಿರೋಧ ವ್ಯಕ್ತಪಡಿಸುತ್ತಿದ್ದರು. ತಮ್ಮ ಬರವಣಿಗೆಯಲ್ಲಿ ಸ್ತ್ರೀ ಶಿಕ್ಷಣ, ಬಾಲ್ಯವಿವಾಹ, ವಿಧವಾವಿವಾಹ, ಬಾಲವೈಧವ್ಯ ಇತ್ಯಾದಿ ಸಮಸ್ಯೆಗಳನ್ನು ಕುರಿತು ಚಿಂತಿಸಿದರು.

ಈ ಸಂದರ್ಭದಲ್ಲಿ ಸಮಾಜದ ಮೇಲ್ವರ್ಗದ ಮಹಿಳೆಯರಿಗೆ ಸಮಾಜದ ಸುಧಾರಣಾ ವಾದಿ ಪ್ರಜ್ಞೆಯಿಂದಲೋ ಅಥವಾ ಉದಾರವಾದಿ ಮನೋಧರ್ಮದಿಂದಲೋ ಶಿಕ್ಷಣಕ್ಕೆ ಅವಕಾಶ ದೊರೆತು ಮಹಿಳಾ ಸಂಕುಲದಲ್ಲಿ ಜಾಗೃತಿಯನ್ನು ಉಂಟುಮಾಡಬೇಕೆಂಬ ಪ್ರೇರಣೆಯಾಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಹಲವು ಸಾಮಾಜಿಕ ಸಮಸ್ಯೆಗಳ ಜತೆಗೆ ವಸಾಹತುಶಾಹಿ ವ್ಯವಸ್ಥೆಯ ಹಲವು ಸಮಸ್ಯೆಗಳು ಈ ಮಹಿಳಾ ಬರಹಗಾರರಿಗೆ ತಟ್ಟಿದವು. ಅವರು ಅವೆಲ್ಲವನ್ನು ಅತ್ಯಂತ ಮುಖ್ಯವಾದ ಸಮಸ್ಯೆ ಎಂದು ತಮ್ಮ ಬರಹಗಳಿಗೆ ಆಯ್ದುಕೊಂಡಿದ್ದು ಸ್ತ್ರೀಯ ಸಮಸ್ಯೆಗಳನ್ನು. ಅದರಲ್ಲೂ ಕುಟುಂಬದಲ್ಲಿ ಮಹಿಳೆಯ ಸ್ಥಿತಿಗತಿಗಳನ್ನು ಕುರಿತು ಪ್ರಧಾನವ್ಯವಸ್ಥೆಯ ಸಮಾಜದಿಂದ ನಿರ್ಮಿತವಾದ ಸಾಂಪ್ರದಾಯಿಕ ಚೌಕಟ್ಟನ್ನು ಮೀರುವ

ಆಧುನಿಕ ವೈಚಾರಿಕತೆಯೊಂದಿಗೆ ಪರಸ್ಪರ ಮುಖಾಮುಖಿಯಾಗಿಸುತ್ತಾ ಸ್ತ್ರೀ ಸಮಸ್ಯೆಗಳನ್ನು ತಮ್ಮ ಸೃಜನಶೀಲ ಬರವಣಿಗೆಯಲ್ಲಿ ಅಭಿವ್ಯಕ್ತಿಸಿದರು. ಹೀಗೆ ಸ್ವಾತಂತ್ರ್ಯಪೂರ್ವದಲ್ಲಿ ದೇಶದ ಅಭಿವೃದ್ಧಿ ಸಾಧ್ಯವಾಗುವಲ್ಲಿ ಸ್ತ್ರೀ ಶಿಕ್ಷಣ ಅಗತ್ಯವಾಗಿದ್ದು, ಸುಶಿಕ್ಷಿತ ಸ್ತ್ರೀ ತನ್ನ ಕುಟುಂಬವನ್ನು ಜವಾಬ್ದಾರಿಯಿಂದ ನಿರ್ವಹಿಸುವಲ್ಲಿ ಹಾಗೂ ತನ್ನ ಮಕ್ಕಳನ್ನು ಮಾದರಿ ಪ್ರಜೆಗಳಾಗಿ ರೂಪಿಸುವಲ್ಲಿ, ಪತಿಗೆ ಅತ್ಯಂತ ನಿಷ್ಠೆಯಿಂದ ನಯ, ವಿನಯ, ಸಹನೆ, ತಾಳ್ಮೆಯಿಂದ ಹಿರಿಯರಿಗೆ ವಿಧೇಯರಾಗಿ ಸತಿತ್ವದ ಮೌಲ್ಯಗಳನ್ನು ಕಾಪಾಡಿಕೊಂಡು ಹೋಗುವಂತಹ ಶಿಕ್ಷಣವನ್ನು ನೀಡಲಾಗಿತ್ತು. ಅಲ್ಲದೆ ಅಪ್ರಾಪ್ತ ವಯಸ್ಸಿನಲ್ಲಿ ಬಾಲ್ಯವಿವಾಹದಿಂದ ಹೆಣ್ಣಿಗೆ ಆಗುವ ದೈಹಿಕ ಮಾನಸಿಕ ಹಿಂಸೆ, ಬಾಲವೈಧವ್ಯದಲ್ಲಿ ಕುಟುಂಬದ ಇತರ ಸದಸ್ಯರಿಂದ ಅನುಭವಿಸುವ ಹಿಂಸೆ– ಇಂತಹ ಹೀನಾಯಸ್ಥಿತಿಯಿಂದ ನಲಗುತ್ತಿರುವ ಮಹಿಳೆಯರು, ಅವರ ಬವಣೆಗಳು. ಅಲ್ಲದೆ ಇದೇ ಸಂದರ್ಭದಲ್ಲಿ ವಿಧುರವಿವಾಹಕ್ಕೆ ಆದ್ಯತೆಯಿದ್ದು ವಿಧವಾವಿವಾಹಕ್ಕೆ ಪ್ರೋತ್ಸಾಹವಿರದ ಸಂದರ್ಭದಲ್ಲಿ ಪರ್ಯಾಯವಾಗಿ ಹೆಣ್ಣು ಆಧ್ಯಾತ್ಮಿಕತೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಅಥವಾ ವಿಧವಾವಿವಾಹಕ್ಕೆ ಪ್ರೋತ್ಸಾಹ ನೀಡುವ ಪರಸ್ಪರ ದ್ವಂದ್ವಾತ್ಮಕ ಸಂಘರ್ಷದಲ್ಲಿ ಸಮಾಜದ ವ್ಯವಸ್ಥೆಯನ್ನು ಕುರಿತು ಕೌಟುಂಬಿಕ ರಾಜಕಾರಣವನ್ನು ತಮ್ಮದೇ ಆದ ಅಭಿವ್ಯಕ್ತಿಯಲ್ಲಿ ತಿರುಮಲಾಂಬ, ಕಲ್ಯಾಣಮ್ಮ ಮಹಿಳಾ ಸಮಸ್ಯೆಗಳನ್ನು ಕುರಿತು ಚಿಂತಿಸಿದರು.

ಆಧುನಿಕತೆ, ಕೈಗಾರೀಕರಣ ಮತ್ತು ನಗರೀಕರಣದಿಂದ ಹೆಣ್ಣು ಶಿಕ್ಷಣಕ್ಕಾಗಿ ಮತ್ತು ಉದ್ಯೋಗಕ್ಕಾಗಿ ಪಟ್ಟಣ ಪ್ರದೇಶಗಳಿಗೆ ವಲಸೆ ಬಂದ ಕಾರಣ ಕೂಡುಕುಟುಂಬಗಳು ಸರಳ ಕುಟುಂಬಗಳಾಗಿ ಮಾರ್ಪಾಟುಗೊಂಡವು. ಇಂತಹ ಸಂದರ್ಭದಲ್ಲಿ ಪರಸ್ಪರ ಗಂಡು ಹೆಣ್ಣು ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ತೊಡಗಿಕೊಂಡಿದ್ದು ಪರಸ್ಪರ ಆಕರ್ಷಣೆಯಿಂದ ಪ್ರೇಮ–ಪ್ರೀತಿಯಲ್ಲಿ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸ್ವತಂತ್ರರಿದ್ದರು. ಈ ಸಂದರ್ಭದಲ್ಲಿ ಅಂತರ್ಜಾತಿ ವಿವಾಹ ಕುರಿತು ಸಾಂಪ್ರದಾಯಿಕ ಕುಟುಂಬದ ಹಿರಿಯರ ವಿರೋಧ ಸಾಮಾನ್ಯವಾಗಿತ್ತು. ಅಲ್ಲದೆ ವಿವಾಹಪೂರ್ವ ಸಂಬಂಧದಲ್ಲಿ ಸಿಕ್ಕಿ ಸ್ತ್ರೀಯರು ಸಮಸ್ಯೆಗೀಡಾಗಿದ್ದರು. ಹೆಣ್ಣು ಉದ್ಯೋಗಸ್ಥಳಾಗಿದ್ದು ಇದರ ಜೊತೆಗೆ ಗಂಡನಿಗೆ ನಿಷ್ಠಳಾಗಿದ್ದು ಕೌಟುಂಬಿಕ ಕಾರ್ಯಗಳಾದ ಮಕ್ಕಳ ಲಾಲನೆ–ಪಾಲನೆ, ಗೃಹಕಾರ್ಯಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಹೋಗಬೇಕಾಗಿತ್ತು. ಹೀಗೆ ಹೆಣ್ಣು ಹೆಚ್ಚಿನ ಹೊರೆಯಿಂದ ಮಾನಸಿಕವಾಗಿ, ದೈಹಿಕವಾಗಿ ಹಿಂಸೆಗೆ ಒಳಗಾಗುತ್ತಿದ್ದಳು. ಈ ಸಂದರ್ಭದಲ್ಲಿ ಕುಟುಂಬದಲ್ಲಿ ಪುರುಷನೇ ಯಜಮಾನನಾಗಿದ್ದು ಇಡೀ ಕುಟುಂಬ ಆತನ ನಿಯಂತ್ರಣದಲ್ಲಿತ್ತು. ಸಂತಾನೋತ್ಪತ್ತಿ, ಲೈಂಗಿಕ ಸಮಸ್ಯೆ ಇತ್ಯಾದಿಗಳಿಂದ ಹೆಣ್ಣು ಅನುಭವಿಸುವ ಸಮಸ್ಯೆಗಳನ್ನು ಕುರಿತು ವಿರೋಧ ವ್ಯಕ್ತಪಡಿಸುತ್ತಾ, ಪ್ರಗತಿಪರ ವಿಚಾರಗಳನ್ನು ಸಾಂಪ್ರದಾಯಿಕ ಆಧುನಿಕತೆಯೊಂದಿಗೆ ಪರಸ್ಪರ ಮುಖಾಮುಖಿಯಾಗಿಸುತ್ತಾ ತಮ್ಮದೇ ಆದ ನೆಲೆಯಲ್ಲಿ ಮಹಿಳೆ ಸಮಸ್ಯೆಗಳನ್ನು ಕುರಿತು ತ್ರಿವೇಣಿ ಮುಂತಾದ ಲೇಖಕಿಯರು ಅಭಿವ್ಯಕ್ತಿ ನೀಡಿದ್ದಾರೆ.

ಸ್ವಾತಂತ್ರ್ಯೋತ್ತರ ಸ್ಥಿತ್ಯಂತರ ಸಂದರ್ಭದಲ್ಲಿ ಹೆಣ್ಣು ಉದ್ಯೋಗದಲ್ಲಿ ತೊಡಗಿಸಿ ಕೊಂಡಿದ್ದರೂ ಹೆಚ್ಚಿನ ಆದಾಯವಿಲ್ಲದ ಕೆಲಸಗಳನ್ನು ನಿರ್ವಹಿಸುತ್ತಿದ್ದಳು. ಒಟ್ಟಿನಲ್ಲಿ ಹೆಣ್ಣು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಿದ್ದಾಳೆ ಎಂಬುದು ಸಮಾಧಾನದ ಮಾತಾಗಿದ್ದರೂ, ಅದರ ಸಂಪೂರ್ಣ ನಿಯಂತ್ರಣ ಕುಟುಂಬದ ಯಜಮಾನನ ನಿಯಂತ್ರಣದಲ್ಲಿ ಮುಂದುವರಿಯುತ್ತಿತ್ತು. ಇಂತಹ ಸಂದರ್ಭದಲ್ಲಿ ತನ್ನ ಕಾರ್ಯದಲ್ಲಿ ಹೆಚ್ಚು ಶ್ರದ್ಧೆ ವಹಿಸಿ ಮುಂದುವರಿಯುವುದು ಕಷ್ಟವಾಗುತ್ತಿತ್ತು. ತನ್ನನ್ನು ಕುಟುಂಬದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳದಾದಾಗ ಇತರ ಸದಸ್ಯರ ವೈಮನಸ್ಸಿಗೆ ಕಾರಣವಾಗಿ ಕುಟುಂಬದಿಂದ ತಿರಸ್ಕೃತಳಾಗುತ್ತಿದ್ದಳು. ಇದು ಕುಟುಂಬ ವಿಘಟನೆಗೆ ಪ್ರಮುಖ ಕಾರಣವಾಗುತ್ತಿತ್ತು. ಈ ಸಂದರ್ಭದಲ್ಲಿ ಹೆಣ್ಣು ಪುರುಷರಂತೆಯೇ ಎಲ್ಲಾ ರೀತಿಯಿಂದಲೂ ಆರ್ಥಿಕವಾಗಿ ಹೆಚ್ಚು ಸ್ವಾತಂತ್ರ್ಯ ಪಡೆದಿದ್ದು ಸ್ವಾವಲಂಬನೆಯ ಬದುಕನ್ನು ಸಾಗಿಸುತ್ತಿದ್ದರೂ ಕುಟುಂಬದಲ್ಲಿ ಎರಡನೇ ದರ್ಜೆಯವಳಂತೆ ಭಾವಿಸಲಾಗುತ್ತಿತ್ತು. ಪರಸ್ಪರ ಕುಟುಂಬದ ಜವಾಬ್ದಾರಿಯನ್ನು ಸಮಾನವಾಗಿ ಹಂಚಿಕೊಂಡು ಪರಸ್ಪರ ನಂಬಿಕೆ, ಪ್ರೀತಿ ವಿಶ್ವಾಸವಿರುವ ಕುಟುಂಬವನ್ನು ಹೆಣ್ಣು ಬಯಸುತ್ತಿದ್ದಳು. ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾದಾಗ ಕುಟುಂಬವನ್ನು ತಿರಸ್ಕರಿಸುವ ಮನೋಭಾವವನ್ನೂ ಹೊಂದಿದ್ದಾಳೆ. ಹೀಗೆ ವ್ಯಕ್ತಿಅಭಿವೃದ್ಧಿಯೇ ಇಲ್ಲಿ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ವ್ಯವಸ್ಥೆಯನ್ನು ಮೀರುವ ಸಂದರ್ಭವನ್ನು ಕಾಣಬಹುದಾಗಿದೆ. ಈ ಸಂದರ್ಭದ ಆಧುನಿಕ ಮಹಿಳಾ ಬದುಕಿನ ಅನಾವರಣವನ್ನು ವೀಣಾ ಶಾಂತೇಶ್ವರ ಅವರ ಅಭಿವ್ಯಕ್ತಿಯಲ್ಲಿ ಕಾಣಬಹುದು.

ಇಂದಿನ ಜಾಗತೀಕರಣ ವಲಯದಲ್ಲಿ ವ್ಯಕ್ತಿಗಳು ಪರಸ್ಪರ ಸ್ನೇಹ ಪ್ರೀತಿ ಹಂಚಿಕೊಳ್ಳಲು ಕುಟುಂಬವನ್ನು ಬಯಸುತ್ತಿದ್ದರೂ ಇಂದಿನ ಖಾಸಗೀಕರಣ ವಲಯದಲ್ಲಿ ಕುಟುಂಬವು ಬಿಡಿ ಕುಟುಂಬಗಳಾಗಿ ಒಡೆದುಹೋಗಿವೆ. ಇಂದಿನ ಬಂಡವಾಳಶಾಹಿ ಮಾರುಕಟ್ಟೆಯಲ್ಲಿ ಹೆಣ್ಣು ಹೆಚ್ಚು ವ್ಯಾಪಾರೀಕರಣಗೊಂಡಿದ್ದಾಳೆ. ಇಂತಹ ಸಂದರ್ಭದಲ್ಲಿ ಕುಟುಂಬದಲ್ಲಿ ಹೆಣ್ಣು ಏಕಾಂಗಿಯಾಗಿದ್ದು ಮಾನಸಿಕವಾಗಿ ಅಸ್ವಸ್ಥಳಾಗಿದ್ದಾಳೆ. ಕುಟುಂಬದಲ್ಲಿ ಹಿರಿಯರು ಕಿರಿಯರನ್ನು, ಕಿರಿಯರು ಹಿರಿಯರನ್ನು ಅರ್ಥ ಮಾಡಿಕೊಳ್ಳುವಲ್ಲಿ ಅಸಮರ್ಥರಾಗಿದ್ದು ಮಾನಸಿಕವಾಗಿ ಅಸ್ವಸ್ಥರಾಗಿದ್ದಾರೆ.

ಮದುವೆ ಎಂಬ ಮಾರುಕಟ್ಟೆಯಲ್ಲಿ ಹೆಣ್ಣು ಹೆಚ್ಚು ವ್ಯಾಪರೀಕರಣಗೊಂಡಿದ್ದಾಳೆ. ಈ ಹಿನ್ನೆಲೆಯಲ್ಲಿ ಕುಟುಂಬಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿವೆ. ಇಲ್ಲಿ ಹೆಚ್ಚಾಗಿ ಸಮಸ್ಯೆಗೀಡಾಗಿರುವುದು ಹೆಣ್ಣು. ಹೀಗೆ ಇಲ್ಲಿ ವ್ಯಕ್ತಿ ಸಂಬಂಧಗಳ ಪರಸ್ಪರ ಹೊಂದಾಣಿಕೆಯ ಪ್ರೀತಿಯ ಕೊರತೆಯಿದ್ದು, ಕುಟುಂಬಗಳು ಶಾಶ್ವತವಾಗಿರುವಲ್ಲಿ ಪರಸ್ಪರ

ವ್ಯಕ್ತಿಗಳ ಹೊಂದಾಣಿಕೆ ನೈತಿಕತೆ ಮುಖ್ಯವಾಗಿದೆ. ಹೀಗೆ ಇಂದಿನ ಜಾಗತೀಕರಣ ವಲಯದಲ್ಲಿ ಸ್ತ್ರೀ–ಪುರುಷರೆನ್ನದೆ ಇಬ್ಬರೂ ಸಮಸ್ಯೆಗಳಿಗೆ ಒಳಗಾಗಿದ್ದು ಇಂತಹ ಸಮಸ್ಯೆಗಳನ್ನು ಇತ್ತೀಚಿನ ಕಥೆಗಾರ್ತಿಯರು ತಮ್ಮದೇ ಅಭಿವ್ಯಕ್ತಿಯಲ್ಲಿ ಚಿಂತಿಸಿದ್ದಾರೆ.

ಕಾಲದಿಂದ ಕಾಲಕ್ಕೆ ಸಮಾಜ ಬದಲಾದಂತೆ ಕುಟುಂಬದ ಸ್ವರೂಪವು ಬದಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕುಟುಂಬದಲ್ಲಿ ಮಹಿಳೆಯ ಸ್ಥಾನಮಾನಗಳು ಬದಲಾಗುತ್ತಿವೆ. ಆದರೂ ಮಹಿಳೆ ಸುರಕ್ಷಿತಳಾಗಿದ್ದಾಳೆ ಎಂದು ಗುರುತಿಸಲು ಸಾಧ್ಯವಿಲ್ಲ. ಕಾಯ್ದೆ ಕಾನೂನುಗಳಿದ್ದರೂ, ಉದ್ಯೋಗಾವಕಾಶಗಳಿದ್ದರೂ ಮಹಿಳೆ ಒಂದಲ್ಲಾ ಒಂದು ರೀತಿಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾಳೆ. ಅದು ಕುಟುಂಬದಲ್ಲಿರಬಹುದು ಅಥವಾ ಇತರ ಕ್ಷೇತ್ರಗಳಲ್ಲಿರಬಹುದು. ಈ ಹಿನ್ನೆಲೆಯಲ್ಲಿ ವಿಭಿನ್ನ ಪ್ರಾದೇಶಿಕ ವಲಯದಿಂದ, ತಮ್ಮದೇ ಆದ ಸಮುದಾಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಬಂದ ಮಹಿಳಾ ಕಥೆಗಾರ್ತಿಯರ ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬವಿನ್ಯಾಸಗಳು ಹೇಗೆ ಅಭಿವ್ಯಕ್ತಿಗೊಂಡಿದೆ ಎಂಬುದು ಅಧ್ಯಯನ ಯೋಗ್ಯವಾಗಿದೆ.

೧.೨. ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ಕಥೆಗಾರ್ತಿಯರು ಭಿನ್ನ ಪ್ರಾದೇಶಿಕ ವಲಯಗಳಿಂದ ಬಂದಿದ್ದು ತಮ್ಮದೇ ಸಮುದಾಯದಲ್ಲಿ ಭಿನ್ನ ಸಮಾಜ ಮತ್ತು ಸಂಸ್ಕೃತಿಯನ್ನು ಹೊಂದಿದ್ದಾರೆ. ಈ ಪರಿಸರದ ಹಿನ್ನೆಲೆಯಲ್ಲಿ ಕುಟುಂಬದಲ್ಲಿ ಮಹಿಳೆ ಹೇಗೆ ಅಭಿವ್ಯಕ್ತಿಗೊಂಡಿದ್ದಾಳೆ, ಅವರು ಕಟ್ಟಿಕೊಡುವ ಸಂಸ್ಕೃತಿ ಮತ್ತು ಅದರ ಚರಿತ್ರೆ ಯಾವ ಬಗೆಯದು ಎಂಬುದನ್ನು ಅರಿಯುವ ಅಗತ್ಯವಿದೆ.

ಈ ಮಹಾಪ್ರಬಂಧದಲ್ಲಿ ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರದ ಮಹಿಳಾ ಕಥೆಗಾರ್ತಿಯರು ರೂಪಿಸಿದ ಸಂಸ್ಕೃತಿಗಳ ಅಧ್ಯಯನ ಪ್ರಮುಖವಾಗಿದ್ದು, ಈ ಸಂಸ್ಕೃತಿಯೊಂದಿಗೆ ಜನ ಸಮುದಾಯ ಬದುಕಿದ್ದು, ಈ ಬದುಕಿನಲ್ಲಿ ಹೆಣ್ಣಿನ ಅನಾವರಣವೇ ಪ್ರಧಾನವಾಗಿದ್ದು, ಈ ಎಲ್ಲಾ ಕಥೆಗಾರ್ತಿಯರು ಹೊರಟಿರುವುದು ಮಹಿಳಾ ಬದುಕಿಗೆ ಅಭಿವ್ಯಕ್ತಿ ಕೊಡಲು. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಮಹಿಳಾ ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬ ವಿನ್ಯಾಸಗಳು ಹೇಗೆ ಅಭಿವ್ಯಕ್ತಿಗೊಂಡಿದೆ ಎಂಬುದನ್ನು ಅಧ್ಯಯನ ಮಾಡುವ ಉದ್ದೇಶವಾಗಿದೆ.

೧.೩. ಅಧ್ಯಯನದ ಮಹತ್ವ

ಈ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡ ಕಥೆಗಾರ್ತಿಯರು ಕರ್ನಾಟಕದ ಬೇರೆ ಬೇರೆ ಪ್ರದೇಶದಲ್ಲಿ ಹುಟ್ಟಿ ಬೆಳೆದು, ಆ ಪ್ರಾದೇಶಿಕ ಭಿನ್ನತೆಯ ಹಿನ್ನೆಲೆಯಿಂದ ತಮ್ಮದೇ ಆದ

ವಿಶಿಷ್ಟತೆಯನ್ನು ಹೊಂದಿರುವರು. ಕನ್ನಡ ಕಥಾಪರಂಪರೆಯಲ್ಲಿ ಕಥೆಗಳ ಮೂಲಕ ಆಯಾ ಸಂಸ್ಕೃತಿಯ ಜನರ ಬದುಕನ್ನು ಕಟ್ಟಿಕೊಟ್ಟವರು. ಈ ಕಾರಣದಿಂದ ಅವರು ಕಥಾಸಾಹಿತ್ಯ ಮಹತ್ವವನ್ನು ಹೊಂದಿದೆ. ಭಿನ್ನ ಕಾಲಘಟ್ಟಕ್ಕೆ ಸೇರಿದ ಇವರ ಕಥೆಗಳ ಮೂಲಕ ವಿಭಿನ್ನ ಸಾಂಸ್ಕೃತಿಕ ನೆಲೆಯಲ್ಲಿ ಕುಟುಂಬದಲ್ಲಿ ಮಹಿಳೆಯ ಸ್ವರೂಪವು ಬದಲಾಗಿದೆ. ಈ ಹಿನ್ನೆಲೆಯಲ್ಲಿ ವಿಭಿನ್ನ ಸಾಂಸ್ಕೃತಿಕ ನೆಲೆಯಲ್ಲಿ ಬದಲಾದ ಮಹಿಳೆ ಮತ್ತು ಕುಟುಂಬಗಳ ಸ್ವರೂಪದಲ್ಲಾದ ವ್ಯತ್ಯಾಸಗಳನ್ನು ಗುರುತಿಸುವುದರ ಮೂಲಕ ಈ ಎಲ್ಲಾ ಕಥೆಗಾರ್ತಿಯರ ಕಥೆಗಳ ಅಧ್ಯಯನದ ಅಗತ್ಯವನ್ನು ಮನಗಂಡು, ಆಯಾ ಸಮುದಾಯದ ಸಂಸ್ಕೃತಿಯಲ್ಲಿ ಮಹಿಳೆ ಮತ್ತು ಕುಟುಂಬಗಳ ವಿನ್ಯಾಸಗಳನ್ನು ಆಧ್ಯಯನ ಮಾಡುವುದು ಮುಖ್ಯ ಉದ್ದೇಶ ಮತ್ತು ಮಹತ್ವವನ್ನು ಹೊಂದಿದೆ.

೧.೪. ಅಧ್ಯಯನದ ವ್ಯಾಪ್ತಿ

ಆಧುನಿಕ ಮಹಿಳಾ ಕಥಾಸಾಹಿತ್ಯ ಒಂದು ಗಂಭೀರ ಸಾಹಿತ್ಯವಾಗಿ ಪರಿಗಣಿಸಲ್ಪಟ್ಟಿದ್ದು ಇಪ್ಪತ್ತೊಂದನೆಯ ಶತಮಾನದ ಮೂರನೇ ದಶಕದಿಂದ ಈಚೆಗೆ ವಿವಿಧ ಕಾಲಘಟ್ಟಗಳ ಹಿನ್ನೆಲೆಯಲ್ಲಿ ಬೆಳೆದು ಬಂದ ಈ ಕಥಾಪರಂಪರೆ ತೊಂಬತ್ತರ ದಶಕದಿಂದ ಯಾವುದೇ ಚಳುವಳಿಗಳ ಹೊರತಾಗಿಯೂ ಹೊಸ ಕಥೆಗಾರ್ತಿಯರು ಮಹಿಳಾ ಬದುಕಿಗೆ ಅಭಿವ್ಯಕ್ತಿ ನೀಡಿದ್ದಾರೆ.

ಹೀಗಾಗಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಮಹಿಳಾ ಕಥಾಸಾಹಿತ್ಯ ಎಂದು ಪರಿಗಣಿಸಲಾಗಿದೆ. ಈ ಎಲ್ಲಾ ಕತೆಗಾರ್ತಿಯರು ಅಂದರೆ ಪ್ರಾತಿನಿಧಿಕ ಕತೆಗಾರ್ತಿಯರ ಕಥೆಗಳನ್ನು ಅಧ್ಯಯನದ ವ್ಯಾಪ್ತಿಯಾಗಿ ಒಳಪಡಿಸಲಾಗಿದೆ. ಕಥಾಪ್ರಕಾರವೇ ಇಲ್ಲಿ ಪ್ರಧಾನ ಆಕರವಾಗಿದೆ. ಸ್ಥೂಲವಾಗಿ ಇವರ ಮೇಲೆ ಪ್ರಭಾವ ಬೀರಿದ ವಸಾಹತು, ಆಧುನಿಕತೆ, ಶಿಕ್ಷಣ, ಮಹಿಳಾ ಜಾಗೃತಿ ಮುಂತಾದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹಿಳೆ ಮತ್ತು ಕುಟುಂಬ ವಿನ್ಯಾಸಗಳನ್ನು ಅಧ್ಯಯನ ಮಾಡಲಾಗಿದೆ.

೧.೫. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಲೇಖಕಿಯರ ಕಥೆಗಳನ್ನು ಆಯಾ ಸಮುದಾಯದ ಭಿನ್ನ ಸಂಸ್ಕೃತಿಯ ಸ್ವರೂಪದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಆ ಮೂಲಕ ಕುಟುಂಬ ಸ್ವರೂಪವನ್ನು ಅಧ್ಯಯನ ಮಾಡುವುದರಿಂದ ಇಲ್ಲಿ ಪ್ರಮುಖವಾಗಿ ಸಾಂಸ್ಕೃತಿಕ ಅಧ್ಯಯನ ವಿಧಾನವನ್ನು ಅಳವಡಿಸಲಾಗಿದೆ. ಅಷ್ಟೇ ಅಲ್ಲದೆ ಲೇಖಕಿಯರ ಕಥೆಗಳು ಇಲ್ಲಿ ಮೂಲ ಆಕರಗಳಾಗಿರುವುದರಿಂದ ಕೃತಿಕೇಂದ್ರಿತ ಅಧ್ಯಯನ ವಿಧಾನವೂ ಇಲ್ಲಿ ಮುಖ್ಯವಾಗಿದೆ. ಈ ಎಲ್ಲಾ ಕಥೆಗಾರ್ತಿಯರು ಬೇರೆ ಬೇರೆ ಪ್ರಾದೇಶಿಕ ಹಿನ್ನೆಲೆಯಿಂದ ಬಂದವರು. ಆದ್ದರಿಂದ

ಅವರವರ ಅಭಿವ್ಯಕ್ತಿ ವಿಧಾನವೂ ಭಿನ್ನವಾಗಿದೆ. ಕಥೆಗಾರ್ತಿಯರ ಕಥೆಗಳು ಭಿನ್ನ ಕಾಲಘಟ್ಟಗಳಲ್ಲಿ ರಚಿತವಾಗಿದ್ದು ಕುಟುಂಬದ ಸ್ವರೂಪವು ಭಿನ್ನವಾಗಿದೆ. ಅವುಗಳ ನಡುವೆ ವ್ಯತ್ಯಾಸಗಳಿದ್ದು ತೌಲನಿಕ ಅಧ್ಯಯನವೂ ಸಹಜವಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಸಮಾಜಶಾಸ್ತ್ರದ ಅಧ್ಯಯನವನ್ನು ಈ ನಿಟ್ಟಿನಲ್ಲಿ ಸ್ಥೂಲವಾಗಿ ಗ್ರಹಿಸಲಾಗಿದೆ. ಜೊತೆಗೆ ಕೆಲವು ಕಥೆಗಾರ್ತಿಯರ ಮೇಲೆ ಜಾಗತಿಕ ಸ್ತ್ರೀವಾದದ ಪ್ರಭಾವ ಇರುವುದರಿಂದ ಮಾರ್ಕ್ಸ್‌ವಾದಿ, ಸಮಾಜವಾದಿ, ಸ್ತ್ರೀವಾದ ಅಧ್ಯಯನ ವಿಧಾನವೂ ಪೂರಕವಾಗಿ ಪ್ರವೇಶ ಪಡೆದಿದೆ.

ಅಧ್ಯಾಯ ಎರಡು

ಮಹಿಳೆ ಮತ್ತು ಕುಟುಂಬ: ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ ಎರಡು

ಮಹಿಳೆ ಮತ್ತು ಕುಟುಂಬ : ಪರಿಕಲ್ಪನಾತ್ಮಕ ಚರ್ಚೆ

ಮಹಿಳೆಯರು : ಅರ್ಥ ನಿರ್ವಚನ

ಮಹಿಳೆ ಎಂದರೆ ಯಾರು ಎಂದು ಖಚಿತಪಡಿಸಿಕೊಳ್ಳುವ ಅಗತ್ಯವಿದೆ. ಏಕೆಂದರೆ ಮಹಿಳೆಯ ಬಗ್ಗೆ ಸಮಾಜ ಕೆಲವು ರೂಪುರೇಷೆಗಳನ್ನು ಹೊರಿಸಿದೆ. ಮನುಷ್ಯನ ಲಿಂಗ ತಾರತಮ್ಯದ ಬೆಳವಣಿಗೆಯು ನಿರಂತರವಾಗಿ ನಡೆಯುತ್ತಿರುತ್ತದೆ. ಏಕೆಂದರೆ ತಾಯಿಯ ಗರ್ಭದಲ್ಲಿ ಹುಟ್ಟುವ ಮಗುವು ಹುಟ್ಟುವಾಗ ಗಂಡಾಗಿದ್ದು ನಂತರ ಹೆಣ್ಣಾಗಿ ಪರಿವರ್ತನೆ ಹೊಂದುತ್ತದೆ. ಅದೇ ರೀತಿ ಹೆಣ್ಣೆಂದು ಗುರುತಿಸಿಕೊಂಡು ಗಂಡಾಗಿ ಪರಿವರ್ತನೆ ಹೊಂದುತ್ತದೆ. ಮತ್ತೆ ಕೆಲವರು ದ್ವಿಲಿಂಗಿಗಳಾಗಿ ಜೀವಿಸುತ್ತಾರೆ. ಮಹಿಳೆಯಾಗಿದ್ದರೂ ಅವಳು ಗರ್ಭಕೋಶವಿಲ್ಲದ ಕಾರಣ ಮಹಿಳೆ ಎಂದು ಗುರುತಿಸಲ್ಪಡುವುದಿಲ್ಲ. ಆದರೆ ಪ್ರಾಕೃತಿಕ ಸಹಜವಾದ ಭಾವನೆಗಳಿಗೆ ಅನುಗುಣವಾಗಿ 'ಗಂಡು-ಹೆಣ್ಣು' ಎಂದು ನಿಶ್ಚಿತವಾದ ಧೋರಣೆಯಲ್ಲಿ ವಿಂಗಡಿಸುವುದು ಅಸಹಜವಾಗಿದೆ. ಹೀಗೆ ಗಂಡು-ಹೆಣ್ಣು ಎಂದು ನಿರ್ದಿಷ್ಟ ಚೌಕಟ್ಟಿಗೆ ಒಳಪಡಿಸಿ ನೋಡುವುದು ಪುರುಷ ದೃಷ್ಟಿಕೋನದಿಂದ ಬೆಳೆದುಬಂದಿದೆ. ಅಂದರೆ ಇದು ಯಜಮಾನ ದೃಷ್ಟಿಕೋನದ ಫಲವಾಗಿದೆ. ಒಟ್ಟಾರೆಯಾಗಿ ಈ ಮೇಲಿನ ಅಂಶಗಳಿಂದ ಮಹಿಳೆಯರನ್ನು ಎರಡು ನೆಲೆಗಳಲ್ಲಿ ಗುರುತಿಸಿಕೊಳ್ಳಬಹುದು.

೧. ಜೈವಿಕವಾಗಿ ಹೆಣ್ಣು. ಈ ಹೆಣ್ಣುಮಕ್ಕಳು ಪಿತೃಪ್ರಧಾನ ಸಮಾಜೀಕರಣಕ್ಕೆ ಒಳಗಾಗಿರುವ ಮಹಿಳೆಯರು.

೨. ಭಾವನಾತ್ಮಕವಾಗಿ ಮಹಿಳೆಯರು. ಇವರು ಹುಟ್ಟಿನಿಂದ ಗಂಡೆಂದು ಗುರುತಿಸಲ್ಪಟ್ಟು ಭಾವನಾತ್ಮಕವಾಗಿ ತಾವು ಹೆಣ್ಣೆಂದು ಭಾವಿಸಿಕೊಂಡು ಬದುಕುವರು.

ಕುಟುಂಬದ ಅರ್ಥ ನಿರ್ವಚನ

ಕುಟುಂಬ ಎಂದರೆ ಸಾಮಾನ್ಯವಾಗಿ ಗಂಡ-ಹೆಂಡತಿ-ಮಕ್ಕಳು ಒಂದೇ ನೆಲೆಯಲ್ಲಿ ವಾಸಿಸುವುದು, ಒಂದೇ ವಿಧವಾದ ಆಹಾರ ಕ್ರಮಗಳನ್ನು ಸೇವಿಸಿ ಏಕದೇವೋಪಾಸನೆಯಲ್ಲಿ

ನಂಬಿಕೆಯಿದ್ದು ಪರಸ್ಪರ ಕೆಲಸಗಳನ್ನು ಹಂಚಿಕೊಂಡು ಬದುಕುವುದು. ಆದರೆ ನಗರೀಕರಣದಿಂದ ಉದ್ಯೋಗ ಹಾಗೂ ಶಿಕ್ಷಣದಿಂದ ಒಂದೇ ಸೂರಿನಡಿ ಎಲ್ಲರೂ ವಾಸಿಸಲು ಸಾಧ್ಯವಾಗದೇ ಅಗತ್ಯ ಬಿದ್ದಾಗ ಬಂದು ಸಂಪರ್ಕಿಸಿ ತಮ್ಮ ಬೇಕುಬೇಡಗಳನ್ನು ಈಡೇರಿಸಿಕೊಂಡು ತಮ್ಮ ಕೆಲಸದಲ್ಲಿ ನಿರತರಾಗಿರುವ ಕಾರಣದಿಂದ ಗಂಡ–ಹೆಂಡತಿ–ಮಕ್ಕಳು ಇವರನ್ನು ವಾಸದ ನೆಲೆಯನ್ನು ಪರಿಗಣಿಸದೆ ಇವರು ಇರುವ ಸಂಬಂಧದ ನೆಲೆಯಿಂದ 'ಕುಟುಂಬ' ಎಂದು ಕರೆಯಲಾಗುತ್ತದೆ. ಹೀಗೆ ಆಯಾ ಸಮಾಜದ ಸನ್ನಿವೇಶ ಮತ್ತು ಒತ್ತಡಗಳಿಗೆ ಅನುಗುಣವಾಗಿ ಕುಟುಂಬದ ರಚನೆ ಬದಲಾಗುತ್ತದೆ. ಹೀಗೆ ರಚನೆ ಬದಲಾದರೂ ಅಧಿಕಾರದ ನೆಲೆಯಿಂದ ಆ ಕುಟುಂಬದಲ್ಲಿ ಗಂಡನು ಹೊಂದಿರುವ ಅಧಿಕಾರದ ನೆಲೆಯಿಂದ ಆ ಕುಟುಂಬವನ್ನು ಗಂಡನ ನೆಲೆಯಿಂದ ಹೆಂಡತಿಯನ್ನು ಮತ್ತು ಮಕ್ಕಳನ್ನು ಗುರುತಿಸುವ ಕ್ರಿಯೆ ಇಂದಿಗೂ ಅಸ್ತಿತ್ವದಲ್ಲಿದೆ.

ಮಹಿಳೆಯನ್ನು ಗುರುತಿಸಲು ಸಮಾಜ ಕೆಲವು ರೂಪರೇಷೆಗಳನ್ನು ಹಾಕಿದಂತೆ ಕುಟುಂಬಕ್ಕೂ ಸಹ ಆ ರೂಪುರೇಷೆಗಳನ್ನು ಗುರುತಿಸುವ ಚೌಕಟ್ಟನ್ನು ಸಮಾಜ ವಿಧಿಸಿದೆ. ಹಾಗಾಗಿ ಕುಟುಂಬವು ಕೆಲವು ನಿಯಮಗಳಿಗೆ ಒಳಪಟ್ಟ ತನ್ನ ರಚನೆಯನ್ನು ಖಚಿತಪಡಿಸಿಕೊಂಡಿದೆ. ಹಾಗಾಗಿ ಇಲ್ಲಿ ವಿವಾಹವಾಗದ ಹೆಣ್ಣು ತಾಯಿಯಾಗಿ ತನ್ನ ಮಗುವಿನೊಂದಿಗೆ ಜೀವಿಸುತ್ತಿದ್ದರೆ ಅದನ್ನು ಕುಟುಂಬ ಎಂದು ಕರೆಯಲಾಗುವುದಿಲ್ಲ. ಅದೇ ರೀತಿ ದೇವದಾಸಿ ಮಹಿಳೆಯರು ಗಂಡ ಯಾರು ಎಂದು ಖಚಿತವಿಲ್ಲದೆ ತನ್ನ ಮಕ್ಕಳೊಂದಿಗೆ ಜೀವಿಸುತ್ತಿದ್ದರೂ ಅವಳನ್ನು 'ಕುಟುಂಬಸ್ತಳು' ಎಂದು ಗುರುತಿಸುವುದಿಲ್ಲ. ಲವ್ ಇನ್ ಸಂಬಂಧದಲ್ಲಿರುವವರನ್ನು ಸಹ ಕುಟುಂಬ ಸಂಬಂಧದಿಂದ ಗುರುತಿಸಲಾಗುವುದಿಲ್ಲ. ಭಾವನಾತ್ಮಕ ನೆಲೆಯ ಮಹಿಳೆಯರು ತಮಗಿಷ್ಟವಾದ ಗಂಡನೊಂದಿಗೆ ಹೆಂಡತಿಯಂತೆ ಬದುಕಿದರೂ ಅವರು ಕುಟುಂಬದ ನೆಲೆಗೆ ಒಳಪಡುವುದಿಲ್ಲ. ಹಾಗೆಯೇ ಲೆಸ್ಬಿಯನ್ ತಮಗಿಷ್ಟವಾದ ಗಂಡನೊಂದಿಗೆ ಹೆಂಡತಿಯಂತೆ ಬದುಕಿದರೂ ಅವರು ಕುಟುಂಬದ ನೆಲೆಗೆ ಒಳಪಡುವುದಿಲ್ಲ. ಹಾಗೆಯೇ ಜೋಗಮ್ಮರು ತಮಗಿಷ್ಟವಾದ ಗಂಡಿನೊಂದಿಗೆ ಬದುಕು ಸಾಗಿಸುತ್ತಿದ್ದರೂ ಅವರನ್ನು ಕುಟುಂಬಜೀವಿಗಳಾಗಿ ನೋಡುವುದಿಲ್ಲ. ಇವರು ಕುಟುಂಬದ ಪ್ರಕ್ರಿಯೆಗೆ ಒಳಪಡುವುದಿಲ್ಲ. ಅಂದರೆ ಕುಟುಂಬವೆಂದು ಗುರುತಿಸಿಕೊಳ್ಳಲು ಜೈವಿಕವಾಗಿ ಸ್ತ್ರೀ–ಪುರುಷರು ಗುರುತಿಸಿಕೊಂಡು ಸಮಾಜ ಅಥವಾ ಸರಕಾರದ ಮಾದರಿಯಲ್ಲಿ ವಿವಾಹ ಸಂಬಂಧಕ್ಕೆ ತಮ್ಮನ್ನು ಒಳಪಡಿಸಿಕೊಳ್ಳಬೇಕಾಗುತ್ತದೆ. ಈ ಮೂಲಕ ಲೈಂಗಿಕ ಸಂಬಂಧವನ್ನು ಹೊಂದಿದ್ದು, ಇವರು ಒಟ್ಟಿಗೆ ವಾಸವಾಗಿದ್ದರೂ ಅಥವಾ ಉದ್ಯೋಗ, ಶಿಕ್ಷಣದ ಕಾರಣದಿಂದ ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸಿದರೂ ಅವರಿಗೆ ಮಕ್ಕಳಾಗಲಿ, ಮಕ್ಕಳಾಗದೆಯಿರಲೀ ಅವರ ಸಂಬಂಧವನ್ನು ಕುಟುಂಬದ ನೆಲೆಯಲ್ಲಿ ಪರಿಗಣಿಸಲಾಗುತ್ತದೆ. ಈ ರೀತಿಯ ಕುಟುಂಬ ಸಂಬಂಧವು ಸಂತಾನೋತ್ಪತ್ತಿಯ ಉದ್ದೇಶವನ್ನು

ಹೊಂದಿರುತ್ತದೆ. ಈ ಬಗೆಯ ಕುಟುಂಬದಲ್ಲಿ ಹುಟ್ಟಿದ ಮಕ್ಕಳಿಗೆ ಎಲ್ಲ ಬಗೆಯ ಹಕ್ಕುಗಳಿದ್ದು ಸಾಮಾಜಿಕ ಗೌರವವೂ ಇರುತ್ತದೆ. ಆದರೆ ಈ ಕುಟುಂಬವು ತಮಗೆ ಇಷ್ಟವಾದ ಸಂಗಾತಿಯೊಂದಿಗೆ ಲೈಂಗಿಕ ಸಂಬಂಧವನ್ನು ನಿರಾಕರಿಸುತ್ತದೆ. ಮದುವೆಯ ಸಂಬಂಧಕ್ಕೆ ಒಳಪಟ್ಟ ಲೈಂಗಿಕ ಸಂಬಂಧಕ್ಕೆ ನೈತಿಕ ಸ್ವರೂಪವನ್ನು ನೀಡುತ್ತದೆ. ಈ ಬಗೆಯ ಲೈಂಗಿಕ ಸಂಬಂಧದ ಉದ್ದೇಶ ಮಕ್ಕಳನ್ನು ಪಡೆಯುವುದಾಗಿರುತ್ತದೆ. ಮೋಕ್ಷವನ್ನು ಬೇಡುತ್ತದೆ ಎಂಬ ನಂಬಿಕೆಯನ್ನು ಈ ಕುಟುಂಬವು ಪೋಷಿಸಿಕೊಂಡು ಬಂದಿದೆ. ಒಟ್ಟಿನಲ್ಲಿ ಕುಟುಂಬ ಎಂದರೆ ಗಂಡು–ಹೆಣ್ಣಿನ ವಿವಾಹ, ಅದರಿಂದ ಅವರು ಹೊಂದುವ ಲೈಂಗಿಕ ಸಂಬಂಧಕ್ಕೆ ಧಾರ್ಮಿಕ ಲೇಪನ. ಹೀಗೆ ಇವರಿಬ್ಬರ ಸಂಬಂಧದಲ್ಲಿ ಹುಟ್ಟಿದ ಮಕ್ಕಳು ಸಕ್ರಮಗೊಳ್ಳುತ್ತಾರೆ. ಇದನ್ನೇ ಕುಟುಂಬ ಎನ್ನಲಾಗುತ್ತದೆ. ಹೀಗಲ್ಲದ ಸಂಬಂಧದಲ್ಲಿ ಹುಟ್ಟಿದ ಮಕ್ಕಳು ಅಕ್ರಮ ಸಂತಾನವೆಂದು ಕರೆಸಿಕೊಳ್ಳುತ್ತದೆ. ಗಂಡು–ಗಂಡಿನ ಸಂಬಂಧದಲ್ಲಿ, ಹೆಣ್ಣು–ಹೆಣ್ಣಿನ ಸಂಬಂಧದಲ್ಲಿ ಮಕ್ಕಳಾಗಲು ಸಾಧ್ಯವಿಲ್ಲ. ಇಂತಹ ಸಂಬಂಧವನ್ನು ಗಂಡ–ಹೆಂಡತಿಯ ನೆಲೆಯಲ್ಲಿ ನೋಡುವುದಿಲ್ಲ. ಜೈವಿಕವಾಗಿ ಗಂಡಾಗಿರುವವರು ಹೆಣ್ಣಿನಂತೆ ಬದುಕುವುದನ್ನು ಹಾಗೆಯೇ ಜೈವಿಕವಾಗಿ ಹೆಣ್ಣಾಗಿದ್ದು 'ಗಂಡಿನಂತೆ ಬದುಕುವುದನ್ನು' ಕುಟುಂಬ ಸಾಮಾಜಿಕ ವ್ಯವಸ್ಥೆಗಳು ನಿರಾಕರಿಸುತ್ತವೆ. ಹೀಗೆ ನಿರಾಕರಿಸುವ ಪ್ರಕ್ರಿಯೆ 'ಹೆಣ್ಣು ಹೆಣ್ಣಿನಂತೆ', ಗಂಡು ಗಂಡಿನಂತೆ ವರ್ತಿಸುವ ಮಾದರಿ ಪಾತ್ರಗಳಾಗಿ ಒತ್ತಾಯಿಸುತ್ತದೆ. ಜಂತು ಜೀವಿಯ ಜೈವಿಕ ಕ್ರಿಯೆಯಂತೆ ನಡೆಯುವ ಬದಲಾವಣೆಗಳನ್ನು ಅಥವಾ ಗಂಡು ಹೆಣ್ಣಾಗುವ, ಹೆಣ್ಣು ಗಂಡಾಗುವ ಸ್ವಂತ ಆಯ್ಕೆಯ ಅಪೇಕ್ಷೆಗಳ ಕುಟುಂಬ ಹಾಗೂ ಸಾಮಾಜಿಕ ವ್ಯವಸ್ಥೆಯಲ್ಲಿನ ಯಾಜಮಾನ್ಯ ನೆಲೆಗಳು ನಿರಾಕರಿಸುತ್ತವೆ. ಹೀಗಾಗಿ ಕುಟುಂಬ ಎನ್ನುವ ಪರಿಕಲ್ಪನೆಯೇ ಯಾಜಮಾನ್ಯ ಧೋರಣೆಯನ್ನು ಪ್ರತಿನಿಧಿಸುತ್ತದೆ. ಮನುಷ್ಯನು ಬದುಕುವ ಅಪೇಕ್ಷೆ, ಆಯ್ಕೆಗಳನ್ನು ನಿರಾಕರಿಸುತ್ತದೆ. ತಾನು ರೂಪಿಸಿದ ನೈತಿಕ ಚೌಕಟ್ಟಿನೊಳಗೆ ಬದುಕು ಕಟ್ಟಿಕೊಳ್ಳಲು ಒತ್ತಾಯಿಸುತ್ತದೆ.

ಸಮಾಜದ ಬೆಳವಣಿಗೆಯ ಮೂರು ಮುಖ್ಯ ಘಟ್ಟಗಳಿಗೆ ಅನುಗುಣವಾದ ಮೂರು ಮುಖ್ಯ ಕುಟುಂಬ ರೂಪಗಳನ್ನು ಗುರುತಿಸಲಾಗುತ್ತದೆ. ಅವುಗಳೆಂದರೆ ಕಿರಾತಾವಸ್ಥೆಗೆ ಅನುಗುಣವಾದ ಸಾಮುದಾಯಿಕ ಕುಟುಂಬ; ಅನಾಗರಿಕಾವಸ್ಥೆಗೆ ಅನುಗುಣವಾದ ಯುಗ್ಮ ಕುಟುಂಬ; ನಾಗರಿಕಾವಸ್ಥೆಗೆ ಅನುಗುಣವಾದ ಏಕಪತ್ನಿ ಕುಟುಂಬ. ಕುಟುಂಬದ ಪ್ರಾಚೀನತೆಗೆ ಸಂಬಂಧಿಸಿದಂತೆ ರೋಮನ್ನರ ಕುಟುಂಬದ ವ್ಯವಸ್ಥೆಯು ಪರಿಪೂರ್ಣ ಮಾದರಿಯಾಗಿದೆ. "Familia" ಎಂಬ ಪದಕ್ಕೆ ಮೂಲದಲ್ಲಿ, ಚರಿತ್ರೆಯಲ್ಲಿ ಅರ್ಥಗಳನ್ನು ಹುಡುಕುವುದು ಕಷ್ಟಸಾಧ್ಯ. ರೋಮ್‌ನಲ್ಲಿ 'ಫ್ಯಾಮುಲಸ್' ಎಂಬ ಪದವನ್ನು ಗುಲಾಮರು, ಸೇವಕರು, ಉತ್ಪಾದಕರ ಸಮೂಹ, ವೈವಾಹಿಕ ಸಂಬಂಧದಿಂದ ಕೂಡಿದ ಒಂದು ಗುಂಪು ಎಂಬ ಅರ್ಥವನ್ನು ನೀಡುತ್ತದೆ. ಸಮಾಜದ ಬೆಳವಣಿಗೆಯ ಕಾಲಘಟ್ಟವಾದ ಕಿರಾತಾವಸ್ಥೆಯಿಂದ

ಅನಾಗರಿಕಾವಸ್ಥೆಯ ಕಾಲಾವಧಿಯಲ್ಲಿ ಮಾನವನು ಅಲೆಮಾರಿಯಾಗಿ ಜೀವನ ನಡೆಸುತ್ತಿದ್ದು ಕಾಡುಗಳಲ್ಲಿ ನೆಲೆಸಿ ನೇರವಾಗಿ ಸಿಗುವ ಗೆಡ್ಡೆ ಗೆಣಸುಗಳನ್ನು ತಿಂದು ಬದುಕುತ್ತಿದ್ದ. ನಂತರ ಜಲಚರ ಪ್ರಾಣಿಗಳನ್ನು ತನ್ನ ಆಹಾರ ಸಾಧನವಾಗಿ ಮಾಡಿಕೊಂಡು ನಂತರ ನೀರಾವರಿ ಹಾಗೂ ಹುಲ್ಲುಗಾವಲುಗಳು ಇರುವ ಕಡೆ ನೆಲೆ ನಿಂತ. ಮುಂದುವರಿದು ಪ್ರಾಣಿಗಳನ್ನು ತನ್ನ ಆಹಾರ ಹಾಗೂ ಉತ್ಪಾದನಾ ಸಾಧನವಾಗಿ ಮಾಡಿಕೊಂಡ.

ಹೀಗೆ ಪಶುಪಾಲನೆ ಮತ್ತು ಪಶುಸಂಗೋಪನೆಯಿಂದ ಮಾನವನಿಗೆ ಹಾಲು ಮತ್ತು ಮಾಂಸ ಅಧಿಕವಾಗಿ ದೊರೆಯುತ್ತಿತ್ತು. ಪಶುಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಿದ್ದರಿಂದ ಇದು ಕುಟುಂಬದ ಸಂಖ್ಯೆಗಿಂತ ಅಧಿಕವಾಗಿ ಬೆಳೆಯುತ್ತಿತ್ತು. ಕೆಲವು ಸಂದರ್ಭಗಳಲ್ಲಿ ಬುಡಕಟ್ಟುಗಳ ನಡುವೆ ಯುದ್ಧ ಸಂಭವಿಸಿ ಸೋತ ಜನರನ್ನು ಗೆದ್ದ ಗುಂಪಿಗೆ ಸೇರಿಸಿಕೊಳ್ಳಲಾಗುತ್ತಿತ್ತು. ಇಲ್ಲವೇ ಶಿಕ್ಷೆ ಅಥವಾ ರಕ್ತದ ಸೇಡು ತೀರಿಸಿಕೊಳ್ಳಲಾಗುತ್ತಿತ್ತು. ಹೀಗೆ ಸೋತ ವ್ಯಕ್ತಿಗಳನ್ನು ತಮ್ಮ ಗುಂಪಿನೊಂದಿಗೆ ಸೇರಿಸಿಕೊಳ್ಳುವುದರಿಂದ ಆಗುವ ಆರ್ಥಿಕ ಹೊರೆ ಅವರಿಗೆ ಕಾಣಿಸುತ್ತಿರಲಿಲ್ಲ. ಆದರೆ ಪ್ರಾಣಿಗಳನ್ನು ತಮ್ಮ ಆಹಾರ ಸಾಧನವಾಗಿ ಹಾಗೂ ಉತ್ಪಾದನಾ ಸಾಧನವಾಗಿ ಬಳಸಿಕೊಂಡ ಮೇಲೆ ಪಶುಪಾಲನೆಗಾಗಿ ವ್ಯಕ್ತಿಗಳ ಅಗತ್ಯವಿದ್ದು ಆಗ ಯುದ್ಧದಲ್ಲಿ ಸೋತ ಜನರನ್ನು ಗುಲಾಮರನ್ನಾಗಿ ಬಳಸಿಕೊಂಡು ಕುಟುಂಬದೊಳಗೆ ಸೇರಿಸಿಕೊಳ್ಳಲಾಗುತ್ತಿತ್ತು.

ಹೀಗೆ ಕುಟುಂಬದಲ್ಲಿ ಮಾತೃ ಅಧಿಕಾರದಿಂದ ಪಿತೃ ಅಧಿಕಾರ ಸ್ಥಾಪನೆಯಾದ ಮೇಲೆ ಕುಟುಂಬದ ಅಧಿಪತಿ ತನ್ನ ಹೆಂಡತಿ ಮಕ್ಕಳೊಂದಿಗೆ ಈ ಗುಲಾಮರೂ ಸಹ ಆ ಕುಟುಂಬದ ಸದಸ್ಯರಾಗಿ ಗುರುತಿಸಿಕೊಂಡರು. ಅಲ್ಲದೆ ಭೂಮಿಯ ಉಳುಮೆ ಪ್ರಾರಂಭವಾದ ನಂತರ ಹಾಗೂ ಭೂಮಿಯ ಮಾರಾಟ ಪ್ರಾರಂಭವಾದ ನಂತರ ಗುಲಾಮರ ಪ್ರಾಮುಖ್ಯತೆ ಕಡಿಮೆಯಾಯಿತು. ಆಗ ಗುಲಾಮರು ಗೋತ್ರ ವ್ಯವಸ್ಥೆಯಲ್ಲಿ ಮುಖ್ಯಸ್ಥರು ಎಂದು ಗುರುತಿಸಿಕೊಂಡ ಕುಲೀನ ವರ್ಗ ಎಂದು ಬಿಂಬಿತವಾದ ಶ್ರೀಮಂತರ ವರ್ಗಕ್ಕೆ ಅವರ ಸೇವಕರಾಗಿ ಅವರ ಆಣತಿಯಂತೆ ನಡೆಯುತ್ತಿದ್ದರು.

ಕಿರಾತಾವಸ್ಥೆಯಿಂದ ಅನಾಗರಿಕಾವಸ್ಥೆಯ ಕಾಲಘಟ್ಟದಲ್ಲಿ ಮಾತೃ ಅಧಿಕಾರ ಸ್ಥಾಪನೆಯಾಗಿದ್ದು ಅಲ್ಲಿ ಸ್ತ್ರೀಯು ಉತ್ತಮ ಸ್ಥಾನವನ್ನು ಪಡೆದಿದ್ದಳು. ಕುಟುಂಬದಲ್ಲಿ ಹೆಚ್ಚು ಶ್ರಮಜೀವಿ ಹಾಗೂ ಉನ್ನತ ಸ್ಥಾನವನ್ನು ಪಡೆದಿದ್ದು, ಸ್ತ್ರೀಯಲ್ಲಿ ಅಧಿಕಾರವು ಕೇಂದ್ರೀಕೃತವಾಗಿತ್ತು. ಮಾತೃಪ್ರಧಾನ ಕುಟುಂಬದಲ್ಲಿ ಪುರುಷನು ಯಾವುದೇ ಅಧಿಕಾರವನ್ನು ಹೊಂದಿರದೆ ತನ್ನ ತಾಯಿಯ ವರ್ಗದಿಂದ ಗುರುತಿಸಿಕೊಳ್ಳುತ್ತಾನೆ. ಇಲ್ಲಿ ಪತ್ನಿ ಪತಿಗೆ ಅವನ ಸಾಮಾನುಗಳನ್ನು ಹೊರಗಿರಿಸುವುದರ ಮೂಲಕ ಅವಳ ನಿರಾಕರಣೆಯನ್ನು ಸೂಚಿಸಲಾಗುತ್ತಿತ್ತು. ಈ ಪುರುಷನು ದಿನದಿಂದ ದಿನಕ್ಕೆ ಉತ್ತಮ ಉತ್ಪಾದನಾ ಸಾಧನಗಳನ್ನು ಕಂಡುಕೊಂಡ ಮೇಲೆ ಈ ರೀತಿ ವಿಚ್ಛೇದನೆ ಪಡೆದುಕೊಂಡ ಮೇಲೆ ತನ್ನ ಉತ್ಪಾದನಾ ಸಾಮಗ್ರಿಗಳು ತನ್ನ ತಾಯಿಯವರು

ಹಾಗೂ ಅವಳ ಸಹೋದರಿಯರಿಗೆ ಸೇರುತಿತ್ತು. ಅಲ್ಲದೆ ಅವನ ಮಕ್ಕಳು ಪತ್ನಿಯ ವಂಶಕ್ಕೆ ಸೇರಿಕೊಳ್ಳುತ್ತಿದ್ದರು. ಹಾಗಾಗಿ ಮಕ್ಕಳು ತಂದೆಯ ಆಸ್ತಿಯನ್ನು ಪಡೆದುಕೊಳ್ಳಲು ಗೋತ್ರವನ್ನು ಸ್ತ್ರೀಯಿಂದ ಪುರುಷರಿಗೆ ವರ್ಗಾಯಿಸಲಾಯಿತು. ಹೀಗೆ ಮಕ್ಕಳು ಉತ್ತರಾಧಿಕಾರವನ್ನು ಗುರುತಿಸಿಕೊಳ್ಳಲು ಅವರಿಗೆ ತಂದೆಯ ಹೆಸರುಗಳನ್ನು ಇಡಲಾಯಿತು. "ಹೆಸರನ್ನು ಬದಲಿಸುವ ಮೂಲಕ ವಸ್ತುಗಳನ್ನು ಬದಲಿಸಲು ಹವಣಿಸುವುದು ಮಾನವನ ಅಂತರ್ಗತ ಕುತರ್ಕ! ನೇರ ಹಿತಾಸಕ್ತಿಯ, ಸಾಕಷ್ಟು ಪ್ರೇರಣೆ ಒದಗಿಸಿದೆಡೆಯಲ್ಲೆಲ್ಲ ಪರಂಪರೆಯನ್ನು ಮುರಿಯಲು ಪರಂಪರೆಯಲ್ಲೇ ಉಪಾಯಗಳನ್ನು ಕಂಡುಕೊಳ್ಳುವುದು"ಎಂದು ಮಾರ್ಕ್ಸ್ ವ್ಯಾಖ್ಯಾನಿಸುತಾರೆ(ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ, ಪುಟ-೮೨). ಹೀಗೆ ಮಾತೃ ಅಧಿಕಾರವು ಪಿತೃ ಅಧಿಕಾರಕ್ಕೆ ಪರಿವರ್ತನೆಯಾದದ್ದು ಸ್ತ್ರೀ ಸಂಕುಲದ ಅವನತಿಗೆ ಕಾರಣವಾಯಿತು. ಪುರುಷನು ಮನೆಯಲ್ಲಿ ಎಲ್ಲ ಅಧಿಕಾರವನ್ನು ತನ್ನ ನಿಯಂತ್ರಣದಲ್ಲಿರಿಸಿಕೊಂಡನು.

ಮಹಿಳೆಯನ್ನು ಕೆಳದರ್ಜೆಗೆ ಇಳಿಸಲಾಯಿತು. ದಾಸಳನ್ನಾಗಿ, ಪುರುಷನ ಹಿತಾಸಕ್ತಿಗೆ ಅನುಗುಣವಾಗಿ ಗುಲಾಮಳನ್ನಾಗಿ ಮಾಡಲಾಯಿತು. ಮಹಿಳೆಯನ್ನು ಲೈಂಗಿಕವಾಗಿ ಮಕ್ಕಳನ್ನು ಹೆರುವ ಸಾಧನವನ್ನಾಗಿ ಮಾಡಲಾಯಿತು. ಪಿತೃಪ್ರಧಾನ ಕುಟುಂಬದಲ್ಲಿ ಸ್ವತಂತ್ರರಾದ ಹಾಗೂ ಅಸ್ವತಂತ್ರರಾದ ಅನೇಕ ವ್ಯಕ್ತಿಗಳು ಕುಟುಂಬದ ಯಜಮಾನನ ನಿಯಂತ್ರಣದಲ್ಲಿ ವಾಸ ಮಾಡುತ್ತಿದ್ದರು. ಈ ಕುಟುಂಬದ ಮುಖ್ಯಸ್ಥ ಬಹುಪತ್ನಿತ್ವನಾಗಿದ್ದು ಅಸ್ವತಂತ್ರನಾದ ಒಬ್ಬ ಪತ್ನಿಯನ್ನು, ಮಕ್ಕಳನ್ನು ಹೊಂದಿದ್ದು ಇವುಗಳ ಮೂಲಕ ಪಶುಪ್ರಾಣಿಗಳ ಮಂದೆಗಳು ಹಾಗೂ ಹಿಂಡುಗಳ ಪಾಲನೆ ಪೋಷಣೆ ಮಾಡುವ ಸಾಮಾಜಿಕ ಸಂಘಟನೆಯಾಗಿ ಕಂಡುಬರುತ್ತದೆ. ಈ ಹೊಸ ಸಾಮಾಜಿಕ ಸಂಘಟನೆಯ ಮುಖ್ಯಸ್ಥನು ತನ್ನ ಕೈಕೆಳಗೆ ಹೆಂಡತಿ ಮಕ್ಕಳನ್ನು ಅನೇಕ ಮಂದಿ ಗುಲಾಮರನ್ನು ಹೊಂದಿರುತ್ತಿದ್ದು, ತನ್ನ ಪಿತೃಪ್ರಧಾನ ಅಧಿಕಾರದ ಹಿನ್ನೆಲೆಯಲ್ಲಿ ಆ ಎಲ್ಲ ಜನರ ಮೇಲೆ ಅವರ ಜೀವನ ಹಾಗೂ ಸಾವುಗಳನ್ನು ನಿರ್ಧರಿಸುವ ಅಧಿಕಾರವನ್ನು ಪಡೆದಿದ್ದನು.

ಕುಟುಂಬದ ಪರಿಕಲ್ಪನೆಯಲ್ಲಿ ಬರುವ 'ದೌರ್ಜನ್ಯ' ಎಂಬ ಪದವು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಒಳಗೊಂಡಿದೆ. ಗಂಡಸಿನ ಅಧಿಕಾರದ, ಯಾಜಮಾನ್ಯ ನೆಲೆಯನ್ನು ನಿರ್ದೇಶಿಸುವ ಅಧಿಕೃತಗೊಳಿಸುವ ಪ್ರಕ್ರಿಯೆಯನ್ನು ಈ ಕುಟುಂಬ ಒಳಗೊಂಡಿದೆ. ಈ ಪಿತೃಮೂಲದ ಕುಟುಂಬವು ಪ್ರಾಚೀನ ಹಾಗೂ ಆಧುನಿಕ ಸಮಾಜಗಳಲ್ಲಿ ಅಸ್ತಿತ್ವದಲ್ಲಿದೆ. ಪಿತೃಮೂಲ ವ್ಯವಸ್ಥೆ ಹಲವು ಅರ್ಥಗಳಲ್ಲಿ ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಈ ಕುಟುಂಬದಲ್ಲಿ ಆಸ್ತಿಯ ಕೇಂದ್ರೀಕರಣ, ಬೇಸಾಯದ ಪ್ರಗತಿ, ಅಧಿಕಾರದ ಸರ್ವಾಧಿಕಾರತ್ವ, ಕೈಗಾರಿಕೆ ಮತ್ತು ತಾಂತ್ರಿಕ ಬೆಳವಣಿಗೆಗಳಿಗೆ ಮತ್ತು ಅವುಗಳಲ್ಲಿ ಪುರುಷನ ನೈಪುಣ್ಯತೆಯಿಂದ ಸ್ತ್ರೀಯ ಮಹತ್ವವನ್ನು ಕುಗ್ಗಿಸಿ ಪಿತೃಪ್ರಧಾನ ಕುಟುಂಬದ ಹುಟ್ಟಿಗೆ ಕಾರಣವಾಗಿದೆ. ಪಿತೃಮೂಲದ

ಕುಟುಂಬದಲ್ಲಿ ಹಿರಿಯ ಪುರುಷ ಯಜಮಾನ, ನಿರಕುಂಶ ಪ್ರಭು, ಸರ್ವಾಧಿಕಾರಿ ತನಗೆ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳುವ ಸ್ವಾತಂತ್ರ್ಯ ಅವನಿಗಿದೆ. ಕುಟುಂಬಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿ ಆತನದೇ ಅಂತಿಮ ತೀರ್ಮಾನ. ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಸ್ವತಂತ್ರವಾದ ಅಧಿಕಾರವಿರುತ್ತದೆ.

ಪಿತೃಪ್ರಧಾನ ಕುಟುಂಬಗಳಲ್ಲಿ ಮಕ್ಕಳು ತಂದೆಯ ವಂಶಕ್ಕೆ ಸೇರುತ್ತಾರೆ. ಕುಟುಂಬದ ಆಸ್ತಿಯಲ್ಲಿ ಗಂಡುಮಕ್ಕಳಿಗೆ ಮಾತ್ರ ಪಾಲು ಪಡೆಯುವ ಹಕ್ಕಿರುತ್ತದೆ. ಉತ್ತರಾಧಿಕಾರದ ಹಕ್ಕು ಮತ್ತು ಸ್ಥಾನಮಾನಗಳು ಗಂಡುಮಕ್ಕಳಿಗೆ ಮೀಸಲಾಗಿರುತ್ತದೆ. ಪಿತೃಪ್ರಧಾನ ಕುಟುಂಬದಲ್ಲಿ ವಿವಾಹಿತೆ ಆಕೆಯ ಗಂಡನ ಮನೆಯಲ್ಲಿ ವಾಸಿಸುತ್ತಾಳೆ. ಅವಳಿಗೆ ತವರಿನಲ್ಲಿ ಅಧಿಕಾರ ಮತ್ತು ಜವಾಬ್ದಾರಿಗಳು ಕಡಿಮೆ ಇರುತ್ತವೆ. ಈ ಸಮಾಜದಲ್ಲಿ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬುದು ಅನಿವಾರ್ಯವಾಗುತ್ತದೆ. ಅಂದರೆ ವಿವಾಹವಾದ ನಂತರ ಗಂಡನ ಮನೆ ಸೇರುವ ಹೆಣ್ಣು ತನ್ನ ಗಂಡನ ಮೂಲಕ ಗುರುತಿಸಿಕೊಳ್ಳುತ್ತಾಳೆ. ಹಾಗಾಗಿ ವಿವಾಹದ ನಂತರ ಹೆಣ್ಣು ಹುಟ್ಟಿದ ಮನೆಯ ಸಂಬಂಧವಾಗಲೀ ತಂದೆಯ ಮೂಲಕ ಗುರುತಿಸಿಕೊಳ್ಳುವ ವ್ಯವಸ್ಥೆಯಾಗಲೀ ಇರುವುದಿಲ್ಲ. ಕುಟುಂಬ ಎಂಬುದು ಶಾಶ್ವತವಾದ ಸಾಮಾಜಿಕ ಸಂಸ್ಥೆಯಾಗಿದ್ದು ಎಲ್ಲ ಕುಟುಂಬಗಳಲ್ಲಿಯೂ ಎಲ್ಲ ದೇಶಗಳಲ್ಲಿಯೂ ಅಸ್ತಿತ್ವದಲ್ಲಿರುತ್ತದೆ. ಹೀಗಿರುವಾಗ ಕುಟುಂಬವು ಕಾಲ ದೇಶಕ್ಕನುಗುಣವಾಗಿ ಅದರ ಅರ್ಥರಚನೆಗಳಲ್ಲಿ ಮಾರ್ಪಾಡುಗಳಾಗುತ್ತವೆ. ಒಂದು ಕಾಲದಲ್ಲಿ ಇದ್ದ ಕುಟುಂಬ ರಚನೆ, ಸ್ತ್ರೀ–ಪುರುಷರ ಸ್ಥಾನಮಾನಗಳು, ಬದುಕಿನ ರೀತಿನೀತಿಗಳು, ಜೀವನಕ್ರಮಗಳು ಬದಲಾದಂತೆ ಕುಟುಂಬದ ಸ್ವರೂಪವು ಬದಲಾಗುತ್ತದೆ. ಪಿತೃಪ್ರಧಾನತೆಯು ಜಾತಿ, ವರ್ಗ, ಪ್ರದೇಶ, ಬುಡಕಟ್ಟಿಗೆ ಅನುಗುಣವಾಗಿ ಭಿನ್ನವಾಗಿರುತ್ತದೆ. ಉದಾಹರಣೆಗೆ ಕೇರಳದ ನಂಬೂದರಿ ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರತಿನಿಧಿಸುವ ಕುಟುಂಬವಾಗಿದೆ.

ಕೇರಳದ ನಂಬೂದರಿ ಪುರುಷರು ಭೂ ಒಡೆತನವನ್ನು ಹೊಂದಿರುತ್ತಾರೆ. ನಂಬೂದರಿ ಜಾತಿಯಲ್ಲಿ ಮಹಿಳೆಯರನ್ನು 'ಅಂತರ್ಜನಮ್' ಎಂದು ಗುರುತಿಸಲಾಗುತ್ತದೆ. 'ಅಂತರ್ಜನಮ್' ಎಂದರೆ ಹುಟ್ಟಿನಿಂದ ಸಾಯುವವರೆಗೆ ಮನೆಯ ಒಳಗಡೆಯೇ ಜೀವನ ಸಾಗಿಸುವವಳು ಎಂದರ್ಥ. ನಂಬೂದರಿ ಕುಟುಂಬದಲ್ಲಿ ಈ ಕುಲದ ಸ್ತ್ರೀಯನ್ನು ಮನೆಯ ಹಿರಿಯ ಮಗ ಮಾತ್ರ ಮದುವೆಯಾಗುತ್ತಾನೆ. ಅವನ ನಂತರ ಬಂದ ಕಿರಿಯ ಸಹೋದರರು 'ಕೆಳಜಾತಿ' ಎಂದು ಗುರುತಿಸಲ್ಪಟ್ಟ 'ನಾಯರ್' ಮಹಿಳೆಯರೊಂದಿಗೆ ಮದುವೆಯಾಗುತ್ತಾರೆ. ನಾಯರ್ ಮಹಿಳೆಯರು ಮಾತೃಮೂಲ ಕುಟುಂಬಕ್ಕೆ ಸೇರಿದವರು. ನಂಬೂದರಿ ಪುರುಷರು ಇವರನ್ನು ವಿವಾಹವಾಗುವ ಮೂಲಕ ಭೂಮಿಯ ಮೇಲೆ ಒಡೆತನವನ್ನು ಹೊಂದುತ್ತಾರೆ. ಭೂಮಿಯ ವಿಸ್ತರಣೆಗಾಗಿ ನಂಬೂದರಿಗಳು 'ನಾಯರ್' ಮಹಿಳೆಯರನ್ನು ವಿವಾಹವಾಗುತ್ತಾರೆ. ಮನೆಯ ಹಿರಿಯ ಮಗನೊಬ್ಬನೇ ನಂಬೂದರಿ ಮಹಿಳೆಯರನ್ನು ಮದುವೆಯಾಗುವುದರಿಂದ ಈ

ಮಹಿಳೆಯರಿಗೆ ಮದುವೆಯಾಗುವ ಅವಕಾಶ ವಿರಳವಾಗಿ ದೊರೆಯುತ್ತದೆ. ಈ ಮೂಲಕ ಬಹುಪತ್ನಿತ್ವ ಜಾರಿಯಲ್ಲಿದೆ. ನಂಬೂದರಿ ಹಿರಿಯ ಮಗ ಬಹುಪತ್ನಿಯರನ್ನು ಹೊಂದಿ ಇವರ ಮೂಲಕ ಬರುವ ಹಣದಿಂದ ತನ್ನ ಸಹೋದರಿಯ ವಿವಾಹ ಮಾಡುತ್ತಾನೆ. ಈ ಎಲ್ಲ ಕಾರಣದಿಂದ ಈ ನಂಬೂದರಿ ಮಹಿಳೆಯರು ಮದುವೆಯ ವಯಸ್ಸಿಗೆ ಮದುವೆಯಾಗುವುದಿಲ್ಲ. ಒಂದು ವೇಳೆ ಮದುವೆಯಾದರೆ ವಯಸ್ಸಾದ ಗಂಡಿನೊಂದಿಗೆ ಮದುವೆಯಾಗುತ್ತದೆ. ಒಮ್ಮೊಮ್ಮೆ ಕನ್ಯೆಯಾಗಿಯೇ ಉಳಿಯಬಹುದು. ಅಲ್ಲದೆ ನಂಬೂದರಿ ಮಹಿಳೆಯರು ಬೇರೆ ಜಾತಿಯ ಪುರುಷರನ್ನು ವಿವಾಹವಾಗುವಂತಿಲ್ಲ. ಈ ಕಾರಣದಿಂದ ನಂಬೂದರಿ ಮಹಿಳೆಯರ ಲೈಂಗಿಕ ನಿಯಂತ್ರಣಕ್ಕೆ ಒಳಪಡುತ್ತಾರೆ. ಇದು ನಂಬೂದರಿ ಜಾತಿಗೆ ಅನ್ವಯಿಸುವ ಪಿತೃಪ್ರಧಾನ ವ್ಯವಸ್ಥೆಯಾಗಿದೆ.

ಪಿತೃಪ್ರಧಾನತೆಯು ಅಧಿಕಾರದ ಹಿನ್ನೆಲೆಯಿಂದ ಹುಟ್ಟಿಕೊಳ್ಳುತ್ತವೆ. ಮಹಿಳೆಯ ದೈಹಿಕ, ಭಾವನಾತ್ಮಕ, ಆರ್ಥಿಕ ಹಾಗೂ ಲೈಂಗಿಕ ದೌರ್ಜನ್ಯಗಳು ಸ್ವರೂಪಗಳು ಪಿತೃಪ್ರಧಾನತೆಯ ಅಧಿಕಾರದ ನೆಲೆಗಳನ್ನು ಕೇಂದ್ರೀಕರಿಸಿಕೊಂಡಿವೆ. ಈ ಪಿತೃಪ್ರಧಾನತೆಯು ಜಾತಿಗನುಗುಣವಾಗಿ ಆಯಾ ಜಾತಿಯ ಖಾಸಗಿಯಾದ ಸಾಂಸ್ಕೃತಿಕ ಸಂಗತಿಗಳೆಂದು ಗುರುತಿಸಿಕೊಳ್ಳುತ್ತವೆ. ಅವು ಕಾನೂನಿನ ಚೌಕಟ್ಟಿಗೆ ಒಳಪಡುವುದಿಲ್ಲ.

ಮಾನವಶಾಸ್ತ್ರಜ್ಞರು ಕುಟುಂಬವನ್ನು ಕುರಿತು ಈ ರೀತಿ ವ್ಯಾಖ್ಯಾನಿಸುತ್ತಾರೆ(ಜಾರ್ಜ್ ವೀಟರ್ ಮಾಡೂರ್, ಮ್ಯಾಕೇವರ್, ಡೇವಿಸ್, ಚಾನ್ಲೇವಿಸ್).

ಕಿರಾತಾವಸ್ಥೆಯ ಕಾಲಾವಧಿಯಲ್ಲಿ ಆದಿಮಾನವರು ಕಾಡುಗಳಲ್ಲಿ ವಾಸಿಸುತ್ತಿದ್ದರು. ಕಾಡಿನ ಮೂಲದಲ್ಲಿ ವಾಸಿಸುತ್ತಿದ್ದು ಕ್ರೂರಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದರು. ಅರಣ್ಯದಲ್ಲಿ ಗೆಡ್ಡೆ ಗೆಣಸುಗಳು ಆಹಾರ ಸಾಧನಗಳಾದಾಗ ಅಲ್ಲಿ ನೆಲೆ ನಿಂತರು. ನಂತರ ಮೀನು ಮುಂತಾದ ಬೇರೆಯವರು ಉಪಯೋಗಿಸಿದ ಇಂತಹ ಆಹಾರಗಳನ್ನು ಹುಡುಕಿಕೊಂಡು ನದಿಗಳು ಹಾಗೂ ಹುಲ್ಲುಗಾವಲುಗಳನ್ನು ಹುಡುಕಿಕೊಂಡು ಅಲ್ಲಿ ನೆಲೆ ನಿಂತರು. ಉತ್ಪಾದನಾ ಸ್ಥಾನಗಳು ಬದಲಾದಂತೆ ಅವುಗಳಿಗೆ ಅನುಗುಣವಾಗಿ ಒಂದೆಡೆ ನೆಲೆ ನಿಂತರು. ಮರ, ಇಟ್ಟಿಗೆ, ಕಲ್ಲುಗಳಿಂದ ಕೂಡಿದ ಮನೆಗಳಲ್ಲಿ ವಾಸಿಸತೊಡಗಿದರು. ಈ ಸಾಮುದಾಯಿಕ ಕುಟುಂಬದಲ್ಲಿ ಪ್ರತಿಯೊಬ್ಬ ಹೆಂಗಸಿಗೂ ಪ್ರತಿಯೊಬ್ಬ ಗಂಡಸು ಸಮೀಪವಾಗಿದ್ದ. ಅವರ ಮಕ್ಕಳು ಸಾಮಾನ್ಯ ಮಕ್ಕಳಾಗಿರುತ್ತಾರೆ. ಇಲ್ಲಿ ಸ್ತ್ರೀಗೆ ಮಕ್ಕಳ ಪೋಷಣೆಯ ಜವಾಬ್ದಾರಿ ಅಧಿಕವಾಗಿರುತ್ತದೆ. ಗಂಡು-ಹೆಣ್ಣಿನ ಪರಸ್ಪರ ಲೈಂಗಿಕತೆಗೆ ಅ ಸಮಾಜದ ಗಣ್ಯ ವ್ಯಕ್ತಿಗಳ ಒಪ್ಪಿಗೆ ಅವಶ್ಯಕವಾಗಿರುತ್ತದೆ. ಹೀಗೆ ಪ್ರತಿಯೊಂದು ಸಮಾಜದ ಆ ಜನರ ನೀತಿ ನಿಯಮಗಳ ಪ್ರಕಾರ ವಿವಾಹ ಏರ್ಪಡುತ್ತದೆ. ಈ ಕುಟುಂಬದಲ್ಲಿ ಮಕ್ಕಳು ಸ್ವಂತವಾಗಿರಬಹುದು ಅಥವಾ ದತ್ತಕ

ತೆಗೆದುಕೊಂಡಿರಬಹುದು. ಪತ್ನಿಯನ್ನು ವಿವಾಹವಾಗುವುದು ದತ್ತಕ ಪಡೆದಂತೆ ಎಂದು ಪರಿಗಣಿಸಲಾಗುವುದು.

ಸಾಮಾನ್ಯವಾಗಿ ಈಗ ಸಮಾಜದಲ್ಲಿ ರಕ್ತಸಂಬಂಧಗಳ ವ್ಯವಸ್ಥೆಯಿದ್ದು ಅಲ್ಲಿ ರಕ್ತಸಂಬಂಧಗಳ ಕುಟುಂಬವನ್ನು ಕಾಣಬಹುದು. ರಕ್ತಸಂಬಂಧಗಳ ಕುಟುಂಬದಲ್ಲಿ ಒಬ್ಬ ವ್ಯಕ್ತಿಯು ತನ್ನ ಸೋದರರ ಮಕ್ಕಳನ್ನು ತನ್ನ ಮಕ್ಕಳೆಂದೇ ಭಾವಿಸುತ್ತಾನೆ. ಅದೇ ರೀತಿ ಇಲ್ಲಿ ಸ್ತ್ರೀಯು ತನ್ನ ಸೋದರಿಯ ಮಕ್ಕಳನ್ನು ತನ್ನ ಮಕ್ಕಳೆಂದೇ ಭಾವಿಸುತ್ತಾಳೆ. ಹೀಗೆ ಹಲವಾರು ತಂದೆ ತಾಯಿಗಳನ್ನು ಕಾಣಬಹುದು. ಇಲ್ಲಿ ವಿವಾಹವು ಪೀಳಿಗೆಗಳಿಗೆ ಅನುಗುಣವಾಗಿ ನಡೆಸಲಾಗುತ್ತದೆ. ಸೋದರ ಸೋದರಿಯರು ಪರಸ್ಪರ ಪತಿ ಪತ್ನಿಯರಾಗಿರುತ್ತಾರೆ. ತಂದೆ ತಾಯಿ ಮಕ್ಕಳೊಂದಿಗೆ ಲೈಂಗಿಕತೆ ಹೀಗೆ ಇಲ್ಲಿ ತಂದೆ ತಾಯಿ, ಗಂಡ ಹೆಂಡತಿ, ಸೋದರ ಸೋದರಿ, ಸೋದರಳಿಯ ಸೋದರಸೊಸೆ ಎಂಬ ಹೆಸರು ಗೌರವಸೂಚಕವಾಗಿಲ್ಲ. ಬದಲಿಗೆ ಆಯಾ ಸಾಮಾಜಿಕ ರಚನೆಗೆ ಅನುಗುಣವಾಗಿ ಕರ್ತವ್ಯಗಳನ್ನು ಈ ಕುಟುಂಬವು ಹೊಂದಿರುತ್ತದೆ. ಹೀಗೆ ಪರಸ್ಪರ ಆರ್ಥಿಕ ಸಹಕಾರ ಹಿನ್ನೆಲೆಯನ್ನು ರಕ್ತಸಂಬಂಧಗಳ ಕುಟುಂಬವನ್ನು ಕಾಣಬಹುದಾಗಿದೆ. ಕುಟುಂಬದ ಮುಖ್ಯ ಉದ್ದೇಶ ಸಂತಾನೋತ್ಪತ್ತಿ. ಹಾಗಾಗಿ ಇಲ್ಲಿ ಪುರುಷನು ಮೊದಲನೇ ಪತ್ನಿಯು ಬಂಜೆಯಾದಲ್ಲಿ ಅವಳನ್ನು ನಿರಾಕರಿಸಿ ಅಥವಾ ವಿಚ್ಛೇದನ ಪಡೆಯುವ ಮೂಲಕ ಮರುವಿವಾಹವಾಗುವ ಹಕ್ಕನ್ನು ಪಡೆದಿರುತ್ತಾನೆ. ಇದು ಸಮಾಜದಲ್ಲಿ ಸಹಜವಾಗಿ ಅನಾಗರಿಕ ವ್ಯವಸ್ಥೆಯ ಮೇಲಿನ ಮಧ್ಯಮ ಮಜಲಿನ ಕೊನೆಯಲ್ಲಿ ಪಶುಪಾಲನೆ ಮತ್ತು ಬೇಸಾಯ ಉತ್ಪಾದನಾ ಸಾಧನಗಳಿಂದ ಪುರುಷನು ಸಂಪತ್ತನ್ನು ಹೆಚ್ಚು ಕ್ರೋಡೀಕರಿಸಿದಂತೆ ಉತ್ಪಾದನಾ ಸಾಧನಗಳ ಮೇಲಿನ ಪ್ರಾಬಲ್ಯ ಮತ್ತು ಹೆಚ್ಚು ಅಧಿಕಾರವನ್ನು ಪಡೆದುಕೊಂಡನು.

ಈ ಉತ್ಪಾದನಾ ಸಾಧನಗಳನ್ನು ತನ್ನ ಸ್ವಂತ ಆಸ್ತಿಯಾಗಿ ಮಾಡಿ ಈ ಆಸ್ತಿಯನ್ನು ಮಕ್ಕಳಿಗೂ ಉತ್ತರಾಧಿಕಾರವಾಗಿ ಬರಲು ಮಾತೃ ಅಧಿಕಾರದಿಂದ ಪಿತೃ ಅಧಿಕಾರ ಸ್ಥಾಪನೆಯಾಯಿತು. ಜೊತೆಗೆ ಸ್ತ್ರೀಯ ಮೇಲೆ ಅಧಿಕಾರವನ್ನು ಹೊಂದಿದನು. ಅವಳನ್ನು ಸಂರಕ್ಷಿಸುವ ಹೊಣೆಯನ್ನು ಹೊತ್ತನು. ಏಕಪತಿ–ಏಕಪತ್ನಿ ಕುಟುಂಬವಸ್ಥೆಯಿಂದ ಸ್ತ್ರೀಯು ಆರ್ಥಿಕವಾಗಿ ಅಸಹಾಯಕಳಾದಳು. ಅವಳು ಕೇವಲ ಗೃಹಕಾರ್ಯಕ್ಕೆ ಸೀಮಿತವಾದಳು. ತನ್ನ ಮಕ್ಕಳನ್ನು ನೋಡಿಕೊಳ್ಳುವುದು ಅವಳ ಕರ್ತವ್ಯವಾಯಿತು. ಹೀಗೆ ಇಲ್ಲಿ ಈ ಕುಟುಂಬವು ಪುರುಷನ ನಿಯಮದಲ್ಲಿರುತ್ತಿತ್ತು. ಸಾಮುದಾಯಿಕ ಕುಟುಂಬವು ಕೃಷಿ ಭೂಮಿಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಿವಾಹ ಜಾರಿಯಲ್ಲಿದ್ದು ಅನೇಕ ಸ್ತ್ರೀ ಪುರುಷರಿಂದ ಕೂಡಿದ್ದು, ಸಾಮಾನ್ಯ ಮಕ್ಕಳಿದ್ದು ಭೂಮಿಯನ್ನು ಸಾಮೂಹಿಕವಾಗಿ ಹೊಂದಿರುತ್ತದೆ.

ಹೆಂಗಸಿನ ಪ್ರಜ್ಞೆಯನ್ನು ಲೈಂಗಿಕವಾಗಿ ಗುರುತಿಸಲು ಸಾಧ್ಯವಿಲ್ಲ. ಇದು ಆಯಾಕಾಲದ ಸಾಮಾಜಿಕ ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿದೆ. ಮಾನವರ ಆದಿಕಾಲದ ಸಂಸ್ಕೃತಿಯನ್ನು ಸಮೀಕ್ಷಿಸಿದಾಗ ಮಾನವರು ಹಿಂದಿನಿಂದಲೂ ಉತ್ಪಾದನಾ ಸಾಧನವಾಗಿ ಆಯುಧಗಳನ್ನು ಹೊಂದಿದ್ದರು. ಭಾರಿ ಗಾತ್ರದ ದೊಣ್ಣೆಗಳನ್ನು ಹಿಡಿದು ಕ್ರೂರಮೃಗಗಳಿಂದ ರಕ್ಷಿಸಿಕೊಳ್ಳಬೇಕಾಗಿತ್ತು. ಈ ಸಂದರ್ಭದಲ್ಲಿ ಹೆಂಗಸಿನ ದೈಹಿಕ ದೌರ್ಬಲ್ಯ ಕಾಣುತ್ತದೆ. ತನ್ನ ಶಕ್ತಿ ಮೀರಿದ ಆಯುಧದಿಂದ ಅಕೆಗೆ ಅಸಾಧ್ಯವಾಗುತ್ತದೆ. ಆದರೆ ಹಲವು ಆಧುನಿಕ ಯಂತ್ರಗಳ ಮೂಲಕ ದೈಹಿಕ ಸಾಮರ್ಥ್ಯ ಕಡಿಮೆ ಬಳಕೆಯಾಗುತ್ತದೆ. ಅಗತ್ಯಕ್ಕಿಂತ ಹೆಚ್ಚು ಗಳಿಸಬೇಕಾದರೆ ಹೆಣ್ಣು ಸೋಲುವಳು. ಆದರೆ ಅಗತ್ಯವಾದಷ್ಟು ಸಾಮರ್ಥ್ಯ ಹೆಂಗಸಿನ ಸಾಧ್ಯತೆಯನ್ನು ಹೊಂದಿದ ಆಕೆ ಗಂಡಸಿಗೆ ಸರಿಸಮಾನಳಾಗುತ್ತಾಳೆ. ಏಂಗೆಲ್ಸನ ಪ್ರಕಾರ ಆದಿಮ ಸಮಾಜದಲ್ಲಿ ಭೂಮಿಯನ್ನು ಸಾಮುದಾಯಿಕವಾಗಿ ಎಲ್ಲರೂ ಉಪಯೋಗಿಸುತ್ತಿದ್ದರು. ಇಲ್ಲಿ ಮಹಿಳೆಯು ಕೃಷಿಗೆ ನೆರವಾಗುತ್ತಿದ್ದಳು. ಆ ಕಾಲವನ್ನು ಸಾಧನಗಳಿಂದ ಭೂಮಿಯನ್ನು ಅಗೆಯುವ ಕೆಲಸವನ್ನು ಮಾಡುತ್ತಾ ನೆರವಾಗುತ್ತಿದ್ದಳು ಈ ಕೆಲಸ ಮಾಡಲು ಸ್ತ್ರೀಗೆ ಅವಳ ದೈಹಿಕ ಸಾಮರ್ಥ್ಯಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಮಕ್ಕಳನ್ನು ಹೆರುವುದರಿಂದ ಗಂಡ-ಹೆಣ್ಣಿನಲ್ಲಿ ಶ್ರಮವಿಭಜನೆಯಾಗಿ ಈ ಎರಡು ಲಿಂಗಗಳನ್ನು ಎರಡು ವರ್ಗಗಳನ್ನಾಗಿ ರೂಪಿಸುತ್ತದೆ. ಆದರೆ ಈ ಎರಡು ವರ್ಗಗಳಲ್ಲಿ ಸಮಾನತೆಯಿದ್ದಿತು. ಇಲ್ಲಿ ಗಂಡಸು ಮೀನು ಹಿಡಿಯುವುದು, ಬೇಟೆಯಾಡುವುದು ಇತ್ಯಾದಿ ಕಾರ್ಯಗಳನ್ನು ಮಾಡುತ್ತಿದ್ದರೆ, ಹೆಂಗಸು ಮನೆಯಲ್ಲಿ ನೆಲೆಸಿ ಅಲ್ಲಿ ಗೃಹಕಾರ್ಯದಲ್ಲಿ ಕುಂಬಾರಿಕೆ, ನೇಯ್ಗೆ ತೋಟಗಾರಿಕೆ ಮುಂತಾದ ಉತ್ಪಾದಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರ ಮೂಲಕ ಆರ್ಥಿಕತೆಯಲ್ಲಿ ಸಮಾನವಾಗಿ ಭಾಗವಹಿಸುತ್ತಿದ್ದಳು. ಆದರೆ ಅನಾಗರಿಕಾವಸ್ಥೆಯ ಕಾಲಾವಧಿಯಲ್ಲಿ ತಾಮ್ರ, ಸತು, ಕಂಚು ಮುಂತಾದ ಲೋಹಗಳು ಒದಗಿ ಮತ್ತು ಪಶುಪಾಲನೆ, ಬೇಸಾಯ ಪ್ರಾರಂಭವಾದಾಗ ಈ ಹಿನ್ನೆಲೆಯನ್ನು ಪ್ರಾಣಿಗಳಿಗೆ ನೇಗಿಲು ಹೂಡುವ ಮೂಲಕ ವಿಶಾಲವಾದ ಭೂಮಿಯನ್ನು ಸಾಗುವಳಿ ಮಾಡಲಾಯಿತು. ಹೀಗೆ ಕೃಷಿಯ ಭೂಮಿಯ ವ್ಯಾಪ್ತಿ ಹಿರಿದಾಯಿತು. ಹಾಗಾಗಿ ಅದಕ್ಕೆ ಹೆಚ್ಚು ವಿಶಾಲವಾದ ಕಾಡನ್ನು ಕಡಿದು ನೆಲವನ್ನು ಬೇಸಾಯವಾಗಿ ಮಾಡಲು ಪುರುಷನು ಇತರ ಪುರುಷರ ಶ್ರಮವನ್ನು ಬಳಸಿಕೊಂಡು ಈ ಪುರುಷರು ಮುಖ್ಯ ಗಂಡಸಿನ ಅಧೀನದಲ್ಲಿದ್ದರು. ಹೀಗೆ ಇಲ್ಲಿ ಖಾಸಗಿ ಆಸ್ತಿ ಬಂತು. ಗುಲಾಮರನ್ನು ಸೇವಕರನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಗಂಡಸು ಇದೇ ಓಟದಲ್ಲಿ ಹೆಂಗಸನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡನು. ಹೀಗೆ ಹೊಸ ಉಪಕರಣಗಳ ಬಳಕೆಯಿಂದ ಹಿಂದಿನ ಶ್ರಮ ವಿಭಜನೆ ಸಮತೋಲನವಿಲ್ಲದಾಯಿತು. ಹೆಣ್ಣು ತನ್ನ ದೈಹಿಕ ನೆಲೆಯಿಂದ ಮನೆಯೊಳಗೆ ತನ್ನ ದುಡಿಮೆಯನ್ನು ಸೀಮಿತವಾಗಿಸಿಕೊಳ್ಳಲಾಗಿತ್ತು. ಅದೇ ಕಾರಣದಿಂದ ಪುರುಷನ ಅಧಿಕಾರಕ್ಕೆ ಚಾಲನೆ ದೊರೆಯಿತು. ಇಲ್ಲಿ ಮನೆಕಾರ್ಯಗಳಿಗೆ ಗಂಡನ ಭಾರಿ

ಉತ್ಪಾದನೆಯಲ್ಲಿ ಯಾವುದೇ ಮೌಲ್ಯವಿರಲಿಲ್ಲ. ತನ್ನ ಉತ್ಪಾದನಾ ಸಾಧನಗಳಿಂದ ಅಪಾರ ಸಂಪತ್ತಿಗೆ ಕಾರಣವಾಗಿದ್ದ ಈ ಸಂದರ್ಭದಲ್ಲಿ ಆ ಸಮುದಾಯದ ಕುಟುಂಬದಲ್ಲಿ ವ್ಯಕ್ತಪಡಿಸುತ್ತದೆ. ಅದು ಅವನ ತಾಯಿಯ ಸಹೋದರರಿಗೆ ಹಾಗೂ ತನ್ನ ಸಹೋದರಿಯರಿಗೆ ಸೇರುತ್ತಿತ್ತು. ವಿವಾಹ ವಿಭಜನೆಗೊಂಡರೂ ಹೀಗೆ ತನ್ನ ಸಾಮಗ್ರಿಗಳನ್ನು ತನ್ನ ತಾಯಿಯ ವಂಶಕ್ಕೆ ರವಾನಿಸಲಾಗುತ್ತಿತ್ತು. ಹಾಗಾಗಿ ಇಲ್ಲಿ ಮಾತೃ ಅಧಿಕಾರದ ಬದಲಿಗೆ ಪಿತೃವಿಗೆ ಕುಟುಂಬದ ಹೆಚ್ಚು ಸ್ಥಾನವನ್ನು ನೀಡಿ ತಂದೆಯ ಮೂಲಕ ವಂಶವನ್ನು ಗುರುತಿಸುವುದು ಪ್ರಾರಂಭವಾಯಿತು. ತಂದೆಯ ಆಸ್ತಿ ಮಗನಿಗೆ ಉತ್ತರಾಧಿಕಾರಿಯಾಗಿ ಮುಂದುವರಿಯುವ ಮೂಲಕ ಪಿತೃಪ್ರಧಾನ ಕುಟುಂಬ ಅಸ್ತಿತ್ವಕ್ಕೆ ಬಂತು. ಹೀಗೆ ಇಲ್ಲಿ ತಾಯಿಯ ಅಧಿಕಾರ ತಂದೆಯ ಅಧಿಕಾರಕ್ಕೆ ಜಾಗ ನೀಡಿತು. ತಂದೆಯ ಆಸ್ತಿ ಮಗನ ಪಾಲಾಗುವ ಪದ್ಧತಿ ಬಂದಿದ್ದರಿಂದ ಹೆಣ್ಣಿನ ಆಸ್ತಿ ಆಕೆಯ ವಂಶಕ್ಕೆ ಸೇರುವ ಪದ್ಧತಿ ತಪ್ಪಿಹೋಯಿತು. ಹೀಗೆ ಖಾಸಗಿ ಆಸ್ತಿಯ ತಳಹದಿಯ ಮೇಲೆ ಪಿತೃಪ್ರಧಾನ ಕುಟುಂಬ ನೆಲೆಗೊಂಡಿತು. ಇಂಥ ಕುಟುಂಬದಲ್ಲಿ ಹೆಂಗಸು ಅಧೀನಳಾದಳು. ಅಧಿಕಾರಯುತ ಗಂಡಸು ಗುಲಾಮರನ್ನು, ವೇಶ್ಯೆಯರೆಂದು ಕರೆಯಲಾಗುವ ಉಪಪತ್ನಿಯರನ್ನು ತನ್ನ ಭೂಮಿ ಸಾಗುವಳಿಗೆ ಹೆಚ್ಚು ಜನರ ಅವಶ್ಯಕತೆಯಿದ್ದರಿಂದ ಲೈಂಗಿಕವಾಗಿ ಬಳಸಿಕೊಂಡ. ಹೀಗೆ ಇಲ್ಲಿ ಗುಲಾಮರು, ಆತನ ಹೆಂಗಸರು ಅವನ ಕುಟುಂಬದ ಸದಸ್ಯರಾದರು. ಅವಕಾಶವಿದ್ದ ಕಡೆಯಲ್ಲಿ ಹೆಣ್ಣು ಸಹ ಸ್ಥಳೀಯ ಪದ್ಧತಿಗಳಿಗೆ ಅನುಗುಣವಾಗಿ ಸ್ವಾತಂತ್ರ್ಯದ ಹಕ್ಕನ್ನು ಪಡೆಯುವ ಸಲುವಾಗಿ ವಿವಾಹಪೂರ್ವ ಹಾಗೂ ವಿವಾಹಬಾಹಿರ ಸಂಬಂಧಗಳನ್ನು ಬೆಳೆಸಿಕೊಂಡಳು. ಮನೆಗೆಲಸಕ್ಕೆ ಕಟ್ಟುಬಿದ್ದ ಹೆಣ್ಣಿಗೆ ಆರ್ಥಿಕತೆಯನ್ನು ಗಳಿಸಿಕೊಳ್ಳಲು ಉಳಿದಿದ್ದು ಈ ದಾರಿಯಾಗಿತ್ತು. ಈ ಆರ್ಥಿಕ ಶೋಷಣೆ ಸಾಮಾಜಿಕ ಶೋಷಣೆಗೆ ದಾರಿ ಮಾಡಿಕೊಟ್ಟಿತು. ಹೀಗೆ ಹೆಣ್ಣು ಮತ್ತು ಗಂಡು ಭಿನ್ನ ಲಿಂಗಗಳ ನಡುವೆ ಹಕ್ಕುಗಳ ಸಮಾನತೆಯಾಗದೆ ಈ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿರಲಿಲ್ಲ. ಏಂಗೆಲ್ಸ್ ಪ್ರಕಾರ "ಹೆಂಗಸು ಸಾಮಾಜಿಕವಾಗಿ ಹೆಚ್ಚು ಪ್ರಮಾಣದಲ್ಲಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿದಾಗ ಮತ್ತು ಆಕೆಯ ಸ್ಥಿತಿ ಉತ್ತಮಗೊಳ್ಳಬಲ್ಲದು. ಹೊಸಕಾಲದ ಬೃಹದುದ್ದಿಮೆಗಳು ಮಾತ್ರ ಇಂಥಾ ಅವಕಾಶವನ್ನು ಕಲ್ಪಿಸಬಲ್ಲವು. ಅವು ಹೆಚ್ಚು ಹೆಂಗಸರನ್ನು ದುಡಿಮೆಯಲ್ಲಿ ಒಳಗೊಳ್ಳಬಲ್ಲವು. ಹಾಗೆ ಅವರು ಒಳಗಾಗುವುದನ್ನು ಅದು ಬಯಸುತ್ತದೆ ಕೂಡ!

ಖಾಸಗಿ ಆಸ್ತಿವ್ಯವಸ್ಥೆಯೇ ಹೆಂಗಸಿನ ಅಧೀನತೆಗೆ ಕಾರಣವಾಯಿತು ಎಂಬುದು ವ್ಯಂಗ್ಯ ವಾದವಾಗಿದೆ. ಇಲ್ಲಿ ಕಬ್ಬಿಣ, ಕಂಚಿನ ಉಪಕರಣಗಳ ಬಳಕೆ ಹೆಣ್ಣಿಗೆ ದೈಹಿಕ ಅಸಾಮರ್ಥ್ಯದಿಂದ ಕೂಡಿರುತ್ತದೆ. ಇದರಿಂದ ಆಕೆ ಅಧೀನವಾಗಿರುತ್ತಾಳೆ. ಈ ಉಪಕರಣಗಳಿಂದ ದುಡಿಯಲು ಆಕೆಗೆ ಸಾಮರ್ಥ್ಯವಿಲ್ಲದಿರುವುದು ಮಿತಿಯಿರಬಹುದು. ಗಂಡಸು ಸದಾ ಮೀರುವಿಕೆಯಲ್ಲಿ ಆಸಕ್ತಿಯಿರುವುದರಿಂದ ಈ ಹೊಸ ಉಪಕರಣಗಳ ಮೂಲಕ ತನ್ನ ಗುರಿಯನ್ನು ಸಾಧಿಸಲು

ಹೊರಟನು. ಹೀಗೆ ಗಂಡು ತನ್ನ ಈ ಹೊಸ ಅಪೇಕ್ಷೆಗಳ ಪೂರೈಕೆಯ ಹಿನ್ನೆಲೆಯಲ್ಲಿ ಹೆಣ್ಣು ದೈಹಿಕವಾಗಿ ಅಸಮರ್ಥಳಾಗಿದ್ದರಿಂದ ಆಕೆಗೆ ಈ ಸ್ಥಿತಿ ಬಂದಿದೆ. ಗಂಡು ಹೆಣ್ಣಿನ ನಡುವಿನ ಶತ್ರುತ್ವವನ್ನು ವರ್ಗಸಂಘರ್ಷವೆಂದು ಗ್ರಹಿಸಿದ. ಗಂಡು ಹೆಣ್ಣಿನ ನಡುವೆ ಇದ್ದ ಶ್ರಮವಿಭಜನೆ ಮಾತ್ರ ಅದರ ನಂತರ ಉಂಟಾದ ಶೋಷಣೆಯು ಸಮಾಜದಲ್ಲಿ ರೂಪುಗೊಂಡ ವರ್ಗ ವಿಭಜನೆಯ ಮಾದರಿಯನ್ನು ಕುರಿತದ್ದು. ದುಡಿಯುವ ಅಧೀನವ್ಯಕ್ತಿ ತಾನು ಯಜಮಾನನಿಂದ ಶೋಷಣೆಗೆ ಒಳಗಾಗಿ ದೈವ ಎಂಬುದನ್ನು ಅರಿತಿರುತ್ತಾನೆ. ಹಾಗಾಗಿ ಶ್ರಮಜೀವಿಗಳು ಬಂಡಾಯ ಹೂಡಿ ಈ ಸ್ಥಿತಿಯಿಂದ ಹೊರಬರಲು ಸದಾ ಯತ್ನಿಸುತ್ತಿರುತ್ತಾರೆ. ಹೆಂಗಸು ಕೇವಲ ದುಡಿಮೆಗಾರಳಾಗಿಲ್ಲ. ಅವಳ ಉತ್ಪಾದನಾ ಸಾಮರ್ಥ್ಯದಷ್ಟೇ ಅವಳ ತಾಯ್ತನದ ಕೆಲಸವು ಮುಖ್ಯವಾದದ್ದು. ಇದು ಅವಳ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಾಮಾಜಿಕ ಹಾಗೂ ಸಾಮಾಜಿಕ ಆರ್ಥಿಕತೆಯ ಹಿನ್ನೆಲೆಯಲ್ಲಿ ಅಷ್ಟೇ ಮುಖ್ಯವಾಗಿದೆ. ನೇಗಿಲು ಹಿಡಿದು ಉಳುವುದಕ್ಕಿಂತ ಮಕ್ಕಳನ್ನು ಹೆರುವುದು ಸಾಮಾಜಿಕವಾಗಿ ಹೆಚ್ಚು ಉಪಯುಕ್ತವಾಗಿದೆ. ಈ ಸಮಸ್ಯೆಯನ್ನು ಸ್ತ್ರೀವಾದ ಎತ್ತಿ ಹಿಡಿಯುತ್ತದೆ.

ಮಕ್ಕಳಿಗಾಗಿ ಸಮಾಜದಲ್ಲಿರುವ ಬೇಡಿಕೆಯಲ್ಲಿ ಹೆಂಗಸು ತಾಯ್ತನಕ್ಕೆ ತನ್ನ ಬದುಕನ್ನು ಹೆಚ್ಚು ತೊಡಗಿಸಿಕೊಳ್ಳಬೇಕಾಗುತ್ತದೆ. ಹಾಗಾಗಿ ನಾಗರಿಕಳಾಗಿ, ಉದ್ಯೋಗಸ್ಥ ವ್ಯಕ್ತಿಯಾಗಿ ರೂಪಿತಳಾಗಲು ಸಾಧ್ಯವಾಗುತ್ತಿರಲಿಲ್ಲ. ಹೆಂಗಸನ್ನು ಬಲವಂತವಾಗಿ ಹೆರುವಂತೆ ಮಾಡಲು ಸಾಧ್ಯವಿಲ್ಲ. ತಾಯ್ತನವಷ್ಟೇ ಅವಳ ಮುಖ್ಯಸಾಧನೆಯಾಗುವಂತೆ ಮಾಡಬಹುದು. ಹೆಂಗಸನ್ನು ಗಂಡಸಿನೊಡನೆ ಬೆಸೆಯುವ ಲೈಂಗಿಕ ಸಂಬಂಧವು ಗಂಡು ಹೆಣ್ಣಿನೊಡನೆ ಇರಿಸಿಕೊಳ್ಳುವ ಸಂಬಂಧಕ್ಕಿಂತ ಭಿನ್ನವಾದುದು. ಅದೇ ರೀತಿ ಹೆಣ್ಣಿಗೂ ಅವಳ ಮಗುವಿಗೂ ಇರುವ ಸಂಬಂಧವು ಹಾಗೇ ಇದೆ. ಹೀಗಾಗಿ ಹೆಣ್ಣು ಕಂಚಿನ ಉಪಕರಣಗಳ ಸೃಷ್ಟಿಯಲ್ಲಿ ಯಂತ್ರಗಳು ಅವಳನ್ನು ನಿರಾಕರಿಸುವುದಿಲ್ಲ. ಹೆಣ್ಣು ಮಾನವಳಾಗಿ ಅವಳ ಪರಿಪೂರ್ಣ ಬೆಳವಣಿಗೆಗೆ ಅವಳ ದೈಹಿಕ ಸಾಮರ್ಥ್ಯ ಸನ್ನಿವೇಶವನ್ನು ಗಮನದಲ್ಲಿಡಬೇಕು. ಹಾಗಾಗಿ ಗಂಡು ಹೆಣ್ಣುಗಳನ್ನು ಆರ್ಥಿಕ, ಉತ್ಪಾದನಾ ಸಾಧನಗಳ ನೆಲೆಯಲ್ಲಿ ಪರಿಗಣಿಸುವ ಚಾರಿತ್ರಿಕವನ್ನು ನಿರಾಕರಿಸಲಾಗದು.

ಆದಿಮ ಸಮಾಜದಲ್ಲಿ ಮಹಿಳೆ ಕಷ್ಟಪಟ್ಟು ದುಡಿಯಬೇಕಿತ್ತು. ಹಲವು ಜವಾಬ್ದಾರಿಗಳನ್ನು ಅವಳು ಹೊರುತ್ತಿದ್ದಳು. ಈ ಕೆಲಸಕ್ಕೆ ಹೆಚ್ಚು ಮಹತ್ವವಿರಲಿಲ್ಲ. ಮಾನವ ಜನಾಂಗ ಒಂದು ಕಡೆಯಿಂದ ಮತ್ತೊಂದೆಡೆಗೆ ಸಾಗುವಾಗ ಎದುರಾಗುತ್ತಿದ್ದ ಕ್ರೂರಮೃಗಗಳಿಂದ ರಕ್ಷಿಸಲು ಗಂಡಸು ಯಾವಾಗಲು ಸಿದ್ಧವಾಗಿದ್ದ. ಇಲ್ಲಿ ಆತನ ಕೆಲಸ ಹೆಚ್ಚು ಅಪಾಯಕಾರಿಯಾಗಿತ್ತು. ಅವನಿಂದ ಹೆಚ್ಚು ಶ್ರಮವನ್ನು ಬೇಡುವಂತಿತ್ತು. ಹೀಗೆ ಆಯುಧ ಹಿಡಿದು ಕಾಡುಮೃಗಗಳನ್ನು ಎದುರಿಸುತ್ತಿದ್ದ. ಆ ಕಾಲದಲ್ಲಿ ಗಂಡಸಿನ ಬಲಕ್ಕೆ ಹೆಚ್ಚಿನ ಮನ್ನಣೆ ದೊರಕಿತ್ತು. ಅಲ್ಲದೆ ಹೆಂಗಸು ಎಷ್ಟೇ ದುಡಿಯಲಿ ಹೆರುವ ಹೊಣೆಗಾರಿಕೆ ಬಂದ ಅವಳನ್ನು ಸಾರ್ವಜನಿಕ

ಹೋರಾಟದಲ್ಲಿ ಹೋಗದಂತೆ ತಡೆಹಿಡಿಯುತ್ತಿತ್ತು. ಬಸಿರು, ಹೆರಿಗೆ, ಮುಟ್ಟುಗಳು ಅವಳಲ್ಲಿ ದುಡಿಯುವ ಸಾಮರ್ಥ್ಯವನ್ನು ಕುಗ್ಗಿಸುತ್ತಿದ್ದವು. ಅಲ್ಲದೆ ಆಹಾರ ಹಾಗೂ ರಕ್ಷಣೆಗಾಗಿ ಎಲ್ಲ ವೇಳೆಯಲ್ಲೂ ಗಂಡಸಿನ ನೆರವನ್ನು ಬಯಸುವಂತೆ ಮಾಡುತಿತ್ತು. ಅಲ್ಲದೆ ಹೆರುವುದು ಅನಿಯಂತ್ರಣವಾಗಿರುತ್ತಿತ್ತು. ಇದರಿಂದ ಅವಳ ಸಮಯ ಮತ್ತು ಶ್ರಮವನ್ನು ಹೆಚ್ಚು ಬೇಡುತ್ತಿತ್ತು. ತಾನೇ ಹೆತ್ತ ಮಕ್ಕಳಿಗೆ ಅಗತ್ಯವಾದ ಆಹಾರವನ್ನು ನೀಡಲು ಕೂಡ ಅಸಮರ್ಥಳಾಗಿದ್ದಳು. ಹೀಗೆ ಹೆಣ್ಣು ಮೊದಲು ಎದುರಿಸಿದ್ದು ಸಂಕಷ್ಟವಾಗಿತ್ತು. ಕಿರಾತಾವಸ್ಥೆಯಲ್ಲಿ ಆಹಾರ ಸಂಗ್ರಹಣೆ, ಬೇಟೆ, ಮೀನುಗಾರಿಕೆಗಳಲ್ಲಿ ತೊಡಗಿದ್ದು ಬೆಳೆ ತೆಗೆಯುವುದು ತುಂಬಾ ಶ್ರಮದಾಯಕವಾದ ಕೆಲಸವಾಗಿತ್ತು. ಹೀಗೆ ಗುಂಪಿನಲ್ಲಿದ್ದ ಸಂಪನ್ಮೂಲಗಳು, ಕಡಿಮೆ ಹುಟ್ಟುತ್ತಿದ್ದ ಮಕ್ಕಳು, ಹೆಚ್ಚು ಹೆಂಗಸು ತನ್ನ ತಾಯ್ತನದಿಂದ ಸಮುದಾಯ ಸಂಪನ್ಮೂಲಗಳನ್ನು ಹೆಚ್ಚಿಸಲು ನೆರವಾಗುವುದು ಸಾಧ್ಯವಿರುತ್ತಿರಲಿಲ್ಲ. ಹೀಗಾಗಿ ಗುಂಪಿನ ಸದಸ್ಯರ ಹೆಚ್ಚಳ ಮತ್ತು ಸಂಪನ್ಮೂಲಗಳ ನಡುವೆ ಸಮತೋಲನವನ್ನು ತರುವ ಹೊಣೆ ಗಂಡಸಿನ ಮೇಲೆ ಬಿತ್ತು. ಆದಿಮ ಸಮುದಾಯಗಳಲ್ಲಿ ಆಸ್ತಿ ಎಂಬುದಿರಲಿಲ್ಲ. ಅಲ್ಲದೆ ಖಾಸಗಿ ಆಸ್ತಿ, ಮರು ಸಾಧಿಸುವ ಭೂಮಿ ಅವರಿಗಿರಲಿಲ್ಲ. ಹೀಗಾಗಿ ನಾಳೆಗಾಗಿ ಏನನ್ನೂ ಕಾಯ್ದಿರಿಸುವಂತಿರಲಿಲ್ಲ. ಹಾಗಾಗಿ ಅಂದಿನ ಕಾಲದಲ್ಲಿ ಮಕ್ಕಳು ಆಸ್ತಿ ಎನ್ನುವುದಕ್ಕಿಂತ ಬೇಡದ ಹೊರೆಯಾಗಿದ್ದ ಹೆಚ್ಚು ಶಿಶುಹತ್ಯೆ ಅಲೆಮಾರಿಗಳಲ್ಲಿ ಸಾಮಾನ್ಯವಾಗಿತ್ತು. ಹೆರುತ್ತಿದ್ದ ಹೆಂಗಸಿಗೆ ತನ್ನ ತಾಯ್ತನದ ಮಹತ್ವ ತಿಳಿದಿರಲಿಲ್ಲ. ಹೆರುವಿಕೆಯು ಅತೀವ ಅಸಹನೆಯ ನೋವು ನಿರ್ಧಾರವೆಂದು, ಅಪಾಯಕಾರಿಯೆಂದು ತಿಳಿಯಲಾಗುತ್ತಿತ್ತು. ಅಲ್ಲದೆ ಹೆರುವುದು, ಮೊಲೆಯೂಡಿಸುವುದು ಕೆಲಸಗಳಾಗಿರಲಿಲ್ಲ. ಅವು ಸಹಜ ಪ್ರಕ್ರಿಯೆಗಳಾಗಿದ್ದವು. ಹಾಗಾಗಿ ಹೆಂಗಸಿಗೆ ತನ್ನ ಇರುವಿಕೆಯು ಮಹತ್ತರ ಸಾಧನೆಯ ಉದ್ದೇಶವನ್ನು ಹೊಂದಿದೆ ಎಂಬ ಭಾವ ಮೂಡಲಿಲ್ಲ.

ಹೆಣ್ಣು ತನ್ನ ದೈಹಿಕ ಸ್ಥಿತಿಯಿಂದ ವಿಧಿಗೆ ಮೂಕಳಾಗಿ ಒಪ್ಪಿಸಿಕೊಂಡಿದ್ದಳು. ಹಾಗಾಗಿ ಮುಂದೆ ಅವಳಿಗೆ ಒದಗಿದ ಮನೆಗೆಲಸಗಳು, ತಾಯ್ತನದ ಈ ಚೌಕಟ್ಟಿನ ಮುಂದುವರಿಕೆಯೇ ಆಗಿದ್ದವು. ಆದರೆ ಪುರುಷರು ಇದಕ್ಕಿಂತ ಭಿನ್ನವಾಗಿದ್ದರು. ಪ್ರಾರಂಭದಿಂದಲೂ ಹೊಸದನ್ನು ಕಟ್ಟಿದವರು. ಹಣ್ಣುಗಳನ್ನು ಮರದಿಂದ ಬೀಳಿಸಲು, ಪ್ರಾಣಿಗಳನ್ನು ಓಡಿಸಲು ಕೈಯಲ್ಲಿ ಹಿಡಿದ ದೊಣ್ಣೆ ಈಗ ಲೋಕದ ಮೇಲೆ ಹಿಡಿತವನ್ನು ಹೆಚ್ಚಿಸುವ ಉಪಕರಣವಾಯಿತು. ತನ್ನನ್ನು ತಾನು ಸಮುದ್ರಕ್ಕೆ ಹೋಗಿ ಮೀನು ಹಿಡಿಯುವ ಕೆಲಸಕ್ಕಷ್ಟೇ ಸೀಮಿತಗೊಳಸಿಕೊಳ್ಳಲಿಲ್ಲ. ನೀರಿನ ಮೇಲೆ ಹಿಡಿತ ಸಾಧಿಸಲು ಮರದ ಕಾಂಡಗಳನ್ನು ಕೊರೆದು ದೋಣಿಗಳನ್ನು ಮಾಡಿಕೊಂಡ. ಹೀಗೆ ಲೋಕದಿಂದ ಬೇಕಾದ್ದನ್ನು ಪಡೆಯಲು ಲೋಕದ ಮೇಲೆ ತನ್ನ ಹಿಡಿತವಿರಿಸಿಕೊಂಡ. ಅದಕ್ಕಾಗಿ ತನ್ನ ಸಾಮರ್ಥ್ಯವನ್ನು ವ್ಯಯಿಸಿದ. ಹೀಗೆ ವ್ಯಕ್ತಿಯಾಗಿ ತನ್ನ ವ್ಯಕ್ತಿತ್ವ ಸಂಪೂರ್ಣವಾಗುವ ದಾರಿಗಳನ್ನು ತೆರೆದುಕೊಂಡ. ಆದಿಮ ಸಮುದಾಯಗಳಲ್ಲಿ ಹೆಂಗಸರ ಸ್ಥಿತಿಗತಿಗಳು ಕಷ್ಟಕರವಾಗಿದ್ದವು. ಅಲೆಮಾರಿಗಳು ಒಂದೆಡೆ ನೆಲೆ ನಿಂತು ಕೃಷಿಕರಾದ ಮೇಲೆ ನ್ಯಾಯಪದ್ಧತಿ ಅಸ್ತಿತ್ವಕ್ಕೆ ಬಂತು.

ಕೃಷಿ ಸಮುದಾಯದಲ್ಲಿ ಹೆಣ್ಣಿಗೆ ಹೆಚ್ಚಿನ ಸ್ಥಾನಮಾನಗಳು ಲಭಿಸಿದವು. ಈ ನಾಗರಿಕತೆಯಲ್ಲಿ ಬೇಸಾಯ ಮತ್ತು ಪಶುಪಾಲನೆ ಉತ್ಪಾದನಾ ಸಾಧನವಾಗಿದ್ದರಿಂದ ಉಳುಮೆಕಾರ್ಯಕ್ಕೆ ಜನರ ಅವಶ್ಯಕತೆಯಿದ್ದು ಹೆಣ್ಣಿನ ಫಲವಂತಿಕೆಗೆ ಹೆಚ್ಚು ಮನ್ನಣೆ ದೊರೆಯಿತು. ಮಗುವಿಗೆ ದೊರೆತ ಮನ್ನಣೆಯಿಂದ ಹೆಂಗಸಿಗೂ ಗೌರವ ಲಭಿಸತೊಡಗಿತು. ಹೀಗೆ ನಿರ್ದಿಷ್ಟ ಸ್ಥಳದಲ್ಲಿ ನೆಲೆಸಿದ ಗಂಡಸರು ಆ ಭೂಮಿಯ ಮೇಲೆ ಹಕ್ಕು ಸ್ಥಾಪಿಸಿದರು. ಅದು ಸಮುದಾಯದ ಆಸ್ತಿಯಾಯಿತು. ಈ ಆಸ್ತಿಯನ್ನು ಮುಂದಿನ ತಲೆಮಾರಿಗೆ ವರ್ಗಾಯಿಸಲು ಮಕ್ಕಳು ಅವಶ್ಯಕತೆಯಿರುವುದರಿಂದ ಹೆರುವಿಕೆ ಒಂದು ಪವಿತ್ರ ಕಾರ್ಯವಾಯಿತು. ವಿವಾಹಿತ ಹೆಣ್ಣು ಗಂಡಿಗೆ ಅಡಿಯಾಳಾಗಿರಲಿಲ್ಲ. ಬದಲಾಗಿ ಅವಳು ಸಮುದಾಯದ ಭಾಗವಾಗಿದ್ದಳು. ಅಂದಿನ ಕುಲಚಿಹ್ನೆಗೆ ವಿನಯದಿಂದ ನಡೆದುಕೊಳ್ಳುತ್ತಿದ್ದಳು. ಅಲೆಮಾರಿ ಜನಾಂಗಗಳು ಕೇವಲ ಅಂದಂದಿನ ಬದುಕಿಗೆ ಮಾತ್ರ ಹೋರಾಡುತ್ತಿದ್ದವು. ಕೃಷಿ ಸಮುದಾಯವು ಜನರನ್ನು ಕೂಡಿರುವ ಭವಿಷ್ಯದತ್ತ ಚಿಂತಿಸತೊಡಗಿತು. ಗೋತ್ರದ ಮುಖ್ಯಸ್ಥನು ಕುಲೀನನಾಗಿದ್ದು ಅವರ ನಿಯಂತ್ರಣದಲ್ಲಿ ಸಮುದಾಯವು ನಡೆಯುತ್ತಿತ್ತು. ಅಲ್ಲದೆ ಸಮುದಾಯವು ಈ ಕುಲೀನರಿಗೆ ಅಪಾರ ಗೌರವ ಸಲ್ಲಿಸುತ್ತಿದ್ದರು. ಅಲ್ಲದೆ ಸಮುದಾಯ ಕುಟುಂಬವು ತನ್ನ ಮುಂದಿನ ಜನಾಂಗದ ಬಗ್ಗೆ ಹೆಚ್ಚು ಆಸಕ್ತಿ ಹೊಂದತೊಡಗಿತು. ಅವರಿಂದ ಮೋಕ್ಷ ದೊರೆಯುವುದು ಎಂಬುದು ಅವರ ನಂಬಿಕೆಯಾಗಿತ್ತು. ಆದಿಮ ಸಮಾಜದಲ್ಲಿ ಮಕ್ಕಳು ಹುಟ್ಟುವಲ್ಲಿ ತಂದೆಯ ಪಾತ್ರವೇನೆಂಬುದು ತಿಳಿದಿರಲ್ಲ. ಹಾಗಾಗಿ ಮಕ್ಕಳನ್ನು ಹೆರುವ ತಾಯಿ ವಿಶೇಷ ಸ್ಥಾನಗಳಿಂದ ಗೌರವಿತಳಾಗಿದ್ದಳು. ಹೀಗೆ ಹುಟ್ಟಿದ ಅವಳ ಮಕ್ಕಳು ತಾಯಿಯ ವರ್ಗದಿಂದ ಗುರುತಿಸಿಕೊಳ್ಳಲಾಗುತ್ತಿತ್ತು. ಹೀಗೆ ಹೆಣ್ಣು ಈ ಮೂಲಕ ಕುಲದ ಹಕ್ಕುಗಳನ್ನು ಸೌಲಭ್ಯಗಳನ್ನು ಹೊಂದುತ್ತಿದ್ದಳು. ಈ ಮೂಲಕ ಸಮುದಾಯದ ಆಸ್ತಿಯ ಉತ್ತರಾಧಿಕಾರಿಯಾಗಿದ್ದಳು.

ಮಾತೃಪ್ರಧಾನ ಕುಟುಂಬ

ಪಿತೃಪ್ರಧಾನ ಕುಟುಂಬಕ್ಕಿಂತ ಹಿಂದೆ ಮಾತೃಮೂಲದ ಕುಟುಂಬ ಅಸ್ತಿತ್ವದಲ್ಲಿದ್ದು, ಈ ವ್ಯವಸ್ಥೆಯಲ್ಲಿ ವಂಶದ ಮೂಲವನ್ನು ತಾಯಿಯ ಮೂಲಕ ಗುರುತಿಸಲಾಗುತ್ತಿತ್ತು. ಇಲ್ಲಿ ತಾಯಿಯು ಕುಟುಂಬದ ಒಡತಿ. ಕುಟುಂಬದ ಎಲ್ಲ ವಿಷಯ ವ್ಯವಹಾರಗಳಲ್ಲಿ ಸ್ತ್ರೀಗೆ ಪ್ರಾಮುಖ್ಯತೆ ಇರುತ್ತದೆ. ಮಕ್ಕಳು ತಾಯಿಯ ವಂಶಕ್ಕೆ ಸೇರುತ್ತಾರೆ. ತಾಯಿ, ಅವಳ ಸೋದರ ಸೋದರಿಯರು ಇದರಲ್ಲಿ ಸೇರುತ್ತಾರೆ. ಇಲ್ಲಿ ಸ್ತ್ರೀಯು ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚಿನ ಪಾತ್ರ ವಹಿಸುತ್ತಾಳೆ. ಸ್ತ್ರೀಗೆ ಆಸ್ತಿಯ ಮೇಲೆ ಹಕ್ಕಿರುತ್ತದೆ. ಉತ್ತರಾಧಿಕಾರವು ಹೆಣ್ಣು ಕುಲವನ್ನು ಅನುಸರಿಸಿ ಮುಂದುವರಿಯುತ್ತದೆ. ಸಾಮಾನ್ಯವಾಗಿ ಆಸ್ತಿಯು ತಾಯಿಯಿಂದ ಹೆಣ್ಣುಮಕ್ಕಳಿಗೆ ವರ್ಗಾವಣೆಗೊಳ್ಳುತ್ತದೆ. ಹಿರಿಯ ಮಗಳು ಆಸ್ತಿಯ ವಾರಸುದಾರಳಾಗುತ್ತಾಳೆ.

ಈ ಕುಟುಂಬದಲ್ಲಿ ತಾಯಿಯು ಹೆಸರಿಗೆ ಮಾತ್ರ ಒಡತಿಯಾಗಿದ್ದು ಅಧಿಕಾರವೆಲ್ಲವೂ ಸಹೋದರನ ನಿಯಂತ್ರಣದಲ್ಲಿರುತ್ತದೆ. ಈತನಿಗೆ ವಿಶೇಷವಾದ ಸ್ಥಾನ-ಗೌರವಗಳಿವೆ. ಮನೆಯ

ಎಲ್ಲ ವ್ಯವಹಾರಗಳನ್ನು ಈತನೇ ನೋಡಿಕೊಳ್ಳುತ್ತಾನೆ. ಹಲವಾರು ಆದಿವಾಸಿ ಸಮುದಾಯಗಳಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿ ಇದೆ. ಭಾರತದ ಖಾಸ ಜನಾಂಗದಲ್ಲಿ ಮತ್ತು ಕೇರಳದ ನಾಯರ್ ಜನರಲ್ಲಿ ಮಾತೃಪ್ರಧಾನ ಕುಟುಂಬಪದ್ಧತಿ ಕಂಡುಬರುತ್ತದೆ. ಆಧುನಿಕತೆಯ ಪ್ರಭಾವದಿಂದ ಕೇರಳದ ನಾಯರ್ ಜನಾಂಗದಲ್ಲಿ ಮಾತೃಪ್ರಧಾನ ಪದ್ಧತಿಯು ತನ್ನ ಇರುವಿಕೆಯನ್ನು ಬಿಟ್ಟುಕೊಟ್ಟು ಪಿತೃಪ್ರಧಾನ ಕುಟುಂಬವಾಗಿ ಪರಿವರ್ತನೆಗೊಳ್ಳುತ್ತದೆ. ಈ ಕುಟುಂಬದಲ್ಲಿ ತಾಯಿಯ ಅಧಿಕಾರವು ನೆಪ ಮಾತ್ರವಾಗಿರುತ್ತದೆ. ಆದರೆ ಸ್ತ್ರೀಯು ತನ್ನ ಬಂಧುಗಳೊಡನೆ ಈ ವ್ಯವಸ್ಥೆಯಿಂದ ಸ್ವತಂತ್ರವಾಗಿ ಜೀವಿಸಬಹುದು. ಇಲ್ಲಿ ಗಂಡನಿಗೆ ಸರಿಯಾದ ಉನ್ನತವಾದ ಸ್ಥಾನಮಾನಗಳಿರುವುದಿಲ್ಲ.

ಮಾತೃಪ್ರಧಾನ ಕುಟುಂಬದಲ್ಲಿ ತಾಯಿಗೆ ಉನ್ನತವಾದ ಸ್ಥಾನಮಾನಗಳಿರಬೇಕು. ಆದರೆ ಇಲ್ಲಿ ತಾಯಿಗೆ ಸಂಪೂರ್ಣ ಪ್ರಭುತ್ವವಿರಲಿಲ್ಲ. ಆದ್ದರಿಂದ ಈ ವಿಧದ ಕುಟುಂಬವನ್ನು ಮಾತೃವಂಶೀಯ ಕುಟುಂಬವೆನ್ನಬಹುದೇ ವಿನಾ ಮಾತೃಪ್ರಧಾನ ಕುಟುಂಬ ಎಂದು ಹೇಳಲಾಗುವುದಿಲ್ಲ ಎಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಏಕೆಂದರೆ ಇಲ್ಲಿ ಹೆಸರಿಗೆ ಮಾತ್ರ ಸ್ತ್ರೀ ಒಡತಿಯೇ ಹೊರತು ಕುಟುಂಬದ ಎಲ್ಲ ವ್ಯವಹಾರ ಆಕೆಯ ತಂದೆ ಇಲ್ಲವೇ ಸಹೋದರ ನೋಡಿಕೊಳ್ಳುತಾನೆ.

ಈ ಕುಟುಂಬದಲ್ಲಿ ಅದರ ರಚನೆಯನ್ನು ಗಮನಿಸಿದಾಗ ಕೂಡುಕುಟುಂಬ ಮತ್ತು ಸರಳಕುಟುಂಬಗಳೆಂದು ಪರಿಗಣಿಸಲಾಗುತ್ತದೆ. ಕೂಡುಕುಟುಂಬ ವ್ಯವಸ್ಥೆಯು ಅನೇಕ ಪ್ರಾಚೀನ ಸಮಾಜಗಳಲ್ಲಿ ಕಂಡುಬರುತ್ತದೆ. ನಿರ್ದಿಷ್ಟವಾಗಿ ಒಂದು ಸೂರಿನ ಅಡಿಯಲ್ಲಿ ಮೂರು-ನಾಲ್ಕು ತಲೆಮಾರುಗಳ ಕುಟುಂಬದ ಜನರು ಒಂದು ಕಡೆಯಲ್ಲಿ ವಾಸವಾಗಿದ್ದರೆ ಅದನ್ನು ಅವಿಭಕ್ತ ಅಥವಾ ಕೂಡುಕುಟುಂಬ ಎಂದು ಕರೆಯಲಾಗುತ್ತದೆ. ತಂದೆ, ತಾಯಿ ಮತ್ತು ಮಕ್ಕಳೇ ಅಲ್ಲದೆ ಅವರ ಸಹೋದರರರೂ ಒಟ್ಟಿಗೆ ವಾಸಿಸುತ್ತಿದ್ದು, ಆಸ್ತಿಯನ್ನು ಒಟ್ಟಾಗಿ ಹೊಂದಿರುವ ಕುಟುಂಬವೇ ಅವಿಭಕ್ತ ಕುಟುಂಬ. ಈ ಕೂಡುಕುಟುಂಬಗಳಲ್ಲಿ ಮಾತೃಪ್ರಧಾನ, ಪಿತೃಪ್ರಧಾನ ಕೂಡುಕುಟುಂಬಗಳೆಂದು ಎರಡು ವಿಧಗಳಿವೆ. ಈ ಕುಟುಂಬಗಳಲ್ಲಿ ಏಕಪತ್ನಿ ಕುಟುಂಬ, ಬಹುಪತ್ನಿ ಕುಟುಂಬ ಮತ್ತು ಬಹುಪತಿ ಕುಟುಂಬ ಎಂಬ ಮೂರು ವಿಧಗಳನ್ನು ಗುರುತಿಸಬಹುದು. ವಂಶಾವಳಿಯನ್ನು ಗುರುತಿಸುವ ಸಲುವಾಗಿ ಮಾತೃಪ್ರಧಾನ ಮತ್ತು ಪಿತೃಪ್ರಧಾನ ಎಂದು ವರ್ಗೀಕರಿಸಲಾಗುತ್ತದೆ. ಇವು ಆ ಕುಟುಂಬದ ಯಜಮಾನಿಕೆ ಮತ್ತು ಸಂಗಾತಿಗಳ ವಾಸಸ್ಥಾನ ಇವುಗಳನ್ನು ಆಧಾರವಾಗಿಟ್ಟುಕೊಂಡು ರಚನೆಗೊಂಡಿದೆ. ಅವಿಭಕ್ತ ಕುಟುಂಬವು ಗಾತ್ರದಲ್ಲಿ ದೊಡ್ಡದಾಗಿದ್ದು ತಂದೆ, ತಾಯಿ, ಅಜ್ಜ, ಅಜ್ಜಿ, ಮಕ್ಕಳು, ಸಹೋದರರು, ಸೊಸೆಯರಿದ್ದು, ಅವರ ಮಕ್ಕಳು ಇವರೆಲ್ಲರನ್ನು ಕೂಡುಕುಟುಂಬ ಒಳಗೊಂಡಿರುತ್ತದೆ.

ಇಲ್ಲಿನ ಸದಸ್ಯರು ಒಂದೇ ವಂಶಾವಳಿಗೆ ಸೇರಿರುತ್ತಾರೆ. ಅಲ್ಲದೆ ರಕ್ತಸಂಬಂಧಿಗಳಾಗಿರುತ್ತಾರೆ. ಇಲ್ಲಿ ಎಲ್ಲ ಸದಸ್ಯರು ಒಂದೇ ನೆಲೆಯಲ್ಲಿ ವಾಸಿಸಿ, ಒಂದೇ ಒಲೆಯಲ್ಲಿ ಬೇಯಿಸಿದ ಆಹಾರವನ್ನು ಸೇವಿಸುತ್ತಾರೆ. ಧಾರ್ಮಿಕವಾಗಿ ಏಕದೇವತೆಯನ್ನು ಎಲ್ಲ ಸದಸ್ಯರು ಪೂಜಿಸುತ್ತಾರೆ. ಹೀಗೆ ಕುಟುಂಬದ ಸದಸ್ಯರೆಲ್ಲರೂ ಒಂದೇ ಧರ್ಮದ ದೇವರಾಗಿದ್ದು, ತಮ್ಮದೇ ಆದ ಮನೆದೇವರನ್ನು ಹೊಂದಿರುತ್ತಾರೆ. ಕುಟುಂಬದ ಆಸ್ತಿಯು ಅವಿಭಾಜ್ಯವಾಗಿದ್ದು, ಎಲ್ಲಾ ಆಸ್ತಿಯು ಕುಟುಂಬಕ್ಕೆ ಸೇರಿದ್ದು ಅದರಲ್ಲಿ ಪ್ರತಿಯೊಬ್ಬ ಸದಸ್ಯನಿಗೂ ಸಮನಾದ ಹಕ್ಕಿರುತ್ತದೆ. ಕುಟುಂಬದ ಹಿರಿಯ ವ್ಯಕ್ತಿ ಮನೆಯ ಯಜಮಾನನಾಗಿರುತ್ತಾನೆ. ಆ ಮನೆಯ ಆಸ್ತಿ ಹಾಗೂ ಆರ್ಥಿಕ ವ್ಯವಹಾರ ಹಿರಿಯ ಸದಸ್ಯನ ನಿಯಂತ್ರಣದಲ್ಲಿರುತ್ತದೆ. ಇತರ ಸದಸ್ಯರು ಹಿರಿಯರ ಆಣತಿಯಂತೆ ನಡೆಯುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯೂ ಈ ಕುಟುಂಬದಲ್ಲಿ ಪರಸ್ಪರ ಹಕ್ಕು ಬಾಧ್ಯತೆಯ ಬಗ್ಗೆ ತಿಳುವಳಿಕೆ ಇರುತ್ತದೆ. ಆದರೆ ಪ್ರತಿಯೊಂದು ಕೆಲಸ ಕಾರ್ಯಗಳು ಹಿರಿಯ ಸದಸ್ಯನ ಆಣತಿಯಂತೆ ನಡೆಯುತ್ತದೆ.

ಸಾಮಾನ್ಯವಾಗಿ ಇಂತಹ ಕುಟುಂಬಗಳು ಹಿಂದಿನಿಂದ ರಕ್ಷಿಸಿಕೊಂಡು ಬಂದಿರುವ ಸಂಪ್ರದಾಯ, ಆಚರಣೆ, ನಡವಳಿಕೆ ಮತ್ತು ಸದ್ಗುಣಗಳನ್ನು ಕಾಪಾಡುತ್ತವೆ. ಇಲ್ಲಿ ಪ್ರೀತಿ, ವಿಶ್ವಾಸ, ಪರಸ್ಪರ ಸಹಾಯ, ಸಹನೆ, ಶಿಸ್ತು, ನಿಷ್ಠೆ, ಔದಾರ್ಯ, ಸೇವೆ ಮತ್ತು ಸಹಕಾರಗಳ ಕೇಂದ್ರವಾಗಿದೆ. ಅಲ್ಲದೆ ಸಾಂಪ್ರದಾಯಿಕ ವೃತ್ತಿಗಳು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಳ್ಳುತ್ತವೆ. ಸಮಾನ ದುಡಿಮೆ ಮತ್ತು ಸಮಾನ ಪ್ರತಿಫಲಗಳಿಗೆ ಹೆಚ್ಚಿನ ಅವಕಾಶವಿರುತ್ತದೆ. ಅವಿಭಕ್ತ ಕುಟುಂಬದಲ್ಲಿ ಒಟ್ಟಿಗೆ ಅಡುಗೆ ಮಾಡುವುದರಿಂದ ಮತ್ತು ಮನೆಗೆ ಬೇಕಾದ ಸಾಮಗ್ರಿಗಳನ್ನು ಒಟ್ಟಿಗೆ ಕೊಂಡುಕೊಳ್ಳುವುದರಿಂದ ಸಾಕಷ್ಟು ಹಣದ ಉಳಿತಾಯವಾಗುತ್ತದೆ. ಈ ಕುಟುಂಬಗಳಲ್ಲಿ ಆಸ್ತಿಯು ಅವಿಭಾಜ್ಯವಾಗಿರುವುದರಿಂದ ಭೂಮಿ ಹಂಚಿ ಹರಿದು ಹೋಗುವುದನ್ನು ತಪ್ಪಿಸುತ್ತದೆ. ಸದಸ್ಯರೆಲ್ಲರೂ ಕೆಲಸವನ್ನು ಹಂಚಿಕೊಂಡು ಮಾಡುವುದರಿಂದ ಕೆಲಸದ ಒತ್ತಡ ಮತ್ತು ಉದ್ವೇಗಗಳು ಕಡಿಮೆ ಇರುತ್ತದೆ. ಹೆಚ್ಚಿನ ಬದುಕು ದೊರೆಯುವುದರಿಂದ ಮನೆಮಂದಿಗೆಲ್ಲ ಬದುಕುವ ಕಾಲವನ್ನು ಸಂತೋಷವಾಗಿ ಕಳೆಯುತ್ತಾರೆ.

ಕೂಡುಕುಟುಂಬಗಳಲ್ಲಿ ಅನುಕೂಲತೆಗಳು ಹೆಚ್ಚಿದಂತೆ ಅನನುಕೂಲಗಳೂ ಇವೆ. ಇಲ್ಲಿ ಅಧಿಕಾರವೆಲ್ಲವೂ ಯಜಮಾನನಲ್ಲಿ ಕೇಂದ್ರೀಕೃತವಾಗಿರುತ್ತದೆ. ಹಾಗಾಗಿ ಕುಟುಂಬದ ವ್ಯಕ್ತಿಗಳಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿರುವುದಿಲ್ಲ. ಸ್ವಯೋಜನೆ, ಸ್ವನಿರ್ಧಾರ, ಸ್ವಾವಲಂಬನೆಯಂತಹ ಗುಣಗಳನ್ನು ರೂಢಿಸಿಕೊಳ್ಳಲು ಕೂಡುಕುಟುಂಬದಲ್ಲಿ ಅವಕಾಶಗಳು ಕಡಿಮೆ. ಇಲ್ಲಿ ದುಡಿಯುವ ಸಂಖ್ಯೆ ಕಡಿಮೆಯಿದ್ದು ದುಡಿಮೆಯ ಹೊರೆ ಕೆಲವರ ಮೇಲೆ ಬೀಳುವುದರಿಂದ ದುಡಿಯುವವರಲ್ಲಿ ಸೋಮಾರಿತನವನ್ನು ಉತ್ತೇಜಿಸುತ್ತದೆ. ಕೌಟುಂಬಿಕ ಸಂಬಂಧಗಳಿಂದ ದೊರೆಯುವ ಹೆಚ್ಚಿನ ಭದ್ರತೆಯಿಂದಾಗಿ ಸದಸ್ಯರಲ್ಲಿ ಚತುರತೆ, ಸಾಹಸಪ್ರಿಯತೆ,

ವ್ಯವಹಾರಪ್ರಜ್ಞೆಯನ್ನು ಬೆಳೆಸುವುದಿಲ್ಲ. ಕೂಡುಕುಟುಂಬಗಳು ಪುರುಷಪ್ರಧಾನವಾಗಿರುವುದರಿಂದ ಸ್ತ್ರೀಯರಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ಇರುವುದಿಲ್ಲ. ಇವರು ಪುರುಷನ ಹಿಂಸೆ ಮತ್ತು ಕಿರುಕುಳಕ್ಕೊಳಗಾಗುತ್ತಾರೆ. ಅಲ್ಲದೆ ಯಾವುದೇ ವಿಚಾರದಲ್ಲಿ ಸ್ತ್ರೀಯರ ಅಭಿಪ್ರಾಯಕ್ಕೆ ಮನ್ನಣೆಯಿಲ್ಲ. ಇಲ್ಲಿ ತಾಯಿ ತನ್ನ ಮಗಳ ವಿವಾಹದ ಕುರಿತು ಕೂಡ ಖಚಿತವಾದ ಅಭಿಪ್ರಾಯವನ್ನು ಹೇಳುವಂತಿಲ್ಲ. ಹೆಣ್ಣುಮಕ್ಕಳ ಜೀವನವು ಅಡಿಗೆ ಕೆಲಸ ಮತ್ತು ಮನೆವಾರ್ತೆಗೆ ಮಾತ್ರ ಸೀಮಿತವಾಗಿರುತ್ತದೆ. ಆಕೆ ಮನೆಯ ಹೊರಗಿನ ಯಾವುದೇ ವ್ಯವಹಾರಗಳಲ್ಲಿ ಭಾಗವಹಿಸುವಂತಿಲ್ಲ. ಯಾವುದೇ ಸಮಾರಂಭಗಳಿಗೆ ಹೋಗದಂತೆ ನಿರ್ಬಂಧಿಸಲಾಗಿದೆ.

ಪರಿವಾರದ ಮಂದಿಯಲ್ಲಿ ಸದಸ್ಯರ ನಡುವೆ ಹೊಂದಾಣಿಕೆ ಕಡಿಮೆ ಇದ್ದು ಹಿರಿಯ ಮತ್ತು ಕಿರಿಯ ಮಂದಿಗಳಲ್ಲಿ ಜಗಳ ನಿರಂತರವಾಗಿರುತ್ತದೆ. ಅತ್ತೆ ಸೊಸೆಯರಲ್ಲಿ ಹೊಂದಾಣಿಕೆಯ ಕೊರತೆಯು ಮನೆ-ಮನದ ಶಾಂತಿಗೆ ಭಂಗ ತರುತ್ತದೆ. ಆಂತರಿಕ ಮತ್ಸರ ಮತ್ತು ಒಳಗುದಿಯು ಕೆಲವೊಮ್ಮೆ ಸ್ಥೂಲಗೊಂಡು ಪರಸ್ಪರ ದ್ವೇಷ ಮತ್ತು ಕುಟುಂಬದ ಶಿಥಿಲತೆಗೆ ಕಾರಣವಾಗುತ್ತದೆ.

ಕೂಡುಕುಟುಂಬಗಳು ಅನೇಕ ಸದಸ್ಯರಿಂದ ಕೂಡಿದ್ದು ಏಕಾಂತಕ್ಕೆ ಅವಕಾಶವಿರುವುದಿಲ್ಲ. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಇಂತಹ ಪರಿಸರ ಅಡ್ಡಿಯಾಗುತ್ತದೆ. ನವದಂಪತಿಗಳ ಏಕಾಂತಕ್ಕೆ ಅವಕಾಶ ಇಲ್ಲವಾಗಿ ಪರಸ್ಪರ ಮುಕ್ತವಾಗಿ ಮಾತನಾಡಲು ಮತ್ತು ಆತ್ಮೀಯತೆಯನ್ನು ಬೆಳಸಿಕೊಳ್ಳಲು ಅಸಾಧ್ಯವಾಗುತ್ತದೆ. ಇದರಿಂದ ಆತ್ಮೀಯ ಸಂಪರ್ಕ ಮತ್ತು ಪರಸ್ಪರ ಅರಿವಿನ ಕೊರತೆಯಿಂದ ಗಂಡ-ಹೆಂಡತಿಯರಲ್ಲಿ ಮೂಡಬೇಕಾದ ನೈಜಪ್ರೇಮಕ್ಕೆ ಅವಕಾಶವಿಲ್ಲದೆ ಹೋಗುತ್ತದೆ.

ಪರಿವರ್ತನಾಶೀಲ ಸಮಾಜದಲ್ಲಿ ಕೂಡುಕುಟುಂಬಗಳು ಅನೇಕ ಸವಾಲುಗಳು ಮತ್ತು ಬದಲಾವಣೆಗಳನ್ನು ಎದುರಿಸಿವೆ. ಇದರ ರಚನೆ ಮತ್ತು ಕಾರ್ಯಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಹಲವು ತಲೆಮಾರಿನ ರಕ್ತಸಂಬಂಧಗಳು ಒಟ್ಟಿಗೆ ವಾಸಿಸುತ್ತಿದ್ದು, ಕೈಗಾರೀಕರಣ ಮತ್ತು ನಗರೀಕರಣದ ಪ್ರಭಾವದಿಂದ ಒಡೆದು ಆಧುನಿಕ ಕುಟುಂಬಗಳಾಗಿವೆ. ವಿದ್ಯಾವಂತ ಮತ್ತು ಉದ್ಯೋಗಸ್ಥ ದಂಪತಿಗಳು ಸ್ವತಂತ್ರ ಮನೆಗಳನ್ನು ಸ್ಥಾಪಿಸಿಕೊಳ್ಳಲು ಹಾತೊರೆಯುತ್ತಿದ್ದಾರೆ. ಪಟ್ಟಣ, ನಗರಗಳ ಉದ್ಯೋಗ ಅರಸಿ ಹಾಗೂ ವ್ಯವಸಾಯದ ಆಕರ್ಷಣೆ ಕುಂದಿ ಜನರು ಹಳ್ಳಿಗಳಿಂದ ದೂರ ಸರಿಯುವಂತೆ ಮಾಡಿವೆ. ಸ್ವತಂತ್ರ ಜೀವನದ ಬಯಕೆ, ಯಜಮಾನನ ಹಿಡಿತದಿಂದ ಬಿಡುಗಡೆ, ದುಡಿಮೆಯನ್ನು ತನ್ನ ಹೆಂಡತಿ ಮತ್ತು ಮಕ್ಕಳಿಗೆ ಖರ್ಚು ಮಾಡಬೇಕೆನ್ನುವ ಸ್ವಾರ್ಥ, ಪರಿವಾರದ ಜನತೆಯಲ್ಲಿನ ಭಾವನಾಪರ ಸಂಬಂಧದ ಕೊರತೆ ಇವುಗಳೆಲ್ಲವೂ ಕೂಡುಕುಟುಂಬದ ಶಿಥಿಲತೆಗೆ ಕಾರಣವಾಗಿವೆ. ಇವು ಸರಳಕುಟುಂಬದ ಉಗಮಕ್ಕೆ ಕಾರಣಗಳಾಗಿವೆ.

ಗಂಡ-ಹೆಂಡತಿ ಮತ್ತು ಅವರ ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿರುವ ವಿಭಕ್ತಕುಟುಂಬಗಳೇ ಸರಳಕುಟುಂಬಗಳಾಗಿವೆ. ಇದನ್ನು ದಾಂಪತ್ಯ ಕುಟುಂಬವೆಂದು ಸಹ

ಕರೆಯಬಹುದು. ಈ ಆಧುನಿಕ ಸರಳಕುಟುಂಬವು ಗಾತ್ರದಲ್ಲಿ ಸಣ್ಣದಾಗಿದೆ. ಅದು ಹಿಂದಿನ ಕುಟುಂಬದ ಹಾಗೆ ಹತ್ತಿರದ ರಕ್ತಸಂಬಂಧಿಗಳೆಲ್ಲರನ್ನು ಒಳಗೊಂಡಿರುವುದಿಲ್ಲ. ಗಂಡ-ಹೆಂಡತಿ ಮತ್ತು ಅವರ ಅವಿವಾಹಿತ ಮಕ್ಕಳು ಸರಳಕುಟುಂಬದ ಲಕ್ಷಣವಾಗಿದೆ. ಇದನ್ನು 'ಮೂಲ ಕುಟುಂಬ' ಅಥವಾ ಪ್ರಾಥಮಿಕ ಕುಟುಂಬ ಎಂದು ಕರೆಯುತ್ತಾರೆ. ಕೂಡುಕುಟುಂಬದ ಗಾತ್ರ ಹಾಗೂ ಪಾತ್ರಗಳಲ್ಲಿ ಬದಲಾವಣೆ ಹೊಂದಿ ಸರಳಕುಟುಂಬಗಳು ರಚನೆಗೊಂಡಿವೆ. ಆದರೆ ಕುಟುಂಬದ ಮುಖ್ಯ ಕಾಳಜಿಗಳಾದ ಸಂತಾನೋತ್ಪತ್ತಿ, ಮಕ್ಕಳ ಪೋಷಣೆ, ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ, ನೀತಿಯುತವಾದ ಜೀವನ ಇವುಗಳ ಮೂಲಭೂತ ಧೋರಣೆಗಳಿಗೆ ಯಾವುದೇ ರೀತಿಯ ಧಕ್ಕೆ ಉಂಟಾಗಿರುವುದು ಮೇಲುನೋಟಕ್ಕೆ ವ್ಯಕ್ತವಾಗುವುದಿಲ್ಲ. ವ್ಯಕ್ತಿಗಳಲ್ಲಿ ಲೈಂಗಿಕ ಬಯಕೆಯು ಸ್ವಾಭಾವಿಕವಾದುದು. ಸರಳಕುಟುಂಬವು ವ್ಯಕ್ತಿಗಳಿಗೆ ಖಚಿತವೂ ಮತ್ತು ಸ್ಥಿರವೂ ಆದ ಲೈಂಗಿಕ ತೃಪ್ತಿಯನ್ನು ತಂದುಕೊಡುತ್ತದೆ. ಮಕ್ಕಳ ಪಾಲನೆ-ಪೋಷಣೆಯು ಇಲ್ಲಿ ಸಂಪೂರ್ಣವಾಗಿ ತಂದೆ-ತಾಯಿಗಳ ಜವಾಬ್ದಾರಿಯಾಗಿದೆ. ಶಾಲೆ, ಆಸ್ಪತ್ರೆ, ಸಾರ್ವಜನಿಕ ಮನೋರಂಜನಾ ಕ್ಷೇತ್ರಗಳು ಈ ಜವಾಬ್ದಾರಿಯನ್ನು ಕಡಿಮೆಗೊಳಿಸಿವೆಯಾದರೂ ಬಾಲ್ಯದಲ್ಲಿ ಮಕ್ಕಳ ಮೇಲೆ ತಂದೆ-ತಾಯಿಗಳ ಪೋಷಣೆ ಮತ್ತು ಪ್ರಭಾವಗಳು ಅನಿವಾರ್ಯವಾಗುತ್ತವೆ.

ಸರಳಕುಟುಂಬವು ಆಧುನಿಕ ಸಮಾಜದ ಅನಿವಾರ್ಯವಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಸಮಾಜದಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಾನವಾದ ಅವಕಾಶ, ಸ್ಥಾನಮಾನಗಳನ್ನು ಪಡೆಯುವುದು ಅವಶ್ಯಕವಾಗಿರುವುದರಿಂದ ಸರಳಕುಟುಂಬಗಳ ದಾಂಪತ್ಯಜೀವನದಲ್ಲಿ ಗಂಡ-ಹೆಂಡತಿಯ ಸ್ಥಾನಮಾನಗಳು ಸಮಾನವಾಗಿರುತ್ತವೆ. ಆದರೆ ಕೂಡುಕುಟುಂಬದಲ್ಲಿನ ಸೌಹಾರ್ದ ವಾತಾವರಣ ಕುಟುಂಬ ಸದಸ್ಯರೆಲ್ಲರೂ ಒಂದು ಕಡೆ ಕಲೆತು ಬಾಳುವ ಜೀವನ ಹಿರಿಯರ ಪ್ರೀತಿ, ಈ ಮುಂತಾದ ಭಾವನಾತ್ಮಕ ಸನ್ನಿವೇಶಗಳು ಸರಳಕುಟುಂಬದಿಂದ ದೊರೆಯುವುದು ಅಸಾಧ್ಯವೆಂದು ಕಾಣುತ್ತದೆ. ಒಟ್ಟಿನಲ್ಲಿ ಸರಳಕುಟುಂಬಗಳು ಮತ್ತು ಕೂಡುಕುಟುಂಬಗಳು ಆಯಾ ಸಮಾಜದ ಅನಿವಾರ್ಯತೆಗಳಾಗಿವೆ.

ಆಧುನಿಕ ಸಂಕೀರ್ಣಕುಟುಂಬಗಳನ್ನು ಇಂದು ಕಾಣಬಹುದಾಗಿದೆ. ಇಲ್ಲಿ ಸಂತಾನದ ಇಚ್ಛೆ ಸಂಗಾತಿಗೆ ಸಂಬಂಧಿಸಿರುತ್ತದೆ. ಸಂತಾನದ ಅಪೇಕ್ಷೆಯನ್ನು ನೇರವಾಗಿ ಹೊಂದಿರುವುದಿಲ್ಲ. ಆರ್ಥಿಕ, ಸಾಮಾಜಿಕ, ರಾಜಕೀಯ ಮುಂತಾದ ನೆಲೆಗಳಲ್ಲಿ ಸಮಾನತೆ ಪಡೆದಿರುವ ಗಂಡು-ಹೆಣ್ಣುಗಳು ಎಲ್ಲ ದೃಷ್ಟಿಯಿಂದಲೂ ಒಪ್ಪಿಕೊಳ್ಳುವ ಜೀವನಸಂಗಾತಿಯನ್ನು ಅಪೇಕ್ಷಿಸುತ್ತಾರೆ. ಆಧುನಿಕ ಸ್ತ್ರೀ-ಪುರುಷರ ಮನಸ್ಥಿತಿಗಳೆರಡೂ ಸ್ವಾವಲಂಬನೆ ಮತ್ತು ಸ್ವಂತ ಉದ್ಯೋಗದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿರುತ್ತಾರೆ. ಗಂಡ-ಹೆಂಡತಿ ಕುಟುಂಬಜೀವನಕ್ಕಾಗಿ ತಮ್ಮ ವೇಳೆಯನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಮಕ್ಕಳ ಪಾಲನೆ-ಪೋಷಣೆ, ಆರೋಗ್ಯ, ಶಿಕ್ಷಣ, ಪ್ರಾಥಮಿಕ ಕರ್ತವ್ಯಗಳಲ್ಲದೆ, ಪರಸ್ಪರ ಪ್ರೀತಿ, ಆತ್ಮವಿಶ್ವಾಸ, ನಂಬಿಕೆಗಳನ್ನು ಬೆಳೆಸುವ

ಜವಾಬ್ದಾರಿ ಕುಟುಂಬದ್ದೇ ಆಗಿರುತ್ತದೆ. ಸಂಕೀರ್ಣಕುಟುಂಬಗಳು ಮಕ್ಕಳ ಪಾಲನೆ–ಪೋಷಣೆ, ಆರೋಗ್ಯ, ಶಿಕ್ಷಣ, ಇವುಗಳಿಗೆ ಹಣ ವ್ಯಯ ಮಾಡಿ ಉತ್ತಮವಾದುದನ್ನು ದೊರೆಯುವಂತೆ ಮಾಡುತ್ತವೆ. ಹೀಗೆ ಪಲ್ಲಟಗೊಂಡ ಈ ವ್ಯವಸ್ಥೆಯಿಂದ ಮಕ್ಕಳಿಗಾಗಿ ಪ್ರೀತಿ, ಆತ್ಮವಿಶ್ವಾಸದ ನಂಬಿಕೆಯ ವಾತಾವರಣವನ್ನು ಕಲ್ಪಿಸಿಕೊಡುವುದರಲ್ಲಿ ಸಂಕೀರ್ಣಕುಟುಂಬಗಳು ಸೋಲುತ್ತಿವೆ. ಹೀಗಾಗಿ ಮಕ್ಕಳಲ್ಲಿ ಏಕಾಂಗಿತನ, ಆತ್ಮವಿಶ್ವಾಸದ ಕೊರತೆ, ಸ್ವನಿರ್ಣಯದ ಕೊರತೆ ಎದುರಾಗುತ್ತವೆ. ಪರಸ್ಪರ ನಂಬಿಕೆ–ಪ್ರೀತಿಯ ವಾತಾವರಣದಿಂದ ಸಂಪೂರ್ಣ ವಂಚಿತಗೊಂಡು ಸಮಾಜಕ್ಕೆ ಮಾರಕ ವ್ಯಕ್ತಿಗಳಾಗಿ ಮಾರ್ಪಡುತ್ತಾರೆ.

ಭಾರತೀಯ ಸಂದರ್ಭದಲ್ಲಿ ಕುಟುಂಬವನ್ನು ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಂರಕ್ಷಣೆ ನೀಡುವ ಸಂಸ್ಥೆಯೆಂದು ಭಾವಿಸಲಾಗಿದೆ. ಆದರೆ ವಸಾಹತುಶಾಹಿ ಶಿಕ್ಷಣದಿಂದ ಮಹಿಳೆಯರ ಬದುಕಿನಲ್ಲಿ ಬದಲಾವಣೆಗೆ ಅವಕಾಶವಾಯಿತು. ಸಾಂಪ್ರದಾಯಿಕವಾದ ಈ ಮಹಿಳೆಯರು ಸ್ವತಂತ್ರ ವ್ಯಕ್ತಿತ್ವವನ್ನು ಕಳೆದುಕೊಂಡು ಪುರುಷರ ಅಧೀನತೆಯಲ್ಲಿ ಬದುಕುತ್ತಿದ್ದರು. ಧಾರ್ಮಿಕ ಆಚರಣೆಗಳಿಂದ ಹೆಣ್ಣನ್ನು ಮನೆಯ ನಾಲ್ಕು ಗೋಡೆಗಳಲ್ಲಿ ಬಂಧಿಸಲಾಗಿತ್ತು. ಮಹಿಳೆಯನ್ನು 'ದೇವಿ', 'ಶಕ್ತಿಸ್ವರೂಪಿ'ಯನ್ನಾಗಿ ರೂಪಿಸಿ ಮನುಷ್ಯಳಾಗಿ ಬದುಕುವ ಅವಕಾಶವಿಲ್ಲದಂತೆ ಆಯಿತು. ಈ ಮಹಿಳೆಯರು ತಮ್ಮ ಮನೆಯ ಜೀವನದಲ್ಲಿ ದಾಸಿಗಳಾದರು. ಮನೆಯಲ್ಲಿ ಮನೆ ವಾರ್ತೆಯನ್ನು ನಿಭಾಯಿಸುವ ಸೇವಕಿಯಂತೆ ಇದ್ದಳು. ಹೀಗೆ ಇಲ್ಲಿ ಮಹಿಳೆ ಗೃಹಿಣಿಯಾಗಿ, ವಿದ್ಯಾಭ್ಯಾಸವಿಲ್ಲದೆ, ತನ್ನತನದ ಅರಿವಿಲ್ಲದೆ, ಸ್ವಂತ ವ್ಯಕ್ತಿತ್ವವಿಲ್ಲದೆ ಬದುಕುತ್ತಿದ್ದಳು. ಈ ಮಹಿಳೆಯರಲ್ಲಿ ಅರಿವನ್ನು ಉಂಟುಮಾಡುವುದು ಅವಶ್ಯವಾಗಿತ್ತು. ಇದು ಸುಲಭದ ಕೆಲಸವಾಗಿರಲಿಲ್ಲ. ವಸಾಹತುಶಾಹಿ ಆಡಳಿತದಿಂದ ಆಧುನಿಕ ಶಿಕ್ಷಣ ಜಾರಿಗೆ ಬಂತು. ಈ ಆಧುನಿಕ ಶಿಕ್ಷಣದ ಅವಕಾಶವನ್ನು ಮೇಲ್ವರ್ಗದ ಮಹಿಳೆಯರು ಪಡೆದುಕೊಂಡರು. ತಮಗೆ ದೊರೆತ ಜ್ಞಾನದಿಂದ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಕುರಿತು ಚಿಂತಿಸಿದರು. ಆದರೆ ಸಾಂಪ್ರದಾಯಿಕ ಮನೆತನದ ಹಿರಿಯರು ತಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ನೀಡುವುದು ಅಗೌರವದ ಸಂಗತಿಯೆಂದು ಭಾವಿಸಿದ್ದರು.

ಆಧುನಿಕ ಶಿಕ್ಷಣವನ್ನು ಪಡೆದ ಮೇಲ್ವರ್ಗದ ಪುರುಷರು ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಮತ್ತು ಅವರ ಸಮಸ್ಯೆಗಳ ಸುಧಾರಣೆಗಳಿಗಾಗಿ ಹೋರಾಟಗಳನ್ನು ಮಾಡಿದರು. ವೈದಿಕ ಮತ್ತು ಕುಲೀನಮನೆತನಗಳ ಸ್ತ್ರೀಯರು ಪ್ರಾರಂಭದಲ್ಲಿ ಆಧುನಿಕ ಶಿಕ್ಷಣದ ಅನುಕೂಲವನ್ನು ಪಡೆದುಕೊಂಡರು.

ಸ್ವಾತಂತ್ರ್ಯಪೂರ್ವದಲ್ಲಿ ಭಾರತವು ಅನೇಕ ಸಾಮಾಜಿಕ ಸಮಸ್ಯೆಗಳಿಂದ ಕೂಡಿತ್ತು. ವೈದ್ಯಕೀಯ ಲೋಕ ಅಪರಿಚಿತವಾಗಿತ್ತು. ಸ್ಥಳೀಯ ವೈದ್ಯಕೀಯ ಜ್ಞಾನ ಮೂಢನಂಬಿಕೆಗಳಿಂದ

ತುಂಬಿತ್ತು ಹಾಗೂ ಅದು ಪುರುಷಪ್ರಧಾನವಾಗಿತ್ತು. ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳಿಗೆ ವಿವಾಹ ಮಾಡಲಾಗುತ್ತಿತ್ತು. ಇದರಿಂದ ಹುಡುಗಿಯು ಮಾನಸಿಕವಾಗಿ, ದೈಹಿಕವಾಗಿ ಲೈಂಗಿಕ ಸಂಬಂಧಕ್ಕೆ ಸಿದ್ಧವಾಗಿರದೆ ದಾಂಪತ್ಯ ಸಂಬಂಧವು ಮಧುರ ಸಂಬಂಧವಾಗದೆ ಹಿಂಸಾತ್ಮಕ ಸಂಬಂಧವಾಗಿ ಪರಿಣಮಿಸಿ ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದರು. ಈ ರೀತಿಯ ಲೈಂಗಿಕ ಸಂಬಂಧದಿಂದಾಗಿ ಅನೇಕ ದೈಹಿಕ ಸಮಸ್ಯೆಗಳನ್ನು ಎದುರಿಸಿ ಲೈಂಗಿಕತೆ ಬಗ್ಗೆ ಜ್ಞಾನವಿಲ್ಲದೆ ಗರ್ಭಿಣಿಯಾಗುತ್ತಿದ್ದರು. ಇದರಿಂದ ಬಹುಪಾಲು ಹುಡುಗಿಯರು ಹೆರಿಗೆ ಸಂದರ್ಭದಲ್ಲಿ ಸಾವನ್ನಪ್ಪುತ್ತಿದ್ದರು. ಇದನ್ನು ವಸಾಹತುಶಾಹಿಗಳು ಗುರುತಿಸಿದರೂ ಅದನ್ನು ಕಾನೂನು ಆಗಿ ಮಾರ್ಪಡಿಸಲಿಲ್ಲ. ಭಾರತೀಯರಲ್ಲಿ ಲೈಂಗಿಕತೆ ಅತ್ಯಂತ ಖಾಸಗಿ ಎನ್ನಬಹುದಾದ ವಿಷಯಕ್ಕೆ ಸಂಬಂಧಿಸಿದ್ದರಿಂದ ಇದರ ಪರಿಣಾಮಗಳು ವಸಾಹತು ಆಡಳಿತದ ಮೇಲೆ ಬೀಳುತ್ತಿತ್ತು. ಆದ್ದರಿಂದ ವೈವಾಹಿಕ ಚೌಕಟ್ಟಿನೊಳಗೆ ಬಾಲಕಿಯರು ಎದುರಿಸುವ ಲೈಂಗಿಕ ಸಮಸ್ಯೆಯನ್ನು ಕಡಿಮೆ ಮಾಡಲು ಪರ್ಯಾಯ ದಾರಿಯನ್ನು ಕಂಡುಕೊಂಡರು. ಈ ಮೂಲಕ ಹುಡುಗಿಯ ವಿವಾಹದ ವಯಸ್ಸನ್ನು ಹೆಚ್ಚು ಮಾಡಿದರು. ಅವರು ನಿಗದಿಪಡಿಸಿದ ವಯಸ್ಸಿಗಿಂತ ಮೊದಲು ಮದುವೆ ಮಾಡಿದರೆ ಅದನ್ನು ಬಾಲ್ಯವಿವಾಹವೆಂದು ಕರೆಯಲಾಗುತ್ತಿತ್ತು. ಹುಡುಗಿಯ ನಿರ್ದಿಷ್ಟ ವಯಸ್ಸಿಗಿಂತ ಪೂರ್ವದಲ್ಲಿ ವಿವಾಹ ಮಾಡಿದರೆ ಅದನ್ನು ಅಪರಾಧವನ್ನಾಗಿ ಪರಿಗಣಿಸಲಾಗುತ್ತಿತ್ತು. ಬಾಲ್ಯವಿವಾಹ ನಿಷೇಧ ಕಾನೂನಿನ ಉದ್ದೇಶ ವೈವಾಹಿಕ ಚೌಕಟ್ಟಿನೊಳಗೆ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟುವುದಾಗಿತ್ತೇ ಹೊರತು ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟುವುದಾಗಿರಲಿಲ್ಲ.

ವಸಾಹತು ಆಡಳಿತ ಸಂದರ್ಭದಲ್ಲಿ ಸತಿನಿಷೇಧ, ಬಾಲ್ಯವಿವಾಹ ಮತ್ತು ವಿಧವಾವಿವಾಹಕ್ಕೆ ಸಂಬಂಧಿಸಿದಂತೆ ಕಾನೂನುಗಳು ಸ್ಥಾಪಿಸಲ್ಪಟ್ಟವು. ಆದರೆ ಅವು ಕೌಟುಂಬಿಕ ಸಮಸ್ಯೆಗಳು ಎಂದು ಪರಿಗಣಿತವಾಗಲಿಲ್ಲ. ಬದಲಾಗಿ ಸಾಮಾಜಿಕ ಸಮಸ್ಯೆಗಳೆಂದು ಗುರುತಿಸಲ್ಪಟ್ಟವು.

ಬ್ರಿಟಿಷರು ಬಾಲ್ಯವಿವಾಹ, ಸತಿಪದ್ಧತಿ, ವಿಧವಾಸಮಸ್ಯೆ ಮೊದಲಾದವುಗಳನ್ನು ಕೌಟುಂಬಿಕ ಸಮಸ್ಯೆಗಳೆಂದು ಗುರುತಿಸಿದ್ದಾರೆ. ಭಾರತದಲ್ಲಿ ಆಡಳಿತ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಕುಟುಂಬಗಳನ್ನು ಸಾಂಸ್ಕೃತಿಕ ಪ್ರತೀಕಗಳೆಂದು ಭಾರತೀಯರು ಭಾವಿಸಿದ್ದರು. ಹಾಗಾಗಿ ಬ್ರಿಟಿಷರು ಈ ಸಾಂಸ್ಕೃತಿಕ ಸ್ಥಾನಗಳಿಗೆ ಪ್ರವೇಶಿಸುವುದು ಸುಲಭವಾಗಿರಲಿಲ್ಲ. ಹಾಗಾಗಿ ವಿಧವಾಸಮಸ್ಯೆ, ಸತಿಸಮಸ್ಯೆಗಳನ್ನು ಕೌಟುಂಬಿಕ ನಂಟಿನಿಂದ ಬಿಡಿಸಿ ಸಾಮಾಜಿಕ ಸ್ತರಕ್ಕೆ ತರಲಾಯಿತು. ಮಹಿಳೆಯರ ಮೇಲಿನ ಕೌಟುಂಬಿಕ ಸಮಸ್ಯೆಗಳನ್ನು ಸಾಮಾಜಿಕ ನೆಲೆಗೆ ತರುವ ಮೂಲಕ ಬಹುದೊಡ್ಡ ಪಲ್ಲಟಗಳಿಗೆ ಒಳಗಾಯಿತು.

ಕುಟುಂಬವು ಸಮಾಜದ ಚಿಕ್ಕ ಘಟಕವಾಗಿದೆ. ಸಮಾಜ ರೂಪುಗೊಳ್ಳುವುದೇ ಕುಟುಂಬದ ಸ್ತರದಿಂದ. ಹೀಗಾಗಿ ಅದಕ್ಕೆ ಸಮಾಜದಷ್ಟೇ ವಿಸ್ತಾರವಾದ ನೆಲೆಯಿದೆ. ಕೌಟುಂಬಿಕ ಸಮಸ್ಯೆಗಳನ್ನು

ಕುಟುಂಬದ ನೆಲೆಗಟ್ಟಿನಲ್ಲೇ ನೋಡುವುದರಿಂದ 'ಹೆಣ್ಣುಮಕ್ಕಳ ಸುರಕ್ಷಾಕೇಂದ್ರ ಕುಟುಂಬ' ಎಂಬ ನಂಬಿಕೆಯೇ ದೂರ ಸರಿಯುತ್ತದೆ. ಆದರೆ ಭಾರತೀಯರು ಕುಟುಂಬಗಳನ್ನು ಸಾಂಸ್ಕೃತಿಕ ಕೇಂದ್ರಗಳೆಂದು ಗುರುತಿಸಿದ್ದಾರೆ. ಹೀಗಾಗಿಯೇ ಬ್ರಿಟಿಷರು ಕೌಟುಂಬಿಕ ಸಮಸ್ಯೆಗಳನ್ನು ಸಾಮಾಜಿಕ ನೆಲೆಗೆ ಕೊಂಡೊಯ್ದರು. ತಮ್ಮ ಆಡಳಿತದ ಅಸ್ತಿತ್ವಕ್ಕೆ ಧಕ್ಕೆ ಬರಬಾರದೆಂದು ಎಲ್ಲಾ ಕೌಟುಂಬಿಕ ಸಮಸ್ಯೆಗಳನ್ನು ಸಾಮಾಜಿಕ ನೆಲೆಗೆ ತಂದರು. ಬ್ರಿಟಿಷರು ಈ ತಂತ್ರದಿಂದಾಗಿ ಭಾರತದಲ್ಲಿ ಅನೇಕ ಸಮಾಜ ಸುಧಾರಕರು ಮಹಿಳಾ ಸಮಸ್ಯೆಗಳಿಗೆ ಸ್ಪಂದಿಸಲು ಸಾಧ್ಯವಾಯಿತು. ಹೀಗಾಗಿ ಭಾರತೀಯರು ಮತ್ತು ಬ್ರಿಟಿಷರು ಗುರುತಿಸಿದ ಮಹಿಳಾ ಸಮಸ್ಯೆಗಳನ್ನು ಒಪ್ಪಿಕೊಂಡರು. ಆದರೆ ಇದು ಸಮಾಜ ಸುಧಾರಣೆಯ ಸ್ಪರ್ಶವಿತ್ತೇ ವಿನಾ ಕುಟುಂಬದೊಳಗಡೆ ಮಹಿಳೆಯ ಮೇಲೆ ನಡೆಯುವ ಹಿಂಸೆಗಳನ್ನು ಕಡಿಮೆ ಮಾಡುವ ಇಲ್ಲವೇ ಸಂಪೂರ್ಣ ತೊಡೆದುಹಾಕುವ ಉದ್ದೇಶ ಇರಲಿಲ್ಲ. ಹೀಗೆ ಬಾಲ್ಯವಿವಾಹ ಹಾಗೂ ವಿಧವಾ ವಿವಾಹವನ್ನು ಪ್ರಮುಖ ಸಮಸ್ಯೆಯಾಗಿ ಎತ್ತಿಕೊಂಡು ಮದುವೆಯ ವಯಸ್ಸು ಹಾಗೂ ಪುನರ್ ವಿವಾಹಕ್ಕೆ ಅವಕಾಶ ಒದಗಿಸಿತು.

ಸಮಾಜ ಸುಧಾರಣೆಗಳಿಂದ ಸ್ತ್ರೀ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ದೊರೆಯಿತಾದರೂ ಅದರ ಮೂಲ ಉದ್ದೇಶ ಬೇರೆಯಿದೆ. ವಿದ್ಯಾವಂತ ಮಹಿಳೆಯರು ಉತ್ತಮ ತಾಯಂದಿರಾಗುವ ಅರ್ಹತೆಯನ್ನು ಶಿಕ್ಷಣದ ಮೂಲಕ ನೀಡುವುದಾಗಿತ್ತು. ಮಹಿಳೆಯರಿಗೆ ವಿದ್ಯಾಭ್ಯಾಸ ನೀಡುವುದೆಂದರೆ ಅವರನ್ನು ಮನೆಯ ಕೆಲಸಗಳಲ್ಲಿ ಹೆಚ್ಚು ಶ್ರದ್ಧೆ ಉಳ್ಳವರನ್ನಾಗಿ ತಯಾರು ಮಾಡುವುದಾಗಿತ್ತು. ಹೀಗೆ ಆಧುನಿಕ ಶಿಕ್ಷಣದ ಮೂಲಕ ಹೆಣ್ಣುಮಕ್ಕಳನ್ನು ನಿಷ್ಠಾವಂತ ಸತಿಯಾಗಿ, ಬಾಳ ಸಂಗಾತಿಯಾಗಿ ಬಾಳುವ ಅರಿವನ್ನು ಮೂಡಿಸುವ ಪ್ರಯತ್ನವಾಗಿತ್ತು. ಹೀಗೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಪಡೆದ ಸುಶಿಕ್ಷಿತ ಮಹಿಳೆಯರು ಸಹನೆ, ತಾಳ್ಮೆ, ತ್ಯಾಗದಂತಹ ಗುಣಗಳನ್ನು ಬೆಳೆಸಿಕೊಂಡು ನಿಷ್ಠಾವಂತ ಸತಿಯಾಗಿ, ತಾಯಿಯಾಗಿ, ಸದ್ಗೃಹಿಣಿಯಾಗಿ ತನ್ನನ್ನು ರೂಢಿಸಿಕೊಂಡು ಆದರ್ಶನಾರಿಯಾಗಿ ಬದುಕುವುದು, ಕುಟುಂಬದ ಮೌಲ್ಯಗಳನ್ನು ಎತ್ತಿಹಿಡಿಯುವುದು ಮುಖ್ಯ ಉದ್ದೇಶವಾಗಿತ್ತು.

ಭಾರತೀಯ ಮಹಿಳೆಯರಿಗೆ ಮದುವೆ ಜೀವನದ ಪ್ರಮುಖ ಗುರಿಯಾಗಿತ್ತು. ಹೀಗಾಗಿ ವಿವಾಹ ಸಂಬಂಧಗಳಿಂದ ಈ ಉದ್ದೇಶದ ಸಫಲತೆಗಾಗಿ ವಿವಾಹಪೂರ್ವದಲ್ಲಿ ತಾಯಿ ತನ್ನ ಮಗಳನ್ನು ಗಂಡನ ಮನೆಗೆ ಹೋಗಿ ಬದುಕನ್ನು ಸಾಗಿಸಲು ಬೇಕಾದ ಮೌಲ್ಯಗಳನ್ನು ತಿಳಿಸುವುದರ ಮೂಲಕ ಆಕೆಯನ್ನು ಸಿದ್ಧಗೊಳಿಸುತ್ತಿದ್ದಳು. ಇದರ ಸಲುವಾಗಿ ಹೆಣ್ಣುಮಕ್ಕಳು ಮನೆಯ ಅಡಿಗೆ ಕೆಲಸ, ಶುಚಿತ್ವ ಕೆಲಸಗಳಲ್ಲಿ ತೊಡಗುತ್ತಿದ್ದರು. ತಾವು ನಂಬಿರುವ ಮನೆಯವರ ಪೂಜಾ ವಿಧಾನಗಳನ್ನು ಮಹಿಳೆಯರು ತಂದೆಯ ಮನೆಯಲ್ಲಿಯೇ ಅಥವಾ ಹಿರಿಯ ಮಹಿಳೆಯರಿಂದ ಕಲಿಯುತ್ತಿದ್ದರು. ಹೆಣ್ಣುಮಕ್ಕಳು ತಂದೆಯ ಹಾಗೂ ಗಂಡನ

ಮನೆಯನ್ನು, ಆತನ ವಂಶವನ್ನು ಕಾಪಾಡಿಕೊಂಡು ಬರುವುದು ಇದರ ಮುಖ್ಯ ಉದ್ದೇಶವಾಗಿತ್ತು. ಹೆಣ್ಣು ವಿವಾಹವಾಗಿ ಗಂಡನ ಮನೆಗೆ ಬಂದರೆ ಅಲ್ಲಿ ಅವಳಿಗೆ ಯಾವುದೇ ಸ್ಥಾನಮಾನ ಗಳಿರುವುದಿಲ್ಲ. ಅವಳು ತಾಯಿಯಾದಾಗ ಮಾತ್ರ ಆ ಮನೆಯಲ್ಲಿ ಒಂದು ಸ್ಥಾನವನ್ನು ಪಡೆದುಕೊಳ್ಳುತ್ತಾಳೆ. ಅದರಲ್ಲಿ ಗಂಡುಮಗುವಿಗೆ ತಾಯಿಯಾದಾರೆ ಮಾತ್ರ ಅವಳು ತನ್ನ ವ್ಯಕ್ತಿತ್ವವನ್ನು ಗಂಡನ ಕುಟುಂಬದಲ್ಲಿ ಹಾಗೂ ಆಯಾ ಸಮಾಜದಲ್ಲಿ ಪಡೆದುಕೊಳ್ಳುತ್ತಾಳೆ. ಆದರೆ ಹೆಣ್ಣುಮಗುವಿನ ತಾಯಿಯು ಕುಟುಂಬ ಹಾಗೂ ಸಮಾಜದ ನಿಂದನೆಗೆ ಗುರಿಯಾಗುತ್ತಾಳೆ. ಹೀಗೆ ಹುಡುಗಿಯರು ತಮ್ಮ ಬದುಕನ್ನು ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಮಾತ್ರ ಗುರುತಿಸಿಕೊಳ್ಳುತ್ತಿದ್ದರು. ಈ ಮೂಲಕ ಮನೆಯ ಕೆಲಸಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿ ಆ ಮನೆಯ ಗುಲಾಮಳಂತೆ ಬದುಕನ್ನು ನಡೆಸುತ್ತಿದ್ದಳು.

ಮೇಲಿನ ಈ ವಿವರಗಳು ಹೆಚ್ಚಾಗಿ ಸಮಾಜಶಾಸ್ತ್ರೀಯ ನೆಲೆಯನ್ನು ಹೊಂದಿವೆ ಎಂಬುದು ನಿಜ. ಆದರೂ ಕನ್ನಡ ಸಾಹಿತ್ಯ ಅಧ್ಯಯನಗಳು ಶುದ್ಧ ಸಾಹಿತ್ಯಕ ಅಧ್ಯಯನಗಳು ಆರಂಭದಲ್ಲಿ ಕಾಣಿಸಿಕೊಂಡದ್ದು ಬಿಟ್ಟರೆ, ಇತರ ಶಾಸ್ತ್ರಗಳ ಜತೆಗೆ ಕನ್ನಡ ಸಾಹಿತ್ಯ ಅಧ್ಯಯನ ನಡೆದಿದ್ದರಿಂದ ಅಂತರ್‌ಶಾಸ್ತ್ರೀಯ ಮಾದರಿಗಳು ಕಾಣಿಸಿಕೊಂಡಿವೆ. ಬ್ರಿಟಿಶ್ ವಿದ್ವಾಂಸರು ವಸಾಹತು ಕಾಲದಲ್ಲಿ ಕನ್ನಡ ಸಾಹಿತ್ಯ ಕುರಿತು ನಡೆಸಿದ ಅಧ್ಯಯನಗಳು ಅಂತರ್‌ಶಾಸ್ತ್ರೀಯವೇ ಆಗಿವೆ. ಪುರಾತತ್ವ ಅಧ್ಯಯನಗಳು ಕನ್ನಡದ ಆಕರಗಳನ್ನು ಬಳಸಿದವು. ನಂತರ ಇತಿಹಾಸದ ಆಕರಗಳು ಅದರಲ್ಲಿ ಸೇರಿಕೊಂಡವು. ಕನ್ನಡ ಸಂಶೋಧನಗಳು ಚರಿತ್ರೆ, ಸಮಾಜ ವಿಜ್ಞಾನಗಳನ್ನು ಒಳಗು ಮಾಡಿಕೊಂಡಿತು. ಸಾಂಸ್ಕೃತಿಕ ಅಧ್ಯಯನಗಳಂತೂ ಸಮಾಜ, ರಾಜಕೀಯ, ಚರಿತ್ರೆಯ ಆಕರಗಳೊಂದಿಗೆ ಮುಖಾಮುಖಿಯಾಗಿ 'ಸಾಂಸ್ಕೃತಿಕ ಅಧ್ಯಯನ' ಒಂದು ಶಿಸ್ತಾಗಿ, ಮಾದರಿಯಾಗಿ ಬೆಳೆದಿದೆ. ಈ ದೃಷ್ಟಿಯಿಂದ ಸ್ತ್ರೀ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುತ್ತಿರುವಾಗ ಸಮಾಜಶಾಸ್ತ್ರದ ಸ್ತ್ರೀ ಮತ್ತು ಮಹಿಳೆಯನ್ನು ಕುರಿತು ಗ್ರಹಿಕೆಗಳನ್ನು ಅಧ್ಯಯನದ ದೃಷ್ಟಿಯಿಂದ ಅವಲೋಕಿಸಲಾಯಿತು.

ಆದರೂ ಸಮಾಜ ಶಾಸ್ತ್ರವಾಗಲಿ, ಇತರ ಶಾಸ್ತ್ರವಾಗಲಿ ಅವುಗಳದೇ ಅಧ್ಯಯನ ಮಾದರಿ ಇರುವುದರಿಂದ, ಅವುಗಳ ಸೈದ್ಧಾಂತಿಕ ನೆಲೆಯಲ್ಲಿ ಅಧ್ಯಯನ ಮಾಡಿದ ಫಲಿತಗಳನ್ನು ಕನ್ನಡ ಸ್ತ್ರೀ ಸಾಹಿತ್ಯ ಈ ಅಧ್ಯಯನದಲ್ಲಿ ಹೆಚ್ಚು ಅವಲೋಕಿಸಿದ್ದರೂ ಸಾಹಿತ್ಯ ಅಧ್ಯಯನಗಳ ವಿಧಾನವೇ ಭಿನ್ನವಾಗಿರುತ್ತದೆ. ಅದರಲ್ಲೂ ಸ್ತ್ರೀಯರ ಸೃಜನಶೀಲ ಸಾಹಿತ್ಯವು ತನ್ನದೇ ವಿಶಿಷ್ಟತೆಯನ್ನು ಹೊಂದಿರುತ್ತದೆ. ಮಹಿಳೆ ಮತ್ತು ಕುಟುಂಬ ಪರಿಕಲ್ಪನೆಯನ್ನು ಇತರ ಶಾಸ್ತ್ರಗಳು ಅದರಲ್ಲೂ ಸಮಾಜಶಾಸ್ತ್ರವು ಅಂಕಿ ಅಂಶಗಳ ವಿಶ್ಲೇಷಣೆಯಿಂದ ಗ್ರಹಿಸುತ್ತದೆ. ಸಾಹಿತ್ಯ ಭಿನ್ನವಾಗಿ ಗ್ರಹಿಸುತ್ತದೆ. ಮಹಿಳೆಯರೇ ಕತೆ ಕಾದಂಬರಿಗಳನ್ನು ಬರೆಯುವಾಗ ತನ್ನದೇ ಎಂಬಂತೆ ಅನುಭವಗಳನ್ನು ಕಥನ ಮಾದರಿಯಲ್ಲಿ ನಿರೂಪಿಸುತ್ತಾರೆ. ಸಮಾಜದ

ಮೂಲೆ ಮೂಲೆಗಳಲ್ಲಿ ಮಹಿಳೆ ಬದುಕುತ್ತಿರುವ ರೀತಿಯನ್ನು ಮಹಿಳಾ ಕಥನಕಾರರು ಗ್ರಹಿಸುವುದು ಬೇರೆಯೇ ಆಗಿರುತ್ತದೆ. ಮಹಿಳೆ, ಪುರುಷ ವ್ಯಾಖ್ಯಾನಗಳು ಯಾವುದೋ ಶಾಸ್ತ್ರೀಯ ನೆಲೆಯಿಂದ ರೂಪಗೊಂಡಿರುತ್ತದೆ. ಸಾಹಿತ್ಯ ಈ ಶಾಸ್ತ್ರೀಯತೆಯನ್ನು ಒಡೆದು ನೋಡುವ ಶಕ್ತಿಯನ್ನು ಹೊಂದಿರುತ್ತದೆ. ಸಮುದಾಯಗಳ ಬದುಕು ಯಾವುದೇ ಸ್ಥಿದ್ಧಾಂತಿಕತೆಗೆ ಅನುಗುಣವಾಗಿ ಇರುವುದಿಲ್ಲ. ನಿತ್ಯ ಪರಿವರ್ತನಶೀಲವಾಗಿರುವ ಬದುಕನ್ನು ಇತರ ವಿಜ್ಞಾನಿಗಳು ಗ್ರಹಿಸುವುದಕ್ಕಿಂತ ಹೆಚ್ಚು ಸೂಕ್ಷ್ಮವಾಗಿ ಸಾಹಿತ್ಯ ಗ್ರಹಿಸುತ್ತದೆ.

'ಮಹಿಳಾ ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬದ ವಿನ್ಯಾಸಗಳನ್ನು' ಗುರುತಿಸುವ ಈ ಅಧ್ಯಯನಕ್ಕೆ ಸುಮಾರು ನೂರು ವರ್ಷದ ಅವಧಿಯಲ್ಲಿ ಮಹಿಳೆಯರು ಬರೆದಿರುವ ಕಥಾ ಸಾಹಿತ್ಯವನ್ನು ಪರಿಗಣಿಸಲಾಗಿದೆ. ವಿವಿಧ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಮಹಿಳಾ ಕಥನಕಾರರು ತಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಮಾಜವನ್ನು ನೋಡಿದ, ಗ್ರಹಿಸಿದ ಕ್ರಮಗಳಿಂದ ಅಪಾರ ವಸ್ತು ವೈವಿಧ್ಯವನ್ನು ಕನ್ನಡ ಕಥಾಸಾಹಿತ್ಯಕ್ಕೆ ಲಭ್ಯವಾಗಿದೆ. ಪಲ್ಲಟಗಳಿಂದ ಸಮಾಜ ಬದಲಾಗುತ್ತಲೇ ಇರುತ್ತದೆ. ಬದಲಾವಣೆಗಳು ಕಥಾಸಾಹಿತ್ಯದಲ್ಲಿ ಕಾಣಿಸಿಕೊಂಡಿದೆ. ಆರಂಭದಲ್ಲಿ ವೈದಿಕ ಕತೆಗಾರ್ತಿಯರು ಆಧುನಿಕ ಶಿಕ್ಷಣ ಪಡೆದು, ವಸಾಹತು ಆಳ್ವಿಕೆಯಿಂದ ನಡೆದ ಬದಲಾವಣೆಗಳು ಸಾಂಪ್ರದಾಯಿಕತೆಯನ್ನು ಪ್ರಶ್ನಿಸುತ್ತ ಹೊಸ ಸಾಧ್ಯತೆಗಳನ್ನು ಮುಂದಿಟ್ಟಿತು. ಇದನ್ನು ಸರಿಯಾಗಿಯೇ ಅರಿತ ಲೇಖಕರಿಯರು ತಮ್ಮ ಮಿತಿಯೊಳಗೆ ಕತೆಗಳನ್ನು ಕಟ್ಟಿದ್ದಾರೆ. ಇನ್ನು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳಾ ಅಭಿವ್ಯಕ್ತಿಗೆ 'ನವ್ಯ ಸಾಹಿತ್ಯ ಚಳುವಳಿ' ಪೂರಕವಾಗಿರಲಿಲ್ಲ. ಹೊಸ ತಾತ್ವಿಕ ನಿಲುವುಗಳನ್ನು ಅಭಿವ್ಯಕ್ತಿಸುವುದಕ್ಕೆ ಸಂಪ್ರದಾಯ ಮತ್ತು ಹೆಣ್ಣಿಗಿರುವ ನಿಯಂತ್ರಣದಿಂದ ಸಾಧ್ಯವಾಗಿಲ್ಲ. ಆದರೂ ಪ್ರಯತ್ನಗಳು ನಡೆದಿವೆ. ಇನ್ನು ಎಪ್ಪತ್ತರ ದಶಕದಿಂದ ಮಹಿಳೆಯರು ಹೆಚ್ಚು ಹೆಚ್ಚು ಸಾಹಿತ್ಯ ವಲಯಕ್ಕೆ ಬಂದರು. ಈ ಮಹಿಳೆಯರು. ಕೆಳಸ್ತರದವರು ಆಗಿದ್ದರಿಂದ ಅವರ ಬದುಕಿನ ಸಂಸ್ಕೃತಿ ಕನ್ನಡಕ್ಕೆ ಹೊಸ ಸಂವೇದನೆಯನ್ನು ತಂದವು ದಲಿತರು, ಮುಸ್ಲಿಮರು ಕತೆಗಳನ್ನು ಬರೆಯಲಾರಂಭಿಸಿ ಅದುವರೆಗೆ ಮರೆಯಾಗಿದ್ದ ಸಂವೇದನೆಗಳು ಸಾಹಿತ್ಯದಲ್ಲಿ ಕಾಣಿಸಿದವು. ಇದರಿಂದ ಮಹಿಳಾ ಕಥಾಸಾಹಿತ್ಯ ಬಲಗೊಂಡಿತು. ಜೀವನ ವೈವಿಧ್ಯತೆ ಕಾಣಿಸಿತು.

೯೦ರ ದಶಕದಿಂದ ಸಾಹಿತ್ಯ ಚಳುವಳಿಗಳೆಲ್ಲ ಮಾಸಿದ ಕಾಲ. ಬರಹಗಾರರಿಗೆ ಸಾಹಿತ್ಯ ಚಳುವಳಿಗಳು, ಅವುಗಳ ಹೊಸ ಚಿಂತನೆಗಳು ರಚನೆಗೆ ಬೆನ್ನೆಲುಬಾಗಿರುತ್ತವೆ. ಚಳುವಳಿಗಳು ಇರುತ್ತವೆ. ಆದರೆ 'ಸಾಹಿತ್ಯ ಚಳುವಳಿ' ಇಲ್ಲ ಎಂಬುದನ್ನು ಗಮನಿಸಬೇಕು. ಆದರೂ ತಮ್ಮ ತನದಿಂದ, ತಮ್ಮ ಪರಿಸರದ ಅನುಭವಗಳಿಂದ ಪ್ರೇರಿತರಾಗಿ ಸಾಹಿತ್ಯ ರಚಿಸಿದ ಹೆಗ್ಗಳಿಕೆ ಮಹಿಳಾ ಕತೆಗಾರರಿಗಿದೆ. ಇದನ್ನು ಮುಂದೆ ಚರ್ಚಿಸಲಾಗುವುದು. ಮಹಿಳಾ ಬರಹಗಾರರು ಸಾಹಿತ್ಯ ಚಳುವಳಿಯಿಂದಲೇ ಪ್ರೇರಣೆ ಪಡೆದು ಸಾಹಿತ್ಯ ರಚಿಸಿಲ್ಲ. ಅನೇಕರು ಚಳುವಳಿಯ

ಕಾಲದಲ್ಲಿದ್ದರೂ ಅವರಿಗೆ ಅವರದೇ ಅನುಭವ ಲೋಕವಿದ್ದು ಅದನ್ನೇ ಅಭಿವ್ಯಕ್ತಿಸಿದ್ದನ್ನು ನೋಡುತ್ತೇವೆ. ಇಂಥವರಿಂದಲೂ ಮೌಖಿಕ ಕತೆಗಳು ಕನ್ನಡ ಕಥಾ ಸಾಹಿತ್ಯಕ್ಕೆ ಲಭ್ಯವಾಗಿದೆ. ಇದನ್ನು ಸಂದರ್ಭಾನುಸಾರ ಚರ್ಚಿಸಲಾಗುವುದು.

ಅಡಿ ಟಿಪ್ಪಣಿ

೧. ಫ್ರೆಡರಿಕ್ ಎಂಗಲ್ಸ್, ಗೋಪಾಲಕೃಷ್ಣರಾವ್ ಕೆ.ಎಲ್.(ಅನು), ಕುಟುಂಬ, ಖಾಸಗಿ ಹಾಗೂ ರಾಜ್ಯ ಇವುಗಳ ಉಗಮ, ೧೯೮೦, ಪುಟ-೮೨.

ಅಧ್ಯಾಯ ಮೂರು

ಸ್ವಾತಂತ್ರ್ಯಪೂರ್ವ ಮಹಿಳಾ ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬದ ಸ್ವರೂಪ

೩.೧. ಪ್ರವೇಶಿಕೆ

೩.೨ ಕೊಡಗಿನ ಗೌರಮ್ಮ

೩.೩. ಸರಸ್ವತಿಬಾಯಿ ರಾಜವಾಡೆ

೩.೪. ಶ್ಯಾಮಲಾದೇವಿ ಬೆಳಗಾಂವಕರ

೩.೫. ಸರಸ್ವತಿದೇವಿ ಗೌಡರ

೩.೬. ಜಯಲಕ್ಷ್ಮಿ ಆರ್. ಶ್ರೀನಿವಾಸನ್

೩.೭. ಸಾವಿತ್ರಮ್ಮ ಎಚ್.ವಿ.

೩.೮. ವಾಣಿ

೩.೯. ತ್ರಿವೇಣಿ

೩.೧೦. ಕಾತ್ಯಾಯಿನಿ

೩.೧೧. ಸರಿತಾ ಕುಸುಮಾಕರ ದೇಸಾಯಿ

೩.೧೨. ಗೀತಾ ಕುಲಕರ್ಣಿ

೩.೧೩. ಶಾಂತಾದೇವಿ ಕಣವಿ

೩.೧೪. ಅನುಪಮಾ ನಿರಂಜನ

ಅಧ್ಯಾಯ ಮೂರು

ಸ್ವಾತಂತ್ರ್ಯಪೂರ್ವ ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬದ ಸ್ವರೂಪ

೩.೧ ಪ್ರವೇಶಿಕೆ

ಬ್ರಿಟಿಶ್ ಆಳ್ವಿಕೆ ಆರಂಭವಾಗಿ ಅವರ ಆಧುನಿಕತೆ ಸಮಾಜದಲ್ಲಿ ಮೆಲ್ಲಗೆ ಆವರಿಸಿಕೊಂಡು ಬೆಳೆಯುತ್ತ ಬದಲಾವಣೆಗೆ ಕಾರಣವಾಯಿತು. ಸಾಂಪ್ರದಾಯಿಕ ಸಮಾಜ ಸಡಿಲವಾಗುತ್ತ ನಡೆಯಿತು. ಬದಲಾವಣೆಗೆ ಕಾರಣವಾದ ಸಾರಿಗೆ ಸಂಪರ್ಕ, ಶಾಲೆ, ಆಸ್ಪತ್ರೆ, ಹೋಟೆಲ್, ಮತಾಂತರಗಳು ಮುಖ್ಯವಾಗಿವೆ. ಸಾಂಪ್ರದಾಯಿಕ ಶಿಕ್ಷಣದಿಂದ ಆಧುನಿಕ ಶಿಕ್ಷಣದ ಕಡೆ ಸಮಾಜ ನಿಧಾನವಾಗಿ ವಾಲಿತು. ಹೊಸ ಶಿಕ್ಷಣ ಪದ್ಧತಿ ಅದರ ಕಲಿಕೆಗೆ ಮಾಧ್ಯಮವಾದ ಇಂಗ್ಲಿಶ್ ಭಾಷೆಯನ್ನು ಕಲಿಯತೊಡಗಿದರು. ಸಮಾಜದ ಮೇಲ್ವರ್ಗವೆಂದು ಪರಿಗಣಿತವಾದ ವೈದಿಕರು ಮೊದಲಿಗೆ ಹೊಸ ಶಿಕ್ಷಣವನ್ನು ಹೊಸ ಇಂಗ್ಲಿಶ್ ಭಾಷೆಯಲ್ಲಿ ಕಲಿಯಲಾರಂಭಿಸಿದರು. ಮಹಿಳೆಯರಿಗೆ ಕಲಿಯಲು ಅವಕಾಶಗಳು ಲಭಿಸತೊಡಗಿದವು.

ಬ್ರಿಟಿಶರು ತಮ್ಮ ಅಧೀನದಲ್ಲಿದ್ದ ನಮ್ಮ ಸಮಾಜವನ್ನು ಗ್ರಹಿಸುತ್ತ ಇಲ್ಲಿನ ಜಾತಿ ಪದ್ಧತಿಯನ್ನು ಸಡಿಲುಗೊಳಿಸಲು ಪ್ರಯತ್ನಿಸಿದರು. ಸಮಾಜದಲ್ಲಿ ಬೇರುಬಿಟ್ಟಿದ್ದ ಕಂದಾಚಾರ, ಮೂಢನಂಬಿಕೆಗಳು, ಅನಿಷ್ಟ ಆಚರಣೆಗಳು ಇವುಗಳನ್ನು ಸಡಿಲಗೊಳಿಸಲು ಸುಧಾರಣೆ ತರಲು ತೀವ್ರ ಪ್ರಯತ್ನ ನಡೆಸಿದರು. ಸುಧಾರಣವಾದವು ಒಂದು ಚಳುವಳಿಯಾಗಿ ಸಮಾಜದಲ್ಲಿ ಜಾಗೃತಿಯನ್ನು ಮೂಡಿಸಿತು. ಇಂಗ್ಲಿಶ್ ಕಲಿತ ವಿದ್ಯಾವಂತರು ಬ್ರಿಟಿಶರ ಅನೇಕ ಸುಧಾರಣೆಗಳಿಗೆ ಬೆಂಬಲವಿತ್ತರು. ಭಾರತೀಯ ಸಮಾಜ ಸುಧಾರಕರಾಗಿ ಹೆಸರು ಮಾಡಿದ ರಾಜಾರಾಮ್ ಮೋಹನರಾಯ್, ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ಕೇಶವಚಂದ್ರ ಸೇನ್, ಮಹಾದೇವ ರಾನಡೆ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅನಿಬೆಸೆಂಟ್ ಮುಂತಾದವರು. ಇವರು ತಮಗೆ ಸರಿಕಂಡಂತೆ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡರು. ಬ್ರಹ್ಮಸಮಾಜ, ಆರ್ಯಸಮಾಜ, ಪ್ರಾರ್ಥನ ಸಮಾಜ, ರಾಮಕೃಷ್ಣ ಮಿಷನ್, ಥಿಯಾಸಾಫಿಕಲ್ ಸೊಸೈಟಿ ಮುಂತಾದವು ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಸಮಾಜದಲ್ಲಿ ಸುಧಾರಣೆ ತರಲೆಂದೇ ಈ ರಾಷ್ಟ್ರನಾಯಕರು ಬ್ರಿಟಿಶರ ವಿಚಾರಗಳಿಗೆ ಮನ್ನಣೆ ನೀಡಿದರು. ಬ್ರಿಟಿಶರು ಭಾರತೀಯ ಸಮಾಜದಲ್ಲಿ ಭೀಕರವಾಗಿ ಕಾಣುತ್ತಿದ್ದ ಸತಿಪದ್ಧತಿ, ಬಾಲ್ಯವಿವಾಹ ಪದ್ಧತಿ,

ವಿಧವಾಪದ್ಧತಿಗಳನ್ನು ವಿರೋಧಿಸುವ ಮೂಲಕ ಈ ಪದ್ಧತಿಗಳನ್ನು ನಿರ್ಮೂಲನ ಮಾಡಲು ಪ್ರಯತ್ನಿಸಿದರು.

ಈ ಕೆಟ್ಟ ಪದ್ಧತಿಗಳನ್ನು ನಿರ್ಮೂಲನ ಮಾಡಲು ಆಧುನಿಕ ಶಿಕ್ಷಣ ಸಹಾಯಕವಾದೀತೆಂದು ವಿಶ್ವಾಸವಿರಿಸಿದರು. ಕಾನೂನುಗಳ ಮೂಲಕ ನಿಷೇಧಿಸಲು ಪ್ರಯತ್ನಿಸಿದರು. ಮಹಿಳೆಯರಿಗೆ ಅಕ್ಷರ ವಿದ್ಯೆ ಕಲಿಯಲು ಅವಕಾಶ ನೀಡಿದರು. ಜಾತಿಪದ್ಧತಿಯಂತೂ ಸಡಿಲವಾಗುವ ಲಕ್ಷಣಗಳೇ ಇರಲಿಲ್ಲ. ಆದರೂ ಕೆಳಸಮುದಾಯಗಳಲ್ಲಿ ಜಾಗೃತಿ ಮೂಡಿಸಲು ಯತ್ನಿಸಿದರು. ಅಂತರ್‌ಜಾತಿ ವಿವಾಹ, ಮತಾಂತರದ ಅವಕಾಶಗಳನ್ನು ಜಾರಿಗೆ ತರಲು ತೀವ್ರ ಪ್ರಯತ್ನ ನಡೆಸಿದರು. ಶಿಕ್ಷಣದ ಮೂಲಕ ಒಂದುಕಡೆ ಜಾಗೃತಿಯನ್ನು ತರಲು ಪ್ರಯತ್ನಿಸಿದಂತೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕವೂ ಪ್ರಯತ್ನಗಳು ನಡೆದವು. ಬ್ರಿಟಿಶರ ಈ ಪ್ರಯತ್ನಕ್ಕೆ ಭಾರತೀಯ ಸಾಂಸ್ಕೃತಿಕ ನಾಯಕರೂ ತಮ್ಮ ತಮ್ಮ ವಲಯಗಳಲ್ಲಿ ಹೊರಾಟವನ್ನೇ ನಡೆಸಿದರು.

ಆದರೆ ಬಹಳ ಮುಖ್ಯವಾದ ತೊಡಕೆಂದರೆ, ಬ್ರಿಟಿಶ್ ಆಧುನಿಕ ಶಿಕ್ಷಣವನ್ನು ಮೊದಲು ಕಲಿಯಲು ಅವಕಾಶ ಪಡೆದವರೇ ಮೇಲ್ವರ್ಗದ ವೈದಿಕರು, ಪುರುಷರು, ಮಹಿಳೆಯರೂ ಇಂಗ್ಲಿಶ್ ಶಿಕ್ಷಣ ಪಡೆದರಷ್ಟೆ ಬಾಲ್ಯವಿವಾಹ, ವಿಧವಾ ಪದ್ಧತಿಗಳು ವೈದಿಕರಲ್ಲಿಯೇ ಜಾರಿಯಲ್ಲಿದ್ದರು ವೈದಿಕರಲ್ಲಿ ೧೦ರಿಂದ ೧೨ವರ್ಷದ ಅವಧಿಯಲ್ಲಿ ರುತುಮತಿಯಾಗುವ ಸ್ತ್ರೀಯರು, ಅದಕ್ಕಿಂತ ಮೊದಲೇ ಮದುವೆ ಆಗಿರಬೇಕೆಂಬ ಪದ್ಧತಿ ವೈದಿಕರಲ್ಲಿಯೇ ಬೇರುಬಿಟ್ಟಿತ್ತು. ಈ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗುವ ಮಹಿಳೆಯರು ಆಕಸ್ಮಿಕ ಗಂಡನನ್ನು ಕಳೆದುಕೊಂಡರೆ, ಅಲ್ಲಿಂದ ಜೀವನವಿಡಿ ಏಕಾಂಗಿಯಾಗಿ ಜೀವಿಸಬೇಕು. ಅದು ವೈದಿಕ ಕರ್ಮಾಚರಣೆಗಳನ್ನು ಪಾಲಿಸುತ್ತ ಮರುಮದುವೆಯ ಪ್ರಶ್ನೆಯೇ ಇರಲಿಲ್ಲ. ಆಧುನಿಕ ಶಿಕ್ಷಣವನ್ನು ಕಲಿತ ವೈದಿಕರೇ ಈ ಪದ್ಧತಿಗಳನ್ನು ಕೈಬಿಡಲು ಸಿದ್ಧರಿರಲಿಲ್ಲ. ಸುಧಾರಣವಾದಿ ಚಳುವಳಿಗೆ ಬೆಂಬಲ ಸಿಗುವುದು ಹೇಗೆ? ಯಾರಿಂದ? ಎಂಬ ಪ್ರಶ್ನೆ ಹುಟ್ಟುತ್ತದೆ. ಇದನ್ನು ಕಟ್ಟುನಿಟ್ಟಿನ ಕಾನೂನು ಮೂಲಕ ಜಾರಿಗೊಳಿಸುವ ಬಗ್ಗೆಯೇ ಅನೇಕರಿಗೆ ವಿರೋಧವಿತ್ತು. ಕಾನೂನಿನ ಮೂಲಕ ಬಾಲ್ಯವಿವಾಹವನ್ನು ನಿಲ್ಲಿಸುವುದು, ಸತಿಪದ್ಧತಿಯನ್ನು ರದ್ದುಗೊಳಿಸುವುದು, ವಿಧವಾ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದನ್ನು ಸಾಂಸ್ಕೃತಿಕ ನಾಯಕರಿಗೇ ಮನಸ್ಸಿರಲಿಲ್ಲ. ಬದಲಾಗಿ ಮನಸ್ಸನ್ನು ಪರಿವರ್ತಿಸುವ ಮೂಲಕ ಈ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಬೇಕೆಂಬ ಇಚ್ಛೆ ಉಳ್ಳವರಾಗಿದ್ದರು. ಇದರಿಂದಾಗಿ ಈ ಸಮಸ್ಯೆಗಳು ಇನ್ನೂ ಜೀವಂತವಾಗಿ ಮುಂದುವರಿದಿವೆ.

ಮೊದಲು ತಲೆಮಾರಿನ ಲೇಖಕರಿಯರೇ ಈ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡಿದ್ದು ಆಕಸ್ಮಿಕವೆನ್ನಬೇಕು. ಕನ್ನಡದಲ್ಲಿ ಬ್ರಿಟಿಶರ ಆಳ್ವಿಕೆಯ ಕಾಲದಲ್ಲಿಯೇ ಸಾಹಿತ್ಯ ರಚನೆಗೆ ಪ್ರೇರಣೆಗಳು ಲಭಿಸಿದವು. ಬಂಗಾಳದಲ್ಲಿ ಸಾಹಿತ್ಯ ಚಟುವಟಿಕೆಗಳು ಬೇಗ ಶುರುವಾದವಗು. ಬಂಕಿಮಚಂದ್ರ ಚಟರ್ಜಿ, ಶರಶ್ಚಂದ್ರ, ಪ್ರೇಮಚಂದ್, ರವೀಂದ್ರನಾಥ್ ಟಾಗೂರ್

ಮುಂಚೂಣಿಯಲ್ಲಿದ್ದರು. ಭಾರತೀಯರ ಪುನರುಜ್ಜೀವನದ ವಿನ್ಯಾಸಗಳು ರೂಪಕೊಂಡದ್ದು ಈ ಕಾಲಾವಧಿಯಲ್ಲಿ. ಕರ್ನಾಟಕದಲ್ಲಿ ಬಂಗಾಳ ನಂತರ ಮರಾಠಿ ನುಡಿ ಸಾಹಿತ್ಯವು ಅನುವಾದ ಮೂಲಕ ನೆಲೆಸಿತು. ಕಾದಂಬರಿ ಸಾಹಿತ್ಯ, ಕಥಾಸಾಹಿತ್ಯವು ಅನುವಾದದ ಮೂಲಕ ಓದುಗರಿಗೆ ಸಿಕ್ಕಿತು. ಇಲ್ಲಿಯ ಬರಹಗಾರರಿಗೆ ಆಧುನಿಕ ಶಿಕ್ಷಣ ಸಿಕ್ಕಿತು. ಇಂಗ್ಲಿಶ್ ಸಾಹಿತ್ಯದ ಪರಿಚಯವೂ ಆಯಿತು. ಜತೆಗೆ ನೆರೆರಾಜ್ಯಗಳಲ್ಲಿ ನಡೆಯುವ ಸಾಹಿತ್ಯ ರಚನೆಗಳು ಅನುವಾದದಲ್ಲಿ ಸಿಕ್ಕು ಇಲ್ಲಿಯೂ ಆರಂಭವಾಯಿತು. ಮುಖ್ಯವಾಗಿ ವಸಾಹತು ಕಾಲದಲ್ಲಿ ಪತ್ರಿಕೆಗಳು ಬಹು ಪರಿಣಾಮಕಾರಿಯಾಗಿ ಜನಮಾನಸದಲ್ಲಿ ನೆಲೆಸಿದವು. ವಿದ್ಯಾವಂತರ ಸಂಖ್ಯೆ ಕಡಿಮೆಯಿದ್ದರೂ ಪತ್ರಿಕೆಗಳು ಹುಟ್ಟಿಕೊಂಡವು. ಪತ್ರಿಕಾ ಬರಹಗಳು ವಿಶೇಷ ಮನ್ನಣೆಗಳಿಸಿದವು. ವಿದ್ಯೆಕಲಿತ ಮೊದಲ ತಲೆಮಾರಿನ ಮಹಿಳೆಯರು ಅದರಲ್ಲೂ ಬರಹದಲ್ಲಿ ಆಸಕ್ತಿ ಮೂಡಿಸಿಕೊಂಡಿದ್ದವರು ಪತ್ರಿಕೆಗಳಿಗೆ ಬರೆಯುವುದರ ಮೂಲಕ ತಮ್ಮ ಹೆಸರನ್ನು ಸಾಹಿತ್ಯ ವಲಯದಲ್ಲಿ ಪರಿಚಯಿಸಿದರು. ಆರಂಭ ಕಾಲದಿಂದಲೂ ವಿದ್ಯಾವಂತ ಮಹಿಳೆಯರು ಪತ್ರಿಕೆಗಳಲ್ಲಿ ಬರುವ ಧಾರವಾಹಿಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಆರ್. ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಸರಸ್ವತಿ ಗೌಡರ್, ಎಚ್.ವಿ. ಸಾವಿತ್ರಮ್ಮ, ಶ್ಯಾಮಲಾ ಮುಂತಾದ ಮಹಿಳಾ ಬರಹಗಾರರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ತಮ್ಮ ಸಾಹಿತ್ಯವನ್ನು ರಚಿಸಿದರು 'ಕಥೆಗಾರ', 'ಕಥಾಂಜಲಿ' ಎಂಬ ಪತ್ರಿಕೆಗಳಲ್ಲಿ ಮಹಿಳೆಯರ ಕತೆಗಳು ಪ್ರಕಟವಾಗುತ್ತಿದ್ದವು. ಪತ್ರಿಕೆಗಳನ್ನು ಹೊರಡಿಸುವುದು, ಪತ್ರಿಕಾ ಬರೆಹಗಳನ್ನು ಬರೆಯುವುದರ ಮೂಲಕ ತಮ್ಮ ವಿಚಾರಗಳನ್ನು ಬಿತ್ತರಿಸಿದರು. ಸುಧಾರಣವಾದಿ ನಿಲುವುಗಳು ಈ ಮಹಿಳೆಯರ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿದೆ. ವಿಧವಾ ಸಮಸ್ಯೆ, ಬಾಲ್ಯವಿವಾಹದಂತಹ ಸಮಸ್ಯೆಗಳಿಗೆ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೇ ನೀಡಿದ್ದಾರೆ. ಆರಂಭದ ಕತೆಗಾರ್ತಿಯರು ತಮ್ಮ ಕತೆಗಳಲ್ಲಿ ಸ್ತ್ರೀ ಮತ್ತು ಕುಟುಂಬ ಕುರಿತು ಅವರದೇ ಆದ ನಿಲುವುಗಳನ್ನು ಪ್ರಕಟಿಸಿದ್ದಾರೆ. ಸ್ತ್ರೀವಾದ ಒಂದು ಸೈದ್ಧಾಂತಿಕವಾಗಿ ಬೆಳೆಯದ ದಿನಗಳಲ್ಲಿ ಸಂಪ್ರದಾಯ ಪ್ರಧಾನವಾಗಿರುವ ಹಾಗೂ ಪುರುಷ ಅಧಿಕಾರವಿರುವ ಕಾಲದಲ್ಲಿ ಸ್ತ್ರೀ ವಿಮೋಚನೆಗೆ ಸಬಲೀಕರಣಕ್ಕೆ ಆಲೋಚಿಸಿರುವ ಎಳೆಗಳು ಸಿಗುತ್ತವೆ. ಆರಂಭ ಕಾಲದಲ್ಲಿ ಬಹುದೊಡ್ಡ ಸಾಹಿತಿಗಳು ಹುಟ್ಟಿಕೊಂಡು ಪ್ರಬುದ್ಧ ಸಾಹಿತ್ಯ ರಚನೆ ಮಾಡಿದ್ದಾರಷ್ಟೆ. ಕಾರಂತ, ಕುವೆಂಪು, ಮಾಸ್ತಿ, ಗೊರೂರು, ಡಿವಿಜಿ, ಬೇಂದ್ರೆ, ಪುತಿನ ಮುಂತಾದವರು ಕಥನ ಕಾವ್ಯದಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ ಇವರಿಗಿಂತ ಪೂರ್ವದಲ್ಲಿ ಬೋಳೂರು ಬಾಬುರಾಯ, ಕೆರೂರು ವಾಸುದೇವಚಾರ್ಯ, ಎಂ.ಎಸ್. ಪುಟ್ಟಣ್ಣ, ಗುಲ್ವಾಡಿ ವೆಂಕಟರಾವ್ ಮುಂತಾದವರು ಕಾದಂಬರಿಗಳನ್ನು ರಚಿಸಿದ್ದಾರೆ. ಮುಖ್ಯವಾಗಿ ಮಹಿಳೆಯನ್ನೇ ಕೇಂದ್ರೀಕರಿಸಿ ರಚಿತವಾಗಿವೆ ಇದು ಗಮನಾರ್ಹವಾದದ್ದು. ಕೆಲವು ಕಾದಂಬರಿಗಳಿಗೆ "ಇಂದಿರೆ", 'ಇಂದಿರಾಬಾಯಿ' "ವಾಗ್ದೇವಿ" "ಚಂದ್ರಮುಖಿಯ ಘಾತವು" ಮಹಿಳೆಯರ ಹೆಸರನ್ನು ಕಾದಂಬರಿ ಪಡೆದಿವೆ. ಕುವೆಂಪು, ಕಾರಂತರು, ಮಾಸ್ತಿಯವರ ಕತೆ– ಕಾದಂಬರಿಗಳಲ್ಲಿಯೂ ಮಹಿಳೆ ಪ್ರಧಾನವಾಗಿರಿದ್ದಾರೆ. ಈ ಧೀಮಂತ ಸಾಹಿತಿಗಳ ಜತೆ ಜತೆಯಲ್ಲಿ ಬರವಣಿಗೆ ಆರಂಭಿಸಿದ ಮಹಿಳೆಯರಿಗೆ ಇದು

ಪ್ರೇರಣೆಯಾಗಿದೆ. ಮಹಿಳೆ ಸಾಹಿತ್ಯ ಲೋಕದಲ್ಲಿ ಹೆಸರು ಮಾಡುವುದೇ ದೊಡ್ಡ ಸಾಹಸವಾಗಿತ್ತು. ಸ್ತ್ರೀವಾದ ಎಂಬ ಪರಿಕಲ್ಪನೆ ಇರದ ಸಂದರ್ಭದಲ್ಲಿ ಸ್ತ್ರೀಪರ ಕಾಳಜಿ ಲೇಖಕರಲ್ಲಿ, ಲೇಖಕಿಯರಲ್ಲಿತ್ತು ಎಂಬುದು ಮಾನವ ಸಹಜ ಪ್ರವೃತ್ತಿಯಾಗಿದೆ ಮಹಿಳೆಯರ ಕಥಾಸಾಹಿತ್ಯದಲ್ಲಿ ಸ್ತ್ರೀ ಮತ್ತು ಕುಟುಂಬದ ವಿನ್ಯಾಸಗಳನ್ನು ಗ್ರಹಿಸುವ ಪ್ರಯತ್ನ ಮುಂದೆ ಮಾಡಲಾಗುವುದು.

೩.೨. ಕೊಡಗಿನ ಗೌರಮ್ಮ(೧೯೧೨-೧೯೩೯)

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಣ್ಣಕತೆಯು ಒಂದು ಮತ್ತು ಪ್ರಮುಖವಾದದ್ದು. ಸಾಹಿತ್ಯದ ಅನೇಕ ಘಟ್ಟಗಳಲ್ಲಿ ನವೋದಯ ಘಟ್ಟವು ಒಂದು. ಬ್ರಿಟಿಷರು ಭಾರತವನ್ನು ಆಳುವ ಸಂದರ್ಭದಲ್ಲಿ ಅವರ ಅರಾಜಕತೆಯನ್ನು ಕಂಡು ಅವರನ್ನು ಭಾರತದಿಂದ ಓಡಿಸುವ ಜನರಲ್ಲಿ ದೇಶಾಭಿಮಾನವಿತ್ತು. ಇದು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂದರ್ಭವಾಗಿತ್ತು. ಈ ಸನ್ನಿವೇಶದಲ್ಲಿ ಪಾಶ್ಚಿಮಾತ್ಯರ ಹೊಸ ಶಿಕ್ಷಣನೀತಿಯಿಂದ ಮಹಿಳೆಯರು ಶಿಕ್ಷಣವನ್ನು ಪಡೆಯುವ ಅವಕಾಶ ದೊರೆಯಿತು. ಸುಶಿಕ್ಷಿತ ಮಹಿಳೆಯರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಹಾಗೂ ತಾವು ಅನುಭವಿಸಿದ ಸಾವುನೋವುಗಳಿಗೆ ಕಾರಣವನ್ನು ಹುಡುಕಿ ತಮ್ಮ ಸಮಸ್ಯೆಗಳನ್ನು ಅರಿತುಕೊಳ್ಳುವಲ್ಲಿ ಜಾಗೃತರಾದರು. ಇತರ ಮಹಿಳೆಯರಿಗೆ ತಾವು ಪಡುತ್ತಿರುವ ಕಷ್ಟಗಳ ಬಗ್ಗೆ ಅರಿವು ಮೂಡಿಸಿದರು. ಹೀಗೆ ಆಧುನಿಕ ಶಿಕ್ಷಣ ಪಡೆದ ಮಹಿಳೆಯರು ಅದರಲ್ಲೂ ಮೇಲುವರ್ಗದ ಮಹಿಳೆಯರು ತಾವು ಕಂಡು, ಅನುಭವಿಸಿದ ಮಹಿಳೆಯರ ನೋವು ನಲಿವುಗಳನ್ನು ಬರವಣಿಗೆ ಮೂಲಕ ಅಭಿವ್ಯಕ್ತಪಡಿಸಲು ಮುಂದಾದರು. ಅವರ ಅಭಿವ್ಯಕ್ತಿಗೆ ನೆರವಾದದ್ದು, ನೆಚ್ಚಿಕೊಂಡದ್ದು 'ಸಣ್ಣಕಥೆ'ಯ ಪ್ರಕಾರ. ಇದು ಕನ್ನಡ ಕಥೆಗಾರ್ತಿಯರಿಗೆ ಹೊರತಾಗಿರಲಿಲ್ಲ. ಅಂದಿನ ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳಿಂದ ಮಹಿಳೆ ಅನುಭವಿಸುವ ಕಷ್ಟಗಳಿಂದ ಹಿಡಿದು ಸುಶಿಕ್ಷಿತ ಗಂಡು-ಹೆಣ್ಣಿನ ಸಂಬಂಧಗಳು, ಕುಟುಂಬದಲ್ಲಿ ಮಹಿಳೆಯ ಪಾತ್ರವನ್ನು ಮುಖ್ಯವಾಗಿಟ್ಟುಕೊಂಡು ಅವರ ಸಮಸ್ಯೆಗಳನ್ನು, ನೋವು ನಲಿವುಗಳನ್ನು ಕುಟುಂಬದಲ್ಲಿ ಮಹಿಳೆಯ ಪಾತ್ರವನ್ನು ಕುರಿತು ತನ್ನದೇ ಆದ ನೆಲೆಯಲ್ಲಿ ಮಹಿಳೆಯ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಪ್ರಮುಖರಾದವರು ಕೊಡಗಿನ ಗೌರಮ್ಮ ಅವರು 'ಕಂಬನಿ ಮತ್ತು ಚಿಗುರು' ಎಂಬ ಎರಡು ಕಥಾಸಂಕಲನಗಳು ಮುಖ್ಯವಾದುವು. ಅವರ ಕಥೆಗಳಲ್ಲಿ ವಿವಿಧ ಮಹಿಳೆಯ ಪಾತ್ರಗಳ ಬಗ್ಗೆ ಅವರ ಆಲೋಚನೆಯನ್ನು ಈ ಮುಂದೆ ನಿರೂಪಿಸಲಾಗಿದೆ.

ಗೌರಮ್ಮನವರ ಕಥೆಗಳಲ್ಲಿ ವಿವಿಧ ವರ್ಗದ ಮಹಿಳೆಯರ ಚಿತ್ರಣವನ್ನು ಕಾಣುತ್ತೇವೆ. ಇಲ್ಲಿ ಕಂಡುಬರುವ ಬಹುಪಾಲು ಮಹಿಳೆಯರು ಮೇಲುವರ್ಗದ ಸುಶಿಕ್ಷಿತ ಸಂಪ್ರದಾಯಸ್ಥ ಮಹಿಳೆಯ ಪಾತ್ರಗಳಾಗಿವೆ. ಅಲ್ಲದೆ ಮುಸ್ಲಿಂ ಜಾತಿಯ ಮಹಿಳೆ ಹಾಗೂ ಕೆಳವರ್ಗದ ಮಹಿಳಾಪಾತ್ರಗಳು ಇವರ ಕಥೆಗಳಲ್ಲಿ ಚಿತ್ರಿತವಾಗಿವೆ. ಇಲ್ಲಿನ ಮಹಿಳಾಪಾತ್ರಗಳಲ್ಲಿ ಅನೇಕ ಸ್ತರದ ಸ್ತ್ರೀಯರಿದ್ದಾರೆ. ಅವರಲ್ಲಿ ಮುಖ್ಯವಾಗಿ ವಿಧವೆ, ಗೃಹಿಣಿ, ಕೂಲಿ ಮಹಿಳೆ, ಸಂಗೀತಗಾರ್ತಿ,

ಸಿನಿಮಾ ನಟಿ, ಕುರೂಪಿ, ಪರಿತ್ಯಕ್ತೆಯಾದ ಮಹಿಳೆ, ಹದಿಹರೆಯದ ಮಹಿಳೆಯ ಚಿತ್ರಣವನ್ನು ಇಲ್ಲಿ ನೋಡುತ್ತೇವೆ.

ಗೌರಮ್ಮನವರು ತಮ್ಮ ಕಥೆಗಳಲ್ಲಿ ವಿಧವಾ ಮಹಿಳೆಯ ಸಮಸ್ಯೆಗಳನ್ನು ಕುರಿತು ಚಿತ್ರಿಸಿದ್ದಾರೆ. ಅವುಗಳಲ್ಲಿ 'ವಾಣಿಯ ಸಮಸ್ಯೆ' ಕತೆಯ ಇಂದು ಮತ್ತು ವಾಣಿ 'ಒಂದು ಪುಟ್ಟ ಚಿತ್ರ' ಕಥೆಯ 'ಶಾಂತಿ', 'ನಾಲ್ಕು ಘಟನೆಗಳು' ಕಥೆಯ ಅನಾಥ ವಿಧವೆ, 'ಅಪರಾಧಿ ಯಾರು?' ಕಥೆಯ 'ಪಾರ್ವತಿ', 'ಪುನರ್ವಿವಾಹ' ಕಥೆಯ 'ರಾಜಿ' ಮುಖ್ಯ ಸ್ತ್ರೀ ಪಾತ್ರಗಳಾಗಿವೆ.

ಗೌರಮ್ಮನವರ ಪ್ರಮುಖ ಕಥೆಯಾದ 'ವಾಣಿಯ ಸಮಸ್ಯೆ'ಯಲ್ಲಿ ಇಂದು ಮತ್ತು ವಾಣಿ ಎಂಬ ಎರಡು ಸ್ತ್ರೀ ಪಾತ್ರಗಳ ವ್ಯಕ್ತಿತ್ವ ಪರಸ್ಪರ ವಿರುದ್ಧವಾಗಿವೆ. ವಿಧವೆ ಇಂದು ಪ್ರಧಾನ ವ್ಯವಸ್ಥೆಯ ಎಲ್ಲಾ ರೀತಿ ನೀತಿಗಳನ್ನು ಒಪ್ಪಿಕೊಂಡ ಸಂಪ್ರದಾಯಸ್ಥ ಸ್ತ್ರೀ ಪಾತ್ರವಾಗಿದೆ. ಇಲ್ಲಿ ತಾನು ತನ್ನ ಮನೆಯನ್ನು, ಮನವನ್ನು ಅಚ್ಚುಕಟ್ಟಾಗಿ ಸುಂದರವಾಗಿಟ್ಟುಕೊಳ್ಳುವುದೇ ಅವಳ ಮುಖ್ಯ ಗುರಿಯಾಗಿದೆ. ಆದರೆ ತನ್ನದೇ ವಯಸ್ಸಿನ ವಾಣಿಯ ಆಗಮನದಿಂದ ತನ್ನಲ್ಲಿರುವ ಕೊರತೆಯನ್ನು ತಿಳಿದು ಅದನ್ನು ಸಾಧಿಸಿಕೊಳ್ಳುವಲ್ಲಿ ವಿಫಲವಾಗುವ ಸ್ತ್ರೀಯ ಚಿತ್ರಣವಿದೆ. ಇಲ್ಲಿ ಇಂದು ಪಲಾಯನವಾದಿಯಾಗಿ ಕಾಣುವಂತೆ ಲೇಖಕಿ ಚಿತ್ರಿಸಿರುವುದು ಸಾಂಪ್ರದಾಯಿಕ ವಾತಾವರಣಕ್ಕಿಂತ ಹೆಚ್ಚಾಗಿ ಮಾನವೀಯತೆಯಿಂದ ಆ ಪಾತ್ರಕ್ಕೆ ನ್ಯಾಯವನ್ನು ಒದಗಿಸುವಲ್ಲಿ ಸಫಲವಾಗಿದ್ದಾರೆ.

ಲೇಖಕಿ ಸ್ವಲ್ಪ ಮುಂದೆ ಬಂದು 'ಒಂದು ಪುಟ್ಟ ಚಿತ್ರ' ಕಥೆಯ ವಿಧವೆ ಶಾಂತಿ ತನ್ನ ಅತ್ತಿಗೆಯ ಅಣ್ಣನಿಂದ ಮೋಸ ಹೋಗಿ ಗರ್ಭಿಣಿಯಾಗಿ ವ್ಯವಸ್ಥೆಗೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವ ಚಿತ್ರಣವಿದೆ. ಇಲ್ಲಿ ಶಾಂತಿ ಒಪ್ಪಿಯೂ ಅಥವಾ ಬಲಾತ್ಕಾರದಿಂದಲೂ ಪುರುಷನ ಆಕ್ರಮಣಕ್ಕೆ ಒಳಗಾಗಿದ್ದಾಳೆ. ಆದರೆ ಇಲ್ಲಿ ಶಿಕ್ಷೆ ಸ್ತ್ರೀಗೆ ಮಾತ್ರ. ಸಮಾನ ತಪ್ಪಿಸ್ಥನಾದ ಪುರುಷನಿಗೆ ಯಾವುದೇ ಶಿಕ್ಷೆಯಿಲ್ಲ. ಹೀಗೆ ಲೇಖಕಿ ಶಾಂತಿಯ ಪಾತ್ರದ ಮೂಲಕ ಲಿಂಗ ಅಸಮಾನತೆಯನ್ನು ಪ್ರಶ್ನಿಸುವಂತೆ ಶಾಂತಿ ತನ್ನನ್ನು ಅಂತ್ಯಗೊಳಿಸುವುದರ ಮೂಲಕ ಮೌನ ಪ್ರತಿಭಟನೆಯನ್ನು ತೋರುವ ಸ್ತ್ರೀ ಚಿತ್ರಣವಿದೆ.

ಇದೇ ರೀತಿಯ ಮತ್ತೊಂದು ಕಥೆ 'ಅಪರಾಧಿ ಯಾರು?' ಈ ಕಥೆಯಲ್ಲಿ ಪಾರ್ವತಿ ಮೇಲುವರ್ಗದ ನಾಗೇಶರಾಯನಿಂದ ಬಲಾತ್ಕಾರಕ್ಕೊಳಗಾಗಿ ಕೊನೆಗೆ ಇಚ್ಛೆ ಮುಗಿದ ಮೇಲೆ ಆತನಿಂದ ತಿರಸ್ಕರಿಸಲ್ಪಟ್ಟ ಹಾಗೂ ತನ್ನ ಕುಲದಿಂದಲೇ ಬಹಿಷ್ಕರಿಸಲ್ಪಡುವ ಮಹಿಳೆಯ ಚಿತ್ರಣವಿದೆ. ಇಲ್ಲಿ ಲೇಖಕಿ ಮೇಲುವರ್ಗದಲ್ಲಿ ಮಹಿಳೆಗೆ ಬದುಕುವ ಅವಕಾಶವಿಲ್ಲದಾಗ ಪಾರ್ವತಿಯನ್ನು ರಾಜಿಯಾಗಿ ಬದಲಾಯಿಸುವುದರ ಮೂಲಕ ಬದುಕುವ ಪ್ರೀತಿಯನ್ನು, ಸ್ತ್ರೀಪರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ವಿಧವೆಗೆ ಆರ್ಥಿಕ ಸ್ವಾತಂತ್ರ್ಯ ಎಷ್ಟು ಅವಶ್ಯಕವಾಗಿರುತ್ತದೆ

ಎಂಬುದಕ್ಕೆ ನಾಲ್ಕು ಘಟನೆಗಳ ಅನಾಥ ವಿಧವೆಯ ಸ್ತ್ರೀ ಪಾತ್ರ ಸಾಕ್ಷಿಯಾಗಿದೆ. ಮೇಲಿನ ಎಲ್ಲ ಸ್ತ್ರೀ ಪಾತ್ರಗಳಿಂತ ಭಿನ್ನವಾಗಿ 'ಪುನರ್ವಿವಾಹ'ದ ವಿಧವೆ ರಾಜಿಯ ಚಿತ್ರಣವಿದೆ. ಇಲ್ಲಿ ರಾಜಿ ತನ್ನಂತೆ ವಿಧುರನಾಗಿರುವ ಪುರುಷನ ವಿವಾಹದ ಆಮಂತ್ರಣವನ್ನು ತಿರಸ್ಕರಿಸುವುದರ ಮೂಲಕ ವಿಧವೆ ಹಾಗೂ ವಿಧುರನಿಗಿರುವ ಅಸಮಾನತೆಯನ್ನು ಪ್ರಶ್ನಿಸುವಂತೆ ಕೊನೆಗೆ ತನ್ನ ತಪ್ಪಿಗೆ ಪಶ್ಚಾತ್ತಾಪ ಪಡುವ ವಿಧುರ ಪುರುಷನ ಪಾತ್ರವಿದೆ. ಇಲ್ಲಿ ರಾಜಿ ಗಂಡು-ಹೆಣ್ಣಿಗಿರುವ ಅಸಮಾನತೆಯನ್ನು ಪ್ರಶ್ನಿಸುವುದರ ಮೂಲಕ ವಿಧವೆ ಸ್ತ್ರೀಗೆ ವಿವಾಹವಾಗಲು ಅವಕಾಶ ಮಾಡಿಕೊಡುವಂತೆ ಚಿಂತನೆಯಿದ್ದರೂ ಅಂತ್ಯದಲ್ಲಿ ರಾಜಿ ಸಮಾಜಸೇವಕಿಯಾಗಿ ಪರಿವರ್ತನೆಯಾಗುವ ಪಾತ್ರದ ಚಿತ್ರಣಕ್ಕೆ ಲೇಖಕಿಯ ಸಂಪ್ರದಾಯಸ್ಥ ಪರಿಸರವೇ ಕಾರಣವಾಗಿರಬಹುದು. ಹೀಗೆ ವಿಧವೆಯರ ಸಮಸ್ಯೆಗಳನ್ನು ಕುರಿತು ಚಿಂತಿಸುವ ಲೇಖಕಿ ವಿಧವೆಯರಿಗೆ ಮರುವಿವಾಹವಾಗುವ ಸನ್ನಿವೇಶವನ್ನು ಎಲ್ಲೂ ತರುವುದಿಲ್ಲ. ಬದಲಾಗಿ ಅದು ಓದುಗರಲ್ಲಿ ಮೂಡುವಂತೆ ಸ್ತ್ರೀ ಪಾತ್ರಗಳಿವೆ. ಇದು ಅವರ ಮಿತಿಯಾದರೂ ಅಂದಿನ ಪರಿಸರದಲ್ಲಿ ಇದು ಮಹತ್ವದ ಸಾಧನೆಯಾಗಿದೆ. ಈ ಮೂಲಕ ಕಥೆಗಾರ್ತಿಯ ವಿಧವೆಯರ ಪರ ಕಾಳಜಿಯನ್ನು ಕಾಣುತ್ತೇವೆ.

ಗೌರಮ್ಮನವರು ಕಥೆ ರಚಿಸುವ ಸಂದರ್ಭದಲ್ಲಿ ಅಥವಾ ಆ ಕಾಲಾವಧಿಯಲ್ಲಿ ಇಂಗ್ಲಿಷ್ ಶಿಕ್ಷಣ ಮಹತ್ವದ್ದಾಗಿದ್ದು ಅದನ್ನು ಪಡೆಯಲು ಉನ್ನತ ವಿದ್ಯಾಭ್ಯಾಸಕ್ಕೆ ವಿದೇಶಗಳಿಗೆ ಹೋಗುವ ಪುರುಷರು ಹಣದ ಕೊರತೆಯಿಂದ ಆ ಶಿಕ್ಷಣದಿಂದ ವಂಚಿತರಾದಾಗ, ಅದನ್ನು ಪಡೆಯಲು ವಿವಾಹದ ಮೂಲಕ ವಧುವಿನ ಕುಟುಂಬದಿಂದ ಅದನ್ನು ಸಾಧಿಸಿಕೊಳ್ಳುತ್ತಿದ್ದರು. ಹೀಗೆ ಯಾವುದೇ ಸಮಸ್ಯೆಗಳಿರಲಿ, ಅದು ಕುಟುಂಬದ ಮೇಲೆ ಹೆಣ್ಣಿನ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಇಂತಹ ಸಂದರ್ಭದಲ್ಲಿ ಹೆಣ್ಣು ಅನುಭವಿಸುವ ಕಷ್ಟಗಳನ್ನು ಕುರಿತು ಲೇಖಕಿ ಸ್ಪಂದಿಸಿದ್ದಾರೆ. ಅಂತಹ ಪ್ರಮುಖ ಕಥೆಗಳು 'ಆಹುತಿ', 'ಅದೃಷ್ಟದ ಆಟ', 'ನನ್ನ ಮದುವೆ' ಇತ್ಯಾದಿ.

'ಆಹುತಿ' ಕಥೆಯಲ್ಲಿ ಶಾಂತಿ ಹದಿಹರೆಯದ ಸುಶಿಕ್ಷಿತ ಸ್ತ್ರೀ. ಈಕೆ ಬಡವಳಾಗಿದ್ದು ವರನ ವಿದೇಶಿ ಶಿಕ್ಷಣಕ್ಕೆ ಕೊಡಬೇಕಾದ ಹಣ ಕೊಡಲಾಗದೆ ವರನಿಂದ ತಿರಸ್ಕೃತಳಾದವಳು. ಕುಟುಂಬದವರ ಇಚ್ಛೆಯಂತೆ ತಂದೆಯ ವಯಸ್ಸಿನ ಮುದುಕನನ್ನು ವಿವಾಹವಾಗಲು ಮನಸ್ಸಿಲ್ಲದೆ, ಬೇರೆ ಮಾರ್ಗವಿಲ್ಲದೆ ತನ್ನನ್ನು ಅಂತ್ಯಗೊಳಿಸಿಕೊಳ್ಳುವ ಅಸಹಾಯಕ ಮಹಿಳೆಯ ಚಿತ್ರಣವನ್ನು ಲೇಖಕಿ ಈ ಕಥೆಯಲ್ಲಿ ತರುವುದರ ಮೂಲಕ ಮಹಿಳೆ ಒಂದು ವ್ಯಾವಹಾರಿಕ ವಸ್ತುವಾಗಿ ಹೇಗೆ ಮಾರಾಟವಾಗುತ್ತಿದ್ದಳು ಎಂಬುದನ್ನು ತಿಳಿಸಿದ್ದಾರೆ. ಈ ಪರಿಸ್ಥಿತಿ ಮಹಿಳೆಗೆ ಇಂದಿಗೂ ಬದಲಾಗಿಲ್ಲ. ಆದರೆ ಲೇಖಕಿ ಇಲ್ಲಿ ಇದಕ್ಕೆ ಕಾರಣವಾದ ಪುರುಷನನ್ನು ಪಶ್ಚಾತ್ತಾಪದ

ನೆಲೆಯಲ್ಲಿ ಚಿತ್ರಿಸಿದ್ದಾರೆ ಹಾಗೂ ಪರಸ್ಪರ ಗಂಡು-ಹೆಣ್ಣಿನ ಪ್ರೇಮದಿಂದ ಈ ಆಲೋಚನೆ ಬದಲಾಗುವ ಸೂಚನೆಯನ್ನು ಕೊಟ್ಟಂತಿದೆ.

'ಅದೃಷ್ಟದ ಆಟ' ಕಥೆಯಲ್ಲಿ ಮಣಿಯೆಂಬ ಪುರುಷ ಲತೆಯನ್ನು ಪ್ರೀತಿಸುತ್ತಿದ್ದು ಅವಳನ್ನು ವಿವಾಹವಾಗಲು ಉದ್ಯೋಗ, ಸ್ವಾಭಿಮಾನ ಅಡ್ಡಿ ಬಂದಾಗ ಸಾಂಪ್ರದಾಯಿಕ ಕುಟುಂಬದ ಪರಿಸರದಲ್ಲಿ ಸ್ತ್ರೀಯನ್ನು ಹೆಚ್ಚು ಅವಧಿ ಮನೆಯಲ್ಲಿ ಮದುವೆ ಮಾಡದೆ ಇರಿಸಲಾಗದೆ ಮನೆಯ ಒತ್ತಾಯಕ್ಕೆ ಬೇರೆ ಪುರುಷನನ್ನು ವಿವಾಹವಾಗುವ ಅಸಹಾಯಕ ಚಿತ್ರಣವಿದೆ. ಆದರೆ ಇಲ್ಲಿ ಲೇಖಕಿ ಸಂಗಾತಿಯನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಲತೆಗೆ ಒದಗಿಸಿದ್ದಾರೆ.

ಇಂತಹ ಸನ್ನಿವೇಶವಿರುವ ಮತ್ತೊಂದು ಕಥೆ 'ಅಪರಾಧಿ ಯಾರು?'. ಇಲ್ಲಿ ಪಾಪ ಎಂಬ ಮಹಿಳೆ ತನ್ನ ಸೋದರತ್ತೆಯ ಮಗನಿಂದ ವಂಚಿಸಲ್ಪಡುತ್ತಾಳೆ. ಇಲ್ಲಿ ವಿವಾಹದ ಸಂದರ್ಭದಲ್ಲಿ ಕೊಡಬೇಕಾದ ಹಣವನ್ನು ವರನಿಗೆ ಕೊಟ್ಟು ವಿವಾಹ ಮಾಡಿದರು. ತನ್ನ ವಿಲಾಯಿತಿ ಶಿಕ್ಷಣ ಮುಗಿಸಿ ಸ್ವಂತ ಉದ್ಯೋಗ ಪಡೆದುಕೊಂಡು ತನ್ನ ಅಂತಸ್ತಿಗೆ ತಕ್ಕ ಪರ ಸ್ತ್ರೀಯನ್ನು ವಿವಾಹ ಮಾಡಿಕೊಂಡು ತನ್ನ ಮೊದಲಿನ ಪತ್ನಿ ಪಾಪಳನ್ನು ತಿರಸ್ಕರಿಸುವ ಮಹಿಳೆಯ ಚಿತ್ರಣ ಈ ಕಥೆಯಲ್ಲಿದೆ. ಆದರೆ ಇಲ್ಲಿ ಪಾಪ ಇಂತಹ ಸನ್ನಿವೇಶದಲ್ಲಿ ತನ್ನನ್ನು ತಾನು ಅಂತ್ಯಗೊಳಿಸಿಕೊಳ್ಳದೆ ತನ್ನ ಪ್ರತಿಭೆಯಿಂದ ಸಂಗೀತಗಾರ್ತಿ, ಉತ್ತಮ ನಟಿಯಾಗಿ ತನ್ನ ಬದುಕನ್ನು ಸಾಗಿಸುವ ಮಹಿಳೆಯ ಚಿತ್ರಣವನ್ನು ಲೇಖಕಿ ತಂದಿದ್ದರೂ ಈ ವೃತ್ತಿಯಲ್ಲಿ ಮಹಿಳೆ ನೆಮ್ಮದಿ, ಶಾಂತಿಯಿರದೆ ಸಮಾಜದ ನಿಂದನೆಗೆ ಒಳಗಾಗುವ ಪಾತ್ರವಾಗಿದೆ.

'ನನ್ನ ಮದುವೆ' ಕಥೆಯಲ್ಲಿ ರಾಮು ಉನ್ನತ ಶಿಕ್ಷಣ ಪಡೆಯುವ ಉದ್ದೇಶದಿಂದ ಕುರುಡಿ ಸ್ತ್ರೀಯನ್ನು ವಿವಾಹವಾಗುವುದರ ಮೂಲಕ ಮೋಸ ಹೋಗುವ ಪುರುಷ ಚಿತ್ರಣವನ್ನು ಈ ಕಥೆಯಲ್ಲಿ ತಂದಿದ್ದಾರೆ. ಹೀಗೆ ಈ ಮೇಲಿನ ಎಲ್ಲ ಕಥೆಗಳಲ್ಲಿ ಮಹಿಳೆ ತನ್ನ ಯಾವುದೇ ತಪ್ಪಿಲ್ಲದೆ ಪುರುಷನಿಂದ, ಕುಟುಂಬದಿಂದ ಹಾಗೂ ಪುರುಷಪ್ರಧಾನ ವ್ಯವಸ್ಥೆಯಿಂದ ಒಂದಲ್ಲ ಒಂದು ಕಷ್ಟಕ್ಕೆ ಒಳಗಾಗಿ ತನ್ನನ್ನು ತಾನು ಅಂತ್ಯಗೊಳಿಸಿಕೊಳ್ಳುವ ಸ್ತ್ರೀಪಾತ್ರಗಳನ್ನು ತರುವುದರ ಮೂಲಕ ಲೇಖಕಿ ಸ್ತ್ರೀಪರ ಕಾಳಜಿಯನ್ನು ವ್ಯಕ್ತಮಾಡಿದ್ದಾರೆ. ಆದರೆ ಇದು ಸ್ತ್ರೀಯರ ಎಲ್ಲ ಸಮಸ್ಯೆಗಳಿಗೆ ಪುರುಷರನ್ನು ದೂಷಿಸದೆ ಅಂದಿನ ಪರಿಸರದಲ್ಲಿ ಒದಗಿ ಬಂದ ಸನ್ನಿವೇಶ ಸಂದರ್ಭಗಳ ಅನಿವಾರ್ಯತೆಯನ್ನು ಕುರಿತು ಹೇಳುವ ಲೇಖಕಿಯ ಕಲಾತ್ಮಕತೆಗೆ ಸಾಕ್ಷಿಯಾಗಿದೆ. ಹೀಗೆ ಯಾವುದೇ ಅಬ್ಬರವಿಲ್ಲದೆ ಮನಸ್ಸನ್ನು ಕಲುಕುವ ಕಲೆ ಈ ಎಲ್ಲ ಕಥೆಗಳಲ್ಲಿವೆ.

ಮುಂದೆ ಲೇಖಕಿ ಗಂಡು-ಹೆಣ್ಣಿನ ಪರಸ್ಪರ ಪ್ರೇಮವನ್ನು ಕುರಿತ ಚಿಂತನೆಯನ್ನು 'ಒಂದು ಚಿತ್ರ', 'ಕೌಸಲ್ಯಾನಂದನ', 'ಹೋಗಿಯೇ ಬಿಟ್ಟಿದ್ದ', 'ಮುನ್ನಾದಿನ', 'ಮರದ ಬೊಂಬೆ'

ಕಥೆಗಳಲ್ಲಿ ಸ್ತ್ರೀ ತಾನು ಬಯಸಿದ ಸಂಗಾತಿಯನ್ನು ಪಡೆಯುವ ಅವಕಾಶವಿಲ್ಲದೆ ಸಾವಿಗೀಡಾಗುವ ಪಾತ್ರಗಳಿವೆ.

'ಒಂದು ಚಿತ್ರ' ಕಥೆಯ ರೋಹಿಣಿ ಸುಶಿಕ್ಷಿತ ಸ್ತ್ರೀಯಾಗಿದ್ದಾಳೆ. ಇಲ್ಲಿ ಅವರ ಪ್ರಕಾರ 'ಪ್ರೇಮವಿಲ್ಲದ ಮದುವೆ ಮದುವೆಯೇ ಅಲ್ಲ' ಎನ್ನುವ ಮಹಿಳೆ ಸುಶಿಕ್ಷಿತಳಾದರೂ ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿಲ್ಲದೆ ಕುಟುಂಬದ ನಿಯಂತ್ರಣಕ್ಕೆ ಒಳಪಡುವ ಸ್ತ್ರೀಯ ಪಾತ್ರವಿದ್ದು ಲೇಖಕಿಯ ಕಲಾತ್ಮಕತೆಯಿಂದ ರೋಹಿಣಿ ಪ್ರೀತಿಸುವ ಯುವಕನೇ ವಿವಾಹವಾದ ಪುರುಷನಂತೆ ಸಂದರ್ಭವನ್ನು ತರುವುದರ ಮೂಲಕ ಗಂಡು–ಹೆಣ್ಣಿನ ಪರಸ್ಪರ ಪ್ರೇಮವನ್ನು ಸಾಧಿಸುವ ರೀತಿಯಲ್ಲಿ ಇಲ್ಲಿನ ಪಾತ್ರಗಳಿವೆ. ಈ ಮೂಲಕ ಲೇಖಕಿಗೆ ಪ್ರೇಮದ ಬಗ್ಗೆ ಇರುವ ಚಿಂತನೆಯನ್ನು ಕಾಣುತ್ತೇವೆ.

'ಕೌಸಲ್ಯಾನಂದನ' ಕಥೆಯಲ್ಲಿ ಲಿಲ್ಲಿ ಕುಂಟ ರಾಮುವನ್ನು ಪ್ರೀತಿಸುವ, ಅವನಿಗಾಗಿ ಹಾತೊರೆಯುವ ಪರಸ್ಪರ ಒಂದಾಗುವ ಸ್ತ್ರೀ ಪಾತ್ರವನ್ನು ನೋಡಬಹುದು.

'ಮರದ ಬೊಂಬೆ' ಕಥೆಯಲ್ಲಿ ತುಂಟ ಹುಡುಗಿಯ ಚಿತ್ರಣವಿದೆ. ಇಲ್ಲಿ ಶೈಲ ಎಂಬ ಸ್ತ್ರೀ ಹುಡುಗಾಟದ ಸ್ವಭಾವದವಳಾಗಿದ್ದು ತನ್ನ ತುಂಟತನದಿಂದ ಕಾಲೇಜಿನ ಉಪಾಧ್ಯಾಯನನ್ನು ಪ್ರೇಮಿಸಿ ಮನುಷ್ಯಸಹಜ ವರ್ತನೆಯನ್ನು ಕಲಿಸಿ ಅವನ ವ್ಯಕ್ತಿತ್ವವನ್ನು ಬದಲಾಯಿಸುವ ಪರಸ್ಪರ ಪ್ರೇಮ ಪ್ರೀತಿಯ ಕುಟುಂಬದ ಚಿತ್ರಣವನ್ನು ಶೈಲ ಪಾತ್ರದ ಮೂಲಕ ಚಿತ್ರಿಸಲಾಗಿದೆ. ಇಲ್ಲಿ ಲೇಖಕಿ ಕೇವಲ ಮೇಲುವರ್ಗದ ಗಂಡು–ಹೆಣ್ಣಿನ ಸಂಬಂಧಗಳನ್ನಷ್ಟೇ ಹೇಳದೆ ಕೆಳಮಧ್ಯಮವರ್ಗದ ಅನ್ಯ ಮತದ ಮುಸ್ಲಿಂ ಕುಟುಂಬದ ಮಹಿಳೆಯ ಚಿತ್ರಣವನ್ನು ನೀಡಿದ್ದಾರೆ. 'ಹೋಗಿಯೇ ಬಿಟ್ಟಿದ್ದ' ಕಥೆಯ ಲತೀಪಳು ತಾನು ಪ್ರೀತಿಸಿದ ಸಂಗಾತಿಯನ್ನು ವಿವಾಹವಾಗಲು ಕುಟುಂಬ ಅವಕಾಶ ಕೊಡದೆ ತನ್ನ ಚಿಕ್ಕಪ್ಪನ ಇಚ್ಛೆಯಂತೆ ವಯಸ್ಸಾದ ಮೊಮ್ಮಕ್ಕಳಿರುವ ಮುದುಕನಿಗೆ ವಿವಾಹವಾಗುವುದರ ಬದಲು ತನ್ನ ಸಂಗಾತಿಯ ಕೈಯಿಂದಲೇ ಸಾವನ್ನು ಬಯಸಿದ ಸ್ತ್ರೀ ಪಾತ್ರದ ಚಿತ್ರಣವಿದೆ. ಆದರೆ ಮತ್ತೊಂದು ಕಥೆಯಾದ 'ಮುನ್ನಾದಿನ' ಕಥೆಯಲ್ಲಿ ಹುಸೇನ್‌ಬಿ ಪಾತ್ರದ ಮೂಲಕ ತಾನು ಬಯಸಿದ ಸಂಗಾತಿ ಜೋಸೆಫ್‌ನಿಂದ–ಇಸ್ಮಾಯಿಲ್ ಆಗಿ ಪರಿವರ್ತಿಸುವ ಮೂಲಕ ವಿವಾಹವಾಗುವ ಪಾತ್ರದ ಚಿತ್ರಣವನ್ನು ತರಲಾಗಿದೆ. ಇಲ್ಲಿ ಮೇಲುವರ್ಗದ ಸ್ತ್ರೀಯರು ಸುಶಿಕ್ಷಿತರಾದರೂ ಸಹ ಇಲ್ಲಿ ಸ್ತ್ರೀಗೆ ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವಿರದ ಸ್ತ್ರೀಪಾತ್ರಗಳಿವೆ. ಅಲ್ಲದೆ ಇಂತಹ ಸಂಪ್ರದಾಯಸ್ಥ ಸ್ತ್ರೀ ಪಾತ್ರವನ್ನು ಮುಸ್ಲಿಂ ಕುಟುಂಬದಲ್ಲಿ ಕಾಣಬಹುದು.

ಹೀಗೆ ಇಲ್ಲಿ ಮುಸ್ಲಿಂ ಮಹಿಳೆ ಆಯ್ಕೆಯ ಸ್ವಾತಂತ್ರ್ಯವಿಲ್ಲದೆ ಸಾವಿಗೀಡಾಗುವ ಇಲ್ಲವೇ ಮತಾಂತರದ ಮೂಲಕ ತನ್ನ ಸಂಗಾತಿಯನ್ನು ಪಡೆಯುವ ಸ್ತ್ರೀ ಪಾತ್ರಗಳಿವೆ. ಹೀಗೆ ಲೇಖಕಿ

ಸಾಂಪ್ರದಾಯಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಗಂಡು-ಹೆಣ್ಣಿನ ಸಂಬಂಧಗಳನ್ನು ಸಾವಿನಲ್ಲಿ ಅಥವಾ ಬದುಕುವುದರಲ್ಲಿ ಅಥವಾ ಕಥೆಯ ಕಲಾತ್ಮಕತೆ ಮೂಲಕ ಪ್ರೇಮಿಗಳನ್ನು ಒಂದಾಗಿಸುವ, ಆ ಮೂಲಕ ಪ್ರೇಮದ ಉತ್ಕಟತೆಯನ್ನು ಈ ಕಥೆಗಳಲ್ಲಿ ಲೇಖಕಿ ತಂದಿದ್ದಾರೆ. ಅಲ್ಲದೆ ಲೇಖಕಿ ಮೇಲುವರ್ಗದ ಮಹಿಳೆ-ಪುರುಷ ಕೆಳವರ್ಗದದೊಂದಿಗೆ ಪರಸ್ಪರ ಸಂಬಂಧಗಳಿರುವ ಸ್ತ್ರೀ-ಪುರುಷರ ಚಿತ್ರಣವನ್ನು ಎಲ್ಲಿಯೂ ತರುವುದಿಲ್ಲ. ಇದು ಅವರ ಮಿತಿಯಾದರೂ ಅಂದಿನ ಸಾಂಪ್ರದಾಯಿಕ ವಾತಾವರಣದಲ್ಲಿ ಸ್ತ್ರೀ ಪರವಾದ ಕತೆಗಾರ್ತಿಯ ಕಾಳಜಿಯು ಅತ್ಯಂತ ಮಹತ್ವದ್ದಾಗಿದೆ.

ಲೇಖಕಿಗೆ ಹೆಣ್ಣಿನ ಬಾಹ್ಯಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯ ಹೆಚ್ಚು ಮಹತ್ವದ್ದಾಗಿದ್ದು ಅಂತಹ ಸ್ತ್ರೀ ಪಾತ್ರಗಳನ್ನು 'ಸನ್ಯಾಸಿ ರತ್ನ', 'ಅವಳ ಭಾಗ್ಯ' ಮುಂತಾದ ಹಲವು ಕಥೆಗಳಲ್ಲಿ ನಿರೂಪಿಸಿದ್ದಾರೆ. 'ಅವಳ ಭಾಗ್ಯ' ಕಥೆಯಲ್ಲಿ ಬಡ ಕುರೂಪಿ ಪಾರುವನ್ನು ವಿವಾಹವಾಗಲು ಯಾರೂ ಒಪ್ಪದೆ ಕೊನೆಗೆ ಕ್ಷಯರೋಗಿಯನ್ನು ವಿವಾಹ ಮಾಡಲು ಪಾರುವಿನ ತಂದೆ ನಿರ್ಧರಿಸಿದಾಗ ಇದು 'ಅವಳ ಭಾಗ್ಯ' ಎಂದು ಹೇಳುವ ಜಮೀನ್ದಾರರ ಏಕಮಾತ್ರ ಪುತ್ರಿಯ ವಾಕ್ಯಗಳನ್ನು ವ್ಯಂಗ್ಯ ರೀತಿಯಲ್ಲಿ ಚಿತ್ರಿಸುವುದರಲ್ಲಿ ವರ್ಗತಾರತಮ್ಯವನ್ನು ಕಾಣುತ್ತದೆ. ಹೀಗೆ ಇಲ್ಲಿ ಬಡ ಕುರೂಪಿ, ಶ್ರೀಮಂತ, ಸುಂದರಿ ಎರಡೂ ಸ್ತ್ರೀ ಪಾತ್ರಗಳ ನಡವಳಿಕೆಗಳ ಆಂತರಿಕ ಸೌಂದರ್ಯಗಳ ವ್ಯತ್ಯಾಸವನ್ನು ತರಲಾಗಿದೆ.

ಗೌರಮ್ಮನವರ 'ಮನುವಿನ ರಾಣಿ' ಕತೆಯಲ್ಲಿ ವೇಶ್ಯಾ ಮಹಿಳೆಯ ಪಾತ್ರವಿದೆ. ಇಲ್ಲಿ ಬರುವ ಮಹಿಳೆ ಸುಶಿಕ್ಷಿತಳಾಗಿದ್ದಾಳೆ. ತನ್ನ ತಾಯಿಯ ಒತ್ತಾಯದಿಂದ ಈ ವೃತ್ತಿಯನ್ನು ಮಾಡುತ್ತಿದ್ದು ರಾಜಮ್ಮ ತಾಯಿಯ ವಿರೋಧವಿದ್ದರೂ ಒಬ್ಬನನ್ನು ಪ್ರೀತಿಸುವ ಮೂಲಕ ಪತಿವ್ರತೆಯಾಗಿ ಜೀವಿಸುವ ಪವಿತ್ರಪ್ರೇಮವನ್ನು ಬಯಸುವ ವೇಶ್ಯಾ ಸ್ತ್ರೀಯ ಚಿತ್ರಣವಿದ್ದು ತನ್ನ ಸಂಗಾತಿಯು ಹುಚ್ಚನಾದರೂ ಲಕ್ಷಿಸದೆ ಅವನ ಸೇವೆಯನ್ನು ಮಾಡುತ್ತಾ ಜೀವಿಸುವ, ಕೊನೆಗೆ ವ್ಯವಸ್ಥೆಯ ವಿರುದ್ಧ ಬದುಕಲು ಸಾಧ್ಯವಾಗದೆ ಪಲಾಯನವಾದಿ ವೇಶ್ಯಾ ಸ್ತ್ರೀಯ ಪಾತ್ರವನ್ನು ಕಾಣುತ್ತೇವೆ.

ಈ ಮೂಲಕ ವೇಶ್ಯೆಯರ ಬಗ್ಗೆ ಲೇಖಕಿಯ ಕಾಳಜಿಯನ್ನು ಕಾಣುತ್ತದೆ. ಅಲ್ಲದೆ ಗೃಹಿಣಿ ಸ್ತ್ರೀ ಚಿತ್ರಣವನ್ನು 'ನಾಲ್ಕು ಘಟನೆಗಳು', 'ವಾಣಿಯ ಸಮಸ್ಯೆ' ಕತೆಗಳಲ್ಲಿ ಸ್ತ್ರೀ ಪಾತ್ರಗಳಿವೆ. ಇಲ್ಲಿ ಸಾಂಪ್ರದಾಯಿಕ ಹಾಗೂ ಆಧುನಿಕ ಸ್ತ್ರೀ ಪಾತ್ರಗಳು ಪರಸ್ಪರ ವಿರುದ್ಧವಾಗಿದ್ದು ಗೃಹಿಣಿಯ ಕರ್ತವ್ಯಗಳನ್ನು ಚಾಚೂ ತಪ್ಪದೆ ಪಾಲಿಸುವ ಹಾಗೂ ಅಗತ್ಯಕ್ಕೆ ತಕ್ಕಂತೆ ನಿರ್ವಹಿಸುವ ಎರಡು ಸ್ತ್ರೀ ಪಾತ್ರಗಳಿವೆ. ಹೀಗೆ ಗೃಹಿಣಿ ಕರ್ತವ್ಯಗಳ ಬಗ್ಗೆ ಪರಸ್ಪರ ಗೊಂದಲ ಉಂಟು ಮಾಡುವಂತೆ ಲೇಖಕಿಯ ಒಲವುಗಳನ್ನು ಸ್ಪಷ್ಟಪಡಿಸಲು ಸಾಧ್ಯವಾಗುವುದಿಲ್ಲ. ಕೊನೆಗೆ ಸಾಂಪ್ರದಾಯಿಕ ಗೃಹಿಣಿ ಪಾತ್ರವನ್ನು ಲೇಖಕಿ ಮೆಚ್ಚಿಕೊಂಡಂತೆ ಭಾಸವಾಗುತ್ತದೆ.

'ಕೆಲವು ಕಾಗದಗಳು' ಕಥೆಯಲ್ಲಿ ಪ್ರಭಾ ಎಂಬ ಮಹಿಳೆ ವಿವಾಹವಾದ ವಸಂತನನ್ನು ಪವಿತ್ರಭಾವದಿಂದ ಪ್ರೀತಿಸುತ್ತಿದ್ದು ಸಮಾಜದ ನಿಂದನೆಗೆ ಗುರಿಯಾಗಿ ಪಲಾಯನವಾದಿಯ ಸ್ತ್ರೀ ಪಾತ್ರ ಚಿತ್ರಣವಿದೆ. ಹೀಗೆ ಗಂಡು-ಹೆಣ್ಣಿನ ಸಂಬಂಧ ಕೇವಲ ಪತಿ-ಪತ್ನಿಯ ಸಂಬಂಧವಾಗಿರದೆ ಸ್ನೇಹಮಯ ಸಂಬಂಧದಂತೆ ಪರಸ್ಪರ ಸ್ತ್ರೀ-ಪುರುಷರ ಪಾತ್ರಗಳನ್ನು ಲೇಖಕಿ ಚಿತ್ರಿಸಿದರೂ ಅದು ತಿಳುವಳಿಕೆಯ ರೂಪದಲ್ಲಿ ಜನರ ಆಲೋಚನೆಯನ್ನು ಬದಲಾಯಿಸುವಂತೆ ಇಲ್ಲಿನ ಸ್ತ್ರೀ ಪಾತ್ರಗಳಿವೆ.

ಗೌರಮ್ಮನವರ ಬಹುಪಾಲು ಕಥೆಗಳಲ್ಲಿ ಮಹಿಳೆಯ ಸಮಸ್ಯೆಗಳು ಪ್ರಾರಂಭವಾಗುವುದು ಕುಟುಂಬದಿಂದ. ಈ ಎಲ್ಲ ಕಥೆಗಳಲ್ಲಿ ಸ್ತ್ರೀಯರಿಗೆ ಕುಟುಂಬವು ಅತ್ಯಂತ ಮುಖ್ಯವಾಗಿದೆ. ಇವರ ಕತೆಗಳಲ್ಲಿ ಅನೇಕ ಬಗೆಯ ಕುಟುಂಬಗಳಿವೆ. ಪತಿಯಿಲ್ಲದ ಮಹಿಳೆಯ ಒಂಟಿಕುಟುಂಬ, ಗಂಡ-ಹೆಂಡತಿಯಿರುವ ಸರಳಕುಟುಂಬ. ತಂದೆ-ತಾಯಿ ಮಕ್ಕಳಿರುವ ಪೂರ್ಣಕುಟುಂಬ, ಬಡಕುಟುಂಬ, ಶ್ರೀಮಂತ ಕುಟುಂಬ, ತಂದೆಯಿಲ್ಲದ ತಾಯಿಕುಟುಂಬ, ಮುಸ್ಲಿಂ ಕುಟುಂಬ, ಕೆಳವರ್ಗದ ಕುಟುಂಬ, ವೇಶ್ಯಾಕುಟುಂಬ, ಸುಶಿಕ್ಷಿತ ಕುಟುಂಬ, ಹೀಗೆ ವಿವಿಧ ಬಗೆಯ ಕುಟುಂಬವಿದ್ದು ಈ ಎಲ್ಲ ಕುಟುಂಬಗಳು ಪುರುಷನ ನಿಯಂತ್ರಣಕ್ಕೆ ಒಳಪಟ್ಟಿದ್ದು ಸ್ತ್ರೀಗೆ ಇಲ್ಲಿ ಯಾವುದೇ ಅಧಿಕಾರವಿರುವುದಿಲ್ಲ. ಅಲ್ಲದೆ ಇಲ್ಲಿ ಅವಿಭಕ್ತ ಹಾಗೂ ಮಾತೃಪ್ರಧಾನ ಕುಟುಂಬದ ಚಿತ್ರಣವನ್ನು ಯಾವುದೇ ಕಥೆಗಳಲ್ಲಿ ಲೇಖಕಿ ತರುವುದಿಲ್ಲ.

ಗೌರಮ್ಮನವರ ಬಹುಪಾಲು ಕಥೆಗಳಲ್ಲಿ ಪುರುಷಪ್ರಧಾನ ಕುಟುಂಬವನ್ನು ಕಾಣುತ್ತೇವೆ. ಕುಟುಂಬದಲ್ಲಿ ಸ್ತ್ರೀಯ ಪಾತ್ರ ಮುಖ್ಯವಾಗಿದೆ. 'ವಾಣಿಯ ಸಮಸ್ಯೆ'ಯಲ್ಲಿ ಇಂದು ಮತ್ತು ವಾಣಿ ಕುಟುಂಬಗಳು ವಿಭಿನ್ನವಾಗಿದೆ. ಇಲ್ಲಿ ಇಂದು ಮನೆಯ ಕೆಲಸಗಳನ್ನು ಸ್ತ್ರೀಗೆ ವಿಧಿಸಿದಂತೆ ಚಾಚೂ ತಪ್ಪದೆ ನಿರ್ವಹಿಸುವಳು. ಈ ಮೂಲಕ ಕುಟುಂಬವನ್ನು ವಿಧವೆ ರಕ್ಷಿಸುವಳು. ಹಾಗೆಯೇ ಇದಕ್ಕೆ ವಿರುದ್ಧವಾಗಿ ಗಂಡನಿರುವ ವಾಣಿ ಕುಟುಂಬವಿದೆ. ಇಲ್ಲಿ ವಾಣಿ ಗೃಹಿಣಿಗೆ ವಿಧಿಸಿದ ಕಾರ್ಯಗಳನ್ನು ಚಾಚೂ ತಪ್ಪದೆ ಮಾಡದೆ ತನ್ನ ಅಗತ್ಯಕ್ಕೆ ಅನಿವಾರ್ಯದ ಸಂದರ್ಭದಲ್ಲಿ ನಿರ್ವಹಿಸುವ, ಕುಟುಂಬದ ಬಗ್ಗೆ ನಿರ್ಲಕ್ಷ್ಯವಿರುವ ತನ್ನ ಗಂಡನಿಗೆ ತಕ್ಕಮಟ್ಟಿಗೆ ಸೇವೆ ಮಾಡುವ ಆಧುನಿಕ ಗೃಹಿಣಿ ಪಾತ್ರವನ್ನು, ಇಲ್ಲಿ ಇಂದುವಿಗೆ ವಾಣಿಯ ಸ್ನೇಹದಿಂದ ತನ್ನ ಕುಟುಂಬದಲ್ಲಿನ ಕೊರತೆಯನ್ನು ಮನಗಂಡರೂ ಅದನ್ನು ಪಡೆಯಲಾಗದೆ ಸಾಮಾಜಿಕ ಕಟ್ಟುಪಾಡುಗಳಿಗೆ ಹೆದರಿ ಪಲಾಯನವಾದಿಯಂತೆ ಇಂದುವಿನ ಪಾತ್ರವನ್ನು ಲೇಖಕಿ ತರುವುದರ ಮೂಲಕ ಮತ್ತೊಂದು ಕುಟುಂಬದ ಅಶಾಂತಿಗೆ ಎಡೆಗೊಡದಿರುವುದು ಲೇಖಕಿಗೆ ಕುಟುಂಬದ ಬಗ್ಗೆಯಿರುವ ಪ್ರೀತಿಯನ್ನು ತೋರಿಸುತ್ತದೆ.

ಇಲ್ಲಿ ಲೇಖಕಿ ಮಾನವೀಯತೆಯ ನೆಲೆಯಿಂದ ಇಂದುವಿನ ಪಾತ್ರಕ್ಕೆ ನ್ಯಾಯ ಒದಗಿಸಲಾಗದೆ. 'ಕೆಲವು ಕಾಗದಗಳು' ಕಥೆಯಲ್ಲಿ ಪತಿ–ಪತ್ನಿಯರ ಕುಟುಂಬವಿದೆ. ಇಲ್ಲಿ ಪ್ರಭ ಗೃಹಸ್ಥನಾದ ವಸಂತನನ್ನು ಸ್ನೇಹದ ನೆಲೆಯಲ್ಲಿ ಪ್ರೀತಿಸುತ್ತಾಳೆ. ಈ ಸ್ನೇಹ ಕುಟುಂಬದ ಸದಸ್ಯರಲ್ಲಿ ಅಶಾಂತಿಯನ್ನು ಉಂಟುಮಾಡಿದಾಗ ಪ್ರಭ ಇಲ್ಲಿ ಪಲಾಯನವಾದಿಯಾಗುವ ಸ್ತ್ರೀ ಚಿತ್ರಣವನ್ನು ಲೇಖಕಿ ತರುವುದರ ಮೂಲಕ ಸಾಂಪ್ರದಾಯಿಕ ಕುಟುಂಬ ವಿನ್ಯಾಸವನ್ನು ತರುತ್ತಾರೆ. ಅಲ್ಲದೆ ಕೆಳವರ್ಗದ ಕುಟುಂಬದಲ್ಲಿ ಪತಿಯು ಪತ್ನಿಗೆ ಎಷ್ಟೇ ಹಿಂಸೆ ನೀಡಿದರೂ ಅದನ್ನು ಸಹಿಸುವ, ಪರಸ್ಪರ ಹೊಂದಾಣಿಕೆ ಮತ್ತು ಪ್ರೀತಿಯ ಮೂಲಕ ಕುಟುಂಬವನ್ನು ನಿರ್ವಹಿಸುವ ಸ್ತ್ರೀ ಪಾತ್ರದ ಚಿತ್ರಣವನ್ನು 'ನಾಲ್ಕು ಘಟನೆಗಳು' ಕಥೆಯಲ್ಲಿ ನಿರೂಪಿಸಿದ್ದಾರೆ.

ಗಂಡನ ಸಾವಿನಿಂದ ಅನಾಥ ವಿಧವೆ ಮಗುವನ್ನು ಕುಟುಂಬದಿಂದ ಹೊರಹಾಕುವ ಅತ್ತಿಗೆ ಪಾತ್ರವನ್ನು ತರುವುದರ ಮೂಲಕ ಸ್ತ್ರೀ ಕುಟುಂಬದಲ್ಲಿ ಅಸುರಕ್ಷಿತಳಾಗಿದ್ದು ವಿನಾಕಾರಣ ಕುಟುಂಬದ ಸದಸ್ಯರಿಂದ ತಿರಸ್ಕೃತಳಾಗುವ ಅನಾಥ ವಿಧವೆಯ ಸ್ತ್ರೀ ಪಾತ್ರವನ್ನು 'ನಾಲ್ಕು ಘಟನೆಗಳು' ಕಥೆಯಲ್ಲಿದೆ. ಅಲ್ಲದೆ ಇಲ್ಲಿ ಈ ಕಥೆಯ ಮೂಲಕ ಸ್ತ್ರೀಗೆ ಆರ್ಥಿಕ ಸ್ವಾತಂತ್ರ್ಯ ಎಷ್ಟು ಅವಶ್ಯಕವಾಗಿದೆ ಎಂಬುದನ್ನು ಈ ಪಾತ್ರಗಳ ಮೂಲಕ ತೋರಿಸಿದ್ದಾರೆ. ಅಲ್ಲದೆ ಹೀಗೆ ಸ್ತ್ರೀ ಕುಟುಂಬದ ಸದಸ್ಯರಿಂದ ವಿನಾಕಾರಣ ಹೊರದೂಡಲ್ಪಟ್ಟಾಗ ಅವಳಿಗೆ ತನ್ನ ಕುಟುಂಬವನ್ನು ರಕ್ಷಿಸಲು ಕೂಲಿ ಅಥವಾ ಅನ್ಯಪುರುಷರ ಅತ್ಯಾಚಾರವನ್ನು ಸಹಿಸಿಕೊಳ್ಳುವ ಮೂಲಕ ಕುಟುಂಬವನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊತ್ತ ಸ್ತ್ರೀ ಪಾತ್ರವನ್ನು 'ಅಪರಾಧಿ ಯಾರು' ಕಥೆಯಲ್ಲಿ ನೋಡುತ್ತೇವೆ. ಇಲ್ಲಿ ಪಾರ್ವತಿ ಆಗಿ ಬದುಕಲು ಅವಕಾಶವಿಲ್ಲದಾಗ ಲೇಖಕಿ ರಾಜಿಯಾಗಿ ಬದುಕುವ ಸ್ತ್ರೀ ಚಿತ್ರಣವನ್ನು ತರುವುದರ ಮೂಲಕ ಸ್ತ್ರೀ ಬಗ್ಗೆ, ಬದುಕಿನ ಬಗ್ಗೆ ಲೇಖಕಿಗಿರುವ ಪ್ರೀತಿ ಮತ್ತು ಕಾಳಜಿಯನ್ನು ಅರಿಯುತ್ತೇವೆ. ಅಲ್ಲದೆ ವಿಧವೆ ಸ್ತ್ರೀ ತನ್ನ ಕುಟುಂಬದ ಸದಸ್ಯರಿಂದಲೇ ಅತ್ಯಾಚಾರಕ್ಕೆ ಒಳಗಾಗಿ ಬೇರೆ ಮಾರ್ಗವಿಲ್ಲದೆ ತನ್ನನ್ನು ಸಾವಿಗೆ ತಳ್ಳಿಕೊಳ್ಳುವ ಸ್ತ್ರೀ ಪಾತ್ರವನ್ನು ತಂದಿದ್ದಾರೆ. ಈ ಮೂಲಕ ಮಹಿಳೆಯ ತಪ್ಪಿರಲಿ ಅಥವಾ ಇಲ್ಲದಿರಲಿ ಶಿಕ್ಷೆ ಮಾತ್ರ ಮಹಿಳೆಗೆ. ಪುರುಷನಿಗೆ ಅದು ಅನ್ವಯಿಸುವುದಿಲ್ಲ. ಪುರುಷಬದುಕು ಸಹಜವಾಗಿದೆ. ಆದರೆ ಇಲ್ಲಿ ಮಹಿಳೆ ಬದ್ಧತೆಯಿಂದಲೇ ಜೀವಿಸಬೇಕಾಗಿರುವ ಗಂಡು–ಹೆಣ್ಣಿನ ಅಸಮಾನತೆಯನ್ನು ಪ್ರಶ್ನಿಸುವ ರೀತಿಯಲ್ಲಿ 'ಕೆಲವು ಕಾಗದಗಳು' ಕಥೆಯ ಶಾಂತಿ ಚಿತ್ರಣವನ್ನು ತರಲಾಗಿದೆ. ಇಲ್ಲಿ ಸ್ತ್ರೀಯ ಈ ಸ್ಥಿತಿಗೆ ಕಾರಣರಾದವರು ಕುಟುಂಬ, ಸ್ತ್ರೀ–ಪುರುಷರಾಗಿರಬಹುದು. ತನ್ನ ತಪ್ಪನ್ನು ಅರಿತು ಪಶ್ಚಾತ್ತಾಪ ಪಡುವ ಮೂಲಕ ಕುಟುಂಬದ ಜೀವಂತಿಕೆಯನ್ನು, ಚಲನಶೀಲತೆಯನ್ನು ತಂದಿದ್ದಾರೆ. ಅಲ್ಲದೆ ಹೆಣ್ಣಿಗೆ ಹೆಣ್ಣೇ ಶತ್ರುವೆಂಬಂತೆ, ಆ ಮೂಲಕ ಸ್ತ್ರೀ ಅಂತ್ಯಕ್ಕೆ ಕಾರಣವಾಗುವ ಅತ್ತಿಗೆ–ನಾದಿನಿ, ತಾಯಿ–ಮಗಳ, ಸಂಬಂಧವನ್ನು 'ಕೆಲವು ಕಾಗದಗಳು', 'ಮನುವಿನ ರಾಣಿ' ಕಥೆಯಲ್ಲಿದೆ.

ಗೌರಮ್ಮನವರ ಕಥೆಗಳಲ್ಲಿ ಕಂಡುಬರುವ ಕುಟುಂಬಗಳು ಪಿತೃಪ್ರಧಾನ ಕುಟುಂಬಗಳಾಗಿವೆ. ಇದರಲ್ಲಿ 'ಪ್ರಾಯಶ್ಚಿತ್ತ' ಒಂದು ಸಂಕೀರ್ಣ ಕಥೆ. ಈ ಕುಟುಂಬವು ತಂದೆಯಿಂದ ನಿಯಂತ್ರಿಸಲ್ಪಡುತ್ತದೆ. ಮೂರ್ತಿಯ ತಂದೆ ಕುಟುಂಬದ ಯಜಮಾನನಾಗಿದ್ದು ತನ್ನ ಹೆಂಡತಿ ಹಾಗೂ ಮಗನ ಮೇಲೆ ಸಂಪೂರ್ಣ ಅಧಿಕಾರ ಚಲಾಯಿಸುತ್ತಿದ್ದು ಈ ಹಿಂಸೆಯನ್ನು ಸಹಿಸುತ್ತಾ ಬದುಕುವ ತಾಯಿ-ಮಗನ ಪಾತ್ರವನ್ನು ತರಲಾಗಿದೆ. ಇಲ್ಲಿ ತಾಯಿ-ಮಗನ ಸಂಬಂಧವು ಅತ್ಯುತ್ತಮವಾಗಿದ್ದು ತನ್ನ ತಾಯಿಯನ್ನು ತಂದೆಯ ಕ್ರೌರ್ಯದಿಂದ ಪಾರುಮಾಡಲು ಪ್ರಯತ್ನಿಸುತ್ತಾ, ತಾಯಿಗೋಸ್ಕರ ತಂದೆಯ ಎಲ್ಲಾ ಕ್ರೌರ್ಯವನ್ನು ಸಹಿಸುವ ಮೂರ್ತಿಯ ಪಾತ್ರ ಚಿತ್ರಣವಿದೆ. ಮೂರ್ತಿಯ ತಂದೆ ವಿಧವೆ ಸ್ತ್ರೀಯನ್ನು ಅತ್ಯಾಚಾರ ಮಾಡಿ ಅವಳ ಸಾವಿಗೆ ಕಾರಣನಾದವನು. ಆ ವಿಧವೆಯ ಮಗಳನ್ನು ಮೂರ್ತಿ ತಂದೆಯ ವಿರೋಧದ ನಡುವೆಯೂ ವಿವಾಹವಾಗುವ ಮೂಲಕ ತಂದೆಯ ಅಪರಾಧಕ್ಕೆ ಪ್ರಾಯಶ್ಚಿತ್ತ ಎಂಬುದೇ ಇಲ್ಲ. ಮೂರ್ತಿ-ನಳಿನಿ ಸಂಬಂಧದ ಬಗ್ಗೆ ಲೇಖಕಿಯ ಧೋರಣೆ ಓದುಗರಲ್ಲಿ ಚಿಂತನೆಗೀಡು ಮಾಡುತ್ತದೆ. ಪುರುಷ ಹಾಗೂ ವ್ಯವಸ್ಥೆಯ ಕಾರಣದಿಂದ ವಿಧವೆ ಸ್ತ್ರೀ ಹಾಗೂ ತಾಯಿ ಪಾತ್ರದಲ್ಲಿರುವ ಸ್ತ್ರೀ ಸಾವಿಗೀಡಾಗುವ ಸನ್ನಿವೇಶವನ್ನು ತರುವುದರ ಮೂಲಕ ಸ್ತ್ರೀಯ ಅಸಹಾಯಕತೆ ಹಾಗೂ ಮರುಕವನ್ನು ಉಂಟುಮಾಡುತ್ತದೆ. ಹೀಗೆ ಇಲ್ಲಿ ಸ್ತ್ರೀ ವಿನಾಕಾರಣ ಶಿಕ್ಷೆಯನ್ನು ಅನುಭವಿಸುವ ಪಾತ್ರಗಳನ್ನು ಕಾಣುತ್ತೇವೆ.

ಲೌಕಿಕ ವಿದೇಶಿ ಶಿಕ್ಷಣ ಕುಟುಂಬದಲ್ಲಿ ಅದರಲ್ಲೂ ಸ್ತ್ರೀಯ ಮೇಲೆ ಉಂಟುಮಾಡುವ ಪರಿಣಾಮವನ್ನು 'ಆಹುತಿ' ಕಥೆಯ ಶಾಂತಿ, 'ಅದೃಷ್ಟದ ಆಟ' ಕಥೆಯ ಲತಾ, 'ಅಪರಾಧಿ ಯಾರು?' ಕಥೆಯ ರೋಹಿಣಿ, 'ನನ್ನ ಮದುವೆ' ಕಥೆಯ ರಾಮು ಸ್ತ್ರೀ-ಪುರುಷ ಪಾತ್ರಗಳಿವೆ. ಆಹುತಿ ಕಥೆಯಲ್ಲಿ ಸಂಪ್ರದಾಯಸ್ಥ ಕುಟುಂಬದ ಚಿತ್ರಣವಿದೆ. ಇಲ್ಲಿ ಸ್ತ್ರೀಯ ವಿವಾಹವನ್ನು ನಿರ್ಧರಿಸುವ ಅಧಿಕಾರ ತಂದೆಗೆ ಮಾತ್ರವಿದೆ. ಹೀಗೆ ಇಲ್ಲಿ ವಿಲಾಯಿತಿ ವಿದ್ಯಾಭ್ಯಾಸದ ಅವಶ್ಯಕತೆಯನ್ನು ಪೂರೈಸಲಾಗದೆ ಹೋದಾಗ ಮಹಿಳೆಯನ್ನು ತಿರಸ್ಕರಿಸುವ ಪುರುಷನ ಪಾತ್ರವಿದೆ. ಹೀಗೆ ಸ್ತ್ರೀಗೆ ತನ್ನ ಸಂಗಾತಿಯನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿದೆ. ಕುಟುಂಬವು ನಿರ್ಧರಿಸಿದ ಪುರುಷನನ್ನು ಒಪ್ಪಿಯೂ ಸಹ ಅವನಿಂದ ತಿರಸ್ಕೃತಳಾದ ಅವಳಿಗೆ ತನ್ನ ಜೀವನವನ್ನೇ ಮುಕ್ತಾಯಗೊಳಿಸಿಕೊಳ್ಳುವ ಆಯ್ಕೆ ಮಾತ್ರ ಉಳಿಯುವ ಸ್ತ್ರೀ ಪಾತ್ರವಿದೆ. ಹೀಗೆ ಕುಟುಂಬದ ಸದಸ್ಯರಿಂದ, ಇಲ್ಲವೇ ಸಂಗಾತಿಯಿಂದ ಬಂದ ನಿರ್ಧಾರ, ತೀರ್ಮಾನಗಳು ಪರಿಣಾಮ ಬೀರುವುದು ಕೇವಲ ಸ್ತ್ರೀಯರಿಗೆ ಮಾತ್ರ. ಅಲ್ಲದೆ 'ಅದೃಷ್ಟದ ಆಟ' ಕಥೆಯಲ್ಲಿ ಲತಾ ಕುಟುಂಬದ ಸಮ್ಮತಿಯಿಂದ ಪುರುಷನನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ದೊರಕಿದ್ದರೂ ಆ ಸಂಗಾತಿಯ ಉದ್ಯೋಗದ ಆಕಾಂಕ್ಷೆ, ಸ್ವಾಭಿಮಾನ ಅಡ್ಡ ಬಂದು ವಿವಾಹದ ಕಾಲಾವಧಿಯನ್ನು ಮುಂದೂಡಿದಾಗ ಕುಟುಂಬದ ಒತ್ತಾಯಕ್ಕೆ ಆ ಸಂಗಾತಿಯನ್ನು ಮರೆತು ಪರಪುರುಷನನ್ನು ವಿವಾಹವಾಗುವ ಸ್ತ್ರಿ ಚಿತ್ರವನ್ನು ಸಹಜಪಾತ್ರಗಳಂತೆ ಚಿತ್ರಿಸಲಾಗಿದೆ.

'ನನ್ನ ಮದುವೆ' ಕಥೆಯಲ್ಲಿ ಮಹಿಳೆ ಕುಟುಂಬದಿಂದ ಮೋಸ ಹೋಗಿ ಕುರುಡಿಯನ್ನು ವಿವಾಹವಾಗುವ ಪುರುಷನ ಚಿತ್ರವಿದೆ. 'ಮನುವಿನ ರಾಣಿ' ಕಥೆಯಲ್ಲಿ ಮೇಲಿನ ಎಲ್ಲಾ ಕುಟುಂಬಕ್ಕಿಂತ ಭಿನ್ನವಾದ ವೇಶ್ಯೆ ಕುಟುಂಬದ ಚಿತ್ರಣವಿದೆ. ಇಲ್ಲಿ ತಂದೆಯಿಲ್ಲದ ತಾಯಿಕುಟುಂಬವಿದೆ. ಇಲ್ಲಿ ತಾಯಿಯಿಂದಲೇ ತಾಯಿ-ಮಗಳ ಜೀವನವನ್ನು ಹಾಳು ಮಾಡಲು ಮುಂದಾಗುವ ಸ್ತ್ರೀ ಚಿತ್ರಣವನ್ನು ತರಲಾಗಿದೆ. ಇಲ್ಲಿ ತಾಯಿ ತನ್ನಂತೆ ಮಗಳು ಕಷ್ಟವನ್ನು ಅನುಭವಿಸಲಿ ಎಂಬಂತೆ ಮಗಳ ಪ್ರೇಮಕ್ಕೆ ಅವಕಾಶ ಕೊಡದೆ ತನಗಲ್ಲದ ಕುಟುಂಬ ಮಗಳಿಗೆ ದೊರೆಯದಂತೆ ಮಾಡುವ ಸ್ತ್ರೀ ಚಿತ್ರಣವಿದೆ. ಆದರೆ ಇಲ್ಲಿ ರಾಜಮ್ಮ ತಾಯಿಯ ವಿರೋಧದ ನಡುವೆಯು ತನ್ನ ಹುಚ್ಚ ಸಂಗಾತಿಯನ್ನು ಬಿಡದೆ ಅವನ ಸೇವೆ ಮಾಡುವ ಮೂಲಕ ತ್ಯಾಗಮಯಿ ವೇಶ್ಯೆಯ ಸ್ತ್ರೀ ಪಾತ್ರವನ್ನು ತರುವುದರ ಮೂಲಕ ವೇಶ್ಯೆಯರ ಬಗ್ಗೆ ಜನತೆಯ ಮನೋಭಾವನೆಯನ್ನು ಬದಲಾಯಿಸುವಂತೆ ಲೇಖಕಿಯ ಚಿಂತನೆಯಿದೆ. ಹೀಗೆ ಇಲ್ಲಿ ವೇಶ್ಯೆ ತನ್ನ ಕುಟುಂಬವನ್ನು ಕಟ್ಟಿಕೊಂಡಿದ್ದಾಳೆ. 'ಒಂದು ಚಿತ್ರ' ಕಥೆಯಲ್ಲಿ ರೋಹಿಣಿಗೆ ಪ್ರೌಢಶಿಕ್ಷಣ ಪಡೆಯುವಷ್ಟು ಅವಕಾಶ ಕುಟುಂಬದಿಂದ ದೊರೆತಿದ್ದು ಅದಕ್ಕೆ ತಕ್ಕಂತೆ ಸುಶಿಕ್ಷಿತಳಾದ ಅವಳಿಗೆ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಕುಟುಂಬವು ನೀಡುವುದಿಲ್ಲ. ಬದಲಿಗೆ ತಾನು ಪ್ರೇಮಿಸಿದ ಯುವಕನೇ ವಿವಾಹವಾದ ಯುವಕ ಎಂಬ ಒಂದೇ ಎಂಬ ತಂತ್ರವನ್ನು ಬಳಸುವುದರ ಮೂಲಕ ಲೇಖಕಿ ಕುಟುಂಬದಲ್ಲಿನ ಕಲಹಕ್ಕೆ ಅವಕಾಶ ಮಾಡಿಕೊಡದಿರುವ ಪರಸ್ಪರ ಸ್ತ್ರೀ-ಪುರುಷರ ಪಾತ್ರಗಳನ್ನು ತರಲಾಗಿದೆ. ಅಲ್ಲದೆ ಪರಸ್ಪರ ಗಂಡು-ಹೆಣ್ಣಿನ ಸ್ವಂತ ಆಯ್ಕೆಯಿಂದ ವಿವಾಹವಾದ ಕುಟುಂಬವು ಹೆಚ್ಚು ಬಾಳಿಕೆಯುಳ್ಳದ್ದು ಎಂಬುದನ್ನು 'ಮರದ ಬೊಂಬೆ' ಕಥೆಯಲ್ಲಿ ನಿರೂಪಿಸಲಾಗಿದೆ. ರೋಹಿಣಿ ತನ್ನ ತುಂಟತನದಿಂದ ತನ್ನ ಸಂಗಾತಿಗೆ ಮನುಷ್ಯ ನಡವಳಿಕೆಯನ್ನು ಕಲಿಸಿ ಅವನ ವ್ಯಕ್ತಿತ್ವವನ್ನು ಬದಲಾಯಿಸಿದ, ಬೆಳೆಸಿದ ಸ್ತ್ರೀ ಚಿತ್ರಣ ಇಲ್ಲಿದೆ. ಈ ಮೂಲಕ ಸ್ತ್ರೀಯ ಮಹತ್ವವನ್ನು ಗ್ರಹಿಸಬಹುದು.

ಮೇಲ್ವರ್ಗದ ಕುಟುಂಬಗಳಲ್ಲದೆ ಕೆಳವರ್ಗದ ಕುಟುಂಬದಲ್ಲಿ ಮಹಿಳೆಯು ಶೋಷಣೆಗೆ ಒಳಗಾಗಿದ್ದಾಳೆ. 'ಹೋಗಿಯೇ ಬಿಟ್ಟಿದ್ದ' ಕಥೆಯಲ್ಲಿ ತನ್ನ ಚಿಕ್ಕಪ್ಪನ ಇಚ್ಛೆಯಂತೆ ವಯಸ್ಸಾದ ಮುದುಕನನ್ನು ವಿವಾಹವಾಗದೆ ತನ್ನ ಸಂಗಾತಿಯಿಂದಲೇ ಸಾವಿಗೀಡಾಗುವ ಮುಸ್ಲಿಂ ಕುಟುಂಬದ ಲತೀಪಳ ಪಾತ್ರವಿದೆ. ಅದೇ ರೀತಿ 'ಮುನ್ನಾದಿನ' ಕಥೆಯಲ್ಲಿ ಇದಕ್ಕೆ ವಿರುದ್ಧವಾಗಿ ಚಿಕ್ಕಪ್ಪನ ಒಪ್ಪಿಗೆಯಿಂದ ಜೋಸೆಫ್‌ರ ಇಸ್ಮಾಯಿಲ್ ಕಾಕನನ್ನು ವಿವಾಹವಾಗಲು ಕುಟುಂಬದ ಒಪ್ಪಿಗೆ ಪಡೆಯುವ ಹುಸೇನ್‌ಬಿ ಸ್ತ್ರೀ ಪಾತ್ರವೂ ಇದೆ. ಹಾಗೆಯೇ ಮುಸ್ಲಿಂ ಕುಟುಂಬದಲ್ಲಿ ಸ್ತ್ರೀ ಪಾತ್ರವನ್ನು ಸ್ವಲ್ಪ ಬಿಗಿಯಾಗಿ ಹಾಗೂ ಸಡಿಲ ರೀತಿಯ ಕುಟುಂಬದ ವಿನ್ಯಾಸವನ್ನು ಚಿತ್ರಿಸಲಾಗಿದೆ.

ಒಟ್ಟಾರೆ ಎಲ್ಲ ಕಥೆಗಳಲ್ಲಿ ಲೇಖಕಿಗೆ ಕುಟುಂಬ ತುಂಬಾ ಮುಖ್ಯವಾಗಿದ್ದು ಸ್ತ್ರೀ ಕುಟುಂಬದ ಒಳಗಡೆಯ ತನ್ನ ಬದುಕನ್ನು ಕಟ್ಟಿಕೊಂಡು ನಿಯಂತ್ರಣದಲ್ಲಿ ಬದುಕಬೇಕಾಗಿದೆ. ಇಲ್ಲವಾದರೆ ಸಾವಿಗೀಡಾಗುವ ಸ್ತ್ರೀ ಪಾತ್ರಗಳಿವೆ. ಆದರೆ ಸ್ತ್ರೀಯ ಕಷ್ಟಗಳಿಗೆ ಕುಟುಂಬದ ಸದಸ್ಯರು ಹಾಗೂ ನೆರೆಹೊರೆಯವರು ಪಾತ್ರಧಾರಿಗಳಾದರೂ ಅಂತ್ಯದಲ್ಲಿ ಪಶ್ಚಾತ್ತಾಪದ ನೆಲೆಯಲ್ಲಿ ಸ್ತ್ರೀ–ಪುರುಷರ ಕುಟುಂಬದ ಸಂಬಂಧಗಳಿವೆ. ಇಲ್ಲಿ ಲೇಖಕಿ ಎಂದಿಗೂ ಕುಟುಂಬದಲ್ಲಿ ಸ್ತ್ರೀಯಾಗಲೀ–ಪುರುಷನಾಗಲೀ ಮೀರುವಿಕೆಗೆ ಅವಕಾಶ ಮಾಡಿಕೊಡುವುದಿಲ್ಲ. ಹಾಗಾಗಿ ಲೇಖಕಿಗೆ ಕುಟುಂಬ ಅತ್ಯಂತ ಮುಖ್ಯವಾಗಿದೆ ಎಂಬುದನ್ನು ಮೇಲಿನ ಪಾತ್ರಗಳ ಮೂಲಕ ಕಾಣಬಹುದಾಗಿದೆ.

೩.೩. ಸರಸ್ವತಿಬಾಯಿ ರಾಜವಾಡೆ

ಸರಸ್ವತಿಬಾಯಿ ರಾಜವಾಡೆಯವರ ಬಹುಪಾಲು ಕಥೆಗಳು ಸ್ತ್ರೀಪ್ರಧಾನ ಕಥೆಗಳಾಗಿವೆ. ಅವರ ಕಥೆಗಳಲ್ಲಿ ವಿವಿಧ ವರ್ಗದ ಭಿನ್ನಸ್ತರದ ಮಹಿಳಾ ಪಾತ್ರಗಳಿವೆ. ಉದಾಹರಣೆಗೆ ಬ್ರಾಹ್ಮಣ ಮಹಿಳೆ, ಬಡ ಮಹಿಳೆ, ಅವಿವಾಹಿತ ಮಹಿಳೆ, ಬಂಜೆ, ಗೃಹಿಣಿ, ವೇಶ್ಯೆ, ಪರಿತ್ಯಕ್ತೆ ಇತ್ಯಾದಿ ಸ್ತ್ರೀಪಾತ್ರಗಳಿವೆ. ಈ ಎಲ್ಲಾ ಕಥೆಗಳಲ್ಲಿ ಬ್ರಾಹ್ಮಣ ಮಹಿಳೆಯರು ಅನಾಥರಾಗಿದ್ದು ಬಂಧುಗಳ ಆಶ್ರಯದಲ್ಲಿ ಜೀವಿಸುತ್ತಿರುವವರಾಗಿದ್ದಾರೆ. ಅಲ್ಲದೆ ಇಲ್ಲಿ ಹೆಣ್ಣು ಹುಟ್ಟಿದ್ದಾಗಿನಿಂದ ಸಾಮಾಜಿಕ ಪಾತ್ರ ನಿರ್ವಹಿಸಲು ತರಬೇತಿ ನೀಡಲಾಗುತ್ತದೆ. ಹೆಣ್ಣಿನ ಜೀವನದ ಸಾರ್ಥಕತೆ ಮತ್ತು ಗುರಿ ವಿವಾಹದ ಕ್ರಿಯೆಗೆ ಒಳಪಟ್ಟು ಆ ಮೂಲಕ ಕುಟುಂಬವನ್ನು ಸೇರುವುದಾಗಿದೆ. ಹೆಣ್ಣಿನ ಸುರಕ್ಷಿತತೆ ಕೇವಲ ಕುಟುಂಬದಿಂದ ಮಾತ್ರ ಸಾಧ್ಯ. ಇಲ್ಲಿ ವಯಸ್ಕ ಹೆಣ್ಣಿಗೆ ವಿವಾಹ ತಡವಾದರೆ ಅದು ಪಾಪವೆಂದು, ಅಂತಹ ಹೆಣ್ಣನ್ನು ಕುಟುಂಬದಿಂದ ಬಹಿಷ್ಕರಿಸುವ ಸಾಮಾಜಿಕ ವ್ಯವಸ್ಥೆಯಿದೆ. ಹೀಗೆ ಇಲ್ಲಿ ಹೆಣ್ಣು ವಿವಾಹಿತಳಾಗುವುದು ಅವಳ ಅದೃಷ್ಟವೆಂಬಂತೆ ಭಾವಿಸಲಾಗಿದೆ.

ವಿವಾಹಕ್ಕೆ ಅಣಿಗೊಂಡ ಹೆಣ್ಣಿನಿಂದ ಸಮಾಜ ಅಪೇಕ್ಷಿಸುವ, ನಿರ್ವಹಿಸುವ ಪಾತ್ರ ತಾಯ್ತನದ ಯಾತನೆಗಳು ಕತೆಯ ಮೂಲವಸ್ತುವಾಗಿದೆ. ಈ ತಾಯ್ತನದಿಂದ ಮಾತ್ರ ಹೆಣ್ಣಿಗೆ ಕುಟುಂಬದಿಂದ ಹಾಗೂ ಸಮಾಜದಿಂದ ಪ್ರೀತಿ ಗೌರವಗಳು ಪ್ರಾಪ್ತಿಯಾಗುತ್ತದೆ. ಇಲ್ಲವಾದರೆ ಗಂಡ ಮರುವಿವಾಹವಾಗುತ್ತಾನೆ. ಹೀಗೆ ತನ್ನ ಸ್ಥಾನದಲ್ಲಿ ಮತ್ತೊಬ್ಬ ಹೆಣ್ಣನ್ನು ಕಲ್ಪಿಸಿಕೊಳ್ಳಲಾಗದ ಹೆಣ್ಣು ಅಸಹಾಯಕಳಾಗುತ್ತಾಳೆ. ಆಕೆಯು ಮಾನಸಿಕ ರೋಗಿಯಾಗುವ ಮೂಲಕ ಕುಟುಂಬದ ಅಲ್ಲಿನ ಸದಸ್ಯರ ಮನವನ್ನು ಕಲಕುವ ಪ್ರಯತ್ನ ಮಾಡುತ್ತಾಳೆ. ಹೆಣ್ಣು ಎಂದರೆ ಇಲ್ಲಿ ದಾಸಿಯಂತೆ ಪತಿಯ ಸೇವೆ ಮಾಡುವವರು, ಅದರಲ್ಲೇ ಸಂತೃಪ್ತಿ ಸುಖ-ಸಂತೋಷ ಪಡೆಯುವರಾಗಿದ್ದಾರೆ. ಇಲ್ಲಿ ಲೇಖಕಿ ಮಹಿಳೆಯರನ್ನು ಚಂಚಲ ಸ್ವಭಾವದರಂತೆ ಚಿತ್ರಿಸಿದ್ದಾರೆ. ಗಂಡನ ಹೊಗಳಿಕೆಗೆ ಉಬ್ಬುವ, ಮತ್ತಷ್ಟು ಸೇವೆ ಮಾಡುವ, ಅವನ ತೆಗಳಿಕೆಗೆ ಮುದುಡುವ

ಪುರುಷನ ಸ್ವಾರ್ಥವನ್ನು ಅರಿಯದ ಮುಗ್ಧೆಯರಾಗಿದ್ದಾರೆ. ಕುಟುಂಬದಲ್ಲಿನ ಸಣ್ಣಸಣ್ಣ ಸಂಗತಿಯನ್ನು ದೊಡ್ಡದಾಗಿಸಿ ಹೆಂಡತಿಯನ್ನು ಹೀಯಾಳಿಸಿ ಅವಳ ವಂಶವನ್ನೇ ತೆಗಳುವ ಹಕ್ಕು ಗಂಡನಿಗಿದ್ದು ಅಧಿಕಾರಯುತವಾಗಿ ಚಲಾಯಿಸುತ್ತಾನೆ. ಪತಿಯ ಈ ವರ್ತನೆಯಿಂದ ಹೆಚ್ಚೆಂದರೆ ಮೌನವ್ರತ ಕೈಗೊಳ್ಳುವಳು. ಆದರೂ ತನ್ನ ಪತಿಗೆ ಮಾಡುವ ಸೇವೆಯಲ್ಲಿ ಸ್ವಲ್ಪವೂ ವ್ಯತ್ಯಾಸವಾಗದಂತೆ ಎಚ್ಚರ ವಹಿಸುತ್ತಾಳೆ. ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಹೆಣ್ಣು ವಿಲಾಯಿತಿ ಶಿಕ್ಷಣ ಪಡೆದ ಪತಿಗೆ ಹೊಂದಿಕೊಳ್ಳಬೇಕಾಗುತ್ತದೆ. ಅವನ ಆಜ್ಞೆಯನ್ನು ತಪ್ಪದೇ ಪಾಲಿಸುವಂತೆ, ಆ ಮೂಲಕ ನಾಗರಿಕ ಶಿಸ್ತನ್ನು ಅಳವಡಿಸಿಕೊಳ್ಳುವ ಉಪದೇಶ ಹಿತವಾಕ್ಯ ನೀಡುವಂತೆ ಸ್ತ್ರೀಪಾತ್ರವನ್ನು 'ಸಂದೇಶ' ಕಥೆಯ ಮೂಲಕ ಪತ್ರದ ತಂತ್ರಗಾರಿಕೆಯನ್ನು ಬಳಸಲಾಗಿದೆ. ಅಲ್ಲದೆ ಹೆಣ್ಣು ಆಧುನಿಕ ವಿಚಾರಗಳನ್ನು ಹೊಂದಿ ಸಾಂಪ್ರದಾಯಿಕ ವಾತಾವರಣವನ್ನು ಅಲ್ಲಗಳೆಯುವ ಪ್ರಜ್ಞಾವಂತಿಕೆಯನ್ನು ಈ ರೀತಿಯ ಪಾತ್ರದ ಮೂಲಕ ಕಾಣಬಹುದಾಗಿದೆ.

ಇಲ್ಲಿನ ಬಹುಪಾಲು ಮಹಿಳೆಯರು ಶ್ರೀಮಂತ ಹಾಗೂ ಬಡ ಕುಟುಂಬದಿಂದ ಬಂದ ಮಹಿಳೆಯರಾಗಿದ್ದಾರೆ. ಬಾಲ್ಯದಲ್ಲಿ ವಿವಾಹ ಕ್ರಿಯೆಗೆ ಒಳಪಟ್ಟು ಪತಿಯನ್ನು ಕಳೆದುಕೊಂಡು ಬಾಲವಿಧವೆಯರಾಗಿ ಬದುಕನ್ನು ಸಾಗಿಸುವವರು. ಆದರೆ ಕೆಲವೊಮ್ಮೆ ಪ್ರಕೃತಿ ಸಹಜವಾದ ಲೈಂಗಿಕ ಇಚ್ಛೆಗೆ ಬಲಿಯಾದವರು, ಇಲ್ಲವೇ ಕುಟುಂಬದ ಇತರ ಸದಸ್ಯರಿಂದ ಇಲ್ಲವೆ ಪರಪುರುಷರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ ತಾಯ್ತನವನ್ನು ಪಡೆದವರಿದ್ದಾರೆ. ಹೀಗೆ ತನ್ನದಲ್ಲದ ತಪ್ಪಿಗೆ ಮನೆಯವರಿಂದ ಹಾಗೂ ಸಮಾಜದಿಂದ ತಿರಸ್ಕೃತರಾಗಿ ಶಿಕ್ಷೆಯನ್ನು ಅನುಭವಿಸುತ್ತಾ ಬದುಕುವವರು. ಆದರೆ ಈ ಮಹಿಳೆಯರು ಹೀಗೆ ಕುಟುಂಬದಿಂದ, ಸಮಾಜದಿಂದ ತಿರಸ್ಕೃತರಾದರೂ ತಮ್ಮ ಬದುಕನ್ನು ಸಾವಿಗೆದೂಡಿಕೊಳ್ಳುವ ಹೇಡಿಗಳಾಗದೆ ಭಿಕ್ಷಾಟನೆ ಮಾಡುವ ಮಾರ್ಗದ ಮೂಲಕ ಬದುಕನ್ನು ಸಾಗಿಸುವ ಜೀವನ ಪ್ರೀತಿಯುಳ್ಳವರು. ಅಲ್ಲದೆ ಇಲ್ಲಿನ ಬಾಲವಿಧವೆ ಹಾಗೂ ಪರಿತ್ಯಕ್ತ ಹೆಣ್ಣುಗಳು ವಿಧವಾಶ್ರಮವನ್ನು ನಂಬಿ ಬದುಕುತ್ತಿದ್ದು ಆದರೆ ಅಲ್ಲಿಯೂ ಹೆಣ್ಣಿನ ದೇಹವನ್ನು ವ್ಯಾಪಾರೀಕರಣಗೊಳಿಸಿ ಬದುಕುವ ಮೇಲಧಿಕಾರಿಯ ನಿಯಂತ್ರಣಕ್ಕೆ ಒಳಗಾಗಿ ಬದುಕುವವರು. ಹೀಗೆ ಮೇಲಧಿಕಾರಿಯ ಒತ್ತಾಸೆಯಿಂದ ತಂದೆಯ ವಯಸ್ಸಿನ ಪುರುಷನನ್ನು ವಿವಾಹವಾಗದೆ ಅನ್ಯ ದಾರಿಯಿಲ್ಲ. ಹೀಗೆ ವಂಶೋದ್ಧಾರಕ್ಕಾಗಿ ವಿಧವೆಯನ್ನು ವಿವಾಹವಾದ ಪುರುಷ ಮಕ್ಕಳನ್ನು ಪಡೆಯುವ ಸಾಮರ್ಥ್ಯ, ದೇಹಸ್ಥಿತಿ ಶಕ್ತಿ ತನಗಿಲ್ಲದಿದ್ದರೂ ಹೆಣ್ಣನ್ನು 'ಗೊಡ್ಡು' ಎಂದು ದೂಷಿಸುವ ಪುರುಷನ ಕ್ರೌರ್ಯವನ್ನು ಕಾಣಬಹುದು. ಹೀಗೆ ಹೆಣ್ಣು ತಾನು ತಾಯಿಯಾದ ನಿಜಸ್ಥಿತಿಯನ್ನು, ವಾಸ್ತವವನ್ನು ತಿಳಿಸಿದಾಗ ಅವಳನ್ನು ಕುಟುಂಬದಿಂದ ಹೊರಹಾಕಲಾಗುತ್ತದೆ. ಆ ಅಧಿಕಾರ ಪುರುಷ ಪಡೆದಿರುತ್ತಾನೆ. ಹೀಗೆ ಬಾಲವಿಧವೆ ಕೊನೆಗೆ ಅಸಹಾಯಕವಾಗಿ ಹೇಗೋ ಬದುಕನ್ನು ಕಟ್ಟಿಕೊಂಡು ಬದುಕುವ ಸ್ಥಿತಿಯಿದೆ ಹೊರತು ಮಹಿಳೆಗೆ ಪರ್ಯಾಯ ದಾರಿಗಳನ್ನು ಸೂಚಿಸುವಲ್ಲಿ ಲೇಖಕಿ ಸೋತಿದಾರೆ.

ಹೀಗೆ ಬಾಲವಿಧವೆಯನ್ನು ಒಂದಲ್ಲಾ ಒಂದು ರೀತಿಯಲ್ಲಿ ತಮ್ಮ ಸ್ವಾರ್ಥಕ್ಕಾಗಿ ಪುರುಷ ಸಮಾಜ ಉಪಯೋಗಿಸುತ್ತಾರೆ. ಅದು ಕುಟುಂಬದ ಸದಸ್ಯರಿಂದ ಇಲ್ಲವೇ ಸಮಾಜ ವ್ಯವಸ್ಥೆಯ ಭಾಗವಾಗಿ ನಡೆಯುವ ಘಟನೆಗಳನ್ನು ಇಲ್ಲಿ ಲೇಖಕಿ ವಿಧವಾವಿವಾಹ ಸಂದರ್ಭವನ್ನು ಕಥೆಯಲ್ಲಿ ಪ್ರಸ್ತಾಪಿಸಿದ್ದಾರೆ.

ವಿಧವೆಗೆ ಮರುವಿವಾಹವನ್ನು ಮಾಡುವ ಪಾತ್ರವನ್ನು ಕಥೆಯಲ್ಲಿ ತರಲು ಸಾಧ್ಯವಾಗಿಲ್ಲ. ಪಾರಂಪರಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಮೂಲಕ ಮರುವಿವಾಹ ಹೆಣ್ಣಿಗೆ ಪಾಪಪ್ರಜ್ಞೆ ಎಂದು ಭಾವಿಸುವ ಸ್ತ್ರೀ ಪಾತ್ರಗಳು ಇವರ ಕತೆಯಲ್ಲಿವೆ. ಕತೆಗಾರ್ತಿಯ ಸಾಂಪ್ರದಾಯಿಕ ಮನೋಭಾವನೆಯನ್ನು ಇಲ್ಲಿ ಕಾಣಬಹುದು. ಅಲ್ಲದೆ ಕೆಳವರ್ಗದ ಕುರೂಪಿ ಮಹಿಳಾ ಪಾತ್ರವಿದ್ದು ತನ್ನದಲ್ಲದ ತಪ್ಪಿಗೆ ಶಿಕ್ಷೆಯನ್ನು ಅನುಭವಿಸಿ ಸಾವಿಗೀಡಾಗುವ ಚಿತ್ರಣವಿದೆ.

ರಾಜವಾಡೆಯವರ ಕಥೆಗಳಲ್ಲಿ ಮೇಲ್ವರ್ಗದ ಬ್ರಾಹ್ಮಣ ಕುಟುಂಬಗಳಿದ್ದು ಪ್ರಧಾನ ವ್ಯವಸ್ಥೆಯ ನಿಯಂತ್ರಣಕ್ಕೆ ಒಳಪಟ್ಟಿವೆ. ಇಲ್ಲಿ ಹೆಣ್ಣು ಹುಟ್ಟಿದಾಗಿನಿಂದ ಈ ಕುಟುಂಬವನ್ನು ಸೇರಲು ತರಬೇತಿ ಪಡೆಯುತ್ತಿರುತ್ತಾಳೆ. ಹೆಣ್ಣಿಗೆ ಕುಟುಂಬವೇ ಭದ್ರತೆಯನ್ನು ಮತ್ತು ಆಶ್ರಯವನ್ನು ನೀಡುವ ತಾಣವಾಗಿದೆ. ಈ ಕುಟುಂಬದಲ್ಲಿನ ಮಹಿಳಾ ಪಾತ್ರಗಳು ಅಂದರೆ ಅತ್ತೆ, ತಾಯಿ ಪಾತ್ರ ನಿರ್ವಹಿಸುವರು. ಪುರುಷರಿಗೆ ಪೂರಕ ಪಾತ್ರಗಳಾಗಿ ಕಾರ್ಯ ನಿರ್ವಹಿಸಿ ಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾರೆ. ಇಲ್ಲಿನ ಮಹಿಳೆಯರಿಗೆ ಸ್ವಂತ ಅಸ್ತಿತ್ವವಿಲ್ಲ. ಪುರುಷ ವ್ಯವಸ್ಥೆಯ ಆಧೀನದಲ್ಲಿ ಬದುಕು ಸಾಗಿಸುವುದಿದೆ. ಕತೆಗಾರ್ತಿಯು ಹೆಣ್ಣು-ಗಂಡಿನ ಆ ಕಾಲದ ವರ್ತಮಾನದ ಸಮಸ್ಯೆಗಳನ್ನು ಬಿಚ್ಚಿಡುತ್ತಾರಾದರೂ ಪಾತ್ರಗಳ ಮುಖಾಮುಖಿಯಾದಾಗ ಘರ್ಷಣೆಗೆ ಇಳಿಯುವುದಿಲ್ಲ. ಇರುವ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಸನಾತನವಾದಿಗಳಂತೆ ಇಲ್ಲಿನ ಮಹಿಳಾ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಸ್ತ್ರೀವಾದಿ ಮನೋಧೋರಣೆ ರಾಜವಾಡೆಯವರ ಕಥನದಲ್ಲಿ ಬಹುತೇಕ ಕಂಡುಬರುವುದಿಲ್ಲ.

'ಆಹುತಿ" ಕಥೆಯಲ್ಲಿ ಸೊಸೆ ಲಕ್ಷ್ಮೀ ಮಾನಸಿಕ ರೋಗಿಯಾಗಿ ನರಳುತ್ತಿದ್ದರೂ ಅದನ್ನು ಅಲಕ್ಷಿಸಿ ಮಗನ ಸ್ಥಿತಿಯ ಬಗ್ಗೆ ಚಿಂತೆ ಪಡುವ ತಾಯಿ ಮಗನ ಈ ಸ್ಥಿತಿಗೆ ಸೊಸೆಯಲ್ಲೇ ದೋಷವನ್ನು ಹುಡುಕುತ್ತಾಳೆ. ಕುಟುಂಬದ ಅಂತಿಮ ತೀರ್ಮಾನವಿರುವುದು ತಂದೆಯ ಕೈಯಲ್ಲಿ. ವಿವಾಹ, ಹಬ್ಬ-ಹರಿದಿನ ಯಾವುದೇ ಕಾರ್ಯವಿರಲಿ ತಂದೆಯ ತೀರ್ಪು ಅಂತಿಮವಾದದ್ದು. ಇಲ್ಲಿ ಸ್ತ್ರೀಯ ಅಭಿಪ್ರಾಯಕ್ಕೆ ಮನ್ನಣೆಯಿಲ್ಲ. ಹೆಚ್ಚೆಂದರೆ ಮಗನ ಅಭಿಪ್ರಾಯಕ್ಕೆ ಮನ್ನಣೆಯಿದೆ ಹೊರತು ಮಗಳ ಅಭಿಪ್ರಾಯಕ್ಕಲ್ಲ. ಹೀಗೆ ಕುಟುಂಬದ ಸಂಪೂರ್ಣ ನಿಯಂತ್ರಣಕ್ಕೆ ಮಹಿಳೆ ಒಳಪಟ್ಟಿದ್ದಾಳೆ.

ಲೇಖಕಿಯು ಈ ಎಲ್ಲಾ ಕಥೆಗಳಲ್ಲಿ ಮಹಿಳೆಯ ಈ ಸ್ಥಿತಿಗೆ ಪುರುಷರನ್ನು ದೂಷಿಸುವ ಪಾತ್ರಗಳನ್ನು ತರದೆ ಮಹಿಳೆಯ ಈ ಸ್ಥಿತಿಗೆ ವ್ಯವಸ್ಥೆಯನ್ನು ಕಾರಣವಾಗಿಸಿದ್ದಾರೆ. ಅಲ್ಲದೆ ಕೆಲವೊಮ್ಮೆ ಮಹಿಳೆಯ ಉದ್ಧಾರವನ್ನು ಪುರುಷ ಪಾತ್ರದ ಮೂಲಕ ಸಫಲಗೊಳ್ಳುವಂತೆ ಮಾಡಿದ್ದಾರೆ. ಈ ಮುಂದಾಲೋಚನೆ ಕುರಿತು ಹಾಗೂ ಹೆಣ್ಣಿನ ಸ್ಥಿತಿಗತಿಯ ಬದಲಾವಣೆಯನ್ನು ಆ ಕಾಲದಲ್ಲಿಯೇ ಲೇಖಕಿ ಗ್ರಹಿಸಿರುವುದು ಅತ್ಯಂತ ಮುಖ್ಯವಾಗಿದೆ.

ಇಲ್ಲಿನ ಕಥೆಗಳಲ್ಲಿ ಪುರುಷ ಪಾತ್ರಗಳು ಮಹಿಳೆಯ ಉದ್ಧಾರಕ್ಕೆ ಪೂರಕ ಪಾತ್ರಗಳಾಗಿ ರೂಪಿಸಲ್ಪಟ್ಟಿವೆ. ಇಲ್ಲಿ ಮಹಿಳೆಯರ ಸ್ಥಿತಿಯನ್ನು ಬದಲಾಯಿಸುವ ಪುರುಷ ಪಾತ್ರಗಳ ಚಿತ್ರಣವಿದೆ. ಹೆಣ್ಣಿನ ಈ ಸ್ಥಿತಿಗೆ ವ್ಯವಸ್ಥೆಯೇ ಮೂಲ ಕಾರಣವಾಗಿದೆ. ವ್ಯವಸ್ಥಿತ ಸಮಾಜದಲ್ಲಿಯ ಯಥಾಚಿತ್ರಣವನ್ನು ತೋರಿಸುವ ಕಥೆಗಾರ್ತಿ ಸಮಾಜದಲ್ಲಿ ಮಹಿಳೆಯ ಈ ಸ್ಥಿತಿಗೆ ಪರ್ಯಾಯ ಮಾರ್ಗಗಳನ್ನು ಸೂಚಿಸದೆ ಇರುವುದಿಲ್ಲ. ಇದು ಕತೆಗಾರ್ತಿಯ ಮಹಿಳಾ ಪರವಾದ ಧೋರಣೆಯಲ್ಲಿ ಕಾಣುವ ಮಿತಿಯಾಗಿದೆ. ಅಲ್ಲದೆ ಆ ಕಾಲದ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಮಹಿಳಾ ಪಾತ್ರವನ್ನು ತಂದಿರುವುದು ಉಚಿತವಾಗಿದೆ.

೩.೪. ಶ್ಯಾಮಲಾದೇವಿ ಬೆಳಗಾಂವಕರ್

ಶ್ಯಾಮಲಾದೇವಿ ಬೆಳಗಾಂವಕರ್ ಅವರು ಉತ್ತರ ಕರ್ನಾಟಕದ ಮೊದಲ ಮಹಿಳಾ ಕತೆಗಾರ್ತಿ. ಇವರು "ಹೂ ಬಿಸಿಲು" ಮತ್ತು "ಹೊಂಬಿಸಿಲು" ಕಥಾಸಂಕಲನಗಳನ್ನು ರಚಿಸಿದ್ದಾರೆ. ಇವರ ಕತೆಗಳಲ್ಲಿ ವಿಭಿನ್ನ ಸ್ತ್ರೀ ಪಾತ್ರಗಳನ್ನು ಕಾಣಬಹುದು. ಪ್ರಮುಖವಾಗಿ ವಿಧವೆ, ವಂಚಿತ ಸ್ತ್ರೀ, ಪರಿತ್ಯಕ್ತೆ, ವಿವಾಹವನ್ನು ಎದುರು ನೋಡುತ್ತಿರುವ ಕನ್ಯೆ, ವೇಶ್ಯೆ, ವೈದ್ಯೆ, ಕೂಲಿ ಮಹಿಳೆ, ಗೃಹಿಣಿ, ಬ್ರಾಹ್ಮಣ ಮಹಿಳೆ, ಗೌಡಿತಿ ಹೀಗೆ ವಿವಿಧ ಸ್ತರದ ಹಾಗೂ ವಿವಿಧ ವರ್ಗದ ಮಹಿಳಾ ಪಾತ್ರಗಳನ್ನು ಗುರುತಿಸಲಾಗಿದೆ. ಕತೆಗಳಲ್ಲಿ ಕೂಡುಕುಟುಂಬ ಹಾಗೂ ಸೀಮಿತ ಸದಸ್ಯರ ಕುಟುಂಬಗಳಿದ್ದು, ಬಡ ಹಾಗೂ ಶ್ರೀಮಂತ ಕುಟುಂಬಗಳೆಂದು ಗುರುತಿಸಲಾಗಿದೆ.

ಈ ಕತೆಗಳಲ್ಲಿ ಬರುವ ತರುಣಿಯರು ತಮ್ಮ ಇಷ್ಟಕ್ಕೆ ಅನುಸಾರವಾಗಿ ಜೀವನ ಸಂಗಾತಿಯನ್ನು ಆಯ್ಕೆಮಾಡಿಕೊಳ್ಳುವ ಅವಕಾಶ ಕೊಡದೆ ಅವರನ್ನು ಪರಾಧೀನತೆಯಲ್ಲಿ ಬದುಕುವಂತೆ ಮಾಡಿ ಸಾಮಾಜಿಕ, ಕೌಟುಂಬಿಕ ಒತ್ತಡಗಳಿಗೆ ಬಲಿಯಾಗುವಂತಹ ಮಹಿಳೆಯರು ಇದ್ದಾರೆ. ಇಲ್ಲಿ ಕಡ್ಡಾಯವಾಗುವ ಮಧುವೆಗೆ ಒಪ್ಪಿಕೊಂಡು ಬದುಕಬೇಕಾದ ನೀಲೆ(ನೀಲೆಯ ಸಂಸಾರ), ಇಷ್ಟಪಟ್ಟ ವರನ ಬದಲಿಗೆ ಮುದಿ ತಂದೆಯನ್ನು ಒಪ್ಪಿಕೊಂಡ ಸರೋಜ(ದೊಡ್ಡಮ್ಮ ನೋಡಿದ ವರ), ಸತ್ಯಭಾಮೆ(ಸವತಿಯರು) ಇವರು ವಿವಾಹಿತ ಮರುಷನಿಗೆ ಒಪ್ಪಿಸಿಕೊಳ್ಳಲೇಬೇಕಾದ ಅನಿವಾರ್ಯತೆಯಿದೆ. ನೀಲೆ ಒಲ್ಲದ ಮನಸ್ಸಿನಿಂದ ತನ್ನ ಪತಿ ಮತ್ತು ಅವನ ಮನೆಯವರ ಮನಗೆದ್ದು ಗಂಡನ ಮನೆ ಮತ್ತು ಹುಟ್ಟಿದ ಮನೆಗಳನ್ನು ರಕ್ಷಿಸುವ ಸಲುವಾಗಿ ವೈಯಕ್ತಿಕ ಭಾವನೆಗಳನ್ನು ಬಲಿ ಕೊಡುತ್ತಾಳೆ.

"ಪ್ರತಿ ತಿಂಗಳಲ್ಲಿಯೂ ಒಂದು ದಿವಸ ಮಾತ್ರ ಧಾರವಾಡಕ್ಕೆ ಬಂದು ಶಂಕರಮಾಮಾನಲ್ಲಿ ಅತ್ಯಾನಂದದಿಂದ್ದಿದ್ದು ಹೋಗುವಳು. ಶಂಕರನ ನಗೆಮುಖ ನೋಡಿ ಹಿರಿಹಿರಿ ಹಿಗ್ಗುವಳು. ಅವಳ ಪತಿಯೂ ಇದಕ್ಕೆ ಅಡ್ಡವಾಗಿ ಬರಲಿಲ್ಲ. ದೇವರ ಮೇಲಿನ ಹೂವು ತಪ್ಪೀತು. ಅವಳ ಈ ಪರಿಪಾಠವೆಂದಿಗೂ ತಪ್ಪಲಿಲ್ಲ"(ನೀಲೆಯ ಸಂಸಾರ, ಪುಟ-೧೩). ಕತೆಯ ನಿರೂಪಣೆ ಓದುಗರಲ್ಲಿ ಸಂದಿಗ್ಧತೆಯನ್ನು ಉಂಟು ಮಾಡುವಂತಿದೆ. ಈ ಕತೆಯನ್ನು ಹೋಲುವ ಮತ್ತೊಂದು ಕತೆ "ದೊಡ್ಡಮ್ಮ ನೋಡಿದ ವರ" ಕತೆಯಲ್ಲಿ ಸರೋಜ ಹಾಗೂ ಅವಳು ವಿವಾಹವಾಗಲು ಒಪ್ಪಿದ ಅವಳ ಮಲಮಗ ಬಾಸ್ಕರನನ್ನು ದುಃಖಿಸಿದಾಗಲೆಲ್ಲ ಪರಸ್ಪರ ಸಂತೈಸುವ ಸಂಬಂಧದ ಚಿತ್ರಣ ಸೋಜಿಗವೆನಿಸುತ್ತದೆ.

"ಸವತಿಯರು" ಕತೆಯಲ್ಲಿನ ಕಾವೇರಿ ತಂದೆ ತಾಯಿಯರ ಇಚ್ಚೆಯಂತೆ ಎರಡನೇ ಸಂಬಂಧದ ಕೃಷ್ಣರಾಯನ ಕೈಹಿಡಿದು ಸತ್ಯಭಾಮೆಯೆಂಬ ಹೆಸರು ಪಡೆದು ಮನ ತುಂಬುತ್ತಾಳೆ. ಮಕ್ಕಳಿಲ್ಲದ ಬಂಜೆಯೆಂದು ಮನೆಯವರೆಲ್ಲರ ನೋವು, ತಿರಸ್ಕಾರಕ್ಕೆ ಒಳಗಾಗಿದ್ದ ಸವತಿ ರುಕ್ಮಿಣಿಯನ್ನು ತನ್ನಂತೆಯೇ ಪರಿಸ್ಥಿತಿಯ ಬಲಿಪಶುವಾಗಿರುವವಳು ಎಂದು ತಿಳಿದು ಪ್ರೀತಿಯಿಂದ ಕಾಣುತ್ತಾಳೆ. ಹಿರಿತನವನ್ನು ಮೆರೆಯುತ್ತಾಳೆ. ಹೀಗೆ ಅವಳ ಗಂಡ ಹಾಗೂ ರುಕ್ಮಿಣಿಯ ಬದುಕನ್ನು ಸತ್ಯಭಾಮೆ ಬೆಳಗುತ್ತಾಳೆ. ತನ್ನಂತೆಯೇ ಸೊಸೆಯಾಗಿ ಬಂದ ರುಕ್ಮಿಣಿಯ ದುಃಸ್ಥಿತಿಗೆ ಸ್ಪಂದಿಸುವಲ್ಲಿ ಅದನ್ನು ಕಾರ್ಯರೂಪಕ್ಕೆ ಇಳಿಸುವಲ್ಲಿ ಅವಳು ತೋರುವ ಜಾಣತನಗಳು ಈ ಪಾತ್ರದಲ್ಲಿ ಚೆನ್ನಾಗಿ ಚಿತ್ರಿತವಾಗಿವೆ.

ಶ್ಯಾಮಲ ಕತೆಗಳಲ್ಲಿ ಅನನ್ಯತೆಯ ಕುರುಹುಗಳು ಕಾಣಿಸಿಕೊಂಡರು ಅವು ಸ್ಪಷ್ಟವಾಗಿಲ್ಲ. ಇವರ ಎಲ್ಲಾ ಕತೆಗಳಲ್ಲಿ ಬರುವ ಯಾವುದೇ ಸ್ತ್ರೀ ಪಾತ್ರವು ಒಂದು ವ್ಯಕ್ತಿಯಾಗಿ ಗುರುತಿಸಲ್ಪಡದೆ ಪತ್ನಿ, ಮಗಳು, ವಿಧವೆ, ತಾಯಿ, ಪರಿತ್ಯಕ್ತೆ ಇತ್ಯಾದಿ ಪುರುಷಸಂಬಂಧಿ ಪಾತ್ರಗಳಾಗಿ ಗುರುತಿಸಲ್ಪಟ್ಟಿವೆ. ಅನೇಕ ಸ್ತ್ರೀ ಪಾತ್ರಗಳು ತಮ್ಮತನವನ್ನು ಯಾವುದೋ ಒಂದು ಬಗೆಯಲ್ಲಿ ಅಭಿವ್ಯಕ್ತಿಸಿವೆ. "ನಡೆದು ಬಂದ ಲಕ್ಮೀ" ಕತೆಯ ದ್ಯಾಂವಕ್ಕ, "ಕಂತಿಯ ದೇಶಾಂತರ" ಕತೆಯ ಕಂತಿ ಮತ್ತು "ಸವತಿಯರು" ಕತೆಯ ಸತ್ಯಭಾಮೆ ಮುಖ್ಯ ಪಾತ್ರಗಳಾಗಿವೆ.

ಲೇಖಕಿಯ "ಸ್ನೇಹದರ್ಶನ", "ತಾಯಿ ಮಾತಾಯಿ", "ಕರುಳು ಕತ್ತರಿ" ಕತೆಗಳಲ್ಲಿ ವೇಶ್ಯೆಯರ ಬದುಕಿನ ಬವಣೆಗಳಿವೆ. ಪ್ರೇಮ, ಶಾಲಿನಿ ಈ ಬವಣೆಗೆ ಒಳಗಾಗಿದ್ದಾರೆ. ಇದರ ಹೊರತಾಗಿ ವಿವಾಹವಾಗಿ ಉತ್ತಮ ಜೀವನ ನಡೆಸುತ್ತಾರೆ. ಆದರೆ "ಕರುಳು ಕತ್ತರಿ" ಕತೆಯಲ್ಲಿ ತಂದೆ-ತಾಯಿಯರೇ ತಮ್ಮ ಹೆಣ್ಣು ಮಕ್ಕಳನ್ನು ಈ ಪರಿಸ್ಥಿತಿಗೆ ಒಳಗಾಗುವಂತೆ ಮಾಡಿದ್ದಾರೆ. ಈ ಮೂಲಕ ತಮ್ಮ ಬದುಕನ್ನು ಸಾಗಿಸುತ್ತಾರೆ. ಈ ಹಿನ್ನೆಲೆಯಲ್ಲಿ ವೇಶ್ಯೆ ಚಂದ್ರ ಬದುಕು ದುರಂತದಲ್ಲಿ ಕೊನೆಗೊಳ್ಳುವ ಪಾತ್ರವಾಗಿ ನಿರೂಪಣೆಗೊಂಡಿದೆ.

ಕತೆಗಾರ್ತಿಯು ರಚಿಸಿದ "ಕಂತಿಯ ದೇಶಾಂತರ" ಕತೆಯ ಕಂತಿ ಕೆಳವರ್ಗ ಹಾಗೂ ಬೇಡರ ಜಾತಿಯ ಹೆಣ್ಣುಮಗಳು. ಗಂಡನ ಹಿಂಸೆ ತಾಳಲಾರದೆ ಗಂಡನನ್ನು ತೊರೆದಳು. ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಬದುಕಿದಳು. ಕಂತಿಗೆ ಬದುಕಿನ ಬಗ್ಗೆ ಪ್ರೀತಿಯಿರುವುದರಿಂದ ದುರಂತದಲ್ಲಿ ಕೊನೆಗೊಳ್ಳದೆ ಜೀವನ್ಮುಖಿಯಾಗುತ್ತದೆ. ಹೀಗೆ ಕುಟುಂಬದ ಬಗ್ಗೆಯಿರುವ ಪ್ರೀತಿಯಿಂದ ಬದುಕನ್ನು ದುರಂತಗೊಳಿಸಿಕೊಳ್ಳದೆ ಜೀವನದ ಸುಖಕ್ಕೆ ಸ್ಪಂದಿಸುತ್ತಾ, ಜೀವಿಸುವ ಪರಿ ಅನನ್ಯವಾಗಿದೆ. ಒಂದು ಹೊಸ ಬದುಕಿನ ನೆಮ್ಮದಿಗೆ ಸ್ಪಂದಿಸುವ ಸಂದರ್ಭ ಬಂದಾಗ ತನ್ನ ಗಂಡನಲ್ಲದ ಮಾದೇವನ ಪ್ರೀತಿಗೆ ತೆರೆದುಕೊಳ್ಳುತ್ತಾಳೆ. ವಿವಾಹ ಮಾಡಿಕೊಂಡು ಹುತಾತ್ಮೆಯ ನರಳುವಿಕೆಯಿಂದ ಪಾರಾಗಿ ಜೀವನ್ಮುಖಿಯಾಗುತ್ತಾಳೆ.

ಮೇಲಿನ ಕತೆಯನ್ನು ಹೋಲುವ ಮತ್ತೊಂದು ಕತೆಯಾದ "ನಡೆದು ಬಂದ ಲಕ್ಷ್ಮೀ" ಕತೆಯ ಜೋಗತಿ ದ್ಯಾಂವಕ್ಕ ಕುಡುಕ ಗಂಡನ ಹಿಂಸೆ ಸಹಿಸದೆ ಮನೆಯಿಂದ ಹೊರಹಾಕುತ್ತಾಳೆ. "ಗಂಡ್ಸೀನಾಧಾರ ಇಲ್ದ ಯಾವ ಹೆಂಗಸು ಬಾಳುವೆ ಮಾಡಿ ಮುಂದಕ ಬರ್ತಾಳ?"(ಪು-೬೦) ಎಂದು ಹೀಯಾಳಿಸಿದ ಗಂಡನ ಸವಾಲನ್ನು ಸ್ವೀಕರಿಸಿ ಏರು ಜವ್ವನದಲ್ಲಿ ತನ್ನತನವನ್ನು ಮರೆಯುತ್ತಾ ಮಗನನ್ನು ಬೆಳೆಸಿ ದುಡಿದು ಆರ್ಥಿಕವಾಗಿ ಸಬಲಳಾಗುತ್ತಾಳೆ. ನೈತಿಕತೆಯಿಂದ ಬದುಕುತ್ತಾಳೆ. ಈ ಮೂಲಕ ಮಗನ ಬದುಕನ್ನು ಸರಿಪಡಿಸುತ್ತಾಳೆ.

ಹೀಗೆ ಬಹಳ ಹಿಂದೆಯೆ ಹೆಣ್ಣಿನ ಕರ್ತೃತ್ವ ಶಕ್ತಿಯನ್ನು ಹತ್ತಿಕ್ಕುವ ಅಂಶಗಳು ವಿವಾಹದ ಚೌಕಟ್ಟಿನಲ್ಲಿರುವುದನ್ನು ಪರೋಕ್ಷವಾಗಿ ತೋರಿಸುವ ಪಾತ್ರಗಳಾಗಿವೆ. ಈ ಕತೆಯಲ್ಲಿ ಬರುವ ದ್ರೌಪದಿ ಗಂಡನ ಮನೆಯಲ್ಲಿ ಹಿಂಸೆ ಅನುಭವಿಸಿ ದ್ಯಾಂವಕ್ಕನ ಮಗನೊಂದಿಗೆ ಹೋಗುತ್ತಾಳೆ. ಈ ಸಂದಿಗ್ಧತೆಯಲ್ಲಿ ದ್ಯಾಂವಕ್ಕ ದ್ರೌಪದಿಯ ಬದುಕನ್ನು ಉಳಿಸಬೇಕೆಂದು ನಿರ್ಧರಿಸಿದಳು. ಹೀಗಾಗಿ ಅವಳನ್ನು ಮೊದಲನೇ ವಿವಾಹದಿಂದ ಬಿಡುಗಡೆಗೊಳಿಸಿ ಮಗನ ಜೊತೆ ಪುನಃ ವಿವಾಹ ಮಾಡಿಸುತ್ತಾಳೆ. ಅವಳನ್ನು ನಡೆದು ಬಂದ ಲಕ್ಷ್ಮಿಯಾಗಿ ಮನೆ ತುಂಬಿಸಿಕೊಳ್ಳುತ್ತಾಳೆ. ಹೀಗೆ ಗಂಡನ ಪ್ರೀತಿ ಕಾಣದೆ ದುಡಿಮೆಯೇ ಬದುಕಾಗಿಸಿದ ದ್ಯಾಂವಕ್ಕ ಎರಡು ಜೀವಗಳನ್ನು ಅಗಲಿಸದೆ, ಸಮಾಜದ ನಿಂದೆ ಟೀಕೆಗಳನ್ನು ಲೆಕ್ಕಿಸದೆ ವಿವಾಹ ಮಾಡಿ ತನ್ನ ಸಹಜ ಸಿದ್ಧ ಉದಾರತೆಯನ್ನು ಮೆರೆಯುತ್ತಾಳೆ.

ಶ್ಯಾಮಲ ಅವರ ಕತೆಗಳಲ್ಲಿ ನಿರೂಪಿತವಾಗಿರುವ ಕುಟುಂಬಗಳು ವಿಭಿನ್ನ ಸ್ವರೂಪದವು. ಇಲ್ಲಿ ಪ್ರಮುಖವಾಗಿ ಆಧುನಿಕ, ಸರಳ ಹಾಗೂ ಕೂಡುಕುಟುಂಬಗಳು ಕಂಡು ಬರುತ್ತವೆ. ಇವು ಪಿತೃ ಪ್ರಧಾನ ವ್ಯವಸ್ಥೆಗೆ ಒಳಗಾಗಿವೆ. ಇಲ್ಲಿ ಹಿರಿಯ ಪುರುಷನೇ ಮನೆಯ ಇತರ ಸದಸ್ಯರನ್ನು ನಿಯಂತ್ರಿಸುತ್ತಿರುತ್ತಾನೆ. ಪುರುಷ ಪಾತ್ರಗಳಿಗೆ ಪೂರಕವಾಗಿ ಮಹಿಳಾ ಪಾತ್ರಗಳಿವೆ.

ಕುಟುಂಬದ ಹಿರಿಯರು ಮುಖ್ಯವಾಗಿ ತಂದೆ-ತಾಯಿ, ದೊಡ್ಡಮ್ಮ ಪಾತ್ರಗಳು ಮನೆಯ ಹೆಣ್ಣುಮಕ್ಕಳಿಂದ ಬರುವ ದುಡಿಮೆಯನ್ನು ನೆಚ್ಚಿಕೊಂಡು ಬದುಕುತ್ತಾರೆ. ಮನೆಯು

ಚಲನಶೀಲಗೊಳ್ಳುವುದು ಮಹಿಳೆಯರಿಂದ. ಮನೆಯ ಕಾರ್ಯಶೀಲತೆಗೆ ಹೆಣ್ಣುಮಕ್ಕಳನ್ನು ಅನಿವಾರ್ಯವಾಗಿ ಅನೈತಿಕತಗೆ ತಳ್ಳುವ, ಆ ಮೂಲಕ ಹೆಣ್ಣುಮಗಳ ಬದುಕನ್ನು ಅಂತ್ಯಗೊಳಿಸುವ ಕುಟಿಲ ಪಾತ್ರಗಳ ಹಿರಿಯರು. ಆದರೆ ಹೀಗೆ ಮಾಡುವುದು ಆರ್ಥಿಕ ಅಸಹಾಯಕತೆಯಿಂದ. ಇಲ್ಲಿ ಬದುಕು ಮುಖ್ಯವಾಗಿ ಇತರೆ ರಕ್ತಸಂಬಂಧಗಳು ಬದುಕಿನ ಮುಂದೆ ನಗಣ್ಯವಾಗಿವೆ.

ಕೆಲವು ಹೆಣ್ಣುಮಕ್ಕಳು ಸ್ವವಿವೇಕದಿಂದ ಹಿರಿಯರ ಹೊರೆಯನ್ನು ಕಡಿಮೆ ಮಾಡಲು ಎರಡನೇ ಸಂಬಂಧದ ವಿವಾಹಕ್ಕೆ ಸಿದ್ಧರಾಗುವ ಪ್ರಬುದ್ಧರು. ಆ ಕುಟುಂಬದಲ್ಲಿಯೂ ಪತಿಯ ಮನವೊಲಿಸಿ ಮೊದಲನೆಯ ಪತ್ನಿಯ ಪರಿಸ್ಥಿತಿಯನ್ನು ಬದಲಾಯಿಸುವ, ಆ ಮೂಲಕ ಕುಟುಂಬವನ್ನು ರಕ್ಷಿಸುವ ಸುಶಿಕ್ಷಿತ ಪಾತ್ರಗಳಾಗಿ ಮೂಡಿವೆ. ಇದಕ್ಕೆ ವಿಭಿನ್ನವಾಗಿ ಅಕ್ಷರಸ್ಥ ಪತಿ–ಪತ್ನಿಯರು ಸಮಾಜದಲ್ಲಿ ಉತ್ತಮ ಅಂತಸ್ತು, ಅಧಿಕಾರಗಳಿದ್ದು ಪರಸ್ಪರಲ್ಲಿ ಹೊಂದಾಣಿಕೆಗಳಿಲ್ಲದೆ ಒಂಟಿತನ ಅನುಭವಿಸುವರು. ತಮ್ಮ ಬೇಕು–ಬೇಡಗಳಿಗೆ ಇತರರನ್ನು ಅವಲಂಬಿಸಿದ ಸಲುವಾಗಿ ಕುಟುಂಬದಲ್ಲಿ ಅಶಾಂತಿ ನೆಲೆಸಿರುವ ನಿರೂಪಣೆಯಿದೆ.

ಈ ಮೇಲಿನ ಬಹುಪಾಲು ಕತೆಗಳಲ್ಲಿ ಬರುವ ಪುರುಷ ಪಾತ್ರಗಳು ಅದರಲ್ಲಿಯೂ ಮನೆಯ ಹಿರಿಯ ಪಾತ್ರಗಳಿಗಿಂತ ಕಿರಿಯ ಪಾತ್ರಗಳು ಮಹಿಳಾ ಬದುಕಿಗೆ ಪೂರಕ ಪಾತ್ರಗಳಾಗಿ ಕಾಣುತ್ತವೆ. "ನೀಲೆಯ ಸಂಸಾರ" ಕತೆಯ ಶಂಕರ, "ಕರುಳು ಕತ್ತರಿ" ಕತೆಯ ವೆಂಕಣ್ಣ ನಾಯಕ, 'ನಡೆದು ಬಂದ ಲಕ್ಷ್ಮೀ' ಕತೆಯ ಸಾದೇವ, "ಭೀಕರ ಪಾರುಪತ್ಯ" ಕತೆಯ ರಾಮಜೀ, "ಸ್ನೇಹ ದರ್ಶನ" ಕತೆಯ ಶಶಿಧರ, "ವಸಂತರಾಯನ ಮದುವೆ" ಕತೆಯ ವಸಂತ ಇತ್ಯಾದಿ ಸಜ್ಜನಿಕೆ ಪಾತ್ರಗಳಿಂದ ಮಹಿಳೆ ನೆಮ್ಮದಿಯಿಂದ ಬದುಕಲು ಸಾಧ್ಯವಾಗಿದೆ. ಹೀಗೆ ಇಲ್ಲಿನ ಮಹಿಳೆ ಅಸುರಕ್ಷಿತ ವಾತಾವರಣದಲ್ಲಿ ತಮ್ಮನ್ನು ತಾವು ಸಂರಕ್ಷಿಸುವ ಜೀವನ ಪ್ರೀತಿಯುಳ್ಳವರು.

ಶ್ಯಾಮಲ ಅವರ ಕತೆಗಳ ನಿರೂಪಣೆ ಪ್ರಥಮ ಪುರುಷದ ಸ್ವಗತ ಮಾದರಿಯಲ್ಲಿದೆ. ಇವರ "ದಾಜೀಬನ ಬ್ಯಾಂಕು", "ನಡೆದು ಬಂದ ಲಕ್ಷ್ಮೀ", "ಕಂತಿಯ ದೇಶಾಂತರ" ಕತೆಗಳಲ್ಲಿ ಉತ್ತರ ಕರ್ನಾಟಕದ ಆಡುಭಾಷೆ ಸಹಜ ರೀತಿಯಲ್ಲಿ ಅಭಿವ್ಯಕ್ತವಾಗಿದೆ.

"ಕಂತಿಯ ದೇಶಾಂತರ" ಕತೆಯಲ್ಲಿನ ಕಂತಿಯ ಮಗ ಸಾದೇವ ಪರಸ್ತ್ರೀ ಜೊತೆ ಒಡನಾಟದ ಸುದ್ದಿ ತಿಳಿದು "ನನ್ನ ಮಗಾ, ನಾನೂ ತಂಗಳು ರೊಟ್ಟೀ ತಿನ್ನೋದು ಮರೀ ಅನ್ನ ಅಂವಗ. ಆ ಹುಡುಗಿನ್ ಸಂಕಾ ಜೇಲಿನ ಹೊಚ್ಚಲಾ ಮೆಟ್ಟಿಗೊಡಾಕಿಲ್ಲಾ. ಹಿಂತಾಕಿ ಮಗನ ದಶೀಂದ ಹೀಂಗ ಹೋತ ಆ ಹುಡುಗೀ ಅಂತ, ಮಂದೀ ಕಡಿಶೀಂದ ಅನಗೊಡಾಕಿಲ್ಲ, ತಿಳೀತಿಲ್ಲೋ? ಹಂತ ಪರಸಂಗ ಬಿದ್ರ, ನನ್ನ ದುಡ್ಡೂ ಹೋಗಲಿ, ದುಗ್ಗಾಣೀನೂ ಹೋಗ್ಲಿ, ನನ್ನ ಹೊಲಾ ಹೋಗ್ಲಿ. ಆಕೀ ದಶೀಂದ ನನ್ ಮಗನ ಜೀವಾ ಹರೀತಿದ್ರ, ಆಕಿನ್ನ ಆ ಯಮನ ದವಡ್ಯಾಗಿನಿಂದ ಬಿಡಿಸಿಕ್ಯಾರಾ ತಂದು, ನನ್ ಮಗನ ಸಂಗಾಟ ಲಗಣಾ ಮಾಡಿ

ನನ್ನ ಮನ್ಯಾಗ ತಂದಿಟಗೊಂತೇನಿ"(ಪು-೧೬೨) ಎಂಬ ಧ್ವನಿ ಆಕೆಯ ಕುಟುಂಬ ಪ್ರೀತಿಯನ್ನು ಆ ಪಾತ್ರದ ಮೂಲಕವೇ ಅಭಿವ್ಯಕ್ತಿಸುವ ನಿರೂಪಣೆಯಿದೆ.

"ಮೂರುನೂರಾ ಅರುವತ್ತೈದು?" ಕತೆಯು ಪತ್ರದ ಮೂಲಕ ನಿರೂಪಣಗೊಳ್ಳುವ ವಿನ್ಯಾಸವಿದೆ. ಇಲ್ಲಿ ಪಾತ್ರದ ಹೆಸರುಗಳಿಲ್ಲದೆ ಅಣ್ಣ-ತಂಗಿ ಸಂಬಂದಗಳಿಂದ ನಿರೂಪಿತವಾಗಿವೆ. ತನ್ನ ಗೆಳತಿ ಇಂದುಮತಿಯನ್ನು ನಿರಾಕರಿಸಿದ ಅಣ್ಣನ ಬಗ್ಗೆಯಿರುವ ವಿರೋದವನ್ನು ಈ ರೀತಿ ಪತ್ರದ ಮೂಲದ ಅಭಿವ್ಯಕ್ತಿಸಲಾಗಿದೆ. "ನಮ್ಮಣ್ಣ ದುಡ್ಡಿಗಾಗಿ ಬಾಯಿ ತೆರೆದಿದ್ದಾನೆ ಅಂತೆ, ದುಡ್ಡಿನ ಆಸೆಗಾಗಿ ಅಲ್ಲ", ದವಾಖಾನೆ ಬೆಳೆಸಲು ನಿಮ್ಮ ತಾಯಿಗೆ ವರದಕ್ಷಿಣೆ ಹೊರತಾಗಿ ಎರಡು ಸಾವಿರದ ಪ್ರಾಮಿಸರಿ ನೋಟು ಕೇಳಿದನು! ವರವಿಕ್ರಯದ ದಿನಗಳಮ್ಮಾ ಇವು!(ಪು-೧೦೨) ಈ ಮೂಲಕ ಹೆಣ್ಣಿನ ಅತಂತ್ರ ಪರಿಸ್ಥಿತಿಯನ್ನು ಕಾಣಬಹುದಾಗಿದೆ. ಇವರ "ಮೂವರು ನಾಗರಿಕರು", "ಮಹಾಶಿವರಾತ್ರಿ", "ವಸಂತರಾಯನ ಮದುವೆ" ಕತೆಗಳು ಹಾಸ್ಯ ಕತೆಗಳಾಗಿವೆ. ಇವುಗಳಲ್ಲಿ ಮಕ್ಕಳ ಸ್ವಭಾವ ಅಭಿವ್ಯಕ್ತಿಗೊಂಡಿದೆ.

೩.೫. ಸರಸ್ವತಿದೇವಿ ಗೌಡರ

ಸರಸ್ವತಿದೇವಿ ಗೌಡರ 'ಪುಣ್ಯಸ್ಮೃತಿ' ಕಥಾಸಂಕಲನದಲ್ಲಿ ಬರುವ ಬಹುಪಾಲು ಮಹಿಳಾ ಪಾತ್ರಗಳು ಕುಟುಂಬದ ಚೌಕಟ್ಟಿನಲ್ಲಿವೆ. ಈ ವಲಯದಲ್ಲಿ ತನಗೆ ವಿಧಿಸಿರುವ ಪಾತ್ರಗಳನ್ನು ಅತ್ಯಂತ ಜಾಗರೂಕತೆಯಿಂದ ನಿರ್ವಹಿಸುವ ಮಹಿಳಾ ಪಾತ್ರಗಳ ನಿರೂಪಣೆಯಿವೆ. ಈ ಕತೆಗಳಲ್ಲಿ ಬರುವ ಮಹಿಳೆಯರು ಮಗಳಾಗಿ, ಪತ್ನಿಯಾಗಿ, ಅಕ್ಕಂದಿರಾಗಿ, ತಾಯಿಯಾಗಿ ಹೀಗೆ ವಿವಿಧ ಸ್ಥಾನಗಳನ್ನು ನಿರ್ವಹಿಸುವ ಜವಾಬ್ದಾರಿಯುತ ಮಹಿಳೆಯಾಗಿ ಗುರುತಿಸಿಕೊಂಡಿದ್ದಾಳೆ. ಈ ಮಹಿಳೆಯರನ್ನು ಪುರುಷನ ನೆಲೆಯಲ್ಲಿ ಗುರುತಿಸಿಕೊಳ್ಳುವ ವಿನ್ಯಾಸವಿದೆ. ಹೀಗೆ ಸಮಾಜ ತನಗೆ ವಿಧಿಸಿದ ಜವಾಬ್ದಾರಿಯನ್ನು ಅತ್ಯಂತ ಜಾಗರೂಕತೆಯಿಂದ ನಿರ್ವಹಿಸುತ್ತಾಳೆ. ಆ ಮೂಲಕ ತನ್ನ ಬದುಕಿಗೆ ಅರ್ಥವನ್ನು ಕಂಡುಕೊಳ್ಳುವ ಆದರ್ಶ ಸ್ತ್ರೀಪಾತ್ರಗಳನ್ನು ಚಿತ್ರಿಸಲಾಗಿದೆ. ಉದಾಹರಣೆಗೆ 'ಅಕ್ಕನ ತದಿಗೆ' ಕಥೆಯಲ್ಲಿನ ಕುಸುಮ, "ವಾಗ್ದತ್ತವಧು' ಕಥೆಯಲ್ಲಿನ ಶೈಲಾ, 'ಜೀವದಾನ' ಕತೆಯ ಉಮಾ, 'ಸೋತು ಗೆದ್ದವಳು' ಕಥೆಯ ಗಂಗಮ್ಮ ಹಾಗೂ ಮಾಲತಿ ಇಂತಹ ಪಾತ್ರಗಳಾಗಿ ಕಂಡುಬರುತ್ತವೆ. ಈ ಕಥೆಗಳಲ್ಲಿನ ಸ್ತ್ರೀ ಪಾತ್ರಗಳು ಸಾಂಪ್ರದಾಯಿಕ ಚೌಕಟ್ಟಿನ ಕುಟುಂಬದಲ್ಲಿ ಬದುಕಿದ ಇವರಿಗೆ ಸ್ವಂತ ಆಯ್ಕೆಗಳಿಲ್ಲ. ಕುಟುಂಬದ ಒಳಗಿದ್ದು, ಅದರ ಪರಿಮಿತಿಯಲ್ಲಿ ಬದುಕುವ ಸಂದಿಗ್ಧತೆಗಳು ಕತೆಯಲ್ಲಿದೆ. ಉದಾಹರಣೆಗೆ 'ವಾಗ್ದತ್ತ ವಧು' ಕತೆಯ ಶೈಲಾ ತನ್ನ ಅಜ್ಜ ನಿಶ್ಚಯಿಸಿದ ಸೋದರಮಾವನನ್ನು ತನ್ನ ಪತಿಯಾಗಿ ಸ್ವೀಕರಿಸಲು ನಿರ್ಧರಿಸುತ್ತಾಳೆ. ಕಾರಣ ಅಪ್ರಾಪ್ತ ವಯಸ್ಸಿನಲ್ಲಿದ್ದ ಶೈಲಾ ವಯಸ್ಕ ಹಂತಕ್ಕೆ ಬರುವುದಕ್ಕಿಂತ ಮುಂಚೆ ಬಾಲ್ಯದಲ್ಲಿ ಹಿರಿಯರು ನಿಶ್ಚಯಿಸಿದ ವಿವಾಹವೆಂದು ಅದನ್ನು

ಒಪ್ಪಿಕೊಂಡು ಬದುಕುತ್ತಾಳೆ. ಆದರೆ ಈ ಬದ್ಧತೆ ಪ್ರಶ್ನೆ ಶೈಲಾಳ ಗಂಡನಿಗಿರದೆ ಪರಸ್ತ್ರೀಯನ್ನು ವಿವಾಹವಾಗುವುದರ ಮೂಲಕ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಹೀಗೆ ಪುರುಷನಿಗೆ ಕಟ್ಟುಪಾಡುಗಳನ್ನು ಮೀರುವಿಕೆಯೂ ಸಹಜವಾಗಿದೆ. ಆದರೆ ಈ ಸಹಜತೆ ಶೈಲಾಳಿಗಿಲ್ಲದೆ ಮುಂದಿನ ಜನ್ಮದಲ್ಲಾದರೂ ಅವನನ್ನೇ ವಿವಾಹವಾಗುವ ಆಕಾಂಕ್ಷೆವುಳ್ಳವಳಾಗಿ ತನ್ನ ಪಾವಿತ್ರ್ಯತೆಯನ್ನು ಸಾಧಿಸುವುದೇ ಅವಳಿಗೆ ಮುಖ್ಯವಾಗುತ್ತದೆ. ಅವಳು ವಿವಾಹ ಬಂಧನದಿಂದ ಶಾಶ್ವತವಾಗಿ ಬಿಡುಗಡೆ ಹೊಂದಿ ಸಮಾಜ ಕಾರ್ಯಕರ್ತೆಯಾಗಿ ರೂಪುಗೊಳ್ಳುತ್ತಾಳೆ. ಕತೆಯಲ್ಲಿ ಮಹಿಳೆಯ ಕುರಿತಾಗಿ ಪರ್ಯಾಯ ದಾರಿಗಳನ್ನು ಹುಡುಕುವ, ಬದುಕುವ ನೆಲೆಗಟ್ಟಿನಲ್ಲಿ ಸ್ತ್ರೀಪಾತ್ರಗಳನ್ನು ತರಲಾಗಿದೆ. ಆದರೂ ಹೀಗೆ ಪರ್ಯಾಯ ದಾರಿಗಳನ್ನು ಕಾಣಿಸುವುದು ಲೇಖಕಿಗೆ ಹೆಚ್ಚು ಸಾಧ್ಯವಾಗಿಲ್ಲ.

ಇಲ್ಲಿನ ಬಹುಪಾಲು ಕುಟುಂಬಗಳಲ್ಲಿ ತಾಯಿಯಿಲ್ಲದ ತಂದೆಯಿರುವ ಕುಟುಂಬಗಳಿವೆ. ಇಲ್ಲವೇ ಇದಕ್ಕೆ ಭಿನ್ನವಾಗಿ ಎರಡು ಸಂಬಂಧಗಳನ್ನು ಕಳೆದುಕೊಂಡು ಒಬ್ಬಂಟಿಯಿರುವ ಮಹಿಳೆಯರಿದ್ದಾರೆ. ಇವರು ಬಂಧುಗಳ ಅಧೀನದಲ್ಲಿ ಜೀವಿಸುವವರಾಗಿದ್ದು, ಇಂತಹ ಸಂದರ್ಭದಲ್ಲಿ ವಿವಾಹ ಅವರಿಗೆ ಬಿಡುಗಡೆಯ ಸಂಕೇತವಾಗಿ ಕಾಣುತ್ತದೆ. ಹೀಗೆ ತಮ್ಮನ್ನು ಒಂದು ಕುಟುಂಬದ ಒಳಗೆ ಪ್ರವೇಶ ಪಡೆಯುವುದೇ ದೊಡ್ಡ ಸಾಧನೆಯಾಗಿ ಪರಿಗಣಿಸುತ್ತದೆ. ಕುಟುಂಬದಲ್ಲಿ ತಾಯಿಯಿಲ್ಲದಾಗ ಆ ಕುಟುಂಬದ ಹಿರಿಯ ಮಗಳು ತಾಯಿ ಪಾತ್ರವನ್ನು ನಿರ್ವಹಿಸಲು ಸ್ವಪ್ರಜ್ಞೆಯಿಂದಲೇ ಮುಂದಾಗುತ್ತಾಳೆ. ಕುಟುಂಬದ ನೊಗವನ್ನು ಹೊತ್ತು ತಂದೆಗೆ ನೆರವಾಗುತ್ತಾಳೆ. ತನ್ನ ಸೋದರ-ಸೋದರಿಯರು ಹಾಗೂ ತಂದೆಗೂ ಸಹ ತಾಯಿಯಾಗಿ ತನ್ನ ವಾತ್ಸಲ್ಯವನ್ನು ನೀಡುತ್ತಾಳೆ. ಹೀಗೆ ಕುಟುಂಬದ ಜವಾಬ್ದಾರಿಯನ್ನು ಅತ್ಯಂತ ಜಾಗರೂಕತೆಯಿಂದ ನಿರ್ವಹಿಸುತ್ತಾಳೆ. ಈ ಕಾರಣಕ್ಕಾಗಿ ತನ್ನ ವಿವಾಹವನ್ನು ತಡೆಯುವಲ್ಲಿ ಮುಂದಾಗುತ್ತಾಳೆ. ಹೀಗೆ ಮನೆ ಜವಾಬ್ದಾರಿಯನ್ನು ಅತ್ಯಂತ ಪ್ರೀತಿಯಿಂದ ನಿರ್ವಹಿಸುತ್ತಾ ಎಲ್ಲರ ಪ್ರೀತಿಗೆ ಪಾತ್ರಳಾಗಿ ಆ ಮೂಲಕ ತನ್ನ ಬದುಕಿಗೆ ಅರ್ಥವನ್ನು ಕಂಡುಕೊಳ್ಳುತ್ತಾಳೆ. ಹೀಗೆ ಈ ಕತೆಗಳಲ್ಲಿ ತನ್ನತನದ ಬಗ್ಗೆ ಆಲೋಚಿಸಿದ ಸ್ತ್ರೀ ಪಾತ್ರಗಳು ಕಂಡುಬರುತ್ತವೆ. 'ಬಿದಿಗೆ ಚಂದ್ರ' ಕಥೆಯ ಕುಸುಮ ಮುಖ್ಯ ಉದಾಹರಣೆಯಾಗಿ ಕಾಣಬಹುದು.

ವಿವಾಹ ಎಂಬ ಚೌಕಟ್ಟಿನೊಳಗೆ ಪ್ರವೇಶಿಸಿದ ಹೆಣ್ಣು ಪತಿಯ ಕುಟುಂಬದಲ್ಲಿ ತನ್ನ ಸ್ಥಾನವನ್ನು ಭದ್ರಗೊಳಿಸುವುದು ತನ್ನ ಶ್ರಮದಿಂದಲೇ. ಹೀಗೆ ಎಲ್ಲರಿಗೂ ಹೊಂದಿಕೊಂಡು ಹೋಗುವುದರಲ್ಲೇ ಪ್ರೀತಿಯನ್ನು ಕಾಣುತ್ತಾಳೆ ಮತ್ತು ಅವಳು ಆ ಕುಟುಂಬದ ಸದಸ್ಯರ ಪ್ರೀತಿಗೆ ಪಾತ್ರಳಾಗುತ್ತಾಳೆ. 'ಸೋತು ಗೆದ್ದವಳು' ಕಥೆಯ ಗಂಗಮ್ಮ ಇದಕ್ಕೆ ಉದಾಹರಣೆ. ಈ ಮಹಿಳೆಯು ಕುಟುಂಬದಲ್ಲಿ ತನ್ನ ಸ್ಥಾನವನ್ನು ಪಡೆದುಕೊಂಡರೂ ಆ ಸ್ಥಾನ ಶಾಶ್ವತವಾಗಿಲ್ಲ. ಕಾರಣ ತಾಯ್ತನವನ್ನು ಕಳೆದುಕೊಂಡಿದ್ದಾಳೆ. ಆದರೆ ಅಲ್ಲಿಯೂ ವಿಚಲಿತಳಾಗದೆ ಆ ಕುಟುಂಬದ ಪರಿಸ್ಥಿತಿಯನ್ನು ಅರಿತು ಪತಿಗೆ ಮರುವಿವಾಹ ಮಾಡುವುದರ ಮೂಲಕ ಸವತಿಯ

ಮಕ್ಕಳನ್ನು ತನ್ನ ಮಕ್ಕಳೆಂದು ಸಾಕಿ ಸಲಹುವಳು. ಆ ಮಕ್ಕಳು ತನ್ನ ತಾಯಿಗಿಂತಲೂ ಹೆಚ್ಚಾಗಿ ಹೊಂದಿಕೊಳ್ಳುವುವು. ಹೀಗೆ ಕುಟುಂಬದಲ್ಲಿ ಎಲ್ಲರಿಗೂ ಪ್ರೀತಿಯನ್ನು ಹಂಚಿ ಮನೆವಾರ್ತೆಯನ್ನು ನಿಭಾಯಿಸುವಳು. ಕುಟುಂಬದಲ್ಲಿ ದಣಿವಿಲ್ಲದೆ ದುಡಿಯುವ ಗಂಗಮ್ಮ ತನ್ನತನವನ್ನು ಮರೆತು ತ್ಯಾಗದಲ್ಲಿ ಸಾರ್ಥಕತೆಯನ್ನು ಪಡೆದುಕೊಂಡವಳು. ಇದೇ ಕಥೆಯಲ್ಲಿ ಬರುವ ಮಾಲತಿ ಯಾವುದೇ ತಪ್ಪನ್ನು ಮಾಡದೇ ವಿನಾಕಾರಣ ಪತಿಯಿಂದ ತಿರಸ್ಕೃತಳಾಗಿದ್ದಾಳೆ. ಹೀಗೆ ಪತಿಯು ವಿವಾಹದ ಸಂದರ್ಭದಲ್ಲಿ ಬರಬೇಕಾದ ಹಣ ಸಂದಾಯವಾಗಿಲ್ಲವೆಂದು ತಿರಸ್ಕರಿಸುವನು. ಹೀಗೆ ಹೆಣ್ಣನ್ನು ಒಂದು ಸರಕಾಗಿ ಪರಿಗಣಿಸಲಾಗಿದೆ. ಆದರೆ ಮಾಲತಿ ಎಂಬ ಮಹಿಳೆ ತನ್ನ ಸ್ಥಾನವನ್ನು ಭದ್ರಗೊಳಿಸಲು ಸಾಕಷ್ಟು ಪ್ರಯತ್ನಪಟ್ಟರೂ ಕೊನೆಗೆ ಸಾಧ್ಯವಾಗದೆ ತನ್ನ ಗಂಡನು ಕಾನೂನುಬಾಹಿರವಾಗಿ ವಿವಾಹವಾದ ಮತ್ತೊಬ್ಬ ಸ್ತ್ರೀಗೆ ಅನ್ಯಾಯವಾಗದಿರಲೆಂದು ಅವಳ ಬದುಕನ್ನು ಕಟ್ಟಿಕೊಡಲು ತನ್ನ ಸ್ಥಾನವನ್ನು ತೆರುವುಗೊಳಿಸಿ ಬಿಡುಗಡೆ ಪಡೆದುಕೊಂಡಳು. ಹೀಗೆ ಸಮಾಜದಲ್ಲಿ ವರದಕ್ಷಿಣೆಗೆ ನಿಷೇಧ ಕಾಯ್ದೆ, ಬಹುಪತ್ನಿತ್ವ ಪ್ರತಿಬಂಧಕ ಕಾಯ್ದೆಗಳಿದ್ದರೂ ಅವು ಬರಹದಲ್ಲಿ ಮಾತ್ರ ಇದ್ದು ಮಹಿಳೆಯ ಜೀವನದಲ್ಲಿ ಅವಳ ಸಮಸ್ಯೆಗಳಿಗೆ ನೆರವಾಗಲಾರವು. ಬದಲಿಗೆ ಪುರುಷರಿಗೆ ಮತ್ತಷ್ಟು ಮಹಿಳೆಯರನ್ನು ಶೋಷಣೆಗೊಳಿಸಲು ಒಳದಾರಿಗಳನ್ನು ಮಾಡಿಕೊಡುತ್ತದೆ. ಸಾಮಾಜಿಕ ಅಸಮಾನತೆಯನ್ನು ಈ ಕಥೆಯ ವಿನ್ಯಾಸಗಳಲ್ಲಿ ಕತೆಗಾರ್ತಿಯು ಕತೆಯ ತತ್ವವಾಗಿ ತಂದಿರುವುದನ್ನು ಕಾಣುತ್ತದೆ. ಇವರ ಕಥೆಗಳಲ್ಲಿ ಬರುವ ತಾಯಿ ಪಾತ್ರದ ಮಹಿಳೆಯರು ಪತಿಯ ಕುಟುಂಬದ ಮುಂದುವರಿಕೆಗೆ ಗಂಡುಮಗು ಪಡೆದುಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ಕುಟುಂಬ ಸದಸ್ಯರ ಈ ಬೇಡಿಕೆಯನ್ನು ಪೂರೈಸಲು ತನ್ನ ದೇಹವನ್ನು ಈ ಕಾರ್ಯಕ್ಕೆ ನಿರಂತರವಾಗಿ ಅಣಿಗೊಳಿಸುವಳು. ಈ ಹಿನ್ನೆಲೆಯಲ್ಲಿ ಅತ್ತೆ, ಗಂಡ ತನ್ನ ಈ ಅವಸ್ಥೆಯಲ್ಲಿ ಎಷ್ಟು ನೆರವಾದರು ಎಂಬುದನ್ನು ಪರಾಮರ್ಶಿಸಿಕೊಳ್ಳುತ್ತಾಳೆ. ಆದರೆ ಅಂತ್ಯದಲ್ಲಿ ತನ್ನ ಪ್ರಾಣವನ್ನು ಅಣಿಗೊಳಿಸಿಯಾದರೂ ಗಂಡುಮಗುವನ್ನು ಹೆತ್ತು ತನ್ನ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸುತ್ತಾಳೆ. ಕುಟುಂಬದ ಒತ್ತಾಸೆಯನ್ನು ಪೂರೈಸುವ ಮಹಿಳಾ ವಿನ್ಯಾಸ ಕಥೆಯಲ್ಲಿದೆ. ಇವರ ಕಥೆಗಳಲ್ಲಿನ ಪುರುಷ ಪಾತ್ರಗಳನ್ನು ಕುರಿತು ಹೇಳುವುದಾದರೆ 'ಅಕ್ಕನ ತದಿಗೆ' ಕಥೆಯಲ್ಲಿ ವಿಶ್ವನಾಥ, 'ವಾಗ್ದತ್ತವಧು' ಕಥೆಯ ಶ್ರೀನಿವಾಸರಾಯ, ಪ್ರಕಾಶ, 'ಸೋತು ಗೆದ್ದವಳು' ಕಥೆಯ ಚಂದ್ರಶೇಖರ ಇವರೆಲ್ಲ ತಂದೆಯಾಗಿ, ಗಂಡನಾಗಿ, ಅವರ ಸ್ತ್ರೀಯರಿಗೆ ಮನೆಯ ಎಲ್ಲಾ ಕೆಲಸಗಳನ್ನು ವಹಿಸಿ ಅವಳಿಂದ ಹೆಚ್ಚು ಶ್ರಮ ನಿರೀಕ್ಷಿಸಿದವರು. ಆದರೆ ತಮ್ಮ ಈ ವರ್ತನೆಗೆ ಪಶ್ಚಾತ್ತಾಪ ಪಡುವವರೂ ಆಗಿದ್ದಾರೆ. ಇವರ ವರ್ತನೆಗಳು ಮಿತಿಮೀರಿದಾಗ ಕಥೆಯಲ್ಲಿ ಸಮಾಜ ಹಾಕಿದ ನೀತಿ ನಿಯಮಗಳನ್ನು ದಾಟಿ ತನ್ನ ಮನ ಬಂದಂತೆ ಸ್ವಾತಂತ್ರ್ಯದ ಉಪಯೋಗವನ್ನು ಬಳಸಿಕೊಂಡಾಗ ಆಗುವ ಅನಾಹುತವನ್ನು

ತೋರಿಸಿದೆ. 'ಅದೃಷ್ಟ ಪರೀಕ್ಷೆ' ಕಥೆಯಲ್ಲಿ ಮೌಢ್ಯತೆಗೆ ಬಲಿಯಾಗಿ ತಮ್ಮ ಬದುಕನ್ನು ದುರಂತಗೊಳಿಸುವವರಿಗೆ ಎಚ್ಚರಿಕೆ ಮೂಡಿಸುವ ವಿನ್ಯಾಸಗಳು ಇವರ ಕಥೆಗಳಲ್ಲಿ ಸಿಗುತ್ತವೆ.

ಒಟ್ಟಾರೆಯಾಗಿ ಈ ಕಥೆಗಳಲ್ಲಿ ಮಹಿಳೆಯರು ಕುಟುಂಬ ಎಂಬ ಚೌಕಟ್ಟನ್ನು ಮೀರಲಾಗದ ನಿರ್ಬಂಧಗಳಿವೆ. ತನಗೆ ವಿಧಿಸಿದ ಹೊಣೆಗಾರಿಕೆ ಅಥವಾ ತಾವೇ ಸ್ವಪ್ರಜ್ಞೆಯಿಂದ ವಹಿಸಿಕೊಂಡ ಜವಾಬ್ದಾರಿಯನ್ನು ಚಾಚೂ ತಪ್ಪದೇ ಪಾಲಿಸಬೇಕಾದ ಅನಿವಾರ್ಯತೆಯಿದೆ. ಆ ಮೂಲಕ ಬಿಡುಗಡೆ ಹೊಂದುವ ಬದುಕಿನ ಬಗೆಗೆ ಪ್ರೀತಿಯನ್ನು ಕಾಣುತ್ತೇವೆ. ಹೀಗೆ ಕುಟುಂಬ ನಿರ್ವಹಣೆಯಲ್ಲಿ ಮಹಿಳೆ ಅತ್ಯಂತ ಅವಶ್ಯಕ ಎಂಬುದನ್ನು ತೋರಿಸುವ ನಿರೂಪಣೆ ಇವರ ಕಥೆಗಳ ಅಭಿವ್ಯಕ್ತಿ ವಿಧಾನಗಳಲ್ಲಿ ಒಂದಾಗಿದೆ.

೩.೬. ಜಯಲಕ್ಷ್ಮೀ ಆರ್. ಶ್ರೀನಿವಾಸನ್

ಜಯಲಕ್ಷ್ಮೀ ಆರ್. ಶ್ರೀನಿವಾಸನ್ "ಮೊಗ್ಗು" ಎಂಬ ಕಥಾಸಂಕಲನ ಹೊರತಂದಿದ್ದಾರೆ. ಇವರ ಬಹುಪಾಲು ಕಥೆಗಳು ಆಶಯಪ್ರಧಾನ ಕಥೆಗಳಾಗಿ ನಿರೂಪಿತವಾಗಿವೆ. ಇವರ "ಹಸಿರು ಲಂಗ", "ಮಗುವಿನ ಕೊರಗು", "ಕರ್ಪೂರದ ಗೊಂಬೆ", "ಮಗುವಿನ ಸಮಸ್ಯೆ" ಇತ್ಯಾದಿ ಕಥೆಗಳಲ್ಲಿ ನಗರದ ಸಾಮುದಾಯಿಕ ಜೀವನ ಅಭಿವ್ಯಕ್ತಗೊಂಡಿದೆ. ನಗರದ ಸಾಂಸ್ಕೃತಿಕ ಲೋಕವನ್ನು ಅನಾವರಣಗೊಳಿಸಲಾಗಿದೆ. ಈ ಲೋಕದಲ್ಲಿ ಸಾಂಸ್ಕೃತಿಕತೆಯನ್ನು ಪ್ರತಿನಿಧಿಸುವ ಹಬ್ಬ-ಹರಿದಿನಗಳನ್ನು ಆಚರಿಸುವ ಪರಿಯನ್ನು ಮುನ್ನೆಲೆಗೆ ತಂದಿದ್ದಾರೆ. ಈ ಆಚರಣೆ ಭಿನ್ನ ಜಾತಿ, ವರ್ಗಗಳಲ್ಲಿ ಆಚರಿಸುವ ಸಂಪ್ರದಾಯವನ್ನು ಪ್ರತಿನಿಧಿಸುತ್ತದೆ. ಆ ಮೂಲಕ ಉಳ್ಳವರು ಹಾಗೂ ಇಲ್ಲದವರ ಬದುಕಿನ ಲೋಕವನ್ನು ಕಥೆಗಳಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗಿದೆ. ಈ ಕಥೆಗಳಲ್ಲಿ ಸಮಸ್ಯೆಗಳು ತನ್ನ ಕಥಾಹಂದರಗಳನ್ನು ಬಿಚ್ಚಿಕೊಳ್ಳುತ್ತವೆ. ಮುಗ್ಧ ಮನಸ್ಸಿನ ಮಗುವಿನ ಮೂಲಕ ಲೋಕವನ್ನು ನೋಡುವ ಕಥಾವಸ್ತುವಿದೆ. ಮಗುವೇ ನಿರೂಪನಾಗಿದ್ದು, ಕೇಂದ್ರಪಾತ್ರವಾಗಿ ನಿರೂಪಿಸಿದ್ದಾರೆ. ಮಗುವಿನ ಮೂಲಕ ಸಮಸ್ಯೆಗಳು ಬಿಚ್ಚಿಕೊಳ್ಳುವ ಹಾಗೂ ಅವರ ಮೂಲಕ ಆ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವ ನಿರೂಪಣೆ ಇವರ ಕಥೆಗಳಲ್ಲಿದೆ.

ಈ ಲೇಖಕಿಯ ಕಥೆಗಳಲ್ಲಿ ಸಮಾಜ ಸೇವಕಿ, ದುಡಿವ ಮಹಿಳೆ, ಶ್ರೀಮಂತ ಮಹಿಳೆ, ಬಾಲವಿಧವೆ ಇತ್ಯಾದಿ ಮಹಿಳಾ ಪಾತ್ರಗಳಿವೆ. "ಹಸಿರು ಲಂಗ" ಕಥೆಯಲ್ಲಿನ ನಿರೂಪಕಿಗೆ ತನ್ನ ಮನೆಯ ಕೆಲಸದಾಕೆಗೆ ಅವಳ ಬೇಡಿಕೆಗಳನ್ನು ಈಡೇರಿಸಲು ಮನಃಪರಿವರ್ತನೆ ಆಗುವುದು. ಪತ್ರಿಕೆಯ ಘಟನೆಯನ್ನು ತಿಳಿದು ಈ 'ಜಾಗೃತಿ' ಭಯದ ನೆಲೆಯಲ್ಲಿ ನಡೆಯುವಂತೆ ಕಥೆ ನಿರೂಪಿಸಲಾಗಿದೆ. ಇದು ಆ ಮಹಿಳೆಯ ಅಧೀನ ಸ್ಥಿತಿಯನ್ನು ಸೂಚಿಸುವಂತಿದೆ. ಹೀಗೆ ಇಲ್ಲಿ ಉಳ್ಳವರು ಇಲ್ಲದವರ ಬೇಡಿಕೆಯನ್ನು ಈಡೇರಿಸುವ ಮೂಲಕ ಇರುವ ಸ್ಥಿತಿಯನ್ನು ಬದಲಾಯಿಸುವ

ಉದ್ದೇಶ ಮುಖ್ಯವಾಗಿರುವಂತೆ ಕಾಣುತ್ತದೆ. ಅದೇ ರೀತಿ "ಮಗುವಿನ ಸಮಸ್ಯೆ", "ಮಗುವಿನ ಕೊರಗು" ಇತ್ಯಾದಿ ಕಥೆಗಳಲ್ಲಿ ಮಗುವಿನ ಬಯಕೆಯನ್ನು ಕಾಣಿಸುವುದರ ಮೂಲಕ ಆ ಕುಟುಂಬದ ಆರ್ಥಿಕ ಪರಿಸ್ಥಿತಿಯನ್ನು ಕಥೆ ಬಿಚ್ಚಿಡುತ್ತದೆ. ಹೀಗೆ ಆ ಮಗುವಿನ ದಸರಾಗೊಂಬೆಗಳ ಬೇಡಿಕೆಯನ್ನು ತಂದೆಗೆ ಈಡೇರಿಸಲಾಗುವುದಿಲ್ಲ. ಇಂತಹ ಪ್ರಸಂಗವನ್ನು ಉದ್ದೇಶಪೂರ್ವಕವಾಗಿ ತರಲಾಗಿದೆ. ಸಮಾಜದ ಒಬ್ಬ ಕಳ್ಳನ ಪಾತ್ರದ ಮೂಲಕ ಆತನ ಮನಃಪರಿವರ್ತನೆ ಮಾಡಿ ಆ ವಸ್ತುಗಳನ್ನು ಮಗುವಿಗೆ ಹಿಂದಿರುಗಿಸುವುದು ಉದಾರತೆಯನ್ನು ಕಾಣಿಸಲಾಗಿದೆ. ಆ ಸಮಸ್ಯೆಗೆ ಅಲ್ಲಿಯೇ ಪರ್ಯಾಯ ಮಾರ್ಗಗಳನ್ನು ಸೂಚಿಸುತ್ತಾ ಸಮಸ್ಯೆಯನ್ನು ಬಗೆಹರಿಸುವುದು ಲೇಖಕಿಯ "ಮಗುವಿನ ಸಮಸ್ಯೆ", "ಮಗುವಿನ ಕೊರಗು" ಕಥೆಗಳಲ್ಲಿ ಕಾಣುತ್ತೇವೆ. ಇವರ ಈ ಧೋರಣೆ ಪರಿವರ್ತಿತ ಸಮಾಜದ ಉದ್ದೇಶದಂತೆ ಕಾಣುತ್ತದೆ.

ಇವರ "ಹಣ್ಣು ಮಾರುವವಳು", "ಪರೀಕ್ಷೆ" ಕಥೆಗಳಲ್ಲಿ ಮಾತೃವಾತ್ಸಲ್ಯ ಧೋರಣೆಯಿದೆ. ಇಲ್ಲಿ ಮುದುಕಿ ಹಾಗೂ ಚಿಕ್ಕಮ್ಮನ ಪಾತ್ರಗಳ ಮೂಲಕ ಅಂತಹ ತಾಯಿ ಪ್ರೀತಿಯನ್ನು ಕತೆಗಳಲ್ಲಿ ತರಲಾಗಿದೆ. ಇವರ "ಹಣ್ಣು ಮಾರುವವಳು" ಕಥೆಯಲ್ಲಿ ಬರುವ ತಾಯಿ ಮುದುಕಿಯನ್ನು ಕುರಿತು "ಬಾ ಒಳಗೆ, ಮಗುವಿಗೆ ಇಂದು ಅಕ್ಷರಾಭ್ಯಾಸ, ಒಳ್ಳೆಯ ಸಮಯಕ್ಕೆ ಬಂದೆಯಲ್ಲಾ... ಏನೇ ಪೆಚ್ಚು ಪೆಚ್ಚಾಗಿ ನಿಂತಿದ್ದೀಯಾ? ಬಾರೇ ಒಳಗೆ ಬಂದು ಹಸೆಯ ಮೇಲೆ ಕೂತಿರುವ ಕೃಷ್ಣನನ್ನು ಆಶೀರ್ವದಿಸು. ನೀನು ಅವನ ಪಾಲಿಗೆ ತಾಯಿಗಿಂತ ಹೆಚ್ಚಾಗಿರುವೆ. ನಾನು ಹೆತ್ತ ತಾಯಿ, ನೀನು ಪ್ರೀತಿಯ ತಾಯಿ"(ಮೊಗ್ಗು, ಪು,೧೭) ಎನ್ನುವ ಸನ್ನಿವೇಶವಿದೆ. ಈ ವ್ಯಾಖ್ಯಾನ ತಾಯಿಯ ಉದಾರತೆಯನ್ನು ತೋರಿಸುವ ಹೇಳಿಕೆಯಾಗಿದ್ದರೂ ಅದು ಕೃತಕವಾಗಿ ಭಾಸವಾಗುತ್ತದೆ. ಆದರೂ 'ತಾಯಿ' ಎಂಬ ಪದದ ಅರ್ಥವಿಸ್ತಾರವನ್ನು ಸೂಚಿಸುವ ರೀತಿಯಲ್ಲಿದೆ. 'ಪರೀಕ್ಷೆ' ಕಥೆಯಲ್ಲಿ ಚಿಕ್ಕಮ್ಮನ ಪಾತ್ರ ನಿರ್ವಹಿಸುವ ಮಹಿಳೆ ಸ್ವಗತದಲ್ಲಿ ತನ್ನ ಮೇಲೆ ಮನೆಯ ಹೊಣೆಗಾರಿಕೆ ಅಧಿಕವಾಗಿದ್ದು, ಅದಕ್ಕೆ ನೆರವಾಗುವುದಕ್ಕೆ ಯಾರು ಸಹಕರಿಸದಿರುವ ಬಗ್ಗೆ ವಿರೋಧವಿದ್ದರೂ ಅದು ಮುನ್ನೆಲೆಗೆ ಬರದೆ ಹೋಗುತ್ತದೆ. ಅಂತ್ಯದಲ್ಲಿ ತನ್ನ ಪತಿಯ ಮೊದಲನೇ ಹೆಂಡತಿಯ ಮಕ್ಕಳನ್ನು ನಿಂದಿಸಿದ್ದು, ಆತನ ಹುಟ್ಟುಹಬ್ಬಕ್ಕೆ ಹೊಸ ವಸ್ತುವನ್ನು ತೆಗೆದುಕೊಳ್ಳಲು ಅಡತಡೆ ಉಂಟಾಗಿದ್ದು ಎಂಬ ಕಾರಣವನ್ನು ಸನ್ನಿವೇಶದಲ್ಲಿ ತರಲಾಗುತ್ತದೆ. ಹೀಗೆ ಅಂತ್ಯದಲ್ಲಿ ಆ ಕುಟುಂಬದ ಎಲ್ಲ ಸದಸ್ಯರು ಹೊಂದಾಣಿಕೆ ಮಾಡಿಕೊಂಡು ಸುಖಾಂತಗೊಳಿಸುವುದು ಲೇಖಕಿಯ ಮುಖ್ಯ ಉದ್ದೇಶವಾಗಿದೆ.

ಅವರ 'ಲಾಸ್ಯಜೆ' ಕಥೆಯಲ್ಲಿ ಹೆಣ್ಣು ಮಗುವಿನ ಬಾಹ್ಯಸೌಂದರ್ಯಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಮನೆಯ ತಾಯಿ ಹಾಗೂ ಶಾಲೆಯ ಉಪಾಧ್ಯಾಯಿನಿ ನಡೆದುಕೊಳ್ಳುವ ರೀತಿಯನ್ನು ವಿವರಿಸುತ್ತಾ ಆ ಬಾಲಕಿಯ ಬೌದ್ಧಿಕ ಸೌಂದರ್ಯವನ್ನು ಗುರುತಿಸುವುದರ ಮೂಲಕ ತನ್ನತನವನ್ನು ಕಾಯ್ದುಕೊಳ್ಳುವ ಬಾಲಕಿಯ ಪಾತ್ರ ಈ ಕಥೆಯಲ್ಲಿದೆ. 'ಪ್ರಾಯಃಶ್ಚಿತ್ತ' ಕಥೆಯಲ್ಲಿ ಜಾತಿಸಮಸ್ಯೆಯನ್ನು ಕುರಿತು ಹೇಳಲಾಗಿದೆ. ಮಗುವಿನ ಸಮಸ್ಯೆಯೇ ಕಥೆಯಲ್ಲಿ

ಮುಖ್ಯವಾಗಿದೆ. ಬಾಲವಿಧವೆ ಸುರಭಿಗೆ ತಂದೆಯ ಮನೆಯಲ್ಲಿ ಇರುವ ಅವಕಾಶವಿದೆ. ಆದರೆ ಆ ಮನೆಯಲ್ಲಿ ತಂದೆಯ ಇಚ್ಛೆಯಂತೆ ಎಲ್ಲ ಕೆಲಸ ಕಾರ್ಯಗಳು ಪ್ರಾರಂಭವಾಗಬೇಕು ಎಂಬ ಆದೇಶವಿದೆ. ಅದೇ ರೀತಿ ತಂದೆ ಮರುವಿವಾಹಕ್ಕೆ ಸಿದ್ಧತೆ ನಡೆಸಿದ್ದು ಅದನ್ನು ಮಗಳಿಗೆ ಹೇಳುವ ಅವಶ್ಯಕತೆ ಬರುವುದಿಲ್ಲ. ಇನ್ನು ಆ ಮಹಿಳೆಗೆ ಅದನ್ನು ತಿಳಿದುಕೊಳ್ಳುವ ಹಕ್ಕಾಗಲಿ, ಪ್ರಶ್ನಿಸುವ ಧೈರ್ಯವಾಗಲಿ ಇರದೆ ಕುಟುಂಬದ ಮೇಲಿನ ಪ್ರೀತಿಯು ಆಕೆಯಲ್ಲಿ ಅಸಹಾಯಕತೆಯನ್ನು ತೋರುತ್ತದೆ. ಹೀಗೆ ಈ ಸಮಸ್ಯೆಯನ್ನು ಆ ಮಹಿಳೆಯ ಸಹೋದರ ಪ್ರಕಾಶನ ಪಾತ್ರದ ಮೂಲಕ ಅತ್ತೆಗೆ ಮನೆಯ ಸಂಭ್ರಮದ ವಾತಾವರಣದ ಕುತೂಹಲದ ಕಾರಣವನ್ನು ಕೇಳುತ್ತಾ "ಅತ್ತೇ ನಮ್ಮನೇಲಿ ಏನತ್ತೆ ವಿಶೇಷ?" ಎಂದು ಪ್ರಶ್ನಿಸಿದನು. "ನಮ್ಮನೇಲಿ ನಾಳೆ ಮದುವೆ ಮಗು", "ನಮ್ಮಕ್ಕಂಗಾ?" ಎಂದು ಆನಂದದಿಂದ ಕೇಳಿದ ಪ್ರಕಾಶ. "ಅಯ್ಯೋ! ಈ ಜನ್ಮದಲ್ಲಿ ನಿಮ್ಮಕ್ಕಂಗೆ ಮದುವೆಯಲ್ಲಿಯದೋ! ನಿಮ್ಮ ಭಾವ ದೇವರ ಹತ್ತಿರ ಹೋಗಿಬಿಟ್ಟರಲ್ಲಾ. ನಿಮ್ಮಪ್ಪನಿಗೆ ಮದುವೆ. "ಮತ್ತೆ...? ಮತ್ತೆ ನಮ್ಮಮ್ಮಾನು ದೇವ್ರಹತ್ರ ಹೋಗ್ಬಿಟ್ಟಳಲ್ಲಾ?" ಹೀಗೆ ಮಗುವಿನ ಮೂಲಕ ಸಮಾಜದಲ್ಲಿ ಲಿಂಗತಾರತಮ್ಯ ಪ್ರಶ್ನೆಯನ್ನು ಎತ್ತುವ ಕಥೆಯಿದು.

ಹೀಗೆ ಇವರ ಕಥೆಗಳಲ್ಲಿ ಮೇಲ್ವರ್ಗ ಹಾಗೂ ಕೆಳವರ್ಗದ ನಡುವೆ ಜಾತಿ ಮತ್ತು ವರ್ಗ ಸಮಸ್ಯೆಗಳಿವೆ. ಈ ಸಮಸ್ಯೆ ಮಗುವಿನ ಮೂಲಕ ತೋರಿಸುವ, ಮಗುವಿನ ಮೂಲಕವೇ ಪರಿಹಾರ ಒದಗಿಸಿ ಪರ್ಯಾಯ ದಾರಿಗಳನ್ನು ಸೂಚಿಸುತ್ತವೆ. ಸಾಮಾಜಿಕ ಹಾಗೂ ಕುಟುಂಬ ನೆಲೆಯಲ್ಲಿ ದೊರಕಿಸಿದ್ದು, ಪರಿವರ್ತಿತ ಸಮಾಜವನ್ನು ಕಥೆಯಲ್ಲಿ ಕಾಣಿಸುವುದು ಲೇಖಕಿಯ ಬಹುಮುಖ್ಯ ಧೋರಣೆಯಾಗಿ ಕಂಡುಬರುತ್ತದೆ.

೩.೭. ಸಾವಿತ್ರಮ್ಮ ಎಚ್.ವಿ.

ಸಾವಿತ್ರಮ್ಮ ಅವರು ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಗುರುತಿಸಿಕೊಂಡ ಒಬ್ಬ ಶಕ್ತ ಕಥೆಗಾರ್ತಿ. ಇವರು ಆರು ಕಥಾಸಂಕಲನಗಳನ್ನು ರಚಿಸಿದ್ದಾರೆ. 'ನಿರಾಶ್ರಿತೆ', 'ಹರಿದ ನೆರಳು', 'ಲಕ್ಷ್ಮೀ', 'ಪ್ರತೀಕ್ಷೆ', 'ಮರುಮದುವೆ', 'ಹೊಸಜಗತ್ತು.' ಈ ಎಲ್ಲ ಕಥೆಗಳಲ್ಲಿ ಹೆಣ್ಣಿನ ಬದುಕು ಅನಾವರಣಗೊಂಡಿದೆ. ಇಲ್ಲಿ ವಿವಿಧ ಸ್ತರದ, ವರ್ಗದ, ಜಾತಿಗೆ ಅನುಗುಣವಾಗಿ ಸ್ತ್ರೀಯ ಸಮಸ್ಯೆಗಳು ಚಿತ್ರಣಗೊಂಡಿವೆ. ಹೀಗಾಗಿ ಹೆಣ್ಣಿನ ಶೋಷಣೆಯ ಸ್ವರೂಪಗಳು ಬದಲಾಗುತ್ತವೆ. ಅವರು ಈ ಎಲ್ಲಾ ಹೆಣ್ಣಿನ ಕಷ್ಟ, ಕಾರ್ಪಣ್ಯಗಳು ಯಾವುದೇ ಸ್ತರದಲ್ಲಿರಲಿ ಅವುಗಳಿಗೆ ಸ್ಪಂದಿಸಿ ಅಭಿವ್ಯಕ್ತಿ ನೀಡಿದ್ದಾರೆ. ಹಾಗಾಗಿ ಇವರು ಹೆಣ್ಣಿಗೆ ಅಭಿವ್ಯಕ್ತಿ ನೀಡಿರುವುದು ಸೋದರಿತ್ವದ ನೆಲೆಯಲ್ಲಿ. ಆದುದರಿಂದ ಅವರ ಕಥೆಗಳಲ್ಲಿ ಹೆಣ್ಣಿನ ನೋವುಗಳಿಗೆ ಮಿಡಿದಿದೆ. ಹೀಗಾಗಿ ಹೆಣ್ಣು ಅವಳು ನೆಲೆಸಿರುವ ಮನೆಯಲ್ಲಿ ಅವಳ ನೆಲೆಯನ್ನು ಗುರುತಿಸುವುದು ಮುಖ್ಯವಾಗಿದೆ.

ಇಲ್ಲಿ ಅಭಿವ್ಯಕ್ತಿಗೊಂಡಿರುವ ಬಹುಪಾಲು ಕಥೆಗಳು ವೈದಿಕ ಮನೆತನಕ್ಕೆ ಸಂಬಂಧಿಸಿವೆ. ಮೇಲ್ವರ್ಗದ ಶ್ರೀಮಂತ ಕುಟುಂಬದ ಸಮಸ್ಯೆಗಳು ಇಲ್ಲಿ ಅಭಿವ್ಯಕ್ತಗೊಂಡಿದೆ. ಇಲ್ಲಿ ಬರುವ

ಬಹುಪಾಲು ಮಹಿಳೆಯರು ಅನಕ್ಷರಸ್ಥರು, ಅರೆ ಎಚ್ಚತ್ತ ಬಡಮಹಿಳೆಯರು. ಮತ್ತೊಂದು ನೆಲೆಯಲ್ಲಿ ಶ್ರೀಮಂತ, ವಿದ್ಯಾವಂತ ಮಹಿಳೆಯರು ಕಂಡುಬಂದರೂ ಮನೆಯ ಚೌಕಟ್ಟಿನಲ್ಲಿಯೇ ಬದುಕನ್ನು ರೂಪಿಸಿಕೊಳ್ಳುವ ಅನಿವಾರ್ಯಕ್ಕೆ ಒಳಗಾದವರು. ಕೆಲವು ಮಹಿಳೆಯರು ಹಳ್ಳಿಯಲ್ಲಿ ನೆಲೆಸಿದ್ದು ವಿವಾಹದ ಮೂಲಕ ನಗರ ಪರಿಸರದಲ್ಲಿ ವಾಸಿಸುವ, ಅಲ್ಲಿನ ಗಂಡನ ಕುಟುಂಬಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದರಲ್ಲಿ ತನ್ನ ಬದುಕನ್ನು ಸವೆಸುವ ಆದರ್ಶ ಸ್ತ್ರೀಯರಾಗಿ ಕಂಡುಬರುತ್ತಾರೆ.

'ಅನಾಥೆ' ಕಥೆಯಲ್ಲಿ ಬರುವ ನರಸಿಂಹಯ್ಯ, ಶಾಮರಾಯ(ದುರಾಭಿಮಾನ), ಶಾಮಶಾಸ್ತ್ರಿ(ದುರಾಭಿಮಾನ) ಇತ್ಯಾದಿ ಪುರುಷರ ಪೋಷಕ ಪಾತ್ರಗಳು, ಪತ್ನಿಯಿಲ್ಲದ ಗಂಡ ಮತ್ತು ಮಗಳು ಇರುವ ಕುಟುಂಬಗಳು, ಗಂಡ-ಹೆಂಡತಿ, ಮಕ್ಕಳಿರುವ ಸರಳಕುಟುಂಬಗಳು ಕಾಣಸಿಗುತ್ತವೆ. ವಿಧುರ ನರಸಿಂಹಯ್ಯ ತಾಯಿಯಿಲ್ಲದ ಮಗಳು ಲಕ್ಷ್ಮಿಯನ್ನು ಅತ್ಯಂತ ಪ್ರೀತಿ-ವಾತ್ಸಲ್ಯದಿಂದ ಬೆಳೆಸಿದನು. ವೃತ್ತಿಯಲ್ಲಿ ಶಿಕ್ಷಕನಾಗಿದ್ದು, ಮಗಳಿಗೆ ತಕ್ಕಮಟ್ಟದ ವಿದ್ಯಾಭ್ಯಾಸವನ್ನು ನೀಡಿದ್ದನು. ಆದರೆ ಮಗಳಿಗೆ ವಿದ್ಯೆಗಿಂತ ವಿವಾಹ, ಗಂಡ, ಮನೆ ಮುಖ್ಯ ಎಂದು ಭಾವಿಸಿದ್ದನು. ಹೀಗಾಗಿ ಮಗಳಿಗೆ ಅತ್ಯಂತ ಚಿಕ್ಕ ವಯಸ್ಸಿನಲ್ಲಿ ವಿವಾಹ ಮಾಡಿದನು. ಆದರೆ ಅಂದಿನ ಮೇಲ್ವರ್ಗದ ಸಮಾಜದಲ್ಲಿ ಮಹಿಳೆಯ ವಿವಾಹ ವಯಸ್ಸು ೧೦-೧೪ ವರ್ಷವಿರುವುದರಿಂದ ಅದು ಸಹಜವಾಗಿದೆ. ಇಲ್ಲಿ ಲಕ್ಷ್ಮಿ ತಾಯಿಯಿಲ್ಲದ ಮಗಳಾಗಿರುವುದರಿಂದ ನಿರ್ಬಂಧಗಳಿಂದ ಮುಕ್ತಳಾಗಿದ್ದು ತಂದೆಯ ಮನೆಯಲ್ಲಿ ಸ್ವತಂತ್ರರಾಗಿ ಬದುಕುತ್ತಿದ್ದಳು. ಇಲ್ಲಿ ವಯೋಪೂರ್ವ ವಿವಾಹವಾಗಿರುವುದರಿಂದ ಸುಬ್ಬಿಗೆ ತಂದೆಯ ಅಗಲಿಕೆಯಾಗಲಿ, ಗಂಡನ ಮನೆ ಸೇರುವ ತವಕದಲ್ಲಿಯಾಗಲೀ ಯಾವುದೇ ಬದಲಾವಣೆಗಳು ಕಂಡುಕೊಳ್ಳದ ಮುಗ್ಧೆಯಾಗಿದ್ದಾಳೆ.

ಹೀಗೆ ಹಿರಿಯ ಪಾತ್ರಗಳಾದ ಶಾಮರಾಯ, ಶಾಮಶಾಸ್ತ್ರಿಗಳು, ನರಸಿಂಹಯ್ಯನ ಪಾತ್ರಗಳಲ್ಲಿ ಹೆಂಗರುಳಿನ, ತಾಯ್ತನದ ಸ್ವಭಾವವಿದೆ. ಪೋಷಕರು ಮಗಳಿಗೆ ಹುಡುಕುವ ವರ ವಿದ್ಯಾವಂತ, ನಗರ ಪ್ರದೇಶದಲ್ಲಿದ್ದು ಉದ್ಯೋಗ ಸಿಗುವ ಆಕಾಂಕ್ಷೆಯಿಂದ ಇಲ್ಲಿ ವಿವಾಹವಾಗುವ ಹೆಣ್ಣುಮಕ್ಕಳಿಗೆ ತನ್ನ ಸಂಗಾತಿಯ ಬಗೆಗೆ ಯಾವುದೇ ಒಂದು ನಿರ್ದಿಷ್ಟ ರೂಪ ಮನಸ್ಸಿನಲ್ಲಿರುವುದಿಲ್ಲ. ಹಾಗೆ ಆಲೋಚಿಸುವ ವಯಸ್ಸು ಅವರದಾಗಿರುವುದಿಲ್ಲ. ಹಾಗಾಗಿ ಆ ಮನೆಯ ಹಿರಿಯರ ಆಣತಿಯಂತೆ ಅವರು ನಿರ್ಧರಿಸಿದ ತೀರ್ಮಾನಗಳಿಗೆ ಬದ್ಧರಾಗಿದ್ದಾರೆ. ಇಲ್ಲಿನ ಪೋಷಕರು 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎನ್ನುವ ಗಾದೆಮಾತಿನಿಂದ ಹೆಣ್ಣು ವಿವಾಹಪೂರ್ವದಲ್ಲಿ ತಂದೆಯ ನೆರಳಿನಲ್ಲಿ, ವಿವಾಹವಾದ ನಂತರ ಗಂಡನ ನೆರಳಿನಲ್ಲಿ ಬದುಕುವುದು ಸಹಜವೆಂಬ ಲೋಕರೂಢಿಯ ಉಪದೇಶದಂತೆ ನಡೆದುಕೊಳ್ಳುವರು. ಮಗಳ ಜವಾಬ್ದಾರಿಯನ್ನು ಅಳಿಯನಿಗೆ ಒಪ್ಪಿಸಿದ ಈ ಎಲ್ಲ ಪೋಷಕರು ಮಗಳನ್ನು ತವರುಮನೆಗೆ ಕರೆದುಕೊಂಡು ಹೋಗಲು,

ಮಗಳ ಮನೆಯಲ್ಲಿರಲು ಸಹ ಅತ್ಯಂತ ದೈನ್ಯ, ವಿಧೇಯತೆಯಿಂದ ಅಳಿಯನ ಸಮ್ಮತಿ ಪಡೆಯಬೇಕಾಗಿದೆಯೇ ಹೊರತು ಹೆಣ್ಣು ಕೊಟ್ಟ ತಂದೆಗೆ ಮಗಳ ಮೇಲೆ ಯಾವುದೇ ಅಧಿಕಾರ ಇರುವುದಿಲ್ಲ. ಹೀಗಾಗಿ ಆ ಮನೆಯ ಹಿರಿಯರ ಆಣತಿಯಂತೆ ಅವರು ನಿರ್ಧರಿಸಿದ ತೀರ್ಮಾನಗಳಿಗೆ ಬದ್ಧರಾಗಿದ್ದಾರೆ. ಮಗಳು ಸಹ ಗಂಡನ ತೀರ್ಮಾನಕ್ಕೆ ಬದ್ಧಳಾಗಿರುವುದು ಅನಿವಾರ್ಯ. ಇಲ್ಲವಾದರೆ ಅವಳಿಗೆ ನೆಲೆಯಿಲ್ಲ. ಹೀಗೆ ಇಲ್ಲಿ ವಿದ್ಯೆ, ಬುದ್ಧಿ, ಉನ್ನತ ಸ್ಥಿತಿವಂತ ಅಳಿಯ, ಬಡ ಮಾವ ಹಾಗೂ ಅವರ ಮಗಳನ್ನು ಅತ್ಯಂತ ಕೆಳಮಟ್ಟದಲ್ಲಿ ಕಾಣುತ್ತಾನೆ. ತಂದೆಯ ವಾತ್ಸಲ್ಯದಲ್ಲಿ ಬೆಳೆದ ಸುಬ್ಬಿ ಅತ್ತೆ, ಗಂಡ, ಮಕ್ಕಳಿರುವ ಕೂಡುಕುಟುಂಬಕ್ಕೆ ಸೇರುತ್ತಾಳೆ. ಹಳ್ಳಿ ಹುಡುಗಿ ಸುಬ್ಬಿ ಗಂಡನ ನಗರ ಪರಿಸರಕ್ಕೆ ಹೊಂದಿಕೊಳ್ಳುವಲ್ಲಿ ಸಮಯ ಕಳೆಯುತ್ತದೆ. ಸುಬ್ಬಿಯ ಗಂಡ ರಾಮಯ್ಯ ಆ ಮನೆಗೆ ಯಜಮಾನ. ಈತನ ನಂತರ ಮನೆಯ ಅಧಿಕಾರದ ಚುಕ್ಕಾಣಿ ಅತ್ತೆಯದು. ಹೀಗೆ ಗಂಡ ಮತ್ತು ಅತ್ತೆಯ ಅಧಿಕಾರದ ನಿಯಂತ್ರಣಕ್ಕೆ ಸುಬ್ಬಿ ಒಳಗಾಗಿರುತ್ತಾಳೆ. ಸುಬ್ಬಿ ಆ ಮನೆಯ ಸೇವಕಿಯಾಗಿ ಗಂಡನ, ಅತ್ತೆಯ ಬೇಕು ಬೇಡಗಳನ್ನು ಈಡೇರಿಸುವುದೇ ತನ್ನ ಕರ್ತವ್ಯ ಎಂದು ಭಾವಿಸಿರುತ್ತಾಳೆ. ಅವಳು ಆ ಮನೆಯ ನಾಲ್ಕು ಗೋಡೆಗಳ ಮಧ್ಯೆ ಬಂಧಿತಳು. ಅಲ್ಲದೇ ಸುಬ್ಬಿಗೆ ಹುಟ್ಟಿದ ಮಗುವನ್ನು ಪೋಷಿಸುವ ಮಮತೆಯ ವಾತ್ಸಲ್ಯದಿಂದಲೂ ವಂಚಿತಳು. ಗಂಡ, ಅತ್ತೆ ಅವಳ ಅಧಿಕಾರವನ್ನು ಕಿತ್ತುಕೊಳ್ಳುವರು. ಹಾಗಾಗಿ ಮಗ ಕೃಷ್ಣ ತಂದೆಯ ತದ್ರೂಪಿಯಂತೆ ಹಠ ಮತ್ತು ಸ್ವಾಭಿಮಾನದ ವ್ಯಕ್ತಿಯಾಗಿ ಬೆಳೆದ. ಇಲ್ಲಿ ಹೆಂಡತಿಗೆ ಮಗನ ವಿದ್ಯಾಭ್ಯಾಸ ಹಾಗೂ ವಿವಾಹದ ಸಂಗತಿಯ ಯಾವುದೇ ವಿಷಯಗಳನ್ನು ತಿಳಿಸುವ ಮನಸ್ಸು ಗಂಡನಿಗಿಲ್ಲ. ತಾಯಿಗೆ ಮಗನ ಬದುಕಿನ ಬಗ್ಗೆ ಯಾವುದೇ ಪ್ರಸಂಗವಾಗಲಿ ತಿಳಿದುಕೊಳ್ಳುವ ಹಾಗೂ ನಿರ್ಧರಿಸುವ ಸಲಹೆ, ಸೂಚನೆ ನೀಡುವ ಹಕ್ಕಾಗಲಿ ಇಲ್ಲ. ಮಕ್ಕಳ ಬಗ್ಗೆ ತೀರ್ಮಾನಿಸುವ ಸಂಪೂರ್ಣ ಹಕ್ಕು ತಂದೆಯದು. ತಾಯಿ ಕೇವಲ ಮಕ್ಕಳ ಬೇಕುಬೇಡಗಳನ್ನು ಈಡೇರಿಸುವ ಮೂಲಕ ಕರ್ತವ್ಯಕ್ಕೆ ಹಕ್ಕುದಾರರಾಗಿದ್ದಾಳೆ. ಪ್ರಶ್ನಿಸುವ ಹಕ್ಕು ಅವಳಿಗಿಲ್ಲ. ಸುಬ್ಬಿಯ ಈ ಅವಸ್ಥೆಗೆ ತವರಿನ ಆರ್ಥಿಕ ಅಸಹಾಯಕತೆ ಕಾರಣವಾಗಿರುತ್ತದೆ. ತಂದೆಯ ನೆರಳಿನಲ್ಲಿ ಬೆಳೆದ ಮಗ ಕೃಷ್ಣನಿಗೆ ಮನೆಯ ಇತರ ಸದಸ್ಯರಂತೆ ತಾಯಿ ಬೇಡವಾದ ಯಾವುದೇ ವ್ಯಕ್ತಿತ್ವದಂತೆ ಒಂದು ವಸ್ತುವಾಗಿ ನೋಡುತ್ತಾನೆ. ಅಜ್ಜಿಯ ಆಶ್ರಯದಲ್ಲಿ ಬೆಳೆದ ಕೃಷ್ಣನಿಗೆ ತಾಯಿಯ ಬಗ್ಗೆ ಪ್ರೀತಿಯಾಗಲಿ, ಅಭಿಮಾನವಾಗಲಿ ಇಲ್ಲ. ಕೃಷ್ಣ ಶ್ರೀಮಂತ ಮಾವನ ಮಗಳನ್ನು ವಿವಾಹವಾಗಿ ತಂದೆಯ ಮನೆಯನ್ನು ತೊರೆದನು. ಮಗನ ಬಗ್ಗೆ ಹೆಚ್ಚು ಅಭಿಮಾನವಿದ್ದ ತಂದೆ ರಾಮಯ್ಯನಿಗೆ ಮೊದಲು ಸೋಲಾಯಿತು. ತಂದೆ ಹಠದಿಂದ ಮಗ–ಸೊಸೆಯನ್ನು ಮನೆಗೆ ಕರೆಯಲಿಲ್ಲ. ಅವರನ್ನು ಕರೆತರುವ ಮನಸ್ಸು ಅತ್ತೆ(ಸುಬ್ಬಿ)ಗಿದ್ದರೂ ಮಗನಿಗೆ ಹಾಗೂ ಗಂಡನಿಗೆ ಹೇಳಲಾರದೆ, ಹೇಳಿ ಯಾವ ಪ್ರಯೋಜನವಿಲ್ಲದೆ ಮೌನ ವಹಿಸುವಳು. ಸೊಸೆಯ ತವರು ಆರ್ಥಿಕವಾಗಿ ಸುಖವಾಗಿರುವುದರಿಂದ ಅವಳಿಗೆ ಗಂಡ, ಮಾವನ ಮನೆಯ ಯಾವುದೇ ನಿರ್ಬಂಧಗಳಿರದೆ ಅಳಿಯನೇ ಮಗನಾಗಿ ವಾಸ ಮಾಡುವುದನ್ನು

ಕೃಷ್ಣನ ಪಾತ್ರದಲ್ಲಿ ಕಾಣಬಹುದಾಗಿದೆ. ಗಂಡನ ಅನಿರೀಕ್ಷಿತ ಸಾವಿನಿಂದ ಕಂಗಾಲಾದ ಸುಬ್ಬಿಗೆ ತನ್ನ ನೆಲೆಯ ಪ್ರಶ್ನೆ ಎದುರಾಗುತ್ತದೆ.

ಗಂಡ, ಗಂಡನ ಮನೆ ಎಷ್ಟೇ ಕ್ರೂರವಾಗಿದ್ದರೂ ಅಲ್ಲಿ ತನ್ನತನವನ್ನು ಕಂಡು ಬದುಕಿದಳು. ಈಗ ಆ ವ್ಯಕ್ತಿಯೇ ಇಲ್ಲವಾದಾಗ ಮತ್ತಷ್ಟು ಆತಂಕಗೊಂಡು ಆರ್ಥಿಕ ಅಸಹಾಯಕತೆಯಿಂದ ಮಗನ ಮೇಲಿನ ಹಕ್ಕು ಇರುವುದರಿಂದ ಮಗನಿರುವ ಸಿರಿವಂತ ಮಾವನ ಮನೆಯಲ್ಲಿ ಆಶ್ರಯ ಪಡೆಯುತ್ತಾಳೆ. ಅಲ್ಲದೆ ಅವಳಿಗೆ ಯಾವುದೇ ಗೌರವವಿಲ್ಲದೆ, ಪ್ರೀತಿ ಮಮಕಾರಗಳಿಲ್ಲದೆ ಅಪರಿಚಿತರಂತೆ ಬದುಕನ್ನು ಸಾಗಿಸುತ್ತಾಳೆ. ಅಲ್ಲದೆ ಮೊಮ್ಮಗನ ಪ್ರೀತಿಯಿಂದ ವಂಚಿತಳಾಗಿದ್ದಾಳೆ. ಹೀಗೆ ಇಲ್ಲಿ ಸುಬ್ಬಿ ವಿವಾಹವಾಗಿ ಸೊಸೆ, ತಾಯಿ, ಅತ್ತೆ, ಅಜ್ಜಿಯ ಪಾತ್ರ ನಿರ್ವಹಿಸುತ್ತಾ ಬದುಕನ್ನು ಸಾಗಿಸಿದರೂ ಯಾವುದೇ ಪಾತ್ರಗಳಲ್ಲಿ ಪರಾವಲಂಬಿಯಾಗಿ ಎರಡನೇ ದರ್ಜೆಯ ಹೆಣ್ಣಾಗಿ ಬದುಕುತ್ತಾಳೆ. ಯಾವುದೇ ಅಸ್ತಿತ್ವವಿಲ್ಲದೆ ಬದುಕುತ್ತಾಳೆ. ಸುಬ್ಬಿ ತನ್ನ ಈ ಸ್ಥಿತಿಗೆ ತನ್ನದೇ ದೋಷಗಳನ್ನು ಹುಡುಕುತ್ತಾಳೆ. ತನ್ನ ಈ ಸ್ಥಿತಿಗೆ ಯಾರು ಕಾರಣರು, ತಾನಿರುವ ಸ್ಥಿತಿಯಿಂದ ಬದಲಾವಣೆ ಬಯಸುವ ಪ್ರಜ್ಞೆಯಾಗಲಿ, ಆರ್ಥಿಕ ಸ್ವಾತಂತ್ರ್ಯವಾಗಲಿ ಇಲ್ಲದೆ ತಂದೆ ಮಗನ ಪ್ರೀತಿ ವಾತ್ಸಲ್ಯ ಜೀವನದ ಪ್ರತಿಕ್ಷಣದಲ್ಲಿಯೂ ಬಯಸುವ ಧಾರಣಾಶಕ್ತಿಯಿರುವ ಸ್ತ್ರೀಯಾಗಿದ್ದಾಳೆ. ಅದು ಸಿಗದಾಗ ಮಾನಸಿಕ ಅಸ್ವಸ್ಥಳಾಗಿ ಸಾವಿಗೆ ಶರಣಾಗುತ್ತಾಳೆ. ಹೀಗೆ ಮನು ಸಿದ್ಧಾಂತದಂತೆ ಹೆಣ್ಣು ಬಾಲ್ಯದಲ್ಲಿ ತಂದೆ, ಯೌವನದಲ್ಲಿ ಗಂಡ, ಮುಪ್ಪನ್ನು ಮಗನ ಆಶ್ರಯದಲ್ಲಿ ಬದುಕಿ ಸ್ವಂತ ವ್ಯಕ್ತಿತ್ವವಿಲ್ಲದೆ ಪರಾವಲಂಬಿಯಾಗಿರುತ್ತಾಳೆ.

ಇದಕ್ಕೆ ಪೂರಕವಾಗಿರುವ ಕುಟುಂಬ ವೆಂಕಟೇಶಯ್ಯದು. ಈತನ ಪತ್ನಿ ಸೀತೆ ಬಸುರಿ. ಈ ಸಮಯದಲ್ಲಿ ತವರಿನ ಆಸೆ ಹೆಣ್ಣಿಗೆ ಸಹಜ. ತಂದೆ ಸೀತಯ್ಯ ಲೋಕರೂಢಿಯಂತೆ ಮಗಳನ್ನು ಬಾಣಂತಿತನಕ್ಕೆ ತವರಿಗೆ ಕರೆಯಲು ಬಂದಿದ್ದಾನೆ. ಅಳಿಯ ವೆಂಕಟೇಶನಿಗೆ ಮಾವನ ಬಗ್ಗೆ ಗೌರವವಾಗಲಿ, ಹಿರಿಯರೆಂಬ ವಿನಯವಾಗಲಿ ಇರದೆ ಹೆಣ್ಣು ಕೊಟ್ಟ ಮಾವನನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತಾನೆ. ಸೀತೆ ಮೊದಲ ಹೆರಿಗೆಗೆ ತವರಿಗೆ ಹೋದದ್ದು, ಬಹಳ ವರ್ಷಗಳ ನಂತರವೇ ಎರಡನೆ ಹೆರಿಗೆಗಾಗಿ ತವರಿಗೆ ಹೋಗುತ್ತಿರುವುದು. ವಿವಾಹವಾದ ಹೆಣ್ಣಿಗೆ ತವರಿಗೆ ಮನಬಂದಂತೆ ಹೋಗುವ ಯಾವುದೇ ಸ್ವಾತಂತ್ರ್ಯವಿರುವುದಿಲ್ಲ. ಇಲ್ಲಿ ವೆಂಕಟೇಶಯ್ಯನಿಗೆ ಹೆಂಡತಿಯನ್ನು ತವರಿಗೆ ಕಳುಹಿಸಲು ಬೇಸರ. ಕಾರಣ ಅವಳ ಮೇಲಿನ ಪ್ರೀತಿಯಿಂದಲ್ಲ, ಅವಳ ಅನುಪಸ್ಥಿತಿಯಲ್ಲಿ ಅವನ, ಅವನ ಮಕ್ಕಳನ್ನು ನೋಡಿಕೊಳ್ಳಲು ವ್ಯಕ್ತಿಯಿಲ್ಲವೆಂದು. ಹೀಗೆ ಹೆಣ್ಣು ಸೇವಕಿಯಾಗಿ, ಗುಲಾಮಳಾಗಿ ಅವಿರತವಾಗಿ ದುಡಿಯುತ್ತಾಳೆ. ಅದಕ್ಕೆ ಯಾವುದೇ ಮಹತ್ವವಿಲ್ಲ. ಆದರೆ ಈ ದುಡಿಮೆಗೆ ತಕ್ಕ ಆಹಾರ ಅವಳಿಗೆ ಒದಗದೆ ಅತ್ಯಂತ ಕೃಶಳಾಗಿ ಹೆಣ್ಣುಮಗುವಿಗೆ ಜನ್ಮವಿತ್ತು ಸಾವಿಗೀಡಾಗುತ್ತಾಳೆ.

ತಾಯಿಯನ್ನು ಕಳೆದುಕೊಂಡ ಈ ಹೆಣ್ಣುಮಗುವನ್ನು ಮಾವನ ಹತ್ತಿರ ಬಿಡದೆ ಕರೆತರುತ್ತಾನೆ. ಹೀಗೆ ತಂದೆಯ ಆಶ್ರಯದಲ್ಲಿ ಬೆಳೆದ ಲಕ್ಷ್ಮಿ ತಂದೆಯ ಯಾವ ಪ್ರೀತಿಯನ್ನೂ ಪಡೆಯದೆ ತಾಯಿಯ, ಅಜ್ಜಿಯ ಮಮತೆಯಿಂದ ವಂಚಿತಳಾಗಿ ಬೆಳೆಯುತ್ತಾಳೆ. ತಂದೆ ನರಸಿಂಹಯ್ಯ ಮಗನನ್ನು ಹೆಚ್ಚು ಪ್ರೀತಿಸುತ್ತಿದ್ದ. ಶಿಕ್ಷಣ, ಬೇಕು ಬೇಡ ಎಲ್ಲವುಗಳ ಅವಶ್ಯಕತೆಯನ್ನು ಈಡೇರಿಸುತ್ತಿದ್ದ. ಲಕ್ಷ್ಮಿ ಹೆಣ್ಣು ಎಂಬ ಕಾರಣಕ್ಕಾಗಿ ತಕ್ಕಮಟ್ಟಿನ ಶಿಕ್ಷಣ ಪಡೆದು, ಮನೆಯ ಕೆಲಸಗಳನ್ನು ಮಾಡುವ, ತಂದೆ ಮತ್ತು ಅಣ್ಣನ ಅವಶ್ಯಕತೆಗಳನ್ನು ಈಡೇರಿಸುವ ಸೇವಕಿಯಾಗಿ ರೂಪುಗೊಳ್ಳುತ್ತಾಳೆ. ಅವಳಿಗೆ ಮನೆಯಲ್ಲಿ ಯಾವುದೇ ಸ್ವಾತಂತ್ರ್ಯವಿರದೆ, ಮನೆಯ ನಾಲ್ಕು ಗೋಡೆಯ ಮಧ್ಯೆ ತಂದೆಯ ನಿರ್ಬಂಧಗಳಿಗೆ ಒಳಪಟ್ಟು ಬದುಕುತ್ತಾಳೆ. ತಂದೆಯ ಆಕಸ್ಮಿಕ ಮರಣ ಮಗ ಕೃಷ್ಣನಿಗೆ ಆಘಾತವಾಗಿ ಈ ಸಮಯದಲ್ಲಿ ದೂರದ ಸಂಬಂಧಿ ರಂಗರಾಯರು ಅವರಿಗೆ ಆಶ್ರಯ ನೀಡುತ್ತಾರೆ. ರಂಗರಾಯರಿಗೆ ಇಬ್ಬರು ಗಂಡು ಮಕ್ಕಳಾದ್ದರಿಂದ ರಂಗರಾಯರ ಕುಟುಂಬದಲ್ಲಿ ಲಕ್ಷ್ಮಿ ಅವರ ಪ್ರೀತಿ, ವಾತ್ಸಲ್ಯಗಳಿಂದ ಬೆಳೆಯುತ್ತಾಳೆ. ರಂಗರಾಯರು ಆರ್ಥಿಕ ಸಾಮರ್ಥ್ಯವಿದ್ದಷ್ಟು ಅವರಿಗೆ ವಿದ್ಯಾಭ್ಯಾಸ ಕೊಡಿಸಿ ಮುಂದೆ ಅವರಿಗೆ ಹೆಚ್ಚಿನ ವಿದ್ಯಾಭ್ಯಾಸ ಒದಗಿಸಲಾರದೆ ಅಸಹಾಯಕರಾದಾಗ ಕೃಷ್ಣಪ್ಪ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ ಅವರು ಕೊಟ್ಟ ಪ್ರೀತಿ, ಆಶ್ರಯವನ್ನು ಧಿಕ್ಕರಿಸಿ ಮನೆ ಬಿಟ್ಟು ಹೋಗುತ್ತಾನೆ. ಲಕ್ಷ್ಮಿ ಅಣ್ಣನ ಜೊತೆ ಹೋಗಲು ಮನಸ್ಸಿಲ್ಲದಿರುವುದು ಆತನ ಅಧಿಕಾರದ ನಿಯಂತ್ರಣದಿಂದ ಒಲ್ಲದ ಮನಸ್ಸಿನಿಂದ ಹೋಗುತ್ತಾಳೆ. ಹೀಗೆ ಲಕ್ಷ್ಮಿ ಅಣ್ಣನ ಇಚ್ಛೆಯಂತೆ ಆತನ ಸ್ನೇಹಿತನನ್ನು ವಿವಾಹವಾಗುತ್ತಾಳೆ. ಹೀಗೆ ಇಲ್ಲಿ ಹೆಣ್ಣು ತಂದೆ ಇದ್ದಾಗ ಆತನ ಆಣತಿಯಂತೆ ಆತನ ಮರಣದ ನಂತರ ಅಣ್ಣನ ನಿಯಂತ್ರಣಕ್ಕೆ ಒಳಪಟ್ಟು ಬದುಕುವ ಅನಿವಾರ್ಯವಿದೆ. ಹೀಗೆ ತಂದೆಯ ಹುಂಬತನದಲ್ಲಿ ಬೆಳೆದ ಕೃಷ್ಣ ತಾಯಿಯ ಮಮತೆಯನ್ನು ಪಡೆಯದೆ ಬಂಧುಗಳನ್ನು, ಸ್ನೇಹಿತರನ್ನು ಗಾಢವಾಗಿ ಕಾಣದೆ ಏಕಾಂಗಿಯಾಗಿ ಬದುಕುತ್ತಾನೆ. ಈ ಹುಂಬತನದಿಂದ ಪತ್ನಿ ರುಕ್ಕಿಯನ್ನು ಸುಖವಾಗಿಡದೆ ಅವಳನ್ನು ಮಾನಸಿಕವಾಗಿ ಹಿಂಸಿಸುತ್ತಾನೆ. ಅಲ್ಲದೇ ರುಕ್ಕಿಯ ತಾಯಿಯಾಗುವ ಬಯಕೆಯನ್ನು ಈಡೇರಿಸದೆ ತನಗೆ ಇಚ್ಛೆ ಬಂದಂತೆ ಬದುಕುತ್ತಾನೆ. ಹೀಗೆ ಇಲ್ಲಿ ಹೆಣ್ಣು ಗಂಡನ ಮನೆಯಲ್ಲಿ ಸ್ವಚ್ಛಂದವಾಗಿ ಬದುಕದೆ ಭಯಬೀತಿಗಳಿಂದ ನಿರ್ಬಂಧದ ವಾತಾವರಣದಲ್ಲಿ ಬದುಕುವ ಪರಿಸ್ಥಿತಿಯಿದೆಯೇ ಹೊರತು ಅನ್ಯಮಾರ್ಗಗಳಿಲ್ಲ. ಪುರುಷನ ಈ ವರ್ತನೆ ಆತನು ತನ್ನ ವೃತ್ತಿಯ ನೆರೆಹೊರೆಯವರ ಜೊತೆ ಬೆರೆಯದೆ ತನ್ನ ಹಾಗೂ ತನ್ನ ಕುಟುಂಬದ ಅಶಾಂತಿಗೆ ಕಾರಣವಾಗುತ್ತಾನೆ ಎಂಬುದನ್ನು ಲೇಖಕಿ ಈ ಕಥೆಯಲ್ಲಿ ವ್ಯಕ್ತಪಡಿಸುತ್ತಾರೆ.

'ಭ್ರಾಂತಿ' ಕಥೆಯಲ್ಲಿ ಸುಬ್ರಹ್ಮಣ್ಯಶಾಸ್ತ್ರಿಗಳು ವೈದಿಕ ಮನೆತನದ ಬಡಕುಟುಂಬ ದವರಾಗಿರುತ್ತಾರೆ. ಆರ್ಥಿಕ ಪರಿಸ್ಥಿತಿ ಆ ಕುಟುಂಬದ ಅಶಾಂತಿಗೆ ಕಾರಣವಾಗಿದೆ. ಇಲ್ಲಿ

ಶಾಸ್ತ್ರಿಗಳು ಪತ್ನಿ ಭಾಗೀರಥಿಯನ್ನು ಸೇವಕಿಯಾಗಿ ಕಾಣದೆ ಒಬ್ಬ ವ್ಯಕ್ತಿಯಾಗಿ ನೋಡುತ್ತಾರೆ. ಶಾಸ್ತ್ರಿಗಳು ಸಂಗೀತಗಾರರಾಗಿದ್ದು ಹಾಡುವುದರ ಮೂಲಕ ಹಣವನ್ನು ಸಂಪಾದಿಸುತ್ತಿದ್ದರು. ಅವರ ಹಾಡುಗಾರಿಕೆಯಿಂದ ಈ ಕುಟುಂಬದ ಕನಿಷ್ಠ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಅಸಾಧ್ಯವಾಗಿತ್ತು. ಆದರೆ ಆ ಮನೆಯ ಒಡತಿ ಭಾಗೀರಥಿಗೆ ಮಗುವಾಯಿತೆಂದು ಮನೆ ಪರಿಸ್ಥಿತಿ ಸುಧಾರಿಸಿತ್ತು. ಹೀಗೆ ಇಲ್ಲಿ ಮಹಿಳೆ ಗಂಡನ ಸಂಪಾದನೆಯಲ್ಲಿ ಅಚ್ಚುಕಟ್ಟಾಗಿ ಸಂಸಾರ ಮಾಡುವಲ್ಲಿ ಸಮರ್ಥಳಾಗಿದ್ದಾಳೆ. ಆದರೆ ಹೆಣ್ಣಿಗೆ ಕನಿಷ್ಠ ಆಸೆಗಳಿದ್ದು ಅವುಗಳನ್ನು ಗಂಡ ಈಡೇರಿಸದಾಗ ಬೇಸರಗೊಳ್ಳುವುದು ಸಹಜ. ಅವಳ ಈ ಬೇಸರ ಗಂಡನ ಹಾಡುಗಾರಿಕೆ. ಇದರಿಂದ ಆತನಿಗೆ ಒದಗುವ ಕೀರ್ತಿಯನ್ನು ಸಹ ತಿರಸ್ಕಾರದಿಂದ ಕಾಣುತ್ತಾಳೆ. ಅಲ್ಲದೆ ಗಂಡನ ಸಂಗೀತಕಛೇರಿಯ ಆಹ್ವಾನವನ್ನು ತಿರಸ್ಕರಿಸಿ ಮನೆಯ ಕೆಲಸಗಳಿಗೆ ತೊಡಗಿಸಿಕೊಳ್ಳುತ್ತಾಳೆ. ಪತ್ನಿಯ ತಿರಸ್ಕಾರದ ಕಾರಣ ಅರಿಯದೆ ತನ್ನ ಸಂಗೀತವನ್ನು ಮೆಚ್ಚುವ ಹೆಣ್ಣು ಲಲಿತೆಯ ಸಹವಾಸದಲ್ಲಿ ತೊಡಗುತ್ತಾನೆ. ಲಲಿತೆಯಲ್ಲಿ ಶಾಸ್ತ್ರಿಗಳು ತನ್ನ ಪತ್ನಿಯಲ್ಲಿ ಕಾಣದ ಸಂಗೀತ ಪ್ರೀತಿ, ಮಾತಿನ ಕಲೆ, ಜಾಣತನದಿಂದ ಆಕರ್ಷಿತಗೊಂಡು ವಿವಾಹಗೊಳ್ಳುತ್ತಾನೆ. ಗಂಡನ ಈ ಅನೈತಿಕ ಸಂಬಂಧ ಸಮಾಜ ತಿಳಿದರೂ ಹೆಂಡತಿ ಭಾಗೀರಥಿಗೆ ಅದರ ಲವಲೇಶವೂ ತಿಳಿಯದ ಮುಗ್ಧಳು. ಭಾಗೀರಥಿ ತನ್ನ ಬದಲಾದ ಮನೆಯ ಕೆಲಸದಿಂದ ಜೀವನದಲ್ಲಿ ಯಾವುದೇ ಹೊಸತನವನ್ನು ಕಾಣದೆ ಗಂಡನ ಮೇಲೆ ಹುಸಿಕೋಪ ತೋರಿಸಿದರೂ ಸಹ ಗಂಡನ ಸಂಗೀತ ಕಾರ್ಯಕ್ರಮದಲ್ಲಿ ಭಾಗವಹಿಸಿ ತನ್ಮಯಳಾಗಿ ಹಾಡನ್ನು ಕೇಳುತ್ತಾ ತನ್ನ ಗಂಡನ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ. ಹೀಗೆ ಹೆಣ್ಣು ತನ್ನ ಮುಗ್ಧಪ್ರೀತಿಯಿಂದ ಗಂಡನ ಮನಸ್ಸನ್ನು ಬದಲಾಯಿಸುವುದರ ಮೂಲಕ ಆ ಹೆಣ್ಣಿನ ಸಹವಾಸದಿಂದ ಗಂಡನ ಮನಃಪರಿವರ್ತನೆಯಾಗಿ ತನ್ನ ಮನೆಯ ಬಗ್ಗೆ ಒಲವು ಮೂಡಿಸುವುದನ್ನು ಕಾಣುತ್ತೇವೆ. ಹೀಗೆ ಇಲ್ಲಿ ಶಾಸ್ತ್ರಿಗಳು ತಮ್ಮ ತಪ್ಪಿನ ಅರಿವಾಗಿ ಪಶ್ಚಾತ್ತಾಪಗೊಂಡು ನೈತಿಕ ಪ್ರಶ್ನೆಯನ್ನು ಎದುರಿಸಿ ತಮ್ಮ ಹಾಡುಗಾರಿಕೆಗೆ ಯಾವುದೇ ಮಹತ್ವವಿಲ್ಲದ ಹಳ್ಳಿಗೆ ಹಿಂದಿರುಗುತ್ತಾರೆ. ಗಂಡನ ಹಳ್ಳಿಗೆ ಹಿಂದಿರುಗುವ ಕಾರಣವನ್ನು ಹೆಂಡತಿ ತಿಳಿಯಲಾರದಷ್ಟು ಮುಗ್ಧ ಪಾತ್ರವಾಗಿ ಮೂಡಿಬರುತ್ತಾಳೆ. ಪತ್ನಿಯ ನಿಷ್ಠೆ, ಪವಿತ್ರವಾದ ಪ್ರೇಮ ಕಷ್ಟಕಾಲದಲ್ಲಿ ಮನೆಗೆ ಮಾಡಿದ ಸೇವೆ ಶಾಸ್ತ್ರಿಗಳಿಗೆ ವೇಶ್ಯೆಯ ಮೂಲದಿಂದ ಬಿಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೀಗೆ ಇಲ್ಲಿ ಗೃಹಿಣಿಯ ಪ್ರಾಮಾಣಿಕ ಪ್ರೇಮ ಅವಳ ಕುಟುಂಬ ಉಳಿಯಲು ಸಾಧ್ಯವಾಗಿದೆ.

ದಾಂಪತ್ಯದಲ್ಲಿ ಹೆಣ್ಣು ವಿದ್ಯೆ, ಉದ್ಯೋಗವಿರದೆ ತನ್ನತನವನ್ನು ಅರಿತುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಲೇಖಕಿ ಹಲವಾರು ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಆದರೆ 'ಭಾನುವಾರ' ಕಥೆಯಲ್ಲಿ ಬರುವ ಮಾಲತಿ ಮೇಲಿನ ಮಹಿಳೆಯರಿಗಿಂತ ಭಿನ್ನವಾಗಿದ್ದಾಳೆ. ಮಾಲತಿ ಇರುವ ಸಂಸಾರ ಗಂಡ, ಅತ್ತೆ, ಮಾವ ಮುಂತಾದ ಸದಸ್ಯರಿಂದ ಕೂಡಿದೆ. ಇಲ್ಲಿ ಮಾಲತಿ

ವಿದ್ಯಾವಂತೆಯಾಗಿದ್ದು ಉದ್ಯೋಗಸ್ಥಳಾಗಿದ್ದಾಳೆ. ಮಾಲತಿಯ ಗಂಡನಿಗೆ ಅವಳು ಕೆಲಸಕ್ಕೆ ಹೋಗುವುದು ಇಷ್ಟವಿಲ್ಲದಿದ್ದರೂ ಅವಳ ಉತ್ಸಾಹದಿಂದ ಅವಳನ್ನು ತಡೆಯಲಾಗಲಿಲ್ಲ. ವಾರದ ದಿನ ಪೂರ್ತಿ ಹೊರಗಿನ ದುಡಿಮೆಯಲ್ಲಿ ತೊಡಗಿದ ಮಾಲತಿಗೆ 'ಭಾನುವಾರ' ಅತ್ತೆಯ ಅಡುಗೆ ಕೆಲಸದಲ್ಲಿ ಭಾಗಿಯಾಗಿ ನೆರವಾಗುತ್ತಾಳೆ. ಗಂಡಸರಿಗೆ ರಜೆಯ ದಿನ ಎಲ್ಲ ಚಂಚಲದಿಂದ ಮುಕ್ತವಾದ ನೆಮ್ಮದಿಯ ದಿನವಾದರೆ ಹೆಣ್ಣು ಆ ದಿನ ಮನೆ ಕೆಲಸದಲ್ಲಿ ತೊಡಗಿ ಆ ಕುಟುಂಬದ ಅತ್ತೆ, ಮಾವ, ಗಂಡನ ಬೇಡಿಕೆಗಳನ್ನು ಈಡೇರಿಸಿ ಪ್ರೀತಿಗೆ ಪಾತ್ರಳಾಗುತ್ತಾಳೆ. ಇಲ್ಲಿ ಅತ್ತೆ, ಮಾವಂದಿರು ಅವಳ ಅಡುಗೆಯನ್ನು ಮೆಚ್ಚಿ ಅವಳ ಬಿಡುವಿಲ್ಲದ ದುಡಿಮೆಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸುತ್ತಾರೆ. ಅಲ್ಲದೆ ಸ್ನೇಹಿತರು ನೆರೆಹೊರೆಯವರ ಕಷ್ಟಗಳಿಗೆ ಸ್ಪಂದಿಸಿ ಆಯಾಸವಾಗದೆ ಗಂಡನ ಕೆಲಸದಲ್ಲಿಯೂ ನೆರವಾಗಿ ದಣಿವಿಲ್ಲದೆ ಬದುಕಿನ ಬಗ್ಗೆ ಚೇತನವುಳ್ಳ ಹೆಣ್ಣಾಗಿ ರೂಪಿಸಿದ್ದಾರೆ. ಹೀಗೆ ಇಲ್ಲಿ ಮನೆಯ ಒಳ ಹಾಗೂ ಹೊರ ದುಡಿಮೆಯಿಂದ ಗಂಡನ ಮನೆಯಲ್ಲಿ ಒಂದು ಸ್ಥಾನವನ್ನು ದೊರಕಿಸುತ್ತಾಳೆ. ಅಲ್ಲದೆ ಹೊರ ವಾತಾವರಣದಿಂದ, ಜನರ ಸಹವಾಸದಿಂದ ಆ ಸಂಸಾರವನ್ನು ಮತ್ತಷ್ಟು ಸುಖವಾಗಿಡಲು ಪ್ರಯತ್ನಿಸುತ್ತಾಳೆ ಎಂಬುದು ಕಥೆಯ ಉದ್ದೇಶವಾದಂತಿದೆ. ಆದರೆ ಇಲ್ಲಿ ಸ್ತ್ರೀ ದುಪ್ಪಟ್ಟು ದುಡಿಮೆಗೆ ಒಳಪಟ್ಟು ಆಯಾಸಗೊಳ್ಳುತ್ತಿರುವುದು ಅರಿಯದಾಗುತ್ತಾಳೆ.

ಇವರ ಕಥೆಗಳಲ್ಲಿ ಹೆಣ್ಣು ವಿದ್ಯೆ, ಆರ್ಥಿಕ ಮಟ್ಟ, ಜಾಣತನಗಳಲ್ಲದೆ ಗಂಡನ ಮನೆಯಲ್ಲಿ ಗಂಡನ ಹಾಗೂ ಅವರ ಮನೆಯ ಪರ ತಿರಸ್ಕಾರಕ್ಕೆ ಅವಮಾನಿತಳಾಗುತ್ತಾಳೆ ಎಂಬುದು ಕಾಣುತ್ತದೆ. ಆದರೆ ಇದಕ್ಕೆ ಭಿನ್ನವಾದ ಮಹಿಳೆ 'ಅಕ್ಕನಂತಿಲ್ಲ' ಎಂಬ ಕಥೆಯಲ್ಲಿ ಮೂಡಿಬಂದಿದೆ. ವಿಜಯ ಎಂಬ ಹೆಣ್ಣುಮಗಳು ಸಿರಿತನದ ತಂದೆಯ ಮನೆಯಲ್ಲಿ ಬೆಳೆದು ವಿದ್ಯೆ, ರೂಪ ಎಲ್ಲರನ್ನು ಆಕರ್ಷಿಸುವ ಚತುರೆ. ಮನೆಯ ಅಡುಗೆ, ಅಲಂಕಾರಗಳಲ್ಲಿ ತನ್ನ ಚತುರತೆಯನ್ನು ಕಾಣಿಸುವ ಕಲೆಗಾರ್ತಿ. ಈ ಮಹಿಳೆ ವೈದ್ಯನಾದ ವಿಶ್ವನಾಥನನ್ನು ವಿವಾಹವಾಗಿ ಗಂಡನ ಮನೆಯಲ್ಲಿ ನೆಲೆಸಿದಳು. ಇವಳ ಆಗಮನದಿಂದ ಮನೆಯ ವಾತಾವರಣ ಬದಲಾಯಿತಲ್ಲದೆ ಗಂಡನ ಸ್ನೇಹಿತರ ಬಂಧುಗಳ ಮೆಚ್ಚುಗೆ ಪಡೆದುಕೊಂಡಳು. ಅಲ್ಲದೆ ಸಮಾಜಸೇವಕಿಯಾಗಿ ಗುರುತಿಸಿಕೊಂಡು ದಣಿವಿಲ್ಲದೆ ಒಂದಲ್ಲಾ ಒಂದು ಕೆಲಸದಲ್ಲಿ ತೊಡಗಿಸಿಕೊಂಡು ತನ್ನ ಕೌಶಲ್ಯತೆಯಿಂದ ಸಮಾಜದ ಮೆಚ್ಚುಗೆ ಪಡೆಯುತ್ತಿದ್ದಳು. ಗಂಡ ಪತ್ನಿಯು ಸಮಾಜದಲ್ಲಿ ಗುರುತಿಸಿಕೊಳ್ಳುವುದನ್ನು ಸಹಿಸದಾದನು. ಅದನ್ನು ವ್ಯಕ್ತಪಡಿಸದೆ ತನ್ನಲ್ಲೇ ಕೊರಗುವನು. ಆದರೆ ವಿಜಯಳ ಆಕಸ್ಮಿಕ ಮರಣದ ನಂತರ ಲಕ್ಷ್ಮಿಯನ್ನು ವಿವಾಹವಾದ. ಲಕ್ಷ್ಮಿ ಸಂಕೋಚ ಸ್ವಭಾವದವಳು. ಅವಳ ಅಕ್ಕನಂತೆ ಎಲ್ಲರೊಂದಿಗೆ ಬೆರೆಯುವವಳಲ್ಲ. ಅಂಜುವವಳು. ಅಲ್ಲದೇ ಅಡುಗೆ ಮನೆಯನ್ನು ಓರಣವಾಗಿ ಇಡುವ ಕಲೆಯಿಲ್ಲ. ಗಂಡನನ್ನು ಮೆಚ್ಚಿಸಲು ಅಕ್ಕನಂತೆ ತನ್ನನ್ನು ರೂಢಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಅವಳ ಈ ವರ್ತನೆಯನ್ನು ಕಂಡ ವಿಶ್ವನಾಥ

ಲಕ್ಷ್ಮಿಯನ್ನು ಕುರಿತು "ನಿನಗೆಲ್ಲೋ ಹುಚ್ಚು ಹಿಡಿದಿದೆ ಲಕ್ಷ್ಮಿ! ಮಾತು ಮಾತಿಗೂ ಅಕ್ಕ, ಅಕ್ಕ ನನಗೆ ನೀನು ಅವಳಂತಿರುವುದು ಬೇಡ. ಸುಖ-ದುಃಖಗಳಲ್ಲಿ ಸಮಪಾಲು ಹೊರುವ ಹೆಂಡತಿ ಬೇಕು. ಪ್ರೇಮ ಕೊಡುವ, ಪ್ರೇಮ ನಿರೀಕ್ಷಿಸುವ ಸಾಧಾರಣ ಹೆಂಗಸು ಬೇಕು. ದಿನದ ಇಪ್ಪತ್ನಾಲ್ಕು ಗಂಟೆಯಲ್ಲಿ ಸಿಂಹಾಸನದ ಮೇಲೆ ಕುಳಿತು ಪೂಜೆಯನ್ನು ಅಪೇಕ್ಷಿಸುವ ಶಕ್ತಿಯ ಅವತಾರ ಬೇಡ", "ರಾಮು ಬಂದರೆ ಹೆದರಿ ಒಳಗೋಡುವ ಲಕ್ಷ್ಮಿ ಬೇಕು. ರಮಾಬಾಯಿಗೆ ಹೆದರಿ ಬಾಗಿಲ ಹಿಂದೆ ಅವಿತುಕೊಳ್ಳುವ ಲಕ್ಷ್ಮಿ ಬೇಕು. ರಾಮಣ್ಣನಿಗೆ ಅಸಮಾಧಾನವಾಗದಂತೆ ಜನರನ್ನು ಊಟಕ್ಕೆ ಕರೆಯುವ ಲಕ್ಷ್ಮಿ ಬೇಕು".(ಹೊಸಜಗತ್ತು, ಪು.೨೫) ಈ ಮಾತುಗಳ ಮೂಲಕ ಪುರುಷ ಸ್ತ್ರೀಯನ್ನು ಯಾವಾಗಲೂ ಮನೆಯ ನಾಲ್ಕು ಗೋಡೆಯ ಮಧ್ಯೆ ಬದುಕಿ, ಹೊರಗಿನ ಜನರ ಸಹವಾಸವಿಲ್ಲದೆ ಮನೆಯ ಹೊರಗಿನ ಕೆಲಸಗಳಲ್ಲಿ ತೊಡಗಿಸಿಕೊಳ್ಳದೆ ಗಂಡ, ಮಕ್ಕಳ ಸೇವೆ ಮಾಡುತ್ತಾ ಅವರ ಪ್ರೀತಿಗೆ ಪಾತ್ರರಾಗುವ ಹೆಣ್ಣನ್ನು ಬಯಸುವ ಪುರುಷನ ಸ್ವಾರ್ಥವನ್ನು ಬಯಲು ಮಾಡುವುದಲ್ಲದೆ ಪಿತೃಪ್ರಧಾನ ವ್ಯವಸ್ಥೆಯನ್ನು ಅಧಿಕೃತಗೊಳಿಸುವಂತೆ, ಅದು ಬದಲಾವಣೆಗೆ ಒಳಗಾಗದಿರುವಂತೆ ಇಚ್ಛಿಸುತ್ತಾನೆ. ಗಂಡಸು ಹೆಂಗಸನ್ನು ಯಾವಾಗಲೂ ತನ್ನ ಅಧೀನತೆಯಲ್ಲಿ ಕಾಣಲು ಬಯಸುತ್ತಾನೆಯೇ ಹೊರತು ಅವಳನ್ನು ವ್ಯಕ್ತಿಯಾಗಿ ಪರಿಗಣಿಸಿ ಮನೆಯಲ್ಲಿ ಅವಳ ಅಸ್ತಿತ್ವವನ್ನು ಪರಿಗಣಿಸುವುದಿಲ್ಲ. ಲಕ್ಷ್ಮಿ ಗಂಡನ ಈ ಮಾತುಗಳಿಗೆ ಆಲೋಚಿಸುವ ಸಾಮರ್ಥ್ಯವಿರದೆ ತಾನಿರುವ ಸ್ಥಿತಿಯಲ್ಲೇ ಮುಂದುವರಿಯುವಂತೆ ಕಂಡುಬರುತ್ತಾಳೆಯೇ ಹೊರತು ಅವಳ ಅರಿವಿನಲ್ಲಿ ಯಾವುದೆ ಬದಲಾವಣೆಗಳಾಗುವುದಿಲ್ಲ.

ಸಾವಿತ್ರಮ್ಮನವರು ಅಂದಿನ ಕಾಲದ ದೇಶವಿಭಜನೆಯ ಸಮಯದಲ್ಲಿ ಉಂಟಾದ ಯುದ್ಧ ಹಾಗೂ ಸಾಮೂಹಿಕ ಗಲಭೆಗಳಿಂದ ಕುಟುಂಬದ ಮೇಲೆ ಅದರಲ್ಲೂ ಹೆಣ್ಣಿನ ಮೇಲೆ ಉಂಟಾಗುವ ಪರಿಣಾಮವನ್ನು 'ನಿರಾಶ್ರಿತ' ಕತೆಯ ವಸ್ತುವಾಗಿ ಸ್ವೀಕರಿಸಿ ಹೆಣ್ಣಿಗೆ ಉಂಟಾಗುವ ಮಾನಹಾನಿಯನ್ನು ಅಭಿವ್ಯಕ್ತಿಸಿದ್ದಾರೆ. ಈ ಕಥೆಯಲ್ಲಿ ಬರುವ ತುಳಸಿ ಎಂಬ ಹೆಣ್ಣು ರಾವಲ್ಪಿಂಡಿಯಲ್ಲಿ ನಡೆದ ಗಲಭೆಯಲ್ಲಿ ಸಿಕ್ಕು ಕಣ್ಮರೆಯಾಗುತ್ತಾಳೆ. ಅವಳು ಪುನಃ ತನ್ನ ಗಂಡನಿಗೆ ಸಿಕ್ಕಾಗ ಅವನಿಗೆ ಅವಳನ್ನು ಸ್ವೀಕರಿಸುವ ಮನಸ್ಥಿತಿಯಿಲ್ಲ. ಕಾರಣ ತುಳಸಿ ಒಂದು ಮಗುವಿನ ತಾಯಿಯಾಗಿರುತ್ತಾಳೆ. ಇದನ್ನು ಪ್ರಶ್ನಿಸುವ ಮನಸ್ಥಿತಿ ಗಂಡನಿಗೆ ಉಳಿದಿಲ್ಲ. ಕಾರಣ ಅವುಗಳಿಗೆ ಉತ್ತರ ಕಂಡುಕೊಂಡರೆ ಅದನ್ನು ಅರಗಿಸಿಕೊಳ್ಳಲು ಕಷ್ಟಸಾಧ್ಯ. ಇದೇ ಸಂದರ್ಭದಲ್ಲಿ ಮಹಾತ್ಮರ ಉಪದೇಶವಾಗಿ ಆಕೆಯನ್ನು ಸ್ವೀಕರಿಸುವಂತೆ ಮನ ಒಲಿಸುತ್ತಾರೆ. ಈ ಸಂದರ್ಭದಲ್ಲಿ ಗಂಡ ಹೆಂಡತಿಯನ್ನು ಮಾತ್ರ ಸ್ವೀಕರಿಸುತ್ತಾನೆ. ಇಲ್ಲಿ ಚಂದ್ರು ತನ್ನ ಈ ನಿಲುವಿನಿಂದ ಗಂಡಸಾಗಿಯೇ ಉಳಿಯುತ್ತಾನೆಯೇ ಹೊರತು ಗಂಡನಾಗಿ ಅಲ್ಲ. ಹೀಗೆ ಗಂಡಸಿನ ಮನಸ್ಸನ್ನು ತೆರೆದಿಡುವ ಯತ್ನವನ್ನು ಲೇಖಕಿ ಮಾಡಿದ್ದಾರೆ.

ಸಾವಿತ್ರಮ್ಮನವರು ತಮ್ಮ ಕತೆಗಳಲ್ಲಿ ಹೆಣ್ಣಿನ ಮನೋದೈಹಿಕ ಸಮಸ್ಯೆಗಳನ್ನು ಬಿಚ್ಚಿಡುವ ಪ್ರಯತ್ನ ಮಾಡಿದ್ದಾರೆ. ಇವರ ಕಥೆಗಳಲ್ಲಿ ಒಡಮೂಡುವ ಹೆಣ್ಣುಗಳು ವಿವಿಧ ಬಗೆಯ ಆಸೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುವರು. ಓದಬೇಕೆಂದು ಆಸೆಯಿರುವ ಹುಡುಗಿಯರು ಅವರನ್ನು ಮದುವೆಯ ಬಂಧನಕ್ಕೆ ಒಳಪಡಿಸುವ ಪೋಷಕರು, ಹೆಣ್ಣು ಮಗುವೆಂದು ಅವಳನ್ನು ಮನೆಯಲ್ಲಿಟ್ಟುಕೊಳ್ಳುವುದಿಲ್ಲ. ಗಂಡ ತನ್ನ ಆಸೆಯನ್ನು ಪೂರೈಸದೆ ಇದ್ದಾಗ ಮಾನಸಿಕ ಆಘಾತಕ್ಕೆ ಒಳಗಾಗಿ ಮನೋರೋಗಿಗಳಾಗುತ್ತಾರೆ. ಮನಸ್ಸಿನ ಸುಪ್ತ ಆಸೆಗಳೆಲ್ಲ ತೀರದೆ ಇರುವ ಸಂದರ್ಭದಲ್ಲಿ ಹೆಣ್ಣು ತನ್ನ ಒಳಮನಸ್ಸಿನಲ್ಲಿ ಒಂದು ಭ್ರಮೆಯನ್ನು ಪೋಷಿಸುತ್ತಾಳೆ. ಇಂತ ಭ್ರಮೆಗಳು ಕೆಲವು ಹೆಣ್ಣುಮಕ್ಕಳಲ್ಲಿ ಈಡೇರದೆ ಇರುತ್ತವೆ. ಕೆಲವು ಹೆಣ್ಣುಮಕ್ಕಳು ಅದನ್ನು ಸಾಕಾರಗೊಳಿಸಿಕೊಳ್ಳುತ್ತಾರೆ. ಹೀಗೆ ಮದುವೆ, ಸಂಸಾರದ ಹೊರೆಯಲ್ಲಿ ನಲುಗುವ ಇಪ್ಪತ್ತನೇ ಶತಮಾನದ ಮೇಲ್ವರ್ಗದ ಹೆಣ್ಣುಮಕ್ಕಳ ಬದುಕುಗಳು ಅವರ ಬಹುಪಾಲು ಕಥೆಗಳಾಗಿವೆ.

ಈ ಹೆಣ್ಣುಮಕ್ಕಳು ಹತ್ತು–ಹದಿನೈದನೇ ವಯಸ್ಸಿನಲ್ಲಿ ವಿವಾಹವಾಗಿ ಹಳ್ಳಿಯ ಪರಿಸರದಿಂದ ಬಂದವರು. ಇವರು ನಗರದ ಆಧುನಿಕ ಪುರುಷರ ಹಿತಾಸಕ್ತಿಗಳಿಗೆ ಹೊಂದಿಕೊಳ್ಳಲಾರದೆ ಗಂಡನಿಂದ ತಿರಸ್ಕೃತರಾಗುತ್ತಾರೆ. ಅಂದಿನ ಆಧುನಿಕ ಪರಿಸರದಲ್ಲಿ ವಿದ್ಯಾವಂತ ಮೇಲ್ವರ್ಗದ ಸ್ತ್ರೀಯರಿದ್ದು ಹಳ್ಳಿ ಹಾಗೂ ನಗರ ಪರಿಸ್ಥಿತಿಯಲ್ಲಿ ಹೆಣ್ಣಿನ ಬದುಕನ್ನು ಪರಿಶೀಲಿಸುತ್ತಾರೆ. ಹೆಣ್ಣು ಆಧುನಿಕತೆಗೆ ತೆರೆದುಕೊಳ್ಳುವುದೇ ಅಲ್ಲಿನ ಸಂಪ್ರದಾಯದ ಪರಿಸ್ಥಿತಿಗೆ ಕೊರತೆಯಾಗಿ ಕಾಣುವ ಸಮಾಜವನ್ನು ಬಹಿಷ್ಕರಿಸಿದ್ದಾರೆ. ಹೆಣ್ಣು ಆಧುನಿಕಗೊಳ್ಳುವುದು ಒಂದು ಮನೋಭಾವವಾಗಿ ಸ್ವೀಕರಿಸಬೇಕಾಗಿದೆ ಎನ್ನುವ ವಾಸ್ತವತೆಯನ್ನು ಕಥೆಗಳಲ್ಲಿ ಕಾಣಿಸಿದ್ದಾರೆ.

೩.೮. ವಾಣಿ

ವಾಣಿಯವರು ನವೋದಯ ಕಾಲದಲ್ಲಿ ಗುರುತಿಸಿಕೊಂಡ ಪ್ರಮುಖ ಕಥೆಗಾರ್ತಿ. ಇವರ 'ಕಸ್ತೂರಿ', 'ಅಪರೂಪದ ಅತಿಥಿ', 'ಬಾಬು ಬರ್‍ತಾನೆ', 'ಅರ್ಪಣೆ' ಇತ್ಯಾದಿ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಇವರ ಕಥೆಗಳಲ್ಲಿ ಮೇಲ್ವರ್ಗದ, ಮಧ್ಯಮವರ್ಗದ ಸ್ತ್ರೀಯರು ಕಂಡುಬರುತ್ತಾರೆ. ಗೃಹಿಣಿ, ವಿಧವೆ, ಹದಿಹರೆಯದ ಮಹಿಳೆ, ಪರಿತ್ಯಕ್ತ ಮಹಿಳೆ, ವಿದ್ಯಾವಂತೆ, ವಕೀಲೆ, ವಂಚಿತೆ, ದುಡಿಯುವ ಮಹಿಳೆಯರು ಹೀಗೆ ವಿವಿಧ ವಯಸ್ಸಿನ ಮಹಿಳೆಯರಿದ್ದು ಇಲ್ಲಿ ಸಾಂಪ್ರದಾಯಿಕ ಕುಟುಂಬ, ಬಡಕುಟುಂಬ, ಗಂಡನಿಲ್ಲದ ತಾಯಿ ಮಕ್ಕಳಿರುವ ಕುಟುಂಬ, ಶಿಥಿಲಗೊಂಡ ದಾಂಪತ್ಯ, ಸಾಮರಸ್ಯ, ಹೊಂದಾಣಿಕೆಯ ದಾಂಪತ್ಯ ಇತ್ಯಾದಿ ಕುಟುಂಬಗಳನ್ನು ಇವರ ಕಥಾಸಾಹಿತ್ಯದಲ್ಲಿ ನಿರೂಪಣೆಗೊಂಡಿವೆ.

ಇವರ ಕಥೆಗಳಲ್ಲಿ ಬರುವ ಹುಡುಗಿಯರು ಸಾಂಪ್ರದಾಯಿಕ ಮನೆತನದಲ್ಲಿ ಬೆಳೆದವರು. ಇಂದಿನ ಆಧುನಿಕ ಸಮಾಜದಲ್ಲಿ ಹುಡುಗಿಯರಿಗೆ ಶಿಕ್ಷಣದ ಅವಕಾಶ ಲಭಿಸಿದ್ದು, ಸಾಂಪ್ರದಾಯಿಕ ಮನೆತನದ ಹಿರಿಯರು ತಮ್ಮ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ನೀಡುವಷ್ಟು ಸ್ವತಂತ್ರರಾಗಿದ್ದಾರೆ.

ಶಿಕ್ಷಣದ ಸಲುವಾಗಿ ಹಳ್ಳಿಯಿಂದ ನಗರದ ವಸತಿ ನಿಲಯದಲ್ಲಿ ವಾಸಿಸುವ ಸ್ವಾತಂತ್ರ್ಯ ಪಡೆದ ವಿದ್ಯಾವತಿಯಾದ ಶೋಭಾಳಿಗೆ ಸರಿ ತಪ್ಪುಗಳನ್ನು ಚಿಂತಿಸುವ, ಆಲೋಚಿಸುವ ಪ್ರಜ್ಞೆ ಜಾಗೃತವಾಗಿದೆ. ಪರೀಕ್ಷೆಗೆ ಸಿದ್ಧಗೊಳ್ಳುತ್ತಿದ್ದ ಶೋಭಾಳಿಗೆ ಮದುವೆ ಸಂಬಂಧ ನಿಶ್ಚಯಿಸಲು ತಂದೆಯಿಂದ ಕರೆ ಬಂದಿದೆ. ಮಗಳಿಗೆ ಊರಿಗೆ ಹೋಗುವ ಮನಸ್ಸಿಲ್ಲದಿದ್ದರೂ ತಂದೆಯ ಆಜ್ಞೆಯಂತೆ ಮನೆಗೆ ಹಿಂದಿರುಗಲೇಬೇಕಾಯಿತು. ಅವರಿಗಿದ್ದ ದುಗುಡಗಳು ತಾಯಿಯ ವಾತ್ಸಲ್ಯದಿಂದ ಮರೆಯಾಯಿತು. ಶೋಭಾಳ ತಾಯಿ, ತಂದೆ, ಮಗ, ಸೊಸೆಯಿರುವ ಈ ಕುಟುಂಬದಲ್ಲಿ ತಂದೆಯೇ ಯಜಮಾನ. ಆ ಮನೆಯ ಎಲ್ಲ ಸದಸ್ಯರು ಶೋಭಾಳನ್ನು ವಿವಾಹಕ್ಕೆ ಒಪ್ಪಿಸಲು ಸಿದ್ಧರಾಗಿದ್ದಾರೆ. ಅದಕ್ಕಾಗಿ ಬಂದ ಅಳಿಯನಿಗಾಗಿ ಮಗಳನ್ನು ನೋಡಿ ಹೋಗಲು, ಸಂಬಂಧ ನಿಶ್ಚಯಿಸಲು ಎಲ್ಲರೂ ಸಂಯಮಿಗಳಾಗಿದ್ದಾರೆ. ಇಲ್ಲಿ ಶೋಭಾಳ ತಾಯಿಯು ಸೊಸೆಯ ಬಾಣಂತಿತನ ಮಾಡುತ್ತ ಮನೆ ಕೆಲಸ ಹಾಗೂ ಅಡುಗೆ ಕೆಲಸದಿಂದ ಬಿಡುವಿಲ್ಲದೆ ದುಡಿಯುತ್ತಿದ್ದಾಳೆ. ಆದರೆ ಮನೆಯ ಪುರುಷರು ಯಾವುದೇ ಕೆಲಸವಿಲ್ಲದೆ ಊಟ, ನಿದ್ರೆ ಮಾಡುವುದರಲ್ಲಿ ಕಾಲ ಕಳೆಯುತ್ತಾರೆ. ಅಲ್ಲದೇ ಹೆಂಡತಿಯನ್ನು ವೈಯಕ್ತಿಕವಾಗಿ ಮಾತನಾಡಿಸಲು ಸಹ ಆಗದೆ ಎಲ್ಲ ಮಹಿಳೆಯರು ದುಡಿಮೆಯಲ್ಲಿ ತೊಡಗಿದ್ದಾರೆ. ಶೋಭಾಳ ಅತ್ತಿಗೆಯ ತಾಯ್ತನದ ಸಮಯದಲ್ಲಿ ಅಣ್ಣ ಅವಳ ಆ ದಿನಗಳ ಸಮಸ್ಯೆಯನ್ನು ಲೆಕ್ಕಿಸದೆ ಲೈಂಗಿಕವಾಗಿ ಅವಳನ್ನು ಬಳಸಿಕೊಳ್ಳಲು ಕಾಯುತ್ತಾನೆ. ಹೀಗೆ ಶೋಭಾಳ ಪಾತ್ರದ ಮೂಲಕ ಆ ಮನೆಯ ಮಹಿಳೆಯನ್ನು ಗಮನಿಸಿ ಶೋಭಾ ತನ್ನನ್ನು ನೋಡಲು ಬರುವ ಬಾಬುವನ್ನು ಕಾಯದೆ ಪರೀಕ್ಷೆಗೆ ಸಿದ್ಧಗೊಳ್ಳಲು ಹಿಂದಿರುಗುತ್ತಾಳೆ. ಅಲ್ಲದೇ ಓದಿಗಾಗಿ ತನ್ನ ವಿವಾಹವನ್ನು ಮುಂದಕ್ಕೆ ಹಾಕುತ್ತಾಳೆ. ಆದರೂ ಅವಳಲ್ಲಿ ಬಾಬುವನ್ನು ತಿರಸ್ಕರಿಸುವ ಮನಸ್ಸಿಲ್ಲ. ಆದರೆ ವಿವಾಹದ ಚೌಕಟ್ಟಿಗೆ ಬಹು ಬೇಗ ಬೀಳಲು ಅವಳು ಸಿದ್ಧಳಿರದೆ ಮನೆಯವರ ಒತ್ತಾಯವನ್ನು ಧಿಕ್ಕರಿಸಿ ತನ್ನ ವೈಯಕ್ತಿಕ ಆಸೆಯನ್ನು ಈಡೇರಿಸಲು ಮುಂದಾಗುತ್ತಾಳೆ.

'ಮನ ಬಂದಾಗ' ಕಥೆಯಲ್ಲಿ ನಂಜಪ್ಪ ಹೆಸರಿಗೆ ಮಾತ್ರ ಆ ಮನೆಯ ಯಜಮಾನನಾಗಿದ್ದನು. ನಂಜಪ್ಪನ ಹೆಂಡತಿ ತುಳಸಿ ಹಳ್ಳಿಯಲ್ಲಿ ತಾಯಿಯಿಲ್ಲದೆ ತಂದೆಯ ಆಶ್ರಯದಲ್ಲಿ ಬೆಳೆದ ಮಹಿಳೆ. ತಂದೆಯ ಆಸ್ತಿ ಹೊರಹೋಗುವುದು ಬೇಡವೆಂದು ತನ್ನ ಮನೆತನದಲ್ಲಿಯೇ ಉಳಿಯಲು ಸಾಕುಮಗ ನಂಜಪ್ಪನಿಗೆ ವಿವಾಹ ಮಾಡಿದ್ದರು. ಗಂಡು ದಿಕ್ಕಿಲ್ಲದ ಮನೆಯಲ್ಲಿ ಅಳಿಯನನ್ನು ಮಗನಾಗಿ ಕಂಡು ಆ ಮನೆಯ ಎಲ್ಲಾ ಜವಾಬ್ದಾರಿಯನ್ನು ವಹಿಸಲು ನಿರ್ಧರಿಸಿದ್ದರು. ಆದರೆ ಅಳಿಯನ ಬೇಜವಾಬ್ದಾರಿ ಕಂಡು ಮಗಳಿಗೆ ಹೊಲದ ಹಾಗೂ ವ್ಯವಹಾರದ ಎಲ್ಲ ತಿಳುವಳಿಕೆಯನ್ನು ನೀಡಿ ಬೆಳೆಸಿದನು. ನಂಜಪ್ಪನ ಹೆಂಡತಿ ತುಳಸಿ ತನ್ನ ಗಂಡನಿಗೆ ಮನೆಯ ಜವಾಬ್ದಾರಿಯನ್ನು ಹಂಚಲು ಹೋದಾಗ ಬೇಸರದಿಂದ ಮನೆ ತೊರೆದು ಆ ಮನೆಯಲ್ಲಿದ್ದ ಹಣವನ್ನು ಕದ್ದು ಹೊರಟುಹೋದನು. ಅವಳು ಕಂಗಾಲಾದಳು. ತುಳಸಿ

ಇಲ್ಲಿನ ಪುರುಷರು ಮನೆಯ ಯಾವ ಜವಾಬ್ದಾರಿಯನ್ನು ಹೊಂದದಿದ್ದರೂ ಗೌರವಸೂಚಕವಾಗಿ ಇರಬೇಕೆಂದು ಬಯಸುವುದು ಸಹಜ. ತುಳಸಿಯ ಗಂಡ ಈ ರೀತಿ ಮನೆ ತೊರೆದು ಹೋಗಲು ತನ್ನಲ್ಲಿ ಕಾರಣಗಳನ್ನು ಹುಡುಕುತ್ತಾಳೆ. ಮನೆಯ ಜವಾಬ್ದಾರಿಯನ್ನು ತಂದೆಯ ಮರಣದ ಹೊತ್ತಿನಿಂದ ಹೊರಿಸಿದ್ದರೆ ಈ ಸಮಸ್ಯೆ ಎದುರಾಗುತ್ತಿರಲಿಲ್ಲ. ಅಲ್ಲದೆ ಗಂಡನ ಆಸರೆಯಿಲ್ಲದೆ ಮನೆಯ ಎಲ್ಲ ಕೆಲಸಗಳು ನಡೆಯುತ್ತಿರುವಾಗ ಈ ಮನೆಯು ಭದ್ರವಾಗಿರಲು ತನ್ನ ಶ್ರಮದ ಅರಿವಾಗುತ್ತದೆ. ಹೀಗೆ ನಂಜಪ್ಪ ಹಣವಿಲ್ಲದೆ ಒಡೆಯನ ಮನೆಯಲ್ಲಿ ದುಡಿಯುತ್ತಿದ್ದ. ಹಣದ ಮಹತ್ವ ಅರಿತು, ಮನೆಯ ಬಿಡುವಿಲ್ಲದ ಕೆಲಸಗಳಲ್ಲಿ ಪತ್ನಿಯ ಶ್ರಮವರಿತು ತನ್ನ ತಪ್ಪಿನ ಅರಿವಾಗಿ ತಾನು ಸಂಪಾದಿಸಿ ತಂದ ಹಣದೊಂದಿಗೆ ಮನೆಗೆ ಹಿಂದಿರುಗುತ್ತಾನೆ. ಅಲ್ಲದೆ ಅಲ್ಲಿ ತುಳಸಿಯು ಗಂಡನ ಬರುವಿಕೆಗಾಗಿ ಕಾಯುತ್ತಿರುತ್ತಾಳೆ. ಹೀಗೆ ತಪ್ಪುಗಳನ್ನು ತಮ್ಮ ಸ್ವಾನುಭವದಿಂದ ಅರ್ಥ ಮಾಡಿಕೊಂಡು ಹೊಂದಾಣಿಕೆಯಿಂದ ಬದುಕುವ ಕುಟುಂಬವನ್ನು ಕಾಣುತ್ತೇವೆ.

'ಮಿಂಚು' ಕಥೆಯಲ್ಲಿ ಬರುವ ರಾಮು ತನ್ನ ಸೋದರಮಾವನ ಮಗಳಾದ ಲಲಿತೆಯನ್ನು ಬಾಲ್ಯದ ಒಡನಾಟದಿಂದಲೂ ಪ್ರೀತಿಸುತ್ತಿದ್ದ. ಅವರ ತಂದೆ-ತಾಯಿಯ ಈ ಮದುವೆಗೆ ಕುಟುಂಬಗಳು ಒಪ್ಪಿದ್ದು ವಿವಾಹದ ಸಮಯದಲ್ಲಿ ವ್ಯವಹಾರದ ವಿಷಯದಲ್ಲಿ ತಕರಾರಾಗಿ ವಿವಾಹ ಮುರಿದು ಬಿತ್ತು. ಹಿರಿಯರ ನಿರ್ಬಂಧದಿಂದ ಇಲ್ಲಿ ಪ್ರೀತಿಸುವ ಇಬ್ಬರು ವ್ಯಕ್ತಿಗಳು ಅಗಲಿದರು. ಈ ಮನೆತನದಲ್ಲಿ ತಂದೆಯ ಅಧಿಕಾರ ನಡೆಯುತ್ತಿದ್ದು ಅದನ್ನು ಧಿಕ್ಕರಿಸದೆ ರಾಮು ತಂದೆಯ ಇಚ್ಛೆಯಂತೆ ಬೇರೊಬ್ಬ ಹೆಣ್ಣನ್ನು ವಿವಾಹವಾದ. ಗೌರಿ ಗಂಡನ ಮನೆಯ ಹಾಗೂ ಗಂಡನ ಆಸೆಯ ಕನಸುಗಳನ್ನು ಹೊತ್ತು ಬಂದಿದ್ದಳು. ಗಂಡನ ಮೌನ ಅವಳನ್ನು ಕಂಗಾಲಾಗಿಸಿತು. ತಾನು ಎಲ್ಲೆ ಮೀರಿ ತನ್ನ ಪತ್ನಿ ಸ್ಥಾನವನ್ನು ಪಡೆಯಲು ಹೋಗಿ ಗಂಡನಿಂದ ಅವಮಾನಗೊಂಡು ಮೌನ ವಹಿಸಿದ್ದಳು. ಅಲ್ಲದೆ ಮನೆಯಲ್ಲಿ ಗಂಡನ ಪ್ರೀತಿಯಿಲ್ಲದೆ ಅತ್ತೆ, ಮಾವಂದಿರ ಅನುಪಸ್ಥಿತಿಯಲ್ಲಿ ಪುಸ್ತಕದ ಮೊರೆ ಹೋಗಿ ಗಂಡನ ಊಟ, ತಿಂಡಿಗಳನ್ನು ಮನೆಯ ಜವಾಬ್ದಾರಿಯನ್ನು ನೋಡುತ್ತಾ ಯಾಂತ್ರಿಕವಾಗಿ ಬದುಕು ಸಾಗಿಸಿದಳು. ಆದರೆ ರಾಮುವಿನಿಂದ ದೂರವಾದ ಲಲಿತ ಹಿರಿಯರ ಆಣತಿಯಂತೆ ಮತ್ತೊಬ್ಬ ಪುರುಷನನ್ನು ವಿವಾಹವಾಗಿ ತನ್ನ ಪಾಲಿಗೆ ಬಂದ ಜೀವನವನ್ನು ಸ್ವೀಕರಿಸಿ ಹಳೆಯ ಪ್ರೇಮವನ್ನು ಮರೆತು ಹೊಸ ಬದುಕು ಸಾಗಿಸಿದಳು. ಹೆಣ್ಣು ಸಂಸಾರದ ಬಂಧನದಲ್ಲಿ ಸಿಲುಕಿದಾಗ ಅವಳಿಗೆ ಇಷ್ಟವಿರದಿದ್ದರೂ ಅದಕ್ಕೆ ಹೊಂದಾಣಿಕೆ ಮಾಡಿಕೊಳ್ಳಬೇಕು. ಗಂಡನ ಹತ್ತಿರ ತನ್ನ ಇಚ್ಛೆಯನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವೂ ಅವಳಿಗಿಲ್ಲ. ರಾಮು ಲಲಿತ ಆಕಸ್ಮಿಕ ಭೇಟಿಯ ನಂತರ ತನ್ನ ತಪ್ಪಿನ ಅರಿವಾಗಿ ತನ್ನ ಸ್ನೇಹಕ್ಕಾಗಿ ಕಾಯುತ್ತಿದ್ದ ಗೌರಿಯನ್ನು ಸ್ಪಂದಿಸಲು ಹೊಸಬದುಕನ್ನು ನಡೆಸಲು ಮುಂದಾಗುತ್ತಾರೆ. ಹೀಗೆ ಇಲ್ಲಿ ಬದುಕಿನಲ್ಲಿ ಬಂದದ್ದನ್ನು ಸ್ವೀಕರಿಸಿ ತಮ್ಮ ಬದುಕನ್ನು ಹಸನುಗೊಳಿಸಬೇಕೆಂಬುದು ಈ ಕಥೆಯಲ್ಲಿದೆ.

'ಒಡೆದ ಕನಸು' ಕಥೆಯಲ್ಲಿ ನಿರೂಪಕಿ ಒಂದು ಪಾತ್ರವಾಗಿ ನಾಯಕಿಯ ಆದರ್ಶ ದಾಂಪತ್ಯವನ್ನು ನಿರೂಪಿಸುತ್ತಾಳೆ. ಇಲ್ಲಿ ಪ್ರೇಮದಿಂದ ಕೂಡಿದ ಕುಟುಂಬಗಳ ಹಿರಿಯರು ತಮ್ಮ ಮಕ್ಕಳ ಪ್ರೇಮವಿವಾಹವನ್ನು ನಿರಾಕರಿಸಿದ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಮಕ್ಕಳ ಇಚ್ಛೆಯನ್ನು ಈಡೇರಿಸುತ್ತಾರೆ. ಸುಧಾ ಸಿರಿವಂತ ಕುಟುಂಬದಿಂದ ಬೆಳೆದು ಅನ್ಯ ಜಾತಿಯ ಆನಂದನನ್ನು ವಿವಾಹವಾಗಿ ಆದರ್ಶ ದಾಂಪತ್ಯವನ್ನು ನಡೆಸುತ್ತಿದ್ದಳು. ಇಲ್ಲಿ ಪತಿ-ಪತ್ನಿ ಪರಸ್ಪರ ಸಹಕಾರ ಹೊಂದಾಣಿಕೆಯಿಂದ ಇರುತ್ತಿದ್ದರು. ಆದರೆ ಸುಧಾ ಹಲವು ವರ್ಷಗಳ ನಂತರ ಸೈನಿಕಪತಿಯು ಶತ್ರುಗಳ ಸೆರೆಯಿಂದ ಮನೆಗೆ ಹಿಂದಿರುಗುವ ತವರು ಮನೆಗೂ ಹೋಗದೆ ಅತ್ತೆಯ ಮನೆಯಲ್ಲಿ ಉಳಿಯುತ್ತಾಳೆ. ಇಲ್ಲಿನ ಹೆಂಗಸರಿಗೆ ಗಂಡನಿಂದ ಸುರಕ್ಷತೆಯಿದ್ದು ಅವನ ಅನುಪಸ್ಥಿತಿಯಲ್ಲಿ ಮನೆಯ ಅತ್ತೆ ಸೊಸೆಯನ್ನು ಅವಮಾನಿಸಿ ಹೊರಗಿನ ವಾತಾವರಣದಲ್ಲಿ ಬೆರೆಯದೆ ಎಲ್ಲಾ ರೀತಿಯಲ್ಲೂ ಬಂಧನಗಳನ್ನು ಏರ್ಪಡಿಸುತ್ತಾಳೆ. ಆದರೆ ಸುಧಾ ಈ ಕಿರುಕುಳವನ್ನು ಪ್ರತಿಭಟಿಸದೆ ಗಂಡನ ಮನೆಯಲ್ಲಿದ್ದು ಅವನ ಬರುವಿಕೆಗಾಗಿ ಕಾಯುತ್ತಿರುತ್ತಾಳೆ. ಕಾರಣ ಗಂಡನಿಗೆ ತನ್ನ ಪಾವಿತ್ರ್ಯತೆಯನ್ನು ನಿರೂಪಿಸುವುದು ಮುಖ್ಯವಾಗಿದೆ. ಹೀಗೆ ಇಲ್ಲಿ ಗಂಡನ ಪ್ರೀತಿಗೆ ಪಾತ್ರರಾಗಲು ತಾಳ್ಮೆಯಿಂದ ಕಾಯುವ ಮಹಿಳೆಯರಿದ್ದಾರೆ. ಮಹಿಳೆಯರು ಗಂಡನ ಮನೆಯ ಬಂಧನದಿಂದ ಬಿಡಿಸಿಕೊಳ್ಳಲಾರದ ಬಾಂಧವ್ಯವನ್ನು ಈ ಪಾತ್ರಗಳಲ್ಲಿ ಕಾಣುವ ಧಾರಣಶಕ್ತಿಯುಳ್ಳವರಾಗಿದ್ದಾರೆ.

'ಮುಕುಂದನ ಉಡುಗೊರೆ' ಕಥೆಯಲ್ಲಿ ಮಧ್ಯಮವರ್ಗದ ದಾಂಪತ್ಯದ ಚಿತ್ರಣವಿದೆ. ಗುಮಾಸ್ತನಾಗಿ ಕೆಲಸ ನಿರ್ವಹಿಸುವ ಮುಕುಂದ ತನ್ನ ಪತ್ನಿ ಶಾಂತಳಿಗೆ ಬೆಲೆ ಬಾಳುವ ಸೀರೆಯನ್ನು ತಂದುಕೊಡಲು ಆಗದಷ್ಟು ಆರ್ಥಿಕವಾಗಿ ಅಸಹಾಯಕ. ತನ್ನ ದುಡಿಮೆಯಲ್ಲಿ ಉಳಿತಾಯ ಮಾಡಿ ಸೀರೆಯನ್ನು ಕೊಂಡುಕೊಳ್ಳಲು ಕೂಡಿಟ್ಟ ಹಣ ನೆರೆಮನೆಯ ಮಗುವಿಗೆ ಚಿಕಿತ್ಸೆಗಾಗಿ ಸಹಾಯ ಮಾಡಿದಳು ಶಾಂತ. ಹೀಗೆ ಗಂಡ-ಹೆಂಡತಿಯವರ ಕೊಡುಕೊಳ್ಳುವಿಕೆಯು ಆಸೆ ಈಡೇರದಿದ್ದರೂ ಬೇರೆಯವರಿಗೆ ನೆರವಾದರೆಂಬ ಆತ್ಮತೃಪ್ತಿ ಈ ದಂಪತಿಗಳಲ್ಲಿದೆ. ಪರಸ್ಪರ ಪ್ರೀತಿಸುವ ಮನಸ್ಸುಗಳು ಸಾಮರಸ್ಯದಿಂದ ಬದುಕಲು ಸಾಧ್ಯವೆಂಬುದನ್ನು ತೋರ್ಪಡಿಸುತ್ತದೆ.

'ಪಂಚಾಮೃತ' ಕಥೆಯ ಗೌರಿ ಗಂಡನಿಲ್ಲದ ವಿಧವೆ. ತಾಯಿ, ಮಕ್ಕಳಿರುವ ಈ ದಾಂಪತ್ಯದಲ್ಲಿ ಗಂಡಸಿದ್ದಾಗ ಮನೆ ಕೆಲಸಗಳನ್ನು ನಿರ್ವಹಿಸುತ್ತಾ ಓಡಾಡುತ್ತಿರುವ ಈ ಹೆಣ್ಣು ಗಂಡನಿಲ್ಲದಾಗ ಹೊರಗಿನ ದುಡಿಮೆಯನ್ನು ಮಾಡಬೇಕಾದ ಅನಿವಾರ್ಯತೆಗೆ ಒಳಗಾಗುತ್ತಾಳೆ. ಅಲ್ಲದೆ ಮನೆಯ ಒಳಗೆ ಹಾಗೂ ಹೊರದುಡಿಮೆಯಿಂದ ಮನೆಯ ಮಕ್ಕಳ ಜವಾಬ್ದಾರಿಯನ್ನು ನಿರ್ವಹಿಸುತ್ತಾಳೆ. ಹಿರಿಯ ಮಗ ತಾಯಿಗೆ ಸಹಾಯವಾದರೂ ಹಣ ಉಳಿತಾಯಕ್ಕಾಗಿ ತಾಯಿಯೇ ಎಲ್ಲ ಕೆಲಸಗಳನ್ನು ನಿರ್ವಹಿಸುತ್ತಾಳೆ. ಇಲ್ಲಿ ತಾಯಿ ತನ್ನ ೫ ಜನ ಮಕ್ಕಳಲ್ಲಿ ಮಾನಸಿಕ ಅಸ್ವಸ್ಥನಾದ ರಾಮುವಿನ ಬಗ್ಗೆ ಅತಿಯಾದ ಕಾಳಜಿ ಹೊಂದಿದ್ದ. ಇವರ ಮಕ್ಕಳಿಗೆ

ಅವನ ಬಗ್ಗೆ ಮತ್ಸರ ಹೆಚ್ಚಲು ಕಾರಣವಾಯಿತು. ರಾಮು ಎದುರಿನ ಮನೆಯ ಹಲಸಿನ ಹಣ್ಣನ್ನು ಕದ್ದದ್ದು ತಾಯಿಯ ಕೋಪಕ್ಕೆ ಕಾರಣವಾಯಿತು. ಆದರೆ ರಾಮು ತಿನ್ನುವ ಇಚ್ಛೆಯಿಂದ ಅದನ್ನು ಕದ್ದಿರದೆ ತನಗೆ ತೋಚಿದಂತಹ ಕೆಲಸ ಮಾಡುವ ಬಾಲಕನಾಗಿದ್ದ. ತಾನು ಮಾಡುವ ಕೆಲಸಗಳ ಸರಿತಪ್ಪುಗಳನ್ನು ತಿಳಿದುಕೊಳ್ಳುವ ಸಾಮರ್ಥ್ಯವಿಲ್ಲದೆ ಕದ್ದ ತಪ್ಪಿನಿಂದ ಹೊಡೆತ ತಿಂದು ತಾಯಿವಾತ್ಸಲ್ಯವನ್ನು ಅರಸಿ ಬಂದಾಗ ತಾಯಿಯ ಕೋಪ ಶಮನವಾಗಿ ಮಮತೆಯ ಧಾರೆ ಎಳೆದಳು.

'ಬದುಕು' ಕಥೆಯಲ್ಲಿನ ಮೋಹನರಾಮ ಸಿರಿವಂತ. ವಿದ್ಯೆಗೆ ತಕ್ಕ ಅಧಿಕಾರ ಹೊಂದಿದವನು. ತನ್ನ ಕಾಲೇಜು ದಿನಗಳಲ್ಲಿ ವಿದೇಶಕ್ಕೆ ಹೋಗಿ ಹಿಂದಿರುಗುವ ಹೊತ್ತಿಗೆ ತಾಯಿ ಸಂಬಂಧಿಯಿಂದ ವೃಂದಾಳಿಗೆ ವಿವಾಹ ನಿಶ್ಚಯವಾಗಿತ್ತು. ಪರಿಸ್ಥಿತಿಯನ್ನು ಅರಿತು ತನ್ನ ಪ್ರೇಮವನ್ನು ಮರೆತು ಮತ್ತೊಬ್ಬ ಸ್ನೇಹಿತೆಯ ಜೊತೆ ದಾಂಪತ್ಯವನ್ನು ಪ್ರಾರಂಭಿಸುತ್ತಾನೆ. ಹಲವು ದಿನಗಳ ನಂತರ ತನ್ನದೇ ರೂಪ ಹೊಂದುವ ಹುಡುಗಿಯ ಪರಿಚಯವಾಗಿ ಮದುವೇ ಪ್ರೇಮದ ಫಲವೆಂದು ಅವಳ ತಂದೆಯ ರಕ್ಷಣೆಯನ್ನು ಅರಿತನು. ಈ ಸಂಕಷ್ಟದಲ್ಲಿ ಅನ್ಯರ ಸಹಾಯ ಯಾಚಿಸದೆ ಬದುಕನ್ನು ನಡೆಸುವ ಸ್ವಾಭಿಮಾನವನ್ನು ಮೆಚ್ಚುತ್ತಾನೆ. ಅಲ್ಲದೆ ತಂದೆಯಾಗಿ ತನ್ನ ಮಗಳಿಗೆ ಆರ್ಥಿಕ ಸಹಾಯ ಮಾಡುವ ನಿಶ್ಚಯ ಹೊಂದಿ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಾನೆ. ಮಧ್ಯಮವರ್ಗದ ಹೆಣ್ಣುಮಕ್ಕಳು ಒಮ್ಮೆ ವಿವಾಹ ಬಂಧನದಲ್ಲಿ ಸೇರಿದರೆ ತಂದೆ, ಮನೆ, ಮಕ್ಕಳ ಸೇವೆಯನ್ನು ಮಾಡುವುದರಲ್ಲಿ ದಿನವನ್ನು ಕಳೆಯುತ್ತಾರೆ. ಅಲ್ಲದೆ ಗಂಡುಮಕ್ಕಳು ತಮ್ಮ ಕೆಲಸವನ್ನು ಮಾಡಿಕೊಳ್ಳದೆ ಪ್ರತಿಯೊಂದಕ್ಕೂ ಪತ್ನಿ ಮತ್ತು ತಾಯಿಯನ್ನು ಅವಲಂಬಿಸುತ್ತಾರೆ. ಇಲ್ಲಿ ಮಹಿಳೆಯರು ಅದನ್ನು ಹೊರೆಯೆಂದು ಪರಿಗಣಿಸದೆ ಪ್ರೀತಿಯಿಂದ ಸೇವೆ ಮಾಡುತ್ತಾರೆ. ಆದರೆ ಈ ಮಹಿಳೆಯರಿಗೆ ಓದುವ ಹವ್ಯಾಸವಿದ್ದು ಈ ದಿನನಿತ್ಯದ ಕೆಲಸದಲ್ಲಿ ಅದು ಅಸಾಧ್ಯವಾದಾಗ ಹುಸಿಕೋಪ ತೋರಿಸುತ್ತಾರೆ. ಈ ಪುರುಷರು ಅವಳ ಹವ್ಯಾಸದ ಬಗ್ಗೆ ಯಾವುದೇ ಕಾಳಜಿಯಿಲ್ಲದೆ ಅದನ್ನು ಓದಿನ ಸಮಯದಲ್ಲಿ ಪೂರೈಸಿಕೊಳ್ಳಲು ಒತ್ತಾಯ ಮಾಡುತ್ತಾರೆ. ಹೀಗೆ ಮನೆಯವರ ಕೆಲಸ ಪೂರೈಸಿಕೊಂಡು ಹೊರಗಿನ ಜನರ ಆಗಮನದ ಆತಿಥ್ಯದಿಂದ ದಿನಕಳೆಯುವ ಅವಳಿಗೆ ಮಕ್ಕಳಿಗಾಗಿ ಸಮಯವನ್ನು ಮೀಸಲಿಡಲು ಸಾಧ್ಯವಾಗದ ಪರಿಸ್ಥಿತಿಯನ್ನು ಕಾಣಬಹುದು.

ಹೀಗೆ ವಾಣಿ ಕಥೆಗಳಲ್ಲಿ ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗದ ಸ್ತ್ರೀಯರಿದ್ದಾರೆ. ಇವರು ಹದಿಹರೆಯದ, ಮಧ್ಯಮ ವಯಸ್ಸಿನ ಹಾಗೂ ವಯಸ್ಸಾದ ಹೆಣ್ಣುಮಕ್ಕಳು. ಇವರು ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ತಾಯಿ, ಗೃಹಿಣಿ, ಪರಿತ್ಯಕ್ತೆ, ವಕೀಲೆ, ಶಿಕ್ಷಕಿ ಇತ್ಯಾದಿ ಪಾತ್ರಗಳಾಗಿ ಗುರುತಿಸಿಕೊಂಡಿದ್ದಾರೆ. ಈ ಮಹಿಳೆಯರು ಬದುಕುವ ಕುಟುಂಬಗಳು ಭಿನ್ನವಾಗಿವೆ. ತಂದೆ, ತಾಯಿ, ಮಕ್ಕಳಿರುವ ಸರಳ ಕುಟುಂಬಗಳು, ಗಂಡ–ಹೆಂಡತಿ, ಮಕ್ಕಳು, ಅತ್ತಿಗೆಯಿರುವ

ಕೂಡು ಕುಟುಂಬಗಳು, ಬಡ, ಶ್ರೀಮಂತ, ನಗರ, ಗ್ರಾಮೀಣ ಕುಟುಂಬಗಳು ಇವರ ಕಥೆಯಲ್ಲಿ ಅಭಿವ್ಯಕ್ತಗೊಂಡಿದೆ. ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಶೋಭಾ(ಬಾಬು ಬರ್ತ್ತಾನೆ) ವಿದ್ಯಾಭ್ಯಾಸದ ಸಲುವಾಗಿ ವಿವಾಹವನ್ನು ಮುಂದೂಡುತ್ತಾಳೆ. ಆದರೆ ಅತ್ತೆ ಮನೆಯ ಇತರರಿಗೆ ಒಪ್ಪಿಗೆಯಾಗದ ಕಾರಣ ಅವರ ಕೋಪಕ್ಕೆ ಗುರಿಯಾಗುತ್ತಾಳೆ. ಹೀಗೆ ಇಲ್ಲಿನ ಹೆಣ್ಣುಮಕ್ಕಳು ಮನೆಯ ತಂದೆಯ ನಿರ್ಣಯಕ್ಕೆ ಬದ್ಧರಾಗಿರುವುದು ಅವಶ್ಯಕವಾಗಿದೆ. ಆದರೆ ಶೋಭಾ ತನ್ನ ನಿರ್ಧಾರವನ್ನು ತಿಳಿಸಿ ಸ್ವಂತಿಕೆಯನ್ನು ಕಾಯ್ದುಕೊಳ್ಳುತ್ತಾಳೆ. ಇದು ಮಧ್ಯಮವರ್ಗದ ಹೆಣ್ಣುಮಕ್ಕಳ ಪರಿಸ್ಥಿತಿ. ಇದಕ್ಕೆ ಭಿನ್ನವಾಗಿ ಮೇಲ್ವರ್ಗದ ಸಿರಿವಂತ ಮನೆಗಳ ಹೆಣ್ಣುಮಕ್ಕಳ ತಂದೆ ತಮ್ಮ ಮಗಳಿಗೆ ಸರಿಯಾದ ವರ ಹುಡುಕಾಡಲು ಬಡತನದ ವೇಷ ಧರಿಸುವ ಮೂಲಕ ಸದ್ಗುಣ ಸುಶೀಲ ಗಂಡಸರನ್ನು ಹುಡುಕಬೇಕಾದ ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿದ್ದಾರೆ. ಇಲ್ಲಿನ ಗಂಡಸರು ಹಳ್ಳಿಯ ಹೆಣ್ಣುಮಕ್ಕಳನ್ನು ತಿರಸ್ಕರಿಸುವ ಮನೋಭಾವದವರು. ಹೀಗೆ ತಮ್ಮ ಮಕ್ಕಳಿಗೆ ಒಳ್ಳೆಯ ಗುಣವನ್ನು ರೂಪಿಸಲು ಹೆಣಗುವ ರಾಮಚಂದ್ರಯ್ಯ(ರತ್ನವಿಲಾಸ), ರಾಮಸ್ವಾಮಿ(ತಾರ) ಜವಾಬ್ದಾರಿಯುತವಾಗಿ ಕಂಡುಬರುವ ಪಾತ್ರಗಳಾಗಿವೆ.

ಈ ಕುಟುಂಬಗಳಲ್ಲಿ ಮಹಿಳೆಗೆ ಸ್ವಂತ ಅವಕಾಶಗಳಿಲ್ಲ. ಪ್ರತಿಯೊಂದಕ್ಕೂ ಕುಟುಂಬದ ಹಿರಿಯರನ್ನು ಅವಲಂಬಿಸಿದ್ದಾರೆ. ಸ್ವೇಚ್ಛೆಯಿಂದ ಸಂಗಾತಿಯನ್ನು ಬಯಸಿದ ಚನ್ನಿ(ಅಪೂರ್ಣ) ಪತಿಗೆ ಹೊರೆಯಾಗಿ ಬದುಕುವವಳು. ಆರ್ಥಿಕ ಅಸಹಾಯಕತೆಯಿಂದ ಅನಿವಾರ್ಯವಾಗಿ ಜೊತೆಯಾಗುತ್ತಾಳೆ. ಅವಳ ವಿಫಲಪ್ರೇಮ ದಾಂಪತ್ಯವನ್ನು ಕತೆಯ ಉದ್ದಕ್ಕೂ ಕಾಣುತ್ತೇವೆ.

ಗೃಹಿಣಿಯ ಜೀವನ ಆರಂಭಿಸಿದ ಮಹಿಳೆಯರ ದಿನನಿತ್ಯದ ಬದುಕು ಆರಂಭಿಸುವಾಗ ಮನೆಯ ಬಿಡುವಿಲ್ಲದ ಕೆಲಸಕಾರ್ಯಗಳಿಂದ ಪತಿ ಮಕ್ಕಳ ಅತಿಥಿಗಳ ಸೇವೆ ಮಾಡುವುದು ಬಹುಮುಖ್ಯ ಕರ್ತವ್ಯವೆಂದು ಭಾವಿಸಿದ್ದಾರೆ. ಯಾವುದನ್ನು ಬಯಸದ ಸೂಕ್ಷ್ಮ ಸ್ವಭಾವದವರು ಸಹನಶೀಲರಾಗಿದ್ದಾರೆ. ಆದರೆ ಸಿನಿಮಾ ನೋಡುವ ಸಣ್ಣ ಆಕಾಂಕ್ಷೆಯನ್ನು ಪತಿ ಈಡೇರಿಸಿದಾಗ ಗಂಡನ ಸ್ನೇಹಿತನ ಜೊತೆ ಸಿನಿಮಾ ನೋಡುವುದರ ಮೂಲಕ ಕುಸುಮ(ಕಡೆಯದಿನ) ತನ್ನ ಪ್ರತಿಭಟನೆ ವ್ಯಕ್ತಪಡಿಸುತ್ತಾಳೆ. ಪಾಪಪ್ರಜ್ಞೆಯಿಂದ ನಲಗುತ್ತಾಳೆ. ಇದಕ್ಕೆ ಪೂರಕ ಪಾತ್ರವಾಗಿ ಮನೋರಮೆ(ಅವಳ ಪ್ರೇಮ) ಪತಿಗೆ ನೀಡಬೇಕಾದ ಊಟವನ್ನು ನೀಡದೆ ತನ್ನ ಕೆಲಸವನ್ನು ತಾಯಿಗೆ ಹೊರಿಸುವ ಮೂಲಕ ಉತ್ತರ ನೀಡುತ್ತಾಳೆ. ಇಲ್ಲಿ ಸಿರಿವಂತ ಹೆಣ್ಣುಮಕ್ಕಳ ಮೌನ ಪ್ರತಿಭಟನೆಯಾಗಿದೆ. ಇವರು ತಮ್ಮ ಆರ್ಥಿಕ ನೆರವಿನಿಂದ ತಮ್ಮ ನಿಲುವನ್ನು ಅಭಿವ್ಯಕ್ತಪಡಿಸಿದಾಗ ಅದಕ್ಕೆ ಮೌಲ್ಯವಿದೆ. ಅದು ಕೌಟುಂಬಿಕ ಅರ್ಥವನ್ನು ಪಡೆದುಕೊಳ್ಳುತ್ತದೆ. ಆದರೆ ಆರ್ಥಿಕ ಅಸಹಾಯಕತೆಯಿರುವ ಬಡ ಹೆಣ್ಣುಮಕ್ಕಳು ಎಲ್ಲವನ್ನು ನೋಡಿಕೊಂಡು ಹೊಂದಾಣಿಕೆಯಾಗುವ ಮೂಲಕ ಬದುಕನ್ನು ನಡೆಸಬೇಕಾಗಿದೆ.

ಕಲ್ಯಾಣಿ ಬಡ ಹೆಣ್ಣು. ಕಲ್ಯಾಣಿ(ಅವಳ ಪ್ರೇಮ) ಮನೆಯ ಹೊರ ಮತ್ತು ಒಳಗಿನ ಕೆಲಸಕಾರ್ಯ ನಿರ್ವಹಿಸಿದರೂ ಗಂಡನಿಂದ ಅಪಮಾನಗೊಳ್ಳುತ್ತಾಳೆ. ಪುನಃ ಪತಿಯನ್ನೇ ಮೆಚ್ಚಿಕೊಂಡು ಬದುಕುತ್ತಾಳೆ. ಹೀಗೆ ಕುಟುಂಬ ಜೀವಂತಿಕೆಯಿಂದ ಇರುವುದು ಹೆಣ್ಣುಮಕ್ಕಳ ಹೊಂದಾಣಿಕೆಯಿಂದ. ಈ ಹೊಂದಾಣಿಕೆಯನ್ನು ಹೆಣ್ಣುಮಕ್ಕಳು ಸ್ವಲ್ಪ ಸಡಿಲಗೊಳಿಸಿದರೂ ದಾಂಪತ್ಯ ಶಿಥಿಲಗೊಳ್ಳುವುದು. ಕುಟುಂಬವ್ಯವಸ್ಥೆಯೂ ಶಿಥಿಲಗೊಳ್ಳುವುದು. ಹೀಗೆ ಹೆಣ್ಣು ಅತ್ಯಂತ ಜಾಗರೂಕತೆಯಿಂದ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಾಳೆ. ಈ ಮೂಲಕ ಕುಟುಂಬದ ಜವಾಬ್ದಾರಿ ಹೊತ್ತ ಸಂಕೇತದಂತೆ ಇಲ್ಲಿನ ಮಹಿಳೆಯರು ಕಂಡುಬರುತ್ತಾರೆ.

ಅವರ ಕತೆಗಳಲ್ಲಿ ಕೂಡುಕುಟುಂಬಗಳ ಸ್ವರೂಪವನ್ನು ಕಾಣಬಹುದಾಗಿದೆ. ಈ ಕುಟುಂಬಗಳು ಹಿರಿಯ ಮಹಿಳೆಯರಿಂದ ಕೂಡಿ ಜೀವಂತಿಕೆಯಿಂದಿವೆ. ಸೀತಮ್ಮ(ತಾಯಿ) ಅತ್ತೆ–ಮಾವಂದಿರ ಬಿಗಿವಾತಾವರಣದಿಂದ ಬದುಕಿದಳು. ತನ್ನ ಗಂಡನ ಸಾವು–ಬದುಕಿನ ಪ್ರಶ್ನೆ ಎದುರಾದಾಗ ಗಂಡನನ್ನು ನೋಡಲು ಸಹ ಹಿರಿಯರ ಅನುಮತಿ ಪಡೆಯುವುದು ಅವಶ್ಯಕವಾದ ವಾತಾವರಣದಲ್ಲಿ ಬದುಕು ಸಾಗಿಸುವವಳಾಗಿದ್ದಾಳೆ. ಹಿರಿಯರ ಅಪ್ಪಣೆಯಿಲ್ಲದೆ ತನ್ನ ಸಂಗಾತಿಯನ್ನು ನೋಡಿ ಮಾತನಾಡಿಸುವ ಸೀತಮ್ಮ ಸಾವಿನಲ್ಲಿ ಬಾಗಿಯಾಗುವ ಸ್ವಾತಂತ್ರ್ಯವಿಲ್ಲದವಳು. ಕೊನೆಗೆ ಮರಣದ ತರುವಾಯ ಮುಖದರ್ಶನ ಪಡೆದು ಹಿರಿಯರ ಕೌಟುಂಬಿಕ ಮಿತಿಗಳಿಗೆ ಒಳಗಾಗಿ ವೈಯಕ್ತಿಕ ಜೀವನದ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾಳೆ. ಕೌಟುಂಬಿಕ ನಿರ್ಬಂಧವು ಶೋಷಣೆಗೆ ಗುರಿಯಾಗುತ್ತದೆ. ಹೀಗೆ ವೈಯಕ್ತಿಕ ಆಸೆ ಆಕಾಂಕ್ಷೆಗಳಿಲ್ಲದೆ ಬದುಕು ನಡೆಸುತ್ತಾಳೆ. ಹಿರಿಯರ ಅಪೇಕ್ಷೆಯಂತೆ ಬದುಕುವ ನಿರ್ಬಂಧಕ್ಕೆ ಒಳಗಾಗಿದ್ದಾಳೆ. ಗಂಡನನ್ನು ಕಳೆದುಕೊಂಡು ತನ್ನ ಮಗನೊಂದಿಗೆ ಬದುಕು ನಡೆಸಲು ಹಳ್ಳಿಯಿಂದ ನಗರಕ್ಕೆ ವಲಸೆ ಬಂದಳು. ಜೀವನವನ್ನು ರೂಪಿಸಿಕೊಂಡಳು. ಮಗನ ಮೇಲಿನ ಪ್ರೀತಿ–ವಾತ್ಸಲ್ಯವು ತನ್ನ ಸೊಸೆಗೆ ಕಿರಿಕಿರಿ ಆದಾಗ ಮಗನ ಸುಖಕ್ಕಾಗಿ ಆ ಮನೆಯಿಂದ ಹೊರಬಂದು ಹಳ್ಳಿಗೆ ಹಿಂದಿರುಗುವ ಮೂಲಕ ಕಷ್ಟದ ಬದುಕಿಗೆ ಶರಣಾಗುತ್ತಾಳೆ. ಹೀಗೆ ಹಿರಿಯ ಮಹಿಳೆ ಮಗನ ಕ್ಷೇಮಕ್ಕಾಗಿ ತ್ಯಾಗ ಜೀವನವನ್ನು ನಡೆಸುವ ನಿರೂಪಣೆಯು ವ್ಯಕ್ತವಾಗಿದೆ.

ಇವರ ಕತೆಯಲ್ಲಿನ ಮಹಿಳೆಯರಿಗೆ ಹೆಣ್ಣಿನ ಸಹಜವಾದ ತಾಯ್ತನದ ಅಭಿಲಾಷೆ ಸಹಜ. ಆದರೆ ಆ ಅವಕಾಶದಿಂದ ವಂಚಿತರಾದಾಗ ಇತರ ಮಕ್ಕಳನ್ನು ಸ್ವಂತ ಮಕ್ಕಳೆಂದು ಪ್ರೀತಿಯಿಂದ ಕಾಣುತ್ತಾರೆ. ಭವಿಷ್ಯವನ್ನು ರೂಪಿಸುವರು. ಆ ಮಕ್ಕಳು ಪ್ರಬುದ್ಧರಾಗಿ ಸಾಕು ತಂದೆತಾಯಿಯರನ್ನು ತಿರಸ್ಕರಿಸುವ ಸನ್ನಿವೇಶಗಳಿವೆ. ಅದನ್ನು ಅರಿತು ಆ ಮ್ಕಕಳಿಗೆ ಹೊರೆಯಾಗದೆ ಸಾಕುಮಗನ ಮನೆಯನ್ನು ತೊರೆಯುವುದರ ಮೂಲಕ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಮುಂದಾಗುತ್ತಾರೆ. ಹೀಗೆ ನಿಸ್ವಾರ್ಥದಿಂದ ಮಕ್ಕಳನ್ನು ಬೆಳಸುತ್ತಾರೆ. ಅವರು ಸಹಜಪ್ರೀತಿಗಾಗಿ

ಹಾತೊರೆಯುತ್ತಾರೆ. ಅದು ದೊರೆಯದಾಗ ತಮ್ಮ ಕರ್ತವ್ಯ ನಿಭಾಯಿಸಿದ ಹೆಮ್ಮೆಯಿಂದಿರುವುದನ್ನು ಕಾಣುತ್ತೇವೆ. ಅವರು ಈ ಮೂಲಕ ತೃಪ್ತಿ ಹೊಂದುತ್ತಾರೆ. "ಅರವಿಂದ" ಕತೆಯ ಗುಂಡಮ್ಮ, "ಕಲೆ" ಕತೆಯ ಲಕ್ಷ್ಮೀ, "ಉಪಕಾರಿ" ಕತೆಯ ಶಾರದಮ್ಮ ಇತ್ಯಾದಿ ಹಿರಿಯ ಪಾತ್ರಗಳಾಗಿವೆ. ವ್ಯಕ್ತಿಗಳ ನೆರೆಹೊರೆಯರ ಸಂಬಂಧಗಳು ಕೆಲವೊಮ್ಮೆ ಮನೆಯ ಸದಸ್ಯರು ಕಷ್ಟಗಳಿಗೆ ಸ್ಪಂದಿಸುವ ಸನ್ನಿವೇಶಗಳಿವೆ. ನೆರೆಹೊರೆಯ ಬಾಂಧವ್ಯ ಇಲ್ಲಿನ ಕುಟುಂಬಗಳು ಸಮಸ್ಯೆಯನ್ನು ಬಗೆಹರಿಸುವ ಮೂಲಕ ಆ ಪಾತ್ರಗಳನ್ನು ಸಾಮಾಜಿಕ ತಾಯ್ತನವನ್ನು ಕತೆಯ ಪ್ರಮುಖ ಆಶಯವಾಗಿದೆ.

ಲೇಖಕಿಯರು ಅಭಿವ್ಯಕ್ತಿಸಿರುವ ಬಹುಪಾಲು ಕಥೆಗಳಲ್ಲಿನ ಮಹಿಳೆಯರಿಗೆ ತಮ್ಮ ಮನೆತನದ ಬಗ್ಗೆ ಗೌರವವಿದ್ದು ಅದನ್ನು ಪ್ರೀತಿಸುವ ಮೂಲಕ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಹೆಣಗಾಡುತ್ತಾರೆ. ಆದರೆ ಪುರುಷರಲ್ಲಿ ಈ ಜವಾಬ್ದಾರಿ ಪ್ರೀತಿ ಕಾಣಲಾಗುವುದಿಲ್ಲ. ಅವರು ಮನೆಯ ಕೆಲಸಗಳಿಂದ ನುಣುಚಿಕೊಂಡು ಬದುಕುವ ಆಲಸಿಗಳಾಗುತ್ತಾರೆ. ಮನೆಯ ಜವಾಬ್ದಾರಿ ಬಿದ್ದಾಗ ಇಲ್ಲಿ ಗಂಡಸರು ವಿನಾಕಾರಣ ಮನೆಯನ್ನು ತೊರೆಯುತ್ತಾರೆ. ಗಂಡಸಿನ ಜವಾಬ್ದಾರಿಯನ್ನು ಹೆಂಗಸರು ಕೌಟುಂಬಿಕತೆಯಲ್ಲಿ ವಹಿಸುತ್ತಾರೆ. ಆತನ ನಡವಳಿಕೆಯನ್ನು ಸಹಿಸಿಕೊಳ್ಳುವುದು ಈ ಮಹಿಳೆಯರಿಗೆ ಅಸಹಜವಾಗಿದೆ. ಹೀಗೆ ಮನೆಯನ್ನು ತೊರೆದ ಗಂಡಸರು ಮನೆಗೆ ಹಿಂದಿರುಗುವುದು ತಮ್ಮ ಸ್ವಾರ್ಥ ಸಾಧನೆಗಾಗಿಯೇ ಹೊರತು ಮನೆಯ ಹೆಂಗಸರ, ಮಕ್ಕಳ ಮೇಲಿನ ಪ್ರೀತಿಯಿಂದಲ್ಲ. ಈ ಪರಿಸ್ಥಿತಿಯಲ್ಲಿ ಮಹಿಳೆ ಗಂಡನಿದ್ದ ಅವಧಿಯಲ್ಲಿ ಅನುಭವಿಸಿದ ಕಠಿಣ ದಿನಗಳ ಸ್ವಾನುಭದಿಂದ ಹೆಚ್ಚು ದೃಢವಾಗಿ ತನ್ನ ವ್ಯಕ್ತಿತ್ವನ್ನು ರೂಪಿಸಿಕೊಂಡಿದ್ದು ಕಂಡುಬರುತ್ತದೆ. ಗಂಡನನ್ನು ತಿರಸ್ಕರಿಸುವುದರ ಮೂಲಕ ಒಂಟಿಬದುಕನ್ನು ನೆಚ್ಚಿಕೊಂಡು ಜೀವಿಸುವವರಾಗಿದ್ದಾರೆ. "ತುಂಗಭದ್ರಾ" ಕತೆಯ ಜಯ, "ಬಂಧನ" ಕತೆಯ ವ್ಯಾದಾ ಸ್ವಾಭಿಮಾನಿ ಪಾತ್ರಗಳಾಗಿವೆ.

ವಾಣಿ ಕತೆಗಳಲ್ಲಿ ಬರುವ ಮಹಿಳೆಯರು ಕುಟುಂಬ ಪ್ರೀತಿಯುಳ್ಳವರು. ಇಲ್ಲಿ ಮಹಿಳೆಯರು ಗಂಡನ ಮನೆಯ ಕೆಲಸಗಳನ್ನು ಹೊರೆ ಎಂದು ಪರಿಗಣಿಸದೆ ತಮ್ಮ ಕರ್ತವ್ಯವೆಂದು ಭಾವಿಸಿ ಮಾಡುತ್ತಾರೆ. ಇಲ್ಲಿ ಎಲ್ಲಾ ವಯೋಮಾನದ ಅಂದರೆ ಹರಿಹರೆಯದ, ಗೃಹಿಣಿ, ಮಧ್ಯ ವಯಸ್ಸಿನ ಹೆಣ್ಣುಮಕ್ಕಳು ಒಂದಲ್ಲಾ ಒಂದು ರೀತಿ ತಮ್ಮ ತಂದೆ, ಗಂಡನಿಗೆ ಅಧೀನರು. ಸಾಂಪ್ರದಾಯಿಕ ಎಲ್ಲೆಯನ್ನು ಮೀರಿದವರು. ಅವರಿಗೆ ಮನೆ ಸುರಕ್ಷಿತವೆಂಬ ನೆಲೆಯಾಗಿದೆ. ಗಂಡನಿಂದ ಎಂತಹ ಕಷ್ಟಬಂದರೂ ಅದನ್ನು ನಿಭಾಯಿಸುವ ಸಾಮರ್ಥ್ಯವುಳ್ಳವರೇ ವಿನಾ ಗಂಡನಂತೆ ಪಲಾಯನವಾದಿಗಳಲ್ಲ. ವಿವಾಹವಾದ ಹೆಣ್ಣು ಗಂಡನ ಪ್ರೀತಿ ಕಾಣದೆ ಭಾವನಾತ್ಮಕ ಹಿಂಸೆಗೆ ಒಳಗಾಗುತ್ತಾಳೆ. ಗಂಡನ ಪೂರ್ವಪ್ರೇಮ ಅರಿಯದೆ ಹಿರಿಯರ ಆಸೆಯಂತೆ ವಿವಾಹವಾಗಿ ಗಂಡನ ಪ್ರೀತಿ ಕಾಣದೆ ಅತ್ತೆಮಾವರಲ್ಲಿ ತಂದೆತಾಯಿ ಪ್ರೀತಿಯನ್ನು ಕಾಣುತ್ತಾ ಗಂಡನ ಸಹಜ ಪ್ರೀತಿಗಾಗಿ ತಾಳ್ಮೆಯಿಂದ ಕಾಯುವರು. ಇಲ್ಲಿ ಗಂಡಸು ಹಿರಿಯರ ಒತ್ತಾಯಕ್ಕೆ

ಕಟ್ಟುಬಿದ್ದು ತನ್ನ ಮೊದಲ ಪ್ರೇಮವನ್ನು ತೊರೆದು ತಂದೆಯ ಆಸೆಯಂತೆ ಮತ್ತೊಂದು ವಿವಾಹವಾಗಿ ಆ ಹೆಣ್ಣಿಗೆ ಪತ್ನಿಯ ಸ್ಥಾನ ನೀಡದೆ ಹಿರಿಯರ ಮೂಲಕ ಕೋಪವನ್ನು ವ್ಯಕ್ತಪಡಿಸುತ್ತಾನೆ. ಆದರೆ ಹಿರಿಯರ ಗಂಡನ ನಿರ್ಧಾರ, ತೀರ್ಮಾನಗಳಿಂದ ಹೆಚ್ಚು ನಲುಗುವುದು ಮಹಿಳೆಯರು. ಗಂಡಸಿನಂತೆ ತನ್ನ ಪೂರ್ವಪ್ರೇಮ ಸಫಲವಾಗದೆ ಹೆಣ್ಣು ಪರಪುರುಷನನ್ನು ವಿವಾಹವಾಗಿ ಆ ಮನೆಯಲ್ಲಿ ತನ್ನ ಹಠವನ್ನು ಸಾಧಿಸಲು ಮಹಿಳೆಗೆ ಅವಕಾಶವಿಲ್ಲ. ಅಲ್ಲಿ ಮಹಿಳೆ ಒಲ್ಲದ ಗಂಡನನ್ನು ಆಶಿಸುವುದರ ಮೂಲಕ ತನ್ನ ಪಾಲಿಗೆ ಬಂದದ್ದನ್ನು ಸ್ವೀಕರಿಸಿ ಬದುಕುತ್ತಾಳೆ. ಆ ಮೂಲಕ ಸಂತೋಷಪಡುವ, ಜೀವನ ಸಾರ್ಥಕಗೊಳಿಸುವ ಹಾಗೆ ಇಲ್ಲಿ ಮಹಿಳೆಗೆ ಸಮಾಜವು ರೂಪಿಸಿರುತ್ತದೆ.

೩.೯. ತ್ರಿವೇಣಿ

'ಹೆಣ್ಣಿನ ಒಡಲು ಕಥೆಗಳ ಕಡಲು' ಎಂಬ ಗಾದೆಯಂತೆ ಹೆಣ್ಣಿಗೂ ಕಥೆಗೂ ಅವಿನಾಭಾವ ಸಂಬಂಧವಿದೆ. ಹೀಗಾಗಿ ಮಹಿಳೆ ಕಥೆಯನ್ನು ಕೇಳುವಲ್ಲಿ ಹಾಗೂ ಹೇಳುವಲ್ಲಿ ತನ್ನದೇ ಆದ ನೈಪುಣ್ಯತೆಯನ್ನು ಹೊಂದಿದ್ದಾಳೆ. ಇಂದಿನ ಯುಗದಲ್ಲಿಯೂ ಮಹಿಳೆಯು ತನ್ನ ಬದುಕಿನಲ್ಲಿ ಕಂಡು ಕೇಳಿದ ಘಟನೆಗಳನ್ನು ಅನುಭವಗಳನ್ನು ಅಭಿವ್ಯಕ್ತಿಸಲು ಕಥಾಪ್ರಕಾರವನ್ನು ನೆಚ್ಚಿಕೊಂಡಿದ್ದಾಳೆ. ವಸಾಹತುಶಾಹಿ ಶಿಕ್ಷಣದಿಂದ ತಿಳುವಳಿಕೆಯನ್ನು ಪಡೆದ ಮಹಿಳೆ ತನ್ನದೇ ಕೌಟುಂಬಿಕ ಬದುಕಿನ ಆಗುಹೋಗುಗಳನ್ನು ಕುರಿತು ಚಿಂತಿಸುವ ತೀರ್ಮಾನಗಳನ್ನು ತೆಗೆದುಕೊಳ್ಳುವ, ಸಾಂಪ್ರದಾಯಿಕ ಕೌಟುಂಬಿಕ ಕಟ್ಟುಪಾಡುಗಳಿಗೆ ಅನ್ವಯಿಸಿ ಹಾಗೂ ಕೆಲವೊಮ್ಮೆ ಮೀರಿ ಪರಿಹಾರ ಮಾರ್ಗವನ್ನು ಸೂಚಿಸುವ ಇಲ್ಲವೇ ತಟಸ್ಥ ನೆಲೆಯಲ್ಲಿ ನಿಂತ ಮೊದಲನೇ ತಲೆಮಾರಿನ ಲೇಖಕಿಯರಾದ ತಿರುಮಲಾಂಬಾ, ಕಲ್ಯಾಣಮ್ಮ, ಸರಸ್ವತಿಬಾಯಿ ರಾಜವಾಡೆ ಮುಖ್ಯರಾಗಿದ್ದಾರೆ. ಈ ಮೇಲಿನ ಲೇಖಕಿಯರು ಅಂದಿನ ಬಾಲ್ಯವಿವಾಹ, ವಿಧವಾವಿವಾಹ ಹೀಗೆ ಇತ್ಯಾದಿ ಸಮಸ್ಯೆಗಳನ್ನು ತಾವೇ ಅನುಭವಿಸಿ ಸಮಸ್ಯೆಗಳನ್ನು ಕುರಿತು ಅಭಿವ್ಯಕ್ತಿಸುವಾಗ ಸಾಂಪ್ರದಾಯಿಕತೆಯನ್ನು ಮೀರುವುದಿಲ್ಲ. ಇದು ಅವರ ಮಿತಿಯೆಂದು ಹೇಳುವುದು ಕಷ್ಟ. ಅಂದಿನ ಸಾಮಾಜಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಲೇಖನಿ ಹಿಡಿದಿದ್ದೇ ಸಾಧನೆಯಾಗಿದೆ.

ವಸಾಹತುಶಾಹಿ ಶಿಕ್ಷಣ ಹಾಗೂ ಸಾಮಾಜಿಕ ಸುಧಾರಣಾವಾದಿ ಚಳುವಳಿಯಿಂದಲೂ ಮಹಿಳೆ ಜಾಗೃತಳಾದಳು. ಈ ಸಂದರ್ಭದಲ್ಲಿ ನವೋದಯಯುಗ ಪ್ರಾರಂಭವಾಗಿತ್ತು. ಅಂದಿನ ಲೇಖಕರು ಮಾನವರನ್ನು ದೇವಮಾನವರನ್ನಾಗಿ ಚಿತ್ರಿಸುವ, ಪ್ರಕೃತಿಯ ವರ್ಣನೆ, ಆಧ್ಯಾತ್ಮಿಕತೆಯ ಜೊತೆಜೊತೆಗೆ ರಾಷ್ಟ್ರೀಯ ಪರಿಕಲ್ಪನೆ ಮುಖ್ಯವಾಗಿತ್ತು. ಗಾಂಧೀಜಿಯವರ ಸ್ತ್ರೀ ಮೌಲ್ಯಗಳು ಅಂದಿನ ಸಮಾಜದಲ್ಲಿ ಸಾಕಷ್ಟು ಪ್ರಭಾವ ಬೀರಿದ್ದವು. ಸ್ತ್ರೀಯರು ಪುರುಷರಷ್ಟೇ ಸಮಾನರು, ಮಹಿಳೆಯ ಸೇವೆ ಮನೆಯೊಳಗೆ ಸೀಮಿತವಾದುದ್ದಲ್ಲ, ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಬೇಕು, ಶಿಕ್ಷಣ ಪಡೆಯಬೇಕು. ಈ ಎಲ್ಲಾ ಅಂಶಗಳು ಪ್ರಗತಿಯ ಅಂಶಗಳಾಗಿದ್ದವು. ಪರಿಣಾಮ

ಮಹಿಳೆಗೆ ಕುಟುಂಬ ಜವಾಬ್ದಾರಿಯ ಜೊತೆಗೆ ಸಾಮಾಜಿಕ ಸೇವೆಯು ಹೆಗಲೇರಿತು. ವಿನಾ ವ್ಯಕ್ತಿಗತ ವಿಕಾಸಕ್ಕೆ ದಾರಿಯಾಗಲಿಲ್ಲ. ಈ ಹಿನ್ನೆಲೆಯಲ್ಲಿ ಕೌಟುಂಬಿಕ ಚೌಕಟ್ಟುಗಳನ್ನು ಮೀರುವ ರೂಢಿಗತ ಮೌಲ್ಯಗಳನ್ನು ಪ್ರಶ್ನಿಸುವ ಧೈರ್ಯವಂತ ಮಹಿಳೆಯನ್ನು ಚಿತ್ರಿಸಲು ಹೊರಟ ಕೊಡಗಿನ ಗೌರಮ್ಮ, ಸಾವಿತ್ರಮ್ಮನಂತಹ ಲೇಖಕಿಯರು ಸಾಮಾಜಿಕ ಬಿಕ್ಕಟ್ಟುಗಳನ್ನು ಅನುಸರಿಸಿದ ಮಹಿಳೆ, ಪ್ರಶ್ನಿಸದೆ ತಲೆಬಾಗಿ ಅಥವಾ ಪರ್ಯಾಯ ಮಾರ್ಗವಾಗಿ ತ್ಯಾಗ, ಸಹನೆಯಿಂದ ಆತ್ಮಹತ್ಯೆಯಿಂದ ಪಲಾಯನವಾದಿಯಾಗುವ ಕಥಾಚಿತ್ರಣವನ್ನು ಕಾಣುತ್ತೇವೆ.

ನಂತರದ ದಶಕದಲ್ಲಿ ಶಿಕ್ಷಣ ಮತ್ತು ನಾಗರಿಕತೆಯ ಪ್ರಭಾವದಿಂದ ಸಮಾಜದಲ್ಲಿ ಸಾಕಷ್ಟು ಬದಲಾವಣೆಯಾಯಿತು. ಈ ಸಂದರ್ಭದಲ್ಲಿ ಮಹಿಳೆ ಶಿಕ್ಷಿತಳಾಗಿ ಆಯ್ಕೆಯ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಳು. ಕೌಟುಂಬಿಕ ಶಿಕ್ಷಣವನ್ನು ಮೀರುವಿಕೆಯನ್ನು ಸಾಧಿಸಿದಳು. ಆದರೆ ಸ್ವಾತಂತ್ರ್ಯದ ಪರಿಣಾಮದಲ್ಲಿ ಸಂಪೂರ್ಣ ಜವಾಬ್ದಾರಿಯನ್ನು ಮಹಿಳೆ ವಹಿಸಬೇಕಾದದ್ದು ಅನಿವಾರ್ಯವಾಯಿತು. ಹೀಗೆ ಸಾಂಪ್ರದಾಯಿಕ ಹಾಗೂ ಆಧುನಿಕತೆಯ ಸಂಘರ್ಷ ಮುಖಾಮುಖಿಯನ್ನು ಎರಡನೇ ತಲೆಮಾರಿನ ತ್ರಿವೇಣಿ, ಅನುಪಮಾ ನಿರಂಜನ, ವಾಣಿ ಮೊದಲಾದ ಲೇಖಕಿಯರ ಕಥಾಸಾಹಿತ್ಯದಲ್ಲಿ ಸಾಧನೆಗೈದಿದ್ದಾರೆ. ಈ ಹಿನ್ನೆಲೆಯಲ್ಲಿ ತ್ರಿವೇಣಿಯವರ 'ಹೆಂಡತಿಯ ಹೆಸರು', 'ಎರಡು ಮನಸ್ಸು', 'ಸಮಸ್ಯೆಯ ಮಗು' ಕಥಾಸಂಕಲನವನ್ನು ಅಧ್ಯಯನ ಮಾಡಿದರೆ, ಇಲ್ಲಿ ಲೇಖಕಿಯು ಮಹಿಳೆಯನ್ನು ಮಹಿಳೆಯು ಹೇಗೆ ಅಭಿವ್ಯಕ್ತಗೊಂಡಿದ್ದಾಳೆ ಎಂಬುದನ್ನು ಮುಂದೆ ಚರ್ಚಿಸಲಾಗಿದೆ. ತ್ರಿವೇಣಿಯವರ ಮೂರು ಕಥಾಸಂಕಲನಗಳಲ್ಲಿ ಬರುವ 'ಹಸಿರು ಪೀತಾಂಬರ', 'ತಾಯಿ', 'ಅತಿಥಿ ಬರಲಿಲ್ಲ', 'ಕೆಸರಿನ ಕಮಲ', 'ಮಗುವಿನ ಕರೆ' ಮತ್ತು 'ಅವನ ತಾಯಿ' ಮೊದಲಾದ ಕಥೆಗಳಲ್ಲಿ ತಾಯ್ತನವೇ ವಸ್ತುಕೇಂದ್ರಿತವಾಗಿದೆ. ಸಮಾಜದಲ್ಲಿ ಮಹಿಳೆಯನ್ನು ಗುರುತಿಸುವುದು ಅವಳ ದೇಹಸ್ಥಿತಿಯಿಂದ. ಹಾಗಾಗಿ ಮಹಿಳೆ ತಾಯ್ತನದ ಮೂಲಕ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಅಸ್ತಿತ್ವವನ್ನು ಪಡೆದುಕೊಳ್ಳುತ್ತಾಳೆ. ಈ ಹಿನ್ನೆಲೆಯಲ್ಲಿ ತ್ರಿವೇಣಿಯವರ ಕಥಾಸಾಹಿತ್ಯದಲ್ಲಿ ತಾಯ್ತನದ ಆಯಾಮ, ಒತ್ತಡ ಹಾಗೂ ಬಿಕ್ಕಟ್ಟುಗಳನ್ನು ಗ್ರಹಿಸುವುದು ಇಲ್ಲಿ ಮುಖ್ಯವಾಗಿದೆ. 'ಹಸಿರು ಪೀತಾಂಬರ' ಕಥೆಯಲ್ಲಿ ಗಂಡ-ಹೆಂಡತಿ ಪರಸ್ಪರ ಪ್ರೀತಿ ವಿಶ್ವಾಸವಿರುವ ಸರಳ ಅನ್ಯೋನ್ಯ ಕುಟುಂಬವಾಗಿದೆ. ಇಲ್ಲಿ ಗಂಡ ತನ್ನ ಆರ್ಥಿಕ ಪರಿಸ್ಥಿತಿ ಅಸಹಜವಾಗಿದ್ದರೂ ಹೆಚ್ಚು ಅವಧಿಯ ದುಡಿಮೆಯಿಂದ 'ಹಸಿರು ಪೀತಾಂಬರ' ತೆಗೆದುಕೊಳ್ಳುವುದರ ಮೂಲಕ ಹೆಂಡತಿಯ ಆಸೆ, ಆಕಾಂಕ್ಷೆಗಳನ್ನು ಪೂರೈಸುವಲ್ಲಿ ಮುಂದಾದ. ಆದರೆ ಮಗುವಿನ ಆಗಮನದ ಮುಂದೆ ಕ್ಷುಲ್ಲಕವಾಗಿ ಕಂಡುಬಂದು ಅದನ್ನು ನಿರಾಕರಿಸುತ್ತಾ ಅದಕ್ಕಾಗಿ ಬೇಕಾಗುವ ಸಾಮಗ್ರಿಗಳ ಬಗ್ಗೆ ಚಿಂತಿಸುವ ತಾಯ್ತನದ ಹಿರಿಮೆಯನ್ನು ಈ ಕಥೆಯಲ್ಲಿ ಕಾಣಿಸಲಾಗಿದೆ.

'ತಾಯಿ' ಕಥೆಯಲ್ಲಿ ತಂದೆಯಿಲ್ಲದ, ಹಿರಿಯ ಮಗ-ಸೊಸೆ, ಕಿರಿಯ ಮಗ–ಸೊಸೆಯಿರುವ ಮಾತೃಕುಟುಂಬವಿದೆ. ಇಲ್ಲಿ ಕುಟುಂಬದ ಯಜಮಾನನ ಅನಿರೀಕ್ಷಿತ ಸಾವು, ಮಹಿಳೆಗೆ ಅನಿವಾರ್ಯ ಕಾರಣದಿಂದ ಮನೆಯ ಹೊರಹೋಗಿ ದುಡಿಯುವ, ಮಕ್ಕಳನ್ನು ಸಾಕಿ ಸಲುಹುವ ಆ ಮೂಲಕ ಕುಟುಂಬವನ್ನು ನಿರ್ವಹಿಸಿದ ಜವಾಬ್ದಾರಿ ಆಯ್ಕೆಯಿಂದಲ್ಲ, ಅನಿವಾರ್ಯತೆಯಿಂದ. ಇಲ್ಲಿ ಹಿರಿಯ-ಕಿರಿಯ ಮಕ್ಕಳ ನಡುವಿನ ಆರ್ಥಿಕ ಪರಿಸ್ಥಿತಿ, ಅಂತಸ್ತು ವೈಮನಸ್ಸಿಗೆ ಕಾರಣವಾಗಿದೆ. ಇಲ್ಲಿ ಪರಸ್ಪರ ದ್ವೇಷ, ಅಸೂಯೆಯಿದ್ದರೂ ಅದು ಕ್ರೌರ್ಯವಾಗಿಲ್ಲ. ಹುಸಿಮುನಿಸಿದೆ. ವ್ಯಕ್ತಿಗತ ಸ್ವಾವಲಂಬನೆಯಿಂದ ಕೂಡುಕುಟುಂಬ ಸರಳಕುಟುಂಬವಾಗಿ ಹೊಡೆದುಹೋಗಿದೆ. ಹೀಗೆ ಹೊಡೆದ, ಛಿದ್ರವಾದ ಕುಟುಂಬದಲ್ಲಿ ತಾಯಿ ಯಾವ ಮಕ್ಕಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬ ಪ್ರಶ್ನೆ ಎದುರಾಗಿದೆ. ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಪರಸ್ಪರ ಎರಡು ಮಕ್ಕಳಲ್ಲೂ ಪ್ರೀತಿಯಿದ್ದು, ಬಡವನಾದ ಕಿರಿಯ ಮಗನನ್ನು ಆಯ್ಕೆ ಮಾಡಿಕೊಳ್ಳುವುದರ ಮೂಲಕ ತಾಯ್ತನದ ಹಿರಿಮೆಯನ್ನು ಹಾಗೂ ಹೆಣ್ಣಿನ ಅತಂತ್ರ ಸ್ಥಿತಿಯನ್ನು 'ತಾಯಿ' ಕಥೆಯಲ್ಲಿ ನೋಡುತ್ತೇವೆ.

'ಅತಿಥಿ ಬರಲಿಲ್ಲ' ಕಥೆಯಲ್ಲಿ ನಾಯಕಿಗೆ ತಾಯಿಯಾಗುವ ಆಸೆ ಆಕಾಂಕ್ಷೆಗಳಿದ್ದರೂ ಪ್ರಸವ ವೇದನೆಯ ಸಂದರ್ಭದಲ್ಲಿ ಆಘಾತಕ್ಕೊಳಗಾಗುತ್ತಾಳೆ. ತನ್ನ ಈ ಸ್ಥಿತಿಗೆ ಕಾರಣವಾದ ಪುರುಷ ಸಮಾಜವನ್ನು ಹಲಬುತ್ತಾಳೆ. ಕೊನೆಗೆ ಪುರುಷ ಸಂಬಂಧವನ್ನೇ ಕಡಿದುಹಾಕುವ ಮನಸ್ಥಿತಿಯನ್ನು ಹೊಂದುತ್ತಾಳೆ. ಹೀಗೆ ಪರವಿರೋಧ ಸಂಘರ್ಷದಲ್ಲಿ ಆಲೋಚಿಸುತ್ತಾ ಕೊನೆಗೆ ಬರುವ 'ಅತಿಥಿ' ಬರದೇ ಹೋದಾಗ ತಾಯ್ತನದ ಹಂಬಲದಿಂದ ಮುಂದೆ ಬರುವ ಅತಿಥಿಗಾಗಿ ಅದರ ನಿರೀಕ್ಷೆಯಲ್ಲಿ ಸಿದ್ಧತೆ ನಡೆಸುವ ವ್ಯಂಗ್ಯವನ್ನು 'ಅತಿಥಿ ಬರಲಿಲ್ಲ' ಕಥೆಯಲ್ಲಿ ಗ್ರಹಿಸಬಹುದು.

'ಮಗುವಿನ ಕರೆ' ಕತೆಯಲ್ಲಿ ಗ್ರಾಮೀಣ ಭಾಷೆಯ ಸೊಗಡಿನ ಚಿತ್ರಣವಿದೆ. ಇಲ್ಲಿ ಮಹಿಳೆ ಸ್ವಂತ ನೆಲೆಯಿಲ್ಲದೆ ಚಿಕ್ಕಮ್ಮನ ಕುಟುಂಬದಲ್ಲಿ ಪರಸ್ಪರ ಪ್ರೀತಿಯಿದೆ ಆದರೆ ಬಡತನವಿದೆ. ಮೇಲಾಗಿ ಅಧಿಕಾರಿಗಳ ಕ್ರೌರ್ಯವಿದೆ. ಹೀಗೆ ಗೌಡರ ಮಗನ ಮೋಹದ ಬಲೆಯಿಂದ ತನ್ನ ಆಯ್ಕೆಯಿಲ್ಲದೆ ತಾಯಿಯಾಗುವ ಸಂದರ್ಭ ಒದಗಿದೆ. ವಿವಾಹಪೂರ್ವ ಸಂಬಂಧ ಅನೈತಿಕತೆಯಿಂದ ಹುಟ್ಟಿದ ಮಗುವಿಗೆ ತಾಯಿಯಾಗಲು ಸಾಮಾಜಿಕ ನಿರ್ಬಂಧವಿದೆ. ಇಲ್ಲಿ ಹೆಣ್ಣಿಗೆ ಕಾಡುವಷ್ಟು ತಾಯ್ತನ, ವಾತ್ಸಲ್ಯ, ಪಾಪಪ್ರಜ್ಞೆ ತಂದೆಗೇಕೆ ಕಾಡುವುದಿಲ್ಲ? ಇಲ್ಲಿ ಪುರುಷನಿಗೆ ಇದರ ಯಾವ ನಿರ್ಬಂಧವಿಲ್ಲದೆ ಸಹಜವಾಗಿದ್ದು ಮತ್ತೊಂದು ವಿವಾಹವಾಗಲು ಸಿದ್ಧನಿದ್ದಾನೆ. ಹೀಗೆ ಇಲ್ಲಿ ಮಹಿಳೆ ತನ್ನ ಆಯ್ಕೆಯಿಲ್ಲದೆಯೂ ತನ್ನದಲ್ಲದ ತಪ್ಪಿಗೂ ತಾನೇ ಹೊಣೆಗಾರಳಾಗಿ ಜೀವಿಸಬೇಕಾದ ಸಂದಿಗ್ಧ ಸ್ಥಿತಿಯಿದೆ. ಕೊನೆಗೆ ತಂದೆಯಿಲ್ಲದ ಕುಟುಂಬಕ್ಕೆ ತಾನೇ ಇಬ್ಬಗೆಯ ಕರ್ತವ್ಯವನ್ನು ನಿರ್ವಹಿಸುವಂತೆ ಮಗುವನ್ನು ಪಡೆಯುವಂಥ ಮಹಿಳೆಯನ್ನು ಲೇಖಕಿ ಇಲ್ಲಿ ಚಿತ್ರಿಸಿದ್ದಾರೆ.

'ಅವನ ತಾಯಿ' ಕಥೆಯು ಭಾವುಕತೆಯಿಂದ ಕೂಡಿದ ಸಂಕೀರ್ಣ ಕಥೆಯಾಗಿದೆ. ತಂದೆ-ತಾಯಿ-ಮಕ್ಕಳನ್ನೊಳಗೊಂಡ ಸರಳಕುಟುಂಬವಿದೆ. ಇಲ್ಲಿ ತಂದೆ ಹೆಸರಿಗೆ ಮಾತ್ರ ಕುಟುಂಬದ ಯಜಮಾನನಾಗಿದ್ದಾನೆಯೇ ಹೊರತು ವಾಸ್ತವದಲ್ಲಲ್ಲ. ಕಾರಣ ನಿರಂತರ ರೋಗಿಯಾಗಿ ಬಳಲುತ್ತಿದ್ದಾನೆ. ಹೀಗಾಗಿ ಇಲ್ಲಿ ಮಹಿಳೆ ಮನೆವಾರ್ತೆಯ ಜೊತೆ ಮಕ್ಕಳಿಗೆ ಹಾಗೂ ಗಂಡನಿಗೆ ಸೇವೆ ಮಾಡಲು ಅನಿವಾರ್ಯ ಕಾರಣಗಳಿಂದ ಹೊರಹೋಗಿ ದುಡಿಯಬೇಕಾಗಿದೆ. ಕುಟುಂಬವನ್ನು ನಿರ್ವಹಿಸಬೇಕಾಗಿದೆ. ಇಲ್ಲಿ ಮಹಿಳೆ ಗಂಡನಿಂದ ಆಸರೆಯನ್ನು ಕಳೆದುಕೊಂಡು ಹತಾಶಳಾಗಿ ಕೊನೆಗೆ ಮಗನಿಂದಲಾದರೂ ಆಸರೆಯ ನೆಲೆ ದೊರಕಬಹುದೆಂದು ನಿರೀಕ್ಷಿಸುತ್ತಾಳೆ. ಉನ್ನತ ಶಿಕ್ಷಣ ಪಡೆದ ಮಗನಿಗೆ ಸರ್ಕಾರಿ ನೌಕರಿ ಸಿಗಲು ತನ್ನ ದೇಹವನ್ನೇ ಇಲ್ಲಿ ಸವೆಸುತ್ತಾಳೆ. ಆದರೆ ಇದರ ಯಾವ ಪರಿವೆಯಿಲ್ಲದ ಮಗ ವಿದೇಶಕ್ಕೆ ಹೋಗಿ ಹಲವು ವರ್ಷಗಳ ನಂತರ ಮರಳಿ ತನ್ನ ಮನೆಗೆ ಬರುವುದು ತಾಯಿಯ ಮೇಲಿನ ಪ್ರೀತಿಯಿಂದಲ್ಲ. ಬದಲಾಗಿ ಹೆಂಡತಿಯ ಮೇಲಿನ ವ್ಯಾಮೋಹದಿಂದ. ಆಕೆಗೆ ತಮ್ಮ ನಾಡನ್ನು ತೋರಿಸುವ ಸಂತೋಷಪಡಿಸುವ ಅಂತ್ಯದಲ್ಲಿ ಮಗನಿಗೆ 'ಸತ್ತವರನ್ನು ನೆನೆಸುವುದರಿಂದ ಏನು ಪ್ರಯೋಜನ? ನೀವು ಆದಷ್ಟು ಬೇಗ ಹೊರಡುವುದು ವಾಸಿ. ನಾವು ಬಡವರು. ತುಂಬಾ ದಿನ ಅತಿಥಿಗಳನ್ನು ತಡೆಯಲಾರೆವು'(ಎರಡು ಮನಸ್ಸು, ಪು.೧೩೧) ಎಂಬ ವ್ಯಾಖ್ಯಾನವು ಸಂಕಟ, ಹತಾಶೆಯನ್ನು ಸೂಚಿಸುತ್ತದೆ. ಹಿಂದೆ ಮಗನಿಗಾಗಿ ದುಡಿದಳು. ಈಗ ತನಗಾಗಿ ದುಡಿಯಲು ಸಿದ್ಧಳಾಗಿದ್ದಾಳೆ. ಹೀಗಾಗಿ ಕುಟುಂಬದಲ್ಲಿ ಮಹಿಳೆಗೆ ಅಭದ್ರತೆಯಿದ್ದರೂ ತನ್ನ ಸಾಮರ್ಥ್ಯದ ಮೂಲಕ ಮಹಿಳೆ ಅಬಲೆಯಲ್ಲ, ಆಕೆ ಸಬಲೆಯಂತೆ ಚಿತ್ರಿಸಲಾಗಿದೆ.

'ಕೆಸರಿನ ಕಮಲ' ಕತೆಯಲ್ಲಿ ಸಾಂಪ್ರದಾಯಿಕ ಕುಟುಂಬದ ಮಹಿಳೆಗೆ ತಾಯ್ತನದ ಹಂಬಲವಿದ್ದರೂ ಅದರಿಂದ ವಂಚಿತಳಾಗಿರುವ ತಾಯಿ ಒಂದು ಕಡೆ; ವಿವಾಹಬಾಹಿರ ಸಂಬಂಧದಿಂದ ತಾಯಿಯಾದ ಮಹಿಳೆ ಇನ್ನೊಂದು ಕಡೆಯಿದ್ದು. ಇಲ್ಲಿ ತಾಯ್ತನದ ಭಾರದಿಂದ ತತ್ತರಿಸಿದ್ದು, ಕೊನೆಗೆ ತಾಯಿಯಿಲ್ಲದ ಮಗುವಿಗೆ ಅನೇಕ ಸಂಘರ್ಷದ ಆಲೋಚನೆಯಲ್ಲಿ ಹಾಲುಣಿಸಲು ಸಿದ್ಧಳಾಗಿದ್ದಾಳೆ. ತಾಯ್ತನವನ್ನು ಕೆಲವು ಕಾಲ ಅನುಭವಿಸಲು ಸಿದ್ಧಳಾದಳೇ ವಿನಃ ಅದರ ತಾಯಿಯಾಗುವ ಸಾಹಸ ಮಾಡಲಿಲ್ಲ. ಅದಕ್ಕೆ ಕಾರಣ ಪುರುಷಪ್ರಧಾನ ವ್ಯವಸ್ಥೆಯ ಅದರ ಕಟ್ಟುಪಾಡುಗಳೇ ಆಗಿವೆ. ಹೀಗೆ ಮಹಿಳೆ ಒಂದಲ್ಲಾ ಒಂದು ರೀತಿಯಲ್ಲಿ ಎಲ್ಲಾ ತಪ್ಪಿಗೂ ಮಹಿಳೆಯನ್ನು ಹೊಣೆಗಾರಳನ್ನಾಗಿ ಮಾಡಲಾಗುತ್ತಿದೆ.

ಹೀಗೆ ಮೇಲ್ಕಂಡ ಎಲ್ಲಾ ಕಥೆಗಳಲ್ಲಿ ತಾಯ್ತನದ ಹಿರಿಮೆಯನ್ನು ಕುರಿತು ಚಿತ್ರಣವಿದೆ. ಈ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯನ್ನು ಗುರುತಿಸುವುದು ದೇಹಸ್ಥಿತಿಯ ನೆಲೆಯಿಂದ. ಲಿಂಗ ತಾರತಮ್ಯವಿರುವ ಈ ಸಮಾಜದಲ್ಲಿ ಮಹಿಳೆ ಅಸ್ತಿತ್ವವನ್ನು ಪಡೆದುಕೊಳ್ಳುವುದು ಈ ತಾಯ್ತನದ ಹಿನ್ನೆಲೆಯಿಂದ ಎಂದು, ಅದು ಮಹಿಳೆಯ ಕರ್ತವ್ಯವೆಂದು ಒಪ್ಪಿಸಲಾಗಿದೆ. ಈ

ಕರ್ತವ್ಯವನ್ನು ಚಾಚೂ ತಪ್ಪದೆ ಮಹಿಳೆ ನಿರ್ವಹಿಸುತ್ತಿದ್ದಾಳೆ. ತ್ರಿವೇಣಿಯವರ ಎಲ್ಲಾ ಕಥೆಗಳಲ್ಲಿ ಮಹಿಳೆ ತಾಯಿಯಾಗುವುದು ತನ್ನ ಆಯ್ಕೆಯ ಸ್ವಾತಂತ್ರ್ಯದಿಂದಲ್ಲ. ಆಯ್ಕೆಯಿರಲಿ, ಬಿಡಲಿ ಅದನ್ನು ನಿರ್ವಹಿಸುವ ಜವಾಬ್ದಾರಿಯನ್ನು ಮಹಿಳೆಗೆ ಹೊರಿಸಲಾಗಿದೆ. ತಾಯ್ತನಕ್ಕೆ ಕಾರಣರಾದ ಪುರುಷರಿಗೆ ಈ ಸಮಾಜದಲ್ಲಿರುವ ನಿರಾಳತೆ ಮುಕ್ತತೆ ಮಹಿಳೆಗೇಕಿಲ್ಲ? ಅಲ್ಲದೆ ಇಲ್ಲಿ ತಾಯಿ ಸ್ಥಾನದಲ್ಲಿರುವ ಮಹಿಳೆಗೆ ಯಾವುದೇ ಸುರಕ್ಷತೆಯಿಲ್ಲದೆ ಅಭದ್ರತೆಯಿದೆ ಹಾಗೂ ಅನಿವಾರ್ಯದಿಂದಲೂ, ಅವಶ್ಯಕತೆಯಿಂದಲೂ ತನ್ನ ಕುಟುಂಬವನ್ನು ಸಲಹುವ ಸಾಮರ್ಥ್ಯವಿದೆ. ಅಲ್ಲದೆ ಕುಟುಂಬದಲ್ಲಿ ಮಹಿಳೆ ಗಂಡ, ಮಕ್ಕಳು ಹಾಗೂ ತಂದೆಯ ಆಸರೆ ನಿರೀಕ್ಷಿಸುವಂತಿಲ್ಲ. ಕುಟುಂಬದ ಸದಸ್ಯರಿರಲಿ ಬಿಡಲಿ ಸದಾ ದುಡಿಯುವ ಆ ಮೂಲಕ ಚಲನಶೀಲತೆಯಿಂದ ಕೂಡಿದ ಸಬಲ ಮಹಿಳೆಯ ಚಿತ್ರಣವಿದೆ. ಇಲ್ಲಿ ಬಹುಪಾಲು ತಾಯಂದಿರು ತಮ್ಮದಲ್ಲದ ತಪ್ಪಿಗೂ ತಾವೇ ಶಿಕ್ಷೆ ಅನುಭವಿಸುವಂತೆ ಮಹಿಳೆಯನ್ನು ಚಿತ್ರಿಸಲಾಗಿದೆ. ಮಹಿಳೆಯನ್ನು ಅಪಾಯದ ಸಂದಿಗ್ಧದಲ್ಲಿರಿಸಿ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವ, ಆ ಮೂಲಕ ಕುಟುಂಬ ನಿರ್ವಹಿಸುವ, ಮೌನ ಪ್ರತಿಭಟನೆಯನ್ನು ತೋರ್ಪಡಿಸುವ ದಿಟ್ಟತನದ ಮಹಿಳೆಯನ್ನು ಈ ಕಥೆಗಳು ನಿರೂಪಿಸುತ್ತವೆ.

ತ್ರಿವೇಣಿಯವರ ಬಹುಪಾಲು ಕಥೆಗಳಲ್ಲಿ ಗಂಡ-ಹೆಂಡತಿಯ ಪರಸ್ಪರ ಪ್ರೇಮ, ವಂಚನೆಯಿರುವ ವಸ್ತುವಾಗಿರಿಸಿಕೊಂಡ ಕೆಲವು ಆಯ್ದ ಕಥೆಗಳಿವೆ. ಅವುಗಳಲ್ಲಿ 'ಬೆಡ್ ನಂ.೭' ಕಥೆಯಲ್ಲಿ ಮಂಚಗಳ ಮುಖಾಂತರ ಕಥೆ ಪ್ರಾರಂಭವಾಗುವ ತಂತ್ರವನ್ನು ಕಥೆಗಾರ್ತಿ ಬಳಸಿದ್ದಾರೆ. ಇಲ್ಲಿ ಕೂಡುಕುಟುಂಬದ ಚಿತ್ರಣವಿದೆ. ಈ ಕುಟುಂಬದಲ್ಲಿ ಮಹಿಳೆ ಗಂಡನ ಅನಾರೋಗ್ಯದ ಕಾರಣದಿಂದ ಆತನನ್ನು ಹಾಗೂ ಕುಟುಂಬವನ್ನು ಸಲಹುವ ಸಲುವಾಗಿ ಆಯ್ಕೆಯಿಲ್ಲದೆ ಅನಿವಾರ್ಯವಾಗಿ ಹೊರಗಿನ ಸೇವೆ ಮಾಡಬೇಕಾದ ಅನಿವಾರ್ಯತೆ ಇಲ್ಲಿದೆ. ಅದರ ಜೊತೆಗೆ ಮನೆವಾರ್ತೆಯನ್ನು ಚಾಚೂ ತಪ್ಪದೇ ನಿರ್ವಹಿಸುವ ಹೊಣೆಗಾರಿಕೆಯಿದೆ. ಯಾವ ಪುರುಷನಿಗೋಸ್ಕರ ಆತನ ಕ್ಷಯರೋಗ ನಿವಾರಣೆಗೆ ಗಾಣದಂತೆ ದೇಹವನ್ನು ಸವೆಸಿದಳೋ ಇಂದು ತಾನು ರೋಗ ಪೀಡಿತಳಾಗಿ ಅಸ್ವಸ್ಥಳಾದಾಗ ಗಂಡನಿಗೆ ತನ್ನ ಮಹಿಳೆಗೆ ಸೇವೆ ಮಾಡಬೇಕಾದ ಅನಿವಾರ್ಯತೆಯಾಗಲಿ, ಬದ್ಧತೆಯಾಗಲಿ ಇಲ್ಲದಿದ್ದರೂ ತನ್ನ ಕರ್ತವ್ಯವನ್ನು ನಿರ್ವಂಚನೆಯಿಂದ ಮಾಡುವ ಪರಿಸ್ಥಿತಿ ಒದಗಿಬಂದಿದೆ. ಮುಕ್ತತೆಯಿಂದ ಬದುಕುವ ಸಹಜತೆ ಎಂದು ಸಮಾಜದಿಂದ ಇಲ್ಲಿ ಒಪ್ಪಿತವಾಗಿದೆ. ಹೀಗೆ ಮಹಿಳೆ ಇಬ್ಬಗೆಯ ಸೇವೆಯನ್ನು ಮಾಡಿ ಒಂದು ಕುಟುಂಬವನ್ನು ರಕ್ಷಿಸಿದರು. ಈ ಕುಟುಂಬದಲ್ಲಿ ಮಹಿಳೆ ಅಸುರಕ್ಷತೆ, ಅಭದ್ರತೆಯಿಂದ ತೊಳಲಾಡುವ ಅಸಹಾಯಕತೆಯ ಚಿತ್ರಣವಿದೆ.

'ಮಗಳ ಮನಸ್ಸು' ಕಥೆಯಲ್ಲಿ ಒಂದು ಸಂಕೀರ್ಣ ಕುಟುಂಬವಿದೆ. ಇಲ್ಲಿ ತಂದೆಯಿಂದಲೇ ಶೋಷಣೆಗೊಳಗಾದ ಮಹಿಳೆಯ ಚಿತ್ರಣವಿದೆ. ಕುಟುಂಬವನ್ನು ಸಲಹುವ ಸಲುವಾಗಿ ಕಥೆಯಲ್ಲಿ

ತಂದೆ ಮಗಳನ್ನು ತನ್ನ ವಯಸ್ಸಿನ ವಯಸ್ಕನಿಗೆ ವಿವಾಹ ಮಾಡುತ್ತಾನೆ. ಅದಲ್ಲದೆ ಮತ್ತೊಮ್ಮೆ ತನ್ನ ಕುಟುಂಬದ ಸಲುವಾಗಿ ಸದಸ್ಯರ ರಕ್ಷಣೆಗಾಗಿ ಮಗಳ ಬಳಿ ಸಹಾಯವನ್ನು ಪಡೆಯಲು ಮುಂದಾಗುತ್ತಾನೆ. ಇಲ್ಲಿ ಮಹಿಳೆ ವಿನಾಕಾರಣ ತನ್ನ ಆಯ್ಕೆಯಿಲ್ಲದೆ ಅನಿವಾರ್ಯ ಕಾರಣಗಳಿಂದ ಬದುಕನ್ನು ದುರಂತವಾಗಿಸುವ ಚಿತ್ರಣವಿದೆ. ಈ ದುರಂತಕ್ಕೆ ಕಾರಣವಾಗಿರುವ ತಂದೆಯನ್ನು, ಅವರ ಕುಟುಂಬವನ್ನು ಪರಸ್ಪರ ಸಂಘರ್ಷದ ನೆಲೆಯಲ್ಲಿ ಪ್ರತಿರೋಧ ತೋರಿದರೂ ಹೆಣ್ಣು ವಾತ್ಸಲ್ಯಕ್ಕೆ ಪ್ರತೀಕವೆಂಬಂತೆ ತಂದೆಯನ್ನು ಕ್ಷಮಿಸಿ ಮತ್ತೊಮ್ಮೆ ಕುಟುಂಬಕ್ಕೆ ಆಧಾರವಾಗಿದ್ದಾಳೆ. ಹೀಗೆ ಕುಟುಂಬದಲ್ಲಿ ಮಹಿಳೆಯು ಅಭದ್ರತೆಯಿಂದ ಭದ್ರತೆ ಕಡೆಗೆ ತನ್ನ ಸ್ವಂತ ಪ್ರಯತ್ನದಿಂದ ಬದುಕನ್ನು ನಿರ್ವಹಿಸುವ ಚಿತ್ರಣವಿದೆ.

'ಕೊನೆಯ ನಿರ್ಧಾರ' ಕಥೆಯು ಸಂಕೀರ್ಣವಾಗಿದೆ. ಇಲ್ಲಿ ವಿವಾಹಿತ ಸುಶಿಕ್ಷಿತ ಮಹಿಳೆ ಗಂಡನಿಂದ ಸಂಶಯಕ್ಕೊಳಗಾಗಿ ತಿರಸ್ಕೃತಗೊಂಡಿದ್ದಾಳೆ. ತನ್ನ ಸ್ವಂತ ಕುಟುಂಬವಿಲ್ಲದ ಮಹಿಳೆ ತನ್ನ ಸಾಮರ್ಥ್ಯದಿಂದ ತನ್ನ ಬದುಕನ್ನು ರೂಪಿಸಿಕೊಂಡಿದ್ದಾಳೆ. ಹೀಗೆ ತಿರಸ್ಕರಿಸಿದ ಗಂಡ ಕಾಲಾಂತರದಲ್ಲಿ ತನ್ನ ಮೊದಲ ಪತ್ನಿ ಲಲಿತಾಳನ್ನು ಬಯಸಿ ಬಂದಿದ್ದಾನೆ. ಕಾರಣ ಅವಳ ಮೇಲಿನ ಪ್ರೀತಿಯಿಂದಲ್ಲ. ಬದಲಾಗಿ ತನ್ನ ಎರಡನೆಯ ಹೆಂಡತಿಯ ಮಕ್ಕಳ ಸೇವೆಗೆ ಹಾಗೂ ಗಂಡನ ಸೇವೆಗಾಗಿ ಬಯಸುತ್ತಿದ್ದಾನೆ. ಹೀಗೆ ಮಹಿಳೆಯನ್ನು ಕುಟುಂಬದಲ್ಲಿ ವಿನಾಕಾರಣ ಹೊರಹಾಕುವ ಹಾಗೂ ಸ್ವೀಕರಿಸುವ ಮಾರಾಟದ ವಸ್ತುವಾಗಿ ಬಳಕೆಯಾಗಿದ್ದಾಳೆ. ಆದರೆ ಇಲ್ಲಿ ಮಹಿಳೆಗೆ ಅಂದು ಆ ಕುಟುಂಬದ ಅವಶ್ಯಕತೆಯಿತ್ತು; ಅನಿವಾರ್ಯವಿತ್ತು. ಆದರೆ ಇಂದು ಆ ಕುಟುಂಬದ ಪುರುಷನ ನೆರವಿಲ್ಲದೆಯೂ ತನ್ನ ಬದುಕನ್ನು ನಿರ್ವಹಿಸುವ ಸಾಮರ್ಥ್ಯವಿರುವಾಗ ಅನಾವಶ್ಯಕವಾದ ಕುಟುಂಬವನ್ನು ತಿರಸ್ಕರಿಸುವ ಮೂಲಕ ಸ್ವಾವಲಂಬನೆಯನ್ನು ಕಾಣುವ ಮಹಿಳೆಯ ಚಿತ್ರಣವಿದೆ. ಇಲ್ಲಿ ಮಹಿಳೆ ಸಬಲೆಯಾಗಿ ಜೀವಿಸುವ ಪರಿಯನ್ನು ಚಿತ್ರಿಸಲಾಗಿದೆ.

'ಸೇರದ ದಾರಿ' ಕಥೆಯಲ್ಲಿ ಸರಳಕುಟುಂಬದ ಚಿತ್ರಣವಿದೆ. ಇಲ್ಲಿ ಗಂಡ ಕುಟುಂಬದ ಯಜಮಾನಾಗಿದ್ದರೂ ತನ್ನ ಯಾವುದೇ ಕರ್ತವ್ಯವನ್ನು ಕುಟುಂಬಕ್ಕೆ ಸಲ್ಲಿಸದೆ ಹೆಂಡತಿ ಮಕ್ಕಳನ್ನು ನಿರ್ಲಕ್ಷಿಸಿ ಪರಸ್ತ್ರೀಯೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿದ್ದಾನೆ. ಹಾಗಾಗಿ ಇಲ್ಲಿ ಮಹಿಳೆ ಅನಿವಾರ್ಯ ಕಾರಣಗಳಿಂದ ಮನೆವಾಳ್ತೆ ಹಾಗೂ ಮಕ್ಕಳ ಸೇವೆಯನ್ನು ನಿಭಾಯಿಸುವ ಹೊಣೆಗಾರಿಕೆಯಿದೆ. ಇಲ್ಲಿ ಮಗ ತಾಯಿಯ ಮೇಲೆ ಅಪಾರ ಪ್ರೀತಿಯಿದ್ದು, ನೆಲೆ ಕಂಡುಕೊಂಡ ಮೇಲೆ ತನ್ನ ಭವಿಷ್ಯಕ್ಕಾಗಿ ದುಡಿದ ತಾಯಿಯ ಸೇವೆ ಮಾಡಲು ಮುಂದಾಗುತ್ತಾನೆ. ಈ ಸಂದರ್ಭದಲ್ಲಿ ಪಶ್ಚಾತ್ತಾಪದಿಂದಲೂ ಅಥವಾ ಸ್ವಾರ್ಥದಿಂದಲೂ ಬಯಸಿದ ಗಂಡನನ್ನು ತಿರಸ್ಕರಿಸುವುದರ ಮೂಲಕ ತಂದೆಯಿಲ್ಲದ ಮಾತೃ ಕುಟುಂಬವನ್ನು ನಿರ್ವಹಿಸಲು ಮುಂದಾಗುತ್ತಾಳೆ. ಹೀಗೆ ಇಲ್ಲಿ ಮಹಿಳೆ ಪುರುಷನಿದ್ದರೂ ಇಲ್ಲದಿದ್ದರೂ ಮನೆವಾಳ್ತೆಯನ್ನು ನಿಭಾಯಿಸುವ ಹೊಣೆ ಗೃಹಿಣಿಯ ಮೇಲಿದೆ. ಕುಟುಂಬದಿಂದ ಪಲಾಯನವಾದ ಪುರುಷನಷ್ಟು ಸ್ತ್ರೀಗೆ ಸಹಜವಾಗಿಲ್ಲ.

'ಬದುಕಿನ ಮಾರ್ಗದಲ್ಲಿ' ಕಥೆಯಲ್ಲಿ ವಿಧವೆಯಾದ ದೇವಮ್ಮ ಸಹಜ ಆಸೆ-ಆಕಾಂಕ್ಷೆಗಳಿಗೆ ಬಲಿಯಾಗಿ ರೇವಣ್ಣನಂತಹ ವಂಚಕನನ್ನು ವಿವಾಹವಾಗುವುದರ ಮೂಲಕ ಬದುಕನ್ನು ದುರಂತವಾಗಿಸುತ್ತಾಳೆ. ಈ ವ್ಯಕ್ತಿ ತನ್ನ ಮಗಳ ವಯಸ್ಸಿನ ಮಹಿಳೆಯನ್ನು ಇದೇ ರೀತಿ ಮೋಸಗೊಳಿಸುತ್ತಾನೆ. ಹೀಗೆ ಇಲ್ಲಿ ಏಕವ್ಯಕ್ತಿಯಿಂದ ಈ ಇಬ್ಬರ ಮಹಿಳೆಯರ ಬದುಕು ಅತಂತ್ರ ಸ್ಥಿತಿಯಲ್ಲಿದೆ. ಆದರೆ ಇಲ್ಲಿ ದೇವಮ್ಮನಂತಹ ಮಹಿಳೆ ತನ್ನದೇ ಸ್ಥಿತಿಯಲ್ಲಿರುವ ಮಹಿಳೆಗೆ ಆಸರೆ ನೀಡುವುದರ ಮೂಲಕ ಮಾನವೀಯತೆಯನ್ನು ಮೆರೆದಿದ್ದಾಳೆ. ಹೀಗೆ ಇಲ್ಲಿ ಕುಟುಂಬ ಮಹಿಳೆಗೆ ಅನಿವಾರ್ಯವಾಗಿರಲಿಲ್ಲ. ಅದನ್ನು ಮೀರಿಯೂ ಬದುಕನ್ನು ಸಾಗಿಸುವ ಚಿತ್ರಣವಿದೆ.

'ಅಖಿಲ ಸೇವೆ' ಈ ಕಥೆಯಲ್ಲಿ ಸರಳಕುಟುಂಬದ ಚಿತ್ರಣವಿದೆ. ಇಲ್ಲಿ ಮಹಿಳೆ ಮನೆಕೆಲಸವನ್ನು ಹಾಗೂ ಗಂಡನ, ಮಕ್ಕಳ ಸೇವೆಯನ್ನು ತನ್ನ ಕರ್ತವ್ಯವೆಂಬಂತೆ ನಿಭಾಯಿಸುತ್ತಿದ್ದಾಳೆ. ಹೀಗೆ ತನ್ನ ಸೇವೆಯಲ್ಲಿ ಮಾನಸಿಕವಾಗಿ ಅಸ್ವಸ್ಥಳಾದರೂ ಅದು ಕ್ಷಣ ಮಾತ್ರವಾಗಿದ್ದು ತಾನು ಮಾಡಿದ ಅಡಿಗೆಯನ್ನು ಸದಸ್ಯರಿಗೆ ಉಣಬಡಿಸುವುದರ ಮೂಲಕ ತಾನು ಸಂತೃಪ್ತಿ ಹೊಂದುವ, ತನ್ನ ಜಾಣತನವನ್ನು ಬಳಸಿ ಗಂಡನಿಗೆ ಹೊರೆಯಾಗದಂತೆ ಖರ್ಚು-ವೆಚ್ಚವನ್ನು ನಿಭಾಯಿಸುವ ಗೃಹಿಣಿಯಾಗಿದ್ದಾಳೆ. ಹೀಗೆ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗುವ, ಹೊಂದಿಕೊಳ್ಳುವ ಮಹಿಳೆಯ ಚಿತ್ರಣವನ್ನು ತರುತ್ತಾರೆ.

'ತುಂಬಿದ ಕೊಡ' ಹಾಗೂ 'ಆಕರ್ಷಣೆ' ಕಥೆಯು ಒಂದೇ ವಸ್ತುವಾಗಿದ್ದ ಕಥೆಯಾಗಿದೆ. ಇಲ್ಲಿ ಸುಶಿಕ್ಷಿತ ಹಾಗೂ ಅನಾಗರಿಕ ಕುಟುಂಬಗಳ ಪರಸ್ಪರ ಮುಖಾಮುಖಿಯಿದ್ದು ಹೋಲಿಕೆ ವ್ಯತ್ಯಾಸಗಳಿವೆ. ರಾಣಿ ಕುಟುಂಬ ಹಾಗೂ ಆ ಕುಟುಂಬಕ್ಕಾಗಿ ಸೇವೆ ಸಲ್ಲಿಸುತ್ತಿದ್ದ ಆಳು ನಂಜನ ಕುಟುಂಬಕ್ಕೆ ಮೂಲ ವ್ಯತ್ಯಾಸಗಳಿವೆ. ರಾಣಿ ಸಾಂಪ್ರದಾಯಿಕ ಕುಟುಂಬದಲ್ಲಿ ಶಿಸ್ತು, ನಯ, ನಾಜೂಕಿನಿಂದ ಜೀವನ ನಡೆಸಿದರೂ ಸುಖ-ಶಾಂತಿಯಿಲ್ಲ. ಆದರೆ ಇದರ ಯಾವುದೇ ಪರಿವಿಲ್ಲದ ಬದುಕುವ ಅನಾಗರಿಕ ಕುಟುಂಬ ಮುಕ್ತತೆಯಿಂದ ಜೀವನ ನಡೆಸುತ್ತಿದ್ದರು. ಹೀಗೆ ಬದುಕುವುದೇ ಸಂತೋಷಕ್ಕಾಗಿ ಆಗಿರುವುದರಿಂದ, ಆ ಸಂತೋಷ ಇಂತಹ ಕಟ್ಟುಪಾಡುಗಳಿಂದ ಅನುಭವಿಸಲು ಸಾಧ್ಯವಾಗದಿದ್ದಾಗ ಅದನ್ನು ಮೀರುವಿಕೆಯೇ ಉತ್ತಮವೆಂದು ರಾಣಿಯ ಚಿತ್ರಣವಿದೆ. ಆಕರ್ಷಣೆಯಲ್ಲಿಯೂ ಪರಸ್ಪರ ಎರಡು ಕುಟುಂಬಗಳ ಹೋಲಿಕೆ ಚಿತ್ರಣವಿದ್ದು, ಇಲ್ಲಿನ ಎರಡು ಕುಟುಂಬದಲ್ಲಿನ ಮಹಿಳೆಯರು ಸಾಂಪ್ರದಾಯಿಕವಾಗಿದ್ದು ಮನೆವಾಳ್ತೆಯನ್ನು ಅಚ್ಚುಕಟ್ಟಾಗಿ ನಿಭಾಯಿಸುವವರೆ. ಆದರೆ ಇಲ್ಲಿ ಇಬ್ಬರು ಪುರುಷರ ಹೋಲಿಕೆಯಿದ್ದು, ಮಹಿಳೆಯ ಬಗ್ಗೆ ಹಾಗೂ ತನ್ನ ಕುಟುಂಬದ ಬಗ್ಗೆ ಇರುವ ಪ್ರೀತಿ ತೋರಿಕೆಯಾಗಿದೆ.

'ತ್ಯಾಗಮಯೀ ಈ ಜೀವನವು' ಕಥೆಯಲ್ಲಿ ಪತ್ನಿಯ ಯಶಸ್ಸನ್ನು ಸಹಿಸದ ಗಂಡನ ಸ್ವಾರ್ಥತೆಯ ಚಿತ್ರಣವಿದ್ದು ಕೊನೆಗೆ ಮಹಿಳೆಯೇ ತನ್ನ ಕುಟುಂಬಕ್ಕೋಸ್ಕರ ತನ್ನ ಸಂಗೀತವನ್ನು

ತ್ಯಾಗ ಮಾಡುವ ಚಿತ್ರಣವಿದೆ. 'ಬಿಳಿ ಕಾಗೆ' ಕಥೆಯಲ್ಲಿ ವಿವಾಹಪೂರ್ವ ಸಂಬಂಧದಿಂದ ಬಲಿಯಾಗುವ ಮಹಿಳೆಯ ಚಿತ್ರಣವಿದೆ. 'ನರಬಲಿ' ಕತೆಯಲ್ಲಿ ನಾಯಕಿ ಕಾಮುಕನಿಗೆ ಬಲಿಯಾಗಿ ಈ ಸಂಗತಿಯನ್ನು ಗಂಡನಿಗೆ ಹೇಳಲಾಗದೆ ಮನೋವ್ಯಾಕುಲತೆಗೆ ಒಳಗಾಗುವ ಅಸಹಾಯಕತೆಯ ಚಿತ್ರಣವಿದೆ.

'ಇಂದು ನಾಳೆ' ಕಥೆಯಲ್ಲಿ ಕುಟುಂಬದಿಂದ ವಂಚಿತಳಾದ ಚಿತ್ರನಟಿಯ ದುರಂತ ಚಿತ್ರಣವಿದೆ. 'ನಾಯಿಬಾಲ' ಕಥೆಯಲ್ಲಿ ಅತ್ತೆ-ಸೊಸೆಯ ನಡುವಿನ ವೈಮನಸ್ಸು, ಹೊಂದಾಣಿಕೆ ಕೊರತೆಯಿರುವ ಪರಸ್ಪರ ಸಂಘರ್ಷದ ಕುಟುಂಬವಿದೆ. ಇಲ್ಲಿ ಸೊಸೆ ಮನೆಕೆಲಸವನ್ನು ಒಂಟಿಯಾಗಿ ನಿರ್ವಹಿಸಬೇಕು. ಗಾಣದ ಎತ್ತಿನಂತೆ ದುಡಿಯಬೇಕು. ತನ್ನ ಈ ಕೆಲಸದಲ್ಲಿ ಅತ್ತೆಯ ನೆರವಿಲ್ಲದೆ ಇರುವುದರ ಬಗ್ಗೆ ತಿರಸ್ಕಾರವಿದೆ. 'ಸಲಹೆ' ಕಥೆಯಲ್ಲಿ ಕೋಮುಗಲಭೆಯಿಂದ ಉಂಟಾಗುವ ಕುಟುಂಬದ ಪಲ್ಲಟವನ್ನು ಕುರಿತ ಚಿತ್ರಣವಿದೆ. 'ಭಾವಚಿತ್ರ' ಕಥೆಯಲ್ಲಿ ಮಹಿಳೆಯನ್ನು ಕೇವಲ ಕಾಮ ಹಾಗೂ ಮಕ್ಕಳನ್ನು ಹೆರುವ ಯಂತ್ರವಾಗಿ ನೋಡುವ ವ್ಯವಸ್ಥೆಯ ಬಗ್ಗೆ ವಿರೋಧವಿದೆ. ಅಸಹಾಯಕತೆಯಿದೆ. 'ವಿಶ್ವವಿಜಯ' ಕಥೆಯಲ್ಲಿ ಪುರುಷ ತನ್ನ ಮಹಿಳೆಗೆ ತನ್ನ ವಿವಾಹಪೂರ್ವ ಸಂಬಂಧದ ಬಗ್ಗೆ ಅನೈತಿಕತೆಯನ್ನು ಹೇಳುವುದರ ಮೂಲಕ ಜೀವನದಲ್ಲಿ ಮುಕ್ತತೆಯನ್ನು ಹೊಂದುತ್ತಾನೆ. 'ಮೂರು ಕಣ್ಣು' ಕಥೆಯಲ್ಲಿ ಪರಸ್ಪರ ಪ್ರೀತಿ ವಿಶ್ವಾಸ ತಿಳುವಳಿಕೆಯಿಂದ ಸಮಸ್ಯೆಗಳನ್ನು ಪರಿಹರಿಸಿ ಬದುಕುವ ಕುಟುಂಬದ ಚಿತ್ರಣವಿದೆ. 'ಪ್ರೇಮದ ಬೆಳಕು' ಕಥೆಯಲ್ಲಿ ಸೌಂದರ್ಯವೆಂಬುದು ಹೆಣ್ಣಿನ ದೇಹದಲ್ಲಿಲ್ಲ. ಅದು ಮನಸ್ಸಿನ ಅಂತರಾಳದಲ್ಲಿರುತ್ತದೆ. ನಡವಳಿಕೆಯ ಮುಖಾಂತರ ವ್ಯಕ್ತಿತ್ವದ ಸೌಂದರ್ಯವಿರುತ್ತದೆ ಎಂಬ ದರ್ಶನದ ಅಂಶವಿದೆ.

ಒಟ್ಟಾರೆಯಾಗಿ ತ್ರಿವೇಣಿಯವರ ಎಲ್ಲಾ ಕಥೆಗಳಲ್ಲಿ ಮಹಿಳೆ ಪ್ರಧಾನವಾಗಿದ್ದಾಳೆ. ಇಲ್ಲಿ ಚಿತ್ರಿಸಲಾಗಿರುವ ಮಹಿಳೆ ಸುಶಿಕ್ಷಿತಳಾಗಿದ್ದು ಆಕೆಗೆ ತನ್ನ ಬಾಳಸಂಗಾತಿಯನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿದೆ. ಆದರೆ ಪರಿಣಾಮದಲ್ಲಿ ಪರಿಹಾರವಾಗಿ ಸ್ವಂತಿಕೆಯ ಮಾರ್ಗವನ್ನು ಸೂಚಿಸುವುದು ತ್ಯಾಗ, ಸಹನೆ, ಪ್ರೀತಿಯಿಂದ ಸೋಲುವುದರ ಮೂಲಕ. ಇಲ್ಲಿನ ಮಹಿಳೆಗೆ ಕುಟುಂಬದಲ್ಲಿ ಸುರಕ್ಷತೆಯಿಲ್ಲ. ಅಭದ್ರತೆಯಿಂದ ತೊಳಲಾಡುತ್ತಿದ್ದಾಳೆ. ಇಲ್ಲಿ ಮಹಿಳೆ ಸುಶಿಕ್ಷಿತಳಾದರೂ ಕುಟುಂಬವನ್ನು ಯಾವುದೇ ಕಾರಣಕ್ಕೂ ನಿರ್ಲಕ್ಷಿಸುವಂತಿಲ್ಲ. ಹೀಗೆ ಮಹಿಳೆ ಹೊರಗಿನ ಕೆಲಸ ಹಾಗೂ ಮನೆವಾಳ್ತೆಯ ಹೆಚ್ಚಿನ ಹೊರೆಯಿಂದ ಮಾನಸಿಕವಾಗಿ ಅಸ್ವಸ್ಥಳಾಗಿದ್ದಾಳೆ. ಇಲ್ಲಿ ಮಹಿಳೆ ತಂದೆಯ ಕುಟುಂಬ ಹಾಗೂ ಗಂಡನ ಕುಟುಂಬದಲ್ಲಿ ಸಂಕಷ್ಟದಲ್ಲಿ ಬಳಸುವ ವಸ್ತುವಾಗಿದ್ದಾಳೆ ವಿನಃ ಯಾವುದೇ ಅಸ್ತಿತ್ವವಿಲ್ಲ. ಇಲ್ಲಿ ತ್ರಿವೇಣಿ ಚಿತ್ರಿಸುವ ಮಹಿಳೆ ಕುಟುಂಬವನ್ನು ನಂಬಿ ಬದುಕುತ್ತಿಲ್ಲ. ತನಗೆ ತಂದೆ, ಗಂಡನ, ಮಗನ ಆಸರೆಯಿದ್ದರೂ ಬದುಕುವ ಆ ಮೂಲಕ ಕುಟುಂಬದಲ್ಲಿ ಬದ್ಧತೆಯನ್ನು ಪಡೆಯುವ ಸಾಮರ್ಥ್ಯವಿದೆ. ಇಲ್ಲಿ ಮಹಿಳೆಯ ಹೊರಗಿನ ಸೇವೆ

ಸ್ವಂತ ಆಯ್ಕೆಯಿಂದಲ್ಲ. ಕೆಲವು ಅನಿವಾರ್ಯ ಹಾಗೂ ಅವಶ್ಯಕ ಕಾರಣಗಳಿಂದ ಈ ಪರಿಸ್ಥಿತಿಯನ್ನು ನಿಭಾಯಿಸುವ ಕುಟುಂಬದ ಚಿತ್ರಣವನ್ನು ಇಲ್ಲಿ ಬರುತ್ತದೆ. ಅಲ್ಲದೆ ಲೇಖಕಿ ಮಹಿಳೆಯಿಂದ ಮೋಸ ಹೋಗುವ ಪುರುಷನ ಅಸಹಾಯಕತೆಯನ್ನು ಮಹಿಳೆಯ ಸ್ವಾರ್ಥತೆಯನ್ನು ಕುರಿತ ಚಿತ್ರಣವಿದೆ. ಇಲ್ಲಿ ಅಪರಾಧ ಮಹಿಳೆಯದಿರಲಿ, ಪುರುಷನದಿರಲಿ ಆ ತಪ್ಪಿಗೆ ಮಹಿಳೆಯಷ್ಟೇ ಪುರುಷನು ಕಾರಣವಾಗಿದ್ದರೂ ಮಹಿಳೆಗೆ ಕಾಡಿದ ಪಾಪಪ್ರಜ್ಞೆ ಪುರುಷನಿಗಿರುವುದಿಲ್ಲ. ಅದು ಸಹಜವೆಂಬಂತೆ ಕೊನೆಗೆ ಮಹಿಳೆಯೇ ಎಲ್ಲವನ್ನು ನಿಭಾಯಿಸುವ ದುರಂತದಲ್ಲಿ ಮಹಿಳೆಯನ್ನು ಅನಾವರಣಗೊಳಿಸಲಾಗಿದೆ. ಹೀಗೆ ತ್ರಿವೇಣಿ ಕಥೆಗಳಲ್ಲಿ ಮಹಿಳೆ ಕುಟುಂಬದಲ್ಲಿ ತನ್ನನ್ನು ತಾನು ಕಳೆದುಹೋಗುವ ಹಾಗೂ ಕೆಲವೊಮ್ಮೆ ಮೀರುವಿಕೆಯಿಂದ ಕುಟುಂಬದಲ್ಲಿ ಬದ್ಧತೆಯನ್ನು ಪಡೆದುಕೊಳ್ಳುವ ಚಿತ್ರಣವಿದೆ. ತ್ರಿವೇಣಿಯವರ ಭಾಷೆ ಸರಳವಾಗಿದೆ. ಅಲ್ಲಲ್ಲಿ ಪ್ರತಿಮೆ ಸಂಕೇತಗಳನ್ನು ಬಳಸಿಕೊಳ್ಳಲಾಗಿದೆ. ಇಲ್ಲಿ ಕತೆಯ ತಂತ್ರವನ್ನು ಸಾಕ್ಷಿಪ್ರಜ್ಞೆ, ಸರ್ವನಾಮ, ಪ್ರಥಮಪುರುಷ ನೆಲೆಯಲ್ಲಿ, ಕೆಲವೊಮ್ಮೆ ಪತ್ರದ ಮುಖಾಂತರ ಹೇಳುವ ತಂತ್ರವನ್ನು ಬಳಸಿಕೊಂಡಿದ್ದಾರೆ.

೩.೧೦. ಕಾತ್ಯಾಯಿನಿ

ಕಾತ್ಯಾಯಿನಿ ಅವರ ಕಥೆಗಳಲ್ಲಿ ಕುಟುಂಬದ ಸ್ವರೂಪವು ಹೆಚ್ಚು ರಕ್ತಸಂಬಂಧಗಳಿಂದ ಕೂಡಿದೆ. ಇಲ್ಲಿ ಮೇಲ್ಮಧ್ಯಮ ವರ್ಗದ ನಗರೀಕರಣ ಕುಟುಂಬಗಳು ಕಂಡುಬರುತ್ತವೆ. ಜೊತೆಗೆ ಕೆಳವರ್ಗದ ಗ್ರಾಮೀಣ ಕುಟುಂಬಗಳನ್ನೂ ಕಾಣಬಹುದು. 'ಮಾಲಾ' ಕಥೆಯಲ್ಲಿ ಮಾಲಾ ತಂದೆ ಸುಂದರಂ ವೈದ್ಯನಾಗಿದ್ದು, ತನ್ನ ಸೇವೆಯಿಂದ ಅಪಾರ ಜನಪ್ರಿಯತೆಯನ್ನು ಪಡೆದ ವ್ಯಕ್ತಿ. ಮಾಲಾ ತಂದೆ ವೈದ್ಯನಾಗಿದ್ದರೂ ಸಹ ದೈವತ್ವದಲ್ಲಿ ನಂಬಿಕೆಯುಳ್ಳವರು. ಇಲ್ಲಿ ತಂದೆ +ಮಗಳು(ಮಾಲಾ) ತಾಯ್ತನ ಪಡೆಯುವುದಿಲ್ಲವೆಂದರಿತಾಗ ಬೀಗರು ಮಗಳನ್ನು ಅವಮಾನಿಸಿದಾಗ ಮಾಲಾ ತಂದೆಯ ಮನೆಯಲ್ಲಿ ನೆಲೆಸಿ ಸುರಕ್ಷತೆಯನ್ನು ಪಡೆಯುತ್ತಾಳೆ. ಹೀಗೆ ಇಲ್ಲಿ ತಂದೆ–ತಾಯಿ ಕುಟುಂಬದಲ್ಲಿ ಗಂಡು ಸಂತಾನವಿಲ್ಲದಾಗ ಮಗಳಿಗೆ ಆಶ್ರಯ ದೊರೆಯುವುದು ಸಹಜವಾಗಿದೆ. ಅದು ಉಳ್ಳವರ ಪ್ರತಿಷ್ಠಿತ ಕುಟುಂಬದಲ್ಲಿ ಮಾತ್ರ ಸಾಧ್ಯ. ಇಲ್ಲಿ ಬಂಜೆ ಮಾಲಾಳಿಗೆ ಮನೆಯ ವಾತಾವರಣಕ್ಕಿಂತ ಸಾಮಾಜಿಕ ನಿಂದನೆ ಹೆಚ್ಚು ತಲ್ಲಣಗೊಳಿಸುತ್ತದೆ. "ನನಗೆ ಮಕ್ಕಳಾಗೋ ಅದೃಷ್ಟ ಇದ್ದರೆ, ದೇವರು ಮಾಲತಿಯಲ್ಲೇ ಕೊಡಲಿ. ಹಾಗಿಲ್ಲದಿದ್ದರೆ ಮಕ್ಕಳೇ ಬೇಡ"(ಮಾಲಾ, ಪುಟ–೧೮) ಎಂದು ನಿರ್ಧರಿಸಿದ ಅಳಿಯನ ಆಲೋಚನೆಯ ಹಿಂದೆ ಮಾವನಿಗಿರುವ ಸಂಪತ್ತು ಸಾಮಾಜಿಕ ಸ್ಥಾನ ಅರಿತು ಅವನು ಈ ತೀರ್ಮಾನ ಕೈಗೊಂಡಿರಬಹುದೆ?" ಮಾಲಾಳು ತಾಯಿಯಾಗುವ ಮೂಲಕ ಅವಳ ಸಮಸ್ಯೆಗೆ ಪರಿಹಾರವನ್ನು ಕಥೆಯಲ್ಲಿ ಕಾಣಬಹುದಾಗಿದೆ. ಸುಂದರಂಗೆ ಮಾಲಾ ಏಕಮಾತ್ರ ಮಗಳಾಗಿರುವುದರಿಂದ ಮಾಲಾಳಿಗೆ ತಂದೆಯ ಕುಟುಂಬದಿಂದ ರಕ್ಷಣೆ ಒದಗಿದೆ. ಮಾಲಾಳ ತಾಯಿ ಲಕ್ಷ್ಮಿದೇವಮ್ಮಗೆ

ನೆಂಟರ ಬಗ್ಗೆ ಅಸಮಾಧಾನವಿದ್ದು, "ಇದ್ದರೆ ಕಣ್ಣುರಿ, ಇಲ್ಲದಿದ್ದರೆ ಹೊಟ್ಟೆ ಉರಿ. ಮಗುವಾದರೂ ಬೀಗರಿಗೆ ಅಷ್ಟಕಷ್ಟೇ. ಅಸಮಾಧಾನ. ಸದ್ಯ ಮಾಲಾ ಮಗು ಇಲ್ಲೇ ಇನ್ನು. ಆ ಮನೆಗೆ ಹೋಗಲ್ಲ. ಡಾಕ್ಟರು ಸ್ಪಷ್ಟವಾಗಿ ಹೇಳಿದ್ದಾರೆ"(ಮಾಲಾ, ಪುಟ-೨೦). ಹೀಗೆ ಸುಂದರಂ ಸಮಾಜದಲ್ಲಿ ಗೌರವ ಅಧಿಕಾರ ಸಂಪತ್ತು ಉಳ್ಳವನಾಗಿದ್ದರಿಂದ ಹಾಗೂ ಮಗನಿಲ್ಲದ ಏಕಮಾತ್ರ ಮಗಳಾಗಿರುವುದರಿಂದ ಮಗಳನ್ನು ಒಂಟಿತನ ಸಮಸ್ಯೆಯಿಂದ ಪಾರಾಗಿಸಿ ಅವಳಿಗೆ ಸುರಕ್ಷತೆ ನೀಡುವಲ್ಲಿ ಸಫಲನಾದ.

"ಹದಿನೈದು ವರ್ಷಾಯ್ತು ನಮ್ಮ ಹಣೆಬರಹ ನೀನ್ಯಾಕೆ ಅನುಭವಿಸೋದು? ಇನ್ನೊಂದು ಮದುವೆ ಮಾಡಿಕೊ, ಮಾಲತಿ ಇಲ್ಲಿರಲಿ. ಬಂದು ಹೋಗ್ತಾ ಇರು ಮರೀಬೇಡ" ಎಂದು ಡಾಕ್ಟರು ಹೇಳಿದರು. ನನಗೇನು ದುಃಖ ಉಕ್ಕಿ ಬಂತು. ಮಾಲಾನ ನೋಡಲಾರೆ, ಅಳಿಯನನ್ನೂ ನೋಡಲಾರೆ. ಅವನ ತಮ್ಮನಿಗಾಗಲೆ ನಾಲ್ಕು ಮಕ್ಕಳು. ಅಳುತ್ತಲೇ ಹೇಳಿದ." ಲಕ್ಷ್ಮಿದೇವಮ್ಮನ ಅಳಲನ್ನು ನಿರೂಪಕಿ ಹೇಳುವಾಗ ಈ ಹಿನ್ನೆಲೆಯಲ್ಲಿ ಕುಟುಂಬದಲ್ಲಿ ಪತ್ನಿ, ಮಗಳು ವೈದ್ಯನಾದ ಸುಂದರಂನ ಅಧಿಕಾರದಿಂದ ನಿಯಂತ್ರಿಸಲ್ಪಟ್ಟು ಅವರ ನಿರ್ಣಯಕ್ಕೆ ಮಾನ್ಯ ಮಾಡುವ ರೀತಿಯಲ್ಲಿ ಅವರ ತೀರ್ಮಾನಗಳಿವೆ. ಇದು ಸಹಜವಾಗಿದೆ ಮತ್ತು ಒಪ್ಪಿತವಾಗಿದೆ ಎಂಬಂತಿದೆ. ಹೀಗೆ ಇಲ್ಲಿ ಕುಟುಂಬದ ಪುರುಷ ತಂದೆಯ ತೀರ್ಮಾನ ಅಂತಿಮವಾಗಿದ್ದು, ಆ ಮನೆಯ ಇತರ ಸದಸ್ಯರಾದ ಪತ್ನಿ, ಮಗಳು ಹಾಗೆಯೇ ಅಳಿಯನಿಗೂ ಸಹ ಒಪ್ಪಿತವಾಗಿದೆ.

ಮಾಲಾಳ ಗಂಡ, ಅವರ ಮನೆಯವರು, ಹೆತ್ತವರು ಎರಡನೇ ವಿವಾಹಕ್ಕೆ ಒತ್ತಾಯಿಸುತ್ತಿದ್ದಾಗ ತಂದೆ-ತಾಯಿಯನ್ನು ಬಿಟ್ಟು ಮಾವನ ಮನೆಯಲ್ಲಿ ಆಶ್ರಯ ಪಡೆದ "ಅತ್ತೆಯ ಮೂಲಕ ಅಳಿಯನ ನಡವಳಿಕೆಯನ್ನು ಅರಿತು ನಿರೂಪಕಿಯಲ್ಲಿ "ನನ್ನ ಅಳಿಯ ಅಪರಂಜಿ ಕಾಂತಿ. ಮಾಲಾ ಅದೃಷ್ಟ ಮಾತ್ರವಲ್ಲ, ಅದು ನನ್ನದೂ ಅದೃಷ್ಟ. ನನಗೆ ಮಕ್ಕಳಾಗೋ ಅದೃಷ್ಟ ಮಾತ್ರವಿಲ್ಲ. ಅದು ನನ್ನದೂ ಅದೃಷ್ಟ. ನನಗೆ ಮಕ್ಕಳಾಗೋ ಅದೃಷ್ಟ ಇದ್ದರೆ, ದೇವರು ಮಾಲಾಳಲ್ಲಿ ಕೊಡಲಿ. ಹಾಗಿಲ್ಲದಿದ್ದರೆ ಮಕ್ಕಳೇ ಬೇಡ" ಎಂದು ಇಲ್ಲೇ ನಿಂತುಬಿಟ್ಟ. ಆಮೇಲೆ ಡಾಕ್ಟರು ಎಂದು ಕಾರು ಶೆಡ್ಡು ಇರೋ ದೊಡ್ಡ ಮನೆ ಕೊಂಡುಕೊಂಡರು. ಈಗ ಅಳಿಯನಿಗೂ ಸಮಾಧಾನ. ರಾಜು ಎಲ್ಲರಿಗೂ ದಡ ಕಾಣಿಸಿದ. "ಅದೃಷ್ಟವೇ ಹೌದು. 'ಅದೃಷ್ಟ ಎನ್ನುವುದು ಇದೆ' (ಪುಟ,೧೮). ಹೀಗೆ ರಾಜುವಿನ ಆಗಮನ ತಂದೆ ಹಾಗೂ ಮಗಳ ಮನೆಯ ಸಮಸ್ಯೆಗೆ ಪರಿಹಾರ ಕಾಣಿಸುವುದರ ಮೂಲಕ ಬದುಕಿನ ಬಗ್ಗೆ ಆಶಾವಾದವನ್ನು ಹಾಗೂ ಅದನ್ನು ಸಾರ್ಥಕಗೊಳಿಸುವಂತೆ ಕಾತ್ಯಾಯಿನಿ ಕಥೆ ನಿರೂಪಣೆಗೊಂಡಿದೆ. ಮಾಲಾಳ ತಂದೆಯ ಹೃದಯ ವೈಶಾಲ್ಯತೆ ಕಷ್ಟದಲ್ಲಿರುವವರಿಗೆ ಸಹಕಾರ ಮನೋಭಾವನೆ. ಅಂದರೆ ತಂದೆಯ ಪುಣ್ಯ ಮಾಲಾಳ ಮಗುವನ್ನು ಪ್ರಾಪ್ತಿಸಿತು ಎಂಬಂತೆ ನಿರೂಪಕಿ "ದೇವರು

ದೊಡ್ಡವರು ಸುಖವಾಗಿಟ್ಟಿರಲಿ ಇವರನ್ನು"(ಪುಟ-೨೧) ಹೀಗೆ ದೈವತ್ವದ ನಂಬಿಕೆ ಜೊತೆಗೆ ಬದುಕಿನ ಆಶಾವಾದಿತನ ಆ ಸಮಸ್ಯೆಗೆ ಪರಿಹಾರ ಕಾಣಬಹುದೆಂದು ಕಥೆ ನಿರೂಪಿಸುತ್ತದೆ.

ಇದೇ ರೀತಿಯ ಸಮಸ್ಯೆಯನ್ನು ರಂಗಮ್ಮನ ಸಂಸಾರದಲ್ಲಿ ಮನೆಯಲ್ಲಿ ಕಾಣಬಹುದು. ಈ ಮನೆತನದ ಯಜಮಾನ ತಾತ. ಇಲ್ಲಿ ತಾತ ತನ್ನ ಸ್ವಂತ ಮೊಮ್ಮಗಳಾದ ರಂಗವ್ವನನ್ನು ಮಗನಿಗೆ ವಿವಾಹ ಮಾಡಿದ್ದಾನೆ. ಗೋವಿಂದನಿಗೆ ಇಷ್ಟವಿಲ್ಲದ ಹೆಣ್ಣು ರಂಗವ್ವ. ಆದರೆ ತಂದೆಯ ಮೇಲಿನ ಗೌರವದಿಂದ ಪತ್ನಿಯಾಗಿ ಒಪ್ಪಿಕೊಂಡಿದ್ದಾನೆ. ಇನ್ನು ಮಗನಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ ಎಂದ ಮೇಲೆ ಮೊಮ್ಮಗಳಿಗೆ? ಹೀಗೆ ಇಲ್ಲಿ ತಾತನ ಒತ್ತಾಯಕ್ಕೆ ಕಟ್ಟುಬಿದ್ದು ವಿವಾಹ ಮಾಡಿಕೊಂಡಿದ್ದಾಳೆ. ರಂಗಮ್ಮನ ಕೌಟುಂಬಿಕ ಬದುಕು ರಾಧಮ್ಮ, ಗೋದಮ್ಮ, ಗೌರಮ್ಮ ಪಾತ್ರಗಳ ಮುಖಾಂತರ ಅನಾವರಣಗೊಳ್ಳುತ್ತವೆ. ರಂಗಮ್ಮ ಮೇಲ್ಮಧ್ಯಮವರ್ಗದಲ್ಲಿ ತಾತನ ಹಾಗೂ ಗಂಡನ ಬಿಗಿ ವಾತಾವರಣದಲ್ಲಿ ಬದುಕನ್ನು ಸಾಗಿಸಿದಳು. ತಾತ ಹಾಗೂ ಗಂಡನ ಸೇವೆ ಮಾಡುವುದು ತನ್ನ ಕರ್ತವ್ಯವೆಂಬಂತೆ ಚಾಚೂ ತಪ್ಪದೆ ನಿಭಾಯಿಸುವಳು. ಮನೆಯ ಅವಿರತ ದುಡಿಮೆ ಅವಳ ತಾಯ್ತನದ ಫಲವಂತಿಕೆಯನ್ನು ಕಿತ್ತುಕೊಂಡಿತು. ಗೋವಿಂದ ಮನೆಯ ಜವಾಬ್ದಾರಿತನದಿಂದ ತಪ್ಪಿಸಿಕೊಂಡು ಪಲಾಯನವಾದಿಯಾಗಿ ಕಂಡುಬರುತ್ತಾನೆ. ಗೋವಿಂದನಿಗೆ ತಂದೆಯ ಮೇಲೆ ಪ್ರೀತಿ ಹೊರತು ಪತ್ನಿ ರಂಗಮ್ಮಳ ಮೇಲಿಲ್ಲ. ಗೋವಿಂದ ಪತ್ನಿ ರಂಗಮ್ಮನನ್ನು ತನ್ನ ಅವಶ್ಯಕತೆಗಳನ್ನು ಈಡೇರಿಸುವ ಸಾಧನವಾಗಿ ಮಾತ್ರ ಕಂಡಿದ್ದಾಳೆ. ಹೀಗೆ ತಾತನ ಬಿಗಿಯಾದ ವಾತಾವರಣ, ಗಂಡನ ತಿರಸ್ಕಾರ, ತಾಯ್ತನದ ಕೊರಗು ರಂಗಮ್ಮನಲ್ಲಿ ಅಸಹಾಯಕತೆಯನ್ನು ಉಂಟುಮಾಡುವಂತಹ ವಾತಾವರಣವಿದೆ. ಮನೆಯ ಬಿಗಿಯಾದ ವಾತಾವರಣ ಮತ್ತೊಬ್ಬರ ಸುಖವನ್ನು ಕಂಡು ಕೊರಗುವ ಮಾನಸಿಕ ಅಸ್ವಸ್ಥತೆಗೆ ಒಳಗಾಗಿ ತಲ್ಲಣಗೊಂಡಂತೆ ಕಂಡುಬರುತ್ತಾಳೆ. ಇಲ್ಲಿ ತಾತ, ಗಂಡನ ನಡವಳಿಕೆಗಳು ಹೆಣ್ಣನ್ನೇ ಅಪರಾಧಿಯನ್ನಾಗಿ ತಿಳಿಯುವಂತೆ ಸಮಾಜ ಬಿಂಬಿಸುತ್ತದೆ. ಆದರೆ ರಂಗಮ್ಮನ ಧ್ವನಿಯ ಮುಖಾಂತರ ಆ ಮನೆಯ ಸದಸ್ಯರ ನಡವಳಿಕೆಗಳು ಹೆಣ್ಣಿನ ಬವಣೆಯನ್ನು ನಿರೂಪಿಸುತ್ತದೆ. "ಪಾಪ ರಂಗಮ್ಮನಿಗೆ ಗಂಡನ ಮೇಲೆ ಸಿಟ್ಟು. ಆದರೆ ಯಾರ ತಪ್ಪೋ? ದೇವರೇ ಬಲ್ಲ. ಆದರೂ ಹೆಂಗಸರ ಮನಸ್ಸು ಸ್ವಲ್ಪ ಮನೆ, ಗಂಡ, ಮಕ್ಕಳು ಬಿಟ್ಟು ಅಡ್ಡಾಡಿದರೆ ವಾಸಿ. ಇಲ್ಲದಿದ್ರೆ ತಲೆ ಕೆಡಿಸಿಕೊಳ್ತಾರೆ"(ರಂಗು, ಪುಟ-೭೭) ಎಂದು ನಿರೂಪಕಿ ನಿರೂಪಿಸುವ ಧ್ವನಿಯ ಹಿಂದೆ ರಂಗಮ್ಮನ ಕುಟುಂಬದ ವಾತಾವರಣ ಅನಾವರಣಗೊಳ್ಳುತ್ತದೆ. ಹೆಣ್ಣು ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಬಂದಾಗ ಮಾತ್ರ ನೆಮ್ಮದಿಯನ್ನು ಕಾಣಬಹುದೆಂಬುದು ಸೂಚಿಸುತ್ತದೆ.

'ಸಾವಿತ್ರಿ' ಕಥೆಯ ಶೀರ್ಷಿಕೆ ಸೂಚಿಸುವಂತೆ ಪುರಾಣದ ಸಾವಿತ್ರಿಯಲ್ಲ. ಸಾವಿತ್ರಿ ಗಂಡುಮಕ್ಕಳನ್ನು ಸಂರಕ್ಷಕಿಯಾಗಿ ಕಾಣುತ್ತಾಳೆ. ಸುರಕ್ಷತೆಯ ನೆಲೆಯಾಗಿ ಸಾವಿತ್ರಿ ತಂದೆ-

ತಾಯಿಯರ ಒಪ್ಪಿಗೆಯಂತೆ ಸೋದರತ್ತೆಯ ಮಗ ರಾಮಪ್ಪನನ್ನು ವಿವಾಹವಾಗಿದ್ದಾಳೆ. ಓದುವ ಇಚ್ಛೆ ಸಾವಿತ್ರಿಯಲ್ಲಿ ಇದ್ದರೂ ಆ ಕುಟುಂಬದ ತಂದೆ-ತಾಯಿಗಳಿಗೆ ಈಡೇರಿಸಲಾರದ ಆರ್ಥಿಕ ದುಃಸ್ಥಿತಿ ಕಾರಣವಾಗಿದೆ. ಸಾವಿತ್ರಿ ತಂದೆಗೆ ಅಳಿಯ ರಾಮಪ್ಪ ಸ್ವಂತ ತಂಗಿಯ ಮಗನಾಗಿದ್ದರಿಂದ ಅಳಿಯನಿಗೆ ಶಿಕ್ಷಣವನ್ನು ಕೊಡಿಸಿ ಮಗಳ ಬದುಕಿಗೆ ಭದ್ರತೆಯನ್ನು ಒದಗಿಸಿದ್ದ. ಅಳಿಯ ಮಗಳಿಗೆ ಸಂತಾನವನ್ನು ನೀಡಿದೇ ಹೊರತು ಆ ಮನೆಯ ಆಶ್ರಯನಾಗಲಿಲ್ಲ. ಹೀಗೆ ಅಳಿಯ ರಾಮಪ್ಪ ಆ ಮನೆಯ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಸಹಜವಾಗಿದೆ. ಮಗಳಿಗೆ ರಾಮಪ್ಪನಿಂದ ಅಭದ್ರತೆ ಒದಗಿದಾಗ ತಂದೆ ಅವಳ ಸುರಕ್ಷತೆಯ ಭಾರವನ್ನು ಹೊತ್ತುಕೊಂಡನು. ಹೀಗೆ ಇಲ್ಲಿ ಸಾವಿತ್ರಿ ಪಲಾಯನವಾದಿ ಗಂಡನಿಂದ ತಂದೆಯ ಆಶ್ರಯ ಪಡೆಯುವುದು ಅನಿವಾರ್ಯವಾಯಿತು. ಸಾವಿತ್ರಿ ಮನೆವಾರ್ತೆಯನ್ನು ನಿಭಾಯಿಸುವಲ್ಲಿ ನಿಪುಣೆ. ತಾಯಿ ರಾಧಮ್ಮನಿಗೆ ಮಗಳ ಜಾಣತನದ ಮೇಲೆ ಹೆಮ್ಮೆಯಿದೆ. ಸಾವಿತ್ರಿ ತನ್ನ ಬಿಕ್ಕಟ್ಟಿನ ಬದುಕಿನಿಂದ ಬದುಕು ಸಾಗಿಸಿದಳು. ಹಾಗಾಗಿ ಅಣ್ಣ ರಾಘಣ್ಣ "ಸೋಪ್ಹಾಕಿದ ಬಟ್ಟೆ ಕಲ್ಲು ಮೇಲಿಡಬೇಡ. ಸೋಪು ದಂಡ ಆಗುತ್ತೆ. ಬಕೆಟ್ಟಿಗೆ ಹಾಕು" ಎಂದದ್ದೇ ಅವಳ ಅಪರಾಧವಾಗಿ ರಾಘವನಿಂದ "ನೀನೇನು ಖರ್ಚು ಕಮ್ಮಿ ಮಾಡ್ತೀಯಾ ಅಣ್ಣಂಗೆ? ನೀನು ನಿನ್ನ ಗಂಡ ಎರಡು ಮಕ್ಕಳು ಇಲ್ಲೇ ಝಾಂಡ ಹಾಕಿದ್ದೀರಿ, ಎಷ್ಟು ವರ್ಷಾಯ್ತು ಅಂತಾನೆ. ನನ್ನನ್ನು ಸರಿಯಾದೋರಿಗೆ ಕೊಟ್ಟಿದ್ರೆ ನಾನ್ಯಾಕ್ರಿ ಇವನ ಮನೆ ಬಾಗಿಲಲ್ಲಿ ಬಿದ್ದಿರ್ತಿದ್ದೆ? ಸೊಪ್ಪು ತಂದ್ಹಾಕಿದ್ರೂ ಉಪ್ಪೋ ಏನೋ ಬೇಯಿಸಿಕೊಂಡು ತಿಂತಿದ್ವು, ಏನೂ ಕೆಲಸ ಇಲ್ಲದೆ ಎರಡು ತಿಂಗಳಿಂದ ಇದ್ದಾರಲ್ಲಾ? ನಾನೇನ್ರಿ ಬೇಯಿಸಲಿ? ಅಕ್ಕಿಯಿಲ್ಲ, ಬೇಳೆಯಿಲ್ಲ ಉಪ್ಪು ಕೂಡ ಇಲ್ಲ. ಸೌದೆ ತಂದು ಎಷ್ಟು ದಿನವಾಯ್ತೋ. ನನ್ಹಣೆ ಬರಹ ಮಕ್ಕಳನ್ನೂ ಅಜ್ಜಿ ಮನೆಗೆ ಊಟಕ್ಕೆ ಬಿಡದೆ ಏನ್ಮಾಡ್ಲಿ? ಉಪವಾಸಾ ಹಾಕ್ಲಾ? ನನ್ಹಾಳೊಟ್ಟೆ ತಡೆಯುತ್ತಾ? ಒಂದು ದಿನ ತಡೆದೀತು ಎರಡು ದಿನ ತಡೆದೀತು ಮೂರನೇ ದಿನ ತಿನ್ನೋಣ ಅನ್ನಿಸುತ್ತೆ. ಇನ್ನು ನಾವುಂಡು ಅವರನ್ನ ಬಿಡೋಕಾಗುತ್ತಾ ರೀ. ನಾವೇನೋ ನಾಲ್ಕು ಜನವೂ. ನಮ್ಮ ತಂದೆಗೆ ಭಾರವಾಗಿದ್ದೀವಿ. ಆದ್ರೆ ನಾನೇನು ಮಾಡಬಲ್ಲೆ ಹೇಳಿ"(ಸಾವಿತ್ರಿ, ಪುಟ-೨೪). ಈ ಧ್ವನಿಯ ಹಿಂದೆ ಸಾವಿತ್ರಿ ಗಂಡನ ಬೇಜವಾಬ್ದಾರಿತನ ಸಹಜವಾಗಿ ಕಾಣುತ್ತದೆ. ಆ ಮೂಲಕ ಹೆಣ್ಣಿನ ಬದುಕಿನ ಅಸಹಾಯಕತೆ, ಅತಂತ್ರ ಹಾಗೂ ಅಭದ್ರತೆಯನ್ನು ಅನಾವರಣಗೊಳಿಸುತ್ತದೆ. ಅಭದ್ರತೆಯಲ್ಲೂ ಗಂಡನ ಮೇಲಿನ ಸಹಾನುಭೂತಿಯನ್ನು ಕಾಣಬಹುದು. ಈ ಮೂಲಕ ಹೆಣ್ಣಿನ ಕೌಟುಂಬಿಕ ಪ್ರೀತಿಗಿಂತ ಕರ್ತವ್ಯ ಎಂಬಂತೆ ಹೆಣ್ಣು ಬದುಕುವುದು ಸಹಜವಾಗಿದೆ. ಇಲ್ಲಿ ತಂದೆ ಮಗಳಿಗೆ ತಾತ್ಕಾಲಿಕವಾದ ಸುರಕ್ಷತೆಯನ್ನು ನೀಡಿದರೆ, ತಾಯಿ ರಾಧಮ್ಮ ಮಗಳ ಬದುಕಿಗೆ ಶಾಶ್ವತ ಭದ್ರತೆಯನ್ನು ಒದಗಿಸುವ ಆಲೋಚನೆಯಿದೆ. "ರೀ ಭದ್ರಮ್ಮನೋರೆ ಇಲ್ಕೇಳಿ ಈಗ ಸಾವಿತ್ರೀಗೇನು ಮರ್ಯಾದೆಯ ಕೆಲಸ ಸಿಗೋಲ್ವಾ, ಇದು ನಿಮ್ಮ ಮನಸ್ಸಲ್ಲೇ ಇರಲಿ. ನನಗ್ಯಾಕೋ ಈಗೆಲ್ಲಾ ಹೆಂಗಸರು

ಮುಂದುವರಿದಿರೋದು ನೋಡಿ, ನಮ್ಗ ಹಳೇ ಕಂದಾಚಾರ ಬಿಟ್ಟು, ಮೌನವಾಗಿದ್ರೆ ಸಾಕು. ಒಂದು ಕೆಲಸ ಹಿಡೀಲಿ ಸಾವಿತ್ರಿಗೆ ಅಂತ ಅನ್ನಿಸುತ್ತೆ, ಅಂತಾದ್ದೇನಾದ್ರೂ ಇದೆಯಾ?" ಎಂಬ ಧ್ವನಿಯ ಹಿಂದೆ ತಾಯಿ ರಾಧಮ್ಮಳ ವೈಚಾರಿಕತೆಯ ಹಿಂದೆ ಮಡಿವಂತಿಕೆಯನ್ನು ಮೀರುವ, ಪಲ್ಲಟಗೊಳ್ಳುವ ಆಲೋಚನೆಯಿದೆ. ಈ ಮೂಲಕ ಮಗಳ ಬದುಕಿಗೆ ಶಾಶ್ವತ ಸುರಕ್ಷತೆಯನ್ನು ಒದಗಿಸುವುದು ತಾಯಿಯ ಉದ್ದೇಶವಾದಂತಿದೆ. ತಾಯಿಯ ಉದ್ದೇಶದಂತೆ ಸಾವಿತ್ರಿ ಶಿಕ್ಷಕಿಯಾದಳು. ಸಾವಿತ್ರಿ ಗಂಡ ರಾಮಪ್ಪ ಅವಳ ಸಾಧನೆಗೆ ಯಾವುದೇ ಪ್ರತಿಕ್ರಿಯೆಯಿಲ್ಲದೆ ತಟಸ್ಥನಾಗಿದ್ದ. ಇದು ಆತನ ಅನಿವಾರ್ಯವೂ, ಸೋಮಾರಿತನವೂ ಆಗಿರಬಹುದು. ಮಗಳು ಸಾವಿತ್ರಿ ಹೇಳಿದಾಗ ಸದ್ಯ ನಿನಗಂಜಿ ನೀನೆಲ್ಲಾದರೂ ಕೂಡಿ ಇದ್ದ ಕಡೆ ದೇವರು ನೆಟ್ಟಗಿಡಲಿ ಎಂದು ತಾಯಿಯ ಹಾರೈಕೆ ಹಿಂದೆ ಮಗಳು ಸ್ವಾಭಿಮಾನದ ಬದುಕಿನಲ್ಲಿ ಸ್ವಾವಲಂಬನೆಯ ಬದುಕಿನ ಬಗ್ಗೆ ಮೆಚ್ಚುಗೆಯಿದೆ. ಈ ಹಿಂದೆ ಅಲ್ಲಿಯೂ ಹೆಣ್ಣಿನ ಮನೆ ನಡೆಸುವಲ್ಲಿ ಕ್ರಿಯಾಶೀಲತೆ ಅವಶ್ಯಕವಾಗಿದೆ ಎಂಬಂತೆ ಬಿಂಬಿತವಾಗಿದೆ.

'ಮಾದೇವಿ' ಕತೆಯಲ್ಲಿ ಕುಟುಂಬ ರಚನೆಯಲ್ಲಿ ಮಾದೇವಿಗೆ ಸೋದರಮಾವನ ಜೊತೆ ವಿವಾಹ ಏರ್ಪಡುತ್ತದೆ. ಇಲ್ಲಿ ರಕ್ತಸಂಬಂಧದ ಕುಟುಂಬವಿದೆ. ಕೆಂಪ ತನ್ನ ತಾಯಿಯ ಮೂಲಕ ಮಾವನ ಮಗಳು ಮಾದೇವಿಯನ್ನು ಹಕ್ಕಿನ ಮೂಲಕ ಕೇಳುವಂತೆ ಹೇಳಿ ಕಳಿಸಿದನು. ಕೆಂಪನ ತಾಯಿ ಅಣ್ಣನಿಗೆ "ಅಣ್ಣ, ಒಲ್ಲೆನ್ನ ಬ್ಯಾಡ, ನಿನ್ನಳಿಯ ಕೂಡಾ ಬೆಳ್ಳಿ ಬಂಗಾರದ ಸದ್ಯಕ್ಕೆ ಇಕಾ ಇವೇಯ ಮುಂದ್ಲ ಭಾಗ್ಯ ಮಾದವ್ವಂದು. ಅವಳ್ಹಣೇಲಿ ಅದು ಬರ್ದಿರಬೋದು ಆಗ್ತೈತೆ. ಈ ವರ್ಸ ಗದ್ದೆಯೂ ಹೆಚ್ಚಾದ್ದು. ಹೊಲವೂ ಹೆಚ್ಚಾಗವೆ. ನಿನ್ನ ಮನೆ ಉಳುಮೆಗೆ ಸಂಬಳಕ್ಕೆ ಹುಡ್ಗಿ ಕೊಡಲಿ ಮಾವಾಂತ ಕಟ್ಟು ಮಾಡವ್ನೆ ನಿನ್ನಳಿಯ"(ಸಾವಿತ್ರಿ, ಪುಟ-೯೪) ಎಂದು ಕೆಂಪಿನ ತಾಯಿಯ ಧ್ವನಿಯಲ್ಲಿ ಎರಡು ಕುಟುಂಬಗಳ ಕೂಡುದುಡಿಮೆ ಮಾವನ ಮಗಳು ತನ್ನ ಮನೆತನಕ್ಕೆ ಸೇರಬೇಕಾದ ಆಸ್ತಿಯೆಂಬಂತೆ ತೀರ್ಮಾನಿಸುವುದು ಸಲಗೆಯೂ ತೀರ್ಮಾನಿಸುವ ಹಿನ್ನೆಲೆಯಲ್ಲಿ ಆತ್ಮೀಯ ಒಪ್ಪಿಗೆಯನ್ನು ಸಂಬಂಧಗಳನ್ನು ಕಾಣಬಹುದಾಗಿದೆ. ಇದಕ್ಕೆ ಪ್ರತಿಯುತ್ತರವಾಗಿ ಮಾದವ್ವನ ತಂದೆ ಪಾಟೀಲ ಕೆಂಚೇಗೌಡ "ದೇವರ ಮನಸ್ಸು ಅದೃಷ್ಟವಿದ್ರೆ ಆಗಲೇಳ್ತಂಗೀ ಕೆಂಪ ಬದ್ಲಾಯ್ಸವ್ನೆ. ಆರಂಭಕ್ಕೆ ನಿಂತವ್ನೆ. ಇನ್ಯಾಕೆ ಬ್ಯಾರೆ ಕಡೆ? ನನ್ನ ಮಾದುಗೆ ಬೆಳ್ಳಿ, ಬಂಗಾರದಾಸೆ ಅಷ್ಟರಲ್ಲೇ ಐತ. ಹಿತ್ಲ ಹೂವ್ಗೆ ಬಾಯ್ಬಿಡ್ತಾಳೆ. ಒಡವೆ ಪಟ್ಗೆಯಿಂದ ಈಚೆ ತೆಗೆಯೋದ್ಕಾಣೆ. ಇಷ್ಟರಮ್ಯಾಗ ನನ್ನಾಸ್ತಿಯೆಲ್ಲಾ ಅವಳ್ಗೇ. ನಿನ್ನೆಯೇ ಪಟೇಲಿಗ್ರೆ ಹೇಳ್ಕಳಸ್ದೆ. ನಾನೀವರ್ಸ ಮಾಡಲ್ಲ ಅಂತ ಚೆನ್ದಂತ ಹುಡುಗೀನಾ ಆ ಕೋಡಗಂಗೆ ಕೊಡಾಕೆ ಮನಸ್ಸು ಬರ್ಲಿಲ್ಲ. ಮಾವ ಮಾದವ್ವಂಗೆ ಹೊಸಬ ಅಲ್ಲ"(ಪುಟ-೯೪-೯೫). ಇಲ್ಲಿ ದುಡಿಮೆಯಿಲ್ಲದ ತಂಗಿ ಸಿರಿವಂತ ಅಣ್ಣನ ಮಧ್ಯ ಅಂತಸ್ತು ಅಡ್ಡಿ ಬರದೆ ಕೆಂಪನ ಬದಲಾದ ಜೀವನ ಮಾವನಿಗೆ ಅಳಿಯನಲ್ಲಿ ನಂಬಿಕೆಯಿಟ್ಟು ಮಗಳನ್ನು ಕೊಡಲು

ಸಮ್ಮತಿಯಿದೆ. ಹೀಗೆ ಇಲ್ಲಿ ಮಗಳ ಬದುಕನ್ನು ತಂದೆ ತೀರ್ಮಾನಿಸುವುದು ಸಹಜವಾಗಿದೆ. ಅಲ್ಲದೆ ಮಾದೇವಿ ಪಾತ್ರ ತಂದೆಯ ತೀರ್ಮಾನಕ್ಕೆ ಬದ್ಧವಾಗಿರುವಂತೆ ಕಾಣುತ್ತದೆ. ವಿವಾಹದ ಪೂರ್ವದಲ್ಲಿ ಮಾವನಿಗೆ ಅವರ ಆತ್ಮಾಭಿಮಾನದ ಮಾತುಗಳಿಗೆ ಪ್ರತಿಕ್ರಿಯಿಸುತ್ತ ಗೆಲ್ಲುವ ಮಾದೇವಿ ವಿವಾಹದ ನಂತರ ಹೆಚ್ಚು ಗಂಭೀರವಾಗುತ್ತಾಳೆ. ಮಾದೇವಿ ಗಂಡ ಕೆಂಪ ಆ ಹಳ್ಳಿಯ ಜನರ ಅಸೂಯೆಯಿಂದ ಮಾಡಿದ ತಪ್ಪಿಗೆ ನಿರಪರಾಧಿಯಾಗಿ ೬ ತಿಂಗಳು ಜೈಲಿನಲ್ಲಿ ಶಿಕ್ಷೆ ಅನುಭವಿಸಿದ. ಆ ಸಮಯದಲ್ಲಿ ಮಾದೇವಿ ಮಗ ಮುದ್ದನನ್ನು ಕಣ್ಣಾವಲಿನಲ್ಲಿ ಬೆಳೆಸಿ ಬದುಕನ್ನು ಸಾಗಿಸಿದಳು. ಆದರೆ ಈ ಸನ್ನಿವೇಶದಲ್ಲಿ ಕೆಂಪ ತನ್ನ ಮನೆಯ ಆಳು ತಿಮ್ಮನಿಂದ "ಬಿಡಿ ನನ್ನೊಡೆಯಾ ಹೆಣ್ಣು ಜಾತಿ ನಂಬಾಕಿಲ್ಲ"(ಸಾವಿತ್ರಿ, ಪುಟ-೧೯೯) ಎಂದು ಹೇಳಿದ್ದ ತಿಮ್ಮನ ಮಾತಿನ ಮೇಲೆ ವಿಶ್ವಾಸವಿಟ್ಟು ಮಾದೇವಿ ವಿವಾಹಬಾಹಿರ ಸಂಬಂಧವಿದೆಯೆಂದು ನಂಬಿ ಎರಡನೇ ವಿವಾಹವಾದ. ಮಾದೇವಿ ನೈತಿಕತೆಯನ್ನು ಕಾಪಾಡಿಕೊಂಡು ಬಂದಿದ್ದರೂ ಅನೈತಿಕತೆಯ ಅಪಮಾನದಿಂದ ಬೇಸತ್ತು ಮನೆಯನ್ನು ತೊರೆದು ಆತ್ಮಾಭಿಮಾನ ಹೊಂದಿದಳು. ಹೀಗೆ ಗ್ರಾಮೀಣ ಪರಿಸರದಲ್ಲಿ ಹೆಣ್ಣು ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬದ್ಧತೆಯಿಂದ ಬದುಕುವುದು ಅನಿವಾರ್ಯವಾಗಿದೆ. ಮನೆಯ ಚೌಕಟ್ಟಿನಾಚೆ ಬದುಕನ್ನು ರೂಪಿಸಿಕೊಂಡು ಮಾದೇವಿ ಅಲ್ಲಿಯೂ ಅತೃಪ್ತಿಯನ್ನು ಅನುಭವಿಸಿದಳು. ಹೀಗೆ ಮಾದೇವಿಗೆ ಗಂಡನ ಮನೆಯ ಮೇಲಿನ ಪ್ರೀತಿ ಅವಳನ್ನು ಕಂಗಾಲಾಗಿಸುತ್ತದೆ. ಮಾದೇವಿ ತನ್ನತನವನ್ನು ಕಾಪಾಡಿಕೊಂಡು ಬದುಕಿದರೂ ಅವಳಿಗೆ ಮುಕ್ತಿ ದೊರೆಯುವುದು ತಾನು ಬದುಕಿದ ಗಂಡನ ಕುಟುಂಬದಲ್ಲಿ ಎಂಬಂತೆ ಮಹಿಳಾ ಪಾತ್ರ ಚಿತ್ರಿತವಾಗಿದೆ. 'ಕಾಳಿ' ಕಥೆಯಲ್ಲಿ ಕಾಳಿ ಮಗ ಮಾದನಿಗೆ ದೂರದ ಸಂಬಂಧಿಯಾದ ದೇವಿಯ ಮಗಳು ಕೆಂಪಿಯನ್ನು ಸೊಸೆಯಾಗಿ ತಂದಳು. ದುಡಿಮೆಯ ಬದುಕು ಎಂದು ಹೊಲಮನೆ ಕೆಲಸದಲ್ಲಿ ಬದುಕನ್ನು ಸವೆಸಿದ ಕಾಳಿಗೆ ಸೊಸೆ ಕೆಂಪಿಯ ಸೋಮಾರಿತನ ಪ್ರತಿಯೊಂದು ಕೆಲಸದಲ್ಲಿ ಕಂಡರೂ ಸಹಿಸಿಕೊಂಡಳು. ಆದರೆ ಸೊಸೆ ಮಡಿಕೆಯನ್ನು ಒಡೆದಿದ್ದು ಅವಳ ಕೋಪಕ್ಕೆ ಕಾರಣವಾಗಿತ್ತು.

"ಅಪ್ಪನ ಮನೆ ದೊಡ್ಡಸ್ತಿಕೆ ನಾಕು ದಿನ ಉಂಡು ಉಬ್ಬರ ಆಗಲಿ!" ಎಂದು ಮಗನಿಗೆ ಅವನ ತಾಯಿ ಕಾಳಿ "ಏನೋ ಆತು ಹೋಗು ನಾ ಇನ್ನು ಜಗಳಾ ಆಡಾಕಿಲ್ಲ ಕರಿ ಎಂದು ಮಗನಿಗೆ' 'ಸಾಧಾರಣ ಹೆಣ್ಣಲ್ಲ ಅವ್ವ ಕರೆದರೆ ಮತ್ತಷ್ಟು ಬೀಗುತ್ತಾಳೆ" ಎಂದು ತಟಸ್ಥನಾದ. ಸೊಸೆ ಗಂಡನ ಮನೆಗೆ ಬರದಿರಲು ಅತ್ತೆಯೇ ಕಾರಣವೆಂದು ಸಮಾಜ ನಿಂದಿಸಿ ದೂಷಿಸಿದಾಗ ಕಾಳಿ ಕಂಗಾಲಾದಳು. ಮಾನಸಿಕ ರೋಗಿಯಾಗಿ ಬದುಕಿದಳು. ತನ್ನ ದುಃಖವನ್ನು ಸ್ನೇಹಿತೆ ತಿಮ್ಮಿಯ ಮುಖಾಂತರ "ನಿನ್ನತ್ರ ಕೂಡ ದೂರಿದ್ನಾ ತಿಮ್ಮೀ. ನನ್ನತ್ರ ಗೆಳ್ತೀಂದ್ರೆ ನೀನು. ಸಂಸಾರ ಗುಟ್ಟೂಂತ ಸಾವಿರ ದಿನ ನುಂಗಿದ್ನಿ. ನನ್ನ ಒಂದು ದಿನ ತಪ್ಪು ನನ್ನ ಎದೆಗುದೀನ ಬುದ್ದಿ.

ನನ್ನಪ್ಪು ಸೊಸೆ ನೊಂದ್ಕೊಂಡವಳು"(ಕಾಳಿ, ಪುಟ-೧೫೩) ಎಂದು ತಲ್ಲಣಗೊಳ್ಳುವ ಅತ್ತೆಯ ಮನಸ್ಥಿತಿಯ ಹಿಂದೆ ಉದಾರತೆ, ಮುಗ್ಧತೆಯಿದೆ. ಹೀಗೆ ಛಿದ್ರಗೊಂಡ ಮಗಳ ಸಂಸಾರದ ಭಾರವನ್ನು ತಾಯಿ ಹೊತ್ತು ಮಗಳನ್ನು ಗಂಡನ ಮನೆಗೆ ಕಳಿಸುವ ಮೂಲಕ "ಕಾಳವ್ವಾ, ನಿನ್ನ ಸೊಸೆಗೆ ಅರ್ಧ ಬುದ್ಧಿ ಕಲಿಸಿವ್ನಿ. ನನ್ಮಗಳು ಬಾಳಲಾರದೆ ಹೋದಳು ಅನ್ನೋ ಮಾತು ಕೇಳಿದರೆ ಮನೆ ಸೇರ್ಸಾಕಿಲ್ಲ. ಮಾತ ಕೇಳ್ಲಿಲ್ಲ, ಬದುಕು ಮಾಡ್ಲಿಲ್ಲಾಂದ್ರೆ ಹುಣಸೆ ಬರಲು ತಗೊ ನಾ ಏನೂ ಹೇಳಾಕಿಲ್ಲ. ಊರೆಲ್ಲಾ ಅಂದ್ರು ನನಗ್ಗೊತ್ತು ನನ್ಮಗಳ ಬಂಡವಾಳ. ಗಂಡನ್ನ ಮನೇಲಾದ್ರೂ ತಿದ್ಕೊಳ್ತಾಳಾಂತಿದ್ದೆ. ನನಗಿನ್ನೊಬ್ಬಳು ಮಗಳವ್ಳೆ ಹೆಸರ್ಗೆಡ್ತಾಳೆ, ನಾನೂ ಮಗಳ್ಹಂಗೆ ದೊಣ್ಣೆ ತಗೊ" ಎಂಬ ಮಾತಿನ ಹಿಂದೆ ಕಾಳಿಯ ಮುಗ್ಧತೆ, ಉದಾರತೆಯನ್ನು ಕಂಡು ಮಗಳಿಗೆ ಬದುಕು ಕಲಿಸಲಿ ಎಂಬ ನಿಲುವಿತ್ತು. ಹೀಗೆ ಮಗಳ ಬದುಕಿನ ಬಗ್ಗೆ ತಾಯಿ ತಲ್ಲಣಗೊಂಡಿರುವಂತೆ ತಂದೆಗೆ ಬಾದಿಸಲಿ. ಮಗಳ ಸಮಸ್ಯೆಗೆ ಪರಿಹಾರ ಕಾಣುವವರೆಗೆ ಗಂಡನ ಮನೆಯೇ ಹೆಣ್ಣುಮಕ್ಕಳಿಗೆ ಸುರಕ್ಷಿತ ಎಂಬಂತೆ ದೇವಿ ಮಗಳನ್ನು ಗಂಡನ ಮನೆ ಸೇರಿಸುವುದರ ಹಿಂದೆ ಸಾಮಾಜಿಕ ಪಾತ್ರವಾಗಿ ಕಂಡುಬಂದರೂ ಸಹ ಸಹಜವೆಂಬಂತೆ ನಿರೂಪಿಸಲಾಗಿದೆ. ಹೀಗೆ ಇಲ್ಲಿ ತಾಯಿಗೆ ಕುಟುಂಬದ ಹೊಣೆಗಾರಿಕೆ ಹೆಚ್ಚು ಬಾಧಿಸಿರುವಂತೆ ತೋರುತ್ತದೆ. ದೇವಿ, ಕಾಳಿ ಎಂಬ ಹಿರಿಯ ವಯಸ್ಕ ಮಹಿಳಾ ಪಾತ್ರಗಳು ಕುಟುಂಬದ ಬಗ್ಗೆ ಹೆಚ್ಚು ಕಾಳಜಿಯುಳ್ಳವರು. ಎರಡು ಕುಟುಂಬಗಳ ಸುರಕ್ಷತೆಗೆ ಹಿರಿಯ ಮಹಿಳೆಯರ ಧಾರಣಶಕ್ತಿ ಕಾರಣವಾಗಿದೆ.

ಅತ್ತ ಕಾಳಿ "ಕಾಲ್ಹಾಕು ಒಲಿ ಮುಂದೆ ನೋಡ್ತೀನಿ. ಒಲೇಗೆ ತುರುಕಿ ಬಿಟ್ಟೇನೂ ನಿನ್ನ ಸಿಂಗಾರ ಸುಟ್ಟು ಅಂಗಾರ ಹಣೇಗೆ ಹಚ್ಕೋತೀನಿ ಸಿವ ಕೊಟ್ಟಿದ್ದಂತ"(ಕಾಳಿ, ಪುಟ-೧) ಎಂಬ ಸೊಸೆಯ ಮೇಲಿನ ಕೋಪ ಕ್ಷಣಿಕವಾದುದು. ಬಿಗುಮಾನದ ಕೆಂಪಿ ತಂದೆ ಮನೆಯಲ್ಲಿ ಆಶ್ರಯ ಪಡೆದಳು. ಆದರೆ ಕೆಂಪಿ ತಾಯಿ ಬೀಗರನ್ನು ದೂಷಿಸದೆ ಮಗಳ ಪರ ವಹಿಸದೆ ಮಗಳಲ್ಲಿ ಕಾರಣ ಹುಡುಕಿದಳು. ಇದು ಅವಳ ನಿಷ್ಠೆಯನ್ನು ತೋರಿಸುತ್ತದೆ. ಕೆಂಪಿ ತಾಯಿ ಜನರ ಮಾತು ಕೇಳಿ ಮಗಳು ತವರಿನಲ್ಲಿ ಉಳಿದಿರುವ ಕಾರಣ ತಿಳಿದಳು. ದೇವಿ ಬೀಗತಿಯನ್ನು ದೂರದೆ ಮಗಳಲ್ಲಿ ತಪ್ಪನ್ನು ಕಂಡಳು. "ನಿನ್ಬದ್ಕು ನಂಗೊತ್ತಿಲ್ವಾ ಏನೋ ಮಗ ಆಡ್ಕೊಳ್ಳಿ ತಾಳಿ ಕಟ್ಕೊಂಡ್ಮೇಲೆ ಬದ್ಕು ಮಾಡಾದು ಇದ್ದೆ ಐತೆ ಅಂತ ಸುಮ್ಮನಿದ್ದೆ. ಹುಟ್ಟಿದಾರೆರಡು ಹೆಣ್ಣೂ ನನ್ನ ಕಣ್ಣೂಂತ ಬೆಳೆಸಿದ್ನಿ. ಗಿಣೀ ಹಂಗೆ ಆಡಾದು ನೋಡಿ ಹಿಗ್ಗಿದ್ನಿ. ಆದ್ರೂ ನಿನ್ವರ್ಸೆ ನಂಗೊತ್ತಿಲ್ವಾ? ಊರ ಜನ ನಿನ್ನ ವಹಿಸಿಕೊಂಡು ಮಾತಾಡಿದ್ರೇನು? ನಿನ್ತಂಗಿ ಕಾಲ್ಸಂದಿ ನುಸಿ ನಿನ್ಗಂತ ಐದ್ವರ್ಸ ಚಿಕ್ಕವಳು. ಏನು ಒಪ್ಪಾಗಿ ಮಾಡ್ತಾಳೆ ಕೆಲ್ಸ. ಸೇರಾಮನೆ ಪುಣ್ಯ. ನೋಡಾರೆದುರ್ಗೆ ನೆಟ್ಟಗೆ ಬಾಳ್ವೆ ಮಾಡಬೇಡ್ವಾ? ನಿನ್ಬಾಳು, ನಿಮ್ಮನೆ ಬದ್ಕು ನೋಡಿ ನಗಾಕೆ ಬರ್ತಾರೇ ಹೊರತು ಜನ ಮಾಡ್ಕೊಡ್ತಾರಾ? ಹೆಣ್ಣಾಗಿ ಹುಟ್ಟಿದ್ರೆ ಬಂತೇನು?" ಹೀಗೆ

ಇಲ್ಲಿ ತಾಯಿಗೆ ಮಗಳು ಗಂಡನ ಮನೆಯಿಂದ ಬಂದಿರುವುದರಿಂದ ಹೆಚ್ಚು ವಿಚಲಿತಳಾಗಿದ್ದಾಳೆ. ಕಾರಣ ಇನ್ನೊಬ್ಬ ಮಗಳಿಗೆ ವಿವಾಹಕ್ಕೆ ಅಡ್ಡಿ ಬರಬಾರದೆಂದು. ಹೀಗೆ ಮಗಳ ಸೋಮಾರಿತನ ಅರಿತ ತಾಯಿ ಅವಳ ಬದುಕಿನ ದಾರಿ ತೋರಿಸುವ ತಿಳಿ ಹೇಳುವ ಮಾರ್ಗದರ್ಶಕಿಯಂತೆ ಕಾಣುತ್ತಾಳೆ. ಅತ್ತೆ ಸೊಸೆಯನ್ನು ತಿರಸ್ಕರಿಸಿದರೂ ಅದು ಕ್ಷಣಿಕ. ಹೀಗೆ ಕಾರಣಾಂತರದಿಂದ ಸೊಸೆಯನ್ನು ದೂರಿದ್ದರು. ದಿನ ಕಳೆದ ಮೇಲೆ ಸೊಸೆಯನ್ನು ಕರೆತರಲು ಆಜ್ಞೆಯಿತ್ತಳು. ಮಗ ಮಾದ "ಸೆಟವು ಇನ್ನಾ ಇಳೀಲವ್ವಾ" ಎಂದನು.

ಈ ಕಥೆಗಳಲ್ಲಿ ಬರುವ ಮಹಿಳೆಯರು ಮೇಲು, ಮಧ್ಯಮ ಹಾಗೂ ಕೆಳವರ್ಗದವರಾಗಿದ್ದಾರೆ. ಇವರು ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ತಾಯಿ, ಅತ್ತೆ, ಕನ್ಯೆ, ಗೃಹಿಣಿ, ವಿಧವೆ, ರೈತ ಮಹಿಳೆ, ರಾಜಕಾರಣಿ, ಶಿಕ್ಷಕಿ, ಅಡಿಗೆಯವಳು, ದಾದಿ, ಶಿಕ್ಷಕಿ ಇತ್ಯಾದಿ ಪಾತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇಲ್ಲಿ ಮಾಲಾ(ಮಾಲಾ), ಸಾವಿತ್ರಿ(ಸಾವಿತ್ರಿ), ರಂಗಮ್ಮ(ರಂಗು) ಇತ್ಯಾದಿ ಸ್ತ್ರೀ ಪಾತ್ರಗಳು ನಗರೀಕರಣ ಪ್ರದೇಶದಲ್ಲಿ ಬದುಕನ್ನು ವಿಸ್ತರಿಸಿಕೊಂಡಿರುವ ಮಹಿಳೆಯರು. ಇಲ್ಲಿ ರಾಧಮ್ಮ, ಗೋದಮ್ಮ, ಕಾವೇರಮ್ಮ, ಚಿನ್ನಮ್ಮ, ಸುಶೀಲಮ್ಮ(ರಂಗು) ಗೃಹಿಣಿ ಪಾತ್ರಗಳಾಗಿ ಕಾರ್ಯ ನಿರ್ವಹಿಸುತ್ತಾ ರಂಗಮ್ಮನ ಮನೆಯ ಸುತ್ತಮುತ್ತ ಸ್ಥಳದಲ್ಲಿ ವಾಸಿಸುವ ನೆರೆಹೊರೆಯ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಮಹಿಳೆಯರು. ಎಲ್ಲ ಮಹಿಳೆಯರಿಗೆ ಮನೆಯ ಮುಂದಿನ ಜಗಲಿಕಟ್ಟೆಯೇ ಪ್ರಪಂಚ. ಅದೇ ರಂಗಮ್ಮನಂತಹ ಮಹಿಳೆ ಅದೂ ಸಹ ದಕ್ಕದ ದುಃಸ್ಥಿತಿಯ ಪಾತ್ರವಾಗಿ ಕಂಡುಬರುತ್ತಾಳೆ. ಮನೆಯ ಕಿಟಕಿಯ ಮುಖಾಂತರ ಹೊರಗಿನ ಆಗುಹೋಗುಗಳನ್ನು ಕಾಣುವ ರಂಗಮ್ಮ ಮನೆಯ ತಾತ ಹಾಗೂ ಗಂಡ ಗೋವಿಂದನ ನಿಯಂತ್ರಣಕ್ಕೆ ಒಳಗಾಗಿ ಬದುಕುವ ಮಹಿಳೆ. ಹೊರಗಿನ ಸಮಾಜಕ್ಕೆ ಅವಳ ತಾತ, ಗಂಡ ಗೋವಿಂದನ ಪಾತ್ರಗಳು ಗೌರವಯುತ ಪಾತ್ರಗಳೆಂದು ಕಥೆ ಬಿಂಬಿಸಿದರೂ ರಂಗಮ್ಮ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡಾಗ "ಹೋಗಾಚೆ ಮುದಿಯಾ, ನೀನೊಂದು ಅಡ್ಡಿ ಸೆರೇಲಿಟ್ಟಿದ್ದಾನೆ..."(ರಂಗು, ಪುಟ-೯) ಎಂದು ತಾತನಿಗೆ "ಮುಟ್ಠಾಳ ಗಂಡಸ್ತನ ತೋರುಸ್ತಾನೆ! ಹೊಡೀತಾನೆ, ಹೊಡಿ ಹೊಡಿ ನಿನ್ನ ಕೈಲಿ ಇನ್ನೇನು ಆಗದಿದ್ದರೂ"(ರಂಗು, ಪುಟ-೨೦) ಎಂದು ಪ್ರತಿಭಟಿಸುವ ಹಿಂದೆ ಅವಳ ಮನೆಯ ದಿನನಿತ್ಯದ ಅವಿರತ ದುಡಿಮೆಯಿದೆ. ಮಾನಸಿಕ ಹಾಗೂ ದೈಹಿಕವಾಗಿ ಬಳಲಿಕೆ ಜೊತೆಗೆ ಗಂಡನ ತಾತ್ಸಾರ ಅವಳಲ್ಲಿ ಅಸಹಾಯಕತೆ ಕಾಣುತ್ತದೆ. "ಪಾಪ ರಂಗಮ್ಮನಿಗೆ ಗಂಡನ ಮೇಲೆ ಸಿಟ್ಟು. ಆದರೆ ಯಾರ ತಪ್ಪೋ? ದೇವರೇ ಬಲ್ಲ. ಆದರೂ ಹೆಂಗಸರ ಮನಸ್ಸು ಸ್ವಲ್ಪ ಮನೆ, ಗಂಡ-ಮಕ್ಕಳು ಬಿಟ್ಟು ಅಡ್ಡಾಡಿದರೆ ವಾಸಿ ಇಲ್ಲದಿದ್ರೆ ತಲೆ ಕೆಡಿಸಿಕೊಳ್ತಾರೆ"(ರಂಗು, ಪುಟ-೨೭) ಎಂಬ ನಿರೂಪಕಿ ಧ್ವನಿಯ ಹಿಂದೆ ಹೆಣ್ಣು ಕೌಟುಂಬಿಕ ಬಂಧನದ ಆಚೆಗೆ ಬದುಕನ್ನು ವಿಸ್ತರಿಸಿಕೊಳ್ಳಬೇಕು ಎಂಬ ಗ್ರಹಿಕೆಯಿದೆ. ಇದಕ್ಕೆ ಪೂರಕ ಪಾತ್ರವಾಗಿ ಬರುವ ಮಾಲಾ(ಮಾಲಾ)ಳ ಬದುಕು ನಿರೂಪಕಿ ಮೂಲಕ ವಿಸ್ತರಿಸಿಕೊಳ್ಳುತ್ತದೆ.

ಮಾಲಾಳ ಬಂಜೆತನ ಅವಳಿಗೆ ಕೌಟುಂಬಿಕ ವಾತಾವರಣಕ್ಕಿಂತ ಸಾಮಾಜಿಕ ವಾತಾವರಣ ಅವಳ ಮಾನಸಿಕ ಬಳಲಿಕೆಗೆ ಕಾರಣವಾಗುತ್ತದೆ. "ನಮ್ಮ ತಂದೆ ತಾಯಿಗಳ ಬೇಸರಕ್ಕಿಂತ ನಮ್ಮ ನಂಟರಿಷ್ಟರ ಆಕ್ಷೇಪಣೆ ಕೇಳುವಾಗ ನನ್ನ ಕಿವಿ ಕಿವುಡಾಗಬಾರದೇ ಎನ್ನಿಸುತ್ತೆ"(ಮಾಲಾ, ಪುಟ–೪) ಹೀಗೆ ಸಾಮಾಜಿಕ ನಿಂದನೆಗೆ ಹೆಚ್ಚು ಬಳಲಿರುವ ಪಾತ್ರವಾಗಿ ಕಂಡುಬರುತ್ತದೆ. ಈ ಹಿನ್ನೆಲೆಯನ್ನು ಆ ಸಮಾಜದಲ್ಲಿ ಹೆಣ್ಣು ತಾಯಿಯಾಗುವುದು ಅವಶ್ಯಕವಾಗಿದ್ದು ಅದರಿಂದ ವಂಚಿತಳಾದಾಗ ನಿಂದನೆಗೆ ಒಳಗಾಗುವ ಪರಿಸ್ಥಿತಿ ಹೆಚ್ಚು. ಅಪಮೌಲ್ಯಕ್ಕೊಳಗಾಗುವ ಪರಿಸ್ಥಿತಿ ಉಂಟಾಗುತ್ತದೆ. ಮಾಲಾ ಅತ್ತೆ ಮನೆಯಿಂದ ತಿರಸ್ಕೃತಳಾದಳು. ಗಂಡನ ಒಲವಿನಲ್ಲಿ, ತಂದೆಯ ಶ್ರೀಮಂತಿಕೆಯಲ್ಲಿ ಸುರಕ್ಷಿತ ಪಾತ್ರವಾಗಿ ಬಂದರೂ ಪರಾವಲಂಬಿ ಪಾತ್ರವಾಗಿ ಕಂಡುಬರುತ್ತಾಳೆ. ಮಾಲಾ ತಾಯಿಯಾಗುವ ಮೂಲಕ ಆ ಸಮಸ್ಯೆಯಿಂದ ಪರಿಹಾರ ಕಥೆಯಲ್ಲಿ ಕಂಡುಬಂದರೂ ನಿರೂಪಕಿ "ದೇವರು ದೊಡ್ಡವರು ಸುಖವಾಗಿಟ್ಟಿರಲಿ ಇವರನ್ನು"(ಮಾಲಾ, ಪುಟ–೨೧) ಎಂದು ಮನಸ್ಸಿನಲ್ಲೇ ಪ್ರಾರ್ಥಿಸಿದೆವು. ಇಂಥವರ ಮಗಳು ಮಾಲಾಲ ದೇವರು ಕಟಾಕ್ಷಿಸುವುದು ಖಂಡಿತ ಎನಿಸಿತು(ಮಾಲಾ, ಪುಟ–೨೧). ಈ ವಿವರಣೆಯ ಹಿಂದೆ ತಂದೆಯಾದ ಸುಂದರಂನ ಒಳ್ಳೆಯತನ, ಹೃದಯ ವೈಶಾಲ್ಯತೆ ಮಾಲತಿಗೆ ತಾಯಿಯಾಗಲು ಸಾಧ್ಯವಾಯಿತು ಎಂದು ಚಿತ್ರಿಸುವ ಹಿಂದೆ ದೈವತ್ವದಲ್ಲಿ ನಂಬಿಕೆಯನ್ನು ಉಂಟುಮಾಡುತ್ತದೆ. ಮಾಲತಿ ತಂದೆಯ ಮೂಲಕವೇ ಗುರುತಿಸಿಕೊಳ್ಳುತ್ತಾಳೆ ವಿನಾ ಸ್ವಾವಲಂಬಿ ಪಾತ್ರವಾಗಿ ಕಂಡುಬರುವುದಿಲ್ಲ. ಇದು ಅವರ ಮಿತಿಯಾಗಿದೆ. ಹೀಗೆ ಇಲ್ಲಿ ವೈದ್ಯ ಸುಂದರಂ ಶ್ರೀಮಂತಿಕೆ ಮಗಳ ಬದುಕಿಗೆ ಭದ್ರತೆಯನ್ನು ಒದಗಿಸಿತು.

"ಹೋದ ಪ್ರಾಣ ಬರಿಸಿದಳು ಗಂಡಂಗೆ ಆ ಸಾವಿತ್ರಿ. ಈ ಸಾವಿತ್ರಿ ಹಸಿದ ಹೊಟ್ಟೆಗೆ ಅನ್ನ ಕೊಟ್ಟಳು ಗಂಡ, ಮಕ್ಕಳಿಗೆ"(ಸಾವಿತ್ರಿ, ಪುಟ–೨೮) ಎಂಬ ಧ್ವನಿಯ ಹಿಂದೆ ಪುರಾಣದ ಸಾವಿತ್ರಿ ಪಾತ್ರಕ್ಕೂ ಇಂದಿನ ಆಧುನಿಕ ಸಾವಿತ್ರಿಗೂ ಹೋಲಿಕೆ ಮಾಡುವ ಮೂಲಕ ಭಿನ್ನತೆಯನ್ನು ಗುರುತಿಸಿದರೂ ಸಹ ಆದರ್ಶಪಾತ್ರವಾಗಿ ಈ ಸಾವಿತ್ರಿ ಕಂಡುಬರುತ್ತಾಳೆ. ಸಾವಿತ್ರಿ ಗಂಡ ರಾಮಪ್ಪನ ಬೇಜವಾಬ್ದಾರಿತನ ಅವಳ ಅತಂತ್ರತೆಗೆ ಕಾರಣವಾಗುತ್ತದೆ. ಗಂಡನ ಸ್ವಭಾವ ತಿಳಿದು ಹೊಂದಾಣಿಕೆ ಮಾಡಿಕೊಂಡು ಬದುಕುವ ಸಾವಿತ್ರಿಯ ಬದುಕಿಗೆ ತಾಯಿ ರಾಧಮ್ಮನ ವೈಚಾರಿಕತೆ ಅವಳ ಬದುಕಿಗೆ ಭದ್ರತೆಯನ್ನು ಒದಗಿಸುತ್ತದೆ. ಹೀಗೆ ಇಲ್ಲಿ ಹೆಣ್ಣಿಗೆ ತವರುಮನೆ ಸಹಕಾರಿಯಾಗಿದೆ. ಸಾವಿತ್ರಿ ಶಿಕ್ಷಕಿಯಾಗಿ ಗಂಡ, ಮಕ್ಕಳ ಬದುಕಿಗೆ ಆಸರೆಯಾದಳು. ಮನೆಯ ಮತ್ತು ಹೊರಗಿನ ಹೊಣೆಗಾರಿಕೆ ನಿಭಾಯಿಸುವ ಹೊಣೆಗಾರಿಕೆ ಹೆಣ್ಣಿಗಿದೆ. "ಸದ್ಯ ನಿನ ಗಂಜಿ ನೀನೆಲ್ಲಾದರೂ ಕುಡಿ ಇದ್ದ ಕಡೆ ದೇವರು ನೆಟ್ಟಗಿಡಲಿ"(ಸಾವಿತ್ರಿ, ಪುಟ–೩೪) ಎಂದು ರಾಧಮ್ಮ ಮಾತಿನ ಹಿಂದೆ ಸಾವಿತ್ರಿಯ ಬದುಕು ಅವಳಿಗೆ ಮುಖ್ಯವೇ ಹೊರತು ಅದರ ದುಪ್ಪಟ್ಟು ಹೊಣೆಗಾರಿಕೆ ತಾಯಿ ಪಾತ್ರಗಾಗಲಿ, ಸಾವಿತ್ರಿಗಾಗಲಿ ಅದು ಕಾಣದೆ

ಸಹಜಪಾತ್ರವಾಗಿ ಲೇಖಕಿಗೆ ಬಿಂಬಿತವಾಗಿದೆ. ಹೀಗೆ ಮಧ್ಯಮವರ್ಗದ ಹೆಣ್ಣು ಕೌಟುಂಬಿಕ ಹೊಣೆಗಾರಿಕೆ ನಿಭಾಯಿಸುವ ಅತ್ಯಂತ ಅವಶ್ಯಕವಾಗಿರುವಂತೆ ಕಥೆಗಳಲ್ಲಿ ಮೂಡಿಬಂದಿದೆ. ಇದಕ್ಕೆ ಪೂರಕ ಪಾತ್ರವಾಗಿ ಕಂಡುಬರುವ ರೈತ ಮಹಿಳೆ ಮಾದೇವಿ ದುಡಿಮೆಯಲ್ಲಿ ಸ್ವಾವಲಂಬಿ ಬದುಕನ್ನು ಕಾಣಬಹುದೇ ಹೊರತು, ಕೌಟುಂಬಿಕವಾಗಿ ತಂದೆ, ಗಂಡನ ಕುಟುಂಬದಲ್ಲಿ ಪರಾವಲಂಬಿ ಪಾತ್ರವಾಗಿ ಕಂಡುಬರುತ್ತಾಳೆ. ಕಾತ್ಯಾಯಿನಿ ಕಥೆಗಳಲ್ಲಿನ ಹೆಣ್ಣು ಕುಟುಂಬದಲ್ಲಿ ಹೆಚ್ಚು ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವುದು ಅನಿವಾರ್ಯವಾಗಿದೆ. ಮಾದೇವಿ ರೈತ ಮಹಿಳೆಯಾಗಿ ದಿಟ್ಟತನದಿಂದ ಬದುಕಿದ ಸಾಧ್ವಿ ಮಾದೇವಿ ನಿರಪರಾಧಿಯಾಗಿ ಆತ್ಮಾಭಿಮಾನ ಉಳಿಸಿಕೊಳ್ಳಲು ಗಂಡನ ಮನೆಯ ಚೌಕಟ್ಟನ್ನು ಮೀರಿದಳು. ಹೀಗೆ ಗ್ರಾಮೀಣ ಮಹಿಳೆ ಬದುಕಿಗಾಗಿ ನಗರೀಕರಣಕ್ಕೆ ತೆರೆದುಕೊಂಡಳು. ಅಲ್ಲಿಯೂ ಅಡಿಗೆಯವಳಾಗಿ, ನರ್ಸ್ ಆಗಿ ಮಾತೃತ್ವ ಪಾತ್ರವಾಗಿ ಕಂಡುಬರುತ್ತಾಳೆ. ಈ ಸ್ವಾವಲಂಬನೆ ಬದುಕಿನಲ್ಲಿಯೂ ಗಂಡ, ಮಕ್ಕಳ ಬದುಕಿಗಾಗಿ ಹಾತೊರೆಯುವ ಕೌಟುಂಬಿಕ ಪ್ರೀತಿಯುಳ್ಳ ಪಾತ್ರವಾಗಿ ಕಂಡುಬರುತ್ತಾಳೆ. ಇವರ ಕಥೆಗಳಲ್ಲಿ ಹೆಣ್ಣು ಭದ್ರತೆ ಹಾಗೂ ನೆಮ್ಮದಿಯನ್ನು ಕಾಣುವುದು ಕೌಟುಂಬಿಕ ವಾತಾವರಣದಲ್ಲಿ ಎಂಬಂತೆ ಬಿಂಬಿತವಾಗಿದೆ.

ವಯಸ್ಕ ಹಿರಿಯ ಕೃಷ್ಣ ಮಹಿಳೆಯರಾದ ಮಾದೇವಿ(ಮಾದೇವಿ), ಕಾಳಿ(ಕಾಳಿ), ದೇವಿ(ದೇವಿ) ಈ ಮೂರು ಮಹಿಳೆಯರು ರೈತ ಮಹಿಳೆಯರಾಗಿದ್ದಾರೆ. ದುಡಿಮೆಯಲ್ಲಿ ಬದುಕನ್ನು ಕಂಡುಕೊಂಡವರು. ಕೌಟುಂಬಿಕ ಹೊಣೆಗಾರಿಕೆಯನ್ನು ಬದ್ಧತೆಯಿಂದ ನಿರ್ವಹಿಸುವ ಪಾತ್ರಗಳಾಗಿ ಕಂಡುಬರುತ್ತಾರೆ. ಇನ್ನು ವಿಧವೆ ಪಾತ್ರವಾದ ರೇಖಾ(ರೇಖಾ) ತಾಯಿಯ ಒತ್ತಡದಿಂದ ರೋಗಿಷ್ಠ ಮಾವನನ್ನು ವಿವಾಹವಾಗಿದ್ದು, ಅವನ ಮರಣದ ನಂತರ ತಂದೆಯ ಇಚ್ಛೆಯಂತೆ ಸ್ವಂತ ಆಯ್ಕೆಯಿಂದ ಸಂಗಾತಿಯನ್ನು ಮರುವಿವಾಹವಾಗುವ ದಿಟ್ಟತನವನ್ನು ಕಾಣಬಹುದಾಗಿದೆ.

ಕಾತ್ಯಾಯಿನಿ ಕಥೆಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಹೆಚ್ಚು ಕೌಟುಂಬಿಕತೆಯಲ್ಲಿ ಗುರುತಿಸಿಕೊಳ್ಳುತ್ತಾರೆ. ಕುಟುಂಬದ ಚೌಕಟ್ಟಿನಾಚೆ ಸಾಮಾಜಿಕ ಪಾತ್ರಗಳಾಗಿ ಕಾರ್ಯ ನಿರ್ವಹಿಸುವ ಮಾದೇವಿ, ಸಾವಿತ್ರಿ ಪಾತ್ರಗಳು ಸಹ ಈ ವಲಯದಲ್ಲಿ ಹೆಣ್ಣು ಬದ್ಧತೆಯಿಂದ ಬದುಕುವುದು ಅನಿವಾರ್ಯವಾಗಿದೆ. ಸಾಂಪ್ರದಾಯಿಕ ಮಹಿಳೆಯರಾದ ಮಾದೇವಿ, ಸಾವಿತ್ರಿ ಪಾತ್ರಗಳು ಸಾಮಾಜಿಕವಾಗಿ ವಿಸ್ತರಿಸಿಕೊಳ್ಳಲು ಅಸಾಧ್ಯವಾದ ವಾತಾವರಣವಿದೆ.

೩.೧೧. ಸರಿತಾ ಕುಸುಮಾಕರ ದೇಸಾಯಿ

ಸರಿತಾ ಅವರ ಕಥೆಗಳು ತನ್ನ ಹಂದರವನ್ನು ಬಿಚ್ಚಿಕೊಳ್ಳುವುದು ಕುಟುಂಬ ಮೂಲದಿಂದ. ಈ ಕುಟುಂಬದ ಸದಸ್ಯರು ಹೆಚ್ಚು ಭಾವನಾತ್ಮಕ ಸಂಬಂಧಗಳಿಂದ ಕೂಡಿದವರು. ಇಲ್ಲಿ

ಮಧ್ಯಮ ಹಾಗೂ ಕೆಳವರ್ಗದ ಕುಟುಂಬಗಳಿವೆ. ಮೇಲ್ಜಾತಿಯ ಸಿರಿವಂತ ಮನೆತನದ ಶ್ರೀಧರಾಚಾರ್ಯ ವಿಧುರನಾಗಿದ್ದು ಪತ್ನಿಯ ಅನುಪಸ್ಥಿತಿ ಅವನಲ್ಲಿ ತಲ್ಲಣಗೊಳಿಸಿತು. ಹಿರಿಯ ಮಗ ಶ್ರೀನಾಥ, ಸೊಸೆ ತುಳಸಿ ಮಾವನ ಆಣತಿಯಂತೆ ನಡೆಯುತ್ತಿದ್ದು ಮನೆಯ ಶಾಂತಿಗೆ ಕಾರಣವಾಗಿತ್ತು. ಸೊಸೆ ತುಳಸಿ ದಿನನಿತ್ಯದ ಕೆಲಸದಂತೆ ಮಡಿಪೂಜೆಗೆ ಅಣಿಗೊಳಿಸದೆ ಹೊತ್ತು ಮೀರಿದಾಗ ಮಾವನ ಕೋಪಕ್ಕೆ ಕಾರಣವಾಗಿತ್ತು. ಹಿರಿಯ ಮಗ ತಂದೆಯ ವಿರುದ್ಧ ಮಾತನಾಡಿದ್ದು ಕೋಪದ ಎಲ್ಲೆ ಮೀರಿತ್ತು. ಹಾಗಾಗಿ ನಗರದಲ್ಲಿ ವಾಸವಾಗಿದ್ದ ಇನ್ನೋರ್ವ ಹಿರಿಯ ಮಗನಲ್ಲಿ ವಾಸಿಸಲು ಶ್ರೀಧರಾಚಾರ್ಯರು ನಿರ್ಧಾರ ಮಾಡಿದರು. ಕಿರಿಯ ಮಗನಿಗೆ ಬರುವುದಾಗಿ ಪತ್ರ ಬರೆದರು. ಮರಳಿ ಉತ್ತರ ಬರದೆ ಹಿರಿಯ ಮಗ ಸೊಸೆಯ ಮೇಲಿನ ಕೋಪದಿಂದ ತಾವೇ ಕಿರಿಯ ಮಗನ ಮನೆಗೆ ಹೋಗಲು ನಿರ್ಧರಿಸಿದರು. ಕಿರಿಯ ಮಗನ ಮನೆಯಲ್ಲಿ ಕೆಲವು ದಿನಗಳ ಕಾಲ ಸುಖವಾಗಿದ್ದು ದಿನ ಕಳೆದಂತೆ ಅಲ್ಲಿಯೂ ಕುಂದುಕೊರತೆ ಹುಡುಕಿದರು. ಕಿರಿಯ ಸೊಸೆಯಲ್ಲಿ ಮಡಿವಂತಿಕೆಯನ್ನು ಕಾಣದೆ ಸೊಸೆಯನ್ನು ಅವಮಾನಿಸಿದರು. ಕಿರಿಯ ಸೊಸೆ ಮಾವನಿಗೆ ಎದುರು ಮಾತನಾಡದೆ ಅವರ ಆಣತಿಯಂತೆ ನಡೆಯುವುದಾಗಿ ಭರವಸೆಯಿತ್ತಳು. ಕಿರಿಯ ಮಗ ಶ್ರೀಕಾಂತನಿಗೆ ತಂದೆಯ ವರ್ತನೆ ಸಹಿಸಲಾರದೆ ಪತ್ನಿಯ ಜೊತೆ ತಂದೆಯ ವಿರುದ್ಧ ಮಾತನಾಡಿದ. ಇದರಿಂದ ಶ್ರೀಧರಾಚಾರ್ಯರು ಕೋಪ ಅಸಹನೆಯಿಂದ ಆ ಮನೆಯಿಂದ ಹೊರಡಲು ಸಿದ್ಧರಾದರು. ಪುನಃ ಹಿರಿಯ ಮಗ ಮತ್ತು ಸೊಸೆಗೆ ಸೌಜನ್ಯತೆಯನ್ನು ಕಲಿಸಿ ಹಿಂದಿರುಗಲು ಮನಸ್ಸು ಮಾಡಿದರು. ಆದರೆ ಆಕಸ್ಮಿಕವಾಗಿ ಹಿರಿಯ ಮಗನಿಂದ ಸೊಸೆ ತುಳಸಿ ಗರ್ಭಿಣಿ ಎಂದು ತಿಳಿದು ಮಡಿವಂತಿಕೆಗೆ ತೊಂದರೆಯಾಗುವುದೆಂದು ಕಾಶಿಯಾತ್ರೆಗೆ ಹೋಗಲು ಸಿದ್ಧರಾದರು. ಕಾಶಿಯಾತ್ರೆಗೆ ಎಲ್ಲಾ ಸಿದ್ಧತೆಯನ್ನು ಹಿರಿಯ, ಕಿರಿಯ ಮಕ್ಕಳು ಹಾಗು ಸೊಸೆಯಂದಿರು ಮಾಡಿಸಿದರು. ಈ ಹಿರಿತನಕ್ಕೆ ಕಿರಿಯರ ಮೌಲ್ಯ ತಿಳಿಯದೆ ಕೋಪವೇ ಮುಂದಾಗಿತ್ತು. ಕಾಶಿಯಲ್ಲಿ ಯಾತ್ರಿಕರ ಬದುಕಿನ ವಿವರ, ಅಲ್ಲದೆ ನಾಗೇಶ್‌ರಾವರ ಪರಿಚಯ ಆಯಿತು. ಅವರು ಹೆಂಡತಿ, ಮಕ್ಕಳಿಲ್ಲದೆ ಒಂಟಿತನದಲ್ಲಿ ಬದುಕುವವರು. ಸಹಪ್ರಯಾಣಿಕರನ್ನು ನಗಿಸುವ ಮೂಲಕ ಬದುಕಿನಲ್ಲಿ ಸುಖವನ್ನು ಕಾಣುವ ಅವರ ನಡವಳಿಕೆ ಶ್ರೀಧರಾಚಾರ್ಯರ ಸ್ವಭಾವದಲ್ಲಿ ಬದಲಾವಣೆಯನ್ನು ತಂದಿತ್ತು. ತನ್ನ ಮಗ, ಸೊಸೆಯಂದಿರ ಕಾಳಜಿಯ ಅರಿವಾಗಿ ಮನಸ್ಸು ಪರಿವರ್ತನೆಗೊಂಡು ಹಿರಿತನವನ್ನು ಉಳಿಸಿಕೊಳ್ಳುವ ಬದಲಾವಣೆಯಿದೆ. "ನೋಡ್ರಿ ಆಚಾರ್ಯರೇ... ಸುಖ ಯಾರಿಗೆ ಬೇಕೆನಿಸುವುದಿಲ್ಲ... ಆದ್ರೆ ಸುಖ ಸುಖ ಅಂತ ಹುಡುಕ್ಕೋಂತ ಹೋದ್ರೆ ಸಿಗೋ ವಸ್ತು ಏನ್ರಿ ಅದು? ಸುಖ ಎಂಬೋದನ್ನ ನಾವು ನಮ್ಮಲ್ಲೇ ಹುಟ್ಟಿಸ್ಕೋಬೇಕಾಗುತ್ತದೆ..! ನಮಗೆ ಸಿಕ್ಕಿದ್ರಲ್ಲೇ ತೃಪ್ತಿ ಸಮಾಧಾನ ತಂದುಕೊಳ್ಳೋದೆ ಸುಖ"!!...(ಕಾಶಿಯಲ್ಲಿ ಕಂಡದ್ದೇನು, ಪುಟ–೭೫). ನಾಗೇಶರಾಯರ ಬದುಕು ಶ್ರೀಧರಾಚಾರ್ಯರ ಪರಿವರ್ತನೆಗೆ ಕಾರಣವಾಗಿ ತಮ್ಮಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವ ಮೂಲಕ ತನಗೆ

ದಕ್ಕಿರುವ ಕುಟುಂಬವನ್ನು, ಸುಖವನ್ನು ನೆಮ್ಮದಿಯನ್ನು ಹುಡುಕಲು ಪ್ರಯತ್ನಿಸುವಂತೆ ಪಶ್ಚಾತ್ತಾಪಪಡುವ ಶ್ರೀಧರಾಚಾರ್ಯನ ಸ್ವಭಾವದಲ್ಲಿ ಹೊಸ ಚೈತನ್ಯವನ್ನು ತುಂಬಿಕೊಂಡಿದೆ. ಮಾವನ ಕೋಪ ಕಡಿಮೆ ಮಾಡಲು ಸೊಸೆ ತುಳಸಿ ಶಿರಾ ಮಾಡುವ ಮೂಲಕ ಆ ಕಲಹವನ್ನು ಮುಗಿಸುವ ಸ್ವಭಾವವಿದೆ. ಅದರಂತೆ ಹಿರಿಯ ಸೊಸೆ ಮಾವನ ಆಣತಿಯಂತೆ ಮಡಿಯಿರುವುದಾಗಿ ತನ್ನ ಔದಾರ್ಯವನ್ನು ತೋರಿಸುವ ಹಿರಿತನವನ್ನು ತೋರಿಸುತ್ತಾಳೆ. ಇದಕ್ಕಿಂತ ಭಿನ್ನವಾದ ಕುಟುಂಬ ಮಧ್ಯಮವರ್ಗದ ವೆಂಕಟರಾಯನದು. ಒಂದು ಕಾಲದಲ್ಲಿ ಸಿರಿವಂತ ವ್ಯಕ್ತಿಯಾಗಿ ಬದುಕಿದ್ದು, ಮನೆಯ ಮಂದಿಗೂ, ಹೊರಗಿನವರಿಗೂ ಪರೋಪಕಾರಿಯಾಗಿ ಉನ್ನತ ಗೌರವಸ್ಥಾನ ಪಡೆದು ಬದುಕುತ್ತಿದ್ದ ವ್ಯಕ್ತಿ. ಆದರೆ ಇಂದು ಕೆಲಸದ ನಿವೃತ್ತಿ ವಯಸ್ಸಿಗೆ ತಲುಪಿದ್ದು, ಮನೆಯ ಖರ್ಚುವೆಚ್ಚಗಳ ಬಗ್ಗೆ ಹೆಚ್ಚು ಆತಂಕವಾಗಿರುವ ವ್ಯಕ್ತಿ. ಬಡತನದ ಸ್ಥಿತಿಯಲ್ಲೂ ಮರ್ಯಾದಸ್ಥರಾಗಿ ಬದುಕುವ ಸ್ವಭಾವದವರೂ ಈ ಪರಿಸ್ಥಿತಿಯಲ್ಲಿ ಮಗಳು ತವರಿಗೆ ಬರುವುದು ಅವರ ಬೇಸರಕ್ಕೆ ಕಾರಣವಾಗಿತ್ತು.

ಗಂಡನ ಈ ಬೇಸರವನ್ನು ಲೆಕ್ಕಿಸದೆ ಬಳಲಿದ ಮಗಳಿಗೆ ಉಪಚಾರ ಮಾಡಿ ಆ ಮೂಲಕ ಸಮಾಧಾನಗೊಳ್ಳುವ ತಾಯಿ ಲಕ್ಷ್ಮಿದೇವಮ್ಮ. ಮಗಳು ಗಂಡನ ಮನೆಗೆ ಹೋಗದೆ ಇರುವುದೇ ತಂದೆಗೆ ಸಮಸ್ಯೆಯಾಗಿ ಕಾಡಿತ್ತು. ಮಗಳಿಗೆ ಉಡುಗೊರೆ ಕೊಡುವ ಭಾರದಿಂದ ತಪ್ಪಿಸಿಕೊಳ್ಳಲು ಕೆಲಸದ ನಿಮಿತ್ತ ಬೇರೆ ಊರಿಗೆ ಹೋದ ತಂದೆ. ತಂದೆಯ ಪರಿಸ್ಥಿತಿಯನ್ನು ಅರಿತ ಮಗಳು ಕಿರಾಣಿ ಅಂಗಡಿಯ ವೆಚ್ಚವನ್ನು ತಾನೇ ಭರಿಸಿ ಆ ಸಮಸ್ಯೆಯನ್ನು ಬಗೆಹರಿಸುವ ಮೂಲಕ ಅವಳ ಔದಾರ್ಯತೆಯನ್ನು ಮೆರೆದಳು. ತಂದೆಯ ಅಸಹಜ ನಡವಳಿಕೆ "ನನ್ನನ್ನು ಅವಳು ಅರ್ಥ ಮಾಡಿಕೊಂಡಳಾದರೂ ನಾನವನ್ನು ತಂದೆಯಾಗಿ ಅರ್ಥ ಮಾಡಿಕೊಳ್ಳಲಿಲ್ಲವಲ್ಲ? ನಾನೆಂತಹ ತಂದೆ? ನಾನು ಒಬ್ಬ ತಂದೆಯೇ... ಒಂದು ವೇಳೆ ಅವಳು ಇನ್ನೂ ನಾಲ್ಕು ದಿವಸ ಇದ್ದಿದರೆ?"(ಅವಳು ಇನ್ನು ನಾಲ್ಕು ದಿವಸ ಇದ್ದಿದರೆ, ಪುಟ-೩೩) ಎಂದು ಭಾವಿಸುವ ಮನಸ್ಥಿತಿಯ ಹಿಂದೆ ತಮ್ಮ ವರ್ತನೆ ಬಗ್ಗೆ ತಾವೇ ಮರುಗುವ ಪಶ್ಚಾತ್ತಾಪವಿದೆ. ಇದರ ಹಿಂದೆ ಆರ್ಥಿಕ ಅಸಹಾಯಕತೆಯನ್ನು ಎದುರಿಸುವ ಅವರ ಮಧ್ಯಮವರ್ಗದ ನಗರಜೀವನದ ಅತಂತ್ರ ಪರಿಸ್ಥಿತಿಯನ್ನು ಎದುರಿಸಬೇಕಾದ ಅನಿವಾರ್ಯತೆಯಿರುವ ಕೌಟುಂಬಿಕ ಸಂಬಂಧಗಳು ಸಡಿಲಗೊಳ್ಳುವುದನ್ನು ಕಾಣಬಹುದಾಗಿದೆ. ಹೀಗೆ ಆರ್ಥಿಕ ಸಮಸ್ಯೆಯನ್ನು ಎದುರಿಸುವ ಮತ್ತೊಂದು ಕುಟುಂಬ ರಾಜುವಿನದು. ಹಳ್ಳಿಯ ಬದುಕಿನಿಂದ ಬೇಸತ್ತು ನಗರ ಆಕರ್ಷಣೆಗೆ ಒಳಗಾದ ರಾಜು ಬೆಂಗಳೂರು ಪಟ್ಟಣದಲ್ಲಿ ನೌಕರಿ ಪಡೆದು ತನ್ನ ತಾಯಿ, ಅಕ್ಕ, ತಂಗಿ, ತಮ್ಮನನ್ನೊಳಗೊಂಡ ಕುಟುಂಬಕ್ಕೆ ಆರ್ಥಿಕ ಭದ್ರತೆಯನ್ನು ಒದಗಿಸುವ ಮಹತ್ವಾಕಾಂಕ್ಷೆಯುಳ್ಳವನು. ಹೀಗೆ ಹಳ್ಳಿಯಿಂದ ನಗರಕ್ಕೆ ಹೋಗುವ ಕೂಡುಕುಟುಂಬಗಳು ಸರಳ ಕುಟುಂಬಗಳಾಗಿ ಮಾರ್ಪಡುತ್ತವೆ. ರಾಜು ಕೆಲಸ ಮಾಡುವ

ಕಛೇರಿಯಲ್ಲಿ ಸಾವಿರ ರೂಪಾಯಿಯನ್ನು ಕದ್ದ ಅಪರಾಧದ ಮೇಲೆ ಕೆಲಸ ಕಳೆದುಕೊಂಡು ಹಳ್ಳಿಯಲ್ಲಿರುವ ತಾಯಿ ಕುಟುಂಬಕ್ಕೆ ಹಣ ಕಳಿಸಲಾಗದ ಪರಿಸ್ಥಿತಿ. ಮಗನಿಂದ ಹಣ, ಕಾಗದ ಬರದೆ ತಾನೇ ಬೆಂಗಳೂರಿಗೆ ಬಂದು ಮಗನನ್ನು ಹಳ್ಳಿಗೆ ಹಿಂದಿರುಗಲು ಹೇಳಿರುವುದು ಮಗನ ಚಿಂತೆಗೆ ಕಾರಣವಾಗಿತ್ತು. ಅಲ್ಲದೆ ಮಗ, ಸೊಸೆ ನಗರದಲ್ಲಿ ಜೀವನ ನಡೆಸಿದರೆಂದು ದೂರುವ ತಾಯಿ ಮಗನ ನಗರದ ಮನೆಗೆ ಬಂದ ಸೊಸೆಯ ಇಳಿಮುಖ, ಇಕ್ಕಟ್ಟಿನ ಸ್ಥಳ, ಮಗನ ಪರಿಸ್ಥಿತಿ ಕಂಡು ಮರುಗುವಳು. ಆಕಸ್ಮಿಕವೆಂಬಂತೆ ರಾಜುವಿನ ಸ್ನೇಹಿತನಿಂದ ರಾಜು ನಿರಪರಾಧಿ ಎಂಬ ಸುದ್ದಿ ತಿಳಿದು "ಅಂತೂ ನಿನ್ನ ಅದೃಷ್ಟ ಕಣೋ... ಶಿಕ್ಷೆಯಾಗಲಿಲ್ಲ ಎಂದು ವೇಣಿ ನುಡಿದಾಗ ರಾಜು ಒಳಗೆ ನಕ್ಕ... ಅವನ ಅಂತರಾಳದಲ್ಲಿ ಕೋಲಾಹಲ ನಡೆದಿತ್ತು... ತಾನು ಶಿಕ್ಷೆ ಅನುಭವಿಸಲಿಲ್ಲವೆ? ಅಮ್ಮನ ತಪ್ಪುಕಲ್ಪನೆ ಮೋಜಿನ ಜೀವನ? ಪಾಪ ಶಾರದೆಯು ಪಟ್ಟ ಪಾಡು ಅದು ಶಿಕ್ಷೆಯಲ್ಲವೇ? ಹಾಗಾದರೆ ಇಷ್ಟು ದಿವಸದ ವೇದನೆ, ಆ ಅವಮಾನ, ಆ ಕಷ್ಟ ಇದು ಶಿಕ್ಷೆಯಲ್ಲವೇ? ಅವನ ಅಂತರಂಗದ ಆ ಪ್ರಶ್ನೆಗೆ ಉತ್ತರಿಸುವವರಾರು?"(ಪ್ರಶ್ನೆಗೆ ಉತ್ತರಿಸುವವರಾರು, ಪುಟ–೪೯) ವಿವರಗಳ ಮೂಲಕ ಆ ಕುಟುಂಬದ ಆಸರೆ ಮಗನಾಗಿದ್ದು, ಮಗನ ದುಡಿಮೆ ನೆಚ್ಚಿಕೊಂಡು ಬದುಕುತ್ತಿರುವ ತಾಯಿ, ಗಂಡನ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವ ಪತ್ನಿ ಶಾರದೆ, ಮಗ ಸೊಸೆ ನಗರ ಜೀವನದ ವಾಸ್ತವತೆ ಅರಿತು ನೊಂದುಕೊಳ್ಳುವ ತಾಯಿ. "ಅದೆಲ್ಲ ಇರ್ಲಿ ಬಿಡಮ್ಮ... ನೀನು ಬರೆಸಿದ ಕಾಗದಕ್ಕೆ ತೀರ್ಮಾನ ಮಾಡಿಬಿಟ್ಟಿದ್ದೀನಿ... ಪಪ್ಪಿ, ಚುಚ್ಚಿ, ರಾಗೂ ಎಲ್ಲರೂ ಇಲ್ಲಿಗೇ ಬಂದುಬಿಡ್ರಿ"(ಅದೇ ಕತೆ, ಪುಟ–೪೪) ಎಂದ ಮಗ ರಾಜುವಿನ ಮೂಲಕ ಕೂಡುಕುಟುಂಬದ ಪ್ರೀತಿಯನ್ನು ಕಾಣಬಹುದಾಗಿದೆ. ಅಲ್ಲದೆ ಆ ಮೂಲಕ ಹಳ್ಳಿಗಿಂತ ನಗರಜೀವನವನ್ನೇ ಮೆಚ್ಚಿಕೊಳ್ಳಲು ಕಾರಣ ಮನೆಯ ಸದಸ್ಯರ ಭಾವನಾತ್ಮಕತೆಯನ್ನು ಕಾಣಬಹುದಾಗಿದೆ. ರಾಜುವಿನ ತೀರ್ಮಾನದ ಹಿಂದೆ ಪತ್ನಿ ಶಾರದೆಯ ತೀರ್ಮಾನವೂ ಆಗಿತ್ತು. ನಗರದ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ತಾಯಿ, ತಂಗಿ, ತಮ್ಮಂದಿರ ಬದುಕಿಗೆ ನೆರವಾಗಲು ಸಿದ್ಧವಿರುವುದರ ಮೂಲಕ ಅದು ತನ್ನ ಕರ್ತವ್ಯವೆಂಬಂತೆ ಭಾವಿಸುವ ಕಿರಿಯ ವಯಸ್ಸಿನ ರಾಜುವಿನಲ್ಲಿ ಹಿರಿತನದ ಸ್ವಭಾವವನ್ನು ಕಾಣಬಹುದಾಗಿದೆ. ಆ ಮೂಲಕ ಮನೆಯವರ ನಡುವಿನ ಭಾವನಾತ್ಮಕ ಸಂಬಂಧಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿರುವುದನ್ನು ನೋಡಬಹುದಾಗಿದೆ.

ಕಥೆಯ ವಿವರಣೆಯಲ್ಲಿ ಕಂಡುಬರುವಂತೆ ಸ್ತ್ರೀಯು ಕುಟುಂಬದಲ್ಲಿ ನೈತಿಕತೆಯನ್ನು ಉಳಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ಅದು ಹೆಣ್ಣಾಗಲಿ, ಗಂಡಾಗಲಿ ಇದಕ್ಕೆ ಬದ್ಧವಾಗಿರುವುದು ಅನಿವಾರ್ಯ. ಗಂಡನ ಅನ್ಯೆತಿಕತೆಯನ್ನು ತಿಳಿದ ಸುಮಿತ್ರಾ(ಧ್ರುವ ಮಿಲನ) ಗಂಡನ ಮನೆಯನ್ನು ತೊರೆಯುವುದರ ಮೂಲಕ ತಂದೆಯ ಮನೆಯನ್ನು ಆಶ್ರಯಿಸುತ್ತಾಳೆ. ಸುಮಿತ್ರಾಳ ತಂದೆಗೆ ಪತ್ನಿಯಿಲ್ಲದ ಕಾರಣ ಮಗಳು ಮನೆಗೆ ಬಂದದ್ದು

ಅನುಕೂಲವಾಯಿತು. ಅಲ್ಲದೆ ತಂದೆಯ ಮರಣದ ನಂತರ ತಂದೆಯ ಸ್ಥಾನದಲ್ಲಿರುವ ಶಾಸ್ತ್ರಿಗಳು ಅವಳ ಬದುಕಿಗೆ ನೆರವಾದರೂ, ಈಗ ಅದೇ ಶಾಸ್ತ್ರಿಗಳು "ಇಲ್ನೋಡು ಸುಮಿತ್ರಾ ಇನ್ನು ಛಲ ಸಾಕು.... ನಿನಗೆ ಬೇಡವಾದರೆ ಬಿಡು. ಆದರೆ ತಂದೆಯ ಪ್ರೀತಿಗೆ ಹೇಮಳನ್ನು ದೂರ ಮಾಡುವ ಹಕ್ಕು ನಿನಗಿಲ್ಲ. ಸುಮ್ಮನೆ ಹೇಮಾಳನ್ನು ರಾಜಾರಾಮನಿಗೆ ಒಪ್ಪಿಸಿಬಿಡು... ಅವನು ಹೇಗಾದರೂ ದೊಡ್ಡ ಹುದ್ದೆಯಲ್ಲಿದ್ದಾನೆ. ಕೈತುಂಬ ಸಂಬಳ, ವರ ಹುಡುಕಿ ವೈಭವದ ಲಗ್ನ ಮಾಡಿ ಕೊಡುತ್ತಾನೆ. ನಿನ್ನ ಮಗಳಿಗೂ ಕಲ್ಯಾಣ.. ನಿನಗೂ ಹೊರೆ ಭಾರ ಕಡಿಮೆಯಾಗುತ್ತದೆ"(ಧ್ರುವ ಮಿಲನ, ಪುಟ-೯೯). ಶಾಸ್ತ್ರಿಗಳ ಈ ಮಾತಿನ ಹಿಂದೆ ಸುಮಿತ್ರಾಳ ಅಸಹಾಯಕತೆಯನ್ನು ತಿಳಿಸುತ್ತದೆ. ಅಲ್ಲದೆ ಶಾಸ್ತ್ರಿಗಳು ಇನ್ನು ತಾನು ನೆರವಾಗಲಾರೆ ಎಂಬ ಭಾವನೆಯನ್ನು ಸೂಚಿಸುತ್ತದೆ. ಗಂಡನನ್ನು ತೊರೆದು ಬಂದಾಗ ಅವಳ ನಿರ್ಧಾರವನ್ನು ಸರಿ ಎಂದು ಮಾನ್ಯ ಮಾಡಿದವರು, ಈಗ ಅವಳ ಗಂಡನ ಸಿರಿವಂತಿಕೆ ಮುನ್ನಲೆಯಾಗಿ ಅನೈತಿಕತೆ ಮರೆಯಾಗಿ ಆ ನಡವಳಿಕೆಯನ್ನು ಮಾನ್ಯ ಮಾಡುವಂತಿದೆ. ಮಗಳನ್ನು ಉಪಾಧ್ಯಾಯಿನಿಯಾಗಿ ರೂಪಿಸುವ ತಾಯಿ ಸುಮಿತ್ರಾ ಮಗಳ ತೀರ್ಮಾನದ ಮೇಲೆ ಅವಳ ಬದುಕು ನಿಂತಿರುತ್ತದೆ. "ಅಮ್ಮ ಉತ್ತರ ಧ್ರುವ.... ನೀವು ದಕ್ಷಿಣ ಧ್ರುವ... ನಾನು? ಎರಡು ಧ್ರುವಗಳ ಕೆಲವು ಬಿಂದು! ನಿಮ್ಮೆಡೆಗೆ ಕೈ ಚಾಚಿರುವೆನಾದರೂ ಅಮ್ಮನೆಡೆಗೆ ತಿರುಗಿರುವೆ. ಧ್ರುವಗಳ ಮಿಲನ ಸಾಧ್ಯವಿಲ್ಲ ಅಲ್ವೆ ಅಪ್ಪಾಜಿ?" ಎಂದು ಕಾಗದದ ಮುಖಾಂತರ ತನ್ನ ಅಳಲನ್ನು ತೋಡಿಕೊಳ್ಳುವ ಹೇಮಾ ಮನೋಭಾವನೆಯಲ್ಲಿ ಅಮ್ಮನ ಹಠ ತಪ್ಪಿಲ್ಲದಿದ್ದರೂ ತಂದೆಯ ತಪ್ಪನ್ನು ಮನ್ನಿಸುವ ಅಪ್ಪನ ಅನೈತಿಕತೆ ಮನುಷ್ಯನ ಸಹಜ ಸ್ವಭಾವ ಎನ್ನುವಂತೆ ಅದನ್ನು ಗಣನೆಗೆ ತೆಗೆದುಕೊಳ್ಳುವ ಪ್ರೌಢತೆಯನ್ನು ಹೇಮಾಳಲ್ಲಿ ಕಾಣಬಹುದಾಗಿದೆ. ಆ ಮೂಲಕ ತಂದೆ-ತಾಯಿ ಒಳಗೊಂಡ ಕೂಡುಬದುಕಿಗಾಗಿ ಹಾತೊರೆಯುವ ಅದು ಸಾಧ್ಯವಾಗದ ಬಗ್ಗೆ ವಿಷಾದದ ಧ್ವನಿಯನ್ನು ಇಲ್ಲಿ ನಿರೂಪಿಸಲಾಗಿದೆ. ಆದರೆ ಇದಕ್ಕೆ ವಿರುದ್ಧ ಪಾತ್ರವಾದ ಇಂದಿರಾ ಸುಶಿಕ್ಷಿತಳಾಗಿದ್ದು ತನ್ನ ಆಧುನಿಕ ಉಡುಗೆತೊಡುಗೆಗಳನ್ನು ಅತ್ತೆಯ ಕುಟುಂಬ ಸಹಿಸದಾದಾಗ ಅದನ್ನು ಮೀರುವುದರ ಮೂಲಕ ತಾನು, ತನ್ನ ಗಂಡನ್ನೊಳಗೊಂಡ ಬಿಡಿ ಕುಟುಂಬಗಳಲ್ಲಿ ಬದುಕನ್ನು ಸಾಗಿಸುತ್ತಾಳೆ. ಹೀಗೆ ಇಲ್ಲಿ ಇಂದಿರಾ ಆ ಕುಟುಂಬವನ್ನು ತೊರೆಯುವ ನಿರ್ಧಾರ ಮಾಡುತ್ತಾಳೆ. ಆದರೆ ಗಂಡನ ದುಡಿಮೆಯನ್ನೇ ನೆಚ್ಚಿಕೊಂಡು ಬದುಕುತ್ತಿರುವ ಅತ್ತೆ, ನಾದಿನಿ, ಮಾವನ ಬದುಕಿಗೆ ನೆರವಾಗದಿರುವುದನ್ನು ಸಹಿಸದ ನಿರೂಪಕಿ "ಇಂದಿರಾ ಎಷ್ಟು ಬದಲಾವಣೆ? ಇವಳ ಈ ರೂಪ ನಾನು ಊಹಿಸಿರಲಿಲ್ಲ. ಏನೋ ಅನುಕೂಲತೆಗಾಗಿ ಬೇರೆ ಮನೆ ಮಾಡಿಕೊಳ್ಳಲಿ. ಇಂದಿರಾಳ ಗಂಡ ಅವನಿಗೆ ಹೇಗೆ ಎನಿಸಬೇಕು? ಹೆತ್ತ ತಂದೆ ಹಾಸಿಗೆ ಹಿಡಿದಾಗ ಮಗನಿಂದ ಹಣ ಅಪೇಕ್ಷೆ ಮಾಡುವುದು ತಪ್ಪೇ? ಮಗನ ಹಣಕ್ಕೆಲ್ಲ ಇವಳೊಬ್ಬಳೇ ಬಾಧ್ಯಸ್ಥಳೆ? ಅತ್ತೆ-ಮಾವ ಇವಳಿಗೆ ನೋವುಂಟುಮಾಡಿರಬಹುದು... ತೊಂದರೆ ಕೊಟ್ಟಿರಬಹುದು. ಆದರೂ

ಇವಳಲ್ಲಿ ಮಾನವೀಯ ಸಹಜ ಸಾಮ್ಯತೆ ಬತ್ತಿ ಹೋಗಿದೆಯೇ ಈ ಹಠ, ಛಲ ಯಾವ ಸುಖಕ್ಕಾಗಿ?"(ಅಯ್ಯೋ ಎನಿಸಿತು, ಪುಟ-೯೭) ಎಂದು ನಿರೂಪಕಿ ವಿವರಣೆ ಮೂಲಕ ಸುಶಿಕ್ಷಿತ ಇಂದಿರಾಳ ಅಮಾನವೀಯತೆ ಅಸಹಜವಾದದ್ದು. ಅವಳು ಪಡೆದ ಶಿಕ್ಷಣ ಅವಳ ನಡವಳಿಕೆಗೆ ಪೂರಕವಾಗದೆ, ಗಂಡನ ಬಳಗದವರು ನಿರ್ಗತಿಕ ಸ್ಥಿತಿಗೆ ತಲುಪಿದ ಬಗ್ಗೆ ವಿಷಾದವಿದೆ. ಆದರೆ ಇದಕ್ಕೆ ವಿರುದ್ಧವಾದ ಕುಟುಂಬ ಗಂಗಾಳದು. ಅತ್ತೆ, ಮಾವ ಇಲ್ಲದ ಮನೆಯಲ್ಲಿ ನಾದಿನಿ, ಮೈದುನ, ಗಂಡ, ತಾಯಿ ಪ್ರೀತಿಯನ್ನು ತೋರಿ ಮೈದುನನ ಮೆಚ್ಚುಗೆ ಗಂಡನ ಪ್ರೀತಿಯಲ್ಲಿ ತನ್ನ ದಿನನಿತ್ಯದ ಮನೆ ಕೆಲಸಗಳನ್ನು ಮಾಡುತ್ತಾ ಗಂಡನ ಪ್ರೀತಿಯಿಂದ ಹೊಸ ಚೈತನ್ಯವನ್ನು ಪಡೆದುಕೊಳ್ಳುವಳು. ಆದರೆ ಹೀಗೆ ಸಹನೆಯಿಂದ ಗಂಡನ ಬಳಗದವರ ಬಗ್ಗೆ ತನ್ನನ್ನು ತಾನು ಸವೆಸಿದ ಅತ್ತಿಗೆಗೆ ಮೈದುನರು ಶ್ರೀಮಂತಿಕೆಯಿರುವ ಪತ್ನಿಯನ್ನು ವಿವಾಹವಾಗಿ ತಮ್ಮ ಬದುಕನ್ನು ರೂಪಿಸಿಕೊಂಡಿದ್ದು, ಓರಗಿತ್ತಿಯರಿಂದ ಆಧುನಿಕ ರೀತಿನೀತಿಗಳ ಬಗ್ಗೆ ಉಪದೇಶ. ಮೈದುನ ರವಿ ಲಂಚ ಪಡೆದು ಹಣಕ್ಕಾಗಿ ತನ್ನ ಗಂಡನನ್ನು ಬೇಡುವುದು ಅವಳ ಸಹನೆಯನ್ನು ಮೀರಿಸಿತ್ತು. ಆದರೆ ಈ ಕೋಪ ಕ್ಷಣಿಕವಾದದ್ದು. "ಈಗ ರವಿ ಎಷ್ಟು ಕಷ್ಟದಲ್ಲಿದ್ದಾನೆ ಪಾಪ. ಏನೂ ತಿಳಿಯದ ರಮ ಎಷ್ಟು ತಲ್ಲಣಗೊಂಡಿದ್ದಾಳೊ ಅವರ ಕಷ್ಟಕ್ಕೆ ಅನುಕೂಲವಾಗದ ಆ ಬಚ್ಚಿಟ್ಟ ಹಣದಿಂದ ತನಗೆ ಮಾತ್ರ ಏನು ಪ್ರಯೋಜನ! ಹೊತ್ತಿಗೆ ಒದಗದ ಹಣದಿಂದ ಉಪಯೋಗವೇನು? ಅವರಿಗೆ ಹೇಳ್ತೀನಿ ನನ್ನ ತಪ್ಪಾಯ್ತು. ನನ್ನ ಕಳ್ಳಗಂಟು ತಗೊಳ್ಳಿ ಅಂತ" ಎಂದು ಹೇಳುವ ಅತ್ತಿಗೆಯ ಆಲೋಚನೆಯ ಹಿಂದೆ ಕುಟುಂಬ ಪ್ರೀತಿಯನ್ನು ಕಾಣಬಹುದು. ಅಲ್ಲದೆ ಗಂಡನ ನಿರ್ಧಾರವನ್ನು ಒಪ್ಪಿ "ಹೌದು ಬಾಕಿ ಅಲ್ಲ! ಋಣ!" ಎಂದು ಮೈದುನನಿಗೆ ನೆರವಾಗುವ ಮೂಲಕ ಅವಳ ಉದಾರತೆಯನ್ನು ಕಾಣಬಹುದಾಗಿದೆ. ಹೀಗೆ ಇಲ್ಲಿ ಕುಟುಂಬದಲ್ಲಿ ಬರುವ ಹಿರಿಯ, ಕಿರಿಯ ಪುರುಷ, ಸ್ತ್ರೀ ಇತ್ಯಾದಿ ಪಾತ್ರಗಳು ಆ ಕುಟುಂಬದ ಶಾಂತಪರಿಸರವನ್ನು ಕಲಕದ ಹಾಗೆ ಕಾಪಾಡಿಕೊಂಡು ಹೋಗುವ ಸ್ವಭಾವದವರಾಗಿದ್ದಾರೆ. ಹೀಗೆ ಕುಟುಂಬದ ಹೊಂದಾಣಿಕೆಯ ಪ್ರೀತಿ, ವಿಶ್ವಾಸಗಳಿಂದ ವಿಧಾನಗಳಿಂದ ಬಾಳುವ ಸಹನೆ ಸ್ತ್ರೀಯರದಾಗಿದೆ. ಈ ಸಹನೆ ಕಿರಿಯ ಪುರುಷರಲ್ಲಿ ಕಂಡುಬಂದು ಅವರಲ್ಲಿಯೂ ಹೆಣ್ತನದ ಸಹಜ ಗುಣಗಳು ಕಂಡುಬರುತ್ತವೆ.

ಸರಿತಾ ಅವರ ಕಥೆಗಳಲ್ಲಿ ಬರುವ ಸ್ತ್ರೀಯರು ಕುಟುಂಬ ಮೂಲದಿಂದ ತಮ್ಮನ್ನು ಗುರುತಿಸಿಕೊಳ್ಳುವ ಪಾತ್ರಗಳಾಗಿವೆ. ಅಂದರೆ ಪತ್ನಿ, ಮಗಳು, ನಾದಿನಿ, ಅಕ್ಕ, ಅತ್ತೆ, ತಾಯಿ, ಮುದುಕಿ, ಅತ್ತಿಗೆ ಹೀಗೆ ಪುರುಷ ಸಂಬಂಧಗಳಿಂದ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ ವಿನಹ ಸ್ವತಂತ್ರವಾಗಿ ಅಲ್ಲ. ಇಲ್ಲಿನ ಹೆಣ್ಣುಮಕ್ಕಳು ಬೆರಳೆಣಿಕೆಯಷ್ಟು ಮಾತ್ರ ಪದವೀಧರರಾಗಿ ಕಂಡುಬರುತ್ತಾರೆ. ಉದಾಹರಣೆಗೆ: ಮಿನಿ(ಲಕ್ಷ್ಮಣರೇಖೆ), ಇಂದಿರಾ(ಅಯ್ಯೋ ಇಷ್ಟೇನಾ) ಇತ್ಯಾದಿ ಪಾತ್ರಗಳು ಪದವೀಧರರಾಗಿ ಕಂಡುಬರುವಂತೆ ಕಥೆಗಳಲ್ಲಿ ವಿವರಣೆಗಳಿವೆ. ಹೀಗೆ

ಸುಶಿಕ್ಷಿತರಾದ ಸ್ತ್ರೀಪಾತ್ರಗಳು ಅವರು ಪಡೆದ ಶಿಕ್ಷಣ, ಕುಟುಂಬದಲ್ಲಿ ಇತರ ಸದಸ್ಯರೊಂದಿಗೆ ಸಾಮರಸ್ಯದಿಂದ ಕೂಡಿದ ಕಾರಣ ಅವರ ಶಿಕ್ಷಣ ಸಾರ್ಥಕವಾಯಿತೆಂಬ ವಿವರಗಳಿವೆ. ಅವನಿಗೆ ಉಪ್ಪಿಟ್ಟು, ಕಾಫಿ ಕೊಡುವುದಿರಲಿ, ಕುಳಿತುಕೋ ಎಂದು ಹೇಳುವಷ್ಟು ಸೌಜನ್ಯವಿಲ್ಲದೇ ಕಾಲೇಜು ಡಿಗ್ರಿ ಪಡೆದ ಅತ್ತಿಗೆಗೆ!" ನಿರೂಪಕಿಯ ಈ ಧ್ವನಿ ಇಂದಿರಾ ತನ್ನ ಗಂಡನ ಬಳಗದ ಮೈದುನ ಆರ್ಥಿಕ ಸಹಾಯವನ್ನು ಬೇಡಿದಾಗ ಅದನ್ನು ಕೊಡಲು ನಿರಾಕರಿಸಿ ಇಂದಿರಾಳ ಬಗ್ಗೆ ಅಮಾನವೀಯತೆಯನ್ನು ಕಂಡು ನೊಂದುಕೊಳ್ಳುವ ನಿರೂಪಕಿ, ಕಥೆಯ ವಿವರಣೆ ಹಿಂದೆ ಸ್ತ್ರೀ ತನ್ನ ವಿದ್ಯೆಯಿಂದ ಮಾನವೀಯ ಸಹಜ ನಡವಳಿಕೆಯಿಂದ ವರ್ತಿಸಿದಾಗ ಮಾತ್ರ ಸಾರ್ಥಕಗೊಳ್ಳುವಂತೆ ವಿವರಣೆಗಳಿವೆ. ಮತ್ತೊಂದು ಪೂರಕ ಪಾತ್ರವಾದ ಮಿನಿ(ಲಕ್ಷ್ಮಣರೇಖೆ) ಪತಿಯ ಇಚ್ಛೆಯಂತೆ ತನ್ನ ಬದುಕನ್ನು ರೂಪಿಸಿಕೊಳ್ಳುವವರಾಗಿ ಕಂಡುಬರುತ್ತಾರೆ. ತಾಯ್ತನದ ಬಯಕೆಯನ್ನು ಅಭಿವ್ಯಕ್ತಪಡಿಸುವವರಾದರೂ ಪತಿಯು ಒಪ್ಪಿಗೆ ನೀಡಿದಾಗ ಅದನ್ನು ತನ್ನ ಇಚ್ಛೆಯಂತೆ ತಳ್ಳಿಹಾಕುವ ಮನೋಭಾವದವಳು. ಅಲ್ಲದೆ ತನ್ನ ಪೂರ್ವ ಪ್ರೇಮದ ಬಗ್ಗೆ ಗಂಡ ಮೂರ್ತಿ ಪ್ರಶ್ನಿಸಿದಾಗ "ಶ್ಯಾಮನನ್ನು ಮದುವೆಯಾಗಲು ನನಗೂ ಮನಸ್ಸಿತ್ತು ನಿಜ. ಆದರೆ ಅದು ಕೇವಲ ಅಪೇಕ್ಷೆ ಮಾತ್ರ ಆಗಿತ್ತಾದ್ದರಿಂದ ಜಾತಕಗಳು ಕಲೆಯದಿದ್ದರೂ ಹಿರಿಯರನ್ನು ವಿರೋಧಿಸಿಯಾದರೂ ಮುಂದಡಿಯಿಡುವಷ್ಟು ಆ ಆಸೆ ಬಲವತ್ತರವಾಗಿರಲಿಲ್ಲ. ಮದುವೆ, ಭವಿಷ್ಯತ್ತು ಎಲ್ಲ ಅದೃಷ್ಟದ ಆಟವೆಂದು ದೇವರ ಮೇಲೆ ವಿಶ್ವಾಸವಿಟ್ಟು ನಿಶ್ಚಿಂತಳಾಗಿಬಿಟ್ಟೆ. ಈಗ ನನಗಾಗಿರುವ ನಷ್ಟವಾದರೂ ಏನು ಎಂದು ಉತ್ತರಿಸುವ ಮಿನಿ ನಿರ್ಧಾರದ ಹಿಂದೆ ತನಗೆ ದಕ್ಕಿದ ಬದುಕಿನಲ್ಲಿ ನೆಮ್ಮದಿಯನ್ನು ಬಯಸುವವಳು. ಪೂರ್ವ ಪ್ರಿಯಕರ ಶ್ಯಾಮ ಮನೆಗೆ ಬಂದರೂ ಅವನ ಸಾಮೀಪ್ಯ ಅವಳನ್ನು ವಿಚಲಿತಗೊಳಿಸುವುದಿಲ್ಲ. ಬದಲಿಗೆ ಶ್ಯಾಮನ ಆಗಮನ ಪತಿ ಮೂರ್ತಿಯಲ್ಲಿ ಆದ ಬದಲಾವಣೆಯನ್ನು ಗಮನಿಸಿದ ಮಿನಿ ಅವನನ್ನು ಕುರಿತು "ಶ್ಯಾಮ್ ತನ್ನ ಮೇಲೆ ಇನ್ನೂ ಛೆ ಛೆ... ಶ್ಯಾಮನೊಡನೆ ಇನ್ನು ಮೇಲೆ ಫ್ರೀ ಇರಲೇಬಾರದು. ಇದ್ದರೆ ಮೂರ್ತಿಯ ಅಪಾರ್ಥದಿಂದ ಅನರ್ಥವಾದೀತು. ಅವರ ಬಲವೊಂದಿದ್ದರೆ ಸಾಕು. ಈ ಶ್ಯಾಮ ಊರಿಗೆ ಹೋಗಿಬಿಡಬಾರದೆ ಅವನೊಡನೆ ಪತ್ರ ವ್ಯವಹಾರಾನೂ ಇಡೊಲ್ಲಪ್ಪ"(ಲಕ್ಷಣ ರೇಖೆ, ಪುಟ-೩೭). ಹೀಗೆ ಪತಿಯ ಬೇಕು ಬೇಡಗಳಿಗೆ ಅನುಗುಣವಾಗಿ ತನ್ನನ್ನು ರೂಪಿಸಿಕೊಳ್ಳುವಳು. ತನ್ನ ವೈವಾಹಿಕ ಬದುಕಿಗೆ ತೊಂದರೆಯಾಗದಂತೆ ಹೆಚ್ಚು ಪವಿತ್ರತೆಯನ್ನು ಕಾಯ್ದುಕೊಂಡು ಬರುವವಳು. ಇಂತಹ ನಿರ್ಧಾರದ ಹಿಂದೆ ಅವಳ ಅಭಿಪ್ರಾಯವೆಂಬಂತೆ ಕಂಡುಬಂದರೂ ಅದು ಗಂಡನ ಸಮಾಜದ ಒತ್ತಾಸೆಯಾಗಿಯೂ ಕಂಡುಬರುತ್ತದೆ. ಹೀಗೆ ಗಂಡನ ಮನೆ ಹೆಚ್ಚು ಸುರಕ್ಷಿತ ಎಂಬ ಭಾವನೆ ಸ್ತ್ರೀಯಲ್ಲಿದೆ. ಅಲ್ಲದೆ ಇಲ್ಲಿನ ಹೆಣ್ಣುಮಕ್ಕಳು ಅದರಲ್ಲೂ ಬ್ರಾಹ್ಮಣ ಮನೆತನದ ಹೆಣ್ಣುಮಕ್ಕಳು ತನ್ನ ಸಂಗಾತಿಯನ್ನು ಸ್ವಯಿಚ್ಛೆಯಂತೆ ಮನೆಯವರ ಬಿಗಿ ವಾತಾವರಣದಲ್ಲಿ ಅದನ್ನು ಸಡಿಲಗೊಳಿಸುವಂತೆ ಆ

ನಿಯಮವನ್ನು ಮೀರಿ ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಂಡರೂ ಅದು ಕೊನೆಗೆ ಸಫಲಗೊಳ್ಳುವುದು, ವಿಫಲಗೊಳ್ಳುವುದು ಮನೆಯ ತೀರ್ಮಾನಗಳಿಂದ ಅನಸಿ(ಹೀರೊ ಆಗಲೇ ಇಲ್ಲ) ಇದಕ್ಕೆ ಬದ್ಧತೆಯಿಂದ ನಡೆದುಕೊಳ್ಳುತ್ತಾಳೆ. ಹೀಗೆ ಇಲ್ಲಿ ಆಯ್ಕೆ ಅನಸಿಯದಾದರೂ ಅದನ್ನು ನಿಶ್ಚಯಿಸುವ ಅಧಿಕಾರ ಆ ಮನೆಯ ಗಂಡುಮಕ್ಕಳಿಗೆ ಸಂಬಂಧಿಸಿದ್ದಾಗಿದೆ. ಇಲ್ಲಿನ ಕಥೆಗಳಲ್ಲಿ ಮನೆಯ ಗಂಡಸರ ಇಚ್ಛೆಯಂತೆ ಮಗಳಾಗಲಿ, ಸೊಸೆಯಾಗಲಿ, ಪತ್ನಿಯಾಗಲಿ ಪಾವಿತ್ರ್ಯತೆ ಕಾಪಾಡಿಕೊಳ್ಳುವುದು ಕಡ್ಡಾಯ. ಆದರೆ ಈ ಪಾವಿತ್ರ್ಯತೆ ಗಂಡನಲ್ಲಿ ಹೆಣ್ಣು ಹುಡುಕುವುದು ಸಾಮಾನ್ಯ. ಹೀಗೆ ಇಲ್ಲಿ ಗಂಡ ಅನೈತಿಕ ಜೀವನ ನಡೆಸಿದಾಗ ಆ ಮನೆಯನ್ನು ತೊರೆದು ಒಂಟಿಯಾಗಿ ಬದುಕುವ ಪಾತ್ರ ಸುಮಿತ್ರಾ(ಧ್ರುವಮಿಲನ), ಮಗಳು ತಂದೆಯ ಬಳಿಗೆ ಹೋಗಲು ನಿರಾಕರಿಸಿದಾಗ ಮಗಳಿಗೆ ತಾನೇ ತಂದೆಯಾಗಿ ರೂಪಗೊಳ್ಳುತ್ತಾಳೆ. ಮಗಳ ವಿವಾಹ ಮಾಡಲು ಶ್ರೀಧರಾಚಾರ್ಯನ ಸಹಕಾರ ದೊರಕದೆ ಇರುವಾಗ ತಾನೆ ಅನುರೂಪ ಗಂಡನನ್ನು ಹುಡುಕಿ ಮಗಳಿಗೆ ವಿವಾಹ ಮಾಡಲು ನಿರ್ಧರಿಸುತ್ತಾಳೆ ವಿನಹ ಗಂಡನ ಬಳಿ ಹಿಂದಿರುಗಲು ಮನಸ್ಸು ಒಪ್ಪುವುದಿಲ್ಲ. ಹೀಗೆ ಸಂದಿಗ್ಧ ಪರಿಸ್ಥಿತಿಯಲ್ಲಿ ತನ್ನ ಹಾಗೂ ತನ್ನ ಮಗಳ ಜವಾಬ್ದಾರಿಯನ್ನು ತಾನೇ ಹೊರಲು ಸಿದ್ಧವಾಗುತ್ತಾಳೆ. ಅಲ್ಲದೇ ಮಗಳು ಶ್ರೀಮಂತ ತಂದೆಯ ಬಳಿ ಹಿಂದಿರುಗುವ ನಿರ್ಧಾರ ಮಾಡಿದರೂ ಅವಳನ್ನು ಒತ್ತಾಯಿಸುವುದಿಲ್ಲ. ಆದರೆ ಮಗಳು ಹೇಮಾ ತಾಯಿಯ ಇಚ್ಛೆಯಂತೆ ಎನ್ನುವುದಕ್ಕಿಂತ ತನ್ನನ್ನು ಓದಿಸಿ ಬೆಳೆಸಿದ ತಾಯಿಯ ಪ್ರೀತಿ ಮುಖ್ಯವಾಗಿ ಕಂಡುಬರುತ್ತದೆ. ಅಲ್ಲದೆ ತಾಯಿ ಒಂಟಿಯಾಗಿ ಬದುಕುವಳೆಂಬ ವಿವೇಚನೆಯಿಂದ ತಾಯಿಯ ಹತ್ತಿರ ಹಿಂದಿರುಗುವ ಅವಳ ನಿರ್ಧಾರ ಅತ್ಯಂತ ಸೂಕ್ತವಾಗಿದ್ದರೂ ಕೊರತೆಯನ್ನುಂಟುಮಾಡಿದೆ. ತಂದೆಯ ಪ್ರೀತಿಯ ಕೊರತೆ ಅವಳಲ್ಲಿದೆ. ತಂದೆಗೆ ಕಾಗದದ ಮುಖಾಂತರ ತನ್ನ ಅಭಿಪ್ರಾಯವನ್ನು ತಿಳಿಸುವ ಹೇಮಾ... "ಅಮ್ಮ ಉತ್ತರಧ್ರುವ... ನೀವು ದಕ್ಷಿಣಧ್ರುವ ನಾನು? ಎರಡು ಧ್ರುವಗಳ ಕೇಂದ್ರಬಿಂದು!! ನಿಮ್ಮೆಡೆಗೆ ಕೈಚಾಚಿರುವೆನಾದರೂ ಅಮ್ಮನೆಡೆಗೆ ತಿರುಗಿರುವೆ. ಧ್ರುವಗಳ ಮಿಲನ ಸಾಧ್ಯವಿಲ್ಲ ಅಲ್ವೆ ಅಪ್ಪಾಜಿ?"(ಧ್ರುವಮಿಲನ, ಪುಟ-೧೧೯) ಎನ್ನುವ ಅಭಿಪ್ರಾಯದ ಹಿಂದೆ ತಂದೆಯ ಅಪರಾಧವನ್ನು ಪ್ರಕೃತಿ ಸಹಜ ವರ್ತನೆಯಂತೆ ಭಾವಿಸುವ ಮೂಲಕ ಒಟ್ಟಾಗಿ ಬದುಕಲು ಹಾತೊರೆಯುವ ಭಾವವಿದೆ. ಆದರೆ ತಾಯಿಯ ಕಠಿಣ ನಿರ್ಧಾರ ಕೂಡಿ ಬಾಳಲು ಅಸಾಧ್ಯವೆಂಬಂತೆ ವಿಷಾದವಿದೆ. ಇಲ್ಲಿನ ಮಹಿಳೆಯರಿಗೆ ಅಪೂರ್ವ ಪ್ರೇಮ ಸಂಬಂಧಗಳು ಆಕಸ್ಮಿಕವಾಗಿ ಎದುರಾದರೂ ಅದು ಅವರನ್ನು ತೀವ್ರವಾಗಿ ಕಾಡಿಸದೆ, ಇರುವ ಬದುಕು ಮುಖ್ಯವಾಗಿ ಆ ಸಂಬಂಧಗಳನ್ನು ಮರೆಯುವ ಮೂಲಕ ಗಂಡನಿಗೆ ಹೆಚ್ಚು ಬದ್ಧತೆಯಿಂದಲೇ ಜೀವನ ನಡೆಸುವುದಾಗಿ ನಿರ್ಧರಿಸುವ ಮಹಿಳೆಯರಾಗಿದ್ದಾರೆ. ಮಿನಿ, ಅನಸಿ, ಅಲಕಾ ಈ ಸ್ವಭಾವದ ಮಹಿಳಯರು. ಮಗಳ ಪಾತ್ರದಲ್ಲಿ ಕಾಣಿಸಿಕೊಳ್ಳುವ ವನಜಾ ತಂದೆಯ ಆರ್ಥಿಕ ಪರಿಸ್ಥಿತಿಯನ್ನು ಅರ್ಥ

ಮಾಡಿಕೊಂಡು ತಾನು ತವರಿಗೆ ಬಂದದ್ದು ತಂದೆಗೆ ಹೆಚ್ಚು ತೊಂದರೆಯಾಗಿರುವುದನ್ನು ಅರಿತು ಕಿರಾಣಿ ಅಂಗಡಿಗೆ ಹಣವನ್ನು ನೀಡುವುದರ ಮೂಲಕ ತಂದೆಯ ಕುಟುಂಬಕ್ಕೆ ನೆರವಾಗುವ ಅವಳ ವಿಚಾರಶೀಲತೆಯನ್ನು ಗಮನಿಸಬಹುದು. ಇಲ್ಲಿ ಪತ್ನಿಯಾಗಿ ಕಾಣಿಸಿಕೊಳ್ಳುವ ಶಾರದ, ಅಲಕಾ, ಲಕ್ಷ್ಮಿದೇವಮ್ಮ, ನೀಲಮ್ಮ, ಗಂಗಾ ಇತ್ಯಾದಿ ಸ್ತ್ರೀಪಾತ್ರಗಳು ಸಮಯಕ್ಕೆ ತಕ್ಕಂತೆ ವರ್ತಿಸುವ ಮನೋಭಾವದವರು. ಗಂಡನ ಇಚ್ಛೆಗೆ ಅನುಗುಣವಾಗಿ ನಡೆಯುವವರಾದರೂ ಅವರ ತೀರ್ಮಾನಗಳೇ ತಮ್ಮ ತೀರ್ಮಾನಗಳು ಎಂಬಂತೆ ಭಾವಿಸುವರೇ ಹೊರತು ಅವರು ಅಸುಖಿಗಳಾಗಿ ಕಂಡುಬರುವುದಿಲ್ಲ. ಮನೆಯಲ್ಲಿ ದಿನನಿತ್ಯದ ದುಡಿಮೆ ಹೊರೆಯಾದರೂ ಗಂಡನ ಮನೆ, ಅವನ ಒಲವು ಮಾನಸಿಕ, ದೈಹಿಕ ದಣಿವನ್ನು ಇಲ್ಲವಾಗಿಸುತ್ತದೆ.

ತಾಯಿಯಾದ ಪಂಕಜಮ್ಮ ಇಂದಿರಾಳನ್ನು ಸ್ವಂತ ಮಗಳಂತೆ ಕಾಪಾಡುವಳು. ಅವಳ ಬದುಕನ್ನು ರೂಪಿಸಿದಳು. ಆದರೆ ಇಂದಿರಾಳ ಉಡುಗೆ ತೊಡುಗೆಯನ್ನು ಅತ್ತೆ ಮನೆಯವರು ಸಹಿಸದಾದಾಗ ಅವಳನ್ನು, ಆ ಕುಟುಂಬವನ್ನು ಮೀರುವಂತೆ ನೆರವಾಗುವ ಪಂಕಜಮ್ಮನ ಸ್ವಭಾವದ ಹಿಂದೆ ಮಗಳ ಮೇಲಿನ ಅತಿಯಾದ ಪ್ರೀತಿ ಕಂಡುಬಂದು ಮಗಳ ಸುಖ ಮುಖ್ಯವಾಗಿ ಮಗಳ ಗಂಡನ ಕುಟುಂಬದ ಬಗ್ಗೆ ಅಮಾನವೀಯವಾಗಿ ವರ್ತಿಸುವುದು ಸಹಿಸಲಾಗದ್ದು.

ವೈದ್ಯಳಾದ ಶಾಲಿನಿ ನಗರ ಬದುಕಿಗೆ ತನ್ನನ್ನು ಹೆಚ್ಚು ತೆರೆದುಕೊಂಡಿದ್ದರೂ ಸಾಂಪ್ರದಾಯಿಕ ಮಾವನವರ ಮನೆಗೆ ಬಂದಾಗ ಅವರ ಆಣತಿಯಂತೆ ನಡೆಯುತ್ತಾಳೆ. ಮಡಿವಂತಿಕೆಯಿಂದ ದೂರವಾದ ಶಾಲಿನಿಯ ನಡವಳಿಕೆ ಮಾವನಿಗೆ ಅಸಹ್ಯವಾದಾಗ ನಿಂದಿಸಿದಾಗ ನೊಂದುಕೊಳ್ಳದೆ ಅವರ ಆಣತಿಯಂತೆ ನಡೆದುಕೊಳ್ಳುವ ಭರವಸೆ ನೀಡುವ ಅವಳ ನಡವಳಿಕೆ ಹಿರಿಯರಲ್ಲಿ ಗೌರವ, ತಾನು ಪಡೆದ ಶಿಕ್ಷಣಕ್ಕೆ ತಕ್ಕಂತೆ ಮಾನವ ಸ್ವಭಾವಗಳನ್ನು ಅರ್ಥ ಮಾಡಿಕೊಳ್ಳುವ ಔದಾರ್ಯತೆಯನ್ನು ಕಾಣಲಾಗಿದೆ. ತಾಯಿ ಪಾತ್ರವನ್ನು ನಿರ್ವಹಿಸುವ ನಾಗಮ್ಮ, ಲಕ್ಷ್ಮಿದೇವಮ್ಮ ಪಾತ್ರಗಳು ಮಗ, ಮಗಳಲ್ಲಿ ಹೆಚ್ಚು ಪ್ರೀತಿ, ಮಮತೆಯನ್ನು ತೋರಿಸುವವರು. ಮಗ ರಾಜು ಹಣ ಕಳುಹಿಸದಾದಾಗ ಕೋಪಗೊಂಡ ನಾಗಮ್ಮ ಮಗನ ವಾಸ್ತವ ಪರಿಸ್ಥಿತಿ ಅರಿತು ನೊಂದುಕೊಳ್ಳುವಳು. ಗಂಡನ ನೆರವಿಲ್ಲದೆ ಆರ್ಥಿಕವಾಗಿ ಸಂಕಷ್ಟದಲ್ಲಿರುವಾಗ ಮಗಳ ಮೇಲಿನ ಮಮತೆಯಿಂದ ಅವಳನ್ನು ಸಾಕುವ ಇಚ್ಛೆಯ ಹಿಂದೆ ಲಕ್ಷ್ಮೀದೇವಮ್ಮನ ತಾಯ್ತನದ ಸಹಜ ವಾತ್ಸಲ್ಯವನ್ನು ಕಾಣಬಹುದಾಗಿದೆ. ಹೀಗೆ ಇಲ್ಲಿನ ಸ್ತ್ರೀ ಪಾತ್ರಗಳು ಸಾಮಾಜಿಕ ಪಾತ್ರಗಳಾಗಿ ಕಂಡುಬಂದರೂ ಅದು ಇಲ್ಲಿ ಗಣನೆಗೆ ಬರದೆ ಸಮಾಜ ಹೆಣ್ಣಿಗೆ ವಿಧಿಸಿರುವ ಪತ್ನಿ, ಮಗಳು, ನಾದಿನಿ, ಅತ್ತೆ, ಅತ್ತಿಗೆ, ತಾಯಿ ಪಾತ್ರಗಳನ್ನು ಅತ್ಯಂತ ಜಾಗರೂಕತೆಯಿಂದ ನಿಭಾಯಿಸುವವರು. ತಮ್ಮ ಈ ಹೊಣೆಗಾರಿಕೆ ನಿಭಾಯಿಸುವಲ್ಲಿ ಅಳುಕಿದರೂ ಅದು ಹಿರಿದಾಗಿ ಕಾಣದೆ ತಮ್ಮನ್ನು ತಾವೇ ಆತ್ಮಾವಲೋಕನ ಮಾಡಿಕೊಳ್ಳುವುದರ ಮೂಲಕ ಆ ಮನೆಯ ಸದಸ್ಯರಿಗಾಗಿ ಎಲ್ಲವನ್ನು ಸಹಿಸಿಕೊಂಡು ಬದುಕುವ ಮೂಲಕ ಸುಖಿಗಳಾಗಿ ಕಾಣುವ ಸ್ವಾವಲಂಬಿ ಪಾತ್ರಗಳಾಗಿ ಕಂಡುಬರುತ್ತಾರೆ.

೩.೧೨. ಗೀತಾ ಕುಲಕರ್ಣಿ

ಗೀತಾ ಅವರ ಕಥೆಗಳಲ್ಲಿ ಬರುವ ಕುಟುಂಬಗಳು ಹೊಣೆಗಾರಿಕೆಯಿಂದ ಕೂಡಿರುವಂತಹವು. ರಾಧಾ ಎಂಬ ಮಹಿಳೆ ಮನೆಯ ಬಿಡುವಿಲ್ಲದ ಕೆಲಸದ ನಿರ್ವಹಣೆಯಲ್ಲಿ ತೊಡಗಿಕೊಂಡಿರುವಳು. ತನ್ನ ಗಂಡನ ಬಳಗದ ನಾದಿನಿಯ ಆರೈಕೆಯ ಬಗ್ಗೆ ಕಾಳಜಿಯುಳ್ಳವಳು. ಆದರೆ ಈ ಕಾಳಜಿಯನ್ನು ಅವಳ ಗಂಡನಲ್ಲಿ ಕಾಣಲಾಗುವುದಿಲ್ಲ. ಇಲ್ಲಿ ಪತ್ನಿಯಾಗಿ ತಾಯಿ ಪಾತ್ರ ನಿರ್ವಹಿಸುವ ರಾಧ(ಹಗಲು ಮಂಜು) ಈ ಪಾತ್ರ ನಿರ್ವಹಿಸುವಲ್ಲಿ ಮಕ್ಕಳಿಗೆ ತನ್ನ ಹೆಚ್ಚು ಸಮಯವನ್ನು ನೀಡುವುದು ಗಂಡನ ಅಸಮಾಧಾನಕ್ಕೆ ಕಾರಣವಾಗಿತ್ತು. ಇಲ್ಲಿ ರಾಧಾಳ ಗಂಡ ಗೋಪಾಲನಿಗೆ ತನ್ನ ಪತ್ನಿಯನ್ನು ಹೆಚ್ಚು ಏಕಾಂತದಲ್ಲಿ ಪಡೆಯುವ ಬಯಕೆ. ಹೀಗೆ ಬಯಸುವ ಗೋಪಾಲ ತನ್ನ ಸ್ನೇಹಿತನ ದಂಪತಿಗಳ ಮನೆಯಲ್ಲಿ ಮಕ್ಕಳ ಹೊಣೆಗಾರಿಕೆಯಿಂದ ನುಣುಚಿಕೊಂಡು ಸ್ವಪ್ರಜ್ಞೆಯಿಂದ ಬದುಕುವ ಪರಿಣಾಮ ಆ ಮಕ್ಕಳ ವರ್ತನೆಯ ಮೇಲೆ ಆಗುವ ಬದಲಾವಣೆಯನ್ನು ಕಾಣುತ್ತಾನೆ. ಹೀಗೆ ಗೋಪಾಲ ಸ್ವಪ್ರಜ್ಞೆಯಿಂದ ತನ್ನ ಹೊಣೆಗೇಡಿತನದ ಅರಿವಿನಿಂದ ನೊಂದು ಪತ್ನಿಯ ಇಚ್ಛೆಯಂತೆ ಮಕ್ಕಳನ್ನು ಹಾಗೂ ಅನಾರೋಗ್ಯದಿಂದ ನರಳುವ ನಾದಿನಿಯ ಜೊತೆ ಪಾರ್ಕಿನಲ್ಲಿ ಬಿಟ್ಟು ಸಿನಿಮಾಗೆ ತಯಾರಾದ ಪತ್ನಿಯನ್ನು ನಿರಾಸೆಗೊಳಿಸುವುದರ ಹಿಂದೆ ಮಕ್ಕಳ ಮೇಲೆ ತಂದೆಯ ಹೊಣೆಗಾರಿಕೆಯನ್ನು ಕಾಣುತ್ತೇವೆ. ಹೀಗೆ ಇಲ್ಲಿ ಕುಟುಂಬದ ಸ್ವಾಸ್ಥತೆ ತಂದೆ ತಾಯಿಗಳು ಅದರಲ್ಲೂ ತಂದೆ ತನ್ನ ಕರ್ತವ್ಯ ಮರೆತರೂ ತಾಯಿ ಮಕ್ಕಳ ಹೊಣೆಯನ್ನು ಜಾಗರೂಕತೆಯಿಂದ ನಿರ್ವಹಿಸಬೇಕಾದದ್ದು ಅತ್ಯಾವಶ್ಯಕವಾಗಿದೆ. ಇದೇ ಸಮಸ್ಯೆಯನ್ನು ಒಳಗೊಂಡ ಮತ್ತೊಂದು ಕುಟುಂಬ ಗೌರಿಯದು. ಇಲ್ಲಿ ಶಿಕ್ಷಣ, ಉದ್ಯೋಗದ ಆಕಾಂಕ್ಷೆಯಿಂದ ನಗರದ ಚಿಕ್ಕಮ್ಮನ ಮನೆಯಲ್ಲಿ ವಾಸಿಸುವ ಮಗ ವಸಂತ. ಅಲ್ಲಿ ಚಿಕ್ಕಮ್ಮನ ಮನೆಯಲ್ಲಿ ತನ್ನ ಸಾಧನೆಗೆ ಪ್ರತಿಕೂಲವಾದ ವಾತಾವರಣವಿರದೆ ತನ್ನ ಸಾಧನೆಯಲ್ಲಿ ವಿಫಲಗೊಳ್ಳುವ ಶಂಭುವಿನ ನಿರ್ಧಾರದ ಹಿಂದೆ ರಕ್ತಸಂಬಂಧಗಳ ನಡುವಿನ ಬಾಂಧವ್ಯದ ಸಡಿಲಿಕೆಯನ್ನು ಸೂಚಿಸುವ ಮುಖಾಂತರ ಮಕ್ಕಳ ಅಭಿವೃದ್ಧಿ ಅದು ತಾಯಿಯ ಕುಟುಂಬದಲ್ಲಿ ಎಂಬಂತೆ ಬಿಂಬಿಸಲಾಗಿದೆ. ಇಲ್ಲಿನ ಕಿರಿಯ ತಲೆಮಾರಿನವರು ತಮ್ಮ ದುಃಖವನ್ನು ಹೆತ್ತವರ ಹತ್ತಿರ ತೋಡಿಕೊಳ್ಳಲಾಗದ ಸೂಕ್ಷ್ಮಮತಿಯವರು. ಅದರೆ ಇದಕ್ಕೆ ವಿರುದ್ಧವಾದ ಮತ್ತೊಂದು ಕುಟುಂಬ ಲಕ್ಷ್ಮಿಯದು. ಇಲ್ಲಿ ಮಧ್ಯಮವರ್ಗದ ಮನೆತನದಲ್ಲಿ ಬದುಕುವ ವೃತ್ತಿನಿರತ ಗಂಡ ತನ್ನ ವೃತ್ತಿಯ ನಿಮಿತ್ತ ಪತ್ನಿ ಮಕ್ಕಳನ್ನು ಬಿಟ್ಟು ಬೇರೆ ಸ್ಥಳದಲ್ಲಿ ಒಂಟಿಯಾಗಿ ಬದುಕುವುದು ಅನಿವಾರ್ಯ. ಈ ಸಂದರ್ಭದಲ್ಲಿಯೂ ಹೆಣ್ಣು ಪತ್ನಿಯಾಗಿ ಹೆಚ್ಚು ತಲ್ಲಣಗೊಳ್ಳುತ್ತಾಳೆ. ಇಲ್ಲಿ ಉದ್ಯೋಗದ ಸಲುವಾಗಿ ಮಕ್ಕಳ ಜವಾಬ್ದಾರಿಯಿಂದ ನುಣುಚಿಕೊಂಡ ಗಂಡ ಪತ್ನಿಯ ದೈಹಿಕ ಸುಖದಿಂದ ವಂಚಿತನಾಗಲಾರ. ಇಲ್ಲಿ ಪತ್ನಿಯಾಗಿ ಹೆಣ್ಣು ಗಂಡ-ಮಕ್ಕಳ ಆಸೆ ಆಕಾಂಕ್ಷೆಗಳನ್ನು ಈಡೇರಿಸುವುದು ಅನಿವಾರ್ಯ. ಹೀಗಾಗಿ ಲಕ್ಷ್ಮಿ

ಗಂಡನ ಇಚ್ಛೆಯಂತೆ ಅವನ ದೈಹಿಕ ಕಾಮನೆಯನ್ನು ಪೂರೈಸಲು ಮಕ್ಕಳನ್ನು ಬಿಟ್ಟು ಪತಿಯಿರುವಲ್ಲಿ ಹೋಗುವುದು ಅನಿವಾರ್ಯವಾಗಿದೆ. ಲಕ್ಷ್ಮೀ ತನ್ನ ಈ ವರ್ತನೆಯಿಂದ ತನ್ನ ಮಕ್ಕಳ, ಬಂಧುಗಳ ಹಾಗೂ ಸಮಾಜದ ನಿಂದನೆಗೆ ಹಾಗೂ ಮಕ್ಕಳ ಅಪಹಾಸ್ಯಕ್ಕೆ ಗುರಿಯಾಗುತ್ತಾಳೆ. ಹೀಗೆ ಇಲ್ಲಿ ಹೆಣ್ಣು ತಾಯಿಯಾಗಿ ತನ್ನ ಕರ್ತವ್ಯದಿಂದ ಸ್ವಲ್ಪ ಆಚೆ ಈಚೆ ಸರಿದರೂ ಕುಟುಂಬದ ಮೇಲೆ ಆಗುವ ಅಗಾಧ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಇಲ್ಲಿ ತಾಯಿ ತನ್ನ ಮನೆಕೆಲಸವನ್ನು ಅನಿವಾರ್ಯ ಕಾರಣಗಳಿಂದ ದೂರ ಸರಿಸಿದಾಗ ಆ ಹೊಣೆಗಾರಿಕೆ ಸಹಜವಾಗಿ ಹಿರಿಯ ಮಗಳ ಮೇಲೆ ಬೀಳುತ್ತದೆ. ತಾಯಿಯ ಈ ವರ್ತನೆ ಮಗಳಿಗೆ ಅಸಮಾಧಾನವನ್ನು ತಂದಿದೆ. ಇಲ್ಲಿ ತಾಯಿ ಮಕ್ಕಳ ಮೇಲಿನ ಮಮತೆಯಿಂದ ಗಂಡನಲ್ಲಿಗೆ ಹೋಗುವುದನ್ನು ತಡೆಯುತ್ತಾಳೆ. ಅದರ ಪರಿಣಾಮವಾಗಿ ಲಕ್ಷ್ಮಿಯ ಗಂಡ ಮತ್ತೊಂದು ಹೆಣ್ಣಿನ ಸಹವಾಸವನ್ನು ಮಾಡುತ್ತಾನೆ. ಇಲ್ಲಿ ಹೆಣ್ಣು ಪತ್ನಿಯಾಗಿ, ತಾಯಿಯಾಗಿ ಲಕ್ಷ್ಮಿ ವಿವರಿಸುವಂತೆ ಗಂಡ ಮತ್ತೊಂದು ಹೆಣ್ಣಿನ ಸಾಂಗತ್ಯವನ್ನು ನೋಡುತ್ತೇವೆ. ಹಾಗೆ ಇಲ್ಲಿ ಹೆಣ್ಣು ತಾಯಿಯಾಗಿ, ಪತ್ನಿಯಾಗಿ ತನ್ನ ಸೇವೆಯಿಂದ ಸ್ವಲ್ಪ ವ್ಯತ್ಯಾಸವಾದರೂ ಅಗಾಧವಾದ ಪರಿಣಾಮವನ್ನು ಎದುರಿಸುವಂತಾಗುತ್ತದೆ. ಆದರೆ ಈ ಪರಿಣಾಮ ಅವಳ ಗಂಡಸಿನಲ್ಲಿ ಕಾಣಲಾಗುವುದಿಲ್ಲ. ಹೀಗೆ ಹೆಂಗಸು ತನ್ನ ಜವಾಬ್ದಾರಿಗಳನ್ನು ನಿಷ್ಠೆಯಿಂದ ನಿಭಾಯಿಸುವುದು ಅನಿವಾರ್ಯ. ಹೀಗೆ ಮಕ್ಕಳ ಹಾಗೂ ಗಂಡನ ಸೇವೆಯನ್ನು ಸಮನಾಗಿ ನಿಭಾಯಿಸುವಲ್ಲಿ ಸೋಲುತ್ತಾಳೆ. ಇದು ಅವಳ ಕುಟುಂಬದ ಶಿಥಿಲತೆಗೆ ಕಾರಣವಾಗುತ್ತದೆ. ಲಕ್ಷ್ಮಿ ಅಪಹಾಸ್ಯಕ್ಕೆ ಗುರಿಯಾದರೂ ಗಂಡನನ್ನು ಬಿಟ್ಟು ಹೋದರೂ ಕೂಡ ಮಗಳ ಕುಟುಂಬದ ಸ್ವಾಸ್ಥ್ಯ ಕೊನೆಗೂ ವಿಫಲಗೊಳ್ಳುತ್ತದೆ.

ಮತ್ತೊಂದು ಕುಟುಂಬ ಜಯಾಳದು. ಜಯಾ ಪತ್ನಿಯಾಗಿ ತನ್ನ ಸೇವೆ ನಿರ್ವಹಿಸುವಳು. ಈ ಹೆಣ್ಣಿಗೆ ತಾಯಿಯಾಗಿ, ಪತ್ನಿಯಾಗಿ ಇರುವಂತೆ ಒಂದು ಮನೆಯ ಆವರಣವನ್ನು ಗಂಡ ಸೃಷ್ಟಿಸಿದ್ದಾನೆ. ಈ ಆವರಣದಲ್ಲಿ ಈಕೆ ಬಂಧಿತಳು. ಇವಳಿಗೆ ಸ್ವೇಚ್ಛೆಯಿಂದ ಈ ಮನೆಯ ಆವರಣವನ್ನು ದಾಟಿ ಹೋಗಲು ಗಂಡನಿಂದ ನಿರ್ಬಂಧವಿದೆ. ಈ ಮನೆಯ ಚೌಕಟ್ಟಿನೊಳಗೆ ತನ್ನ ಸ್ನೇಹಿತರನ್ನು ಮಾತನಾಡಿಸಲು ಅವಕಾಶವಿದೆ. ಗಂಡ ಹೆಚ್ಚು ಗಂಭೀರನಾಗಿದ್ದು ಪತ್ನಿಯ ಭಾವನೆಗಳನ್ನು ಲೆಕ್ಕಿಸದ ಹುಂಬತನದವನು. ಪತಿಯ ಮೌನ ಜಯಾಳಲ್ಲಿ ಏಕಾಂತತೆಯನ್ನು ಅನುಭವಿಸುವಂತೆ ಮಾಡುತ್ತದೆ. ಹಾಗೆ ತನ್ನ ಈ ಅಶಾಂತತೆಯನ್ನು ಸಮವಯಸ್ಕರೊಡನೆ ಹೋಲಿಸಿ ಅಂದರೆ ತನ್ನ ಮನೆಕೆಲಸದಾಕೆ ಗಂಗ ಗಂಡನ ಕುಡಿತದಿಂದ ಬೇಸತ್ತು ಸಂಸಾರ ತೂಗಿಸಲು ಮೈಮಾರಿ ಬದುಕುವ ಬವಣೆಯನ್ನು ಹಾಗೂ ನೆರೆಮನೆಯ ಸ್ನೇಹಿತೆ ದೇಹದ ನ್ಯೂನತೆಯಿಂದ ನರಳುವ ಜೀವನದ ಪರಿಚಯ ಜಯಾಳಲ್ಲಿ ಬದುಕಿನ ವಾಸ್ತವತೆಯನ್ನು

ಕಣ್ತೆರೆದು ನೋಡುವಂತೆ ಮಾಡುತ್ತದೆ. ಹೀಗೆ ಮನೆಯಲ್ಲಿ ಎಲ್ಲಾ ಅನುಕೂಲತೆಯಿದ್ದರೂ ಗಂಡನ ಆತ್ಮೀಯತೆಯ ಕೊರತೆಯಿಂದ ತಲ್ಲಣಗೊಂಡಳು.

'ವಿಕೃತ' ಕಥೆಯಲ್ಲಿ ಕೆಳಜಾತಿಯ ಹೆಣ್ಣು ವೈದಿಕ ಮನೆತನದ ಸೊಸೆಯಾಗಿ ಬದುಕುವ ಜೀವನವನ್ನು ನಿರೂಪಿಸುತ್ತದೆ. ಇಲ್ಲಿ ವೃಂದಾ ಮೇಲುಜಾತಿಯ ಗೋಪಾಲನನ್ನು ವಿವಾಹವಾಗಲು ಈ ಮನೆಯವರ ಸಮ್ಮತಿಯಿದೆ. ಅವಕಾಶ ಕಲ್ಪಿಸಿದೆ. ಹೀಗೆ ಇಲ್ಲಿ ಪತ್ನಿಯಾಗಿ ವೃಂದಾ ಗಂಡನ ಮನ ಗೆದ್ದಳು. ಆದರೆ ಗಂಡನ ಬಳಗದ ಅಜ್ಜಿ, ವಾಸುಮಾಮರ ಅಸಹನೆಯನ್ನು ಎದುರಿಸಬೇಕಾಗುತ್ತದೆ. ಇವಳಿಗೆ ಅಡುಗೆ ಕೋಣೆ, ದೇವರ ಕೋಣೆಗೆ ಪ್ರವೇಶವಿಲ್ಲ. ಹೀಗೆ ಸೀಮಿತ ಸ್ಥಳಾವಕಾಶದಲ್ಲಿ ತನ್ನ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಆದರೆ ಇದಕ್ಕೆ ವಿರುದ್ಧವಾಗಿ ಅವಳ ಅತ್ತೆ ಸೊಸೆಯಲ್ಲಿ ಹೆಚ್ಚು ಸಹಾನುಭೂತಿಯನ್ನು ತೋರುತ್ತಾಳೆ. ಹೀಗೆ ಸೊಸೆಯಾಗಿ ಅವರ ಆಣತಿಯಂತೆ ಭಯದಲ್ಲಿ ಬದುಕುವ ವೃಂದಾಗೆ ಅತ್ತೆ, ಗಂಡನ ಪ್ರೀತಿ ವಾತ್ಸಲ್ಯ ಅವಳ ಎಲ್ಲ ನೋವನ್ನು ಮರೆಸುತ್ತಿತ್ತು. ಆದರೆ ಅತ್ತೆ–ಸೊಸೆಯ ಅನ್ಯೂನ್ಯತೆಯನ್ನು ಕಂಡು ಅಸೂಯೆಪಡುವ ವಾಸುಮಾವ "ಅಕ್ಕನಿಗೂ ಹುಚ್ಚು ಹಿಡಿಯಿತಾ? ಇದು ಬ್ರಾಹ್ಮಣರ ಮನೆ ಅಂತ ಯಾರು ಹೇಳ್ತಾರೆ? ನಾಯಿಯಲ್ಲಿ ಪ್ರೀತಿ ಇದ್ರೆ ಇನ್ನೊಂದಿಷ್ಟು ಊಟ ಹಾಕು... ಕಳ್ಳರ ಹೆದರಿಕೆ ಇದ್ರೆ ಹಿತ್ತಲಲ್ಲಿ ಕಟ್ಟು... ಯಾವುದನ್ನು ಎಲ್ಲಿಡಬೇಕೋ ಅಲ್ಲಿ ಇಡಬೇಕು. ಪ್ರೀತಿ ಅಂತ ತಲೆ ಮೇಲೆ ಇಟ್ಟುಕೊಂಡ್ರೆ ನಾಳೇ ತಲೆ ಏರಿ ಕೂತ್ರೆ ಹ್ಯಾಗೆ?"(ವಿಕೃತಿ, ಪು.೨೧) ಹೀಗೆ ಮಾವನ ಮಾತಿನ ಹಿಂದೆ ಅಸ್ಪೃಶ್ಯತೆಯ ಮನೋಭಾವನೆಯನ್ನು ಕಾಣಬಹುದು. ಈ ಮೂಲಕ ಕೆಳಜಾತಿಯ ವೃಂದಾಳಿಗೆ ಆ ಮನೆಯಲ್ಲಿ ದಕ್ಕಿರುವ ಸ್ಥಾನಮಾನವನ್ನು ನಿರೂಪಿಸುತ್ತದೆ. ಆದರೆ ವೃಂದಾ ತನ್ನ ಧಾರಣಾ ಶಕ್ತಿಯಿಂದ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಆ ಮನೆಯವರ ಮನ ಒಲಿಸಲು ಕಾರಣಳಾಗುತ್ತಾಳೆ. ಹೀಗೆ ಇಲ್ಲಿ ಹೆಣ್ಣು ಕುಟುಂಬದಲ್ಲಿ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಹೆಚ್ಚು ಸಹನೆಯಿಂದ ನಡೆದುಕೊಳ್ಳಬೇಕಾಗುತ್ತದೆ. ಆದರೆ ಇದಕ್ಕೆ ವಿರುದ್ಧವಾದ ಸ್ವಭಾವವನ್ನು ಬ್ರಾಹ್ಮಣ ಮಹಿಳೆ ಶಾಂತ(ಬಲಿ)ಳಲ್ಲಿ ಕಾಣಬಹುದು. ಕೆಳವರ್ಗದ ಪುರುಷನೊಂದಿಗೆ ವಿವಾಹವಾದ ಈ ಮಹಿಳೆ ಒಂದು ಮಗುವಿನ ತಾಯಿಯಾಗಿಯೂ ಆ ಮನೆಯ ಪರಿಸರಕ್ಕೆ ಹೊಂದಿಸಿಕೊಳ್ಳಲಾರದ ಸ್ವಭಾವ. ಕೊನೆಗೆ ಮಗಳಲ್ಲಿಯೂ ತಂದೆಯ ಸ್ವಭಾವವನ್ನು ಕಲ್ಪಿಸಿ ಆ ಮನೆಯ ಬಂಧನದಿಂದ ಬಿಡುಗಡೆಗೊಳ್ಳುವಳು. ಹೀಗೆ ಶಾಂತಳ ಪಲಾಯನವಾದಿ ವರ್ತನೆಗೆ ಕಾರಣವನ್ನು ಅವಳ ಸೋದರತ್ತೆ ವಿವರಿಸುವಂತೆ ಮಲತಾಯಿಯ ಹಿಂಸೆ ಅವಳನ್ನು ಆಶ್ರಮವನ್ನು ಸೇರುವಂತೆ ಮಾಡಿತು. "ದಿನ ನಾಲ್ಕಾರು ಸಾರಿ ತಣ್ಣೀರು ಸ್ನಾನ. ಬೇಡಾ ಅಂದ್ರು ಕೇಳಲ್ಲ. ಎರಡು ದಿನ ಹಾಸಿಗೆಯಲ್ಲಿ ಮಲಗಿದ್ದು ನೆಪ.. ಮೊನ್ನೆ ಮಲಗಿದ್ದಾಗಿನಿಂದ ಏಳಲಿಲ್ಲ. ಹುಡುಗಿ ಹೋಗಿಬಿಟ್ಲು." ಹೀಗೆ ಶಾಂತಳ ಸ್ವಭಾವದ ಹಿಂದೆ ತನ್ನ ಜಾತಿಯ ಅಭಿಮಾನವನ್ನು ಬಿಡಲಾಗದೆ ಗಂಡನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗದೆ ಪಾಪಪ್ರಜ್ಞೆಯಲ್ಲಿ ತೊಳಲಾಡಿ ಆಕೆಗೆ ಸಾವಿನ ಅನಿವಾರ್ಯವಾಗುತ್ತದೆ.

ಗೀತಾ ಕುಲಕರ್ಣಿಯವರ ಕಥೆಗಳಲ್ಲಿ ಬರುವ ಸ್ತ್ರೀಯರು ವೈದಿಕ ಮನೆತನದವರು. ಇದಕ್ಕೆ ಪೂರಕವಾಗಿ ಕೆಳವರ್ಗದ ಮಹಿಳೆಯರು ಕಂಡುಬರುತ್ತಾರೆ. ಈ ಎಲ್ಲ ಮಹಿಳೆಯರು ನಗರ, ಗ್ರಾಮೀಣ ಪರಿಸರದಲ್ಲಿ ನೆಲೆಸಿದ್ದು ಮಧ್ಯಮವರ್ಗದರಾಗಿದ್ದಾರೆ. ಈ ಸಮಾಜದ ಮಹಿಳೆಯರು ತಮಗೆ ವಿಧಿಸಿರುವ ಪತ್ನಿ, ಗೃಹಿಣಿ, ತಾಯಿ, ಸೊಸೆ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವರು. ಇಲ್ಲಿನ ಬಹುಪಾಲು ತಾಯಂದಿರು ಅಕ್ಷರಸ್ಥರು. ಸಮಾಜದ ಹೊರಜಗತ್ತಿಗೆ ತೆರೆದುಕೊಂಡಿರುವ ಶಿಕ್ಷಕಿ, ದುಡಿವ ಸ್ತ್ರೀ ಪಾತ್ರಗಳು ಕಂಡುಬರುತ್ತವೆ. ಆದರೆ ಹೀಗೆ ಹೊರದುಡಿಮೆಗೆ ತಮ್ಮನ್ನು ತೊಡಗಿಸಿಕೊಂಡಿರುವ ಮಹಿಳೆಯರು ಗೃಹಕಾರ್ಯವನ್ನು ಅತ್ಯಂತ ಬದ್ಧತೆಯಿಂದ ನಿರ್ವಹಿಸಬೇಕು. ಅದರ ಸಾಧ್ಯತೆ ಬಾಧ್ಯತೆಗಳನ್ನು ಮಹಿಳೆ ಹೊರಬೇಕಾದದ್ದು ಅನಿವಾರ್ಯ. ತಾಯಿಯ ಪಾತ್ರವಾಗಿ ಗುರುತಿಸಿಕೊಳ್ಳುವ ಗೌರಿ(ಚಿನ್ನದ ಜಿಂಕೆಯಲ್ಲಿ), ರಾಧಾ(ಅವನನ್ನು ತಡೆಯಬೇಡಿ), ರುದ್ರಮ್ಮ(ಹಠ ಅರ್ಥವಾಯಿತು), ರಾಧಮ್ಮ(ಹಗಲು ಮಿಂಚು), ಸುಶೀಲಮ್ಮ(ಗೋಕರ್ಣದ ಯಾತ್ರೆಯ ನಂತರ), ಲಕ್ಷ್ಮಿ(ಉರಿ), ಶ್ರೀದೇವಿ, ರಾಧಮ್ಮ(ಮಂಥನ) ಇತ್ಯಾದಿ ಪಾತ್ರಗಳಲ್ಲಿ ಕಂಡುಬರುವ ಸ್ತ್ರೀಯರು ತಾಯಿಯಾಗಿ ಸಮಾಜ ವಿಧಿಸಿರುವ ಪಾತ್ರವನ್ನು ನಿರ್ವಹಿಸುವರು. ಈ ತಾಯಂದಿರು ಗಂಡುಮಗುವಿನಲ್ಲಿ ಹೆಚ್ಚು ವಾತ್ಸಲ್ಯ ಉಳ್ಳವರು. ಗಂಡುಮಗುವಿನ ಜನನದಿಂದ ಪತಿಯ ಬಗ್ಗೆ ನಿರಾಸಕ್ತಿಯನ್ನು ತೋರಿಸುವ ಮಹಿಳೆಯರಾಗಿ ಕಂಡುಬರುತ್ತಾರೆ. ಆರ್ಥಿಕ ಸಮಸ್ಯೆಯಿಂದ ಬಳಲುವ ಈ ತಾಯಂದಿರು ಗಂಡುಮಗುವಿಗೆ ವಾತ್ಸಲ್ಯ ನೀಡಲು ಹಕ್ಕುದಾರರೇ ಹೊರತು ಅವರ ಬದುಕಿನ ನಿರ್ಣಯಗಳು ತಂದೆಗೆ ಸಂಬಂಧಿಸಿದ್ದು. ಆದರೆ ಶ್ರೀಮಂತ ತಾಯಂದಿರು ಹೆಣ್ಣುಮಕ್ಕಳ ಮೇಲೆ ತಮ್ಮ ತೀರ್ಮಾನಗಳನ್ನು ಹೊರಿಸುವರು. ಮಗಳ ವೈವಾಹಿಕ ಜೀವನದಲ್ಲಿ ತಾಯಿ ನಿರ್ಧಾರ ಅಂತಿಮವಾಗಿರುತ್ತದೆ. ಗಂಡು ಮಗುವಿನ ಹಂಬಲ ಈ ಮಹಿಳೆಯರಿಗೆ ಸಾಮಾನ್ಯ. ಅದು ಸಾಧ್ಯವಾದಾಗ ಅದಕ್ಕೆ ಕಾರಣನಾದ ಪತಿಯನ್ನು ಮಾನಸಿಕವಾಗಿ ಹಿಂಸಿಸುವ ಸ್ತ್ರೀ ಪಾತ್ರವಾಗಿ ಸುವರ್ಣ(ಸುವರ್ಣ ಗ್ರೀನ್ ರೂಮ್). ಆದರೆ ಅತ್ತೆ(ವಿಕೃತ), ರಾಧಮ್ಮ(ಹರಿ ಅಧಿಕವಾಯಿತು) ಸ್ತ್ರೀ ಪಾತ್ರಗಳು ಅತ್ತೆಯಾಗಿಯೂ ಸೊಸೆಯಂದಿರಿಗೆ ತಾಯಿಯಂತೆ ಮಮತೆ ವಾತ್ಸಲ್ಯವನ್ನು ತೋರಿಸುವ ವಿಶಾಲ ಮನಸ್ಸುಳ್ಳವರು.

ಮೀನಾ(ಪಪಾನ ಕೊಟ್ಟು ಬಿಡೋಣ), ಲಲನಾ(ಗೋಕರ್ಣ ಯಾತ್ರೆಯ ನಂತರ), ಲಕ್ಷ್ಮಿ(ಉರಿ), ಜಯಾ(ತುಡಿತ), ಇತ್ಯಾದಿ ಹೆಂಗಸರು ಗೃಹಿಣಿಯಾಗಿ ಗಂಡನ ಇಚ್ಛೆಯಂತೆ ವರ್ತಿಸುತ್ತಾ ಮನೆಯ ಬಿಗಿ ಜೀವನದಲ್ಲಿ ಒಂಟಿತನದಿಂದ ನಲುಗುವ ಪಾತ್ರಗಳಾಗಿವೆ. ಇಲ್ಲಿ ಮೀನಾ ತನ್ನ ಸ್ನೇಹಿತೆಯ ಮಾತಿನಿಂದ ತನ್ನತನದ ಅರಿವನ್ನು ಪಡೆದುಕೊಂಡರೂ ಅದು ಕ್ಷಣಿಕ. ಮತ್ತೊಂದು ಮಗುವನ್ನು ಹೆರುವ ಮೂಲಕ, ತನ್ನ ಸೌಂದರ್ಯವನ್ನು

ಇಮ್ಮಡಿಗೊಳಿಸಿಕೊಳ್ಳುವಳು. ತನ್ನತನದ ಅಭಿಮಾನದಿಂದ ತಾಯ್ತನವನ್ನು ನಿರಾಕರಿಸಿದ ಸುಲೇಖಾ ಅಂತಿಮವಾಗಿ ತಾಯ್ತನಕ್ಕಾಗಿ ಕೊರಗುವ ಪಾತ್ರವಾಗಿ ಮೂಡಿಬಂದಿದೆ. ಹೀಗೆ ಇಲ್ಲಿ ಹೆಣ್ಣು ಪತ್ನಿಯಾಗಿ, ತಾಯಿಯಾಗಿ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವುದು ಮುಖ್ಯವಾಗಿ ಆ ಮೂಲಕ ನೆಮ್ಮದಿಯನ್ನು ಪಡೆಯುವ ಪಾತ್ರಗಳಾಗಿ ಮೂಡಿಬಂದಿದೆ. ಗೃಹಕೃತ್ಯ ಕಾರ್ಯಗಳಿಂದ ತಮ್ಮನ್ನು ಸಡಿಲಿಸಿಕೊಂಡು ಸ್ವಯಿಚ್ಛೆಯಂತೆ ಜೀವಿಸುವ ಬ್ರಾಹ್ಮಣ ಮಹಿಳೆಯರು ಹೊಣೆಗೇಡಿತನದ ಸ್ವಾರ್ಥಿ ಪಾತ್ರಗಳಾಗಿ ಕಂಡುಬರುತ್ತವೆ. ಇಲ್ಲಿ ಇವರ ವರ್ತನೆಗಳನ್ನು ಉಡಾಳತನದ ಸ್ವಭಾವಗಳಾಗಿ ಚಿತ್ರಿಸುವ ಲೇಖಕಿ ಆ ಮೂಲಕ ಹೆಣ್ಣು ಕುಟುಂಬಕ್ಕೆ ಹೆಚ್ಚು ಜವಾಬ್ದಾರಳು ಎಂಬುದನ್ನು ಬಿಂಬಿಸುತ್ತಾರೆ. ಅಜ್ಜಿ, ತಾಯಿ, ಮಗಳ ಪಾತ್ರಗಳಾಗಿ ಮೂರು ತಲೆಮಾರಿನ ನಾಯಕಿಯನ್ನು ಒಂದೇ ಎಂಬಂತೆ ಬಿಂಬಿಸುವ ಮೂಲಕ ಸುವರ್ಣ ಅಜ್ಜಿಯ, ತಾಯಿಯ ಪ್ರೀತಿ ವಾತ್ಸಲ್ಯವನ್ನು ಗಳಿಸಿದಳು. ಈ ಮೂಲಕ ವೈದಿಕ ಮನೆತನದ ಶಿಕ್ಷಣಕ್ಕಾಗಿ ಅವಕಾಶ ಮಾಡಿಕೊಂಡಿರುವುದು ಮಹತ್ವದ್ದಾಗಿದೆ. ಹೀಗಿರುವಾಗ ತನ್ನ ಸಾಧನೆಯಿಂದ ಪ್ರಭಾವ ಬೀರಿದ ಸುವರ್ಣ ಅನ್ಯಜಾತಿಯ ಪುರುಷನನ್ನು ತನ್ನ ಬದುಕಿನ ಸಂಗಾತಿಯಾಗಿ ಆಯ್ದುಕೊಂಡಳು. ಮೊಮ್ಮಗಳ ತೀರ್ಮಾನ ಅಜ್ಜಿ ಮತ್ತು ತಾಯಿ ರಾಧಮ್ಮನಿಗೆ ತಾವು ಬದುಕಿ ಗತಿಸಿದ ಜೀವನದ ಮರುವ್ಯಾಖ್ಯಾನ ಮಾಡಿಕೊಳ್ಳುವುದರ ಮೂಲಕ ಅಜ್ಜಿಯ ನೆಲೆಯಲ್ಲಿ ನಿಂತು "ನನ್ನ ಮಾತು ಕೇಳು... ನಿನ್ನೆಲ್ಲ ಬೇಸರ, ಕೋಪ ಕಟ್ಟಿಡು... ನಮ್ಮ ಮಗೂಗೆ ಏನು ಬೇಕು ಅದನ್ನು ನಾವು ಕೊಡಬೇಕು. ಹುಡುಗ ಬೇರೆ ಜಾತಿಯವನಾದ್ರೆ ಏನಾಯಿತು? ಅವನಲ್ಲಿಯ ರಕ್ತ ಮಾಂಸ ಎಲ್ಲ ನಮ್ಮಂತೆ ಅಲ್ವೆ, ಬಡತನ ಅವನ ಮೈಗಂಟಿಕೊಂಡಿದೆಯೋ? ಇದೆಲ್ಲ ಸಂಪತ್ತು ಯಾರಿಗೆ? ಸುವರ್ಣಾಗೆ ಸೇರಿದ್ದು. ಮುದುಕಿಗೆ ಬುದ್ಧಿಭ್ರಮಣೆಯಾಗಿದೆ ಎನ್ನಬೇಡ. ನೀನು ಒಪ್ಪುತ್ತೀಯಲ್ಲ."(ಪು.೮೦) ಎಂದ ಮಗಳನ್ನು ಒಪ್ಪಿಸುವ ಹಿಂದೆ ಅವರ ಬದುಕಿನ ನೊವುಗಳೇ ಅವರನ್ನು ಈ ತೀರ್ಮಾನಕ್ಕೆ ಬರುವಂತೆ ಪ್ರೇರೇಪಿಸಿತು. ಹೀಗೆ ಇಲ್ಲಿ ತಾಯಿಯು ಮಗಳ ಮೇಲೆ ಅಧಿಕಾರವಿರುವುದು ಸಹಜ. ಆದರೆ ಇಲ್ಲಿ ಅಜ್ಜಿ ಏಕಕಾಲದಲ್ಲಿ ಮಗಳನ್ನು, ಮೊಮ್ಮಗಳ ಮೇಲೆ ಅಧಿಕಾರ ಸಾಮಾನ್ಯವಾಗಿದ್ದು ಹಿರಿಯ ಅಜ್ಜಿಯಿಂದ ತೀರ್ಮಾನಗಳು ಅಂತ್ಯವಾಗುತ್ತದೆ. ಹೀಗೆ ಅಜ್ಜಿಯ ಪಾತ್ರವು ಆಧುನಿಕ ಪರಿಸರಕ್ಕೆ ತನ್ನನ್ನು ತಾನು ತೆರೆದುಕೊಳ್ಳುವ ಪ್ರಬುದ್ಧತೆಯನ್ನು ಕಾಣಬಹುದಾಗಿದೆ.

ಇಲ್ಲಿ ಸಾರ್ವಜನಿಕ ಸೇವೆಗಳಿಗೆ ತಮ್ಮನ್ನು ತೊಡಗಿಸಿಕೊಂಡ ಶಿಕ್ಷಕಿ, ಟೈಪಿಸ್ಟ್ ಪಾತ್ರಗಳಾಗಿ ಬರುವ ಸುಮತಿ(ಒಡೆದ ಘಂಟೆ), ವೃಂದಾ(ವಿಕೃತಿ) ಈ ಪಾತ್ರಗಳು ಹೊರಗಿನ ದುಡಿಮೆಯನ್ನು ಮನೆಯವರ ಒತ್ತಾಯದಿಂದ ಈ ಜವಾಬ್ದಾರಿಯನ್ನು ಹೊರುತ್ತಾಳೆ. ಹಾಗಾಗಿ ಮನೆಯ ಒಳ ಹಾಗೂ ಹೊರಗಿನ ಸೇವೆಯನ್ನು ನಿಭಾಯಿಸಿಕೊಂಡು ಹೋಗುವುದು ಅತ್ಯಂತ ಮುಖ್ಯವಾಗಿದೆ. ಇವರು ಹೊರಗಿನ ಕೆಲಸಗಳಿಂದ ನುಣುಚಿಕೊಂಡರೂ ಮನೆಯ ಒಳಗಿನ ಕಾರ್ಯಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಹೀಗೆ ಇಲ್ಲಿ ಹೊರಗಿನ

ಸೇವೆಯನ್ನು ಹೆಚ್ಚು ಹೊಣೆಗಾರಿಕೆಯಿಂದ ನಿಭಾಯಿಸಬೇಕಾಗಿದೆ. ಹೀಗೆ ಇಲ್ಲಿ ಆಧುನಿಕತೆಗೆ ತನ್ನನ್ನು ತಾನು ತೆರೆದುಕೊಂಡಿರುವ ಸ್ತ್ರೀಯರು ಶಿಕ್ಷಕಿಯಾಗಿ ತಾನು ಸೇವೆ ಸಲ್ಲಿಸುವ ಶಾಲೆಯಲ್ಲಿ ತನ್ನ ವಿದ್ಯಾರ್ಥಿಯ ರೂಪ, ವಿವಾಹದ ಸಂಗತಿ ತಿಳಿದು ಅಸೂಯೆ ಪಡುತ್ತಾಳೆ. ತನ್ನ ಕುರೂಪಿಯಾದ ಮಗಳಿಗೆ ಈ ಅವಕಾಶ ಒದಗಲಿಲ್ಲ ಎಂದು ಅಸೂಯೆಪಡುವ ಅಧ್ಯಾಪಕಿ ತನ್ನ ಸ್ವಭಾವವನ್ನು ಅರಿತು ಬದಲಾವಣೆಯನ್ನು ಕಾಣದೆ ಕುಟಿಲ ಪಾತ್ರವಾಗಿ ನಿರೂಪಿಸಲಾಗಿದೆ.

ಸಾಮಾನ್ಯವಾಗಿ ಗಂಡುಸಂತಾನ ವೈದಿಕ ಪರಂಪರೆಯಲ್ಲಿ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ಹೀಗೆ ಹೆಣ್ಣು ಗಂಡುಮಗುವನ್ನು ಪಡೆಯದೆ ಗಂಡನ ಮನೆಯಲ್ಲಿ ಹೆಚ್ಚು ಶೋಷಣೆಗೆ ಒಳಗಾಗುವುದು ಸಾಮಾನ್ಯ. ಹುಟ್ಟುವ ಮಗು ಗಂಡು–ಹೆಣ್ಣು? ಅದಕ್ಕೆ ಪುರುಷ ಸಂಪೂರ್ಣ ಹೊಣೆಗಾರ ಎಂದು ತಿಳಿದ ಆಧುನಿಕ ಮಹಿಳೆ ಸುವರ್ಣ(ಸುವರ್ಣ ಗ್ರೀನ್–ರೂಮ್)ತನಗೆ ಗಂಡುಮಗುವನ್ನು ನೀಡದ ಗಂಡನನ್ನು ತಿರಸ್ಕರಿಸುತ್ತಾಳೆ. ಆ ಮೂಲಕ ಗಂಡ, ಮಕ್ಕಳನ್ನು ಮಾನಸಿಕವಾಗಿ ಹಿಂಸಿಸುತ್ತಾ ಮನೆಯ ಅಶಾಂತಿಗೆ ಕಾರಣರಾಗುತ್ತಾರೆ.

ಲೇಖಕಿ ಗೀತಾ ಅವರು ಮೇಲ್ವರ್ಗದ ಮಹಿಳೆಯ ಬದುಕನ್ನು ಚಿತ್ರಿಸುವಂತೆ ಕೆಳವರ್ಗದ ಮಹಿಳೆಯರ ಬದುಕನ್ನು ಅನಾವರಣ ಮಾಡುತ್ತಾರೆ. ಕೆಳವರ್ಗದ ಮಹಿಳೆಯರಾದ ಈರಣ್ಣನ ತಾಯಿ(ಪಾತಾಳ), ನಾಗೂ(ಹಸಿವು), ವೃಂದಾ(ವಿಕೃತಿ) ಇತ್ಯಾದಿ ಪಾತ್ರಗಳು ಪಾವಿತ್ರ್ಯತೆಯನ್ನು ಉಳಿಸಿಕೊಂಡು ಗೌರವಯುತವಾಗಿ ಬದುಕಲು ಇಚ್ಛೆಪಟ್ಟವರು. ಇವರಿಗೆ ಬದುಕು ಮುಖ್ಯವಾಗಿ ಅನಾದಿ ಕಾಲದಿಂದ ಗಂಡಸರಿಗೆ ತನ್ನ ದೇಹವನ್ನು ಅನಿವಾರ್ಯವಾಗಿ ಒಪ್ಪಿಸುವ ಅಸಹಾಯಕತೆ ಕಂಡುಬರುತ್ತದೆ. ಆದರೆ ಇಲ್ಲಿ ನಾಗೂ ತಾನು ಕೆಲಸ ಮಾಡುವ ಮನೆಯ ಯಜಮಾನ ಉನ್ನತ ಜಾತಿಯಲ್ಲಿದ್ದು, ಪತ್ನಿಯಿಂದ ದೈಹಿಕ ಸಂಬಂಧ ಈಡೇರಿಸಿಕೊಳ್ಳಲಾರದೆ ಕೆಳವರ್ಗದ ಮಹಿಳೆ ನಾಗೂನಲ್ಲಿ ಸಂತೃಪ್ತಿಯನ್ನು ಪಡೆದುಕೊಂಡನು. ಇಲ್ಲಿ ನಾಗೂ ಸ್ವಇಚ್ಛೆಯಿಂದ ಒಡೆಯನಿಗೆ ತನ್ನ ದೇಹವನ್ನು ಒಪ್ಪಿಸಿದರೂ ಅದರ ಹಿಂದೆ ಯಜಮಾನನ ಅಂಗವಿಕಲತೆ ಕಾರಣವಾಗಿದೆ. ಹೀಗೆ ಯಜಮಾನನಿಗೆ ತನ್ನನ್ನು ಒಪ್ಪಿಸಿಕೊಂಡಿದ್ದು ಮಹಾ ಅಪರಾಧವಾಗಿ ಕಂಡು ಆ ಮನೆಯ ಮತ್ತೊಬ್ಬ ಅಡುಗೆ ಕೆಲಸಗಾರ ಶ್ರೀನಾಥ ಅವಳನ್ನು ಹಿಂಸಿಸುವ ಮೂಲಕ ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಾನೆ. ಈವರೆಗೆ ಆ ಮನೆಯ ಒಳಗೆ ಪ್ರವೇಶ ನಿರಾಕರಿಸಿದ ಅಡುಗೆಯವ ನಾಗೂಗೆ ಈಗ ಎಲ್ಲಾ ಸ್ಥಳಗಳಲ್ಲಿಯೂ ಮುಕ್ತವಾಗಿ ಪ್ರವೇಶಿಸುವ ಅವಕಾಶ ಒದಗಿಸಿದ. ಹೀಗೆ ಮೇಲ್ವರ್ಗದ ಪುರುಷರ ಸಣ್ಣತನವನ್ನು ಬಯಲು ಮಾಡುವ ಮೂಲಕ ಕೆಳವರ್ಗದ ಮಹಿಳೆ ಬದುಕಿಗೆ ಸಮಾಜ ಕಾರಣವಾಗುವುದನ್ನು ಕಥೆ ನಿರೂಪಿಸುತ್ತದೆ.

೩.೧೩. ಶಾಂತಾದೇವಿ ಕಣವಿ

ಸ್ತ್ರೀ–ಪುರುಷರು ಕೂಡಿ ಬದುಕುವ ಸರಳ ಕುಟುಂಬದ ಇವರ ಕಥೆಗಳಲ್ಲಿ ತಂದೆ–ತಾಯಿಯರ ಜೊತೆ ಕೂಡಿ ಬದುಕುವ ಕೂಡು ಕುಟುಂಬಗಳು ಹೆಚ್ಚಾಗಿವೆ. ಈ

ಕೂಡುಕುಟುಂಬದಲ್ಲಿ ಆ ಕುಟುಂಬದ ಹಿರಿಯ ಪುರುಷ ಅಧಿಕಾರಯುತ ಸ್ಥಾನವನ್ನು ಹೊಂದಿರುತ್ತಾನೆ. ಈತನ ತರುವಾಯ ಈ ಅಧಿಕಾರ ಸ್ಥಾನಮಾನ ಆ ಮನೆಯ ಗಂಡುಮಗನಿಗೆ ಲಭ್ಯವಾಗುತ್ತದೆ. ಹೀಗೆ ಇಲ್ಲಿ ಪಿತೃವಂಶೀಯ ಕುಟುಂಬ ಮುಂದುವರಿಯುತ್ತದೆ. ಇಲ್ಲಿ ತಂದೆಯ ಆಸ್ತಿ, ಅಧಿಕಾರ, ಸಂಪತ್ತು ಗಂಡುಮಗುವಿಗೆ ವರ್ಗಾವಣೆಯಾಗುವುದರಿಂದ ಇಂತಹ ಕುಟುಂಬದಲ್ಲಿ ಗಂಡುಮಕ್ಕಳು ಹೊಣಗೇಡಿತನದಿಂದ ವರ್ತಿಸುವುದು ಸಾಮಾನ್ಯವಾಗಿದೆ. ಹೀಗೆ ಇಲ್ಲಿ ಗಂಡುಮಗನಿಗಿರುವ ಪ್ರಾಶಸ್ತ್ಯದಿಂದ ಅವನಲ್ಲಿ ಉಡಾಳತನವು ಸಹಜವಾಗಿ ಮೈಗೂಡಿರುತ್ತದೆ. ಶ್ರೀಮಂತ ತಂದೆಯ ಗಂಡುಮಕ್ಕಳ ನಿರ್ಧಾರಗಳು ಆ ಕುಟುಂಬದ ಅಂತಿಮ ನಿರ್ಣಯಗಳಾಗಿರುತ್ತವೆ. ಇಂತಹ ಸ್ವಭಾವವನ್ನು ಒಳಗೊಂಡ ಚಂದ್ರಕಾಂತ(ಸ್ವರೂಪ ದರ್ಶನ) ರೂಪವತಿ ಹೆಣ್ಣಿನ ಹುಡುಕಾಟದಲ್ಲಿದ್ದು ತಾನು ಕಲ್ಪಿಸಿಕೊಂಡ ಹೆಣ್ಣು ಆ ರೂಪವನ್ನು ಕಾಣಲು ಹೊಂದಿಲ್ಲದಿದ್ದರೆ ನಿರಾಕರಿಸುವ ಸ್ವಭಾವದವನು. ಹೀಗೆ ರೂಪವತಿ ಹೆಣ್ಣನ್ನು ವಿವಾಹವಾದ ಚಂದ್ರಕಾಂತ ತನ್ನ ಪತ್ನಿಯಲ್ಲಿ ಆ ರೂಪವನ್ನು ಕಂಡು ಹಿಗ್ಗಿದ. ಆದರೆ ಆಕಸ್ಮಿಕವಾದ ಅವಘಡದಿಂದ ಪತ್ನಿ ಕುರೂಪಿಯಾದಾಗ ಅವಳನ್ನು ನಿರಾಕರಿಸುವನು. ಇಲ್ಲಿ ಕುಟುಂಬದಲ್ಲಿ ಹೆಣ್ಣು ತನ್ನ ಸ್ಥಾನವನ್ನು ನೆಲೆಗೊಳಿಸಲು ದೈಹಿಕ ಸೌಂದರ್ಯವನ್ನು ನಿರಂತರವಾಗಿ ಕಾಯ್ದುಕೊಳ್ಳುವುದು ಅನಿವಾರ್ಯವಾಗಿದೆ. ಹೀಗೆ ದೈಹಿಕ ನ್ಯೂನತೆಯಿಂದ ಗಂಡನ ತಿರಸ್ಕಾರಕ್ಕೆ ಒಳಗಾದ ಹೆಣ್ಣು ತಂದೆಯ ಆಶ್ರಯದಲ್ಲಿ ನೆಲೆಯನ್ನು ಕಾಣುವಳು. ತಂದೆಯ ಬಲದಿಂದ ಗಂಡನ ಮನೆ ಸೇರಿದ ಸುಶೀಲ(ಸ್ವರೂಪ ದರ್ಶನ) ಗಂಡನ ಮನದಲ್ಲಿ ಸ್ಥಾನವನ್ನು ಪಡೆಯುವುದು ದುರ್ಬಲವಾಗಿದೆ. ಗಂಡನ ಪ್ರೀತಿ, ವಿಶ್ವಾಸಗಳ ಕೊರತೆಯಿಂದ ಮಾನಸಿಕ ಯಾತನೆಗೆ ಒಳಗಾಗುವ ಇವಳಲ್ಲಿ ಅಸಹಾಯಕತೆಯಿದೆ. ಇಲ್ಲಿ ಹೆಣ್ಣು ಸ್ಫುರದ್ರೂಪಿ ಗಂಡುಮಗುವಿಗೆ ಜನ್ಮ ನೀಡುವ ಮೂಲಕ ಗಂಡನ ಮನದಲ್ಲಿ ಹಾಗೂ ಕುಟುಂಬದಲ್ಲಿ ಭದ್ರತೆಯ ನೆಲೆಯನ್ನು ಕಂಡಳು. ಆ ಮನೆಯ ಹಿರಿಯರಿಗೆ ಮಗನ, ಈ ವರ್ತನೆ ಅಹಿತಕರವಾಗಿ ಕಂಡರೂ ಗಂಡುಮಗುವಿನ ಮೇಲಿನ ಪ್ರೀತಿ ಅವರನ್ನು ಮೌನಿಗಳಾಗುವಂತೆ ಮಾಡುತ್ತದೆ. ಸುಶೀಲ ಗಂಡನ ಮನೆಯ ಮರುಪ್ರವೇಶಕ್ಕೆ ನಾದಿನಿ ಕಾರಣಳಾಗಿದ್ದಾಳೆ. ಹೀಗೆ ಇಲ್ಲಿ ನಾದಿನಿ ಅತ್ತಿಗೆಯ ಪರ ವಹಿಸಲು ತಾನು ಸಹ ತನ್ನ ಗಂಡನ ಮನೆಯಲ್ಲಿ ಗಂಡುಮಗುವಿನ ಹಂಬಲದಿಂದ ತಿರಸ್ಕಾರಕ್ಕೆ ಒಳಗಾಗಿರುವುದು ಒಂದು ಕಾರಣವಾಗಿದೆ. ಹೀಗೆ ಇಲ್ಲಿ ಪಿತೃಪ್ರಧಾನ ಕುಟುಂಬದಲ್ಲಿ ಹೆಣ್ಣು ಗಂಡನ ಮನೆಯಲ್ಲಿ ಅಸುರಕ್ಷಿತ ಬದುಕನ್ನು ಸಾಗಿಸುವ ಅನಿವಾರ್ಯಕ್ಕೆ ಒಳಗಾಗಿದ್ದಾಳೆ.

ಗೃಹಿಣಿಯ ದಿನನಿತ್ಯದ ಬದುಕನ್ನು ಕಥೆಯಿಂದ ಕಥೆಗೆ ಮುಂದುವರಿದಂತೆ ಕಾಣುತ್ತದೆ. ಇಂತಹ ಕೂಡುಕುಟುಂಬದಲ್ಲಿ ವಾಸಿಸುವ ಸರಸು(ದೂರದ ಗುಡ್ಡ) ಮೂರು ಮಕ್ಕಳ ತಾಯಿಯಾಗಿದ್ದು, ನಾಲ್ಕನೇ ಮಗುವನ್ನು ಒಡಲಲ್ಲಿ ಹೊಂದಿರುವಳು. ಹೀಗೆ ದೈಹಿಕವಾಗಿ ರಕ್ತಹೀನತೆಯಿಂದ ಬಳಲುವ ಗೃಹಿಣಿಗೆ ಮನೆಯ ಮಾವ, ಗಂಡ, ಮಕ್ಕಳು, ಬಸುರಿ

ನಾದಿನಿಯನ್ನು ಪೋಷಿಸುವ ಅನಿವಾರ್ಯತೆಯಿದೆ. ಬಸುರಿ ನಾದಿನಿಯ ಆಗಮನದಿಂದ ಅಣ್ಣನ ವಿವಾಹದ ಕರೆಯನ್ನು ಗಂಡ ನಿರಾಕರಿಸಿದಾಗ ಮರುಪ್ರಶ್ನಿಸದೆ ಒಪ್ಪಿಕೊಳ್ಳುವ ಅನಿವಾರ್ಯತೆಯಿದೆ. ಹೀಗೆ ಮನೆಯ ಅವಿರತ ದುಡಿಮೆಯಿಂದ ನರಳುವ ಗೃಹಿಣಿಯನ್ನು ತನ್ನತನದ ಪ್ರಶ್ನೆ ಕಾಡಿ ಆರ್ಥಿಕ ಸ್ವಾವಲಂಬನೆಯಿಂದ ಗೃಹಕೃತ್ಯದ ಜವಾಬ್ದಾರಿಗಳಿಂದ ಬಿಡುಗಡೆ ದೊರೆಯುವ ಆಶಾವಾದಿತನದಿಂದ ಇರುತ್ತಾಳೆ. ಆದರೆ ಗೆಳತಿಯ ಅವಿವಾಹಿತ ನೌಕರಿಯುತ ಬದುಕಿನ ದುಡಿಮೆಯನ್ನು ಕಂಡು ಗೃಹಿಣಿಯಾಗಿ, ತಾಯಿಯಾಗಿ ಹಾತೊರೆಯುವ ಗೆಳತಿಯ ಅಭದ್ರತೆಯನ್ನು ಕಂಡು ಊಹಿಸಿ ತಾನಿರುವ ಗೃಹಿಣಿ ಸ್ಥಾನದಲ್ಲಿ ಸಮಾಧಾನಗೊಳ್ಳದವಳು. ಹೀಗೆ ಹೆಣ್ಣು ವಿವಾಹದಿಂದ ಹಾಗೂ ವಿವಾಹವಿಲ್ಲದೆಯೂ ವಿವಾಹದ ಕೌಟುಂಬಿಕ ಹೊಣೆಗಾರಿಕೆಯನ್ನು ನಿಭಾಯಿಸುವುದು ಆದ್ಯ ಕರ್ತವ್ಯವೆಂಬಂತೆ ಬಿಂಬಿತವಾಗಿದೆ. ಇಲ್ಲಿ ಗೃಹಿಣಿ ಪ್ರಾರಂಭದ ದಿನಗಳಲ್ಲಿ ಗಂಡನ ಒಲುಮೆಯನ್ನು, ಆ ಪುರುಷನಿಂದ ದೊರೆಯುವ ಸಹಕಾರ, ಪ್ರೀತಿಯನ್ನು ಶಾಶ್ವತವಾಗಿ ಬಯಸುತ್ತಾಳೆ. ಆದರೆ ಗಂಡನಿಂದ ಸಹಕಾರ ಪ್ರೀತಿ ದೊರೆಯದೆ ಹೆಚ್ಚು ಮಾನಸಿಕ ಯಾತನೆಗೆ ಒಳಗಾಗುತ್ತಾಳೆ. ಹೀಗೆ ಸ್ತ್ರೀ-ಪುರುಷರು ಕೂಡಿ ಬದುಕುವ ಸರಳಕುಟುಂಬದಲ್ಲಿ ಹೆಣ್ಣು ಒಂಟಿತನವನ್ನು ಅನುಭವಿಸುವುದನ್ನು ಕಾಣುತ್ತೇವೆ. ಇಲ್ಲಿ ದೈಹಿಕವಾಗಿ ಬಳಲಿದ ಅಸ್ವಸ್ಥಳಾದ ಗೃಹಿಣಿಗೆ ಆ ಮನೆಯ ದಿನನಿತ್ಯ ಕೆಲಸಗಳು ಬೇಸರ ತರಿಸಿ ಇದರಿಂದ ಮತ್ತಷ್ಟು ಕೃಶಳಾಗಿ ಬಳಲುತ್ತಾಳೆ. ಹೆಣ್ಣು ವಿವಾಹದ ಪ್ರಾರಂಭದಲ್ಲಿ ಗಂಡನಿಂದ ಗೃಹಕೃತ್ಯಗಳಿಗೆ ಸಹಕಾರ ದೊರೆತು ದಿನಗಳು ಕಳೆದಂತೆ ಆ ಸಹಕಾರ ಗಂಡನಿಂದ ದೊರೆಯದಾದಾಗ ಹೆಚ್ಚು ಬಳಲುತ್ತಾಳೆ. ಹೀಗೆ ಸರಳಕುಟುಂಬದಲ್ಲಿ ಹೆಣ್ಣಿಗೆ ಬಂಧುಗಳ ಸಹಕಾರವಿಲ್ಲದೆ ಅನನುಕೂಲತೆಯನ್ನು ಅನುಭವಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಗಂಡನ ಹೊಸ ಪ್ರೇಮವನ್ನು ಅನಾವರಣ ಮಾಡುತ್ತದೆ. ಇಲ್ಲಿ ತಾಯಿ ಕೃಶಳಾದಾಗ ಆ ಮನೆಯ ಹಿರಿಮಗಳು ತಾಯಿಯಾಗಿ ಆ ಗೃಹಕೃತ್ಯಗಳ ಹೊಣೆಗಾರಿಕೆಯನ್ನು ನಿಭಾಯಿಸುವ ಮೂಲಕ ತಾಯಿಯ ಭಾರವನ್ನು ಕಡಿಮೆ ಮಾಡುವ ಹೆಣ್ಣಿನ ಸಹಜ ವಾತ್ಸಲ್ಯ ಇಲ್ಲಿದೆ. ಇದೇ ಪಾತ್ರವನ್ನು ಹೋಲುವ 'ಗೃಹಿಣಿ' ಕಥೆಯ ಅನ್ನಪೂರ್ಣ ಗೃಹಿಣಿಯಾಗಿ, ತಾಯಿಯಾಗಿ, ಅತ್ತೆಯಾಗಿ ತನ್ನ ಕರ್ತವ್ಯವನ್ನು, ಸೇವೆಯನ್ನು ಚಾಚೂ ತಪ್ಪದೆ ನಿರ್ವಹಿಸುವ ಮೂಲಕ ಆ ಕುಟುಂಬದ ಗಂಡ, ಮಗ, ಸೊಸೆಗೆ ಪ್ರೀತಿಪಾತ್ರಳಾಗಿ ಕಂಡುಬರುತ್ತಾಳೆ. ಮನೆಯ ಇತರ ಸದಸ್ಯರ ಸುಖದಲ್ಲಿ ತನ್ನ ಸುಖವನ್ನು ಕಾಣಬಯಸುವ ಅನ್ನಪೂರ್ಣ ಸಮಾಜನಿರ್ಮಿತ ಪಾತ್ರವಾಗಿ ಕಂಡುಬಂದರೂ ಸಾತ್ವಿಕ ಪಾತ್ರವಾಗಿ ಕಂಡುಬರುತ್ತಾಳೆ. ಈ ಹಿನ್ನೆಲೆಯಲ್ಲಿ ಕುಟುಂಬದ ಭದ್ರತೆಗೆ, ಸುರಕ್ಷತೆಗೆ ಹೆಣ್ಣು ಹೆಚ್ಚು ನಿಷ್ಠೆಯನ್ನು ತೋರಬೇಕಾದದ್ದು ಅನಿವಾರ್ಯ. ಇಲ್ಲಿನ ಸುಶಿಕ್ಷಿತ ಗೃಹಿಣಿಯರು ಹೆಚ್ಚು ಸ್ವಾವಲಂಬಿಗಳಾಗಿದ್ದಾರೆ. ಈ ಸ್ವಾವಲಂಬಿತನವನ್ನು ಗಂಡನಲ್ಲಿ ನೆಲೆಗೊಳಿಸಲು ಪ್ರಯತ್ನಿಸುವರು. ಗಂಡುಮಕ್ಕಳು ತಂದೆಯ ಒಕ್ಕಲುತನದಲ್ಲಿ

ಬದುಕುವುದು ಸಹಜವಾಗಿದೆ. ಆದರೆ ತನ್ನ ಗಂಡ ಸ್ವತಂತ್ರವಾಗಿ ಬದುಕುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾಳೆ. ಹೀಗೆ ತಂದೆಯ ಪಿತ್ರಾರ್ಜಿತ ಆಸ್ತಿಯ ಬಗ್ಗೆ ಒಲುಮೆಯುಳ್ಳ ಗಂಡ ಅದನ್ನು ತೊರೆದು ಸ್ವತಂತ್ರ ಬದುಕನ್ನು ಬಾಳಲು ಇಚ್ಛಿಸದೆ ಪಲಾಯನವಾದಿಯಾಗಿ ಬದುಕುತ್ತಾನೆ. ಈ ಸನ್ನಿವೇಶದಲ್ಲಿ ಹೆಣ್ಣು ವಿಚಲಿತಳಾಗದೆ ಮಗಳ ಜವಾಬ್ದಾರಿಯನ್ನು ತಾನೆ ಹೊತ್ತು ಕರ್ತವ್ಯವನ್ನು ನಿಭಾಯಿಸುವಳೇ ಹೊರತು ಧೃತಿಗೆಡುವುದಿಲ್ಲ. ಪತ್ನಿಯ ಹಠದಿಂದ ಬಿರುಕುಗೊಂಡ ಸಂಬಂಧಗಳು ಪತ್ನಿಯ ಮರಣಾನಂತರ ಮಗಳ ಜೊತೆಯಲ್ಲಿ ಬೆಸೆದುಕೊಂಡಿದೆ. ಹೀಗೆ ವಿಶ್ವನಾಥನ ಆತ್ಮಾವಲೋಕನದಲ್ಲಿ ಸ್ತ್ರೀಯ ನಿಲುವನ್ನು ಸೂಚಿಸುವುದರ ಮೂಲಕ ತಂದೆಯ ಪಿತ್ರಾರ್ಜಿತ ಆಸ್ತಿಯನ್ನು ಮಗಳಿಗೆ ವರ್ಗಾವಣೆ ಮಾಡಿ ಹೋಗುವ ತಂದೆಯ ನಿರ್ಧಾರದಲ್ಲಿ ತಾನು ಮಾಡಿದ ತೀರ್ಮಾನದ ಬಗ್ಗೆ ಸಂತೃಪ್ತಿ ಹಾಗೂ ಮಗಳ ಮೇಲಿನ ಪ್ರೀತಿ ಹೊಂದಿದಂತೆ ಕಂಡುಬರುತ್ತದೆ.

ಇಂತಹದೇ ಮತ್ತೊಂದು ಕುಟುಂಬ ಸುಶೀಲಾಳದು. ಗಂಡನಿಲ್ಲದ ತಾಯಿ ಮಕ್ಕಳಿರುವ ಮಧ್ಯಮವರ್ಗದ ಕುಟುಂಬವಿದು. ಇಲ್ಲಿ ತಾನು ಪಡೆದ ಶೈಕ್ಷಣಿಕ ಸಾಧನೆಯನ್ನು ವಾಸ್ತವ ಬದುಕಿನಲ್ಲಿ ಅಣಿಗೊಳಿಸಲು ತೀರ್ಮಾನಿಸಿದ ಮಧ್ಯಮ ವಯಸ್ಸಿನ ಮಹಿಳೆ ಸಮಾಜದಲ್ಲಿ ವರದಕ್ಷಿಣೆ ವಿರೋಧಿಸುವ ಪತಿಯನ್ನು ವಿವಾಹವಾಗುವ ಇಚ್ಛೆಯುಳ್ಳವಳು. ಈ ಕಾರಣದಿಂದ ವಿವಾಹದ ದಿನಗಳನ್ನು ಮುಂದೆ ಹಾಕುವಳು. ತಾನು ಪಡೆದ ನೌಕರಿಯಿಂದ ತನ್ನ ತೀರ್ಮಾನಗಳಿಗೆ ಬದ್ಧವಾಗಿ ಆ ಮನೆಯ ಪೋಷಕರ ನಿರ್ಣಯಗಳನ್ನು ವಿರೋಧಿಸಿದಳು. ತನ್ನ ನಿರ್ಣಯಗಳಿಂದ ಆ ಮನೆಮಂದಿಯ ನಿರ್ಲಕ್ಷ್ಯಕ್ಕೆ ಗುರಿಯಾದಳು. ಹೀಗೆ ಇಲ್ಲಿ ವಿವಾಹವಾಗದ ಹೆಣ್ಣು ಸ್ವಂತ ಮನೆಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾಳೆ. ತನ್ನ ಇಚ್ಛೆಯಂತೆ ಸಮಾನ ಶಿಕ್ಷಣವಂತ ನೌಕರಸ್ಥ ಅನ್ಯಜಾತಿಯ ಸಂಗಾತಿಯನ್ನು ಪೋಷಕರ ವಿರೋಧದಲ್ಲಿಯೂ ವಿವಾಹವಾಗುತ್ತಾಳೆ. ಹೀಗೆ ತನ್ನ ಸ್ವಂತ ಆಯ್ಕೆಯಿಂದ ಸಂಗಾತಿಯನ್ನು ವಿವಾಹವಾದ ಮಹಿಳೆ ಆ ಗಂಡನ ಮನೆಯಲ್ಲಿ ಸ್ವಂತ ಆಸೆ-ಆಕಾಂಕ್ಷೆಗಳಿಗೆ ಬೆಲೆಯಿಲ್ಲದೆ ಗಂಡನ ತೀರ್ಮಾನಗಳಿಗೆ ಬದ್ಧವಾಗಿ ಬದುಕನ್ನು ಸಾಗಿಸುತ್ತಾಳೆ. ಗಂಡನ ಜಿಪುಣತನದಿಂದ ತಾಯಿ-ಮಕ್ಕಳಿಗೆ ಬದುಕು ಸಾಧ್ಯವಾಗದಾಗ ಅದನ್ನು ಪ್ರತಿಭಟಿಸುತ್ತಾಳೆ. ಇಲ್ಲಿ ಸ್ವಂತ ದುಡಿಮೆ ಮಾಡುವ ಮಹಿಳೆ ತನ್ನ ಸಂಬಳವನ್ನು ಆ ಕುಟುಂಬದ ಯಜಮಾನನಿಗೆ ಒಪ್ಪಿಸುವುದು ಅನಿವಾರ್ಯವಾಗಿದೆ. ಗಂಡನ ತೀರ್ಮಾನಗಳನ್ನು ವಿರೋಧಿಸಿ ಪರಿತ್ಯಕ್ತಳಾಗಿ ಬದುಕನ್ನು ಸಾಗಿಸುತ್ತಾಳೆ. ಹೀಗೆ ಕುಟುಂಬವನ್ನು ತೊರೆದ ಮಹಿಳೆ ಮಕ್ಕಳ ಹೊಣೆಗಾರಿಕೆಯನ್ನು ಅತ್ಯಂತ ಜಾಗರೂಕತೆಯಿಂದ ನಿಭಾಯಿಸುತ್ತಾಳೆ. ತನ್ನ ಆರ್ಥಿಕ ಸ್ವಾವಲಂಬನೆಯಿಂದ ಆ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸಿದರೂ ಹೆಣ್ಣುಮಕ್ಕಳ ವಿವಾಹ ಮಾಡುವ ತನ್ನ ಕರ್ತವ್ಯವನ್ನು ನಿಭಾಯಿಸುವಲ್ಲಿ ಅಶಕ್ತಳಾಗುತ್ತಾಳೆ. ಹೀಗೆ ಗಂಡನ ಸಹಕಾರವಿಲ್ಲದೆ, ಸಮಾಜವನ್ನು ಎದುರಿಸಲಾಗದೆ ತವರಿನ ಅಣ್ಣನ ನೆರವನ್ನು

ಪಡೆಯುವ ಹಂಬಲವುಳ್ಳವಳು. ತನ್ನ ಪ್ರೇಮವಿವಾಹದಿಂದ, ಗಂಡ ಬದುಕುವ ಸಮಾಜದಿಂದ ಅವಗಣನೆಗೆ ಒಳಗಾಗಿ ಪಶ್ಚಾತ್ತಾಪ ಪಡುತ್ತಾಳೆ.

'ಹಿಂಬಿಡದ ಗಾಯ' ಕಥೆಯು ಕೆಳವರ್ಗದ ಸಂಕೀರ್ಣ ಕುಟುಂಬಗಳನ್ನು ಪ್ರತಿನಿಧಿಸುತ್ತದೆ. ಇಲ್ಲಿ ನಾಗಣ್ಣ ಎಂಬ ಯುವಕ ನೌಕರನಾಗಿದ್ದು ತನ್ನ ಮಲತಾಯಿಯ ಮಗಳು ನೀಲಾಳನ್ನು ವಿವಾಹವಾಗುವ ತೀರ್ಮಾನ ಆ ಮನೆಯ ನೆಮ್ಮದಿಯನ್ನು ಕದಡಲು ಕಾರಣವಾಗಿತ್ತು. ಈ ವಿವಾಹಕ್ಕೆ ತಂದೆ-ತಾಯಿ ವಿರೋಧದಿಂದ, ಹಿರಿಮಗನ ತೀರ್ಮಾನದಿಂದ ಬೇಸತ್ತು ತಾವೇ ಹಿರಿಮಗನನ್ನು ಕರೆದುಕೊಂಡು ಆ ಮನೆಯನ್ನು ತ್ಯಜಿಸಿದರು. ಇತ್ತ ಗಂಡನ ಪಲಾಯನದಿಂದ ದುಂಡವ್ವ ಹೆಚ್ಚು ಕಳವಳಗೊಂಡಳು. ಮಗಳ ವಿವಾಹಕ್ಕಾಗಿ ವಿಧುರ ಹೀರ್ಯಾನನ್ನು ವಿವಾಹವಾದಳು. ಆದರೆ ಅವನ ಪಲಾಯನವಾದಿತನ ಅವಳನ್ನು ವಿಚಲಿತಗೊಳಿಸಿತು. ಇಲ್ಲಿ ಗಂಡನ ಹೊರತು ತನ್ನ ಹೊಲದ ದುಡಿಮೆಯಿಂದ ಜೀವನ ಸಾಗಿಸುವಳು. ಆದರೂ ಗಂಡನ ಹಂಬಲವುಳ್ಳವಳು. ದುಂಡವ್ವ ಗಂಡನಿಲ್ಲದಿದ್ದರೂ ತನ್ನ ಸ್ವಂತ ಮಕ್ಕಳ ಆಸರೆಯಲ್ಲಿ ನೆಮ್ಮದಿಯಿಂದ ಬದುಕುವಳು. ಕುಟುಂಬದ ಆರೈಕೆಗೆ ಗಂಡನನ್ನು ಹಂಬಲಿಸುವಳು. ಹೀಗೆ ಇಲ್ಲಿ ತಾಯಿ, ಮಗ, ಸೊಸೆ ರಕ್ತಸಂಬಂಧಗಳು ಪರಸ್ಪರ ನೋವನ್ನು ಹಂಚಿಕೊಳ್ಳುವ ಮರುಗುವ ಸ್ವಭಾವದರು. ಆ ಮನೆಯ ಎಲ್ಲ ಸದಸ್ಯರು ಪ್ರತಿಯೊಬ್ಬರ ನೋವಿಗೆ ಸ್ಪಂದಿಸುವ ಗುಣದವರು. ಪಲಾಯನವಾದಿ ತಂದೆ ಮನೆಗೆ ಹಿಂದಿರುಗುವ ನಿರ್ಧಾರ ಕೂಡುಕುಟುಂಬದ ಒಲುಮೆಯನ್ನು ಕಾಣಬಹುದಾಗಿದೆ.

ಶಾಂತಾದೇವಿಯವರ ಕಥೆಗಳಲ್ಲಿ ಬರುವ ಸ್ತ್ರೀಯರು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಮಧ್ಯಮ ಹಾಗೂ ಕೆಳವರ್ಗದವರಾಗಿ ಬದುಕನ್ನು ಸಾಗಿಸುವವರು. ಈ ಸ್ತ್ರೀಯರು ಕೌಟುಂಬಿಕ ನೆಲೆಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದು, ಗೃಹಿಣಿ ಪಾತ್ರವನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸುವ ಅನಿವಾರ್ಯತೆಗೆ ಪಡೆದವರು. 'ಇಲ್ನೋಡು ಅವ್ವಾ, ನನಗ ದುಡ್ಡು ತರೋ ಹೆಂಡತಿ ಬ್ಯಾಡಾ, ಯಾಕಂದ್ರ ನಮ್ಮಪ್ಪ ಮಾಡಿದ ಆಸ್ತೀನ ರಗಡದ. ಸಂಗೀತ ಹೇಳುವಾಕಿ ಬ್ಯಾಡಾ. ಅದೆಲ್ಲಾ ಸಿನಿಮಾ, ರೇಡಿಯೋದಳಗ ಸಿಗ್ತದ. ಬಾಳ ಶಿಕ್ಷಣ ಇದ್ಯಾಕೀನೂ ಬ್ಯಾಡಾ; ಯಾಕಂದ್ರ ಆಕಿ ಏನ ನೌಕರಿ ಮಾಡಬೇಕಾಗಿಲ್ಲ. ಆದ್ರ ಹುಡುಗಿ ರೂಪವತಿ ಇರಬೇಕು ಅಂತ ನನ್ನ ಇಚ್ಛಾ. ಇಷ್ಟು ದಿನಾ ನೋಡಿದ ಯಾವ ಹುಡುಗೀಗೂ ಸೌಂದರ್ಯದ ಲಕ್ಷಣಾನ ಇದ್ದಿಲ್ಲಾ. ಇವತ್ತಿನ ಹುಡಗೀನೂ ನನ್ನ ಮನಸ್ಸಿಗೆ ಬಂದಿಲ್ಲ. ಈ ವಿಷಯದಾಗ ನನಗ ಒತ್ತಾಯ ಮಾಡಬ್ಯಾಡ್ರಿ'(ಸ್ವರೂಪ ದರ್ಶನ, ಪುಟ-೨) ಎಂದು ತನ್ನ ನಿರ್ಧಾರವನ್ನು ಆ ಕುಟುಂಬದ ತೀರ್ಮಾನವಾಗಿ ನಿರೂಪಿತವಾಗುವ ಗಂಡಿನ ಆಯ್ಕೆಯ ಹಿಂದೆ ಹೆಣ್ಣು ಗಂಡಿನ ನಿರೀಕ್ಷೆಗಳಿಗೆ ಅನುಗುಣವಾಗಿ ತನ್ನ ದೈಹಿಕ ಸೌಂದರ್ಯವನ್ನು ಕಾಯ್ದುಕೊಳ್ಳುವುದು ಅನಿವಾರ್ಯವಾಗಿದೆ. ಇಲ್ಲಿ ಸ್ತ್ರೀಯನ್ನು ಒಂದು ವ್ಯಕ್ತಿಯನ್ನಾಗಿ ನೋಡದೆ ದೈಹಿಕ ನೆಲೆಯಲ್ಲಿ ಮಾತ್ರ ಪುರುಷಸಮಾಜ ಹೆಣ್ಣನ್ನು ಗುರುತಿಸುತ್ತದೆ. ಆಕಸ್ಮಿಕವಾಗಿ ದೈಹಿಕ

ನ್ಯೂನತೆಗೆ ಒಳಗಾದ ಶಶಿ(ಸ್ವರೂಪ ದರ್ಶನ) ವಿವಾಹಿತ ಮಹಿಳೆಗೆ ಗಂಡನ ಮನೆಯಲ್ಲಿ ಸ್ಥಳವಿಲ್ಲದೆ ತವರು ಮನೆಯನ್ನು ಆಶ್ರಯಿಸಬೇಕಾಗಿದೆ. ಇಲ್ಲಿ ಕುರೂಪಿ ಮಹಿಳೆ ಗಂಡನ ಮನೆಯಲ್ಲಿ ಗಂಡನ ಒಲುಮೆಗೆ ಪಾತ್ರಳಾಗುವುದು, ರೂಪವಂತ ಗಂಡು ಮಗುವನ್ನು ಹೆತ್ತುಕೊಡುವುದರ ಮೂಲಕ ಗಂಡನ ಮನೆಯಲ್ಲಿ ಸ್ಥಾನವನ್ನು ಪಡೆಯುವ ಹಿಂದೆ ಸ್ತ್ರೀ–ಪುರುಷ ನೆಲೆಯಲ್ಲಿ ಲಿಂಗತಾರತಮ್ಯವನ್ನು ಸಮಾಜದಲ್ಲಿ ಗುರುತಿಸಬಹುದು.

ಮಧ್ಯಮವರ್ಗದಲ್ಲಿ ಬೆಳೆದ ಹೆಣ್ಣುಮಕ್ಕಳು ತಮ್ಮ ತಂದೆಯ ಸಾವಿನಿಂದ ಹೆಚ್ಚು ವಿಚಲಿತರಾಗುತ್ತಾರೆ. ಕಾರಣ ತಂದೆ–ತಾಯಿಯ ಆಕಸ್ಮಿಕ ಮರಣದಿಂದ ಆ ಮನೆಯ ಹೊಣೆಗಾರಿಕೆಯನ್ನು ಹಿರಿಯ ಮಗಳು ಹೊತ್ತುಕೊಳ್ಳುವಳು. ಹೀಗೆ ತಂಗಿ–ತಮ್ಮಂದಿರ ಶಿಕ್ಷಣಕ್ಕಾಗಿ, ವಿವಾಹಕ್ಕಾಗಿ ಇಲ್ಲಿ ಅವಿವಾಹಿತಳಾಗಿ ಉಳಿಯುವ ಸುಮಿತ್ರಾ(ಬೀಗದ ಕೈ) ಎಂಬ ಮಹಿಳೆಗೆ ಕೌಟುಂಬಿಕ ಜವಾಬ್ದಾರಿಯಿಂದ ವಿವಾಹವನ್ನು ನಿರಾಕರಿಸುವ ಸಂದರ್ಭವಿದೆ. ಈ ಪರಿಸ್ಥಿತಿಯಲ್ಲಿ ನಿಶ್ಚಯವಾದ ಸಂಗಾತಿ ಈ ಹೊಣೆಯನ್ನು ಹೊರಲು ನಿರಾಕರಿಸುವ ಗಂಡಸಾಗಿ ಕಂಡುಬರುತ್ತಾನೆ. ಅವಿವಾಹಿತಳಾದ ಮಹಿಳೆ ಪ್ರಕೃತಿಸಹಜವಾಗಿ ಗಂಡಸಿನ ಆಸರೆಯನ್ನು ಬಯಸಿ ಇಲ್ಲವೇ, ಒಂಟಿತನದಿಂದ ತಲ್ಲಣಗೊಂಡು ಬದುಕಿನ ಆಸರೆಗಾಗಿ ಎರಡು ಮಕ್ಕಳ ತಂದೆಯಾದ ವಿಶ್ವನಾಥ(ಬೀಗದ ಕೈ) ಎಂಬ ವಿಧುರನನ್ನು ವಿವಾಹವಾಗಲು ನಿರ್ಧರಿಸುತ್ತಾಳೆ. ಅವಿವಾಹಿತ ಮಹಿಳೆ ಗಂಡನ ಕುಟುಂಬವನ್ನು ಪ್ರವೇಶಿಸಲು ವಿಧುರನ ತೀರ್ಮಾನ, ನಿರ್ಣಯಗಳಿಗೆ ಸಹಮತ ನೀಡುವುದು ಅನಿವಾರ್ಯವಾಗಿದೆ. ಇಲ್ಲಿ ಸುಶೀಲ ನೌಕರಸ್ಥ ಮಹಿಳೆ. ವಿಧುರನ ಮಕ್ಕಳ ತಾಯಿಯಾಗಿ ಹೊರದುಡಿಮೆಯ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಸಮರ್ಥಳು. ವಿಧುರ ವಿಶ್ವನಾಥನು ಹೊರದುಡಿಮೆಯನ್ನು ನಿರಾಕರಿಸಿ ಕೇವಲ ಗೃಹಿಣಿಯಾಗಿ ಮನೆಯನ್ನು ನಿಭಾಯಿಸುವುದಕ್ಕೆ ಹೆಣ್ಣು ಅಗತ್ಯವಿರುವಂತೆ ಕಂಡುಬಂದಿದೆ. "ತಬ್ಬಲಿ ಮಕ್ಕಳನ್ನು ನೀನು ಚೆನ್ನಾಗಿ ನೋಡಿಕೊಳ್ಳಬಲ್ಲೆ. ಸುಮಿತ್ರಾ ಮೇಲೆ ತುಂಬಾ ಭರವಸೆ ಇದೆ ನನಗೆ" ಎಂದಿದ್ದ ಒಮ್ಮೆ. "ಅದ್ಹೇಗೆ? ನಾನು ಅವರಿಗೆ ಮಲತಾಯಿ ಆಗೋದಿಲ್ಲವೇ? ಎಂದಾಗ, "ತಬ್ಬಲಿ ತಂಗಿ–ತಮ್ಮಂದಿರನ್ನು ಸಾಕುವುದಕ್ಕೆ ನಿನ್ನ ಆಯುಷ್ಯ ಸವೆಸಿದ್ದೀಯಲ್ಲ ನಿನ್ನ ಗುಣ ನನಗೆ ಗೊತ್ತಿದೆ. ನನ್ನ ಮನೆ ನಿನ್ನಿಂದಲೇ ಬೆಳಕು ಕಾಣೋದು ಸಾಧ್ಯ"(ಬಯಲು ಆಲಯ, ಪು.೮೦) ಎಂದು ವಿಶ್ವನಾಥನ ಧೋರಣೆಯನ್ನು ಪ್ಲಾಶ್‌ಬ್ಯಾಕ್ ನಿರೂಪಣೆಯಲ್ಲಿ ನೆನೆಸಿಕೊಳ್ಳುವ ಸುಮಿತ್ರಾಳ ಮನೋಭಾವನೆಯ ಹಿಂದೆ ಹೆಣ್ಣು ವಿವಾಹವಾಗಲು ತನ್ನ ಮಹಾತ್ವಾಕಾಂಕ್ಷೆ ಸ್ವತಂತ್ರ ಆಸಕ್ತಿಯ ಹೊರದುಡಿಮೆಯನ್ನು ನಿರಾಕರಿಸುವುದರ ಮೂಲಕ ವಿಶ್ವನಾಥನ ತೀರ್ಮಾನಗಳಿಗೆ ಸಮ್ಮತಿಯನ್ನು ಸೂಚಿಸುವ ರೀತಿಯಲ್ಲಿ ಕಥೆ ಮುಕ್ತಾಯಗೊಳ್ಳುತ್ತದೆ. ಹೀಗೆ ಮಧ್ಯಮವರ್ಗದ ಸಮಾಜದಲ್ಲಿ ಅವಿವಾಹಿತ ಹೆಣ್ಣಿನ ಅತಂತ್ರ ಸ್ಥಿತಿಯನ್ನು ಬಯಲು ಮಾಡುವ ಮೂಲಕ ಹೆಣ್ಣಿನ ಸ್ವಂತ ಆಸೆ ಆಕಾಂಕ್ಷೆಗಳಿಗಿಂತ ವಿವಾಹವೇ ಮುಖ್ಯವಾಗಿ ಗಂಡನ ಮನೆಯಲ್ಲಿ ಅವಲಂಬಿತ ಬದುಕನ್ನು

ಒಪ್ಪಿಕೊಂಡು ಜೀವಿಸುವ ಅಗತ್ಯವಿದೆ ಎಂಬಂತಿದೆ. ವೈದಿಕ ಮನೆತನದ ಸಾಂಪ್ರದಾಯಿಕತೆಯಲ್ಲಿ ಬೆಳೆದ ಮಹಿಳೆ ಸುಶಿಕ್ಷಿತಳಾಗಿದ್ದು ತಾನು ಪಡೆದ ಶಿಕ್ಷಣದಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಹೊರಟ ಮಹಿಳೆ ತಂದೆ ಮನೆಯ ವಿರೋಧದಲ್ಲಿ ಅನ್ಯಜಾತಿಯ ಪುರುಷನನ್ನು ವಿವಾಹವಾದಾಗ ಅದಕ್ಕೆ ಮಹಿಳೆಯೇ ಹೆಚ್ಚು ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗುತ್ತದೆ. ಇಲ್ಲಿ ದುಡಿಯುವ ಮಹಿಳೆಗೆ ಗಂಡನ ಅನಿಯಂತ್ರಿತ ಬಂಧನ ಸಹಿಸಲು ಅಸಾಧ್ಯವಾದಾಗ ಪರಿತ್ಯಕ್ತಳಾಗಿ ಬದುಕನ್ನು ನಿಭಾಯಿಸಬೇಕಾಗುತ್ತದೆ. ಹೀಗೆ ಮಕ್ಕಳ ಜವಾಬ್ದಾರಿಯನ್ನು ನಿಭಾಯಿಸುತ್ತಾ ಮಗಳ ವಿವಾಹವನ್ನು ಮಾಡಲು ವರನನ್ನು ಹುಡುಕಿ ಸೋತು ಪುನಃ ತವರಿನ ಅಣ್ಣನ ಸಹಾಯವನ್ನು ಯಾಚಿಸಿದಾಗ ಜಾತೀಯತೆಯ ಪ್ರಶ್ನೆ ಮುಂದಾಗಿ ಅಣ್ಣನ ನಿರಾಕರಣೆಯಿಂದ ಸುಶಿಕ್ಷಿತ ಮಹಿಳೆಗೆ ತನ್ನ ನಿರ್ಧಾರ, ತೀರ್ಮಾನಗಳು ಬದುಕಿನ ಸಂದಿಗ್ಧತನಕ್ಕೆ ಕಾರಣವಾಗಿವೆ. ಅವಿವಾಹಿತ ಮಹಿಳೆಯರು ಮದುವೆಯಾದ ಪುರುಷನೊಂದಿಗೆ ಮದುವೆಯಾಗುವುದರ ಮೂಲಕ ಹೆಣ್ಣು ಸವತಿಯ ಕುಟುಂಬ ಹಾಗೂ ತನ್ನ ಮಕ್ಕಳ ಕುಟುಂಬದ ಹೆಚ್ಚುವರಿ ಹೊಣೆಗಾರಿಕೆಯನ್ನು ನಿಭಾಯಿಸುವ ಅನಿವಾರ್ಯಕ್ಕೆ ಒಳಗಾಗುತ್ತಾಳೆ. ಆದರೆ ಮನೆಯ ಕೆಲಸವನ್ನು ಹಣದ ರೂಪವಿಲ್ಲದೆ ನಿಭಾಯಿಸುವ ಪಾರ್ವತಿ ತನ್ನ ಆರ್ಥಿಕ ಅಸಹಾಯಕತೆಯಿಂದ ಗಂಡನ ಮರುವಿವಾಹವನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಬರುತ್ತದೆ.

ಹೆಣ್ಣು–ಗಂಡಿನ ಪ್ರೇಮವಿವಾಹ ದಾಂಪತ್ಯದಲ್ಲಿ ಹೆಣ್ಣು ಹೆಚ್ಚು ಪಾವಿತ್ರತೆಯನ್ನು ಕಾಯ್ದುಕೊಳ್ಳುವುದು ಅನಿವಾರ್ಯವಾಗಿದೆ. ಆದರೆ ಪುರುಷ ಪತ್ನಿಯ ಅನುಪಸ್ಥಿತಿಯಲ್ಲಿ ಮತ್ತೊಂದು ಹೆಣ್ಣಿನೊಂದಿಗೆ ದೈಹಿಕ ಸಂಪರ್ಕ ಬೆಳೆಸುವುದಕ್ಕೆ ಕಾರಣಗಳು ಮುನ್ನೆಲೆಯಾಗಿ ತನ್ನ ತಪ್ಪನ್ನು ಒಪ್ಪಿಕೊಳ್ಳುವ ಮನೋಭಾವದ ಮನೋಹರ(ಹೆಣ್ಣು–ಗಂಡು) ತನ್ನ ಪತ್ನಿಯ ಈ ಪರಿಸ್ಥಿತಿಯನ್ನು ಊಹಿಸಿಕೊಳ್ಳಲು ಅಸಾಧ್ಯವಾದ ಮನಸ್ಥಿತಿಯವನಾಗಿ ಕಂಡುಬರುತ್ತಾನೆ. ಇಲ್ಲಿ ಸುಶೀಲ(ಹೆಣ್ಣು–ಗಂಡು) ಗಂಡನ ಅನೈತಿಕ ಸಂಬಂಧವನ್ನು ಅಪರಾಧವೆಂದು ಪರಿಗಣಿಸಿ ಗಂಡನೊಂದಿಗೆ ದೈಹಿಕ ಸಂಪರ್ಕವನ್ನು ತೊರೆದು ತನ್ನ ಪ್ರತಿಭಟನೆಯನ್ನು ತೋರಿಸುತ್ತಾಳೆ. ಸುಶೀಲ ಗಂಡನಿಂದ ಅಗಲಿದ ಸಂದರ್ಭದಲ್ಲಿ ಸಹಜವಾಗಿ ಮೂಡಿಬರುವ ಪ್ರೀತಿ, ಸಹಜ ಲೈಂಗಿಕತೆಯನ್ನು ಮನೆಗೆ ಬಂದ ವೈದ್ಯನೊಂದಿಗೆ ಕಲ್ಪಿಸಿಕೊಳ್ಳುವ ಮೂಲಕ ಗಂಡನ ಮೀರುವಿಕೆಗೆ ಸಮರ್ಥನೆಯನ್ನು ಒದಗಿಸುತ್ತಾಳೆ. ಗಂಡನನ್ನು ಮನ್ನಿಸುವ ಮೂಲಕ ಗಂಡನ ಒಲುಮೆಯನ್ನು ಒಪ್ಪಿಕೊಳ್ಳುವ ಹಿಂದೆ ಸುಮಿತ್ರಾಳ ಔದಾರ್ಯತೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಕುಟುಂಬಪ್ರೀತಿಯನ್ನು ಗುರುತಿಸಬಹುದು. ಮಧ್ಯಮ ವಯಸ್ಸಿನ ಮಹಿಳೆಯರು ತಾಯಿಯಾಗಿ, ಅತ್ತೆಯಾಗಿ ಪರಾವಲಂಬಿತರಾಗಿ ಬದುಕುವ ಈ ಮಹಿಳೆಯರು ಪರಿಸ್ಥಿತಿಗೆ ಹೊಂದಿಕೊಳ್ಳುವ ಸ್ವಭಾವದವರು. ಮಗಳು ಅನ್ಯಜಾತಿಯವನನ್ನು ವಿವಾಹವಾಗಲು ನಿರ್ಧರಿಸಿದಾಗ ಪತಿಯ ವಿರೋಧವನ್ನು ನಿರಾಕರಿಸುವಂತೆ "ನಿಮಗೆ ಒಂದೂ ತಿಳಿಯೋದಿಲ್ಲಾ, ನನ್ನ ಮಾತು ಕೇಳ್ರಿ,

ನಮ್ಮ ಹಠ ನಡಿಯೋ ದಿನಾ ಹೋದವು. ಅವಳಿಗೆ ಬೇಡಿದ್ದೆಲ್ಲಾ ಕೊಡಿಸಿ ಸಲಿಗೀಲಿ ಬೆಳೆಸೀರಿ. ಈಗ ನಿಮ್ಮ ಮಾತು ಯಾಕ ಕೇಳತಾಳ"(ಹೆಣ್ಣು-ಗಂಡು, ಪುಟ-೧೫೧). ಹೀಗೆ ಬದಲಾದ ಆಧುನಿಕ ಪರಿಸ್ಥಿತಿಗೆ ಹೊಂದಿಕೊಳ್ಳುವಂತಹ ತಾಯಿಯಾಗಿ ಮಗಳ ನಿರ್ಧಾರಕ್ಕೆ ಪೂರಕವಾದ ಧ್ವನಿಯಿದೆ. ಅಲ್ಲದೇ ಹೆಣ್ಣು ತಾಯಿಯಾಗಿ, ಅತ್ತೆಯಾಗಿ ಬಾಳ್ವೆಯನ್ನು ನಿರ್ವಹಿಸುವಾಗ ಸೊಸೆಯ ವಿರುದ್ಧ ಮಗಳ ಇಚ್ಛೆಯಂತೆ ಬಂದ ಸೊಸೆಯ ತಂದೆಯನ್ನು ಉಪಚಾರ ಮಾಡದೆ ಕಳುಹಿಸುತ್ತಾಳೆ. ತನ್ನ ಈ ವರ್ತನೆಯನ್ನು ಕುರಿತು, ಮಗನ ತೀರ್ಮಾನವನ್ನು ಕುರಿತು ಅಳುಕುವ ಹಿಂದೆ ಹೆಣ್ಣು ತಾಯಿಯಾಗಿ, ಅತ್ತೆಯಾಗಿ ದ್ವಿಪಾತ್ರವನ್ನು ನಿಭಾಯಿಸುವಲ್ಲಿ ಅನಿವಾರ್ಯದ ಹಿಂದೆ ಕುಟುಂಬದಲ್ಲಿನ ಅಸ್ಥಿರತೆಯು ಕಾರಣವಾಗಿದೆ. ಕೆಲವು ಮಧ್ಯಮ ವಯಸ್ಸಿನ ಮಹಿಳೆಯರು ಅನಾರೋಗ್ಯದಿಂದ ಬಳಲುತ್ತಿರುವಾಗ ಗಂಡನ ಸಾಮೀಪ್ಯವನ್ನು ಬಯಸುವುದು ಸಹಜ. ಆದರೆ ಈ ಸಾಮೀಪ್ಯ ದೊರಕದಾದಾಗ ಸಾವನ್ನು ಬಯಸುವ ಹತಾಶ ಮಹಿಳೆಯರು ಕಂಡುಬರುತ್ತಾರೆ. ಸುಶಿಕ್ಷಿತ ಮಧ್ಯಮ ವಯಸ್ಸಿನ ಮಹಿಳೆಯರು ತಮ್ಮ ಮರಣದ ತರುವಾಯ ತನಗೆ ದಕ್ಕಿದ ಆಸ್ತಿಯನ್ನು ಮಗಳು-ಸೊಸೆಯಲ್ಲಿ ಸಮಾನವಾಗಿ ಹಂಚುವ ಮೂಲಕ ಉದಾರತೆ ಕಾಣುತ್ತದೆ. ಅಲ್ಲದೇ ವೈದಿಕ ಸಂಪ್ರದಾಯದ ಆಚರಣೆಯಿಂದ ಬೇಸತ್ತ ಹಿರಿಯ ಮಹಿಳೆ ಸರಸ್ವತಿ(ಅಂತ್ಯಸಂಸ್ಕಾರ) ಅನ್ಯ ಧರ್ಮದಂತೆ ಅಂತ್ಯಸಂಸ್ಕಾರದ ಇಚ್ಛೆಯನ್ನು ಈಡೇರಿಸುವಂತೆ ಮನೆಯವರನ್ನು ಒಪ್ಪಿಸುವ ಮೂಲಕ ಜಾತ್ಯತೀತ ಮನೋಭಾವನೆಯನ್ನು ಬೆಳೆಸಿಕೊಳ್ಳಲಾಗಿದೆ. ಹೀಗೆ ಸಾಮಾಜಿಕವಾಗಿ ಉದಾರತಾ ಮನೋಭಾವ ಈ ಹಿರಿಯ ಮಹಿಳೆಯರಲ್ಲಿ ಗುರುತಿಸಬಹುದು.

ಈ ಕಥೆಗಳಲ್ಲಿ ಬರುವ ಕೆಳವರ್ಗದ ಸ್ತ್ರೀಯರು ಹೆಚ್ಚು ಶ್ರಮಜೀವಿಗಳಾಗಿದ್ದಾರೆ. ಇಂದಿನ ಆಧುನಿಕಯುಗದ ಮಧ್ಯಮವರ್ಗದ ಕುಟುಂಬದಲ್ಲಿ ಕೂಲಿ ಮಹಿಳೆಯರಾಗಿ ದುಡಿದು ಗಂಡನ ಅನುಪಸ್ಥಿತಿಯಲ್ಲಿ ಮಕ್ಕಳ ಹೊಣೆಯನ್ನು ಹೊತ್ತು ಬದುಕುತ್ತಿದ್ದಾರೆ. ಇಲ್ಲಿ ಕೆಳವರ್ಗದ ವಿಧವೆ ಮಹಿಳೆಯರಿಗೆ ಲೈಂಗಿಕ ಆಕಾಂಕ್ಷೆ ಸಹಜವಾಗಿದ್ದು ಪರಪುರುಷನೊಂದಿಗೆ ದೈಹಿಕ ಸಂಪರ್ಕದಿಂದ ತೃಪ್ತಿಯನ್ನು ಹೊಂದುವ ಈ ಮಹಿಳೆಗೆ ಪಾವಿತ್ರ್ಯತೆ ಮುಖ್ಯವಾಗುವುದಿಲ್ಲ. ತಾನು ಕೆಲಸ ಮಾಡುವ ಮನೆಯ ಯಜಮಾನಿಗೆ ದೇಹವನ್ನು ಒಪ್ಪಿಸುವ ನಿಂಗಿ(ಬೀಗದ ಕೈ) ಮಾಲೀಕನಿಂದ ದೊರೆಯುವ ಹಣವನ್ನು ನಿರಾಕರಿಸುವ ಮೂಲಕ ಆತ್ಮತೃಪ್ತಿಯನ್ನು ಪಡೆಯುವುದು ಅವಳ ಸ್ವಭಾವದಲ್ಲಿ ಕಾಣಬಹುದು. ವಿಧವೆ ಕೆಂಚವ್ವನಿಗೆ ವಿಧುರನಾದ ಹೀರ್‍ಯಾನನ್ನು ಅವರ ಸಮಾಜದಲ್ಲಿ ವಿವಾಹವಾಗಲು ಯಾವುದೇ ನಿರ್ಬಂಧಗಳಿಲ್ಲ. ಹೀಗೆ ಮರುವಿವಾಹದ ಮಹಿಳೆ ಗಂಡ, ಮಗಳು ಹಾಗೂ ತನ್ನ ಸ್ವಂತ ಮಕ್ಕಳನ್ನು ಹೊಣೆಗಾರಿಕೆಯಿಂದ ನಿಭಾಯಿಸುವುದು ಅನಿವಾರ್ಯ. ಹೀಗೆ ಮಲತಾಯಿಯಾದರೂ ನೈಜಪ್ರೀತಿಯನ್ನು ನೀಡಿದ ಕೆಂಚವ್ವನಿಗೆ ವಾತ್ಸಲ್ಯವನ್ನು ಪರಿಗಣಿಸದೆ ಪಲಾಯನವಾದಿಯಾಗಿ ಬದುಕುವ ಗಂಡ ತನ್ನ ಮಾಮನ ಮಗನಿಗೆ ತನ್ನ

ಆಸ್ತಿಯ ವಾರಸುದಾರನಾಗಿ ಮಾಡುವ ನಿರ್ಣಯಗಳು ಹೆಣ್ಣಿನ ಅತಂತ್ರ ಪರಿಸ್ಥಿತಿಯನ್ನು ನಿರೂಪಿಸುತ್ತದೆ. ಆದರೆ ಇಲ್ಲಿ ಸ್ವಂತ ಮಕ್ಕಳಿಂದ ತಿರಸ್ಕಾರಕ್ಕೆ ಗುರಿಯಾದ ಪತಿಯನ್ನು ಕ್ಷಮಿಸುವ ಮೂಲಕ ಕೆಂಚವ್ವನ ಸ್ವಭಾವದಲ್ಲಿ ಹೆಣ್ಣಿನ ಸಹನೆಯನ್ನು ಮಲತಾಯಿಯಾಗಿ ತರುವ ಆದರ್ಶ ಸ್ತ್ರೀ ಪಾತ್ರ ಚಿತ್ರಣವನ್ನು ಇವರ ಕಥೆಯಲ್ಲಿ ಬರುತ್ತವೆ. ಹೀಗೆ ಈ ಸ್ತ್ರೀಯರು ಮನೆಯ ಒಳ ಹಾಗೂ ಹೊರ ದುಡಿಮೆಯನ್ನು ಸ್ವಯಿಚ್ಛೆಯಿಂದ ಆಯ್ಕೆ ಮಾಡಿಕೊಂಡು ಕಷ್ಟದ ಬಾಳ್ವೆ ನಡೆಸುವ ಸ್ವಭಾವದವರಾಗಿ ಕಂಡುಬರುತ್ತಾರೆ.

೩.೧೪. ಅನುಪಮಾ ನಿರಂಜನ

ಅನುಪಮಾ ನಿರಂಜನರ ಕತೆಗಳು ಸ್ತ್ರೀ-ಪುರುಷ, ಮಕ್ಕಳನ್ನೊಳಗೊಂಡು ಬದುಕುವ ಸರಳಕುಟುಂಬದ ರಚನಾ ಮಾದರಿಗಳು. ಇವರ ಕತೆಗಳಲ್ಲಿ ಚಿತ್ರಿಸಿರುವ ಹೆಣ್ಣು ಮಕ್ಕಳು ಅಕ್ಷರಸ್ಥರಾಗಲಿ, ಅವಿದ್ಯಾವಂತರಾಗಿರಲಿ ವೃತ್ತಿಯಲ್ಲಿ ತೊಡಗಿಕೊಂಡಂತವರು. ಅವರು ತನ್ನತನವನ್ನು, ಆ ಮೂಲಕ ಬದುಕಿನಲ್ಲಿ ಅಸ್ತಿತ್ವವನ್ನು ಪಡೆದುಕೊಳ್ಳುವುದು ಸಮಾಜ ಸೂಚಿಸಿದ ಕುಟುಂಬಸಂಸ್ಥೆಯಲ್ಲಿ ಪ್ರವೇಶ ಮಾಡಿದಾಗ. ವಿವಾಹದ ಆಚೆ ತಮ್ಮ ಬದುಕು ಅಸ್ಥಿರ ಎಂಬಂತೆ ಇಲ್ಲಿನ ಸ್ತ್ರೀಪಾತ್ರಗಳು ಮುಖ್ಯವಾಗಿ ಶಾರದೆ(ಹಿತ್ತಲ ಗಿಡವೆ ಮದ್ದಾಯಿತು), ಸುಧಾ(ಆಡು ಬಾ ಹಂಸ), ಕಸ್ತೂರಿ(ಸಖ್ಯ), ಸೀತಾ(ಮೌನ) ಅನಿವಾರ್ಯವಾಗಿ ಈ ಗುರಿಯನ್ನು ಮುಟ್ಟಲು ತವಕಿಸುವಂಥ ಚಿತ್ರಣ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಈ ಹೆಣ್ಣುಮಕ್ಕಳ ತಂದೆ-ತಾಯಿಯರು ಅದರಲ್ಲಿ ತಾಯಿಯರು ಮಗಳನ್ನು ವಿವಾಹದ ಚೌಕಟ್ಟಿನೊಳಗೆ ಅಣಿಗೊಳಿಸಲು ಮುಂದಾಗುತ್ತಾಳೆ. ಕಾರಣ ಸಾಮಾಜಿಕ ಜವಾಬ್ದಾರಿಯನ್ನು ಅತ್ಯಂತ ಎಚ್ಚರಿಕೆಯಿಂದ ನಿರ್ವಹಿಸುವ ಪೋಷಕ ಪಾತ್ರಗಳಾಗಿ ಶಾರದೆ ತಾಯಿ, ಗೀತಾಳ ತಾಯಿ ಕಂಡುಬರುತ್ತಾರೆ. ಹೀಗೆ ಇಲ್ಲಿ ಹೆಣ್ಣುಮಕ್ಕಳು ತಂದೆ-ತಾಯಿಗಳಿಗೆ ಹೊರೆಯಾಗಿ ಕಾಣುವ ಕುಟುಂಬದ ಚಿತ್ರಣವಿದೆ. ನಲವತ್ತರ ವಯಸ್ಸಿನ ಮಹಿಳೆ ಕಸ್ತೂರಿ(ಸಖ್ಯ) ತಂದೆಯಿಲ್ಲದ ಕಾರಣ ತವರಿನ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ಅವಿವಾಹಿತಳಾಗಿ ಉಳಿಯುತ್ತಾಳೆ. ಇವಳ ತ್ಯಾಗಕ್ಕೆ ತಂಗಿ, ತಮ್ಮಂದಿರಿಂದ ಯಾವುದೇ ಅನುಕಂಪವಿಲ್ಲ. ತಂಗಿಯ ಗಂಡನ ಕಡೆಯಿಂದ ಬಂದ ವರನನ್ನು ನಿರಾಕರಿಸಲು ನಿರ್ಧರಿಸಿದ ಕಸ್ತೂರಿಯನ್ನು ವಿಧುರ ಮಂಜುನಾಥಯ್ಯ ಮದುವೆಯಾಗುತ್ತಾನೆ. ಅವನ ಇಬ್ಬರ ಮಕ್ಕಳ ಜವಾಬ್ದಾರಿ ನಿರ್ವಹಿಸಲು ಪತ್ನಿ ಅವಶ್ಯಕತೆಯಿದ್ದು, ಅವನಿಗೆ ದೈಹಿಕ ಸುಖಕ್ಕಿಂತಲೂ ಮಾನಸಿಕ ಸುಖ ನನಗೆ ಮುಖ್ಯ ಎಂದು ಮಾನವೀಯತೆಯನ್ನು ತೋರುತ್ತಾನೆ. ಅನುಪಮಾ ಅವರ ಈ ಕಥೆಯಲ್ಲಿ ಕುಟುಂಬದ ನಿರ್ವಹಣೆ ಪುರುಷನಿಂದ ಸಾಧ್ಯವಿಲ್ಲ ಎಂಬುದನ್ನು, ಅದಕ್ಕೆ ಹೆಣ್ಣು ಅವಶ್ಯಕವಾಗಿದೆ ಎಂದು ನಿರೂಪಿಸುವುದರ ಮೂಲಕ ಕಸ್ತೂರಿ ಅದಕ್ಕೆ ಒಪ್ಪುವುದು ಸಹಜವೆಂಬಂತೆ ಬರುತ್ತಾಳೆ. 'ಸೊನ್ನೆ' ಕಥೆಯಲ್ಲಿ ಋತುಮತಿಯಾಗದ ಹೆಣ್ಣು ಸಹಜ ಕ್ರಿಯೆಯಲ್ಲಿ ತೊಡಗದಿರುವುದೇ ಕುಟುಂಬದ ಸಮಸ್ಯೆಯಾಗಿ ಅದನ್ನು

ಮರೆಮಾಚಿ ಮಗಳನ್ನು ವಿವಾಹಕ್ಕೆ ಅಣಿಗೊಳಿಸುವ ತಾಯಿ ಹೀಗೆ ಇಲ್ಲಿನ ಹೆಣ್ಣುಮಕ್ಕಳ ತಾಯಂದಿರು ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಟೊಂಕ ಕಟ್ಟಿ ನಿಂತವರಾಗಿದ್ದಾರೆ. ಆದರೆ ಇಲ್ಲಿನ ಮಹಿಳೆಯಲ್ಲಿ ವಾಸ್ತವತೆಯ ಆತ್ಮಾಭಿಮಾನವನ್ನು ಕಾಣಬಹುದು. ಇದಕ್ಕೆ ವಿರುದ್ಧವಾಗಿ ಬಡತನದ ಕಾರಣದಿಂದ ದೈಹಿಕ ನ್ಯೂನತೆಯಿಂದ ಬಳಲುವ ಹೆಣ್ಣುಮಕ್ಕಳು ಪುರುಷನಿಂದ ನಿರಾಕರಿಸಲ್ಪಟ್ಟಾಗ ಸ್ವಾವಲಂಬನೆಯಿಂದ ಬದುಕುವ ಮಹಿಳೆಯರಾಗಿ ರಾಧಾ, ಉಮಾ ಪಾತ್ರಗಳು ಬರುತ್ತವೆ. ಮೂಲ ನಕ್ಷತ್ರದಲ್ಲಿ ಜನಿಸಿದ ಕಾರಣದಿಂದ ಪದ್ಮ ಕುಟುಂಬದ ಹೊರೆಯಾಗಿ ಕಾಣುತ್ತಾಳೆ. ತನ್ನ ತಾಯಿ ಮನೆಯ ಆರ್ಥಿಕ ಅನುಕೂಲಕ್ಕಾಗಿ ೫೦ರ ವಯಸ್ಸಿನ ಪುರುಷನನ್ನು ವಿವಾಹವಾಗಬೇಕಾದ ದುಃಸ್ಥಿತಿ ಒದಗಿದೆ. ತನ್ನ ಈ ದುಸ್ಥಿತಿಗೆ ತಾಯಿ ಕಾರಣಕರ್ತಳು ಎಂದು ನಿರ್ಧರಿಸಿ ಪದ್ಮ ತವರುಮನೆಗೆ ಹೋಗದೆ ಪ್ರತಿಭಟನೆ ತೋರಿಸುತ್ತಾಳೆ. ಹೀಗೆ ತಾಯಿ ವರ್ತಿಸಲು ಸಮಾಜ ಕಾರಣವೆಂದು ಆತ್ಮಾವಲೋಕನ ಮಾಡಿಕೊಳ್ಳುವ ಹೆಣ್ಣಾಗಿ ಪದ್ಮ ಕಂಡುಬರುತ್ತಾಳೆ. 'ತಲ್ಲಣ' ಕತೆಯಲ್ಲಿ ಶಶಿಯ ತಾಯಿ ಡಯಾಬಿಟೀಸ್ ಕಾಯಿಲೆಗೆ ಒಳಗಾದ ಮಗಳ ವಿವಾಹವನ್ನು ಮುರಿದಿದ್ದು ಅವಳ ಒಳಿತಿಗಾಗಿ. ಅದನ್ನು ಅರಿಯದ ಮಗಳು ಮಾನಸಿಕ ಅಸ್ವಸ್ಥಳಾಗಿ ತಾಯಿಯನ್ನು ಶತ್ರುವಾಗಿ ಭಾವಿಸುತ್ತಾಳೆ.

ಕೌಟುಂಬಿಕ ಬಂಧನದಲ್ಲಿ ಬದುಕುತ್ತಿರುವ ಸುಂದರಿ(ತಲ್ಲಣಿಸದಿರು ಮನವೆ), ಶಾಂತಾ (ಮನವೆಂಬ ಮರ್ಕಟ) ಎಂಬ ಸ್ತ್ರೀಯರು ಸಣ್ಣ ಸಣ್ಣ ಸಂಗತಿಗಳಾದ ಸಮಾರಂಭ, ಸಿನಿಮಾ ಎಂಬ ಆಸೆ ಆಕಾಂಕ್ಷೆಗಳನ್ನು ಪತಿ ಈಡೇರಿಸದಾದಾಗ ಮೌನವಾಗಿ ಪ್ರತಿಭಟಿಸುವವರು. ಇಲ್ಲವೆ ಸಮಾಜದ ಮಾತು ಕೇಳಿ ಗಂಡನನ್ನು ಅನುಮಾನಿಸಿ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡು, ಹತಾಶೆಗೊಂಡು ಬದುಕುವ ಮಹಿಳೆಯರಾಗಿದ್ದಾರೆ. ಇದಕ್ಕೆ ವಿರುದ್ಧವಾದ ಪಾತ್ರವಾದ ಸುಮತಿ(ಕತ್ತಲು)ಯ ಗಂಡ ಮೊದಲನೆಯ ಪತ್ನಿಯ ಸಾವಿನ ನಂತರವೂ ಅವಳನ್ನು ಮರೆಯದಾದಾಗ "ಈ ದೊಡ್ಡಸ್ತನಕ್ಕೆ ಮದ್ವೆ ಮಾಡ್ಕೊಂಡಿದ್ಯಾಕ? ಅವಳ್ನೇ ಬೇಕ ಮಾಡ್ಕೊಂಡು ಕೂತಿರಬಹುದಾಗಿತ್ತು"(ಜ್ವಾಲೆ, ಪುಟ-೭೮) ಎಂದು ಆಕ್ಷೇಪಿಸುತ್ತಾಳೆ. ಹರ್ಷ(ಜ್ವಾಲೆ) ತನ್ನ ವರ್ತನೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುವುದು ಸಹ ಕುಸುಮಾಳ ಜೀವನೋತ್ಸಾಹ ಅವನ ಹೆಂಡತಿಯಾದ ಸುಮತಿಯನ್ನು ಸ್ವೀಕರಿಸಲು ಸಾಧ್ಯವಾಗುವಂತೆ ಇಲ್ಲಿ ಪುರುಷ ಪಾತ್ರ ಚಿತ್ರಣಗೊಂಡಿದೆ. ಕುಟುಂಬದಲ್ಲಿ ಮಹಿಳೆ ಎಷ್ಟು ಅತ್ಯವಶ್ಯಕ ಎಂಬುದನ್ನು ಶಾಂತಮ್ಮ(ಮೌನ)ನ ಪಾತ್ರದಲ್ಲಿ ಕಾಣುತ್ತದೆ. ಆಕಸ್ಮಿಕವಾಗಿ ಬಂದ ಕಾಯಿಲೆಯಿಂದ ಕೋಮಾ ಸ್ಥಿತಿಯನ್ನು ತಲುಪಿದ ಶಾಂತಮ್ಮನಿಂದ ಕುಟುಂಬ ಅಸ್ವಸ್ಥಗೊಳ್ಳುವ ಚಿತ್ರಣವಿದೆ. ಪತ್ನಿ, ತಾಯಿ, ಅತ್ತೆಯಾಗಿ ಎಲ್ಲರ ಬೇಕು ಬೇಡಗಳನ್ನು ಈಡೇರಿಸಿದ ಶಾಂತಮ್ಮ ಕಾಯಿಲೆಯಿಂದ ನರಳುವಾಗ ಅವಳ ಮನೆಯವರು ಆಕೆಯ ಸಾವನ್ನು ಬಯಸುತ್ತಿರುವ ಚಿತ್ರಣವಿದೆ. ಆದರೆ ಯಾವುದೇ ರಕ್ತಸಂಬಂಧವಿಲ್ಲದ ಮನೆ ಕೆಲಸ ಮಾಡುವ ಸಿದ್ದವ್ವ ಅವಳ ಸೇವೆ ಮಾಡುವುದರ ಮೂಲಕ ಮಾನವೀಯತೆಯನ್ನು

ತೋರಿಸುವ ಪಾತ್ರವಾಗಿ ಕಂಡುಬಂದಿದೆ. ಹೀಗೆ ರಕ್ತಸಂಬಂಧಗಳ ಬಂಧುಗಳು ಶಾಶ್ವತ ಸಂಬಂಧಗಳೇ? ಎಂದು ಆಲೋಚಿಸುವಂತೆ ಮಾಡುತ್ತದೆ. ಇದಕ್ಕೆ ಪೂರಕ ಪಾತ್ರವಾಗಿ ತುಳಸೀಬಾಯಿ(ಅಪರೂಪದವರು) ಕಥೆಯಲ್ಲಿ ಮೂಡಿಬಂದಿದೆ. ಸುಶಿಕ್ಷಿತ ಮಹಿಳೆಯರು ಹಿರಿಯರ ಒತ್ತಾಯದಿಂದ ವಿದ್ಯಾಭ್ಯಾಸ, ನೌಕರಿ ಪಡೆದುಕೊಳ್ಳಲಾರದೆ ವಿವಾಹದ ಬಂಧನಕ್ಕೆ ಅಣಿಗೊಳ್ಳುವರು. ಆದರೆ ವಿವಾಹದ ನಂತರ ನೌಕರಿ ಪಡೆದುಕೊಳ್ಳಲು ಹವಣಿಸುವ ವನಜಾಕ್ಷಿ(ಕರೆ), ಸತ್ಯವತಿ(ಹೊಣೆ) ಸ್ತ್ರೀಯರು ತಮ್ಮ ಗೃಹಕೃತ್ಯಗಳನ್ನು ಚಾಚೂ ತಪ್ಪದೆ ಪಾಲಿಸುವ ಭರವಸೆ ನೀಡುತ್ತಾ ಹೊರಗಿನ ಕೆಲಸವನ್ನು ಮಾಡುವ ವಾಗ್ದಾನ ನೀಡುವರು. ಅವರ ಅಳಲನ್ನು ನಿರಾಕರಿಸಿದ ಪುರುಷರು ಸ್ವಾರ್ಥಿಗಳಾಗಿದ್ದಾರೆ. ಅದನ್ನು ನಿರಾಕರಿಸುವ ವನಜಾಕ್ಷಿ ಗಂಡ ಹಾಗೂ ಸತ್ಯವತಿ ಗಂಡನ ಸ್ವಭಾವದಲ್ಲಿ ಅಸೂಯೆಯನ್ನು ಕಾಣಬಹುದಾಗಿದೆ. ಈ ಹೆಣ್ಣಿನ ಸಮಸ್ಯೆಗೆ ಹೆತ್ತವರು ಕಡೆಗಣಿಸಿದಾಗ ಮಾನಸಿಕ ಅಸ್ವಸ್ಥರಾಗಿ ಬಳಲುವ ಮೂಲಕ ಕೌಟುಂಬಿಕ ಚೌಕಟ್ಟನ್ನು ಮೀರಿ ಬದುಕುವ ಆಯ್ಕೆಯನ್ನು ಮಾಡುತ್ತಾರೆ. ಅದರಲ್ಲಿ ಸಫಲತೆಯನ್ನು ಪಡೆಯುತ್ತಾರೆ. ಕೆಳ ನಿರ್ಗತಿಕ ಮಹಿಳೆಯಾದ ಮಲ್ಲಿ(ಬೆಳಕು), ಸಣ್ಣಿ(ಚಕ್ರಗಳು) ಕುಡುಕ ಪತಿಯಿಂದ ಯಾವ ಸುಖವನ್ನೂ ಕಾಣದೆ ಇದ್ದರೂ ಬದ್ಧತೆಯಿಂದ ಬದುಕುವರು. ಮಲ್ಲಿ ತನ್ನ ಕುಟುಂಬದ ನಿರ್ವಹಣೆಗೆ ಗಂಡನ ದುಡಿಮೆಯಲ್ಲಿ ಸಾಧ್ಯವಾಗದಾಗ ಮಗಳನ್ನು ಮತ್ತೊಬ್ಬರ ಮನೆಯಲ್ಲಿ ಕೆಲಸಕ್ಕೆ ಕಳುಹಿಸಲು ನಿರ್ಧರಿಸುವ ಅಸಹಾಯಕತೆಯ ಚಿತ್ರಣವಿದೆ. ಹೆಣ್ಣು ಕುಟುಂಬದಲ್ಲಿ ತನ್ನ ಸ್ಥಾನವನ್ನು ಗಳಿಸಲು ತಾಯ್ತನವನ್ನು ಅನುಭವಿಸುವುದು ಮುಖ್ಯ ಜವಾಬ್ದಾರಿಯಾಗಿದೆ. ಅದರಲ್ಲೂ ಗಂಡುಮಗುವಿನ ತಾಯಿಯಾಗಲು ಹಂಬಲಿಸುವ ಸ್ತ್ರೀಯರು ಸುಮಿತ್ರ(ಮಕ್ಕಳಾಟ), ಸೀತಮ್ಮ(ಧನ್ಯವಾದ) ಕಥೆಗಳಲ್ಲಿ ಕಂಡುಬರುತ್ತಾರೆ. ಈ ಕಥೆಗಳಲ್ಲಿ ಗಂಡುಮಗುವಿನ ಜನನ ಶ್ರೀಮಂತ ಕುಟುಂಬಗಳಲ್ಲಿ ಅನಿವಾರ್ಯತೆಯಿರುವಂತೆ ಬಡ ಕುಟುಂಬದಲ್ಲಿ ಅದು ಹೆಣ್ಣಿಗೆ ಅಷ್ಟಾಗಿ ಕಾಡುವುದಿಲ್ಲ. ಹೀಗೆ ಇವರ ಕಥೆಗಳಲ್ಲಿ ಹೆಣ್ಣು ಗಂಡಿನ ಲಿಂಗತಾರತಮ್ಯ ಬಡಕುಟುಂಬಗಳಿಗಿಂತ ಶ್ರೀಮಂತ ಕುಟುಂಬಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ತಾಯಿಯಾಗದ ಹೆಣ್ಣು ಅದಕ್ಕೆ ಕಾರಣ ಪುರುಷನಾದರೂ ಅದು ಮುಖ್ಯವಾಗದೆ ಯಾರೆಂಬುದನ್ನು ಕಥೆಯಲ್ಲಿ ತರದೆ, ಅದರಿಂದ ಸಮಸ್ಯೆಗೀಡಾಗುವುದು ಹೆಣ್ಣು ಎಂಬುದನ್ನು ನಿರೂಪಿಸುತ್ತದೆ. ತಾಯ್ತನದದಿಂದ ವಂಚಿತಳಾದ ಸರಸಿ ತವರುಮನೆಗೆ ಹೋಗುವ ಅನಿವಾರ್ಯತೆಯಿದೆ. ಅಂತ್ಯದಲ್ಲಿ ಸರಸಿ ಗಂಡನಲ್ಲಾದ ಆಕಸ್ಮಿಕ ರೀತಿಯ ಬದಲಾವಣೆ ಅವಳು ಗಂಡನ ಮನೆಯಲ್ಲಿ ಸ್ಥಾನವನ್ನು ಪಡೆಯುವಂತೆ ಮಾಡಿದೆ. ಹೀಗೆ ಒಂಟಿ ಮಹಿಳೆ ಅತ್ತೆ, ಗಂಡನ ನಿರ್ಲಕ್ಷ್ಯಕ್ಕೆ ಒಳಗಾಗಿ ಬದುಕುವ ಅತಂತ್ರ ಸ್ಥಿತಿಯನ್ನು ಬಯಲು ಮಾಡುತ್ತದೆ. ಇದಕ್ಕೆ ಪೂರಕವಾಗಿ ಎಂಬಂತೆ ಸಾವಿತ್ರಿ(ಆಸಕ್ತಿ) ತನ್ನ ಬಂಜೆತನಕ್ಕೆ ಗಂಡ ಕಾರಣನೆಂಬುದನ್ನರಿತು ಅಲ್ಲಿಗೆ ಸಮಾಧಾನವಾಗದೆ ದತ್ತುಮಗುವನ್ನು ಪಡೆಯಲು ಇಚ್ಛಿಸುತ್ತಾಳೆ. ಅದು ವಿಫಲವಾಗಿ ಕೃತಕ ಗರ್ಭಧಾರಣೆ ಮಾಡಲು ನಿರ್ಧರಿಸುತ್ತಾಳೆ. ಪತ್ನಿಯ ಈ ಎಲ್ಲ ನಿರ್ಧಾರಗಳಿಗೂ ಗಂಡ ಮೌನವಾಗಿ

ಪ್ರತಿಕ್ರಿಯಿಸುವುದರ ಹಿಂದೆ ಅಸಹಾಯಕತೆ ಮತ್ತು ಅಸೂಯೆಯಿದೆ ಎಂಬುದನ್ನು ಕಾಣುತ್ತದೆ. ಹೀಗೆ ಸರಸಿ ಬಾಡಿಗೆ ತಾಯ್ತನವನ್ನು ಪಡೆದು ಆ ಮಗು ಗಂಡನ ಸಹೋದ್ಯೋಗಿಗಳ ಪ್ರತಿರೂಪವನ್ನು ಪಡೆದರೆ ಎಂಬ ಭಯ. ಅದರಿಂದ ಸಮಾಜವನ್ನು ಎದುರಿಸುವ ಪರಿಣಾಮದಿಂದ ಹೆದರಿ ಒಂಟಿತನವನ್ನು ಸ್ವೀಕರಿಸಲು ಮುಂದಾಗುತ್ತಾಳೆ. ಹೀಗೆ ಹೆಣ್ಣು ತಾಯಿಯಾಗದ ಸಂದರ್ಭದಲ್ಲಿಯೂ ಹೆಚ್ಚು ಸಮಸ್ಯೆಯಾಗುವುದು ಮಹಿಳೆಗೇ ಎಂಬಂತೆ ಚಿತ್ರಿತವಾಗಿದೆ.

ನಗರ ಜೀವನದಲ್ಲಿ ಎರಡು ಮಕ್ಕಳ ತಾಯಿಯಾದ ಸುನಂದಳಿಗೆ(ಬಿಡುಗಡೆ) ಆಕಸ್ಮಿಕವಾಗಿ ಗಂಡ ಜಗನ್ನಾಥನ ಸಾವು ಬಾಧಿಸುವುದಿಲ್ಲ. ಕಾರಣ ಗಂಡ ಮತ್ತೋರ್ವ ಹೆಣ್ಣು ರೀಟಾಳ ದೈಹಿಕ ಸಂಪರ್ಕವನ್ನು ಹೊಂದಿದ್ದ. ಹೀಗೆ ಮಾನಸಿಕವಾಗಿ ಬಳಲಿದ ಮಹಿಳೆ ನಿಮಿತ್ತ ವಿದೇಶಕ್ಕೆ ಹೋಗಿದ್ದ ಗಂಡನಿಗೆ "ಇವತ್ತು ಏನಾದರೊಂದು ಇತ್ಯರ್ಥ ಆಗಬೇಕು. ನಮ್ಮಿಬ್ಬರಲ್ಲಿ ಯಾರಾದ್ರೂ ಒಬ್ರನ್ನು ನೀವು ಆರಿಸಿಕೊಳ್ಳಿ. ನಾನು ಬೇಡಾಂತ ನಿಮಗನಿಸಿದ್ರೆ ಹೀಗೇಂತ ಹೇಳಿ. ಮಕ್ಕಳನ್ನು ಕರ್ಕೊಂಡು ಅಣ್ಣನ ಮನೆಗೆ ಹೊರಟು ಹೋಗ್ತೀನಿ!"(ಬಿಡುಗಡೆ, ಪುಟ–೪೭) ಎಂದು ನಿಶ್ಚಯಿಸಿದಳು. ಆದರೆ ಗಂಡನ ಆಕಸ್ಮಿಕ ಸಾವು ತಾನು ಬಯಸಿದ್ದೇ ಬಿಡುಗಡೆ ಅಂದೇ ಬಂತು. ಗೆಳತಿ ಕಮಲಿ ಅವಳನ್ನು ಸಂತೈಸುತ್ತಾ "ಸತ್ತವನು ಸತ್ತ, ನೀನ್ಯಾಕೆ ಇಷ್ಟು ನಿಷ್ಠುರವಾಗಿ ಮಾತಾಡ್ತೀಯ" ಎಂದು ಕೇಳಿದಾಗ "ಇನ್ನೂ ಬದುಕೋದಕ್ಕೆ"(ಬಿಡುಗಡೆ, ಪುಟ–೫೫) ಎಂಬ ಧ್ವನಿಯ ಹಿಂದೆ ಗಂಡನ ಬಗ್ಗೆ ತಿರಸ್ಕಾರ, ಆತನಿಲ್ಲದೆಯೂ ತಾನು ಬದುಕಬಲ್ಲೆ ಎಂಬ ಗಟ್ಟಿತನ ಕಾಣುತ್ತದೆ. ಇದಕ್ಕೆ ಪೂರಕ ಪಾತ್ರವಾದ ಗಿರಿಜಾ(ಬೇಟೆ) ಗಂಡನ ಅಪಘಾತದಿಂದಾದ ಗಂಡನ ಸಾವಿನಿಂದ ಅವಳಿಗೆ ಬದುಕು ನೀರಸವಾಗಿ ಕಂಡಿತು. ಆದರೆ ಈ ಸಂದರ್ಭದಲ್ಲಿ ಬಂದ ಮೈದುನ ರಾಮಪ್ರಸಾದ "ಇದ್ದದ್ದನ್ನೆಲ್ಲ ಖರ್ಚು ಮಾಡ್ಬೇಡ, ಉಳಿಸು ಉಳಿಸು ಅಂತ ನಾನು ಯಾವಾಗ್ಲೂ ಶಂಕರನಿಗೆ ಹೇಳ್ತಿದ್ದೆ. ಈಗ ನಿಮ್ಮ ಕೈಗೆ ಚಿಪ್ಪುಕೊಟ್ಟು ಹೊರಟು ಹೋದ್ನಲ್ಲ!"(ಬೇಟೆ, ಪುಟ–೯೭) ಎಂದು ತಿರಸ್ಕಾರದ ಮಾತನಾಡಿದ. ಈ ಸಂದರ್ಭದಲ್ಲಿ ಗಂಡನ ಸ್ನೇಹಿತ ಜಗದೀಶ ಅವರಿಗೆ ಆಸರೆಯಾಗಿದ್ದ. ಆದರೆ ಸಮಾಜದ ನಿಂದನೆಗೆ ಒಳಗಾಗಿ ಆತನು ಅಸಹಾಯಕನಾದಾಗ, "ಪ್ರಪಂಚದ ರೀತೀನೆ ಹಾಗೆ ಕಣೆ!"(ಬೇಟೆ, ಪುಟ–೧೦೩) ಎಂದು ಹೇಳುವುದರ ಮೂಲಕ ಸಮಾಜವನ್ನು ಎದುರಿಸುವ ಛಲದ ಮನಸ್ಥಿತಿಯನ್ನು ತಂದುಕೊಟ್ಟಿತು. ಇದಕ್ಕೆ ವ್ಯತಿರಿಕ್ತವಾದ ಪಾತ್ರವಾದ ವೈದೇಹಿ(ತುಮುಲ) ಗಂಡನಿಲ್ಲದೆ ಒಂದು ಮಗುವಿನ ತಾಯಿಯಾಗಿ ಹೆತ್ತವರ ಆಶ್ರಯದಲ್ಲಿ ಬದುಕುತ್ತಿದ್ದಾಳೆ. ತಂದೆ ಮರುವಿವಾಹಕ್ಕೆ ಮಗಳನ್ನು ಒತ್ತಾಯಿಸುತ್ತಿದ್ದಾನೆ. ವರನ ಕಡೆಯವರು ಹಾಕಿದ ಷರತ್ತುಗಳಿಗೆ ಒಪ್ಪಿಕೊಂಡು. "ದುಡ್ಡಿನದು ದೊಡ್ಡ ವಿಷಯವಲ್ಲ. ಪ್ರಾವಿಡೆಂಟ್ ಫಂಡಿನದು ಹಣವಿದೆ. ಸ್ನೇಹಿತರ ಹತ್ರ ಸ್ವಲ್ಪ ಸಾಲ ಇಸ್ಕೊಂಡರಾಯ್ತು. ಮಗೂ ವಿಷ್ಯ ಯೋಚ್ನೆ ಮಾಡ್ಬೇಡ. ವೈದೇಹಿ, ಅವನನ್ನು ನಾನು ನೋಡ್ಕೋತೀನಿ" ಎಂದು ತಾಯಿ ನಿರ್ಧರಿಸಿದಳು. ಹೀಗೆ ಮಗಳನ್ನು

ಒಂದು ಹೊರೆಯಾಗಿ ಕಾಣುವ, ಇಲ್ಲವೇ ಅವಳಿಗೆ ವಿವಾಹದ ಹೊರತು ಭವಿಷ್ಯವಿಲ್ಲ ಎಂಬ ನಿಲುವು, ಅಸಹಾಯಕತೆ ಹೆತ್ತವರಲ್ಲಿ ನೆಲೆಸಿರುವುದು ಸಹಜ. ಆದರೆ ಮಗುವನ್ನು ಬಿಟ್ಟಿರಲಾರದೆ "ಮಗೂನ ಬಿಟ್ಟು ಹ್ಯಾಗಿರಲಿ ನಾನು? ಅಮ್ಮ ನಿಂಗೂ ಗೊತ್ತಾಗೊಲ್ವ? ನಂಗೀ ಮದ್ವೆ ಬೇಡಮ್ಮ!" ಎನ್ನುತ್ತಾ ದುಃಖಿಸುವ ಆ ಧ್ವನಿಯ ಹಿಂದೆ ಹೆಣ್ಣಿಗಿರುವ ತಾಯ್ತನದ ಸಹಜ ವಾತ್ಸಲ್ಯ ಬದುಕುವ ಚೈತನ್ಯ ಕಾಣಬಹುದಾಗಿದೆ.

ಇವರ ಕಥೆಗಳಲ್ಲಿ ಬರುವ ಹೆಣ್ಣು ಪಾತ್ರಗಳು ಕುಟುಂಬದಲ್ಲಿ ತಮ್ಮ ದೈಹಿಕ ಪಾವಿತ್ರ್ಯತೆಯನ್ನು ರಕ್ಷಿಸಿಕೊಳ್ಳುವುದು ಅವಶ್ಯಕವಾಗಿದೆ. ಕಾಮುಕನ ಸ್ವಾರ್ಥಕ್ಕೆ ಬಲಿಯಾದ ಪತ್ನಿಯನ್ನು ಸ್ವೀಕರಿಸಲಾಗದ ಗಂಡ ಸಮಾಜಕ್ಕೆ ಹೆದರಿ ಹೆಂಡತಿಯನ್ನು ಸ್ವೀಕರಿಸಿದರೂ ಮೊದಲಿನ ಪ್ರೀತಿ, ವಿಶ್ವಾಸವಿಲ್ಲದೆ ಅವಳನ್ನು ಕಡೆಗಣಿಸುತ್ತಾನೆ. "ನಿಮ್ಮ ಸಂಬಂಧ ನಿನ್ನೀಗ ಮುಗಿಯಿತು. ಯಾರ ಹಂಗೂ ಇಲ್ಲದೆ ಬದುಕಬೇಕೆಂದು ಹೊರಟಿದ್ದೇನೆ. ನನ್ನನ್ನು ಹುಡುಕುವ ಅಗತ್ಯವಿಲ್ಲ"(ಒಂದು ಘಟನೆ ಮತ್ತು ಅನಂತರ (ಪುಟ–೭೭) ಎಂದು ಕುಟುಂಬ ತೊರೆಯುವ ಅವಳ ನಿರ್ಧಾರ, ಅವಳಿಗೆ ಬದುಕನ್ನು ಎದುರಿಸುವ ಧೈರ್ಯವನ್ನು ತಂದುಕೊಟ್ಟಿದೆ. ಶ್ರೀಮಂತ ಕುಟುಂಬದ ಸೊಸೆಯಾಗಿ ಮಾವನ ಅತ್ಯಾಚಾರಕ್ಕೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುವ ದುರಂತ ಬದುಕು' ಒಂದು ಗಿಣಿಯ ಕಥೆ'ಯಲ್ಲಿದೆ. ಅವಿವಾಹಿತ ತರುಣಿ ನಿರ್ಗತಿಕ ನಳಿನಿ ತಾನು ಕೆಲಸ ಮಾಡುತ್ತಿರುವ ಅಧಿಕಾರಿಯ ಅತ್ಯಾಚಾರಕ್ಕೆ ಒಳಗಾಗಿ ಅವಳ ಬದುಕು ದುರಂತವಾಗುತ್ತದೆ. ಅಲ್ಲದೇ ತನ್ನ ಗೆಳತಿಗೆ ಅದರ ಕಾರಣವನ್ನು ಪತ್ರದ ಮೂಲಕ ತೋಡಿಕೊಳ್ಳುವ ನಿರೂಪಣೆಯಿದೆ. ಆದರೆ ಆ ಪತ್ರದಲ್ಲಿ ಇದನ್ನು ಬಹಿರಂಗಪಡಿಸಬೇಡ ಎಂಬ ಅಂಜಿಕೆಯಿದೆ. ಈ ಮೂಲಕ ಕಥೆಗಾರ್ತಿ ಸಮಾಜದಲ್ಲಿ ಮಹಿಳೆಯ ಅಸಹಾಯಕತೆಯನ್ನು ಬಹಿರಂಗಪಡಿಸುವ ಚಿತ್ರಣವಿದೆ. ತಂದೆಯ ಈ ಕೃತ್ಯವನ್ನು ತಿಳಿದು ಪ್ರತಿಭಟಿಸಿ ವಿಫಲವಾಗುವ ಶೋಭಾಳ ಮುಖಾಂತರ ಹಣವಂತರ ದೌರ್ಬಲ್ಯವನ್ನು ಬಹಿರಂಗಗೊಳಿಸುವ ಧ್ವನಿ ಇಲ್ಲಿದೆ.

ಅನುಪಮಾ ಅವರ ಕಥೆಗಳಲ್ಲಿ ಹೆಣ್ಣು ತನ್ನನ್ನು ಗುರುತಿಸಿಕೊಳ್ಳುವುದು ಕುಟುಂಬ ಮೂಲದಿಂದ. ಹೆಣ್ಣನ್ನು ವಿವಾಹಕ್ಕೆ ಅಣಿಗೊಳಿಸುವುದು ಅತ್ಯಂತ ಕಠಿಣವಾದದ್ದು ಹಾಗೂ ಆದ್ಯ ಕರ್ತವ್ಯವೆಂದು ಭಾವಿಸುವ ಹೆಣ್ಣಿನ ತಂದೆ–ತಾಯಿಗಳಿದ್ದಾರೆ. ಇವರಲ್ಲಿ ತಂದೆಗಿಂತ ತಾಯಂದಿರು ಹೆಣ್ಣುಮಕ್ಕಳನ್ನು ಗಂಡನ ಮನೆಗೆ ಸಾಗುಹಾಕುವಲ್ಲಿ ಹೆಚ್ಚು ಕಾತುರರಾಗಿರುತ್ತಾರೆ. ತರುಣಿಯರು ವಿವಾಹದಿಂದ ವಂಚಿತರಾಗುವುದು ತನ್ನ ರೂಪದಿಂದ ಇಲ್ಲವೇ, ವರನ ಬೇಡಿಕೆಗಳನ್ನು ಈಡೇರಿಸಲಾರದೆ ತಿರಸ್ಕೃತರಾಗುತ್ತಾರೆ. ಅವಿವಾಹಿತ ಹೆಣ್ಣು ತನ್ನ ಮನೆಯಲ್ಲಿ ಹಾಗೂ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗುವ ಸಾಧ್ಯತೆಗಳು ಹೆಚ್ಚು ಕಥೆಗಳ ನಿರೂಪಣೆಯಲ್ಲಿದೆ. ಸಮಾಜ ಬಯಸುವಂತೆ ಇಲ್ಲಿನ ಕುಟುಂಬಗಳು ರೂಪುಗೊಳ್ಳುತ್ತದೆ. ಹೆಣ್ಣುಮಕ್ಕಳು ಹೆತ್ತವರ ಹಾಗೂ ಸಮಾಜದ ನಿಂದನೆ ಸಹಿಸಲಾರದೆ ಶ್ರೀಮಂತ ಮುದಿ ಗಂಡಸನ್ನು ವಿವಾಹವಾಗಲು

ಸಿದ್ಧರಾಗುತ್ತಾರೆ. ಪದ್ಮ(ಮೂಲ ನಕ್ಷತ್ರದ ಹುಡುಗಿ) ಮುದಿ ಗಂಡನನ್ನು ಆಯ್ಕೆ ಮಾಡಿಕೊಂಡಿದ್ದು ಸ್ವಯಿಚ್ಛೆಯಿಂದ ಎಂದು ತೋರಿದರೂ ಪರಿಸ್ಥಿತಿಯನ್ನು ಸುಧಾರಿಸುವುದು ಮುಖ್ಯವಾಗಿರುತ್ತದೆ. ಈ ಹೆಣ್ಣುಮಗಳ ತಾಯಿ ತನ್ನ ಗಂಡನಿಗೆ "ಪದ್ದಿ ಅವರ ಕೈಹಿಡಿದರೆ ಸುಖವಾಗಿರುತ್ತಾಳೇಂದ್ರ, ನಮ್ಮ ಕಿಟ್ಟೀನೂ ಮುಂದೆ ಓದೋಕೆ ಅನುಕೂಲವಾಗುತ್ತೆ"(ಮೂಲ ನಕ್ಷತ್ರದ ಹುಡುಗಿ, ಪುಟ-೩೮)ಎಂಬ ಧ್ವನಿ ವಿವಾಹವಾಗುವಂತೆ ಒತ್ತಾಯಿಸಿತು. ಹೀಗೆ ನಿರ್ಗತಿಕ ಹೆಣ್ಣು ತನ್ನ ಬದುಕನ್ನು ದುರಂತಗೊಳಿಸುವ ನಿರೂಪಣೆಯಿದೆ. ಹೀಗೆ ಇಲ್ಲಿ ಅವಿವಾಹಿತ ಹೆಣ್ಣು ಕುಟುಂಬದ ನೆಮ್ಮದಿಯನ್ನು ಕಲಕುವಂತೆ ಕಥೆ ಸ್ತ್ರೀಯನ್ನು ನಿರೂಪಿಸುತ್ತದೆ. ಇಲ್ಲಿನ ತರುಣಿಯರು ವಿವಾಹ ತಮ್ಮ ಜೀವನದ ಮುಖ್ಯ ಗುರಿಯೆಂಬಂತೆ ಭಾವಿಸುತ್ತಾರೆ. ಅದು ಸಾಧ್ಯವಾಗದಾಗ ಮಾನಸಿಕ ರೋಗಿಗಳಾಗಿ ಬಳಲುವವರು. ಸುಧಾ(ಆಡು ಬಾ ಹಂಸ) ಇಂತಹ ಸ್ತ್ರೀ ಪಾತ್ರವಾಗಿ ಮೂಡಿಬಂದಿದೆ. ಮಾನಸಿಕ ಅಸ್ವಸ್ಥತೆ ಕ್ಷಣಿಕ. ಇದಕ್ಕೆ ಪರಿಹಾರ ವಿವಾಹ. ಅದು ಸಾಧ್ಯವಾದಾಗ ಇಲ್ಲಿನ ತರುಣಿಯರು ಸ್ವಸ್ಥಗೊಳ್ಳುತ್ತಾರೆ. ಆ ಮೂಲಕ ಕುಟುಂಬದಲ್ಲಿಯೂ ಶಾಂತ ವಾತಾವರಣ ನಿರ್ಮಾಣಗೊಳ್ಳುತ್ತದೆ. ಹೀಗೆ ಇಲ್ಲಿ ಹೆಣ್ಣು ತನ್ನ ಅಸ್ತಿತ್ವವನ್ನು ಕುಟುಂಬ ಮೂಲದಿಂದ ಮಾತ್ರ ಪಡೆಯಲು ಸಾಧ್ಯ ಎಂದು ಅನುಪಮಾ ಅವರ ಕಥೆಗಳು ಅಭಿವ್ಯಕ್ತಿಸುತ್ತವೆ.

ಅನುಪಮಾ ಅವರ ಕಥೆಗಳಲ್ಲಿನ ಹೆಣ್ಣು ಕುಟುಂಬದಲ್ಲಿ ಪ್ರವೇಶ ಪಡೆಯುವುದೇ ಅತ್ಯಂತ ಕಷ್ಟಕರವಾಗಿದೆ. ಹೀಗಿರುವಾಗ ಕುಟುಂಬದಲ್ಲಿ ಸ್ಥಾನವನ್ನು ಪಡೆಯುವುದು ಅಷ್ಟೇ ಕಠಿಣ ಎಂಬ ಪರಿಸ್ಥಿತಿಯನ್ನು ಇಲ್ಲಿನ ಕಥೆಗಳು ನಿರೂಪಿಸಿವೆ. ಇಲ್ಲಿ ಹೆಣ್ಣು ಸ್ವಂತ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ಗಂಡ, ಮಕ್ಕಳ ಸೇವೆ ಮಾಡುವುದೇ ಮುಖ್ಯ ಕರ್ತವ್ಯವೆಂದು ಭಾವಿಸುತ್ತಾರೆ. ಇಲ್ಲಿ ಗಂಡಸರು ಪತ್ನಿಯ ಸಣ್ಣಸಣ್ಣ ಸಂಗತಿಗಳನ್ನು ಈಡೇರಿಸದಿದ್ದಾಗ ಮಾನಸಿಕವಾಗಿ ಕೊರಗುವ ಪಾತ್ರವಾಗಿ ಸುಂದರಿ(ತಲ್ಲಣಿಸದಿರು ಮನವೆ), ಶಾಂತಾ(ಮನವೆಂಬ ಮರ್ಕಟ) ಅಭಿವ್ಯಕ್ತಗೊಂಡಿದ್ದಾರೆ. ತಾಯಿಯಾಗಿ ಹೆಣ್ಣು ಗಂಡನ, ಅತ್ತೆಯ ನಿರ್ಲಕ್ಷ್ಯಕ್ಕೆ ಗುರಿಯಾಗಿ ಗಂಡನ ಕುಟುಂಬದಿಂದ ಬಹಿಷ್ಕೃತಳಾಗುತ್ತಾಳೆ. ಇದು ಸಹಜವೆಂಬಂತೆ ಬಿಂಬಿತವಾಗಿದೆ. ಆದರೆ ಇದಕ್ಕೆ ವಿರುದ್ಧವಾಗಿ ಗಂಡಸು ತಂದೆಯಾದಾಗ ಹೆಚ್ಚು ಗಂಭೀರವಾಗಿ ಮುಕುಂದ ಕಂಡುಬರುತ್ತಾನೆ.

ಇನ್ನು ಸುಶಿಕ್ಷಿತ ಹೆಣ್ಣು ಹಿರಿಯರ ಒತ್ತಾಯಕ್ಕೆ ವಿವಾಹವಾಗಿದ್ದರೂ ಅವಳಿಗೆ ಅಧ್ಯಾಪಕಿಯಾಗುವ ಕನಸು ಇರುತ್ತದೆ. ಆದರೆ ತನಗಿಂತ ದಡ್ಡಳಾದ ಸ್ನೇಹಿತೆ ವೈದ್ಯೆಯಾಗಿರುವುದು ಅವಳಲ್ಲಿ ತನ್ನತನದ ಬಗ್ಗೆ ಆಲೋಚಿಸುವಂತಾಗುತ್ತದೆ. ವನಜಾಕ್ಷಿ(ಕರೆ), ಸತ್ಯವತಿ(ಹೊಣೆ) ಮುಖ್ಯ ಪಾತ್ರಗಳಾಗಿ ಕಂಡುಬರುತ್ತಾರೆ. ಇಲ್ಲಿ ವನಜಾಕ್ಷಿ ತನ್ನ ಗುರಿ ಸಾಧನೆಗೆ ಮನೆ, ಗಂಡ, ಮಕ್ಕಳ ಎಲ್ಲ ಜವಾಬ್ದಾರಿಯನ್ನು ಚಾಚೂ ತಪ್ಪದೇ ಪಾಲಿಸುವುದಾಗಿ ವಾಗ್ದಾನ ನೀಡುತ್ತಾ ತನ್ನತನವನ್ನು ಸಾಧಿಸುವ ಮನೋಭಾವದವಳಾಗುತ್ತಾಳೆ. ಇಲ್ಲಿ ಗೃಹಿಣಿಯು ಕುಟುಂಬ

ಹಾಗೂ ಹೊರಗಿನ ಸೇವೆಯನ್ನು ನಿಭಾಯಿಸುವುದರಲ್ಲಿರುವ ಧಾರಣಶಕ್ತಿಯನ್ನು ಕಾಣುತ್ತೇವೆ. ತನ್ನ ಅಧ್ಯಾಪಕಿಯಾಗುವ ಕನಸನ್ನು ಗಂಡ ತಿರಸ್ಕರಿಸಿದಾಗ ಅದಕ್ಕೆ ಪರಿಹಾರವನ್ನು ತಾಯಿ ಕುಟುಂಬದಲ್ಲಿ ಬಯಸುತ್ತಾಳೆ. ಆದರೆ ತಾಯಿ "ಮದ್ವೆಯಾಗಿ ಮಗೂ ಆದ್ರೂ ಅಮ್ಮಾ ನಿಂಗೆ ಬುದ್ಧಿ ಬರಲಿಲ್ಲಲ್ವೆ?! ನಿನ್ನ ಗಂಡನಿಗೆ ಹ್ಯಾಗೆ ಇಷ್ಟವೂ ಹಾಗೇ ಇರ್ಬೇಕಮ್ಮ. ಆತಂಗೆ ಬೇಜಾರು ಮಾಡೋದ್ರಿಂದ ಯೇನು ಸುಖ ಹೇಳು?" ಹೀಗೆ ಹೆಣ್ಣಿನ ಸಾಧನೆ ಕುಟುಂಬದಲ್ಲಿ ಪೂರಕ ವಾತಾವರಣವಿಲ್ಲದೆ ಹೆಣ್ಣು ಮಾನಸಿಕವಾಗಿ ತಲ್ಲಣಗೊಂಡ ಪಾತ್ರವಾಗಿ ವನಜಾಕ್ಷಿ, ಸತ್ಯವತಿ ಪಾತ್ರಗಳು ಅಭಿವ್ಯಕ್ತಗೊಂಡಿವೆ. ಕುಟುಂಬದಲ್ಲಿ ಹೆಣ್ಣು ಪಾವಿತ್ರ್ಯತೆಯನ್ನು ಕಾಯ್ದುಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ತನ್ನದಲ್ಲದ ತಪ್ಪಿಗೆ ಅತ್ಯಾಚಾರಕ್ಕೆ ಒಳಗಾದ ಮಹಿಳೆ(ಒಂದು ಘಟನೆ ಮತ್ತು ಅನಂತರ) ಆ ಕುಟುಂಬವನ್ನು ತೊರೆಯುವಂತಹ ವಾತಾವರಣ ಕಥೆಯಲ್ಲಿ ಚಿತ್ರಿತವಾಗಿದೆ. ಆದರೆ ವ್ಯತಿರಿಕ್ತವಾಗಿ ಪುರುಷ ಮತ್ತೊಬ್ಬ ಹೆಣ್ಣಿಗಾಗಿ ಕುಟುಂಬವನ್ನು ನಿರ್ಲಕ್ಷಿಸುವುದು ಸಹಜವೆಂಬಂತೆ ಇಲ್ಲಿ ಬಿಂಬಿತವಾಗಿದೆ. ಹೀಗೆ ಪಾವಿತ್ರ್ಯತೆ ಹೆಣ್ಣು-ಗಂಡುಗಳಿಗೆ ಕುಟುಂಬ ತೋರಿಸುವ ತಾರತಮ್ಯವನ್ನು ನಿರೂಪಿಸುತ್ತದೆ.

ಅನುಪಮಾ ಅವರ ಕಥೆಗಳಲ್ಲಿ ನಗರ ಪ್ರದೇಶಗಳಲ್ಲಿ ವಾಸಿಸುವ ವಿಧವೆಯ ಬದುಕು ಅತ್ಯಂತ ಶೋಚನೀಯವಾಗಿರುವುದನ್ನು ಕಾಣುತ್ತೇವೆ. ಇಲ್ಲಿ ಗಿರಿಜಾ(ಬೇಟೆ) ಪತಿಯ ಆಕಸ್ಮಿಕ ಸಾವಿನಿಂದ ವಿಚಲಿತಳಾಗುತ್ತಾಳೆ. ಆದರೆ ಈ ಸಂದರ್ಭದಲ್ಲಿ ಗಿರಿಜಾ ಗಂಡನ ಅಣ್ಣ ರಾಮಪ್ರಸಾದ "ಇದ್ದುದನ್ನೆಲ್ಲ ಖರ್ಚು ಮಾಡ್ಬೇಡ ಉಳಿಸು ಉಳಿಸು ಅಂತ ನಾನು ಯಾವಾಗ್ಲು ಶಂಕರನಿಗೆ ಹೇಳ್ತಿದ್ದೆ. ಈಗ ನಿಮ್ಮ ಕೈಗೆ ಚಿಪ್ಪು ಕೊಟ್ಟು ಹೊರಟು ಹೋದ್ನಲ್ಲ!"(ಬೇಟೆ, ಪುಟ-೯೮) ಎಂದು ಅವಳ ಸ್ಥಿತಿಯನ್ನು ಹಂಗಿಸುವುದಲ್ಲದೆ ಮೈದುನ ಪ್ರಸಾದ "ನನ್ಹತ್ರ ದುಡ್ಡಿದ್ದಿದ್ರೆ ಖಂಡಿತ ನಿಮಗೆ ಕೊಡ್ತಿದ್ದೆ ಅತ್ತಿಗೆ. ನನ್ಹತ್ರ ಏನೂ ಇಲ್ಲ. ಸಾಲ ಮಾತ್ರ ಬೇಕಾದಷ್ಟಿದೆ!"(ಬೇಟೆ-೯೮) ಎಂದು ಹೇಳುವ ಮೂಲಕ ಅಸಹಾಯಕತೆಯನ್ನು ತೋರಿಸುತ್ತಾನೆ. ಹೀಗೆ ನಗರ ಪ್ರದೇಶದಲ್ಲಿ ಹೆಣ್ಣು ಕುಟುಂಬವನ್ನು ರಕ್ಷಿಸುವ ಒತ್ತಡಕ್ಕೆ ಬಲಿಯಾಗುತ್ತಾಳೆ. ಅರಕ್ಷಿತವಾದ ಕುಟುಂಬಕ್ಕೆ ಆಸರೆಯಾಗಿ ಬಂದವರು ಪತಿಯ ಸ್ನೇಹಿತ ಜಗದೀಶ. ಆದರೆ ಆತ ಸಮಾಜ ನಿಂದನೆಗೆ ಹೆದರುತ್ತಾನೆ. ಆಗ ಅದನ್ನು ಎದುರಿಸುವ ಧೈರ್ಯವನ್ನೇ ಹೆಣ್ಣಿಗೆ(ಗಿರಿಜಾ) ನೀಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಗಿರಿಜಾ ಪಾತ್ರದಲ್ಲಿ ಅಂತಹ ಆತ್ಮವಿಶ್ವಾಸವನ್ನು ಮೂಡಿಸಲಾಗಿದೆ.

'ಮೌನ' ಕಥೆಯಲ್ಲಿ ಶಾಂತಮ್ಮ ಕುಟುಂಬದಲ್ಲಿ ಪತ್ನಿ, ತಾಯಿ, ಅತ್ತೆ, ಅಜ್ಜಿಯಾಗಿ ಆ ಕುಟುಂಬದ ಎಲ್ಲಾ ಬೇಕು ಬೇಡಗಳನ್ನು ಈಡೇರಿಸುವ ನಿಸ್ವಾರ್ಥ ಸೇವೆಯನ್ನು ಮಾಡುವ ಸಾತ್ವಿಕ ಪಾತ್ರವಾಗಿ ಕಂಡುಬರುತ್ತಾಳೆ. ಆದರೆ ಆಕಸ್ಮಿಕ ಅಪಘಾತದಿಂದ ಕೋಮಾ ಸ್ಥಿತಿಯನ್ನು ತಲುಪಿದ ಶಾಂತಮ್ಮನಿಂದ ಆ ಕುಟುಂಬ ತನ್ನ ಚಲನಶೀಲತೆಯನ್ನು ಕಳೆದುಕೊಳ್ಳುತ್ತದೆ.

ಶಾಂತಮ್ಮ ಆರೋಗ್ಯದಿಂದಿದ್ದಾಗ ಎಲ್ಲರಿಗೂ ಬೇಕಾದ ಮಹಿಳೆ. ಈಗ ಅಸಹಾಯಕ ಸ್ಥಿತಿಯಲ್ಲಿರುವಾಗ ಆಕೆಯ ಸಾವನ್ನು ಆ ಕುಟುಂಬದ ಎಲ್ಲಾ ಸದಸ್ಯರು ಬಯಸುವಂತೆ ಕತೆಯ ಆಶಯವಿದೆ. ಹೀಗೆ ಹೆಣ್ಣು ಕುಟುಂಬದಲ್ಲಿ ಅವಶ್ಯಕ ಎಂದು ತಿಳಿಸುವುದರ ಮೂಲಕ ಆ ತಾಯಿಯಿಲ್ಲದೆ ಕುಟುಂಬ ಶಿಥಿಲಗೊಳ್ಳುವುದನ್ನು ಕಥೆ ನಿರೂಪಿಸುತ್ತದೆ. ಮತ್ತೊಂದು ಕಥೆಯಾದ 'ತುಮುಲ'ದಲ್ಲಿ ವೈದೇಹಿ ಪತಿಯನ್ನು ಕಳೆದುಕೊಂಡು ತವರುಮನೆ ಸೇರಿದ್ದಾಳೆ. ಅಲ್ಲಿ ತಂದೆ ತಾಯಿಯ ಒತ್ತಾಯದಿಂದ ತನಗೆ ಇಷ್ಟವಿಲ್ಲದಿದ್ದರೂ ಮರುವಿವಾಹಕ್ಕೆ ಒಪ್ಪಿಕೊಳ್ಳುವ ಅತಂತ್ರ ಪರಿಸ್ಥಿತಿಗೆ ಕುಟುಂಬ ಕಾರಣವಾಗಿದೆ.

ಹೀಗೆ ಅನುಪಮಾ ಅವರ ಕತೆಯಲ್ಲಿ ಕಂಡುಬರುವ ಕುಟುಂಬಗಳು ಸಾಮಾಜಿಕ ಜವಾಬ್ದಾರಿಯನ್ನು ಪಾಲಿಸುವುದು ಪರಮಗುರಿ ಎಂಬಂತಿವೆ. ಇಲ್ಲಿನ ಕುಟುಂಬಗಳು ಸಮಾಜೀಕರಣಗೊಂಡ ಕುಟುಂಬಗಳಾಗಿವೆ. ಇಲ್ಲಿ ಹೆಣ್ಣು ಸುರಕ್ಷಿತವಾಗಿರುವುದು ಕುಟುಂಬದಲ್ಲಿ ಮಾತ್ರ ಎಂದು ಬಿಂಬಿಸಲಾಗಿದೆ. ಆದರೆ ಗಂಡನ ಕುಟುಂಬವು ಅವಳಿಗೆ ಅಸುರಕ್ಷವಾಗಿದೆ. ಇಲ್ಲಿ ಹೆಣ್ಣು ಕುಟುಂಬದ ಶಕ್ತಿಯಾಗಿರುವಂತಹ ಆದರ್ಶ ಪಾತ್ರಗಳಾಗಿ ಕಂಡುಬರುತ್ತವೆ. ಹೀಗೆ ಅನುಪಮಾ ಅವರು ಚಿತ್ರಿಸಿರುವ ಕುಟುಂಬಗಳಲ್ಲಿ ಹೆಣ್ಣು ಅಸುರಕ್ಷಿತವಾಗಿರುವಂತೆ ತೋರುತ್ತವೆ. ಕುಟುಂಬದ ರಕ್ಷಣೆಗೆ ಹೆಣ್ಣು ಮತ್ತಷ್ಟು ಅದರಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುತ್ತವೆ. ಹೀಗೆ ಕುಟುಂಬಗಳು ಹೆಣ್ಣಿಗೆ ನೆಮ್ಮದಿಯ ವಾತಾವರಣವನ್ನು ನೀಡುವಲ್ಲಿ ವಿಫಲವಾಗಿದೆ. ಈ ವಿಫಲತೆಯನ್ನು ಸಮಾಜದಲ್ಲಿ ಗುರುತಿಸುವ ಪ್ರಯತ್ನವನ್ನು ಅನುಪಮಾ ಅವರ ಕಥೆಗಳು ಮಾಡುತ್ತವೆ.

ಅನುಪಮಾ ಅವರ ಕಥೆಗಳಲ್ಲಿ ಮಧ್ಯಮ ಹಾಗೂ ಕೆಳವರ್ಗದ ಸ್ತ್ರೀಯರು ಕಂಡುಬರುತ್ತಾರೆ. ಈ ಸ್ತ್ರೀ ಪಾತ್ರಗಳು ಗೃಹಿಣಿ, ತಾಯಿ, ವೇಶ್ಯೆ, ಕಳ್ಳ, ಪರಿತ್ಯಕ್ತ ಮಹಿಳೆ, ವಿಧವೆ, ಅವಿವಾಹಿತ ಹೆಣ್ಣು, ಉದ್ಯೋಗಸ್ಥ ಮಹಿಳೆ, ಗ್ರಾಮೀಣ ಮಹಿಳೆ ಹೀಗೆ ವಿವಿಧ ಪಾತ್ರಗಳಾಗಿ ಕಥೆಯಲ್ಲಿ ಗುರುತಿಸಿಕೊಂಡಿದ್ದಾರೆ. ಹೆಣ್ಣು ಇವರ ಎಲ್ಲಾ ಕಥೆಗಳಲ್ಲಿ ಕುಟುಂಬ ಹಾಗೂ ಸಮಾಜದಿಂದ ಸಮಾಜೀಕರಣಗೊಂಡ ಪಾತ್ರಗಳಾಗಿ ಕಂಡುಬರುತ್ತಾರೆ. ಅವಿವಾಹಿತ ಸ್ತ್ರೀಯರಾದ ಪದ್ದಿ(ಮೂಲ ನಕ್ಷತ್ರದ ಹುಡುಗಿ), ಶಾರದೆ(ಹಿತ್ತಲ ಗಿಡವೇ ಮದ್ದಾಯಿತು), ಸುಧಾ(ಆಡು ಬಾ ಹಂಸ), ಉಮಾ(ಛಲ) ಇತ್ಯಾದಿ ಪಾತ್ರಗಳು ಅವಿವಾಹಿತ ತರುಣಿಯರಾಗಿ ಕಂಡುಬರುತ್ತಾರೆ. ಇಲ್ಲಿ ಈ ತರುಣಿಯರು ಕುಟುಂಬ ಎಂಬ ಚೌಕಟ್ಟಿನೊಳಗೆ ಪ್ರವೇಶ ಪಡೆಯುವುದೇ ತಮ್ಮ ಜೀವನದ ಮುಖ್ಯ ಗುರಿಯೆಂಬಂತೆ ಕತೆಗಳ ವಿವರಗಳು ಕಂಡುಬರುತ್ತವೆ. ವಿವಾಹವಾಗದೆ ಇರುವುದು ಹೆಣ್ಣುಮಕ್ಕಳ ಸಮಸ್ಯೆಯಾಗಿ ಕಂಡುಬರದೆ, ಇಲ್ಲಿ ಆ ಕುಟುಂಬದ ಆರ್ಥಿಕ ಪರಿಸ್ಥಿತಿ ಅವರನ್ನು ವಿವಾಹದಿಂದ ತಿರಸ್ಕೃತರಾಗುವಂತೆ ಕಥೆ ನಿರೂಪಿಸುತ್ತದೆ. ಹೀಗೆ ತಿರಸ್ಕೃತರಾದ ಮಹಿಳೆಯರು ಮಾನಸಿಕ ಅಸ್ವಸ್ಥರಾಗಿ ರೂಪುಗೊಳ್ಳುವ ಸಾಧ್ಯತೆಗಳೇ ಹೆಚ್ಚಾಗಿವೆ. ಹೀಗೆ ಇಲ್ಲಿ ಹೆಣ್ಣು

ಮಾನಸಿಕ ತೊಳಲಾಟಕ್ಕೆ ಗುರಿಯಾಗುತ್ತಾಳೆ ಇಲ್ಲವೇ ಕುಟುಂಬ ಹಾಗೂ ಸಮಾಜದ ನಿಂದನೆಗೆ ಗುರಿಯಾಗಿ ವಿಧಿಯಿಲ್ಲದೆ ೫೦ರ ಪ್ರಾಯದ ವಯಸ್ಸಿನವರನ್ನು ಮದುವೆಯಾಗುವ ಒತ್ತಡಕ್ಕೆ ಒಳಗಾಗುತ್ತಾಳೆ. ಈ ಹಿನ್ನೆಲೆಯಲ್ಲಿ ಪದ್ಮ ಮುಖ್ಯ ಪಾತ್ರವಾಗಿ ಗುರುತಿಸಬಹುದು. ಇಲ್ಲಿ ಪದ್ಮಳ ತೀರ್ಮಾನಕ್ಕೆ ತಾಯಿಯೇ ಕಾರಣವೆಂದು ಅವಳ ಮೇಲಿನ ಕೋಪವನ್ನು ತವರು ಮನೆಗೆ ಹೋಗದೆ ತನ್ನ ಪ್ರತಿಭಟನೆಯನ್ನು ತೋರಿಸುತ್ತಾಳೆ. ಆದರೆ ಅಂತಿಮವಾಗಿ ತನ್ನ ಈ ನಿರ್ಧಾರಕ್ಕೆ ಸಮಾಜ ಕಾರಣವೆಂದು ದುರಂತಮಯ ಪಾತ್ರವಾಗಿ ಕಂಡುಬರುತ್ತಾಳೆ. 'ಸಖ್ಯ' ಕಥೆಯಲ್ಲಿ ಬರುವ ೪೨ರ ಪ್ರಾಯದ ಕಸ್ತೂರಿ ಗುಮಾಸ್ತೆ. ಕೌಟುಂಬಿಕ ಜವಾಬ್ದಾರಿಯನ್ನು ನಿಭಾಯಿಸುವ ಸಲುವಾಗಿ ವಿವಾಹವನ್ನು ಮುಂದೂಡುವಳು. ಹೀಗೆ ತನ್ನ ಕುರೂಪತೆಯಿಂದ ಇಲ್ಲವೇ ಪುರುಷನ ವಂಚನೆಯಿಂದ ಬೇಸತ್ತ ಕಸ್ತೂರಿ ಅವಿವಾಹಿತಳಾಗಿ ಉಳಿಯುವ ನಿರ್ಧಾರಕ್ಕೆ ಬರುವಂತೆ ಪರಿಸ್ಥಿತಿಗಳು ಕಥೆಯಲ್ಲಿ ನಿರ್ಮಾಣಗೊಂಡಿವೆ. ಆದರೆ ವಿಧುರ ಮಂಜುನಾಥಯ್ಯ ಎರಡು ಮಕ್ಕಳ ತಂದೆಯಾಗಿದ್ದು, ತನ್ನ ಒಂಟಿತನವನ್ನು ದೂರಮಾಡಲು ಹಾಗೂ ಮಕ್ಕಳ ಜವಾಬ್ದಾರಿಯನ್ನು ನಿಭಾಯಿಸಲು ಅಸಾಧ್ಯವೆಂದು ಕಸ್ತೂರಿಯನ್ನು ವಿವಾಹವಾಗಲು ನಿಶ್ಚಯಿಸುವ ಪುರುಷಪಾತ್ರದ ಚಿತ್ರಣವಿದೆ. ಹೀಗೆ ಮಂಜುನಾಥಯ್ಯ ದೈಹಿಕ ಸುಖ ನನಗೆ ಮುಖ್ಯವಲ್ಲ ಮಾನಸಿಕ ಸುಖ ಮುಖ್ಯ... ಎಂಬ ಆತನ ಆಲೋಚನೆ ಕಸ್ತೂರಿಯ ತೀರ್ಮಾನಗಳನ್ನು ಬದಲಾಯಿಸಿ ಅವಳು ವಿವಾಹವಾಗುವಂತೆ ತೀರ್ಮಾನಿಸಿತು. ಹೀಗೆ ಇಲ್ಲಿನ ಸ್ತ್ರೀ ಪಾತ್ರಗಳು ವಿವಾಹದ ಮೂಲಕ ಬದುಕಿನಲ್ಲಿ ನೆಮ್ಮದಿಯನ್ನು ಬಯಸುವರು.

ಅನುಪಮಾ ಅವರ ಕಥೆಗಳಲ್ಲಿ ಬರುವ ಕಿರಿಯ ಗೃಹಿಣಿ ಪಾತ್ರಗಳು ಸುರಕ್ಷಿತವಾಗಿದ್ದು ವೃತ್ತಿಯಲ್ಲಿ ತೊಡಗಿಕೊಂಡು ಸ್ವಾವಲಂಬನೆಯಿಂದ ಬದುಕುವ ಮಹಾತ್ವಾಕಾಂಕ್ಷೆ ಹೊಂದಿವೆ. ಆದರೆ ಕುಟುಂಬದ ಒತ್ತಡದಿಂದ ವಿವಾಹದ ಬಂಧನಕ್ಕೆ ಒಳಗಾಗುವರು. ಹೀಗೆ ಗೃಹಿಣಿಯಾಗಿ ಕೌಟುಂಬಿಕ ಜವಾಬ್ದಾರಿಯನ್ನು ನಿಭಾಯಿಸುವ ವನಜಾಕ್ಷಿ(ಕರೆ), ಸತ್ಯವತಿ(ಹೊಣೆ) ಪಾತ್ರಗಳಲ್ಲಿ ಸಾಧನೆಯ ಮಹತ್ವಾಕಾಂಕ್ಷೆ ಸುಪ್ತ ಪ್ರಜ್ಞಾವಸ್ಥೆಯಲ್ಲಿರುತ್ತದೆ. ಇಲ್ಲಿ ವನಜಾಕ್ಷಿಗೆ ತನಗಿಂತ ದಡ್ಡಳಾದ ಸ್ನೇಹಿತೆ ವೈದ್ಯಳೆಂದು ತಿಳಿದಾಗ ತನ್ನತನದ ಅರಿವಾಗುತ್ತದೆ. ಹೀಗೆ ಜಾಗೃತಗೊಂಡ ಪ್ರಜ್ಞಾವಸ್ಥೆಯು ಕೌಟುಂಬಿಕ ಬಿಗಿ ವಾತಾವರಣದಿಂದ ಅವಳ ಸಾಧನೆಗೆ ಅಡ್ಡಿಪಡಿಸಿದಾಗ ಕುಟುಂಬವನ್ನು ಮೀರುತ್ತಾಳೆ.

ಇವರ ಕಥೆಗಳಲ್ಲಿ ಹೆಣ್ಣು ತಾಯ್ತನವನ್ನು ಪಡೆಯುವುದು ಅತ್ಯಾವಶ್ಯಕ. ತಾಯ್ತನ ಪಡೆಯುವ ಭಾಗ್ಯ ಪಡೆಯದ ರುಕ್ಮಿಣಿ(ಈಸಬೇಕು ಇದ್ದು ಜಯಿಸಬೇಕು) ಗಂಡ, ಅತ್ತೆಯ ತಿರಸ್ಕಾರಕ್ಕೆ ಗುರಿಯಾಗುವ ಮೂಲಕ ತವರುಮನೆಯನ್ನು ಸೇರುವ ಅತಂತ್ರ ಪರಿಸ್ಥಿತಿಗೆ ಒಳಗಾಗುತ್ತಾಳೆ. ಆದರೆ 'ಆಸರೆ' ಕಥೆಯಲ್ಲಿನ ಸಾವಿತ್ರಿಗೆ ತಾಯ್ತನದ ಅವಕಾಶವಿದ್ದರೂ ಪತಿ ಅದರಿಂದ ವಂಚಿತನಾದಾಗ ದತ್ತುಮಗುವನ್ನು ಪಡೆಯಲು ಮತ್ತು ಕೃತಕ ಗರ್ಭಧಾರಣೆ

ಮಾಡಿಕೊಳ್ಳಲು ನಿರ್ಧರಿಸುತ್ತಾಳೆ. ಆದರೆ ಅವಳ ಈ ನಿರ್ಧಾರದಿಂದ ಹುಟ್ಟಿದ ಮಗು ಗಂಡನ ಸ್ನೇಹಿತನ ಹೋಲಿಕೆಯನ್ನು ಪಡೆದಾಗಿನಿಂದ ಹಾಗೂ ಸಮಾಜದಿಂದ ಅವಮಾನಿತಳಾಗುವ ಪರಿಸ್ಥಿತಿಯ ಒತ್ತಡದಿಂದ "ನಮ್ಗ ಮಕ್ಳೇ ಬೇಡ ಕಣ್ರೀ. ಹೀಗೇ ಇದ್ದು ಬಿಡೋಣ. ಮಕ್ಳಾದ್ರೂ ದೊಡ್ಡೋರಾದ್ಮೇಲೆ ಅಪ್ಪ ಅಮ್ಮನ ಬಿಟ್ಟು ಹೋಗ್ಬಿಡ್ತಾರೆ. ಕಡೆಗೆ ಕಷ್ಟಕ್ಕೂ ಸುಖಕ್ಕೂ ಉಳಿಯೋರು ನಾವಿಬ್ರೇ. ನಿಮಗೆ ನಾನು ನನಗೆ ನೀವು" ಎಂದು ತೊಳಲಾಡುವ ಮನಸ್ಥಿತಿಯ ಹಿಂದೆ ಸಮಾಜೀಕರಣದ ಹುನ್ನಾರವಿರುವಂತೆ ಭಾಸವಾಗುತ್ತದೆ. ಹೀಗೆ ಹೆಣ್ಣು ತಾಯಿಯಾದರೂ ತಾಯಿಯಾಗದ ಸ್ಥಿತಿಯಲ್ಲಿ ಪರಿಣಾಮ ಅನುಭವಿಸುವುದು ಹೆಣ್ಣು ಎಂಬಂತೆ ಇಲ್ಲಿನ ಕಥೆಗಳು ಚಿತ್ರಿಸುತ್ತವೆ.

ಮಧ್ಯಮ ಹಾಗೂ ಬಡ ಕುಟುಂಬದಿಂದ ಬಂದ ಸುನಂದೆ(ಬಿಡುಗಡೆ), ಗಿರಿಜಾ(ಬೇಟೆ), ವೈದೇಹಿ(ತುಮುಲ) ಪಾತ್ರಗಳು ಆಕಸ್ಮಿಕವಾಗಿ ಬಂದ ಪತಿಯ ಸಾವು ಅವರಲ್ಲಿ ಬದುಕನ್ನು ಹೀನಾಯಗೊಳಿಸದೆ, ಬದಲಿಗೆ ಬದುಕಿನಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವಂತೆ ಬಿಂಬಿತವಾಗಿವೆ. ಇಲ್ಲಿ ಗಂಡನ ಅನೈತಿಕ ಸಂಬಂಧವನ್ನು ತಿಳಿದ ಸುನಂದೆ ಗಂಡನ ಸಾವು ಅವಳನ್ನು ಕಂಗಾಲಾಗಿಸದೆ, ಬದಲಿಗೆ ಬಿಡುಗಡೆಗೊಂಡಿದ್ದಕ್ಕೆ ಸಮಾಧಾನಗೊಳ್ಳುವಳು. ಹೀಗೆ ಇಲ್ಲಿನ ಸ್ತ್ರೀಯರು ಅನೈತಿಕತೆ, ಅಮಾನವೀಯತೆ ಸಹಿಸದ ಮನೋಭಾವದವರು. ಇದಕ್ಕೆ ವಿರುದ್ಧ ಪಾತ್ರವಾದ ಗಿರಿಜಾ(ಬೇಟೆ)ಳ ಗಂಡನ ಮರಣ ಅವಳಲ್ಲಿ ಅಸುರಕ್ಷತೆಯನ್ನು ಉಂಟುಮಾಡುತ್ತದೆ. ಆದರೆ ಇದು ಕ್ಷಣಿಕ. ಇಲ್ಲಿ ಅವಳ ಕುಟುಂಬದ ಆಸರೆಯಾಗಿ ಪತಿಯ ಸ್ನೇಹಿತ(ಜಗದೀಶ) ನೆರವು ನೀಡುವುದರ ಮೂಲಕ ಮಾನವೀಯತೆಯನ್ನು ಮೆರೆಯುತ್ತಾನೆ. ಆದರೆ ಸಮಾಜಕ್ಕೆ ಹೆದರಿ ಪತಿಯ ಸ್ನೇಹಿತ ಹಿಮ್ಮುಖನಾದಾಗ ಗಿರಿಜಾ ಅಳುಕಿದಳು. ಆ ಪರಿಸ್ಥಿತಿಯೂ ಅವಳಲ್ಲಿ ಬದುಕನ್ನು ಎದುರಿಸುವ ಆತ್ಮವಿಶ್ವಾಸವನ್ನು ಪಡೆಯುವಂತೆ ಕಥೆ ನಿರೂಪಣೆಗೊಳ್ಳುತ್ತದೆ. ಹೀಗೆ ಇಲ್ಲಿ ಸಮಾಜ ಹೆಣ್ಣಿನ ಏಳುಬೀಳುಗಳಿಗೆ ಸಾಕ್ಷಿಯಾದಂತಿದೆ. ಮತ್ತೊಬ್ಬ ಮಹಿಳೆ ವಿಧವೆ ವೈದೇಹಿ ಪತಿಯ ಸಾವಿನಿಂದ ತಂದೆ ಮನೆಯಲ್ಲಿ ಆಶ್ರಯ ಪಡೆದಿದ್ದಾಳೆ. ಇಲ್ಲಿ ವೈದೇಹಿ ಆ ಕುಟುಂಬಕ್ಕೆ ಹೊರೆಯಾಗಿ ಬಿಂಬಿತವಾಗಿದ್ದಾಳೆ. ವೈದೇಹಿ ತಂದೆ-ತಾಯಿಯ ಒತ್ತಡಕ್ಕೆ ಮಣಿದು ಎರಡನೇ ವಿವಾಹಕ್ಕೆ ಸಿದ್ಧವಾಗಿದ್ದಾಳೆ. ಆದರೆ ಗಂಡನ ಕಡೆಯವರು ಮೊದಲನೇ ಗಂಡನ ಮನೆಯಲ್ಲಿ ಮಗುವನ್ನು ತಿರಸ್ಕರಿಸಿದಾಗ ಅವಳಲ್ಲಿ ಮಾತೃ ವಾತ್ಸಲ್ಯ ಜಾಗೃತವಾಗಿ "ಮಗೂನ ಬಿಟ್ಟು ಹ್ಯಾಗಿರ್ಲಿ ನಾನು? ಅಮ್ಮ, ನಿಂಗೂ ಗೊತ್ತಾಗೋಲ್ವ? ನಂಗೀ ಮದ್ವೆ ಬೇಡಮ್ಮ!" ಎಂದಳು(ತುಮುಲ, ಪುಟ-೧೪೮).

ಇವರ ಕಥೆಗಳಲ್ಲಿ ವ್ಯಕ್ತವಾಗುವ ಸಮಾಜ ಹೆಣ್ಣಿನಿಂದ ಹೆಚ್ಚು ನೈತಿಕತೆಯನ್ನು ಬಯಸುತ್ತದೆ. 'ಒಂದು ಘಟನೆ ಮತ್ತು ಅನಂತರ' ಕಥೆಯಲ್ಲಿ ಬರುವ ಮಹಿಳೆ ಕಾಮುಕನಿಂದ ಅತ್ಯಾಚಾರಕ್ಕೆ ಒಳಗಾದ ಪಾತ್ರ. ಗಂಡನ ಸಮ್ಮುಖದಲ್ಲಿ ಈ ಘಟನೆ ನಡೆದರೂ ಅಸಹಾಯಕ ಪಾತ್ರವಾಗಿ

ಅಭಿವ್ಯಕ್ತವಾಗುವುದರ ಹಿಂದೆ ಪತ್ನಿಯನ್ನು ರಕ್ಷಿಸಲಾರದ ಅಸಹಾಯಕತೆಯಿದೆ. ಹೀಗೆ ದೈಹಿಕ ಹಾಗೂ ಮಾನಸಿಕವಾಗಿ ನೊಂದ ಮಹಿಳೆಗೆ ಪತಿಯ ಹೇಡಿತನ ಅವಳಲ್ಲಿ ಪತಿಯ ಬಗ್ಗೆ ತಿರಸ್ಕೃತವಾದ ಮನೋಭಾವನೆ ಬೆಳೆಯುವಂತೆ ಮಾಡುತ್ತದೆ. ಗಂಡನ ತಿರಸ್ಕಾರ ಮನೋಭಾವನೆ ಅವಳಲ್ಲಿ ಕುಟುಂಬವನ್ನು ಮೀರುವ ಮನೋಭಾವನೆಯನ್ನು ರೂಪಿಸುತ್ತದೆ. ಹೀಗೆ ಇಲ್ಲಿ ಹೆಣ್ಣು ಕುಟುಂಬದಲ್ಲಿ ನೆಮ್ಮದಿ ದೊರಕದಾದಾಗ ಆ ಕುಟುಂಬವನ್ನು ತೊರೆದು ಒಂಟಿಯಾಗಿ ಬದುಕುವ ನಿರ್ಧಾರವನ್ನು ಕೈಗೊಳ್ಳುತ್ತಾಳೆ.

ಇದಕ್ಕೆ ಪೂರಕ ಬರುವ ಗೀತಾ(ಒಂದು ಗಿಳಿಯ ಕಥೆ) ಬಡ ಮನೆತನದಲ್ಲಿ ಬೆಳೆದು ಶ್ರೀಮಂತರ ಸೊಸೆಯಾಗಿ ಬದುಕನ್ನು ಪ್ರಾರಂಭಿಸುತ್ತಾಳೆ. ಆದರೆ ಕುಟುಂಬದಲ್ಲಿ ಮಾವನ ಅಧಿಕಾರಯುತ ಆಡಳಿತವನ್ನು ಸಹಿಸದಂತಾಗುತ್ತಾಳೆ. ಮಾವನ ದೈಹಿಕ ಹಾಗೂ ಮಾನಸಿಕ ತೊಳಲಾಟದಿಂದ ಬೇಸತ್ತು ಗಂಡನಲ್ಲಿ ತೋಡಿಕೊಂಡರೂ ಯಾವುದೇ ಪ್ರಯೋಜನವಾಗದೆ ಅಸಹಾಯಕಳಾಗುತ್ತಾಳೆ. ಮಾವನಿಂದ ದೈಹಿಕ ಹಾಗೂ ಮಾನಸಿಕವಾಗಿ ಅತ್ಯಾಚಾರಕ್ಕೆ ಒಳಗಾಗಿ ಬದುಕನ್ನು ದುರಂತವಾಗಿಸುವ ಮಹಿಳೆಯಾಗಿ ಗೀತಾ ಕಂಡುಬರುತ್ತಾಳೆ. ಆದರೆ ತನ್ನಿಂದ ಸಾಧ್ಯವಾಗದ ಕಾರ್ಯವನ್ನು ಗಂಡನಿಗೆ ಕಾಗದ ಬರೆಯುವುದರ ಮೂಲಕ ಸಾಧಿಸುತ್ತಾಳೆ. ನಿಜಸ್ಥಿತಿಯನ್ನು ಅರಿತ ಗೀತಾಳ ಗಂಡ ಕುಟುಂಬವನ್ನು ತೊರೆಯುವುದರ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾನೆ.

ಇವರ ಕಥೆಗಳಲ್ಲಿ ಬರುವ ಹಿರಿಯ ವಯಸ್ಸಿನ ಸ್ತ್ರೀ ಪಾತ್ರಗಳು ಮುಖ್ಯವಾಗಿವೆ. ಶಾಂತಮ್ಮ(ಮೌನ), ಅಂಬುಜಮ್ಮ(ತಲ್ಲಣ), ತುಳಸಿಬಾಯಿ(ಅಪರೂಪದವರು) ಮುಗ್ಧ ಹಾಗೂ ಸಾಧ್ವಿ ಪಾತ್ರಗಳಾಗಿ ಕಂಡುಬರುತ್ತಾರೆ. ಇಲ್ಲಿ ಕುಟುಂಬದ ಚಲನಶೀಲತೆಗೆ ಕಾರಣವಾಗಿದ್ದ ಶಾಂತಮ್ಮನ ಕೋಮಾ ಸ್ಥಿತಿ ತಲುಪಿದಾಗ ಮನೆಯ ವಾತಾವರಣ ಅಶಾಂತವಾಗುತ್ತದೆ. ಶಾಂತಮ್ಮ ನಿರ್ಜೀವ ಸ್ಥಿತಿ ಆಕೆಯ ಬಗ್ಗೆ ಕುಟುಂಬ, ಇತರ ಸದಸ್ಯರಾದ ಪತಿ, ಮಗ, ಹೆಣ್ಣುಮಕ್ಕಳು, ಸೊಸೆ ಎಲ್ಲರಿಗೂ ತಿರಸ್ಕೃತಳಾಗಿ ಕಂಡುಬರುತ್ತಾಳೆ. ಆದರೆ ಯಾವುದೇ ರಕ್ತಸಂಬಂಧವಿಲ್ಲದ ಆ ಮನೆಯ ಆಳು ಸಿದ್ದವ್ವ ಶಾಂತಮ್ಮನ ಸೇವೆ ಮಾಡುವುದರ ಮೂಲಕ ಮಾನವೀಯ ಮೌಲ್ಯವನ್ನು ಕಾಣುತ್ತೇವೆ. ಹೀಗೆ ಇಲ್ಲಿ ರಕ್ತಸಂಬಂಧಗಳು ಸಡಿಲಗೊಂಡು ನೆರೆಹೊರೆ ಸಂಬಂಧಗಳು ಶಾಶ್ವತ ಸಂಬಂಧಗಳಾಗಿ ಕಂಡುಬರುತ್ತವೆ. ಇದಕ್ಕೆ ಪೂರಕವಾಗಿ ತುಳಸಿಬಾಯಿ ಪಟ್ಟಣದ ವಠಾರದ ಒಡತಿಯಾಗಿದ್ದು ಆ ವಠಾರದಲ್ಲಿರುವ ಜನರ ನೋವು ನಲಿವುಗಳಿಗೆ ಸ್ಪಂದಿಸುವ ಭಾವನಾಜೀವಿಯಾಗಿ ಕಂಡುಬರುತ್ತಾಳೆ. ಆದರೆ ಅತ್ತೆಯ ಪಾತ್ರ ನಿರ್ವಹಿಸುವ ಈ ಹಿರಿಯ ಪಾತ್ರಗಳಿಂದ ಅಷ್ಟು ಉದಾರತೆ ಸ್ವಭಾವವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಇದಕ್ಕೆ ಹಿನ್ನೆಲೆಯಾಗಿ ಬಡ ಹಾಗೂ ಶ್ರೀಮಂತರ ತಾಯಂದಿರು ಅವಿವಾಹಿತ ಹೆಣ್ಣುಮಕ್ಕಳ ಬಗ್ಗೆ ಹೆಚ್ಚು ಕುಟಿಲ ಮನೋಭಾವ ಹೊಂದಿರುವ ಪಾತ್ರಗಳಾಗಿ ಕಂಡುಬರುತ್ತಾರೆ.

ಆರ್ಥಿಕ ಅಸಹಾಯಕತೆ ಕಾರಣವಾಗಿದೆ. 'ಮಕ್ಕಳಾಟ' ಕಥೆಯ ಸುಂದರಮ್ಮ ವೃತ್ತಿಯಲ್ಲಿ ದಾದಿಯಾಗಿದ್ದು ಆಸ್ಪತ್ರೆಯಲ್ಲಿ ಹುಟ್ಟಿದ ಅನಾಥ ಬಾಲಕನಿಗೆ ಪ್ರೀತಿ, ವಾತ್ಸಲ್ಯವನ್ನು ನೀಡುವುದರ ಮೂಲಕ ಸಾಮಾಜಿಕ ತಾಯ್ತನವನ್ನು ತೋರಲಾಗಿದೆ.

ಒಟ್ಟಾರೆ ಅನುಪಮಾ ಅವರ ಕಥೆಗಳಲ್ಲಿ ಕಂಡುಬರುವ ಲಿಂಗತಾರತಮ್ಯ ನಿರ್ಗತಿಕ ಕುಟುಂಬಗಳಿಗಿಂತ ಉಳ್ಳವರ ಕುಟುಂಬಗಳಲ್ಲಿ ಹೆಚ್ಚು. ಬಡ ಕುಟುಂಬದಿಂದ ಸಿರಿವಂತ ಮನೆಯ ಸೊಸೆಯಾಗಿ ಬಂದ ಹೆಣ್ಣು ಹೆಚ್ಚು ಬದ್ಧತೆಯಿಂದ ಬದುಕಬೇಕಾಗಿರುವುದನ್ನು ತೋರಿಸುತ್ತದೆ. ಅಲ್ಲಿ ಪ್ರಶ್ನಿಸುವ ಹಕ್ಕಿಲ್ಲ. ಇಲ್ಲಿನ ಬಡ ಕುಟುಂಬಗಳಲ್ಲಿನ ಹೆಣ್ಣು ಹೆಚ್ಚು ಸ್ವಾವಲಂಬಿಯಾಗಿ ಕಂಡುಬರುತ್ತವೆ. ಗೀತಾ(ಒಂದು ಗಿಣಿಯ ಕಥೆ) ಅದೇ ಕುಟುಂಬದಲ್ಲಿನ ಮಾಲಿನಿ ತಂದೆಯ ದೌರ್ಜನ್ಯ ತಿಳಿದರೂ ಹಣದ ಆಸೆಯಿಂದ ಎಲ್ಲವನ್ನು ಸಹಿಸಿಕೊಳ್ಳುವ ಪ್ರವೃತ್ತಿ ಅಲ್ಲಿದೆ. ಗೀತಾ ಸ್ವಾವಲಂಬಿಯಾಗಿದ್ದರೂ ಮಾವನ ಅತ್ಯಾಚಾರಕ್ಕೆ ಬಲಿಯಾಗಿ ದುರಂತ ಪಾತ್ರವಾಗಿ ಕಂಡುಬರುತ್ತಾಳೆ. ಆದರೆ ಪತಿಯ ಮೂಲಕ ಮಾವನ ವಿರುದ್ಧ ತನ್ನ ಪ್ರತೀಕಾರವನ್ನು ತೀರಿಸಿಕೊಳ್ಳುತ್ತಾಳೆ. ಅದೇ ರೀತಿ ಗುಮಾಸ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದ ನಳಿನಿ ರಂಗೇಗೌಡನ ಕಾಮುಕತೆಗೆ ಬಲಿಯಾಗಿ ಆತ್ಮಹತ್ಯೆ ಮಾಡಿಕೊಳ್ಳುವ ದುರಂತ ಪಾತ್ರವಾಗಿ ಕಂಡುಬರುತ್ತಾಳೆ. ಅಂದರೆ ನಿರುಪಮ ಅವರ ಕಥೆಗಳಲ್ಲಿ ಹೆಣ್ಣು ಸಮಾಜದಲ್ಲಿ ಹಾಗೂ ಕುಟುಂಬದಲ್ಲಿ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವುದು ಅನಿವಾರ್ಯ. 'ಆ ಮೂರು ಮನೆಗಳು' ಕಥೆಯ ಭಾಗ್ಯಮ್ಮ ಬಡತನದಿಂದ ಬೆಳೆದು ಮಧ್ಯಮವರ್ಗದ ಗಂಗಾಧರಯ್ಯನ ಪತ್ನಿಯಾಗಿ ಪಟ್ಟಣಕ್ಕೆ ಬಂದಿದ್ದಳು. ಗಂಡನ ನಿರಂಕುಶ ಅಧಿಕಾರಕ್ಕೆ ಒಳಗಾಗಿ ಕೂಲಿ ಆಳಾಗಿ ಮನವಾರ್ತೆ ನಿಭಾಯಿಸಿದಳು. ತನ್ನ ಈ ಎಲ್ಲ ದುಃಸ್ಥಿತಿಗೆ ಪತಿ ಕಾರಣನೆಂದು ತಿಳಿದರೂ ಏನೂ ಮಾಡದ ಅಸಹಾಯಕತೆ, ಎಲ್ಲವನ್ನೂ ಸಹಿಸಿಕೊಂಡು ಬದುಕುವ ಪರಾವಲಂಬಿ ಪಾತ್ರವಾಗಿ ಭಾಗ್ಯಮ್ಮ ಕಂಡುಬರುತ್ತಾಳೆ. ಅನಾಥ ಸುಭದ್ರಮ್ಮ ಬದುಕಲು ದಾರಿ ಕಾಣದೆ ದೇಹವನ್ನು ಬಂಡವಾಳವಾಗಿ ಮಾಡಿಕೊಂಡು ಬದುಕಿದಳು. "ನನ್ನ ಸರ್ವಸ್ವ ಹೋದರೂ ಚಿಂತೆಯಿಲ್ಲ ವಿಶ್ವ ಚೆನ್ನಾಗಿ ಓದಿ ಬದುಕಬೇಕು(ಆ ಮೂರು ಘಟನೆಗಳು, ಪುಟ-೬೯). ಹೀಗೆ ತನ್ನ ತವರು ಸಂಬಂಧಗಳಿಗೆ ದೇಹವನ್ನು ತ್ಯಾಗ ಮಾಡಬೇಕಾದ ಅನಿವಾರ್ಯತೆ. ಆ ಸ್ಥಿತಿಯಲ್ಲಿ ತಮ್ಮನ ಮೂಲಕ ಬದುಕು ಕಾಣುವ ಆಶಾವಾದಿ ಪಾತ್ರವಾಗಿ ಕಂಡುಬರುತ್ತಾಳೆ. ಮಲ್ಲಿ(ಆ ಮೂರು ಮನೆಗಳು) ನಂಜನ ಮೇಲಿನ ಪ್ರೀತಿಯಿಂದ ತವರು ತೊರೆದು ನಂಜನೊಂದಿಗೆ ಪಟ್ಟಣದಲ್ಲಿ ನೆಲೆ ಕಂಡಳು. ಅಲ್ಲಿ ದುಡಿಮೆಗೆ ತಕ್ಕ ಪ್ರತಿಫಲ ಕಾಣದೆ ನಲುಗಿದಳು. "ಎಷ್ಟು ದಿನದಿಂದ್ಲೂವೇ ದುಡೀತಿದೀವಿ. ಒಂದಿನ ಮಕ್ಳು ಹೊಟ್ಟೆ ತುಂಬಾ ಅನ್ನ ಕಾಣ್ಲಿಲ್ಲ. ಇಂಗೇನಾ ಕಡೆವರ್‍ಗ್ಲೂ ಆ?"(ಆ ಮೂರು ಮನೆಗಳು, ಪುಟ-೭೫). ಹೀಗೆ ಲಚುಮಿ ಮೂಲಕ ಆ ಕುಟುಂಬದ ನಿರ್ಗತಿಕ ವಾತಾವರಣವನ್ನು ಅನಾವರಣ ಮಾಡುತ್ತದೆ. "ಯಾವತ್ತಾದ್ರೂ

ಒಮ್ಮೆ ಒಳ್ಳೇ ಕಾಲ ಬರ್ತದೆ ಲಚುಮಿ?"(ಅದೇ ಪುಟ) ಎಂದು ನಂಜ ನಿರಾಶನಾದರೂ ಆ ಭಾವ ಲಚುಮಿಗಿಲ್ಲ. ಕಾರಣ ಕೌಟುಂಬಿಕ ಜವಾಬ್ದಾರಿ ಹೆಣ್ಣಿಗೆ ಹೆಚ್ಚು ಎಂಬಂತೆ ಭಾಸವಾಗುತ್ತದೆ. ಹೀಗೆ ಇಲ್ಲಿನ ಸ್ತ್ರೀ ಪಾತ್ರಗಳು ಬಡತನದಿಂದ ಅಸಹಾಯಕರಾಗಿದ್ದಾರೆ.

ಅಡಿ ಟಿಪ್ಪಣಿ

೧. ಗೀತಾ ಕುಲಕರ್ಣಿ,ಪಾತಾಳ, ಪುಟ-೨೧ ,೫೨, ೮೦.

೨. ಶಾಂತಾ ದೇವಿ ಕಣವಿ, ಇನ್ನೊಂದು ಸಂಪುಟ, ಪುಟ-೨, ೮೦, ೧೫೧.

೩. ಅನುಪಮಾ ನಿರಂಜನ, ಒಂದು ಗಿಣಿಯ ಕಥೆ, ಪುಟ- ೪೭, ೫೫, ೭೭, ೯೭, ೯೮, ೧೦೩.

೪. ಅನುಪಮಾ ನಿರಂಜನ, ಪುಷ್ಪಕ, ಪುಟ-೩೬, ೮೩, ೧೪೭, ೧೪೮.

೫. ಅನುಪಮಾ ನಿರಂಜನ, ಕಣ್ಮಣಿ, ಪುಟ-೩೮, ೬೯, ೭೫

೬. ಸುಮಿತ್ರಾಬಾಯಿ.ಬಿ.ಎನ್., ಕಾತ್ಯಾಯನಿ ಸಾಹಿತ್ಯ ವಾಚಿಕೆ, ಪುಟ-೮,೧೮,೨೦,೨೧,೨೪,೨೮,೩೪,೭೦,೭೭,೯೪,೯೫,೯೯,೧೧೬,೧೩೬,೧೫೩.

೭. ಸರಿತಾ ಕುಸಮಾಕರ ದೇಸಾಯಿ, ಕಾಶಿಯಲ್ಲಿ ಕಂಡದ್ದೇನು, ಪುಟ-೩೩,೪೪,೪೯.

೮. ಸರಿತಾ ಕುಸಮಾಕರ ದೇಸಾಯಿ, ಧ್ರುವ ಮಿಲನ, ಪುಟ-೯೭,೯೯.

೯. ಸಾವಿತ್ರಮ್ಮ ಎಚ್.ವಿ., ಹೊಸಜಗತ್ತು, ಪುಟ-೨೮.

೧೦. ಜಯಲಕ್ಷ್ಮೀ ಆರ್. ಶ್ರೀನಿವಾಸನ್, ಮೊಗ್ಗು, ಪುಟ-೧೭.

೧೧. ತ್ರಿವೇಣಿ, ಎರಡು ಮನಸ್ಸು, ೨೦೦೮, ಪುಟ-೧೩೧.

ಅಧ್ಯಾಯ ನಾಲ್ಕು

ಸ್ವಾತಂತ್ರ್ಯೋತ್ತರ ಮಹಿಳಾ ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬದ ಸ್ವರೂಪ

೪.೧. ಪ್ರವೇಶಿಕೆ

೪.೨. ವೀಣಾ ಶಾಂತೇಶ್ವರ

೪.೩. ಗೀತಾ ನಾಗಭೂಷಣ

೪.೪. ವೈದೇಹಿ

೪.೫. ಸಾರಾ ಅಬೂಬಕರ

೪.೬. ಬಾನು ಮುಷ್ತಾಕ್

೪.೭. ನೇಮಿಚಂದ್ರ

ಅಧ್ಯಾಯ ನಾಲ್ಕು

ಸ್ವಾತಂತ್ರ್ಯೋತ್ತರ ಮಹಿಳಾ ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬದ ಸ್ವರೂಪ

೪.೧. ಪ್ರವೇಶಿಕೆ

ಕನ್ನಡ ಸಾಹಿತ್ಯವನ್ನು ಅವಲೋಕಿಸಿದರೆ ಒಂದಂಶ ಗಮನಕ್ಕೆ ಬರುತ್ತದೆ. ಮೊದಲ ತಲೆಮಾರಿನಲ್ಲಿದ್ದ ಬರಹಗಾರರಲ್ಲಿ ಪುರುಷರೇ ಹೆಚ್ಚು ಶಾಸ್ತ್ರಕಾರರು, ಸಂಶೋಧಕರು, ವಿಮರ್ಶಕರು, ಸೃಜನಶೀಲ ಬರಹಗಾರರು ಪುರುಷರೇ ಬಹಳ. ಆದರೂ ಮಹಿಳೆಯರು ಕಾಣಿಸಿಕೊಂಡು ತಮ್ಮ ಸಾಮರ್ಥ್ಯವನ್ನು ಪ್ರಕಟ ಪಡಿಸಿದರು. ಈಗಾಗಲೇ ಗುರುತಿಸಿದಂತೆ ಬ್ರಿಟಿಶರ ವಸಾಹತು ಕಾಲದಲ್ಲಿ ಹೊಸ ಶಿಕ್ಷಣ ಪಡೆದು ಹೊಸ ಆಲೋಚನೆಗೆ ತಮ್ಮನ್ನು ಸಿದ್ಧಮಾಡಿಕೊಂಡರು. ಆಧುನಿಕತೆಯು ಸಮಾಜದಲ್ಲಿ ವಿಸ್ತರಿಸುತ್ತಿತ್ತು. ಅದರ ಪ್ರಯೋಜನ ಪಡೆಯುತ್ತಲೇ ಪಾರಂಪರಿಕ ಬದುಕನ್ನು ಸುಲಭವಾಗಿ ಮರೆಯಲಾಗದೆ ಸಂಪ್ರದಾಯವನ್ನು ಆಧುನಿಕತೆಗೆ ಮುಖಾಮುಖಿಯಾಗಿಸಿದರು. ನಮ್ಮದನ್ನು ಹೊಸದಾಗಿ ನೋಡುವುದನ್ನು ಆಧುನಿಕತೆಯೇ ಕಲಿಸಿತು. ಹೀಗಾಗಿ ಸಾಹಿತ್ಯದಲ್ಲಿ ವಸಾಹತು ಪ್ರಜ್ಞೆ ಮತ್ತು ದೇಶಿ ಅಥವಾ ಸ್ಥಳೀಯ ಪ್ರಜ್ಞೆ ಜಾಗೃತಗೊಂಡವು. ಸ್ಥಳೀಯ ತಿಳುವಳಿಕೆ ನಮ್ಮನ್ನು ಹೊಸ ನೆಲೆಯಲ್ಲಿ ಆವರಿಸಿದ್ದರಿಂದಲೇ ಕನ್ನಡ ಸಾಹಿತ್ಯ ಭದ್ರ ಬುನಾದಿಯ ಮೇಲೆ ಬೆಳೆದು ನಿಲ್ಲುವುದಕ್ಕೆ ಸಾಧ್ಯವಾಯಿತು. ಸ್ವಾತಂತ್ರ್ಯಪೂರ್ವ ಸಾಹಿತ್ಯ ಹೀಗೆ ಪಾರಂಪರಿಕ ಜ್ಞಾನವನ್ನು ಬಳಸಿಕೊಂಡಿತು.

ಸ್ವಾತಂತ್ರ್ಯ ನಂತರ ಕನ್ನಡ ಸಾಹಿತ್ಯದಲ್ಲಿ ಹೊಸ ಸಾಹಿತ್ಯ ಪಂಥ ಶುರುವಾಯಿತು. ಅದು ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ನವ್ಯತೆ' ಎಂದು ಹೆಸರು ಪಡೆದಿದೆ. ವಿಶ್ವವಿದ್ಯಾಲಯಗಳಲ್ಲಿದ್ದ ಇಂಗ್ಲಿಶ್ ಪ್ರಾಧ್ಯಾಪಕರು ಕನ್ನಡ ಸಾಹಿತ್ಯದಲ್ಲಿ ನವ್ಯ ಸಾಹಿತ್ಯ ಚಳುವಳಿಯನ್ನು ಪರಿಚಯಿಸಿದರು. ಕತೆ, ಕವಿತೆ, ಕಾದಂಬರಿ ಮತ್ತು ವಿಮರ್ಶೆ ಮುಂತಾದ ಪ್ರಕಾರಗಳಲ್ಲಿ ನವ್ಯತೆ ಮೂಡಿ ಬಂದಿತು. ಕನ್ನಡದಲ್ಲಿ ನವ್ಯ ಪಂಥವು ದೊಡ್ಡ ಸಾಧನೆ ಮಾಡಿತು. ಪುರುಷ ಲೇಖಕರೇ ಮುಂಚೂಣಿಯಲ್ಲಿದ್ದರು. ನವೋದಯ ಸಾಹಿತ್ಯಪಂಥವನ್ನು ಪ್ರಶ್ನಿಸಿ, ವಿರೋಧಿಸಿಯೇ ನವ್ಯಪಂಥ ಹುಟ್ಟಿಕೊಂಡಿತು. ಯುರೋಪಿನಲ್ಲಿ ಅಸ್ತಿತ್ವವಾದ ಸಾಹಿತ್ಯದಲ್ಲಿ ಬೆಳೆಯಿತು. ಮುಖ್ಯವಾಗಿ

ಮನುಷ್ಯನನ್ನು, ಆತನ ಬದುಕನ್ನು ಕೇಂದ್ರೀಕರಿಸಿ, ಮನುಷ್ಯನಿಗೆ ಆತನ ಬದುಕಿಗೆ ಅಸ್ತಿತ್ವವಿಲ್ಲವೆಂದು ಬಲವಾಗಿ ವಾದಿಸಿ ಅಸ್ತಿತ್ವವಾದಿಯಾಗಬೇಕೆಂದು ಪ್ರತಿಪಾದಿಸಿದರು. ಮನುಷ್ಯ ಸಮುದಾಯವನ್ನು ಧರ್ಮ ಮತ್ತು ಮತ (ಚರ್ಚ್)ಗಳು ಮುನ್ನಡೆಸುತ್ತಿವೆ. ಸಿದ್ಧವಾದ ಬದುಕಿನ ಚೌಕಟ್ಟಿನಲ್ಲಿ ಮನುಷ್ಯ ಉಳಿದಿದ್ದಾನೆ. ಸ್ವಂತ ಚಿಂತನ ಶಕ್ತಿಯನ್ನು ಕಳೆದುಕೊಂಡಿದ್ದಾನೆಂದು, ಸಾಂಸ್ಥಿಕವಾಗಿ ಮನುಷ್ಯನ ಜೀವನವಿದೆ. ಹುಟ್ಟು ಬೆಳವಣಿಗೆ, ಬದುಕಿನ ನಿರ್ವಹಣೆಯಿಂದ ಸಾವಿನ ವರೆಗೆ ಮನುಷ್ಯನ ಬದುಕು ಸಾಂಸ್ಥಿಕಗೊಂಡಿದೆ. ನೈತಿಕ ನಿಯಮಗಳನ್ನು ಅತಿಯಾಗಿ ಮನುಷ್ಯನ ಮೇಲೆ ಹೇರಲಾದೆ. ಮನುಷ್ಯನಿಗೆ ತನ್ನತನ್ನವೇ ಇಲ್ಲವೆಂಬ ಅಸ್ತಿತ್ವವಾದಿ ನಿಲುವನ್ನು ಪ್ರತಿಪಾದಿಸಿದರು. ಸಂಪ್ರದಾಯದಿಂದ ಮನುಷ್ಯ ಕುಗ್ಗಿ ಹೋಗಿದ್ದಾನೆ. ಆತನಿಗೆ ಆಯ್ಕೆಗಳೇ ಇಲ್ಲ. ಏನ್ನನ್ನೂ ಸ್ವಂತಿಕೆಯಿಂದ ನಿಭಾಯಿಸುವ ಶಕ್ತಿಯನ್ನು ಧರ್ಮ, ಮತಗಳು ಕಸಿದಿವೆ ಎಂದು ಅಸ್ತಿತ್ವವಾದಿಗಳು ವಾದಿಸಿದರು. ಹೊಸ ಜೀವನ ಕ್ರಮವೊಂದನ್ನು ರೂಪಿಸಿದರು. ಎಲ್ಲ ಕೆಡುಕಿಗೆ ಕಾರಣವಾಗುವ ದೇವರು, ಧರ್ಮ, ಮಠಗಳ ಅಸ್ತಿತ್ವವನ್ನು ನಿರಾಕರಿಸಿದರು. ಮನುಷ್ಯನ ಆತ್ಮಬಲವನ್ನು, ಆತನ ಸ್ವಂತಿಕೆವನ್ನು ಆತನದೇ ಆದ ಜೀವನ ಮೌಲ್ಯಗಳನ್ನು ಹೊಂದುವ ಹೊಸ ತಾತ್ವಿಕತೆಯನ್ನು ಪ್ರತಿಪಾದಿಸಿದರು ನವ್ಯ ಪಂಥದವರು.

ಕೀರ್ಕೆಗಾರ್ಡ್, ನೀತ್ಸೆ, ಸಾರ್ತ್ರ ಮುಂತಾದ ಅಸ್ತಿತ್ವವಾದಿ ಚಿಂತಕರು ಮತ್ತು ಕಮು, ಕಾಫ್ಕಾ ಅವರಂಥ ಲೇಖಕರಿಂದ ನವ್ಯಪಂಥ ಬೆಳೆದಿತ್ತು. ಇದನ್ನು ಈಗಾಗಲೇ ಹೇಳಿದಂತೆ ಕನ್ನಡದಲ್ಲಿ ವಿಶ್ವವಿದ್ಯಾಲಯಗಳಲ್ಲಿದ್ದ ಇಂಗ್ಲಿಶ್ ಪ್ರಾಧ್ಯಾಪಕರು ಕನ್ನಡಕ್ಕೆ ತಂದರು. ನಮ್ಮ ಸಾಂಪ್ರದಾಯಿಕ ಜೀವನ ವಿಧಾನದಲ್ಲಿ ಮನುಷ್ಯನ ಬದುಕು ಸಿದ್ಧವಾದ ವಿನ್ಯಾಸದಲ್ಲಿಯೇ ನಡೆಯುತ್ತಿತ್ತು. ಇದನ್ನು ವಿರೋಧಿಸಿ ಅಸ್ತಿತ್ವವಾದಿಯಾಗಲು ಮನುಷ್ಯ ಹೋರಾಡುವ ರೀತಿಯನ್ನು ಕನ್ನಡ ಸಾಹಿತ್ಯದಲ್ಲಿ ತರಲಾಯಿತು. ಅಡಿಗ, ಗೋಕಾಕ್, ಅನಂತಮೂರ್ತಿ, ರಾಮಚಂದ್ರ ಶರ್ಮ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಪಿ.ಲಂಕೇಶ, ತೇಜಸ್ವಿ, ವೀಣಾ ಶಾತೇಶ್ವರ ಮುಂತಾದವರು ನವ್ಯ ಸಾಹಿತ್ಯ ಪಂಥವನ್ನು ದೊಡ್ಡದಾಗಿ ಬೆಳೆಸಿದರು. ಆದರೆ ಮಹಿಳೆಯರು ಈ ಪಂಥದಲ್ಲಿ ಕಾಣಿಸಿಕೊಳ್ಳಲಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಸಾಂಪ್ರದಾಯಿಕ ಜೀವನ ಕ್ರಮದಲ್ಲಿ ಬದುಕುತಿದ್ದ ಮಹಿಳೆಯು, ಅದನ್ನು ವಿರೋಧಿಸಿ ಅಸ್ತಿತ್ವವಾದಿಯಾಗುವ ನಿಲುವನ್ನು ತಾಳಲು ಸಾಧ್ಯವಿರಲಿಲ್ಲ. ಅಸ್ತಿತ್ವವಾದಿ ನಿಲುವಿನ ಸಾಹಿತ್ಯ ರಚಿಸಲು ಕಷ್ಟವಿತ್ತು. ಕತೆ–ಕಾದಂಬರಿಯಲ್ಲಿ ಬರುವ ಪಾತ್ರ 'ನಾನು' ಎಂಬುದನ್ನು ಬಳಸಿದರೆ ಅದು ಲೇಖಕಿಯೇ ಆಗಿರುವ ಅಭಾಸವನ್ನು ದೂರಮಾಡಲು ಸಾದ್ಯವಿರಲಿಲ್ಲ. 'ಮುಕ್ತ' ವಾಗಿರುವ ಸ್ತ್ರೀಯನ್ನು ಕಲ್ಪಿಸಿಕೊಳ್ಳಲು ಆಗುತ್ತಿರಲಿಲ್ಲ. ಮೇಲಾಗಿ ನವ್ಯಪಂಥದ ಲೇಖಕರು ತಮ್ಮ ಕತೆ, ಕಾದಂಬರಿಗಳಲ್ಲಿ ಸ್ತ್ರೀಯರನ್ನು ಗೌರವದಿಂದ ಚಿತ್ರಿಸಲಿಲ್ಲವೆಂದೇ ಹೇಳಬೇಕು. ಶಾಂತಿನಾಥ ದೇಸಾಯಿ ಅವರೊಬ್ಬರು ಮಾತ್ರ ಮಹಿಳೆಯರನ್ನು ಗೌರವದಿಂದ ಚಿತ್ರಿಸಿದರು. ಅವರ ಕತೆಗಳಲ್ಲಿನ ಸ್ತ್ರೀ ಪಾತ್ರಗಳು

ಅಸ್ತಿತ್ವವಾದಿಗಳೇ ಆಗಿದ್ದರೂ ಅವರದೇ ನೈತಿಕ ಚೌಕಟ್ಟಿನಲ್ಲಿ ಬದುಕಿದರು. ಓದುಗರು ಸ್ವೀಕರಿಸಿದರು.

ಕನ್ನಡದಲ್ಲಿ ನವ್ಯಪಂಥದ ನಿಲುವಿನ ಸಾಹಿತ್ಯವನ್ನು ರಚಿಸಿದವರು ವೀಣಾ ಶಾಂತೇಶ್ವರ ಅವರೊಬ್ಬರೇ ಎಂದರೆ ತಪ್ಪಾಗಲಿಕ್ಕಿಲ್ಲ. ಬಹಳ ಸೂಕ್ಷ್ಮವಾಗಿ ಪುರುಷನ ಮುಂದೆ ಮಹಿಳೆ ತನ್ನ ಅಸ್ತಿತ್ವವನ್ನು ಸ್ಥಾಪಿಸುವ ನಿಲುವನ್ನು ವೀಣಾ ಅವರ ಕಥನದಲ್ಲಿ ಕಾಣುತ್ತೇವೆ. ಅವರ ಸಾಹಿತ್ಯಕ ಸಾಧನೆ ಮಹತ್ವದ್ದು. ನವ್ಯದ ಆಕೃತಿ ಸೂಕ್ಷ್ಮತೆಯನ್ನು ವೈದೇಹಿ ಬಳಸಿದರು. ಅತ್ತ ನವ್ಯವೂ ಅಲ್ಲದ, ಇತ್ತ ಬಂಡಾಯವೂ ಅಲ್ಲದ ಅವರದೇ ದಾರಿಯನ್ನು ಕಂಡುಕೊಂಡು ಲೇಖಕಿ ವೈದೇಹಿ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬರೆದ ಅನೇಕ ಮಹಿಳೆಯರಿದ್ದಾರೆ. ಅವರೆಲ್ಲ ನವ್ಯದ ನಿಲುವುಗಳನ್ನು ಪ್ರತಿಪಾದಿಸಲಿಲ್ಲ. ಸಾರಾ ಅಬೂಬಕ್ಕರ್, ಗೀತಾ ನಾಗಭೂಷಣ್, ಬಾನು ಮುಷ್ತಾಕ್ ಮುಂತಾದವರು ೭೦ರ ದಶಕದ ಹೊತ್ತಿಗೆ ಆರಂಭವಾದ ಬಂಡಾಯ ನಿಲುವನ್ನು ಕತೆ ಕಾದಂಬರಿಗಳಲ್ಲಿ ಪ್ರತಿಪಾದಿಸಿದರು. ಇವರೆಲ್ಲರ ಕತೆಗಳಲ್ಲಿ ಸ್ತ್ರೀ, ಕುಟುಂಬದ ವಿನ್ಯಾಸಗಳನ್ನು ಮುಂದೆ ಗುರುತಿಸುವ ಅಧ್ಯಯನವಿದೆ.

೪.೨. ವೀಣಾ ಶಾಂತೇಶ್ವರ

ಸ್ವಾತಂತ್ರ್ಯೋತ್ತರ ಕಾಲದ ಕಥಾಸಾಹಿತ್ಯದಲ್ಲಿ ಕಥಾಪರಂಪರೆಯನ್ನು ಸತ್ವಯುತವಾಗಿ ಮುನ್ನಡೆಸಿದವರಲ್ಲಿ ವೀಣಾಶಾಂತೇಶ್ವರ, ಗೀತಾನಾಗಭೂಷಣ ಮತ್ತು ವೈದೇಹಿ ಅವರು ಪ್ರಮುಖರಾಗಿದ್ದಾರೆ.

ಸ್ವಾತಂತ್ರ್ಯಪೂರ್ವದಲ್ಲಿ ವಸಾಹತು ಪ್ರಭಾವದಿಂದ ಸಾಹಿತ್ಯವು ಹಲವು ಪ್ರಕಾರಗಳಲ್ಲಿ ಬೆಳೆಯಿತು. ಸಾಹಿತ್ಯ ಪ್ರಕಾರಗಳು ಪಶ್ಚಿಮದಿಂದ ಬಂದಿದ್ದರೂ ಕನ್ನಡ ಕತೆಗಾರ್ತಿಯರು ತಮ್ಮ ರಚನೆಗಳಲ್ಲಿ ತಮ್ಮತನದಿಂದ ಹೊಸತನ್ನೇ ಸೃಷ್ಟಿಸಿದ್ದಾರೆ. ಶಿಕ್ಷಣವು ಸಾಂಪ್ರದಾಯಿಕ ಸಮುದಾಯಗಳಲ್ಲಿ ಪಲ್ಲಟಗಳನ್ನು ತಂದಿತು. ಹೊಸ ಶಿಕ್ಷಣಪದ್ಧತಿಯು ಕನ್ನಡ ಮತ್ತು ಇಂಗ್ಲಿಷ್ ಭಾಷೆಯನ್ನು ಹೊಸ ಪೀಳಿಗೆಗೆ ಕಲಿಸಲಾರಂಭಿಸಿತು. ವಸಾಹತುಶಾಹಿ ಪ್ರಭಾವದಿಂದ ಶಾಲೆ, ಆಸ್ಪತ್ರೆ, ಹೋಟೆಲ್, ಸಾರಿಗೆ ಹೀಗೆ ಹೊಸತು ಬಂದರೂ ಅದೇ ಹೊಸಪ್ರಜ್ಞೆಯಿಂದಲೇ ತಮ್ಮತನವನ್ನು ಉಳಿಸಿಕೊಳ್ಳಲು ನಡೆಸಿದ ಹೋರಾಟವನ್ನು ಕನ್ನಡ ಕಥನಸಾಹಿತ್ಯದಿಂದ ಗ್ರಹಿಸಬಹುದು. ವಸಾಹತು ಆಡಳಿತದ ಪರಿಣಾಮದಿಂದ ಆಧುನಿಕತೆಗೆ ಮುಖಾಮುಖಿಯಾಗುವ ಸಂದರ್ಭವು ಮೊದಲ ತಲೆಮಾರಿನ ಲೇಖಕರಿಗೆ ಒದಗಿತು. ಅದು ಅನಿವಾರ್ಯವೂ ಆಯಿತು. ವಸಾಹತುಶಾಹಿ ಪ್ರಭಾವಕ್ಕೆ ಪರಿಣಾಮಕಾರಿಯಾಗಿ ಕನ್ನಡದ ಕಥನಕಾರರು ಮುಖಾಮುಖಿಯಾಗಿದ್ದಾರೆ. ಈ ಪ್ರಭಾವವನ್ನು ಸ್ವೀಕರಿಸುತ್ತಲೇ ವಿರೋಧಿಸುವ ಗುಣ ಕಂಡುಬರುತ್ತದೆ. ಈ ಕಾಲಾವಧಿಯಲ್ಲಿ ಕಥನಕಾರ್ತಿಯರ ಸಂಖ್ಯೆ ಹೆಚ್ಚಿಲ್ಲವಾದರೂ ಇದ್ದ ಕೆಲವರು ತಮ್ಮ ಕತೆಗಳಲ್ಲಿ ಸ್ತ್ರೀಪರ ಕಾಳಜಿಯನ್ನು ಅಭಿವ್ಯಕ್ತಿಸಿದ್ದಾರೆ.

ಸ್ವಾತಂತ್ರ್ಯೋತ್ತರ ಕಾಲದ ಸಾಹಿತ್ಯ ರಚನೆಯಲ್ಲಿ ಸ್ಥಿತ್ಯಂತರ ಕಂಡುಬರುತ್ತದೆ. ಅದನ್ನು ಕನ್ನಡ ವಿಮರ್ಶೆಯಲ್ಲಿ ನವ್ಯತೆ ಎಂದು ಕರೆಯಲಾಗುತ್ತದೆ. ನವ್ಯಪಂಥ, ನವ್ಯಸಾಹಿತ್ಯವೆಂದು ಈ ಕಾಲಘಟ್ಟವನ್ನು ಗುರುತಿಸಲಾಗಿದೆ. ಕಾವ್ಯ ಮತ್ತು ಕಥನ ಪ್ರಕಾರಗಳಲ್ಲಿ ಅಸ್ತಿತ್ವವಾದವನ್ನು ಗೋಪಾಲಕೃಷ್ಣ ಅಡಿಗ, ಗೋಕಾಕ್, ಅನಂತಮೂರ್ತಿ, ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ ಮುಂತಾದವರನ್ನು ಪ್ರಧಾನವಾಗಿ ಹೆಸರಿಸಬಹುದು. ಇದು ಕನ್ನಡ ಸಾಂಪ್ರದಾಯಿಕ ಚಿಂತನೆಗೆ ವಿರುದ್ಧವಾಗಿ ಬೆಳೆದ ಒಂದು ಚಿಂತನಾಕ್ರಮ ಅಥವಾ ದೃಷ್ಟಿಕೋನ. ಇಂಗ್ಲಿಷ್ ವಿದ್ಯಾವಂತರು ಯುರೋಪಿನ ಅಸ್ತಿತ್ವವಾದಿ ಚಿಂತಕರ ಚಿಂತನೆಗಳನ್ನು ಓದಿ, ಗ್ರಹಿಸಿ ಅವುಗಳನ್ನು ಕನ್ನಡ ಸಾಹಿತ್ಯದಲ್ಲಿ ತರಲಾರಂಭಿಸಿದರು. ಇಲ್ಲಿಯೂ ಪುರುಷ ಲೇಖಕರದೇ ಮೇಲುಗೈಯಾಯಿತು. ಈ ಕಾಲಾವಧಿಯಲ್ಲಿದ್ದರೂ ಇದರ ಪ್ರಭಾವಕ್ಕೆ ಒಳಗಾದ ಲೇಖಕಿಯರು ಅಲ್ಪಪ್ರಮಾಣದಲ್ಲಿ ಕಾಣಿಸಿಕೊಂಡರು. ಅಂದರೆ ಅರವತ್ತರ, ಎಪ್ಪತ್ತರ ದಶಕದಲ್ಲಿ ಬರೆಯಲಾರಂಭಿಸಿದ ಗೀತಾನಾಗಭೂಷಣ, ವೀಣಾ ಶಾಂತೇಶ್ವರ, ವೈದೇಹಿ ಪ್ರಮುಖರಾದರೂ ನವ್ಯದ ತಾತ್ವಿಕತೆಯನ್ನು ಅರಿತವರು ವೀಣಾ ಶಾಂತೇಶ್ವರ ಒಬ್ಬರೇ. ಅವರ ಕತೆಗಳ ರೂಪ ಮತ್ತು ಆಕೃತಿಯಲ್ಲಿ ನವ್ಯದ ಪ್ರೇರಣೆ ಕಂಡುಬರುತ್ತದೆ. ೬೦-೭೦ರ ದಶಕಗಳ ನಡುವೆ ಬರೆಯಲಾರಂಭಿಸಿದ ವೀಣಾ ಶಾಂತೇಶ್ವರ ಅವರು ನವ್ಯದ ಪ್ರಭಾವದಿಂದ ಬೆಳೆದರೂ ಅವರ ಕತೆಗಳು ಸ್ತ್ರೀ ಕೇಂದ್ರಿತವಾಗಿದೆ.

ವೀಣಾ ಶಾಂತೇಶ್ವರ ಅವರು ಇಂಗ್ಲಿಷ್ ಪ್ರಾಧ್ಯಾಪಕರು. ಇಂಗ್ಲಿಷ್ ಸಾಹಿತ್ಯವನ್ನು ಅಧ್ಯಯನ ಮಾಡಿದವರು. ಅವರು ಬರೆಯಲಾರಂಭಿಸಿದ ಕಾಲದಲ್ಲಿ ನವ್ಯಪಂಥದ ಲೇಖಕರೇ ಹೆಚ್ಚಿದ್ದು ಅವರ ಅಬ್ಬರ ಹೆಚ್ಚಾಗಿತ್ತು. ಆ ಸಂದರ್ಭದಲ್ಲಿ ವೀಣಾ ಅವರು ತಮ್ಮದೇ ನೆಲೆಯನ್ನು ಕಂಡುಕೊಂಡರು. ನವ್ಯಕತೆಗಳಲ್ಲಿ ಕಾಮ ಮತ್ತು ಹೆಣ್ಣನ್ನು ಸಾಂಪ್ರದಾಯಿಕ ಚೌಕಟ್ಟಿನಿಂದ ಹೊರಗಿಟ್ಟು ಅವರದೇ ಆದ ನೈತಿಕ ನೆಲೆಯಲ್ಲಿ ಚಿತ್ರಿಸಲಾಗುತ್ತಿತ್ತು. ಶಾಂತಿನಾಥ ದೇಸಾಯಿ ಅವರನ್ನು ಹೊರತುಪಡಿಸಿ ಉಳಿದ ನವ್ಯ ಕತೆಗಾರರು ಹೆಣ್ಣಿನ ತನವನ್ನು ಗ್ರಹಿಸಲಾಗಲಿಲ್ಲ. ಹಾಗೆ ನೋಡಿದರೆ ಶಾಂತಿನಾಥ ದೇಸಾಯಿ ಅವರು ತಮ್ಮ ಕತೆಗಳಲ್ಲಿ ಸ್ತ್ರೀ ಅಸ್ತಿತ್ವವನ್ನು ಶೋಧಿಸಿದರು. ವೀಣಾ ಅವರು ಕೂಡ ಕುಟುಂಬದಲ್ಲಿ ಮಹಿಳೆಯ ಸ್ಥಾನಮಾನದ ಪ್ರಶ್ನೆಯನ್ನು ಎತ್ತಿಕೊಂಡು ಶೋಧಿಸಿದ್ದಾರೆ. 'ಸ್ತ್ರೀ ಸ್ವಾತಂತ್ರ್ಯ' ಎಂಬ ಪ್ರಶ್ನೆ ವೀಣಾ ಅವರನ್ನು ಆಳವಾಗಿ ಕಾಡಿದೆ. ಪ್ರಶ್ನೆಯಾಗಿ ಅದನ್ನು ಅವರು ತಮ್ಮ ಅನೇಕ ಕತೆಗಳಲ್ಲಿ ಶೋಧಿಸಲು ಪ್ರಯತ್ನಿಸಿದ್ದಾರೆ. ಸ್ವಾತಂತ್ರ್ಯದ ಪ್ರಶ್ನೆಯನ್ನು ವೀಣಾ ಅವರು ತಮ್ಮ ಹಲವು ಕತೆಗಳಲ್ಲಿ ವಿಭಿನ್ನ ಸ್ತ್ರೀ ಪಾತ್ರಗಳ ಮೂಲಕ ಭಿನ್ನ ಸ್ತರದ ಸ್ತ್ರೀಯರ ಮೂಲಕ, ಸಂದರ್ಭಗಳ ಮೂಲಕ ಶೋಧಿಸಲು ಗಂಭೀರ ಪ್ರಯತ್ನ ಮಾಡಿದ್ದಾರೆ.

ಮಾನವರು ಜೀವಿಸಲು, ತಮ್ಮ ನೆಲೆಯನ್ನು ಕಟ್ಟಿಕೊಂಡು ಉನ್ನತಿ ಹೊಂದಲು ಮೂಲ ಕೇಂದ್ರಬಿಂದುವೇ ಕುಟುಂಬ. ಈ ಕುಟುಂಬ ವಿವಾಹವನ್ನವಲಂಬಿಸಿ ರಚಿತವಾಗುತ್ತದೆ. ಈ

ಕುಟುಂಬವು ಪ್ರೇಮವನ್ನವಲಂಬಿಸಿ ರಚನೆಯಾಗಬೇಕು ಎಂಬ ಉದ್ದೇಶವೇ ಈ ಕಾಲಘಟ್ಟದ ಮುಖ್ಯ ಧೋರಣೆಯಾಗಿದೆ. ಅದು ವೀಣಾ ಅವರ ಕಥಾಸಾಹಿತ್ಯದಲ್ಲೂ ಸ್ಪಷ್ಟವಾಗಿ ಒಡಮೂಡಿದೆ. ಈ ಕತೆಗಳಲ್ಲಿ ಕಾಣಿಸಿಕೊಳ್ಳುವ ಸ್ತ್ರೀಯರು ವಿದ್ಯಾವಂತರು. ತಮ್ಮ ದುಡಿಮೆಯನ್ನು ತಾವು ನೆಚ್ಚಿಕೊಂಡು ಬದುಕುವಂತಹವರು. ಹೀಗೆ ಬದುಕುವ ಈ ಸ್ತ್ರೀಯರಿಗೆ ತಮ್ಮದೇ ಆದ ಆಕಾಂಕ್ಷೆಗಳಿವೆ, ಧೋರಣೆಗಳಿವೆ. ಆ ಧೋರಣೆಗಳನ್ನು ಸಾಕಾರಗೊಳಿಸಲು ಇಲ್ಲಿ ಹೆಣ್ಣಿಗೆ ಸಮಾಜ ನಿರ್ಮಿಸಿರುವ ವಿವಾಹ ಮತ್ತು ಕುಟುಂಬ ಎಂಬ ಸಂಸ್ಥೆಗಳು ಅಡ್ಡಿ ಆತಂಕಗಳಾಗಿ ಗೋಚರಿಸುತ್ತವೆ. ಹೀಗೆ ಇಲ್ಲಿ ವಿವಾಹ ಮತ್ತು ಮನೆಯೆಂಬುದು ಒಂದು ಸೆರೆಯಾಗಿ ಭಾವಿಸಿಕೊಳ್ಳುವ ಹಾಗೆ ಅವರು ಬದುಕುವ ಸಮಾಜ ಅವರನ್ನು ರೂಪಿಸಿದೆ. ಇಲ್ಲಿನ ಸ್ತ್ರೀಯರಿಗೆ ಅವರು ಬೆಳೆದುಬಂದ ಮನೆಯು ಅವರನ್ನು ವಿದ್ಯಾವಂತರನ್ನಾಗಿಸಲು ಅವಕಾಶ ಒದಗಿಸಿದೆ. ಈ ಅವಕಾಶದಿಂದ, ತಮ್ಮ ವಿದ್ಯಾಭ್ಯಾಸದಿಂದ ತಮ್ಮನ್ನು ವಿವಿಧ ವೃತ್ತಿಗಳಲ್ಲಿ ಗುರುತಿಸಿಕೊಂಡಿದ್ದಾರೆ. ಹಾಗೆ ತಾವು ಕಲಿತ ಶಿಕ್ಷಣದಿಂದ ಉದ್ಯೋಗವನ್ನರಿಸಿ ತಮ್ಮ ಮೂಲಕುಟುಂಬವನ್ನು ತೊರೆದು ವೃತ್ತಿ ದೊರೆತ ಕಡೆ ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರೆ. ಅದು ಅನಿವಾರ್ಯವೂ ಆಗಿದೆ. ಹಾಗಾಗಿ ಇಲ್ಲಿ ಈ ಸ್ತ್ರೀಯರು ತಮ್ಮ ದುಡಿಮೆಯ ಕಾರಣದಿಂದ ತಮ್ಮ ತಂದೆಯ ಕುಟುಂಬವನ್ನು ಹೆಚ್ಚು ಅವಲಂಬಿಸಿಲ್ಲ. ಹಾಗಾಗಿ ತವರಿನ ಸದಸ್ಯರ ನಡುವಿನ ಭಾವನೆಯು ತೀರ ಗಾಢವಾಗಿರದೆ ಯಾಂತ್ರಿಕವಾಗಿದೆ. ಈ ಸುಶಿಕ್ಷಿತ ಸ್ತ್ರೀಯರು ವಿದ್ಯಾವಂತರಾಗಿ ಆ ಮೂಲಕ ಸ್ವಾವಲಂಬನೆಯ ದುಡಿಮೆಗಾಗಿ ಬದುಕಿನ ಬಹುಭಾಗವನ್ನು ಸವೆಸಿದವರು. ಈ ಮೂಲಕ ಸಮಾಜದಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳಲು ಬಯಸಿದರು. ಈ ಗುರಿ ಸಾಧನೆಗೆ ವಿವಾಹದ ವಯಸ್ಸನ್ನು ಮೀರಿದರು. ಈ ಕಥೆಗಳಲ್ಲಿ ಮುಖ್ಯವಾಗಿ ಈ ರೀತಿ ಗುರುತಿಸಿಕೊಂಡ ಸ್ತ್ರೀಯರು ಶಾಂತಾ(ಮುಳ್ಳುಗಳು), ಲೀಲಾವತಿ(ಅತಿಥಿ), ಲೀಲಾ(ಕೊನೆಯ ದಾರಿ), ಮಿನಿ(ಕವಲು) ಇತ್ಯಾದಿ ಸ್ತ್ರೀಯರು ಉಪನ್ಯಾಸಕಿ, ನಿಲಯಪಾಲಕಿ, ಪ್ರಾಧ್ಯಾಪಕಿಯಾಗಿ, ಗುಮಾಸ್ತೆ ಹೀಗೆ ವಿವಿಧ ಹುದ್ದೆಗಳಲ್ಲಿ ಸ್ವಾವಲಂಬಿಯಾಗಿ ಬದುಕುತ್ತಿದ್ದ ಸ್ತ್ರೀಯರಿಗೆ ತಮ್ಮ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ನೀಡುವ ಪೋಷಕ ಕುಟುಂಬಗಳಿವೆ. ಈ ಮಹಿಳೆಯರಿಗೆ ಆ ಸ್ವಾತಂತ್ರ್ಯವನ್ನು ಒದಗಿಸಿದೆ. ಈ ಸ್ವಾತಂತ್ರ್ಯ ಮಹಿಳೆಗೆ ದೊರಕಿರುವುದು ಅವಳ ಸ್ವಾವಲಂಬನೆಯಿಂದ ಎಂಬುದನ್ನು ಕಥೆಗಳಲ್ಲಿ ಕಾಣಬಹುದಾಗಿದೆ.

ಹೀಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಬಹುಪಾಲು ಬದುಕನ್ನು ಸವೆಸಿದ ಈ ಸ್ತ್ರೀಯರು ಪವಿತ್ರವಾದ ಪ್ರೇಮಕ್ಕೆ ಹಾತೊರೆಯುತ್ತಾರೆ. ತಮ್ಮ ಯಾಂತ್ರಿಕ ಬದುಕಿನಿಂದ ಮನೆಯ ಪ್ರೀತಿಯನ್ನು ಬಹುಪಾಲು ಕಳೆದುಕೊಂಡಿರುತ್ತಾರೆ. ಹಾಗಾಗಿ ಆ ಪ್ರೀತಿಗಾಗಿ ಹಂಬಲಿಸುತ್ತಾರೆ. ಈ ಪ್ರೀತಿಯನ್ನು ತಮ್ಮ ಸಂಗಾತಿಗಳಲ್ಲಿ ಕಾಣಬಯಸುತ್ತಾರೆ. ಇಲ್ಲಿ ಸ್ತ್ರೀಯು ತನ್ನ ಅಂತಸ್ತನ್ನು ಗುರುತಿಸಿಕೊಳ್ಳುವ ಭರದಲ್ಲಿ ತನ್ನ ವಯೋಸಹಜವಾದ ಕಾಮನೆಗಳನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾಳೆ.

ಆದರೆ ಅದು ಅಸಾಧ್ಯವಾಗಿದೆ. ಈ ಮಹಿಳೆಯರು ಗಂಡ, ಮನೆ, ಸಂಸಾರವನ್ನು ಅಲ್ಲಗಳೆಯುತ್ತಿಲ್ಲ. ಅದಕ್ಕಾಗಿ ಹಾತೊರೆಯುತ್ತಿದ್ದಾರೆ. ಈ ಹೆಣ್ಣುಮಕ್ಕಳು ಬಯಸುವ ಸಂಗಾತಿಗಳು ಕಾಮರಹಿತವಾದ ಪ್ರೀತಿಪೂರ್ವಕವಾದುವನ್ನು ಬಯಸುತ್ತಾರೆ. ಅಲ್ಲದೆ ತಾವು ಬಯಸುವ ಪುರುಷ ತಮಗೆ ಗೌರವ ಮತ್ತು ಸ್ಥಾನಮಾನವನ್ನು ಕೊಡಬೇಕೆಂದು ಬಯಸುತ್ತಾರೆ. ಅದು ಸಾಧ್ಯವಾಗದಾಗ ಆ ಗಂಡ ನನ್ನ ಮತ್ತು ಮನೆಯನ್ನು ತಿರಸ್ಕರಿಸುತ್ತಾರೆ. ಅಂತಹ ಮುಳ್ಳುಗಳ ರಹಿತ ಸಂಗಾತಿಯನ್ನು ಬಯಸಿ ಮತ್ತೆ ಗಂಡನ ಮನೆ ಕಟ್ಟಿಕೊಳ್ಳಲು ಹೆಣಗಾಡುತ್ತಾರೆ. ವಿವಾಹ, ಗಂಡ, ಮನೆಯೆಂಬುದು ತಮ್ಮ ಉನ್ನತಿಗೆ ಅಡ್ಡಿ ಆತಂಕಗಳನ್ನು ತರುವುದೆಂದು ವಿವಾಹವನ್ನು ನಿರಾಕರಿಸಿದ ಈ ಸ್ತ್ರೀಯರು ಪ್ರಜ್ಞಾವಸ್ಥೆಗೆ ಬರುವುದು ಮಧ್ಯವಯಸ್ಸನ್ನು ತಲುಪಿ ಭೂತಕ್ರಿಯೆಯನ್ನು ಸ್ವಗತಮಾದರಿಯಲ್ಲಿ ನಿರೂಪಿಸುವುದರ ಮೂಲಕ. ಅವಿವಾಹಿತ ಸ್ತ್ರೀಯರು ಶಿಕ್ಷಿತರಾದರು. ಆರ್ಥಿಕ ಸ್ವಾವಲಂಬಿಯಾದರು. ಸಮಾಜದ ನಿಂದನೆಗಳಿಗೆ ಒಳಗಾಗದೆ ಗೃಹಿಣಿಯ ಸ್ಥಾನವನ್ನು ಅಲಂಕರಿಸಿದ ಈ ಮಹಿಳೆಯರು ತಿರಸ್ಕೃತಗೊಂಡಿದ್ದಾರೆ, ಅವಮಾನಕ್ಕೊಳಗಾಗಿದ್ದಾರೆ.

ಈ ಹಿನ್ನೆಲೆಯಿಂದ ತಮ್ಮ ತೀರ್ಮಾನಗಳ ಬಗ್ಗೆ ನೊಂದುಕೊಳ್ಳದೆ "ತನಗೆ ಮನೆ–ಮಾರು ಇಲ್ಲವೆ? ತಾನು ಸುಡುಗಾಡು ಸಿದ್ದರ ಹಾಗೆ ನೆಲೆಯೇ ಇಲ್ಲದವಳೆ? ಬರೇ ಅತಿಥಿಯಾಗಿ ಅಲ್ಲಲ್ಲಿ ತಿರುಗುವುದರೊಳಗೆ ತನ್ನ ಜೀವನ ಸವೆದು ಹೋಗುತ್ತದೆಯೇ? ಈ ಕಾರ್ಯಕ್ರಮಗಳಿಗೆ ಮಾತ್ರವಲ್ಲ, ಈ ಜೀವನಕ್ಕೆ ತಾನು ಅತಿಥಿಯೆಂದು ಬಂದವಳೇ? ದುಡಿದು–ದಣಿದು ಬಂದಾಗ ತನ್ನನ್ನು ಸ್ವಾಗತಿಸುವ, ದಣಿವು ಕಡಿಮೆ ಮಾಡದೇ ಪ್ರೀತಿಸುವ ಯಾವ ಜೀವವೂ ಇಲ್ಲವೇ? ಯಾರೇಕೆ ಬೇಕು? ಒಬ್ಬಳೇ ಜೀವನವನ್ನೆದುರಿಸೆಂಬ ಧೈರ್ಯ ಈಗ ಎಲ್ಲಿಗೆ ಹೋಯಿತು? ತಾನು ಎಲ್ಲಿ ಹೋದರೂ ಬಂದರೂ ಸತ್ತರೂ "ಮನೆ"ಯವಳಲ್ಲವೆಂಬ ಬರೇ ಅತಿಥಿಯೆಂಬ ಈ ಪ್ರಜ್ಞೆ ಎಷ್ಟೊಂದು ಹೃದಯವನ್ನು ಕೊರೆಯತೊಡಗಿದೆಯಲ್ಲ? ಏ ಸದಾನಂದ ಈ ಕಣ್ಣು ಮುಚ್ಚಾಲೆಯನ್ನು ಸಾಕುಮಾಡು. ಒಮ್ಮೆ ತಪ್ಪಾಯಿತೆಂದು ಒಪ್ಪಿಕೊಂಡುಬಿಟ್ಟೆ ಇದೇನು ನಿನ್ನ ಹಟ? ಯಾಕೆ ಹಾಗೆ ಕಾಡತೊಡಗಿರುವೆ? ನಿನ್ನ ಮನೆಗೆ ನಾನು ಮನೆಯವಳಾಗಲಿಲ್ಲವೆಂದು ಈ ಜಗತ್ತೇ ನನ್ನನ್ನು ಅತಿಥಿಯ ಹಾಗೆ ಕಾಣಲೆಂದು ನೀನೇನು ಶಾಪ–ಗೀಪ ಕೊಟ್ಟಿದ್ದೀಯಾ ಹೇಗೆ? ಈ ಶಾಪವನ್ನು ಹಿಂದಿರುಗಿಸಿಕೊಳ್ಳೋ ಪುಣ್ಯಾತ್ಮ ನಿನಗಷ್ಟು ಮನಸ್ಸಿದ್ದರೆ ಇದೋ ಹೇಳುತ್ತಿದ್ದೇನೆ ಬೇಕಾದರೆ ಅತ್ತು ಬಿಡಲೇನು? ನಿನಗೆ ಸಮಾಧಾನವಾಗುವಂತಿದ್ದರೆ ಅಳಲು ನನ್ನ ಅಡ್ಡಿಯೇನಿಲ್ಲ."(ನಡೆದದ್ದೇ ದಾರಿ, ಪು.೩೨) ಹೀಗೆ ಇಲ್ಲಿನ ಅವಿವಾಹಿತ ಸ್ತ್ರೀ ವಿವಾಹವಾಗದೆ ತನ್ನ ಬದುಕಿಗೆ ಉತ್ತರ ಕಂಡುಕೊಳ್ಳಲು ಬಯಸಿದಳು. ಆದರೆ ಅವಳ ಈ ತೀರ್ಮಾನಗಳು ಅವಳನ್ನು ಬದುಕಿನುದ್ದಕ್ಕೂ ಪ್ರಶ್ನೆಗಳಾಗಿ ಕಾಡತೊಡಗಿದೆ. ಅವಳು ಬಯಸಿದ ಸ್ವಾತಂತ್ರ್ಯ ಅವಳನ್ನು ಅಪರಾಧಿಯನ್ನಾಗಿಸಿದೆ. ಹಾಗೆ ತಾನು ಸವೆದ ಸ್ವಂತ ಅನುಭವಗಳಿಂದ ಅವಳು ಈ ತೀರ್ಮಾನಕ್ಕೆ ಬರಲು ಸಾಧ್ಯವಾಯಿತು.

ಆದರೆ ಈ ತೀರ್ಮಾನಗಳಿಗೆ ತಾನೇ ಹೊಣೆಗಾರಳಾಗಿ ತಾನೇ ಆತ್ಮಸ್ಥೈರ್ಯವನ್ನು ತಂದುಕೊಂಡು ತನ್ನ ಕರ್ತವ್ಯಗಳ ಕಡೆಗೆ ತನ್ನನ್ನು ತೊಡಗಿಸಿಕೊಳ್ಳಲು ಮುಖವಾಡ ತೊಡುತ್ತಾಳೆ.

ಹೀಗೆ ಮೇಲ್ವರ್ಗದ ಸ್ತ್ರೀಯರು ತಾವೇ ಬಯಸಿದ ಸ್ವತಂತ್ರ ಬದುಕು ಅವರಿಗೆ ಹತಾಶರಾಗುವಂತೆ ಮಾಡಿದರೆ ಇನ್ನು ಮಧ್ಯಮವರ್ಗದ ಸ್ತ್ರೀಯ ಸಮಸ್ಯೆ ಇದಕ್ಕಿಂತ ಭಿನ್ನವಾಗಿದೆ. 'ನೆರಳು' ಕಥೆಯ ಶಶಿ ಈ ಕಷ್ಟಕ್ಕೆ ಸಿಲುಕಿದವಳು. ತಂದೆ ತಾಯಿಯಿಲ್ಲದೆ ಅನಾಥೆಯಾದ ಅವಳ ಸಂಪೂರ್ಣ ಜವಾಬ್ದಾರಿಯನ್ನು ಅವಳ ಅಕ್ಕನ ಗಂಡ ಅಂದರೆ ಭಾವ ಹೊರುತ್ತಾನೆ. ಹೀಗೆ ಇಲ್ಲಿ ಕಲಾ ತನ್ನ ಭಾವನಿಗೆ ಋಣಿಯಾಗಿದ್ದಾಳೆ. ಇಲ್ಲಿ ಕಲಾ ಒಂದು ಹಂತದವರೆಗೆ ತನ್ನ ಅಕ್ಕನ ಮನೆಯನ್ನು ಅವಲಂಬಿಸಿದವಳು. ಆದರೆ ಭಾವನ ಅನುಕಂಪದಿಂದ ಸ್ವಉದ್ಯೋಗವನ್ನು ಕಂಡುಕೊಂಡವಳು. ಹೀಗೆ ಕಲಾ ಭಾವನಾತ್ಮಕವಾಗಿ ಆರ್ಥಿಕವಾಗಿ ಅಕ್ಕನ ಮನೆಗೆ ಋಣಿಯಾಗಿದ್ದಾಳೆ. ಆದರೆ ಈ ಸಂದರ್ಭದಲ್ಲಿ ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಭಾವನ ಸ್ವಾರ್ಥ ತಿಳಿಯಲಾಗದೆ ಮುಗ್ಧವಾಗಿ ತನ್ನ ಸಂಗಾತಿಯನ್ನು ಅನುಮಾನಿಸಿ ಮರೆಯಲು ಪ್ರಯತ್ನಿಸುತ್ತಾಳೆ. ಆದರೆ ಅದು ಅಸಾಧ್ಯವಾದಾಗ ಸಾವಿಗೆ ಶರಣಾಗುವುದರ ಮೂಲಕ ತನ್ನ ಬದುಕನ್ನು ಅಂತ್ಯಗೊಳಿಸಿಕೊಳ್ಳುತ್ತಾಳೆ. ಹೀಗೆ ಇಲ್ಲಿ ಕಲಾಳ ಜೀವನ ಭಾವನ ಪಾತ್ರದ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. ಶಂಕರ ಭಾವನಿಗೆ ಕಲಾಳ ಮೇಲಿನ ಮೋಹ, ಅವಳನ್ನು ತಾನೇ ಪಡೆಯಬೇಕೆಂಬ ಸ್ವಾರ್ಥ, ಉನ್ನತ ಹುದ್ದೆಯನ್ನು ಅಲಂಕರಿಸುವ ಸ್ವಾರ್ಥದಿಂದ ಕಲಾಳ ಬದುಕು ದುರಂತವಾಯಿತು. ಹೀಗೆ ಇಲ್ಲಿ ಕಲಾ ಎಂಬ ಸ್ತ್ರೀ ತನ್ನ ತೀರ್ಮಾನಗಳಿಗೆ ಒತ್ತೆಯಾಗಿದ್ದಾಳೆ. ಆದರೆ ಅದು ಅಸಾಧ್ಯವಾದಾಗ ತನ್ನನ್ನು ಸಾವಿನೆಡೆಗೆ ದೂಡಿಕೊಂಡಳು. ಅವಳು ಪ್ರೇಮಪೂರ್ವಕವಾದ ಗಂಡನ ಮನೆಯನ್ನು ಪಡೆಯುವ ಅಭಿಲಾಷೆ ಉಳ್ಳವಳಾಗಿದ್ದಳು. ಇದಕ್ಕೆ ಪೂರಕಪಾತ್ರವಾಗಿ 'ಹೊರಟು ಹೋದನು' ಕಥೆಯ ಹೆಸರಿಲ್ಲದ ಸ್ತ್ರೀ ಪಾತ್ರ. ಈ ಸ್ತ್ರೀ ಮೇಲ್ವರ್ಗದ ಸಾಂಪ್ರದಾಯಿಕ ಮನೆತನದಲ್ಲಿ ಬೆಳೆದವಳು. ಇವಳು ಸುಶಿಕ್ಷಿತಳಾಗಿದ್ದರೂ ತಾನು ಬಯಸಿದ ಸಂಗಾತಿಯನ್ನು ತಂದೆಯ ಅಧಿಕಾರದಿಂದ ಪಡೆಯಲು ಅಸಾಧ್ಯವಾಗಿ ಪರಪುರುಷನನ್ನು ವಿವಾಹವಾಗುವ ಅನಿವಾರ್ಯತೆಗೆ ಒಳಗಾದವಳು. ತನ್ನ ಈ ಅಳಲನ್ನು, ದುಃಖವನ್ನು ತಾನು ವಿವಾಹವಾದ ಗಂಡನ ಮನೆಗೆ ಹೊಂದಿಕೊಳ್ಳದೆ ಅವನ ಪ್ರತಿ ತೀರ್ಮಾನಗಳನ್ನು ತಿರಸ್ಕರಿಸಿ ಅವನ ಇಚ್ಛೆಗೆ ವಿರುದ್ಧವಾಗಿ ತನ್ನ ಇಷ್ಟದಂತೆ ಮನೆಯ ಜವಾಬ್ದಾರಿಯನ್ನು ಹೊರದೆ ಯಾಂತ್ರಿಕವಾಗಿ ಬದುಕುತ್ತಾಳೆ. ತನ್ನ ಇಚ್ಛೆಯಿಲ್ಲದೆ ಹುಟ್ಟಿದ ಮಕ್ಕಳನ್ನು ತನ್ನ ಮಕ್ಕಳೆಂದು ಭಾವಿಸದವಳು. ಅಲ್ಲದೆ ತನ್ನ ಇಚ್ಛೆಗೆ ವಿರುದ್ಧವಾದ ತನ್ನ ಬದುಕನ್ನು ದುರಂತವಾಗಿಸದೆ. ತಂದೆಯ ಸಾವಿಗೆ ತಾನೇ ಕಾರಣವಾಗುವುದರ ಮೂಲಕ ಪ್ರತೀಕಾರ ತೀರಿಸಿಕೊಳ್ಳುತ್ತಾಳೆ. ಹಾಗೆ ಇಲ್ಲಿ ಇವಳು ತನ್ನ ಮೊದಲ ಪ್ರೇಮ ಮರೆಯದೆ, ಹೊಸಬದುಕಿಗೆ ಹೊಂದಿಕೊಳ್ಳಲಾರದೆ ತೊಳಲಾಡುವ ಸ್ತ್ರೀಯಾಗಿದ್ದಾಳೆ. ಆದರೆ ತನ್ನ ಗಂಡನ

ಮನೆಗೆ ಮತ್ತೆ ಹಿಂದಿರುಗುವುದು ತನ್ನ ಈ ಎಲ್ಲಾ ವರ್ತನೆಯನ್ನು ಸಹಿಸಿಕೊಂಡು ಕ್ಷಮಿಸುವ ನಂಬಿಕೆಯಿಲ್ಲದಿದ್ದರೂ ಪ್ರೀತಿಸುವ ಗಂಡನ ನೈತಿಕತೆಯನ್ನು ಅರಿತು ಹಿಂದಿರುಗುತ್ತಾಳೆ. ಅದು ಸಾಧ್ಯವಾದರೂ ಮೊದಲ ಪ್ರೇಮ ಬರುವುದಿಲ್ಲ ಎಂದು ಖಚಿತವಾದಾಗ ಹೆಣ್ಣು ತನ್ನ ಈ ಹೊಸಬದುಕಿಗೆ ಹೊಂದಿಕೊಳ್ಳುವ ಪ್ರಯತ್ನ ಮಾಡುತ್ತಾಳೆ.

ಇಲ್ಲಿನ ಸ್ತ್ರೀಯರು ವಿವಾಹ ಮತ್ತು ಗಂಡನ ಮನೆ ತಿರಸ್ಕರಿಸಲು ಅವರ ಸ್ವ ಅನುಭವಗಳೇ ಕಾರಣವಾಗಿವೆ. ಸುಶಿಕ್ಷಿತಳಾದ ಹೆಣ್ಣು ಪುರುಷ ಬಯಸುವ ವಿಧೇಯತೆಗೆ, ಅಧಿಕಾರಕ್ಕೆ ಹಾಗೂ ಅವನ ದುಶ್ಚಟ ಹಾಗೂ ಲೈಂಗಿಕ ಸಂಯಮವಿಲ್ಲದ ವರ್ತನೆಗೆ ಕಾರಣವಾಗಿದೆ. ಆದರೆ ಇದಕ್ಕಾಗಿ ಎಲ್ಲ ಪುರುಷರನ್ನು ದೂಷಿಸುವುದಿಲ್ಲ. ಕಾಮರಹಿತವಾದ ಪ್ರೀತಿಪೂರ್ವಕವಾದ ವ್ಯಕ್ತಿಗಾಗಿ ಹಂಬಲಿಸುತ್ತಾರೆ. ಈ ವ್ಯಕ್ತಿಯಿಂದ ಮಗುವನ್ನು ಪಡೆದು ತಾಯಿಯಾಗಲು ಬಯಸುತ್ತಾರೆ. ಇದಕ್ಕಾಗಿ ಹಲವು ಪುರುಷರ ಮೊರೆ ಹೋಗುತ್ತಾಳೆ. ಆದರೆ ತನ್ನನ್ನು ಪ್ರೀತಿಸುವ, ತನ್ನ ಬಗ್ಗೆ ಕಾಳಜಿಯಿರುವ ಅಪ್ಪನಂತಹ ವಯಸ್ಸಿನ ವ್ಯಕ್ತಿಯೊಂದಿಗೆ ಮಗುವನ್ನು ಪಡೆಯಲು ತೀರ್ಮಾನಿಸುತ್ತಾಳೆ. ಇನ್ನು ಕೆಲವು ಸ್ತ್ರೀಯರು ಉದ್ಯೋಗ, ಶಿಕ್ಷಣವನ್ನು ಅರಸಿ ಮುಂಬಯಿಯ ಪ್ರತಿಷ್ಠಿತ ನಗರದಲ್ಲಿದ್ದು ತಮ್ಮ ವೃತ್ತಿಶಿಕ್ಷಣಕ್ಕೆ ಅನುಗುಣವಾದ ಸಂಗಾತಿಯನ್ನು ಬಯಸಿ ಸಮಾಜ ವಿಧಿಸಿರುವ ವಿವಾಹಸಂಸ್ಕೃತಿಗೆ ಒಳಪಡದೆ, ಪರಸ್ಪರ ಅವಲಂಬಿತರಾಗದೆ ಸಹಕಾರದಿಂದಿರುವ ಸ್ತ್ರೀ–ಪುರುಷರ ಪ್ರೇಮವನ್ನು ಕಾಣಬಹುದು. ಆದರೆ ಇದುವರೆಗೂ ಯಾವುದೇ ನಿರೀಕ್ಷೆ ಆಕಾಂಕ್ಷೆಗಳಿಲ್ಲದೆ ಬದುಕಿದ ಸ್ತ್ರೀಯರಿಗೆ ತನ್ನ ಈ ಸಂಬಂಧದಿಂದ ತಾಯಿಯಾದಾಗ ಸಹಜವಾಗಿ ಗಂಡನಿಗಾಗಿ ಕಾಯುತ್ತಾಳೆ. ತನ್ನ ಬೇಕು ಬೇಡಗಳನ್ನು ಮನ್ನಿಸಬೇಕೆಂದು ಬಯಸುತ್ತಾಳೆ. ತನ್ನ ಸಂಗಾತಿಯ ವಿರೋಧದ ನಡುವೆಯೂ ತಾಯಿಯಾಗಲು ಬಯಸುತ್ತಾಳೆ. ತಾಯಿ ಮಗುವಿನ ಪ್ರೀತಿ ಶಾಶ್ವತವಾದದ್ದು ಎಂದು ಭಾವಿಸುತ್ತಾಳೆ. ಹಾಗಾಗಿ ತಿರಸ್ಕರಿಸಿ ಹೋದ ಸಂಗಾತಿ ವಿವಾಹದ ಮೂಲಕ ಆ ಮಗುವನ್ನು ಸ್ವೀಕರಿಸಲು, ತನ್ನ ಹೆಸರಿನ ಮೂಲಕ ಮಗುವನ್ನು ಗುರುತಿಸಲು ಬಂದಾಗ ಅದನ್ನು ತಿರಸ್ಕರಿಸುವುದರ ಮೂಲಕ ಗಂಡನಿಲ್ಲದ ಮನೆಯನ್ನು, ತಾಯಿ ಮತ್ತು ಮಗುವಿರುವ ಮನೆಯನ್ನು ಬಯಸುತ್ತಾಳೆ. ಈ ಸ್ತ್ರೀ–ಪುರುಷರು ತಾವು ಬದುಕುವ ಸಮಾಜದ ಪರವಿರದೆ ಲೈಂಗಿಕ ಸ್ವಚ್ಛಂದದ ಬದುಕನ್ನು ಆಯ್ಕೆ ಮಾಡಿಕೊಂಡ ಬದುಕುವ ಮೂಲಕ ವೈಯಕ್ತಿಕ ಹಿತಾಸಕ್ತಿಯೇ ಮುಖ್ಯವಾಗಿ ಕಂಡುಬರುತ್ತದೆ. ಮಹಿಳೆಗೆ ಇದನ್ನು ತಾಳಲು ಅವಳ ಆರ್ಥಿಕ ಅಭದ್ರತೆಯೇ ಕಾರಣವಾಗಿದೆ ಎಂಬುದನ್ನು ಗಮನಿಸಬಹುದಾಗಿದೆ.

ಮುಂಬಯಿ ನಗರದ ಪರಿಸರದಲ್ಲಿ 'ಹೀಗೊಂದು ಕತೆ'ಯ ಮಿನಿ ಎಂಬ ಸ್ತ್ರೀಯ ಬದುಕು ತನ್ನ ಹಂದರವನ್ನು ಬಿಚ್ಚಿಕೊಳ್ಳುತ್ತದೆ. ಇಲ್ಲಿ ಮಿನಿಯು ವಿದ್ಯಾವಂತೆ ಮತ್ತು ವೃತ್ತಿನಿರತ ಮಹಿಳೆ. ವಿವಾಹವಾದ ಪುರುಷನೊಂದಿಗೆ ಪ್ರೇಮವನ್ನು ಹೊಂದುತ್ತಾಳೆ. ಮಾನಸಿಕವಾದ

ಪ್ರೇಮಕ್ಕೆ ಲೈಂಗಿಕ ಪಾವಿತ್ರ್ಯತೆ ಮುಖ್ಯವೆಂದು ಇಲ್ಲಿನ ಪುರುಷರಿಗೆ ಅನಿಸುವುದಿಲ್ಲ. ಇದು ಮಹಿಳೆಯರಿಗೆ ಮಾತ್ರ ಅನ್ವಯಿಸುತ್ತದೆ. ಆದರೆ ಈ ಮಾನಸಿಕ ಪ್ರೇಮ ಪುರುಷರಲ್ಲಿ ಕಾಣದೆ ಹೆಣ್ಣನ್ನು ಕೇವಲ ಕಾಮದ ತನ್ನ ದೈಹಿಕ ಸುಖಕ್ಕೆ ಬಳಸಿಕೊಳ್ಳುವ ಸ್ತ್ರೀಯಾಗಿ ನೋಡುತ್ತಾರೆ. ಇದನ್ನು ಅರಿಯದ ಸ್ತ್ರೀ ವಿವಾಹಸ್ಥ ಪುರುಷರನ್ನು ಮುಖ್ಯವಾಗಿ ಪ್ರೇಮಿಸಿ ಅವನ ಅಗತ್ಯಗಳಿಗೆ ಅನುಗುಣವಾಗಿ ತಮ್ಮ ಬದುಕನ್ನು ಹೊಂದಿಸಿಕೊಳ್ಳುತ್ತಾರೆ. ಪ್ರೀತಿಸಿದ ವ್ಯಕ್ತಿಗೆ ಕಾದು ಜೀವನವನ್ನು ಮುಡಿಪಾಗಿಸುವ ಸ್ತ್ರೀಗೆ ತಾನು ಆತನಿಂದ ಗಂಡ, ಮನೆ ಮಕ್ಕಳಿಗಾಗಿ ಹಂಬಲಿಸುತ್ತಾಳೆ. ಆದರೆ ಅದು ಅವಳಿಗೆ ಅ ಪುರುಷನಿಂದ ದೊರಕುವುದು ವಿಧುರನಾಗಿ ತನ್ನ ಮೊದಲನೇ ಪತ್ನಿಯ ಮಕ್ಕಳ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸಿದಾಗ. ತನ್ನ ಇಪ್ಪತ್ತು ವರ್ಷಗಳ ಬದುಕಿನಲ್ಲಿ ಆತನಿಗಾಗಿ ಜೀವನ ಮುಡುಪಾಗಿಟ್ಟ ಈ ಸ್ತ್ರೀಗೆ ಆತನೊಂದಿಗೆ ತನ್ನ ಸ್ವಾನುಭವವನ್ನು ಸ್ಮರಿಸಿಕೊಳ್ಳುತ್ತಾ ಆ ಅವಕಾಶ ಬಂದಾಗ ಆ ಗಂಡ ಮನೆಯನ್ನು ತಿರಸ್ಕರಿಸಿ ತಾನು ತನ್ನ ದುಡಿಮೆಯನ್ನು ನೆಚ್ಚಿಕೊಂಡು ಸ್ವಾವಲಂಬಿಯಾಗಿ ಬದುಕಲು ಬಯಸುತ್ತಾಳೆ.

ಹೀಗೆ ಇಲ್ಲಿ ವೈವಾಹಿಕ ಸಂಬಂಧವಿಲ್ಲದ ಸ್ತ್ರೀ-ಪುರುಷ ಸಂಬಂಧಗಳಲ್ಲಿ ಪುರುಷನಿಗಿಂತ ಸ್ತ್ರೀಯು ಹೆಚ್ಚು ಹಿಂಸೆಯನ್ನು ಅನುಭವಿಸುತ್ತಾಳೆ. ಆದರೆ ಪುರುಷನಿಗೆ ಈ ಹಿಂಸೆಯಿಲ್ಲ. ಪುರುಷನಿಗೆ ಲೈಂಗಿಕ ಸ್ವಚ್ಛಂದತೆ, ಉಪಪತ್ನಿಯನ್ನು ಹೊಂದುವುದಕ್ಕೆ ಸಮಾಜ ಮನ್ನಿಸಿದೆ. ಆದರೆ ಸ್ತ್ರೀಯು ವಿವಾಹವಿಲ್ಲದ ಪುರುಷನ ಸಂಬಂಧದಿಂದ ಅವಳು ಸ್ವತಃ ಆ ಪುರುಷನಿಂದ, ಸಮಾಜದಿಂದ ಅವಮಾನಿತಳಾಗುತ್ತಾಳೆ. ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾಳೆ. ಹೀಗಾಗಿ ತನ್ನತನವನ್ನು ಉಳಿಸಿಕೊಳ್ಳಲು ಆ ವಿವಾಹಸ್ಥ ಪುರುಷನನ್ನೇ ತಿರಸ್ಕರಿಸಿ ಬದುಕನ್ನು ನಡೆಸುತ್ತಾಳೆ. ಈ ಪ್ರಜ್ಞಾವಸ್ಥೆ ಅವಳಿಗೆ ಬರುವುದು ಭೂತದ ಕ್ರಿಯೆಯ ಸ್ಮರಣೆಯಿಂದ. ಅಂದರೆ ಇದು ತನ್ನ ಬದುಕಿನ ಅನುಭವದಿಂದ ಪಡೆದುಕೊಂಡ ಜಾಗೃತಿಯಾಗಿದೆ.

ಇದಕ್ಕೆ ಭಿನ್ನವಾಗಿ ಗಂಡ-ಹೆಂಡತಿ, ಮಕ್ಕಳು, ಮಾವ ನಾದಿನಿಯಿರುವ ಸಂಸಾರವನ್ನು ಮಧ್ಯಮವರ್ಗದ ಶಾಂತಾ(ಅವಳ ಸ್ವಾತಂತ್ರ್ಯ)ಳ ಕೂಡುಕುಟುಂಬದಲ್ಲಿ ಕಾಣುತ್ತದೆ. ಈ ಮಧ್ಯಮವರ್ಗದ ಕುಟುಂಬಕ್ಕೆ ಗಂಡನ ದುಡಿಮೆಯಿಂದ ಮನೆಯನ್ನು ನಡೆಸಲು ಸಾಧ್ಯವಾಗದೆ ಪತ್ನಿ ದುಡಿಮೆ ಮಾಡುವುದು ಅನಿವಾರ್ಯವಾಗಿದೆ. ಅಲ್ಲದೆ ದುಡಿಮೆಯ ಕಾರಣದಿಂದ ಗಂಡ ದೂರದ ಸ್ಥಳದಲ್ಲಿ ನೆಲೆ ನಿಂತಿರುವುದು ಮಹಿಳೆಗೆ ಹೊರೆಯಾಗಿದೆ. ಇಲ್ಲಿ ಮಹಿಳೆ ಆರ್ಥಿಕವಾಗಿ ಗಂಡನಿಗೆ ಅವಲಂಬಿತವಾಗಿಲ್ಲ, ಸ್ವಾವಲಂಬಿಯಾಗಿದ್ದಾಳೆ. ಮನೆಯ ಮಕ್ಕಳ, ಮಾವನ ಬೇಕುಬೇಡಗಳನ್ನು ಈಡೇರಿಸುವ ಈ ಮಹಿಳೆಗೆ ಮನೆಯ ಹೊರಗಿನ ಹಾಗೂ ಒಳಗಿನ ದುಡಿಮೆ ಅವಳನ್ನು ಮಾನಸಿಕ ಹಾಗೂ ದೈಹಿಕವಾಗಿ ಕುಗ್ಗಿಸಿದೆ. ಈ ಹೊರೆಯನ್ನು ಗಂಡನಿಗೆ ಹಂಚಲು ಬಯಸುತ್ತಾಳೆ. ಆದರೆ ಇದು ನಿರರ್ಥಕವಾದದ್ದು. ಮನೆಯ ಯಾವ ಜವಾಬ್ದಾರಿಯನ್ನು ಹೊರದೆ ಆ ಗಂಡ ಪತ್ನಿಯಿರುವ ಸ್ಥಳಕ್ಕೆ ಹೋಗದೆ ಇರುವುದು ಅವನ

ಬೇಜವಾಬ್ದಾರಿಯನ್ನು ತೋರಿಸುತ್ತದೆ. ಹೀಗೆ ಆಕೆ ಗುಲಾಮಳಾಗಿ ಅವಿರತ ದುಡಿಮೆಯಿಂದ ಕುಸಿದಿದ್ದಾಳೆ. ಆದರೆ ಇದರ ಬಗ್ಗೆ ಕಾಳಜಿಯಾಗಲಿ ಕಕ್ಕುಲಾತಿಯಾಗಲಿ ಆ ಗಂಡನಿಗಿಲ್ಲದೆ ಅವಳ ಈ ಕೆಲಸಗಳಿಗೆ ಯಾವುದೇ ಮಾನ್ಯತೆ ನೀಡುವುದಿಲ್ಲ. ಇಲ್ಲಿ ಗಂಡ ಪತ್ನಿಯನ್ನು ಸೇರುವುದು ತನ್ನ ಲೈಂಗಿಕ ತೃಪ್ತಿಗೆ. ಅದು ಅವಳಿಗೆ ಅಸಕ್ತಿಯಿಲ್ಲದಾಗ ಆ ಮನೆಯನ್ನು ತಿರಸ್ಕರಿಸಿ ಬೇರೆ ಸ್ತ್ರೀಯೊಂದಿಗೆ ಅನೈತಿಕ ಸಂಬಂಧವನ್ನು ಹೊಂದುತ್ತಾನೆ. ಇಲ್ಲಿ ಸ್ತ್ರೀಯು ವಿದ್ಯಾವಂತೆ. ವಿವಾಹಪೂರ್ವದಲ್ಲಿ ಸ್ವತಂತ್ರ ವ್ಯಕ್ತಿದವಳು. ಆದರೆ ಗಂಡನ ಮನೆಯ ಪ್ರವೇಶ ಅವಳ ಎಲ್ಲ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ.

ಹೀಗೆ ಇಲ್ಲಿ ಮಧ್ಯಮವರ್ಗದ ಮಹಿಳೆ ಒಳ ಹಾಗೂ ಹೊರ ದುಡಿಮೆಯಿಂದ ಹೆಚ್ಚು ಗುಲಾಮತನವನ್ನು ಅನುಭವಿಸುತ್ತಿದ್ದಾಳೆ. ಸ್ತ್ರೀಸಮಾನತೆ ಬಗ್ಗೆ ಜಾಗೃತಿ ಮೂಡಿಸುವ ಮಹಿಳೆಯ ವಾಸ್ತವ ಪರಿಸ್ಥಿತಿಯನ್ನು ಈ ಕಥೆ ತೋರಿಸುತ್ತದೆ. ಇದಕ್ಕೆ ಪೂರಕವಾದ ಗಂಡನ ಸರ್ವಾಧಿಕಾರವಿರುವ ಸಂಸಾರ ಸರೂದು(ಬಿಡುಗಡೆ). ಸರೂ ತನ್ನ ಮನೆಯನ್ನು ವಾಸ್ತವದಲ್ಲಿ ಕಾಣಲು ಅಸಾಧ್ಯವಾದಾಗ ಕನಸುಗಳಲ್ಲಿ ಕಾಣಲು ಬಯಸುತ್ತಾಳೆ. ಇಲ್ಲಿ ಮಹಿಳೆ ತಾನು ಬಯಸಿದ ಗಂಡ ಮತ್ತು ಮನೆಗಾಗಿ ಹಂಬಲಿಸಿ ಅದು ಈಡೇರದಾಗ ಗಂಡನ ಮರಣಶಯ್ಯೆಯಲ್ಲಿ ಹಾಲನ್ನು ಕುಡಿಯುವುದರ ಮೂಲಕ ಸಂತೃಪ್ತಿ ಹೊಂದುವ ವಿವರಣೆಯಿದೆ. ಅವಳ ಗಂಡನ ಸರ್ವಾಧಿಕಾರ, ಅಲ್ಲಿ ಬದುಕಿದ ರೀತಿ, ಅನುಭವಿಸಿದ ಹಿಂಸೆ, ಈ ಹಿಂಸೆಯಿಂದ ಬಿಡುಗಡೆಯನ್ನು ವೈಯಕ್ತಿಕವಾಗಿ ಪಡೆಯಲು ಅಸಾಧ್ಯವಾದಾಗ ಪತಿಯ ಸಾವಿನ ಮುಖಾಂತರ ಬಿಡುಗಡೆಯನ್ನು ಪಡೆಯುತ್ತಾಳೆ. ಈ ಸಮಾಜ ಆ ಪುರುಷನನ್ನೇ ಗೌರವಿಸುತ್ತದೆ. ಇವರ ಕುಟುಂಬಗಳಲ್ಲಿ ಪ್ರೇಮಪೂರ್ವಕವಾದ ದಾಂಪತ್ಯವನ್ನು ಬಯಸುವ ಸ್ತ್ರೀಯರು ಬಹುಮಂದಿಯರು. ಆದರೆ ತಾನು ಪ್ರೀತಿಸಿದ ಗಂಡ, ಸಂಸಾರ ಪಾಲಕರ ನಿರಾಕರಣೆಯಿಂದ ಅಸಾಧ್ಯವಾದಾಗ ಮಾನಸಿಕ ಅಸ್ವಸ್ಥರಾಗಿ ರೂಪುಗೊಳ್ಳುವ ಮಹಿಳೆಯರಿದ್ದಾರೆ. ವಿವಾಹಪೂರ್ವ ಪ್ರೇಮವನ್ನು ಅವರಿಗೆ ಮರೆಯಲು ಸಾಧ್ಯವಾಗುವುದೇ ಇಲ್ಲ. ಬೇರೆ ಪುರುಷನೊಂದಿಗೆ ದಾಂಪತ್ಯವನ್ನು ಪ್ರಾರಂಭಿಸಿ ಮಕ್ಕಳನ್ನು ಪಡೆದು ಆ ಕುಟುಂಬವನ್ನು ಅತ್ಯಂತ ಜಾಗರೂಕತೆಯಿಂದ ಯಶಸ್ವಿಯಾಗಿ ಬದುಕಿದರೂ ಅವರು ಆ ಗಂಡನನ್ನು ಮನಸ್ಸಿನಿಂದ ಒಪ್ಪಿರುವುದಿಲ್ಲ. ಎಲ್ಲವನ್ನು ಯಾಂತ್ರಿಕವಾಗಿ ನಡೆಸಿರುತ್ತಾಳೆ. ಹಾಗಾಗಿ ಸಮಾಜ ಒಪ್ಪಿದ ಗಂಡನು ಸತ್ತಾಗ ತನ್ನ ಅಲಂಕಾರವನ್ನು ತೆಗೆಯದೆ, ತನ್ನ ಪ್ರೇಮಿ ಸಾವಿನ ನಂತರ ಅವಳು ವಿಧವೆಯ ಪೋಷಾಕನ್ನು ಧರಿಸಲು ತೀರ್ಮಾನಿಸುತ್ತಾಳೆ. ಹೀಗೆ ಇಲ್ಲಿ ಮಹಿಳೆಗೆ ಮನಸ್ಸಿನ ಆತ್ಮದ ನೆಲೆಯಲ್ಲಿ ಹುಟ್ಟುವ ಪವಿತ್ರವಾದ ಪ್ರೀತಿಗೆ ಹೆಚ್ಚು ಮಾನ್ಯತೆಯಿದೆ. ಅವಳಿಗೆ ಗಂಡ, ಮನೆ ಮತ್ತು ಮಕ್ಕಳು ಸಮಾಜದ ತೋರಿಕೆಗೆ ಏರ್ಪಟ್ಟಿರುವ ಬಂಧನವಾಗಿದೆ. ಆದರೆ ಅಲ್ಲಿಯೂ ಮಹಿಳೆ ಆ ಗಂಡ ಮತ್ತು ಮಕ್ಕಳ ಗುರಿ ಸಾಧನೆಗೆ ಬದುಕನ್ನು ತ್ಯಾಗ ಮಾಡುತ್ತಾಳೆ.

ಮಾಲತಿಯ ತಾಯಿಯ ಈ ಮಾನಸಿಕ ಅಸ್ವಸ್ಥತೆ ಅವಳ ದಾಂಪತ್ಯಕ್ಕೆ ಅಡಚಣೆಯಾದಾಗ ತನ್ನ ತಾಯಿಯನ್ನು ಆಶ್ರಮಕ್ಕೆ ಕಳಿಸುವುದರ ಮೂಲಕ ತನ್ನ ಸಂಸಾರದ ನೆಮ್ಮದಿಯನ್ನು ಬಯಸುತ್ತಾಳೆ. ಹೀಗೆ ಇಲ್ಲಿ ಮಗಳು ತಾಯಿಯ ಅಳಲನ್ನು ಅರ್ಥ ಮಾಡಿಕೊಂಡು ಅವಳ ಕಷ್ಟಕ್ಕೆ ಸ್ಪಂದಿಸುವ ಮನಸ್ಸುಳ್ಳವಳಾಗುತ್ತಾಳೆ. ಮಗಳು ಹಿರಿಯ ತಾಯಿಯ ಜವಾಬ್ದಾರಿಯನ್ನು ಮತ್ತು ಕರ್ತವ್ಯವನ್ನು ನಿಭಾಯಿಸುತ್ತಾಳೆ. ಆದರೆ ತನ್ನ ಗಂಡನ ಕುಟುಂಬಕ್ಕೆ ತೊಂದರೆಯಾದಾಗ ತನ್ನ ತಾಯಿಯನ್ನು ವೃದ್ಧಾಶ್ರಮದಲ್ಲಿಡುವುದರ ಮೂಲಕ ತನ್ನ ಸಂಸಾರದ ಹಾಗೂ ತಾಯಿಯ ಜವಾಬ್ದಾರಿಯನ್ನು ನಿಭಾಯಿಸುವಳು. ಆ ಕುಟುಂಬದ ಸುಖವನ್ನು ರಕ್ಷಿಸುವಳು.

ಹೀಗೆ ಹಲವು ನೆಲೆಯ ಸ್ತ್ರೀಯರು ವೀಣಾ ಅವರ ಕತೆಗಳಲ್ಲಿ ಕಾಣಿಸುತ್ತಾರೆ. 'ತಿರುಗಿ ಹೋದಳು' ಕತೆಯಲ್ಲಿ ಎರಡು ನೆಲೆಯ ಸ್ತ್ರೀಯರನ್ನು ಕಾಣಬಹುದು. ಅವರ ಕತೆಗಳಲ್ಲಿ ಸ್ತ್ರೀತನ ಮತ್ತು ಸ್ತ್ರೀ ಸ್ವಾತಂತ್ರ್ಯವನ್ನು ಹುಡುಕಲಾಗಿದೆ. ಒಂದು ವಿದ್ಯಾವಂತ ಕುಟುಂಬ ಮತ್ತು ವಿದ್ಯಾವಂತ ಸ್ತ್ರೀ. ಇನ್ನೊಂದು ಬಡತನ ಕುಟುಂಬ ಮತ್ತು ಅವಿದ್ಯಾವಂತ ಸ್ತ್ರೀ. ಈ ಎರಡು ನೆಲೆಯ ಸ್ತ್ರೀಯರನ್ನು ಮುಖಾಮುಖಿ ಮಾಡಲಾಗಿದೆ.

ವಿದ್ಯಾವಂತ ಕುಟುಂಬದ ಸ್ತ್ರೀ ಲಕ್ಷ್ಮಿ ಉದ್ಯೋಗಸ್ಥಳು ಮತ್ತು ಆರ್ಥಿಕ ಸ್ವಾತಂತ್ರ್ಯ ಹೊಂದಿದವಳು. ಲಕ್ಷ್ಮಿಯ ಮನೆ ಕೆಲಸದ ಮಹಿಳೆ ಹಮೀದಬಾನು ದುಡಿವ ಮಹಿಳೆ, ಬಡತನದ ಕುಟುಂಬದವಳು. ತಾಯಿಯ ಆಶ್ರಯದಲ್ಲಿ ಬೆಳೆದ ಬಾನು ಯಾರದೋ ಹುನ್ನಾರಕ್ಕೆ ಬಲಿಯಾಗಿ ಮದುವೆಯಾದವನನ್ನು ಮದುವೆಯಾಗುವುದು. ದುಡಿಯದ, ಯಾವ ಜವಾಬ್ದಾರಿಯಿಲ್ಲದ ವರ್ಷಕ್ಕೆ ಒಂದು ಮಗುವನ್ನು ಹೆರುವಂತೆ ಮಾಡುವ ಗಂಡ ಸಿಕ್ಕು ಬದುಕಿನಲ್ಲಿ ನರಕ ಅನುಭವಿಸುತ್ತಾಳೆ. ಬಾನುಗೆ ಲಕ್ಷ್ಮಿ ಹೇಳುವುದೇನೆಂದರೆ 'ನಿನ್ನ ಗಂಡ ಹತ್ತಿರ ಬಂದರೆ ಸೇರಿಸಿಕೊಳ್ಳಬೇಡ, ಒದ್ದು ಓಡಿಸು'(ನಡೆದದ್ದೇ ದಾರಿ, ಪು.೨೦೨) ಎಂದು. ಆ ಧೈರ್ಯ ಬಾನುಗೆ ಕಡೆಯತನಕ ಬರಲೇ ಇಲ್ಲ. ಎಂಟು ಮಕ್ಕಳ ತಾಯಿಯಾಗುತ್ತಾಳೆ. ಲಕ್ಷ್ಮಿ ವಿದ್ಯಾವಂತೆಯಾಗಿ 'ಉದ್ಯೋಗಸ್ಥಳಾಗಿ ಮದುವೆಯಾಗುತ್ತಾಳೆ. ಗಂಡನೂ ಉದ್ಯೋಗಸ್ಥ. ಆದರೆ ಹೆಂಡತಿಯನ್ನು, ಅವಳ ಸ್ವಾತಂತ್ರ್ಯವನ್ನು ಲೆಕ್ಕಿಸದವನು. ಮನೆ ಸಂಸಾರದ ಬಗ್ಗೆ ಬೇಜವಾಬ್ದಾರಿ ಹೊಂದಿದವನು. ಬೇರೆ ಹೆಣ್ಣಿನ ಸಂಬಂಧ ಹೊಂದಿದವನು. ಲಕ್ಷ್ಮಿಗೆ ಗಂಡನನ್ನು ತೊರೆದು ಇರಲು ಎಷ್ಟು ಯೋಚಿಸಿದರೂ ಸಾಧ್ಯವಾಗುವುದಿಲ್ಲ. ಕೊನೆಗೆ ಬಾನುಗೆ 'ನಿನ್ನ ಗಂಡ ಬಂದರೆ ಸೇರಿಸಿಕೊಳ್ಳಬೇಡ ಒದ್ದು ಓಡಿಸು'(ನಡೆದದ್ದೇ ದಾರಿ, ಪು.೨೧೧) ಎಂದು ಹೇಳುವ ನೈತಿಕ ಪ್ರಶ್ನೆಯನ್ನು ಎದುರಿಸಿ ತಣ್ಣಗಾಗುವಳು. ಅಂತಿಮವಾಗಿ ಸ್ತ್ರೀಗೆ ಗಂಡ, ಮನೆ ಎಂದರೆ ಹಿಂಸೆಯೇ. ಹಾಗೆಂದು ಸ್ವಾತಂತ್ರ್ಯ ಬಯಸಿದರೆ ಅದೂ ಹಿಂಸೆಯೇ ಎಂಬ ಪ್ರಶ್ನೆ ಎದುರಾಗಿ ನಿಲ್ಲುತ್ತದೆ. ವೀಣಾ ಅವರು ಉತ್ತರಗಳಿಲ್ಲದ ಪ್ರಶ್ನೆಗಳಲ್ಲಿ ಸ್ತ್ರೀಯರನ್ನು ಗ್ರಹಿಸುತ್ತಾರೆ.

ಹೀಗೆ ವೀಣಾ ಶಾಂತೇಶ್ವರ ಅವರ ಕಥೆಗಳಲ್ಲಿ ಸರಳ ಹಾಗೂ ಕೂಡುಕುಟುಂಬಗಳ ಸಂಘರ್ಷಗಳು ಮತ್ತು ವೈರುಧ್ಯಗಳು ಚಿತ್ರಣಗೊಂಡಿವೆ. ಇವರ ಕುಟುಂಬವ್ಯವಸ್ಥೆಯಲ್ಲಿ ವ್ಯಾವಹಾರಿಕತೆ ಮಾತ್ರವಲ್ಲ, ಸಂಪೂರ್ಣ ಜೀವನದ ಸಾರ್ಥಕತೆಯನ್ನು ಆ ಮೂಲಕ ಸ್ತ್ರೀ ಸ್ವಾತಂತ್ರ್ಯವನ್ನು ಶೋಧಿಸುವ ಪ್ರಯತ್ನವಿಲ್ಲಿದೆ. ಸ್ತ್ರೀಯು ಪುರುಷನಿಗೆ ಗುಲಾಮಳು. ಈ ಗುಲಾಮ ಸ್ತ್ರೀ ಗಂಡನ ಸುತ್ತಮುತ್ತ ಮುತ್ತುವುದಲ್ಲದೆ ಬೇರಿನ್ನಾವ ಗತಿಯಿಲ್ಲ ಎಂಬುದನ್ನು 'ಅವಳ ಸ್ವಾತಂತ್ರ್ಯ', 'ತಿರುಗಿ ಹೋದಳು', 'ಕವಲು', 'ನೆರಳು' ಈ ಕತೆಗಳ ಹೆಚ್ಚಿನ ಸ್ತ್ರೀ ಪಾತ್ರಗಳು ನಿರೂಪಿಸುತ್ತವೆ. ಪುರುಷನಂತೆ ಬದುಕಲು ಹೋಗಿ ಎರಡನೇ ದರ್ಜೆಯ ಪುರುಷನಾಗಿ ಕರಗಿಹೋಗುವ ಬಿಕ್ಕಟ್ಟನ್ನು ಅವಳು ತನ್ನದೇ ಆದ ವ್ಯಕ್ತಿತ್ವದೊಳಗೆ ಅನುಭವಿಸಬೇಕಾಗುತ್ತದೆ. ಮುಖ್ಯವಾಗಿ 'ಹೀಗೊಂದು ಕತೆ'ಯ ಮಿನಿ, ಕಲಾ(ನೆರಳು), ಪ್ರೂಲಾ, ಲೀಲಾವತಿ(ಅತಿಥಿ), ಸರೂ(ಹೊರಟು ಹೋದನು) ಇತ್ಯಾದಿ ಸ್ತ್ರೀ ಪಾತ್ರಗಳು ಇಂತಹ ಬಿಕ್ಕಟ್ಟನ್ನು ಅನುಭವಿಸುತ್ತವೆ. 'ಕೊನೆಯ ದಾರಿ' ಕಥೆಯ ಲೀಲಾ ಪುರುಷನಿಗೆ ಎಲ್ಲದರಲ್ಲೂ ಸರಿಸಾಟಿಯಾಗಿ ನಿಲ್ಲಬೇಕೆಂಬ ತನ್ನಿಚ್ಛೆಯ ಫಲಿತವಾಗಿ ವಿವಾಹವಿಲ್ಲದ ತಾಯಿಯಾಗುವ ಹಂಬಲದಿಂದ ಹೆಣ್ಣುತನದ ಸಹಜಲಕ್ಷಣಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಸಾಮಾಜಿಕ ಸ್ಥಿತ್ಯಂತರದಲ್ಲಿ ಪೂರ್ಣ ಮಗ್ನವಾಗಿರುವ ಗೋವಿಂದಮೂರ್ತಿ, ವಿಲಿಯಮ್ಸ ವಿನಯ ಸಾವರಕರ ಪುರುಷರು ಲೀಲಾಳನ್ನು ಕೇವಲ ವಸ್ತುವಾಗಿ ಬಳಸುತ್ತಾರೆ. ಅದೇ 'ಅವಳ ಸ್ವಾತಂತ್ರ್ಯ' ಕತೆಯ ಶಾಂತಿಯನ್ನು ಅವಳ ಗಂಡ ಸತೀಶ ಅವಳನ್ನು ವಸ್ತುವಾಗಿ ಬಳಸುತ್ತಾನೆ ಎಂಬುದು ಅವರಿಬ್ಬರ ಕೌಟುಂಬಿಕ ದುರಂತವಾಗಿದ್ದರೂ ಹೆಣ್ಣಿನ ತಾಳ್ಮೆಯಿಂದ ಆ ಕುಟುಂಬವು ಶಿಥಿಲಗೊಳ್ಳುವುದಿಲ್ಲ. ಸಂಪ್ರದಾಯ ಕುಟುಂಬದಲ್ಲಿ ಸ್ತ್ರೀಯು ಪತಿಯೆಂಬ ಭಾವನೆಯಲ್ಲಿ ಪುರುಷನ ಶ್ರೇಷ್ಠತನವನ್ನು ಒಪ್ಪಿಕೊಂಡಿದ್ದಳು. ಆಗಲೂ ಪುರುಷ ಸ್ತ್ರೀಯ ಮಾಲೀಕ, ಸ್ತ್ರೀ ದ್ವಿತೀಯ ದರ್ಜೆಯವಳಾಗಿ ಮಾರ್ಪಟ್ಟಾಗಲೂ ಪುರುಷರು ಸೋಮಾರಿಗಳಾಗಿರುತ್ತಾರೆ. ಏಕೆಂದರೆ ಆಧುನಿಕ ಸ್ತ್ರೀ ಪುರುಷನಂತೆ ಇರಲು ನಿರಂತರ ಪ್ರಯತ್ನಿಸುತ್ತಾಳೆ. ಸ್ತ್ರೀಯು ಎಷ್ಟೇ ಪುರುಷನ ಅನುಕರಣೆ ಮಾಡಿದರೂ ಅವಳು ಕುಟುಂಬ ಎಂಬ ಪ್ರಾಥಮಿಕ ಸಂಸ್ಥೆಯಲ್ಲಿ ಪುರುಷನ ನೆರಳಾಗಿ ಉಳಿಯುವಳು. ಇಲ್ಲಿ ಪುರುಷನು ಸ್ತ್ರೀಯನ್ನು ಬಲವಂತವಾಗಿ ತನ್ನ ನೆರಳನ್ನಾಗಿ ರೂಪಿಸುತ್ತಾನೆ. ಇಲ್ಲಿನ ಕತೆಗಳಲ್ಲಿನ ಸ್ತ್ರೀಯರು ಬಹುಪಾಲು ವಿದ್ಯಾವಂತರು, ಆರ್ಥಿಕ ಸ್ವಾತಂತ್ರ್ಯವಿರುವವರು. ಲೈಂಗಿಕ ವಿಷಯಗಳನ್ನೊಳಗೊಂಡಂತೆ ಎಲ್ಲ ವಿಷಯಗಳ ಬಗೆಗೂ ವೈಜ್ಞಾನಿಕ ದೃಷ್ಟಿಯಿದೆ. ಹಾಗೆಂದು ಅವಳು ಜೀವನಕ್ಕೆ ವಿಮುಖಳಲ್ಲ. ವ್ಯಕ್ತಿಗಳ ಸಹವಾಸ, ಲೈಂಗಿಕ ಸುಖ ಬೇಕಾದಾಗ ಅವಳು ಆಕೆಯ ಪ್ರವೃತ್ತಿಗಳನ್ನು ಹತ್ತಿಕ್ಕಿಲ್ಲ. ಹೀಗೆ ವೀಣಾ ಅವರ ಕತೆಗಳಲ್ಲಿ ಕಂಡುಬರುವ ಸ್ತ್ರೀಯರು ಮುಖ್ಯವಾಗಿ ತಮ್ಮ ಸಂಗಾತಿಗಳನ್ನು ತಾವೇ ಆಯ್ಕೆ ಮಾಡಿಕೊಳ್ಳ ಬಯಸುತ್ತಾರೆ.

ವಿವಾಹ ಎಂಬ ಬಂಧನದಲ್ಲಿ ಸಿಕ್ಕಿ ಹಾರಿಕೊಳ್ಳಲು ಬಯಸಿದ ಸ್ತ್ರೀ(ಲೀಲಾವತಿ), ವಿವಾಹ ಸಂಸ್ಥೆಯ ಮೇಲೆ ವಿಶ್ವಾಸವಿಲ್ಲದೆ ಸಂಗಾತಿಯನ್ನು, ಮಗುವನ್ನು ಬಯಸುವ, ಆ ಮೂಲಕ ಹೆಂಡತಿಯಾಗುವ, ತಾಯಿಯಾಗುವ ಆಶೆ ಹೊಂದಿದ ಸ್ತ್ರೀ(ಲೀಲಾ, ಮಿನಿ, ಕಲಾ) ಎಲ್ಲವನ್ನು ತೊರೆದು ಸ್ವಾತಂತ್ರ್ಯ ಬಯಸುವ ಸ್ತ್ರೀ(ಲೀಲಾವತಿ, ಮಿನಿ) ಎಲ್ಲವನ್ನು ಉಳಿಸಿಕೊಂಡು ಸ್ವಾತಂತ್ರ್ಯವಾಗಿರಲು ಬಯಸುವ ಸ್ತ್ರೀ(ಸರೂ, ಮಿನಿ) ಹೀಗೆ ಹಲವು ನೆಲೆಯ ಸ್ತ್ರೀ ಹಾಗೂ ಸರಳ, ಕೂಡುಕುಟುಂಬ, ಗಂಡನಿಲ್ಲದ, ತಾಯಿ ಮಗುವಿರುವ, ಸ್ತ್ರೀ–ಪುರುಷ ಸಮಾನವಾಗಿರುವ ವೈಯಕ್ತಿಕ ಕುಟುಂಬಗಳು ಈ ಕಥೆಗಳಲ್ಲಿವೆ. ಅಂತಿಮವಾಗಿ ವೀಣಾ ಅವರ ಕಥೆಗಳಲ್ಲಿನ ಸ್ತ್ರೀಯು 'ಗಂಡ, ಮನೆ ಎಂದರೆ ಹಿಂಸೆಯೇ, ಹಾಗೆಂದು ಸ್ವಾತಂತ್ರ್ಯ ಬಯಸಿದರೆ ಅದೂ ಹಿಂಸೆಯೇ' ಎಂಬ ಪ್ರಶ್ನೆ ಎದುರಾಗಿ ನಿಲ್ಲುತ್ತದೆ. ವೀಣಾ ಅವರು ಉತ್ತರಗಳಿಲ್ಲದ ಪ್ರಶ್ನೆಗಳಲ್ಲಿ ಸ್ತ್ರೀಯರನ್ನು ಗ್ರಹಿಸುತ್ತಾರೆ.

೪.೩. ಗೀತಾ ನಾಗಭೂಷಣ

ಬಂಡಾಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಪ್ರಮುಖ ಕತೆಗಾರ್ತಿಯಾಗಿ ಗುರುತಿಸಿಕೊಂಡವರು ಗೀತಾನಾಗಭೂಷಣ ಅವರು. ಈ ಸಂದರ್ಭದಲ್ಲಿ ಅವರ ಅಭಿವ್ಯಕ್ತಿ ಸಾಧ್ಯವಾದುದು ಚಾರಿತ್ರಿಕವಾಗಿ ಅತ್ಯಂತ ಮಹತ್ವಪೂರ್ಣವಾಗಿದೆ. ನವ್ಯಸಾಹಿತ್ಯ ಚಳುವಳಿಯ ಸಂದರ್ಭದಲ್ಲಿದ್ದ ಗ್ರಾಮೀಣ ಪ್ರತಿಭೆಗಳು ನವ್ಯದ ತಾತ್ವಿಕತೆಯನ್ನು ಗ್ರಹಿಸಲಾಗದೇ ಆತಂಕದಲ್ಲಿದ್ದರು. ನವ್ಯ ರೀತಿಯ ಕಾವ್ಯ, ಕತೆ ಬರೆಯಬೇಕೆಂಬ ಘೋಷಣೆಗಳು ಅರವತ್ತರ ದಶಕದಲ್ಲಿತ್ತು. ಎಪ್ಪತ್ತರ ದಶಕದ ಹೊತ್ತಿಗೆ ನವ್ಯಪಂಥ ಸಾಹಿತ್ಯ ಸವೆದು ಹೊಸ ಅಭಿವ್ಯಕ್ತಿಗೆ ದಾರಿಯಾಯಿತು. ಇದು ಗ್ರಾಮೀಣ ಪ್ರತಿಭೆಗಳಿಗೆ ನೆರವಾಯಿತು. ಶೋಷಿತ ವರ್ಗವು ತನ್ನ ಅಭಿವ್ಯಕ್ತಿಯನ್ನು ಆರಂಭಿಸಿದ ಕಾಲಘಟ್ಟದಲ್ಲಿ ಗೀತಾನಾಗಭೂಷಣ ಅವರು ಶೋಷಿತ ಮಹಿಳೆಯರನ್ನು ತಮ್ಮ ಕತೆಗಳಲ್ಲಿ ಅನಾವರಣಗೊಳಿಸುವ ನಿರಂತರ ಹುಡುಕಾಟವನ್ನು ನಡೆಸಿದ್ದಾರೆ.

ಗೀತಾ ಅವರ ಕಥಾಸಾಹಿತ್ಯದಲ್ಲಿ ಸಾಮಾನ್ಯವಾಗಿ ಯಾವ ಬಗೆಯ ನೆಲೆಯಿಲ್ಲದೇ ತಮ್ಮ ದುಡಿಮೆಯಿಂದಲೇ ನೆಲೆ ಕಂಡುಕೊಂಡ ಸ್ತ್ರೀಯರು ಮತ್ತು ಅವರ ಕುಟುಂಬಗಳು ಕಾಣಿಸುತ್ತವೆ.

ಯಾವ ಸಮುದಾಯವನ್ನು ಗಮನಿಸಿದರೂ ಆ ಸಮಾಜವು ಕುಟುಂಬವೆನ್ನುವ ಮೂಲ ಘಟಕದಿಂದಲೇ ರಚನೆಗೊಂಡಿರುತ್ತದೆ. ಹಳ್ಳಿಯ ಊರ ಹೊರಗಿನ ಹೊಲಗೇರಿ ಕೆಳಗೇರಿಗಳಲ್ಲಿನ ಕುಟುಂಬದ ಸ್ವರೂಪವು ಆದಿಮ ಸಮಾಜದ ಸ್ವರೂಪದಂತಿದೆ. ಅಕ್ಷರಜಗತ್ತಿಗೆ ತೆರೆದುಕೊಳ್ಳುವ ಈ ಸ್ಥಿತ್ಯಂತರದ ಕಾಲಘಟ್ಟದ ಸಂದರ್ಭದಲ್ಲಿಯೂ ಅದು ಹೆಚ್ಚು ಬದಲಾವಣೆಗೆ ಒಳಗಾಗಿಲ್ಲ. ಸಾಮಾನ್ಯವಾಗಿ ಇವರ ಕಥೆಗಳಲ್ಲಿ ಮೇಲ್ವರ್ಗ ಹಾಗೂ ಕೆಳವರ್ಗಗಳ ಕುಟುಂಬಗಳನ್ನು ಕಾಣುತ್ತೇವೆ. ಈ ಗ್ರಾಮೀಣ ಸಮುದಾಯದಲ್ಲಿ ಮೇಲ್ಜಾತಿಯ ಭೂಮಾಲೀಕ ಕುಟುಂಬಗಳು

ಹಾಗೂ ಕೆಳಜಾತಿಯ ಹೊಲಗೇರಿಯ ಕುಟುಂಬಗಳು ಪರಸ್ಪರ ಅಧಿಕಾರ, ಅಧೀನ ಸ್ಥಿತಿಯಲ್ಲಿ ಬದುಕನ್ನು ಸಾಗಿಸುತ್ತಾ ಪರಸ್ಪರ ಕೊಡು-ಕೊಳ್ಳುವಿಕೆಯ ಮೂಲಕ ಬದುಕನ್ನು ಸಾಗಿಸುತ್ತಿದ್ದಾರೆ. ಕೆಳಗೇರಿಯ ಹುಲಿಗ್ಯಾ(ಹುಲಿಗ್ಯಾ), ಮಾನಿಂಗ(ಮಾನಪಮಾನ ನಿಮ್ಮದಯ್ಯಾ), ಶಾಣಪ್ಪ(ಭೂಮಿ+ಬೀಜ) ಬಡಕುಟುಂಬಗಳು ಅನುರೂಪವಾದ ದಾಂಪತ್ಯವನ್ನು ನಡೆಸುತ್ತಿದ್ದರೂ ಅಲ್ಲಿನ ಭೂಮಾಲೀಕನ ಸ್ವಾರ್ಥ, ಅಧಿಕಾರದ ನಿಯಂತ್ರಣಕ್ಕೆ ಒಳಗಾಗಿ ಆ ಕುಟುಂಬಗಳು ಛಿದ್ರಗೊಳ್ಳುತ್ತವೆ. ಹೀಗೆ ಹೆಚ್ಚು ದೌರ್ಜನ್ಯಕ್ಕೆ ಒಳಗಾದವರು ಜೀತದಾಳಿನ ಪತ್ನಿಯರು. ಈ ಸ್ತ್ರೀಯರು ಭೂಮಾಲೀಕನ ಲೈಂಗಿಕ ಹಿತಾಸಕ್ತಿಗೆ ಬಲಿಯಾಗಿ ತನ್ನ ಶೀಲವನ್ನು ಕಳೆದುಕೊಂಡ ಅಸಹಾಯಕರು. ಈ ಭೂಮಾಲೀಕರು ತನ್ನ ಭೂಮಿಯಲ್ಲಿ ದುಡಿಯುವ ಜೀತದಾಳುಗಳ ಪತ್ನಿಯರು ಮತ್ತು ಸಂಸಾರವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಅಧಿಕಾರ ಚಲಾಯಿಸುವ ಪಾತ್ರಗಳಾಗಿ ಕುಕ್ಕಣಿರಾಮಪ್ಪ(ಹುಲಿಗ್ಯಾ), ಇಸಕಂಟಪ್ಪ(ಮಾನಪಮಾನ ನಿಮ್ಮದಯ್ಯಾ), ಗುರುಪಾದಪ್ಪ ಗೌಡ(ಭೂಮಿ+ಬೀಜ) ಕಾಣಿಸಿಕೊಳ್ಳುತ್ತಾರೆ. ಈ ಭೂಮಾಲೀಕರು ತಮ್ಮ ಆಳುಗಳ ಸ್ತ್ರೀಯರನ್ನು ಉಪಪತ್ನಿಯರನ್ನಾಗಿ ಹೊಂದಿರುತ್ತಾರೆ. ಈ ಸ್ತ್ರೀಯರನ್ನು ಗುಲಾಮರನ್ನಾಗಿ ಬಳಸಿಕೊಂಡು ಅವರ ದೇಹದ ಮೇಲೆ ತಮ್ಮ ಅಧಿಕಾರವನ್ನು ಚಲಾಯಿಸುತ್ತಾರೆ. ಭೂಮಾಲೀಕನ ಸ್ವಾರ್ಥದಿಂದ ಅನೈತಿಕ ಕಾರ್ಯಗಳಲ್ಲಿ ಅವನಿಗೆ ರಕ್ಷರಾಗಿರುವ ಈ ಜೀತದಾಳುಗಳು ಕಾನೂನಿನ ಪರಿಸ್ಥಿತಿಗೆ ಸಿಕ್ಕಿ ಸೆರೆವಾಸ ಅನುಭವಿಸುವ ಹುಲಿಗ್ಯಾ, ಮಾನಿಂಗ, ಶಾಣಪ್ಪ ಪುರುಷ ಪಾತ್ರಗಳು ಆಕಸ್ಮಿಕ ಸಾವಿನಿಂದ, ಭೂಮಾಲೀಕನ ಅಧಿಕಾರದಿಂದ, ತಮ್ಮ ಅರಿವಿನ ಕೊರತೆಯಿಂದ, ತಮ್ಮ ಪತ್ನಿಯರನ್ನು ಭೂಮಾಲೀಕನಿಗೆ ಒಪ್ಪಿಸುವ ಪರಾವಲಂಬಿಗಳು. ಹೀಗೆ ಇಲ್ಲಿ ಭೂಮಾಲೀಕನ ನೈಜಗುಣ ಶೋಷಣೆಗೆ ಬಲಿಯಾಗುವ ಈ ಸ್ತ್ರೀಯರು ಮುಖ್ಯವಾಗಿ ಲಕ್ಕಿ(ಹುಲಿಗ್ಯಾ), ತಾಯವ್ವ(ಮಾನಪಮಾನ ನಿಮ್ಮದಯ್ಯಾ), ನೀಲವ್ವ(ಭೂಮಿ+ಬೀಜ) ಇತ್ಯಾದಿಯಾಗಿದ್ದಾರೆ.

ಈ ಸ್ತ್ರೀಯರು ಗುಲಾಮತನಕ್ಕೆ ಹೀಗೆ ಒಳಗಾಗಲು ಕಾರಣ ಆ ಕುಟುಂಬದ ಆರ್ಥಿಕ ಅಸಹಾಯಕತೆಯೇ ಆಗಿದೆ. ಅಲ್ಲದೆ ಕೆಳವರ್ಗದ ಕುಟುಂಬದ ಸ್ತ್ರೀಯರು ಲೈಂಗಿಕವಾಗಿ ಅಸುರಕ್ಷಿತರಾಗಿದ್ದಾರೆ. ಹೀಗಾಗಿ ತನಗೆ ಇಷ್ಟವಿರಲಿ ಇಲ್ಲದಿರಲಿ ಅವಳಿಗೆ ಬದುಕು ಮುಖ್ಯವಾಗಿದೆಯೇ ಹೊರತು ದೇಹ ಮುಖ್ಯವಾಗದೆ ಭೂ ಒಡೆಯನ ಕಾಮಾಸಕ್ತಿಗೆ ಬಲಿಯಾಗುತ್ತಾರೆ. ಭೂಮಾಲೀಕನ ಈ ಕಾಮುಕತೆಯಿಂದ ತನ್ನನ್ನು ಸಂರಕ್ಷಿಸಿಕೊಂಡ ವಿಧವೆ ತಾಯವ್ವ ಕೊನೆಗೆ ಸೋಲುತ್ತಾಳೆ. ಇಲ್ಲಿನ ಭೂಮಾಲೀಕರು ಹೆಚ್ಚಾಗಿ ಲೈಂಗಿಕ ಸಂಯಮವಿಲ್ಲದ ವ್ಯಭಿಚಾರಿಗಳು. ತಮ್ಮ ಕಾಮಾಸಕ್ತಿಗಾಗಿ ಬಡ ಕುಟುಂಬದ ಆರ್ಥಿಕ ಹೊರೆಯನ್ನು ಹೊರಲು ಸಿದ್ಧರಾಗುತ್ತಾರೆ ಹೊರತು ಅವರ ಮೇಲಿನ ಅನುಕಂಪದಿಂದಲ್ಲ. ತಾಯವ್ವ ಗಂಡನಿಲ್ಲದ ಮನೆಯಲ್ಲಿ ಕೂಲಿ ಮಾಡಿ ಬದುಕನ್ನು ಸಾಗಿಸುತ್ತಿದ್ದು ತನ್ನ ಮಗನು ಅಕ್ಷರಸ್ಥನಾಗಲು ಗೌಡನ ಉದಾರ ಭಾವನೆಯಿಂದ ಕೃತಜ್ಞಳಾಗಿದ್ದಳು. ಅದರ ಹಿಂದಿನ ಸ್ವಾರ್ಥ ಅರಿಯದ ಮುಗ್ಧಳು. ತಾಯವ್ವನ

ಮಗ ಶಾಂತ ಮೇಲ್ವರ್ಗದ ಭೂಮಾಲೀಕನ ಮಗಳು ನೀಲಾಳನ್ನು ಪ್ರೇಮವಿವಾಹವಾಗಲು ಯತ್ನಿಸಿದಾಗ ಭೂಮಾಲೀಕನು ಸಹಿಸಲಿಲ್ಲ. ಇದರ ಪರಿಣಾಮಾವಾಗಿ ತಾಯವ್ವ ಭೂಮಾಲೀಕನಿಂದ ಅತ್ಯಾಚಾರಕ್ಕೆ ಒಳಗಾಗಿ ಬೆತ್ತಲೆಯಾಗಿ ಅಪಮಾನದಿಂದ ಸಾವಿಗೀಡಾಗುವ ದುರಂತ ಇಲ್ಲಿದೆ.

ಇಲ್ಲಿ ತಾಯವ್ವನ ಮಗ ಶಾಂತ ಅಕ್ಷರ ಕಲಿತು ತನ್ನ ಪ್ರಜ್ಞಾವಸ್ಥೆಯಿಂದ ಮೇಲ್ವರ್ಗದ ಹೆಣ್ಣಿನೊಂದಿಗೆ ವಿವಾಹವಾಗಲು ನಿರ್ಧರಿಸುತ್ತಾನೆ. ತಾಯವ್ವ ಇದನ್ನು ವಿರೋಧಿಸಿದರೂ ಮಗ ಅದನ್ನು ಸಾಧಿಸುತ್ತಾನೆ. ಅಲ್ಲದೆ ತಾಯವ್ವ ಈ ಪರಿಸ್ಥಿತಿಯಿಂದ ಒದಗುವ ಪರಿಣಾಮ ಅರಿತು ಅದರಿಂದ ಪಾರಾಗುವ ಸಲಹೆಯನ್ನು ಕೇಳಿ ನಿರಾಸೆಯಿಂದ ಬಳಲಿದಳು. ಅದೇ ಕೇರಿಯ ಹಿರಿಯರಿಂದ ಅವರ ಕಷ್ಟಕ್ಕೆ ಹೀಗೆ ಪ್ರತಿಕ್ರಿಯಿಸುತ್ತಾನೆ. “ನಿನ್ನ ಮಗ ಭಾದ್ದೂರ ಗಂಡಸಾನ ಬಿಡೇ ತಂಗೀ... ಸಾಲಿ ಕಲ್ತಿದ್ದು ಸಾರ್ಥಕಾಯ್ತು, ಅಲ್ಲ ಆಗಿ ಬಿಡ್ಲಿ ಆ ಮಾತ್‌ಬ್ಯಾರೆ... ಸಾವ್ಕಾರನ ಮಗಳು ನೀಲಮ್ಮ ನಮ್ಮ ಶಾಂತವೀರ ಮದ್ವಿ ಮಾಡ್ಕೋತಿನಿ ಅಂತಂದಾಳಂತಲ್ಲ! ಆಟ್ ಸಾಕು. ಅಲ್ಲ ಇದು ಸಣ್ಣ ಮಾತೇನು? ಯಲ್ಲಾ ಶಿವನಾಟಾ... ಆ ಶಿವ ಪರಮಾತ್ಮನು ಮನಸ ಮಾಡಿದ್ರ ಏನು ಬೇಕಾದ್ರೂ ಆಗ್ತದವ್ವ.. ನೀನು ಧೈರ್ಯ ಕಳ್ಕೋಬ್ಯಾಡ”(ಕ್ಯಾದಿಗೆ ಬನದಾಗ ಕತೆಯಾಗಿ ನಿಂತವರು, ಪು.೮೬) ಎಂದು ಸಂತೈಸುವ ಹಿರಿಯನಲ್ಲಿನ ಈ ಧೋರಣೆ ಹೊಸ ಬದಲಾವಣೆಗಾಗಿ ಹಾತೊರೆಯುವ, ಆ ಮೂಲಕ ಅಸಮಾನತೆಯನ್ನು ಹೋಗಲಾಡಿಸುವ ಹಂಬಲಿಕೆಯುಳ್ಳವರಾಗಿ ಕಾಣುತ್ತಾರೆ. ಹೀಗೆ ತಳವಾರ ಕುಟುಂಬದ ತಾಯವ್ವನ ಮಗನ ನಿರ್ಧಾರದಿಂದ ಇಲ್ಲಿ ತಾಯವ್ವ ಭೂಮಾಲೀಕನಿಂದ ಬೆತ್ತಲೆಸೇವೆಯ ಅಸಹಾಯಕತೆಗೆ ಒಳಗಾಗಿ ದುರಂತದಲ್ಲಿ ಕೊನೆಗೊಳ್ಳುತ್ತಾಳೆ. ಭೂಮಾಲೀಕನ ಕಾಮಾಸಕ್ತಿಗೆ ಒಳಗಾದ ಈ ಸ್ತ್ರೀಯು ಗಂಡನ ಅನುಪಸ್ಥಿತಿಯಲ್ಲಿ ಆರ್ಥಿಕ ಅಸಹಾಯಕತೆಯಿಂದ ನಲುಗುತ್ತಾಳೆ. ಅಲ್ಲದೆ ಅಸುರಕ್ಷಿತ ಹೆಣ್ಣು ಹಸಿವನ್ನು ನೀಗಿಸಲು ಆಶ್ರಯಕ್ಕಾಗಿ ತನ್ನನ್ನು ಅನಿವಾರ್ಯವಾಗಿ ಬಲಿಷ್ಠರಿಗೆ ಒಪ್ಪಿಸಿಕೊಳ್ಳುತ್ತಾಳೆ. ಮುಖ್ಯವಾಗಿ ಲಕ್ಕಿ ನೀಲಮ್ಮ ಅಂತಹ ಸ್ತ್ರೀಪಾತ್ರಗಳಾಗಿವೆ. ಭೂಮಾಲೀಕನ ಈ ನೀಚತನಕ್ಕೆ ಬಲಿಯಾದ ತಮ್ಮ ಸ್ತ್ರೀಯರ ಪರವಾಗಿ ಪ್ರತೀಕಾರ ತೀರಿಸಿಕೊಳ್ಳುವ ಪಾತ್ರವಾಗಿ ಹುಲಿಗ್ಯಾ ಕಂಡುಬರುತ್ತಾನೆ. ಆದರೆ ಈ ಹಿನ್ನೆಲೆಯಲ್ಲಿ ಆ ಊರಿನ ಮುಖಂಡರ ಸಹಾಯ ಯಾಚಿಸಿದಾಗ ಹಿರಿಯರು “ಯೇಲ್ಲಾ ಮಗಾ ಹಿಂಗಂತೀ ಹುಲಿಗ್ಯಾ.. ಈಸುವರ್ಷಗಳ ಮ್ಯಾಲ ನೀ ಹಿಂಗ ಮಾತಾಡಕತ್ತೀದೀ, ನೀ ಆಡಾ ಮಾತುಗೋಳು ನಮ್ಮಂದಿ ಬಾಯಾಗ್ ಬರೋ ಅಂಥಾದದ್ದು ಅಲ್ಲೋ, ಮಗಾ ಯಾರಿಗೆಲೋ ಅನ್ಯಾಯ ಆಗಿರಾದು? ನಾನು, ನನ್ನಪ್ಪ, ನನ್ನ ಮುತ್ಯಾ, ಅವನ ಮುತ್ಯಾಗೊಳ ತೆಲಿಲಿಂದನೂ ಇದು ಹಿಂಗೇ ನಡಕೊಂಡೆ ಬಂದಾದ... ಮಗನೇ... ನಮ್ಮಂಡ್ರಿರೋದೆ ಆ ಹಾದ್ರ ಗಂಡಸರ ಮಗ್ಗಲ ಬೆಚ್ಚಗ ಮಾಡ್ಲಿಕ್ಕ... ನಮ್ಮ ಗಂಡಗೋಳಿರಾದೇ ಅವರ ಮೆಟ್ಟಿನ ತೆಳಗ ದುಡಿಲಕ್ಕ... ತಿಳಿತೇನ್ಲೋ ಡಾರಾ... ಕುಕ್ಕಣಿ ಹಿನಾ ಭಲೋ ಮನಶ್ಯ ಅಂತ ತಿಳಿಕೋ, ನಿನ ಹೆಣ್ತೇಗಿ ಗಿಣೀಗಿ ಇಟ್ಟಾಂಗ

ಇಟ್ಟಾನ, ಆಕಿಗೆ ಹೊಟ್ಟಿಗಿ ಬಟ್ಟೀಗಿ ಕೊಟ್ಟು ಕೂಲಿನಾಲಿಗಿ ಕಳಸರಲಾದ್ದೆ ಬೆಚ್ಚಗ ಮನ್ಯಾಗಿಟ್ಟಾನ, ಅವನಲಿಂದ ಆಕಿಗೆ ಒಂದು ಮಗಾನೂ ಆಗ್ಯಾದ..."(ಕ್ಯಾದಿಗೆ ಬನದಾಗ ಕತೆಯಾಗಿ ನಿಂತವರು, ಪು.೮೬). ಹೀಗೆ ಗುಲಾಮನ ಪತ್ನಿ ಭೂ ಒಡೆಯನಿಗೆ ಸೇರಬೇಕಾದ್ದು. ಅದು ಸಾಂಪ್ರದಾಯಿಕವಾಗಿ ನಡೆದುಕೊಂಡ ಬಂದ ಪದ್ಧತಿಯನ್ನು ಪ್ರಶ್ನಿಸುವ ಹುಲಿಗ್ಯಾನನ್ನು ಕಾನೂನು ವ್ಯವಸ್ಥೆಯೂ ಸಂಪತ್ತಿನ ಕ್ರೋಡೀಕರಣವೂ ವ್ಯಕ್ತಿಯ ಮುಂದೆ ಅಸಹಾಯಕವಾಗುತ್ತದೆ. ಭೂ ಒಡೆಯನಿಗೆ ತನ್ನ ಪತ್ನಿಯಿಂದ ಹುಟ್ಟಿದ ಮಕ್ಕಳಿಗೆ ಅವರನ್ನು ಗುರುತಿಸುವುದು ಮೂಲ ತಂದೆಯಿಂದ ಹೊರತು ಭೂ ಒಡೆಯನ ವಂಶದಿಂದಲ್ಲ. ಹಾಗೆ ಮಾಡುವುದು ಸಹ ಆಸ್ತಿಯ ಉತ್ತರಾಧಿಕಾರವು ಕೆಳವರ್ಗದ ಕುಟುಂಬದವರಿಗೆ ದೊರಕಕೂಡದೆಂದು ಹೀಗೆ ಕೆಳವರ್ಗದ ಕುಟುಂಬದ ತನ್ನದಲ್ಲದ ಮಕ್ಕಳಿಗೂ ವಂಶದಿಂದ ಗುರುತಿಸುವ ಅವರನ್ನು ಸಾಕುವ ಜವಾಬ್ದಾರಿಯಿರುತ್ತದೆ. ಇದು ಅವರಿಗೆ ಹೊರೆಯಾಗುತ್ತದೆ. ಜಮೀನ್ದಾರನಿಂದ ಈ ಕುಟುಂಬಗಳಿಗೆ ಧನಸಹಾಯ ದೊರೆಯುವುದಾದರೂ ಹೆಣ್ಣಿನ ಹೊರೆ ಕೆಳಜಾತಿಯ ಕುಟುಂಬಗಳಿಗೆ ತಗಲುತ್ತದೆ. ಹಾಗೆ ತನ್ನನ್ನು, ತನ್ನ ಪತ್ನಿಯನ್ನು ಆ ಮೂಲಕ ತನ್ನ ಕುಟುಂಬದ ಸಂತೋಷಕ್ಕೆ ಕಾರಣವಾದ ಜಮೀನ್ದಾರನನ್ನು ಅಥವಾ ಕಾಮಾಧಿಕನನ್ನು ಅವನದೇ ಹೋರಿಗಳ ಮೂಲಕ ಸಾವಿಗೀಡಾಗುವಂತೆ ಮಾಡುವ ಹುಲಿಗ್ಯಾ ಪಾತ್ರದಲ್ಲಿ ಪ್ರತಿಭಟನೆಯನ್ನು ಕಾಣುತ್ತೇವೆ. ಆದರೆ ಇದೇ ರೀತಿ ಭೂ ಒಡೆಯನ ಕಾಮಾಸಕ್ತಿಗೆ ಬಲಿಯಾದ ನಿಂಗವ್ವನ ಗಂಡ ಶರಣಪ್ಪ ಭೂ ಒಡೆಯನಾದ ಗುರುಪಾದಪ್ಪ ಗೌಡನ ಹತ್ತಿರ ಅತಿವಿನಯದಿಂದ ಬದುಕುತ್ತಿದ್ದು ಈ ಒಡೆಯನಿಗೆ ಬೇರೆ ಹೆಣ್ಣಿನ ಆಸೆಯಿಲ್ಲದೆ ನಿಂಗವ್ವನ ಮೇಲಿನ ಅತೀವ ಪ್ರೇಮದಿಂದ ಅವಳನ್ನು ಬಯಸಿದ ಒಡೆಯನ ಈ ನಿರ್ಧಾರದದಿಂದ ಕಂಗಾಲಾದ. ನಿಂಗವ್ವ ಮತ್ತು ಅವನ ಸಂಸಾರ ಆರ್ಥಿಕ ಅಸಹಾಯಕತೆಯಿಂದ ಶಾಣಪ್ಪ ತನ್ನ ಪತ್ನಿಯನ್ನು ಒಡೆಯನಿಗೆ ಒಪ್ಪಿಸುವ ಅನಿವಾರ್ಯ ಒದಗಿತು. ಆದರೆ ನಂತರದ ದಿನಗಳಲ್ಲಿ ಶಾಣಪ್ಪ ಪತ್ನಿಯನ್ನು ದೈಹಿಕ ಸಂಪರ್ಕದಿಂದ ದೂರವಿಟ್ಟು ಒಡೆಯನಿಗೆ ತನ್ನ ಔದಾರ್ಯವನ್ನು ತೋರಿಸುತ್ತಾನೆ. ಒಡೆಯನಿಗೆ ಹುಟ್ಟಿದ ಮಗಳಿಗೆ ತನ್ನ ವಂಶದ ಹೆಸರನ್ನು ನೀಡುವ ಮೂಲಕ ತನ್ನ ಮಕ್ಕಳೊಂದಿಗೆ ಒಡೆಯನ ಮಕ್ಕಳನ್ನು ಅತ್ಯಂತ ಕಾಳಜಿಯಿಂದ ಸಾಕುವ ಜವಾಬ್ದಾರಿಯನ್ನು ನಿಭಾಯಿಸುತ್ತಾನೆ. ಇಲ್ಲಿ ಶಾಣಪ್ಪನು ಅನಕ್ಷರಸ್ಥನಾಗಿದ್ದ ತಿಳುವಳಿಕೆಯಿಲ್ಲದೆ ತನ್ನ ಪತ್ನಿಯನ್ನು ಒಡೆಯನಿಗೆ ಒಪ್ಪಿಸುವುದಲ್ಲದೆ ತನ್ನ ಸಂಸಾರ ಸುಖವನ್ನು ತ್ಯಾಗ ಮಾಡುವುದರ ಮೂಲಕ ಉದಾರ ಮನೋಭಾವವನ್ನು ಹೊಂದುತ್ತಾನೆ. ಹೀಗೆ ಗುಲಾಮ ಸ್ತ್ರೀಯರನ್ನು ತನ್ನ ಕಾಮಾಸಕ್ತಿಗೆ ಬಳಸಿಕೊಳ್ಳುವ ಒಡೆಯನ ಸ್ವಂತ ಮಡದಿಯಾದ ಬಸಮ್ಮ ತನ್ನ ಸಿಟ್ಟನ್ನು ಆ ಮನೆಯ ಆಳು ಶಾಣ್ಯನಿಗೆ ಪರೋಕ್ಷವಾಗಿ "ಈಗೀಗ ಈ ಕಮಜಾತಿ ಮಾದರ ಚೋದೇರೆಲ್ಲಾ ಗೌಡ್ತೆವಾಗಲಿಕ್ಕೆ ಹೊಂಟಾರ ನೋಡೆ ಸಾರವ್ವಾ.. ಹಡಬಿಟ್ಟಿ, ಹಾದರಗಿತ್ತೇರಿಗೆ ಬುದ್ದಿಯಿಲ್ಲಂದ್ರ ಅವರ ಗಂಡದೇವನೂ ಭಾಡಾ

ತಿಲ್ಲಾಕ ಬಿದ್ದಾವ ನಾಯಿಗೋಳು, ತಾವು ತಾಳಿ ಕಟ್ಟಿದ ಹೆಂಡ್ರಿಗಿ ಊರ ಗೌಡನ ಟೊಂಕದ ಕೆಳಗೆ ಅಡ್ಡಹಾಕಿ ರೊಕ್ಕಾ ರುಪ್ಯೆ ತಿಂತಾವ ನನ ಹಾಟ್ಯಾಗೋಳು"(ಕ್ಯಾದಿಗೆ ಬನದಾಗ ಕತೆಯಾಗಿ ನಿಂತವರು, ಪು.೨೭೩) ಎಂದು ಆಳುಮಗನಿಗೆ ಹೇಳುವ ಮೂಲಕ ತನ್ನ ಹೊಟ್ಟೆಯ ಸಂಕಟವನ್ನು ಕಡಿಮೆಮಾಡಿಕೊಳ್ಳುವ ಅವರು ಗೌಡನ ಪರಾವಲಂಬಿಗಳು. ಗಂಡನ ಈ ವ್ಯಭಿಚಾರವನ್ನು ಪ್ರಶ್ನಿಸುವ ಹಕ್ಕು, ಧೈರ್ಯ ಆ ಒಡೆಯನ ಪತ್ನಿಯರಿಗೂ ಇಲ್ಲ, ಅಳುಮಗನಿಗೂ ಇಲ್ಲ. ಹೀಗೆ ಇಲ್ಲಿ ಭೂಸಂಪತ್ತನ್ನು ಕ್ರೋಡೀಕರಿಸಿಕೊಂಡ ಒಡೆಯನ ಮೂಲಕ ತನ್ನ ಅಧಿಕಾರದಿಂದ ಏಕಕಾಲಕ್ಕೆ ತನ್ನ ಕುಟುಂಬ ಹಾಗೂ ಜೀತದಾಳನ ಕುಟುಂಬವನ್ನು ನಿಯಂತ್ರಿಸುವ ಹಕ್ಕನ್ನು ಹೊಂದಿದ್ದಾನೆ. ಕೆಳಗೇರಿಯ ಕುಟುಂಬದಲ್ಲಿನ ಸ್ತ್ರೀ-ಪುರುಷರು ಆರ್ಥಿಕವಾಗಿ ಅವಲಂಬಿಯಾಗಿರುವುದಿಲ್ಲ. ಒಂದಲ್ಲ ಒಂದು ದುಡಿಮೆಯನ್ನು ಸ್ತ್ರೀಯರೂ ಪುರುಷರಂತೆ ಮಾಡಿ ಆರ್ಥಿಕವಾಗಿ ತಕ್ಕ ಮಟ್ಟಿಗಿರುತ್ತಾರೆ. ಹೆಂಡ, ಬೀಡಿ, ಕುಡಿಯುವುದರಲ್ಲಿ ಸ್ತ್ರೀ ಪುರುಷರಿಗೆ ಯಾವುದೇ ವ್ಯತ್ಯಾಸವಿರುವುದಿಲ್ಲ. ಇಲ್ಲಿ ಸ್ತ್ರೀಯರು ಹೆಚ್ಚು ಸ್ವತಂತ್ರ ಬದುಕನ್ನು ನಡೆಸುತ್ತಾರೆ. ಇವರು ಆರ್ಥಿಕವಾಗಿ ಸ್ವಾವಲಂಬಿಗಳು, ಈ ಸ್ವಾವಲಂಬಿಗಳ ಬದುಕು ಛಿದ್ರಗೊಳ್ಳುವುದು ಭೂಒಡೆಯನ ಸ್ವಾರ್ಥದಿಂದ. ಹೀಗೆ ಮೇಲ್ವರ್ಗದ ಪುರುಷರಿಂದ ಕೆಳವರ್ಗದ ಕುಟುಂಬಗಳು ಹಾಗೂ ಆ ಕುಟುಂಬಗಳ ಹೆಣ್ಣಿನ ಶೋಷಣೆಯನ್ನು ಈ ಕಥೆಗಳಲ್ಲಿ ನಿರೂಪಿಸಿದ್ದಾರೆ.

ಇವರ ಕಥೆಗಳಲ್ಲಿ ಛಿದ್ರಗೊಂಡ ಕುಟುಂಬಗಳಿಗಿಂತ ಭಿನ್ನವಾಗಿ ಸಾಮರಸ್ಯದಿಂದಿರುವ ಯಲ್ಲಪ್ಪನ ಸಂಸಾರ ಮತ್ತು ಮಾನಿಂಗಿ ಸಂಸಾರವಿದೆ. ಇವರು ವಾಸಿಸುವ ಗ್ರಾಮೀಣ ಸಮುದಾಯಗಳು ಪಂಚರ, ಗೌಡರ ನಿಯಂತ್ರಣದಲ್ಲಿದ್ದು, ಅಲ್ಲಿನ ರೀತಿನೀತಿಗಳು ಕಾಯಿದೆಗಳಿಗೆ ಅನುಗುಣವಾಗಿ ಅಲ್ಲಿನ ಜನರು ಬದುಕು ನಡೆಸುತ್ತಿದ್ದರು. ಆ ಮೂಲಕ ಅವರ ಮನೆತನಗಳು ತಮ್ಮ ಅಸ್ತಿತ್ವವನ್ನು ಪಡೆದುಕೊಂಡಿವೆ. ಸ್ತ್ರೀ-ಪುರುಷರ ನಡುವಿನ ವಿವಾಹಗಳು ಕೆಲವೊಮ್ಮೆ ಆ ಊರಿನ ಮುಖಂಡತ್ವದಲ್ಲಿ ನಡೆಯುತ್ತದೆ. ಅದು ಅಲ್ಲಿನ ಗಂಡು-ಹೆಣ್ಣಿಗೆ ಒಪ್ಪಿಗೆಯಿರಲಿ ಬಿಡಲಿ ಅದು ಮುಖ್ಯವಾಗಿರದೆ ವ್ಯಕ್ತಿ ವ್ಯಕ್ತಿಗಳಿಗೆ ಆಸರೆಯಾಗಿ ಬದುಕು ನಡೆಸುವುದು ಮುಖ್ಯವಾಗಿದೆ. ಹೀಗೆ ಇಲ್ಲಿ ಸ್ಥಳೀಯ ಕಾನೂನಿಗೆ ಒಳಪಟ್ಟು ವಿವಾಹವಾಗುವ ಸಿಂಪವ್ವ, ಮಾನಿಂಗಿ ಇದ್ದಾರೆ. ಸಿಂಪವ್ವನ ಗಂಡನ ಸಾವಿಗೆ ಕಾರಣವಾದ ಯಲ್ಲಪ್ಪ, ಆ ಅಪರಾಧಕ್ಕೆ ಶಿಕ್ಷೆಯಾಗಿ ವಿಧವೆ ಸಿಂಪವ್ವನನ್ನು ವಿವಾಹವಾಗಿ ಆ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ. ಇದಕ್ಕೆ ವಿಧಿಯಿಲ್ಲದೆ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಪತಿ-ಪತ್ನಿ ಜಗತ್ತಿಗೆ ಮಾತ್ರ ತೋರಿಕೆಯ ಸಂಸಾರವಾಗುತ್ತದೆಯೇ ವಿನಹ ಇಲ್ಲಿ ಯಲ್ಲಪ್ಪ ಸಿಂಪವ್ವನಿಂದ ಯಾವುದೇ ದಾಂಪತ್ಯ ಸುಖವನ್ನು ಅನುಭವಿಸಿರಲಿಲ್ಲ. ಇದಕ್ಕೆ ಕಾರಣ ಸಿಂಪಿಯ ತಿರಸ್ಕಾರ. ಈ ದೈಹಿಕ ಸಂಬಂಧದ ಹೊರತಾಗಿಯೂ ಉಳಿದೆಲ್ಲ ಕರ್ತವ್ಯಗಳನ್ನು ಯಲ್ಲಪ್ಪ ನಿಭಾಯಿಸುತ್ತಾನೆ.

ಯಲ್ಲಪ್ಪ ಸಾವಿಗೀಡಾದ ವ್ಯಕ್ತಿಯ ತಾಯಿಯನ್ನು ತನ್ನ ಸ್ವಂತ ತಾಯಿಗಿಂತ ಹೆಚ್ಚು ಆದರದಿಂದ ಅವಳ ಸೇವೆಯನ್ನು ಮಾಡುತ್ತಾನೆ. ಸಿಂಪವ್ವ ಅದೇ ಹಳ್ಳಿಯ ರಾಜರಾಮನ ಜೊತೆ ದೈಹಿಕ ಸಂಬಂಧ ಹೊಂದಿದ್ದು ಅದು ಅವಳ ಪ್ರೇಮದಿಂದ ಕೂಡಿದ ಸಂಬಂಧವಾಗಿರುತ್ತದೆ. ಅಲ್ಲದೆ ಕಥೆಯ ವಿವರಗಳೆಲ್ಲ ಅವಳ ಈ ಪ್ರೇಮ ನೈತಿಕವಾದದ್ದು ಎಂಬ ಅಭಿಪ್ರಾಯವಿದೆ. ಆದರೆ ಅವಳೊಂದಿಗೆ ದೇಹ ಸಂಬಂಧ ಬೆಳೆಸಿದ ವ್ಯಕ್ತಿಯಲ್ಲಿ ಈ ಪಾವಿತ್ರ್ಯತೆಯಿರದೆ ಪಲಾಯನವಾದಿಯಾಗಿ ದೇಶಾಂತರ ಹೋಗುವಾಗ ಈ ಸಂದರ್ಭದಲ್ಲಿಯೂ ಯಲ್ಲಪ್ಪ ಸಿಂಪಿಯನ್ನು ಸಂತೈಸುವುದರ ಮೂಲಕ ಅವಳ ನೋವುಗಳಿಗೆ ಸ್ಪಂದಿಸಿ ಓಲೈಸುತ್ತಾನೆ. ಇಲ್ಲಿ ಆ ಕುಟುಂಬ ಉಳಿಯಲು ಯಲ್ಲಪ್ಪನ ಔದಾರ್ಯತೆಯೇ ಕಾರಣವಾಗಿದೆ. ಇಲ್ಲಿ ಯಲ್ಲಪ್ಪ-ಸಿಂಪಿಯ ನಡುವೆ ದೈಹಿಕ ಸಂಬಂಧವಿಲ್ಲವೆಂದೂ ಪರಸ್ಪರ ಸಹಕಾರದಿಂದ ಪತ್ನಿ ಹೆಣ್ಣಿಗೆ ಅವಳು ಗೃಹಿಣಿಯಾಗಿ ಆ ಮನೆಯ ಎಲ್ಲಾ ಸದಸ್ಯರಿಗೂ ಆಹಾರ ಸಿದ್ಧಪಡಿಸುವ, ಆರ್ಥಿಕವಾಗಿ ನೆರವಾಗುವ ಮೂಲಕ ತನ್ನ ಜವಾಬ್ದಾರಿಗಳನ್ನು ನಿಭಾಯಿಸುತ್ತಾಳೆ. ಮರ್ಯಾತಾಯಿ ತನ್ನ ಸ್ವಂತ ಮಗನಿಗೆ ತನ್ನ ಬಗ್ಗೆಯಿರುವ ಕಕ್ಕುಲಾತಿಯನ್ನು ಯಾವುದೇ ರಕ್ತಸಂಬಂಧವಿಲ್ಲದೆ ತನ್ನ ಸೇವೆಯನ್ನು ಮಾಡುವ ಯಲ್ಲಪ್ಪನ ಸ್ವಭಾವದಲ್ಲಿ ಉನ್ನತವಾದ ಮಾನವೀಯ ಮೌಲ್ಯವಿದೆ. ಇಲ್ಲಿ ಲೇಖಕಿ ಸಾಂಸಾರಿಕ ಬಂಧುತ್ವವು ನಿಂತಿರುವುದು ಮಾನವೀಯ ಸಂಬಂಧಗಳಿಂದ ಎಂಬುದನ್ನು ಕಥೆಯ ಮೂಲಕ ವಿವರಿಸುತ್ತಾರೆ. ಇದಕ್ಕೆ ಹೊಂದಿಕೊಂಡ ಮತ್ತೊಂದು ಸಂಸಾರ ಮಾನಿಂಗಿಯದು. ಮಾನಿಂಗಿ ಮತ್ತು ಕತ್ತಲ(ಕುರುಡು) ಅನಾಥರಾಗಿ ಬದುಕುತ್ತಿದ್ದು ಪರಸ್ಪರ ಒಬ್ಬರಿಗೊಬ್ಬರು ಆಸರೆಯಾಗಿ ಓಡಾಡಲೆಂದು ಆ ಊರಿನ ಕೆಳಗೇರಿಯ ಇಚ್ಛೆಯಂತೆ ವಿವಾಹವು ಏರ್ಪಡುತ್ತದೆ. ಇಲ್ಲಿ ಗಂಡು-ಹೆಣ್ಣಿನ ವಿವಾಹವು ಮಾನಸಿಕವಾದ ಅಥವಾ ಪ್ರೇಮಬಂಧನದಿಂದ ರೂಪುಗೊಂಡಿದ್ದರೆ ಅವರು ಪರಸ್ಪರ ಆಸರೆಯಿಂದ ಬದುಕನ್ನು ನಿಭಾಯಿಸುವುದು ಅಸಾಧ್ಯವಾಗಿದೆ ಎಂಬ ವಿವರಣೆಯನ್ನು ನೀಡುತ್ತದೆ. ಮಾನಿಂಗಿ ಕತ್ತಲ ಪರಸ್ಪರ ಯಾರು ಯಾರಿಗೆ ಹೊರೆಯಾಗದೆ ತಮ್ಮ ದುಡಿಮೆಯಿಂದ ಬದುಕನ್ನು ನಡೆಸುತ್ತಾರೆ. ಇಲ್ಲಿನ ಸ್ತ್ರೀ-ಪುರುಷರು ಪರಸ್ಪರ ಅವಲಂಬಿಯಾಗಿಲ್ಲ. ಇವರ ನಡುವೆಯಿರುವುದು ಭಾವನಾತ್ಮಕ ಸಂಬಂಧಗಳು. ಕತ್ತಲ ಕುರುಡನಾದರೂ ತನ್ನ ಹಾಡುಗಾರಿಕೆಯಿಂದ ದುಡಿಮೆ ಮಾಡಿದರೆ ಮಾನಿಂಗಿ ಆಹಾರ ಭಾಗಗಳನ್ನು ಸಿದ್ಧಪಡಿಸಿ ಅವನ್ನು ಮಾರಿ ಆ ಮೂಲಕ ಸ್ವಾವಲಂಬಿಯಾಗಿ ಬದುಕನ್ನು ನಡೆಸುತ್ತಾಳೆ. ಹೀಗೆ ಮಾನಿಂಗಿ ಕುರುಡನಾದ ಗಂಡನಲ್ಲಿ ಯಾವುದೇ ಕೊರತೆಯನ್ನು ಕಾಣದವಳು. ಮತ್ತೊಬ್ಬ ಪುರುಷನ ಪ್ರವೇಶವಾದ ಕೂಡಲೇ ಕತ್ತಲಿನ ಕೊರತೆಯನ್ನು ಗುರುತಿಸತೊಡಗುತ್ತಾಳೆ. ಕೂಡಿ ಬದುಕಲು ಅಸಾಧ್ಯವಾದಾಗ ಮಾನಿಂಗಿ ಗಂಡನಿಂದ ಬಿಡುಗಡೆ ಬಯಸಿ ಪರಪುರುಷನೊಂದಿಗೆ ತನ್ನ ಬದುಕನ್ನು ನಡೆಸಲು ಸಿದ್ಧವಾಗುತ್ತಾಳೆ. ಇದಕ್ಕೆ ಪ್ರತಿಯಾಗಿ ಕತ್ತಲ ತನ್ನ ಕುರುಡುತನದ ಅಸಹಾಯಕತೆಯಿಂದ, ತನ್ನಲ್ಲಿನ ಕೊರತೆಯಿಂದ

ಪತ್ನಿಯ ಈ ವರ್ತನೆಯನ್ನು ಮನ್ನಿಸುತ್ತಾನೆ. ಹೀಗೆ ಕುರುಡ ಗಂಡನಿಂದ ಬಿಡುಗಡೆಗೊಳ್ಳಲು ತೀರ್ಮಾನಿಸಿದ ಮಾನಿಂಗಿ ಮನಃಪರಿವರ್ತನೆ ಹೊಂದಿ ಕತ್ತಲನಿಗೆ ಆಸರೆಯಾಗಿರಲು ಅವನೊಂದಿಗೆ ಸಂಸಾರವನ್ನು ನಡೆಸಲು ತೀರ್ಮಾನಿಸುತ್ತಾಳೆ. ಇಲ್ಲಿ ಮಾನಿಂಗಿ ಪ್ರೇಮಸಂಬಂಧ ಒಬ್ಬರಿಗೊಬ್ಬರು ಪರಸ್ಪರ ಹೊಂದಿಕೊಂಡು ಬದುಕುವ ಆಸರೆಯಾಗಿ ಬದುಕುವುದು ಮುಖ್ಯವಾಗಿ ಕಂಡುಬರುತ್ತದೆ. ಇದಕ್ಕೆ ಪೂರಕವಾದ ಮತ್ತೊಂದು ಕುಟುಂಬ "ವಾಸ್ತವ" ಕತೆಯಲ್ಲಿನ ಹೊನ್ನಪ್ಪ ಮತ್ತು ಶಾಣವ್ವನ ಸಂಸಾರ. ಈ ಮನೆತನಗಳು ಹಳ್ಳಿಯಿಂದ ನಗರಕ್ಕೆ ವಲಸೆ ಬಂದು ಬದುಕನ್ನು ಕಂಡುಕೊಳ್ಳುತ್ತಿದ್ದವು. ಈ ಸಂಸಾರಗಳು ನಗರದ ಅಂದಂದಿನ ಪರಿಸ್ಥಿತಿಗಳಿಗೆ ಮತ್ತು ಸಮಸ್ಯೆಗಳಿಗೆ ಎದುರಾಗಿ ಜೀವನವನ್ನು ನಡೆಸುವ ನಿರ್ಗತಿಕ ಕುಟುಂಬಗಳಾಗಿವೆ. ಇಲ್ಲಿ ಶಾಣವ್ವ ಮೇಲ್ವರ್ಗದ ಮನೆಯಲ್ಲಿ ದಿನಗೂಲಿ ಕೆಲಸ ಮಾಡಿ ತನ್ನ ಕುಟುಂಬವನ್ನು ಪೂರೈಸುತ್ತಾಳೆ. ಇದಕ್ಕೆ ಪೂರಕವಾಗಿ ಹೊನ್ನಪ್ಪನ ಸೈಕಲ್‌ರಿಕ್ಷಾ ಉತ್ಪಾದನಾ ಸಾಧನವಾಗಿ ಆ ಕುಟುಂಬದ ಆರ್ಥಿಕತೆಗೆ ನೆರವಾಗುತ್ತದೆ. ಆದರೆ ಬದಲಾದ ಸಮಾಜದ ಪರಿಸ್ಥಿತಿಗೆ ಹೊಂದಿಕೊಳ್ಳಲಾಗದ ಆರ್ಥಿಕ ದುಃಸ್ಥಿತಿ ಈ ಕುಟುಂಬಕ್ಕೆ ಒದಗಿದ್ದು ಬದಲಾದ ಆಟೋರಿಕ್ಷಾ ಸಾಧನದಿಂದ. ಹೀಗೆ ಬದಲಾದ ಉತ್ಪಾದನಾ ಸಾಧನಗಳಿಂದ ಅದಕ್ಕೆ ಹೊಂದಿಕೊಳ್ಳಲಾರದೆ ಹೆಚ್ಚು ಸಮಸ್ಯೆಯನ್ನು ಅನುಭವಿಸುವವರು ಈ ಕೆಳಗೇರಿ ಬಡ ಕುಟುಂಬಗಳಾಗಿವೆ. ಈ ಆರ್ಥಿಕ ದುಃಸ್ಥಿತಿಯಿಂದ ನೊಂದ ಶಾಣಪ್ಪನಿಗೆ ತರಕಾರಿ ಮಾರುವ ಉತ್ಪಾದನೆಯನ್ನು ಪರ್ಯಾಯವಾಗಿ ಸೂಚಿಸುವ, ಆ ಸಮಸ್ಯೆಯಿಂದ ಪರಿಹಾರದ ದಾರಿ ತೋರಿಸುವ ಪ್ರಯತ್ನ ಶಾಣವ್ವನಲ್ಲಿದೆ. ಅಲ್ಲದೆ ಗಂಡನ ದುಡಿಮೆಯಿಲ್ಲದಾಗ ಆ ಕುಟುಂಬದ ಪತ್ನಿ, ತಾಯಿ ತಮ್ಮ ಪಶುಪಾಲನೆ ವೃತ್ತಿಯಿಂದ ನೆರವಾಗುವ ಮೂಲಕ ಆ ಕುಟುಂಬದ ಪರಿಸ್ಥಿತಿಗೆ ಆರ್ಥಿಕ ಸಹಕಾರ ನೀಡುವುದನ್ನು ಕಾಣಬಹುದು. ಕೆಳಗೇರಿ ಕುಟುಂಬಗಳಲ್ಲಿ ಮೇಲ್ವರ್ಗದ ಕುಟುಂಬಗಳಂತೆ ಲಿಂಗತಾರತಮ್ಯವಿಲ್ಲ. ಮಡಿಮೈಲಿಗೆಯನ್ನು ಕಾಣಲು ಸಾಧ್ಯವಿಲ್ಲ. ಇಲ್ಲಿ ಸ್ತ್ರೀ–ಪುರುಷರು ಸಮಾನವಾಗಿದ್ದು ದಿನನಿತ್ಯ ನಿರಂತರ ದುಡಿಮೆಯಲ್ಲಿ ತೊಡಗುತ್ತಾರೆ. ವಾರದ ಒಂದು ದಿನ ಆ ಕುಟುಂಬ ಎಲ್ಲ ಸದಸ್ಯರು ಒಟ್ಟಾಗಿ ಸೇರಿ ಚೆನ್ನಾಗಿ ಕುಡಿದು ತಿನ್ನುವುದರ ಮೂಲಕ ಪರಸ್ಪರ ಪ್ರೀತಿ, ವಾತ್ಸಲ್ಯ, ಸಾಮರಸ್ಯ ಇರುವುದನ್ನು ಇವರ ಬದುಕಿನಲ್ಲಿ ಕಾಣಬಹುದು.

ಕಥೆಯಲ್ಲಿ ಬರುವ ಸ್ತ್ರೀಯರು ತಾಯ್ತನದ ಸಮಸ್ಯೆಯಿಂದ ಆ ಕುಟುಂಬದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲಾರದೆ ನಲುಗುವ, ಇಲ್ಲವೇ ತನ್ನ ಫಲವಂತಿಕೆಯಿಂದ ಹೆಚ್ಚು ಮಕ್ಕಳನ್ನು ಪಡೆದು ಅದನ್ನು ಸಲಹಲಾರದೆ ಆರ್ಥಿಕ ಮುಗ್ಗಟ್ಟಿನಿಂದ ತೊಳಲಾಡುವ, ಮುಖ್ಯವಾಗಿ ಮೇಲ್ವರ್ಗ ಹಾಗೂ ಕೆಳವರ್ಗದ ಕುಟುಂಬಗಳಲ್ಲಿ ಕಂಡುಬರುತ್ತವೆ. ಮುಖ್ಯವಾಗಿ ರೂಪ್ಲಿಬಾಯಿ(ಕಳ್ಳುಬಳ್ಳಿಯ ಕುಡಿಗಳು), ನೀಲುಗಂಗವ್ವ(ಐಬು), ಹಣಮವ್ವ(ಪಟ್ಟ ಪಾಡೆಲ್ಲ ಹುಟ್ಟು ಹಾಡಾಗಿ), ಪಾರ್ವತಿ(ಬಂಜೆಂಬ ಶಬದ ಹೊರಲಾರೆ) ಇತ್ಯಾದಿ ಸ್ತ್ರೀಯರು.

ಹೊಲಗೇರಿಯ ಸಂಸಾರದಲ್ಲಿನ ಸ್ತ್ರೀಯರು ದೈಹಿಕವಾಗಿ ಸದೃಢರಿದ್ದು ಫಲವಂತಿಕೆಯಿಂದ ಆ ಮನೆಯ ಯಜಮಾನನ ಕಾಮಾಸಕ್ತಿಯಿಂದ ಬಿಡಿಸಿಕೊಳ್ಳಲಾರದೆ ಮಕ್ಕಳ ಸೌಖ್ಯಕ್ಕಾಗಿ ಆರ್ಥಿಕ ಹಿಂಬಿಳುವಿಕೆಯಿಂದ ಅತ್ಯಂತ ಕಷ್ಟಪಟ್ಟು ಅವುಗಳನ್ನು ಸಾಕುವ ಜವಾಬ್ದಾರಿಯನ್ನು ಅಲ್ಲಿಯ ತಾಯಂದಿರು ನಿರ್ವಹಿಸುತ್ತವೆಯೇ ಹೊರತು ಅಲ್ಲಿನ ತಂದೆಯರಿಗೆ ಆ ಜವಾಬ್ದಾರಿಯಿರುವುದಿಲ್ಲ. ಬದಲಿಗೆ ಹೆಣ್ಣನ್ನು ದೈಹಿಕವಾಗಿ ಬಳಸಿ ಅವರ ಫಲವಂತಿಕೆಗೆ ಕಾರಣಕರ್ತರಾಗುತ್ತಾರೆ. ಹೆಚ್ಚೆಂದರೆ ಅದರಲ್ಲೂ ಹೆಣ್ಣುಮಕ್ಕಳನ್ನು ಹೊರೆಯೆಂದು ಭಾವಿಸಿ ಅವುಗಳನ್ನು ಹಣಕ್ಕಾಗಿ ದತ್ತು ಕೊಡಲು ನಿರ್ಧರಿಸುತ್ತಾರೆ. ಇಲ್ಲಿ ಸ್ತ್ರೀಗೆ ಆ ಮಕ್ಕಳನ್ನು ಪಡೆಯುವ, ಹುಟ್ಟಿದ ಮಕ್ಕಳನ್ನು ಸಾಕಿ ಸಲಹಿದ ತಾಯಿಗೆ ಆ ಮಕ್ಕಳ ಮೇಲೆ ಯಾವುದೇ ಅಧಿಕಾರವಿಲ್ಲದೆ ಅದನ್ನು ಮಾರುವ ಮೂಲಕ ವ್ಯವಹಾರವಾಗಿ ಬಳಸಿಕೊಂಡಾಗಲೂ ಅದನ್ನು ಪ್ರಶ್ನಿಸುವ ಹಕ್ಕು ಸಹ ಆ ಮಹಿಳೆಗೆ ಇರುವುದಿಲ್ಲ. ಕೇವಲ ತನ್ನ ಮಕ್ಕಳನ್ನು ಕಳೆದುಕೊಂಡು ಕೊರಗುವ ಮಾನಸಿಕ ಅಸ್ವಸ್ಥತೆಗೆ ಒಳಗಾಗುತ್ತಾಳೆ. ಹೀಗೆ ಇಲ್ಲಿ ಇಡೀ ಸಂಸಾರ ಮಹಿಳೆಯ ದುಡಿಮೆಯ ಮೂಲಕ ಚಲನಶೀಲವಾಗಿರುತ್ತದೆ. ಆದರೆ ಅವರಿಗೆ ಯಾವುದೇ ಸ್ಥಾನಮಾನಗಳಿರುವುದಿಲ್ಲ. ಅದು ಸಹಜವೆಂಬಂತೆ ಅದಕ್ಕೆ ಒಪ್ಪಿಕೊಂಡು ಬದುಕುವ ಸ್ತ್ರೀಯರಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಮೇಲ್ವರ್ಗದ ಸ್ತ್ರೀಯರಲ್ಲಿ ತಾಯ್ತನದ ಹಂಬಲವಿದ್ದು ಆ ರಕ್ತವನ್ನು ಹೊಂದಿದ್ದರೂ ಅವರ ಪುರುಷರ ನಿರಾಸಕ್ತಿ ಕಾರಣದಿಂದ ಬಂಜೆಂಬ ಅಪವಾದವನ್ನು ಹೊತ್ತು ಬದುಕುತ್ತಾರೆ. ಆದರೆ ತಮ್ಮಲ್ಲಿ ದೋಷವಿಲ್ಲವೆಂದು ಸ್ವಶಕ್ತಿಯಿಂದ ಅರಿತ ಪಾರ್ವತಿ(ಬಂಜೆಂಬ ಶಬದ ಹೊರಲಾರೆ), ಹಣಮವ್ವ(ಪಟ್ಟಪಾಡೆಲ್ಲ ಹುಟ್ಟು ಹಾಡಾಗಿ), ನೀಲಗಂಗವ್ವ(ಐಬು) ಮಹಿಳೆಯರು ತಮ್ಮ ಮನೆಯ ಆಳುಮಗನ ಮುಖಾಂತರ ಸಂತಾನೋತ್ಪತ್ತಿಯನ್ನು ಪಡೆಯುತ್ತಾರೆ. ಆ ಕುಟುಂಬದ ಸದಸ್ಯರಿಗೆ ಮರೆಮಾಚಿ ಈ ಸಂಬಂಧವನ್ನು ಬಳಸಿದಾಗ ಹೆಚ್ಚು ಮಾನಸಿಕ ಅಸ್ವಸ್ಥರಾಗಿ ನರಳುತ್ತಾರೆ.

ಆದರೆ ಆ ಮನೆಯ ಪುರುಷನಿಗೆ ಸಂತಾನೋತ್ಪತ್ತಿ ಮಾಡುವ ಶಕ್ತಿಯಿದೆ. ಹೊಲಗೇರಿ ಹೆಣ್ಣುಗಳ ಸಹವಾಸ ಮಾಡುವುದು ಸಹ ತನ್ನ ಪುರುಷತ್ವವನ್ನು ಮುಚ್ಚಿಕೊಳ್ಳುವ ಕಾರಣಕ್ಕಾಗಿಯೇ ಆಗಿದೆ. ಅಲ್ಲದೆ ಹಣದ ಆಸೆಗಾಗಿ ಮೇಲ್ವರ್ಗದ ಪುರುಷರ ಐಬು ತಿಳಿದಿದ್ದರೂ ಅವರೊಂದಿಗೆ ದೈಹಿಕ ಸಂಬಂಧ ಬೆಳೆಸುವ ಬಡ ಮಹಿಳೆಯರು ಅಸಹಾಯಕರೇ. ಅಲ್ಲಿನ ಮಹಿಳೆಯರಿಗೆ ಬದುಕು ಮುಖ್ಯವಾಗಿರುತ್ತದೆ. ರಕ್ತಸಂಬಂಧಿ ವ್ಯವಸ್ಥೆಯಿಂದ ರೂಪಿತವಾದ ಹಣುಮವ್ವನ ಸಂಸಾರವು ತನ್ನ ತಾಯ್ತನದ ಆಸಕ್ತಿಯಿಂದ ಗಂಡನ ಹಾಗೂ ತವರಿನ ಸಂಬಂಧವನ್ನು ಕಳಚಿಕೊಳ್ಳುವ ಅನಿವಾರ್ಯಕ್ಕೆ ಒಳಗಾಗುತ್ತಾಳೆ. ಅವಳ ಗಂಡ ಮತ್ತೊಂದು ಹೆಣ್ಣನ್ನು ಮದುವೆಯಾಗುತ್ತಾನೆ. ಹೀಗೆ ಪುರುಷರಿಗೆ ಮರುವಿವಾಹವಾಗಲು ಕಾರಣಗಳು ಹಲವಾರು. ತನ್ನ ತಾಯ್ತನದಿಂದ ತನ್ನ ತವರಿನ ಹಾಗೂ ಗಂಡನ ಬಳಗವನ್ನು ಕಳೆದುಕೊಂಡು

ಒಂಟಿಯಾಗಿ ತನ್ನ ಹಾಡುಗಾರಿಕೆಯಿಂದ ಬದುಕನ್ನು ನಡೆಸುತ್ತಾಳೆ. ಆ ಊರಿನ ಮೈನೆರೆದ ಹಾಗೂ ಸೋಬಾನದ ಹಾಡನ್ನು ಹಾಡುವುದರ ಮೂಲಕ ತಾನು ಸ್ವಾವಲಂಬಿಯಾಗಿ ಬದುಕುತ್ತಾಳೆ. ಆದರೆ ತಾಯ್ತನದ ಅಸಹಾಯಕತೆಗೆ ದೈವದ ಮೇಲಿನ ಸಿಟ್ಟಿಗೆ ನವದಂಪತಿಗಳನ್ನು ತನ್ನ ದೀರ್ಘಹಾಡುಗಾರಿಕೆಯಿಂದ ಅವರನ್ನು ಹೆಚ್ಚು ಕಾಯಿಸುವ ಮೂಲಕ ತನ್ನ ಪ್ರತಿಭೆಯನ್ನು ತೋರಿಸುವ ಸ್ತ್ರೀಪಾತ್ರವಾಗಿ ಕಂಡು ಬರುತ್ತಾಳೆ. ಇದಕ್ಕೆ ವಿರುದ್ಧವಾಗಿ ಮೇಲ್ವವರ್ಗದ ಕುಟುಂಬದ ಭೂಮಾಲೀಕ ಅಪ್ಪರಾಯ ತನಗೆ ಪುರುಷತ್ವವಿಲ್ಲದ ಸಂಗತಿ ತಿಳಿದು ಅದನ್ನು ಸಾಬೀತುಪಡಿಸಲು ಹಲವು ಕೆಳಗೇರಿ ಹೆಣ್ಣುಗಳೊಂದಿಗೆ ಸಹವಾಸ ಮಾಡುತ್ತಾನೆ. ಅಪ್ಪರಾಯನ ಮೊದಲ ಪತ್ನಿ ಚಂದವ್ವ ಗಂಡನ ಈ ಸ್ಥಿತಿಯನ್ನು ತಿಳಿದು ಮೈದುನನೊಂದಿಗೆ ದೈಹಿಕ ಸಂಬಂಧವನ್ನು ಬೆಳೆಸುತ್ತಾಳೆ. ಅದನ್ನು ತಿಳಿದ ಗಂಡ ಅವಳ ಸಾವಿಗೆ ಕಾರಣನಾಗುತ್ತಾನೆ. ಹೀಗೆ ತನ್ನ ಕೊರತೆಯನ್ನು ಮುಚ್ಚಿಕೊಳ್ಳಲು ನೀಲಗಂಗವ್ವ ಎಂಬ ಹೆಣ್ಣನ್ನು ಮರುವಿವಾಹವಾಗುವುದರ ಮೂಲಕ ಇಲ್ಲಿ ಬಹುಪತ್ನಿತ್ವದ ಕುಟುಂಬವನ್ನು ಕಾಣುತ್ತೇವೆ. ಇಲ್ಲಿ ಮೇಲ್ವರ್ಗದ ಸ್ತ್ರೀಯರಿಗೆ ದುಡಿಯುವ ಶ್ರಮವಿಲ್ಲ. ಗೃಹಿಣಿಯಾಗಿ ಆ ಮನೆಯ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದು ಅವಳ ಮುಖ್ಯ ಜವಾಬ್ದಾರಿಯಾಗಿದೆ. ಆದರೆ ಹೀಗೆ ದೈಹಿಕವಾಗಿ ಬಳಲದೆ ಮಾನಸಿಕವಾಗಿ ಹೆಚ್ಚು ಬಳಲುತ್ತಾರೆ. ತಮ್ಮ ತಾಯ್ತನದ ಈ ಬಯಕೆಯನ್ನು ಆ ಜಮೀನ್ದಾರ ಕುಟುಂಬದ ಆಳುಗಳಿಂದ ಪೂರೈಸಿಕೊಳ್ಳುತ್ತಾರೆ. ಈ ಸಂಗತಿಯನ್ನು ತಿಳಿದ ಅಪ್ಪರಾಯ ತನ್ನ ಪತ್ನಿಯನ್ನು ಶಿಕ್ಷಿಸದೆ, ಬದಲಾಗಿ ಅಪಾರ ಸಂಪತ್ತನ್ನು ನೀಡಿ ಅವರನ್ನು ಪಲಾಯನವಾದಿಗಳಾಗಿ ಬದುಕಲು ಸಹಕರಿಸುತ್ತಾನೆ. ಈ ಮೂಲಕ ಆ ಅಪ್ಪರಾಯನ ಪಾತ್ರದಲ್ಲಿ ಸುಧಾರಣೆಯನ್ನು ತಂದಿದ್ದಾರೆ. ಅಲ್ಲದೆ ಅಪ್ಪರಾಯ ತನ್ನ ಕುಟುಂಬದ ಆಸ್ತಿಯನ್ನು ನೀಲಗಂಗವ್ವಳ ಮಕ್ಕಳಿಗೆ ವರ್ಗಾಯಿಸುವ ತೀರ್ಮಾನ ಮಾಡುತ್ತಾನೆ. ನೀಲಗಂಗವ್ವನಿಗೆ ಹುಟ್ಟುವ ಮಕ್ಕಳು ಪರಪುರುಷನಿಂದ ಹುಟ್ಟಿದರೂ ಅದು ಅಪ್ಪರಾಯನ ಮಗನೆಂದು ಗುರುತಿಸಿಕೊಂಡು ಆ ವಂಶ ಅವನ ಹೆಸರನ್ನು ಮುಂದುವರಿಸಿಕೊಂಡು ಕಾಪಾಡಿಕೊಂಡು ಹೋಗುವ ಉದ್ದೇಶದಿಂದ ಮಾಡುತ್ತಾನೆ. ಹೀಗೆ ಇಲ್ಲಿ ಯಾವುದೇ ಕಾರಣಕ್ಕೂ ಕುಟುಂಬದ ಆಸ್ತಿ ಮೇಲ್ವರ್ಗದ ವೈದಿಕ ಮನೆತನದಲ್ಲಿಯೇ ವಂಶಪಾರಂಪರಿಕವಾಗಿ ಮುಂದುವರಿಯಬೇಕೆಂಬುದು ಕಥೆಯ ಉದ್ದೇಶವಾಗಿದೆ.

ಗೀತಾ ಅವರ ಕಥೆಗಳಲ್ಲಿ ಬರುವ ಸ್ತ್ರೀಯರು ಕೆಳವರ್ಗ ಹಾಗೂ ಮೇಲ್ವರ್ಗದವರಾಗಿದ್ದು ಅವಿವಾಹಿತ, ವಿವಾಹಿತ ಹೆಣ್ಣುಮಕ್ಕಳು. ಈ ವಿವಾಹಿತ ಹೆಂಗಸರಲ್ಲಿ ವಿಧವೆ, ಪರಿತ್ಯಕ್ತೆ, ಬಂಜೆ ಮೊದಲಾದವರಿದ್ದಾರೆ. ಮುಖ್ಯವಾಗಿ ಕೆಳವರ್ಗದ ಭಿಕ್ಷುಕಿ, ಹೂವಾಡಗಿತ್ತಿ, ಕೂಲಿಮಹಿಳೆ, ರಿಕ್ಷಾವಾಲಿ, ಕಟ್ಟಿಗೆ ಮಾರುವವಳು ಹೀಗೆ ಒಂದಿಲ್ಲೊಂದು ದುಡಿಮೆಯಲ್ಲಿ ತೊಡಗಿಸಿಕೊಂಡಿರುವ ಪಾತ್ರಗಳಿವೆ. ಇವರು ತಮ್ಮದೇ ಅದ ಒಂದು ನೆಲೆಯನ್ನು ಕಟ್ಟಿಕೊಂಡು ಬದುಕಲಾಗದೆ

ನಗರದ ರೈಲ್ವೆಸ್ಟೇಷನ್ನಿನ ಪ್ಲಾಟ್‌ಫಾರ್ಮ್‌ಗಳಲ್ಲಿ ಬದುಕುತ್ತಾ ಕಾಮುಕ ಪುರುಷರಿಂದ ರಕ್ಷಿಸಿಕೊಳ್ಳಲಾರದೆ ಹಣಕ್ಕಾಗಿ, ಹಸಿವಿಗಾಗಿ ತನ್ನತನವನ್ನು ಮಾರಿಕೊಳ್ಳುವ ಸ್ತ್ರೀಯರಿದ್ದಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕಜರಿ(ಬದುಕು ನುಂಗುವ ಮಂದಿ), ಕಾಶಿ(ದಾಳ), ಚಿತ್ತಿ(ಚಿತ್ತಿ ಮತ್ತು ರಿಕ್ಷಾ) ಈ ಹದಿಹರೆಯದ ತಂದೆತಾಯಿಗಳಿಲ್ಲದೆ ಅನಾಥರಾಗಿ, ಇಲ್ಲವೇ ತಾಯಿಯನ್ನು ಕಳೆದುಕೊಂಡು ತಂದೆಯಿದ್ದು ಮಲತಾಯಿಯ ಆಶ್ರಯದಲ್ಲಿ ಬೆಳೆಯುವ ಇವರಿಗೆ ಆ ಊರಿನ ಮಾನವೀಯ ಸಂಬಂಧಗಳು ಆಶ್ರಯ ನೀಡಿವೆ. ಇಂತಹ ಊರೊಟ್ಟಿಗೆ ವ್ಯಕ್ತಿಗಳು ತಂದೆಯ ಸ್ಥಾನವನ್ನು ಮಾತ್ಯಾ(ಬದುಕು ನುಂಗುವ ಮಂದಿ), (ಚಿತ್ತಿ ಮತ್ತು ರಿಕ್ಷಾ) ಇತ್ಯಾದಿ ಹೆಣ್ಣುಮಕ್ಕಳಿಗೆ ಆಶ್ರಯ ನೀಡುವ ವಿಶಾಲಮನೋಭಾವವುಳ್ಳ ಪುರುಷ ಪಾತ್ರಗಳಾಗಿವೆ. ಇಲ್ಲಿನ ಹದಿಹರೆಯದ ಹೆಣ್ಣುಮಕ್ಕಳು ತಮ್ಮ ಹಸಿವೆಗಾಗಿ ಭಿಕ್ಷಾಟನೆ, ಕಳ್ಳತನದ ವೃತ್ತಿಗಳಲ್ಲಿ ತೊಡಗುತ್ತಾರೆ. ಪ್ರಾಮಾಣಿಕವಾಗಿ ಬದುಕಲು ಹಾತೊರೆಯುತ್ತಾರೆ. ಆದರೆ ಆ ವ್ಯವಸ್ಥೆ ಪ್ರಾಮಾಣಿಕ ಬದುಕಿಗೆ ಅವಕಾಶ ನೀಡದಾಗ ಅಸಹಾಯಕರಾಗುತ್ತಾರೆ. ಆದರೆ ಕಜರಿ(ಬದುಕು ನುಂಗುವ ಮಂದಿ), ಚಿತ್ತಿ(ಚಿತ್ತಿ ಮತ್ತು ರಿಕ್ಷಾ) ಹೆಣ್ಣುಮಕ್ಕಳು ಬಿಕ್ಷಾಟನೆ, ಕಳ್ಳತನದ ವೃತ್ತಿ ಬಿಟ್ಟು ಹೂಮಾರುವ, ರಿಕ್ಷಾವಾಲಿಯಾಗಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳುತ್ತಾರೆ. ತಾವು ದುಡಿದು ತಮಗೆ ಆಶ್ರಯ ನೀಡಿದ ವ್ಯಕ್ತಿಗಳಿಗೆ ನೆರವಾಗುತ್ತಾರೆ. ಹೀಗೆ ಬದುಕುವ ಈ ಸ್ತ್ರೀಯರು ನೈಜಪ್ರೇಮಕ್ಕಾಗಿ ಹಾತೊರೆದು ಪ್ರಾಮಾಣಿಕ ವ್ಯಕ್ತಿಗಾಗಿ ಹಂಬಲಿಸಿ, ಏಕಪತಿತ್ವ ವಿವಾಹಕ್ಕೆ ಹಂಬಲಿಸಿ ಒಬ್ಬನಿಗೆ ನಿಷ್ಠರಾಗಿರಲು ಬಯಸುತ್ತಾರೆ. ಆದರೆ ಕಾಮುಕ ಪುರುಷಪ್ರಧಾನ ವ್ಯವಸ್ಥೆ ಹೆಣ್ಣಿನ ಈ ನಿಷ್ಠೆಯನ್ನು ಭಂಗಗೊಳಿಸುವುದರ ಮೂಲಕ ಈ ಸ್ತ್ರೀಯರು ತಮ್ಮದೇ ಆದ ಒಂದು ಸಂಸಾರವನ್ನು ಕಟ್ಟಿಕೊಳ್ಳಲು ಬಿಡದಂತೆ ಅವರನ್ನು ದೈಹಿಕ ಹಾಗೂ ಮಾನಸಿಕವಾಗಿ ದುರ್ಬಲಗೊಳಿಸಿ ಅವರ ಬದುಕನ್ನು ದುರಂತವಾಗಿಸುತ್ತಾರೆ. ಇಲ್ಲಿ ಹೆಣ್ಣಿಗೆ ತನ್ನ ದೇಹದ ಮೇಲೆ ಯಾವುದೇ ಅಸ್ತಿತ್ವವಿಲ್ಲದೆ ಬಲಿಷ್ಠರ ಕಾಮುಕ ಹಿತಾಸಕ್ತಿಗೆ ಬಲಿಯಾಗುತ್ತಾರೆ. ಹೀಗೆ ವ್ಯಭಿಚಾರಿ ಪುರುಷರಿಂದ ಲೈಂಗಿಕ ಅತ್ಯಾಚಾರಕ್ಕೆ ಒಳಗಾಗಿ, ಪುರುಷರ ಸ್ವಾರ್ಥಕ್ಕೆ ಸಿಲುಕಿ ತಮ್ಮದೇ ಆದ ಕುಟುಂಬವನ್ನು ಕಟ್ಟಿಕೊಳ್ಳಲಾರದೆ ಬದುಕಿನಲ್ಲಿ ಸೋಲುತ್ತಾರೆ. ಆದರೂ ಬದುಕಿನ ಛಲ ಬಿಡದೆ ಮತ್ತೆ ಮತ್ತೆ ಕಟ್ಟಿಕೊಳ್ಳುವ, ದುಡಿಯುವ ಜೀವನ, ಪ್ರೀತಿಯುಳ್ಳ ಚಿತ್ತಿ, ಕಜರಿ ಸ್ತ್ರೀಯರು ಇಲ್ಲಿದ್ದಾರೆ.

ಮೇಲಿನ ಬಹುಪಾಲು ಕುಟುಂಬಗಳು ಮೇಲ್ವರ್ಗ ಹಾಗೂ ಕೆಳವರ್ಗಗಳಲ್ಲಿನ ಕುಟುಂಬವ್ಯವಸ್ಥೆಯು ರಕ್ತಸಂಬಂಧಿತ ಸ್ವರೂಪವನ್ನು ಪಡೆದುಕೊಂಡಿದೆ. ಹೀಗೆ ಪರಸ್ಪರ ರಕ್ತಬಾಂಧವ್ಯದವರೊಡನೆ ವಿವಾಹವಾಗುವುದು ಪರಸ್ಪರ ಸಹಕಾರ ಆಶ್ರಯಕ್ಕಾಗಿ ಹಾಗೂ ಕುಟುಂಬದ ಆಸ್ತಿ ಆ ವಂಶದಲ್ಲಿಯೇ ಉಳಿಯಬೇಕೆಂಬುದು ಪ್ರಮುಖ ಕಾರಣವಾಗಿದೆ. ವಿಧವೆ ಸಾತವ್ವ, ಸಾತವ್ವನ ಅಣ್ಣ(ಪಟ್ಟಪಾಡೆಲ್ಲ ಹುಟ್ಟು ಹಾಡಾಗಿ), ತಮ್ಮ ಮಕ್ಕಳನ್ನು ಈ ವಿವಾಹಬಾಂಧವ್ಯಕ್ಕೆ ಒಳಪಡಿಸುತ್ತಾರೆ. ಆದರೆ ಸಾತವ್ವ ಸೊಸೆ ಬಂಜೆಯೆಂಬುದು ತಿಳಿದು ತನ್ನ

ಮಗನಿಗೆ ಮರುವಿವಾಹ ಮಾಡುವ ವಿವರಗಳು ಇಲ್ಲಿವೆ. ಮೇಲ್ವರ್ಗದ ಅಣ್ಣರಾಯ ತನ್ನ ಮಗ ಅಪ್ಪರಾಯನ ವಿವಾಹವನ್ನು ದೂರದ ರಕ್ತಬಾಂಧವ್ಯದೊಂದಿಗೆ ಏರ್ಪಡಿಸುತ್ತಾನೆ. ಆಸ್ತಿ ತನ್ನ ರಕ್ತಸಂಬಂಧದಲ್ಲಿಯೇ ಮುಂದುವರಿಯಬೇಕೆಂಬುದು ಇದಕ್ಕೆ ಕಾರಣ. ಮಗನಿಗೆ ಮಾದುನ ಪತ್ನಿಯಲ್ಲಿ ಮಕ್ಕಳಾಗದಾಗ ನೀಲಗಂಗವ್ವನೊಂದಿಗೆ ಮರುವಿವಾಹ ಮಾಡುತ್ತಾನೆ. ಹೀಗೆ ಪುರುಷರಿಗೆ ಬಹುಪತ್ನಿತ್ವಕ್ಕೆ ಹಲವಾರು ಕಾರಣಗಳಿವೆ. ಆದರೆ ಇಲ್ಲಿ ಈ ಪುರುಷರು ತನಗಿಲ್ಲದ ಪುರುಷತ್ವವನ್ನು ಸಾಬೀತುಪಡಿಸಲು ಬಹುಪತ್ನಿತ್ವಕ್ಕೆ ಹಾತೊರೆಯುತ್ತಾರೆ ಎಂಬುದು ಕತೆಯ ವ್ಯಂಗ್ಯದ ವಿವರಣೆಯಲ್ಲಿ ಬರುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ತಮ್ಮಲ್ಲಿ ಯಾವುದೇ ಕೊರತೆಯಿಲ್ಲದೆ ಫಲವಂತಿಕೆಯುಳ್ಳ ಹೆಂಗಸರು ವಿನಾಕಾರಣ ಬಂಜೆಯ ಅಪವಾದವನ್ನು ನಿಂದನೆಯನ್ನು ಹೊತ್ತುಕೊಂಡು ಅವಮಾನಗೊಳ್ಳುತ್ತಾರೆ. ಆದರೆ ಹೆಣ್ಣಿನ ಸಹಜ ತಾಯ್ತನದ ಬಯಕೆಯಿಂದ ತಮ್ಮ ಕುಟುಂಬದಲ್ಲಿ ದುಡಿಯುವ ಆಳುಗಳೊಂದಿಗೆ ದೈಹಿಕ ಸಂಬಂಧ ಹೊಂದಿ ಮಕ್ಕಳನ್ನು ಪಡೆಯುತ್ತಾರೆ. ಹೀಗೆ ಮಕ್ಕಳನ್ನು ಪಡೆದರೂ ಅವರು ಅಪರಾಧಿ ಭಾವನೆಯಿಂದ ಮಾನಸಿಕ ಅಸ್ವಸ್ಥರಾಗಿ ಬದುಕುವ, ಇಲ್ಲವೇ ಸಾವಿಗೀಡಾಗುವ ಸ್ತ್ರೀಯರೇ ಬಹುಮಂದಿ. ಹೀಗೆ ಇಲ್ಲಿ ಸ್ವಚ್ಛಂದ ಲೈಂಗಿಕ ಸಂಬಂಧ ಪುರುಷರಿಗೆ ಸಹಜವಾಗಿರುವಂತೆ ಸ್ತ್ರೀಯರಿಗೆ ಅಸಹಜವಾಗಿದೆ.

ಒಟ್ಟಾರೆಯಾಗಿ ಗೀತಾ ನಾಗಭೂಷಣ ಅವರ ಕಥೆಗಳಲ್ಲಿ ಅಭಿವ್ಯಕ್ತಿ ಹೊಂದಿರುವ ಕುಟುಂಬ ಸ್ವರೂಪವು ಕಥೆಯ ವಿವರಣೆಯಲ್ಲಿರುವಂತೆ ಕಲಬುರ್ಗಿ ಜಿಲ್ಲೆಯಲ್ಲಿ ಬರುವ ಶಿವಳ್ಳಿ ಎಂಬ ಹಳ್ಳಿಯ ಮ್ಯಾಗೇರಿ, ಕೆಳಗೇರಿ ಮತ್ತು ಹೊಲಗೇರಿಗಳಲ್ಲಿ ಕಾಣುವ ಕುಟುಂಬವ್ಯವಸ್ಥೆಯಾಗಿದೆ. ಇವುಗಳೆಲ್ಲ ನೆಲೆ ನಿಂತಿರುವುದು ಮೇಲಿನ ಕೇರಿಯ ಹಂಚಿನ ಮನೆ, ಕೆಳಗೇರಿ, ಹೊಲಗೇರಿಯ ಅರೆಪ್ಪರಮನೆ, ಹೆಂಡಿಮನೆ, ಜೋಪಡಿಗಳಲ್ಲಿ. ಅಯಾಯ ಮನೆಗಳ ವಿನ್ಯಾಸಗಳಲ್ಲಿ ಕುಟುಂಬದ ವರಮಾನ ಮತ್ತು ಆರ್ಥಿಕತೆಗಳು ಗೊತ್ತಾಗುತ್ತವೆ. ಐಬು, ಜ್ವಲಂತ ಕಥೆಯಲ್ಲಿ ಬರುವ ಮೇಲ್ವರ್ಗದ ಹಳ್ಳಿಯ ಗೌಡ, ಕುಲಕರ್ಣಿಯರದು ಕೂಡುಕುಟುಂಬ. ಮೂರು ತಲೆಮಾರಿನ ಜನ ಒಂದೇ ಮನೆಯಲ್ಲಿ ಕಲೆತು ಬಾಳುವುದಿದೆ. ದುಡಿಮೆಯ ಜವಾಬ್ದಾರಿಯನ್ನು ಎದುರಿಸುವ ಮಧ್ಯವಯಸ್ಕ ದಂಪತಿಗಳು ಅವರಿಗೆ ಮಾರ್ಗದರ್ಶಕರಾಗಿ ನಿಂತ ಹಿರಿಯರು ಇಲ್ಲಿದ್ದಾರೆ. ಈ ಕುಟುಂಬದ ಸದಸ್ಯರ ಜೀವಂತಿಕೆಯಿರುವುದೇ ಹೊಲಗದ್ದೆ ತೋಟಗಳ ದುಡಿಮೆಗಳಲ್ಲಿ. ಹುಲ್ಲುಮನೆ ಜೋಪಡಿಮನೆಗಳಲ್ಲಿ ಕೂಡುಕುಟುಂಬ ಮತ್ತು ಸರಳಕುಟುಂಬ ಈ ಎರಡರ ರಚನೆಗಳನ್ನು ಕಾಣಬಹುದು. ದೈಹಿಕ ಶ್ರಮದ ವಿಪರೀತ ಜೀತ, ಈಚಲು, ಹೆಂಡ, ಹುಟ್ಟುವ ಮಕ್ಕಳು ಈ ಎಲ್ಲದರ ಪರಿಣಾಮವಾಗಿ ತೀವ್ರ ದಾರಿದ್ರ್ಯ, ರೋಗ ರುಜಿನಗಳು ಇವು ಬಡ ಕುಟುಂಬವನ್ನು ಕಾಡುವ ಪರಿಹಾರರಹಿತ ಸಮಸ್ಯೆಯಾಗಿ ತೋರುತ್ತವೆ. ಮಕ್ಕಳನ್ನು ತಮ್ಮ ವರಮಾನಗಳೆಂದು ಭಾವಿಸುವ ಜೋಪಡಿಯ ಜನತೆ ಅವರಿಗೆ 'ಶಿಕ್ಷಣ' ನೀಡುವ ಸಾಹಸಕ್ಕೆ

ಹೋಗುವುದಿಲ್ಲ. ಆದರೆ 'ಮಾನಾಪಮಾನ ನಿಮ್ಮದಯ್ಯ' ಕಥೆಯಲ್ಲಿ ಬರುವ ತಾಯವ್ವ ಭೂ ಒಡೆಯನ ನೆರವಿನಿಂದ ಮಗನಾದ ಶಾಂತವೀರನನ್ನು ಸುಶಿಕ್ಷಿತನನ್ನಾಗಿ ಮಾಡುತ್ತಾಳೆ. ಹೀಗೆ ತಾನು ಪಡೆದ ಶಿಕ್ಷಣದಿಂದ ಒಡೆಯ–ಆಳು ನಡುವಿನ ಅಸಮಾನತೆಯನ್ನು ಅರಿತವನಾಗಿ ಭೂ ಒಡೆಯನ ಮಗಳನ್ನು ಪ್ರೇಮವಿವಾಹ ಮಾಡಿಕೊಳ್ಳುವುದರ ಮೂಲಕ ತನ್ನ ದಿಟ್ಟತನವನ್ನು ತೋರುತ್ತಾನೆ. ಅವನ ಈ ತೀರ್ಮಾನಕ್ಕೆ ಅವನು ಪಡೆದ ಶಿಕ್ಷಣವೇ ಕಾರಣವಾಗಿರುತ್ತದೆ. ಆದರೆ ಇದರ ಪರಿಣಾಮದಿಂದ ಆತನ ತಾಯಿ ಊರ ಒಡೆಯನಿಂದ ಚಿತ್ರಹಿಂಸೆಗೊಳಗಾಗಿ ಸಾವಿಗೀಡಾಗುವ ದುರಂತವೂ ಇದೆ. ಪಠ್ಯಗಳ ಒಳಗೆ ಕುಟುಂಬದೊಳಗಿನ ದೌರ್ಬಲ್ಯಗಳು, ಗಟ್ಟಿತನಗಳು, ಪ್ರೀತಿ, ಪ್ರೇಮ, ಹಾದರ, ಕಳವು, ಸುಳ್ಳು ವಾಸ್ತವಗಳೆಲ್ಲ ವಿವರಣೆ ಪಡೆಯುತ್ತವೆ. ಇಂತಹ ಕುಟುಂಬದಲ್ಲಿ ಸ್ತ್ರೀಯರ ಜವಾಬ್ದಾರಿ ಹೆಚ್ಚು. ದಿನಗೂಲಿ, ದುಡಿಮೆ, ಜೀತ ಈ ಮೂಲಕ ದಿನದ ಖರ್ಚನ್ನು ಸಂಪಾದಿಸುವ ಶಕ್ತಿ ಅವರಿಗಿದ್ದರೂ ಏನನ್ನೂ ನಾಳೆಗಾಗಿ ಕೂಡಿಡದ ಕುಟುಂಬಗಳಾಗಿವೆ. ಅದಕ್ಕೆ ಕಾರಣ ಆ ಕುಟುಂಬಗಳಲ್ಲಿ ಕಾಣುವ ಗಂಡಸರ ಕುಡಿತ. ಇದಕ್ಕೆ ಅವರ ಇಡೀ ಕುಟುಂಬ ಬಲಿಯಾಗುವುದು, ಬಡತನದಿಂದ ನಲುಗುವುದು ವ್ಯಕ್ತವಾಗುತ್ತದೆ. ಕೆಳಜಾತಿಯ ಕುಟುಂಬದಲ್ಲಿ ಮಕ್ಕಳ ಪಾಲನೆ ಪೋಷಣೆ ಜವಾಬ್ದಾರಿ, ವೃದ್ಧರನ್ನು ನೋಡಿಕೊಳ್ಳುವ ಹೊಣೆಗಾರಿಕೆ ಮತ್ತು ಹೃದಯವಂತಿಕೆ ಇರುವುದು ಸ್ತ್ರೀಯರಿಗೆ ಮಾತ್ರ. ಇದಕ್ಕೆ ವ್ಯತಿರಿಕ್ತ ಪಾತ್ರವಾಗಿ ಸಿಂಪವ್ವ(ಇದು ಎಂಥಾ ಲೋಕವಯ್ಯ) ಪಾತ್ರದಲ್ಲಿ ಕಾಣಬಹುದಾಗಿದೆ. ಹೀಗೆ ಗಂಡಸರಿಗೆ ಬೇಡವಾಗಿರುವ ಕುಟುಂಬವ್ಯವಸ್ಥೆ ಹೆಂಗಸರ ಆತ್ಮಸ್ಥೈರ್ಯ, ತ್ಯಾಗಜೀವನದ ಮೇಲೆ ಮಾತ್ರವೇ ನಿಂತಿರುವಂತೆ ಕಾಣುತ್ತದೆ.

ಭೂಮಾಲೀಕರಿಂದ ಲೈಂಗಿಕ ಅತ್ಯಾಚಾರಕ್ಕೆ ಒಳಗಾದ ಸ್ತ್ರೀಯರು(ತಾಯವ್ವ, ಲಕ್ಕಿ, ಕಾಶಿ, ನೀಲವ್ವ), ತನ್ನ ದೇಹದ ಮೇಲೆ ತನಗೆ ಯಾವ ಹಕ್ಕು, ಸ್ವಾತಂತ್ರ್ಯವಿಲ್ಲದ ಸ್ತ್ರೀಯರು, ಬಲಿಷ್ಠರಿಂದ ಅತ್ಯಾಚಾರವಾದರೂ ಬದುಕಿಗೆ ಹೆದರದ ಸ್ತ್ರೀಯರು, ತನ್ನ ಸಂಗಾತಿಯನ್ನು ತಾನು ಹೊಂದಲು ಹೆಣಗಾಡುವ, ಧಕ್ಕೆಯಿದ್ದರೂ ಬದುಕುವ ಛಲ ಹೊಂದಿರುವ(ಕಜರಿ; ಚಿತ್ರಿ) ಸ್ತ್ರೀಯರು, ಬಡತನಕ್ಕೆ ಹಸಿವಿಗೆ ಅಂಜದ ಕುಟುಂಬಗಳನ್ನು ಮೇಲಿನ ಕಥೆಗಳಿಂದ ಶೋಧಿಸಲಾಗಿದೆ. ಸಾಮಾನ್ಯವಾಗಿ ಗೀತಾ ಅವರ ಕತೆಗಳ ಸ್ತ್ರೀಯರಿಗೆ ಯಾರಿಂದಲೂ ರಕ್ಷಣೆಯಿರುವುದಿಲ್ಲ. ತಮ್ಮ ರಕ್ಷಣೆಯನ್ನು ಸಾವು–ಬದುಕಿನ ಪ್ರಶ್ನೆಯಾಗಿ ಸ್ವೀಕರಿಸಿ ಭೂಮಾಲೀಕರಿಂದ, ಬಲಿಷ್ಠರಿಂದ, ಧರ್ಮದ ಹೆಸರಿನ ಶಕ್ತಿಯಿಂದ ರಕ್ಷಣೆಯನ್ನು ಹಾಳುಗೆಡವಲು ಪ್ರಯತ್ನಿಸುವ ಎಲ್ಲ ಶಕ್ತಿಗಳಿಂದ ಹೋರಾಟ ನಡೆಸುವ ಸ್ತ್ರೀಯರು ಸಾಲು ಸಾಲಾಗಿ ಕಾಣಿಸುತ್ತಾರೆ.

ಹೆಂಡತಿ–ಗಂಡ ಮನೆ ಮತ್ತು ಸಂಸಾರ ಎಂಬ ರಕ್ಷಾಕವಚಕ್ಕೆ ಹೋರಾಡುತ್ತಾರೆ. ಅದು ಛಿದ್ರವಾದರೂ, ತತ್ಕಾಲ ಚಿಂತಿಸಿದರೂ ಮತ್ತೆ ಮತ್ತೆ ಕಟ್ಟಿಕೊಳ್ಳುವ ಕಡೆ ದಿಟ್ಟಹೆಜ್ಜೆ ಇಡುತ್ತಾರೆ. 'ಇದು ಎಂಥಾ ಲೋಕವಯ್ಯಾ', 'ಚಕ್ಕರ ಕಟ್ಟಾಚಾಕ', 'ಪಟ್ಟ ಪಾಡೆಲ್ಲಾ ಹುಟ್ಟು ಹಾಡಾಗಿ',

‘ಜ್ವಲಂತ’, ‘ಚಿತ್ತಿ ಮತ್ತು ರಿಕ್ಷಾ’ ಮುಂತಾದ ಹತ್ತಾರು ಕತೆಗಳಲ್ಲಿ ಸ್ತ್ರೀಯರ ಕುಟುಂಬಗಳ ಅವಸ್ಥೆ ಕಾಣುತ್ತದೆ. ಶೀಲ ಮುಖ್ಯವಾದರೂ ಅದನ್ನು ಕಳೆಯುವ ಬಲಿಷ್ಠ ವ್ಯವಸ್ಥೆಗೆ ಬಲಿಯಾಗುವ ಸ್ತ್ರೀಯರ ಕಥನವೇ ಪ್ರಧಾನವಾಗಿ ಈ ಕಥೆಗಳಲ್ಲಿ ಕಾಣುತ್ತದೆ.

೪.೪. ವೈದೇಹಿ

ನವ್ಯ ಸಾಹಿತ್ಯ ಚಳುವಳಿ ಮತ್ತು ಬಂಡಾಯ ಸಾಹಿತ್ಯ ಚಳುವಳಿಯ ಕಾಲಘಟ್ಟದ ನಡುವಿದ್ದ ವೈದೇಹಿ ಅವರು ಸಾಮಾನ್ಯವಾಗಿ ಯಾವ ಸಾಹಿತ್ಯ ಚಳುವಳಿಯ ಪ್ರಭಾವಕ್ಕೆ ಒಳಗಾಗದೆ ತಮ್ಮ ಸಾಹಿತ್ಯ ರಚನೆಯನ್ನು, ಅದಕ್ಕೆ ಬೇಕಾದ ತಾತ್ವಿಕ ನೆಲೆಯನ್ನು ಜಾಗರೂಕರಾಗಿ ಕಂಡುಕೊಂಡವರು. ಹಾಗೆಂದು ಶೂನ್ಯ ವಾತಾವರಣದಲ್ಲಿ ಹುಟ್ಟಿ ಬಂದವರು ಎನ್ನಲು ಬರುವುದಿಲ್ಲ. ಒಡೆದು ಕಾಣುವಂತೆ ಯಾವುದೇ ಪ್ರಭಾವಕ್ಕೆ ಒಳಗಾಗದೆ ಎಲ್ಲವನ್ನು ಅರಗಿಸಿಕೊಂಡು ತಮ್ಮತನಕ್ಕೆ ಅಭಿವ್ಯಕ್ತಿ ನೀಡಿದವರು ವೈದೇಹಿ. ಇದು ಕೂಡ ಸರಳವಾದ ಮತ್ತು ಸುಲಭವಾದ ದಾರಿಯಲ್ಲ.

ವೈದೇಹಿ ತಮ್ಮ ಅನುಭವಗಳಿಗೆ ತೀವ್ರವಾದ ಅಭಿವ್ಯಕ್ತಿ ಕೊಟ್ಟವರು. ‘ತಮ್ಮ’ ಎನ್ನುವ ಪದಕ್ಕೆ ವಿಶಾಲ ಅರ್ಥವಿದ್ದು, ಅದರ ನೆಲೆಯನ್ನು ಬಲಪಡಿಸಿಕೊಂಡವರು. ಅವರು ಹುಟ್ಟಿ ಬೆಳೆದ ಪರಿಸರ, ಪ್ರಾದೇಶಿಕತೆ, ಅವರದೇ ಆದ ದೇಶಿ ತಿಳುವಳಿಕೆ, ಸ್ಥಳೀಯ ಪ್ರಜ್ಞೆ ಎಲ್ಲವುಗಳಿಂದ ಕೂಡಿದ ಒಂದು ಸತ್ವವನ್ನು ಮೈಗೂಡಿಸಿಕೊಂಡು ವೈದೇಹಿ ಕಥೆಗಳನ್ನು ರಚಿಸುತ್ತ ಬರುತ್ತಿದ್ದಾರೆ. ಅವರ ಕತೆಗಳಲ್ಲಿ ಪ್ರಾದೇಶಿಕತೆ, ಮಾತೃಪ್ರಧಾನ ಕುಟುಂಬ, ಸ್ತ್ರೀಧಾರಣ ಶಕ್ತಿ ಅಭಿವ್ಯಕ್ತವಾಗಿವೆ. ಸಾಂಪ್ರದಾಯಿಕ ಸ್ತ್ರೀಯರು ವೈದೇಹಿ ಕಥೆಗಳ ಕೇಂದ್ರದಲ್ಲಿದ್ದಾರೆ. ಸ್ತ್ರೀ ಮತ್ತು ಕುಟುಂಬದ ಸ್ವರೂಪ ಗೀತಾ, ವೀಣಾ ಅವರಿಗಿಂತ ಭಿನ್ನವಾಗಿದೆ.

ವೈದೇಹಿ ಕಥೆಗಳ ಕೇಂದ್ರ ಪಾತ್ರ ಹೆಣ್ಣಾಗಿದ್ದರೂ ಬೇರೆ ಬೇರೆ ಪರಿಸ್ಥಿತಿ ಸನ್ನಿವೇಶಗಳಲ್ಲಿ ಬದುಕುವ ಹೆಣ್ಣಿನ ಚಿತ್ರಣ ನೀಡುವುದು ಈ ಕಥೆಗಳ ಉದ್ದೇಶವಾಗಿದೆ. ನಾಯಕಿಪ್ರಧಾನ ಕಥೆಗಳಲ್ಲಿ ಹದಿಹರೆಯದವರು, ಅವಿವಾಹಿತೆಯರು, ಬಾಲವಿಧವೆಯರು, ಗೃಹಿಣಿಯರು, ಪರಿತ್ಯಕ್ತೆಯರು, ಗಂಡನಿಂದಾಗಿ ಪರಾವಲಂಬಿಗಳಾದವರು, ಗಂಡನ ಹಿಂಸೆಗೆ ನೊಂದುಕೊಂಡವರು, ನಡುವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡವರು, ಬಡವರು, ಮರುಳರು, ಕಳ್ಳರು, ಹುಚ್ಚಿಯರು ಹೀಗೆ ವಿಭಿನ್ನ ಪರಿಸರಗಳಲ್ಲಿ, ಭಿನ್ನ ರೀತಿಯ ಬದುಕು ಸಾಗಿಸುವ ಹಲವಾರು ಸ್ತ್ರೀಯರು ಕಂಡುಬರುತ್ತಾರೆ. ಮುಟ್ಟು, ಬಸಿರು, ಬಾಣಂತಿತನ, ಅಡುಗೆ ಮನೆಯಲ್ಲಿಯೇ ಉಳಿಯುವ ಗೃಹಿಣಿಯರು, ಈ ಗೃಹಿಣಿಯರ ನೆರವಿಗೆ ಬರುವ ಸ್ವಜಾತಿ ಹೆಣ್ಣಾಳುಗಳು, ಪಾತ್ರೆ, ಬಟ್ಟೆ, ಹಿತ್ತಲು ಎಂದುಕೊಂಡು ಸೂಕ್ತ ಕೆಲಸದಲ್ಲಿ ತೊಡಗಿದ ಕೆಳಜಾತಿಯ ಹೆಣ್ಣಾಳುಗಳು, ಹಟ್ಟಿಗೆ ಸೊಪ್ಪು ಹಾಕಲು ಬರುವ ಕೊರತಿಯರು ಹೀಗೆ ವರ್ಗ, ಜಾತಿ, ಸ್ವಭಾವಗಳಿಂದ ಭಿನ್ನರೆನಿಸಿಕೊಳ್ಳುವ

ಸ್ತ್ರೀಯರು ವೈದೇಹಿ ಕಥೆಗಳಲ್ಲಿದ್ದಾರೆ. ಅದೇ ತಾನೆ ಹುಟ್ಟಿ ಮೈಲಿಗೆಯನ್ನು ಮೈಗಂಟಿಸಿಕೊಂಡು ನೊಂದು ಮಲಗಿರುವ ಹೆಣ್ಣುಕೂಸಿನಿಂದ ಹಿಡಿದು ದೃಷ್ಟಿ, ಮಾತು ಕಳೆದುಕೊಂಡು ಸಾವಿನ ನಿರೀಕ್ಷೆಯಲ್ಲಿರುವ ವೃದ್ಧೆಯವರೆಗೆ ಎಲ್ಲ ವಯೋಮಾನದವರು ಇಲ್ಲಿದ್ದಾರೆ. ಮೂರು ನಾಲ್ಕು ತಲೆಮಾರುಗಳಿಗೆ ಸೇರುವ ಹೆಂಗಸರು ಒಂದೇ ಸೂರಿನ ಕೆಳಗೆ ಬದುಕುವುದು ಇಲ್ಲಿ ಸಾಮಾನ್ಯ. ಹೀಗೆ ವಯೋಧರ್ಮ, ಮನೋಧರ್ಮ ಮತ್ತು ಸಾಮಾಜಿಕ ಸ್ತರಗಳಲ್ಲಿ ಭಿನ್ನತೆಯಿರುವ ಸ್ತ್ರೀಯರು ಸಮುದಾಯ ಪ್ರಜ್ಞೆಯಲ್ಲಿ ಕೂಡಿ ಬಾಳುವ ವಿವರಗಳನ್ನು ಈ ಕಥೆಗಳು ನೀಡುತ್ತವೆ. ಈ ಎಲ್ಲ ಸ್ತ್ರೀಯರ ಅನುಭವ ಭಿನ್ನತೆಯನ್ನು ಬಳಸಿಕೊಂಡು ಸ್ತ್ರೀ ಬದುಕಿನ ಸಮುಚ್ಚಯ ಮೂಲದ ಹುಡುಕಾಟದಲ್ಲಿ ಲೇಖಕಿ ತೊಡಗಿದ್ದಾರೆ. ಬಹುತೇಕ ಪುರುಷಪಾತ್ರಗಳ ನೇಪಥ್ಯದಿಂದ ಕಾರ್ಯ ನಿರ್ವಸುವುದು ಈ ಕಥೆಗಳ ವೈಶಿಷ್ಟ್ಯ.

ವೈದೇಹಿ ಕಥೆಗಳಲ್ಲಿ ಪ್ರಧಾನವಾಗಿ ಗೋಚರಿಸುವವರು ಗೃಹಿಣಿಯರು. ಇವರು ಪತ್ನಿ ಸ್ಥಾನದಲ್ಲಿ ಇರುವವರು. ಈ ಗೃಹಿಣಿಯರ ಸಂಪರ್ಕಕ್ಕೆ ಬರುವ ಹೆಣ್ಣಾಳುಗಳನ್ನು ಹೊರತುಪಡಿಸಿದರೆ ಯುವತಿಯರು, ಹದಿಹರೆಯದ ಹುಡುಗಿಯರು ಕಾಣಿಸಿಕೊಳ್ಳುತ್ತಾರೆ. ಅಜ್ಜಿ, ಅತ್ತೆ, ಹೆಂಡತಿ, ಮಗಳು, ಸೊಸೆ, ತಂಗಿ, ನಾದಿನಿ ಮೊದಲಾದ ಸಂಬಂಧಗಳನ್ನು ನಿರ್ವಹಿಸುವ ಅನೇಕ ಪಾತ್ರಗಳಿವೆ. ಪುರುಷಪಾತ್ರಗಳು ಹೆಚ್ಚಾಗಿ ಅಜ್ಜ, ತಂದೆ, ಗಂಡ, ಅಣ್ಣ ಮೊದಲಾದ ಸಂಬಂಧಗಳಲ್ಲಿ ಕಂಡುಬರುತ್ತಾರೆ.

ವೈದೇಹಿ ಕಥೆಗಳಲ್ಲಿ ಕೂಡುಕುಟುಂಬಗಳು ಗ್ರಾಮೀಣ ಪರಿಸರದಲ್ಲಿ ಕಂಡುಬರುತ್ತವೆ. 'ಅಕ್ಕು' ಕಥೆಯಲ್ಲಿ ಬರುವ ಅಜ್ಜಯ್ಯನ ಮನೆತನವು ಕೂಡುಕುಟುಂಬದಿಂದ ಕೂಡಿದೆ. ಇಲ್ಲಿ ಸುಮಾರು ಮೂರು ತಲೆಮಾರು ನೆಲೆಸಿರುವ ಕುಟುಂಬವಿದೆ. ಈ ಕುಟುಂಬದ ಯಜಮಾನ ಅಜ್ಜಯ್ಯ. ಅಜ್ಜಯ್ಯನ ಅಧಿಕಾರದ ನಿಯಂತ್ರಣದಲ್ಲಿ ಮಗ ವಾಸು, ಅವನ ಹೆಂಡತಿ ಬಾನು ಚಿಕ್ಕಿ, ಮಗಳು ಅಕ್ಕು, ಅಜ್ಜಯ್ಯನ ತಂಗಿ, ದೊಡ್ಡತ್ತೆ ಹಾಗೂ ಅಜ್ಜಯ್ಯನ ಮೊಮ್ಮಕ್ಕಳು ವಾಸಿಸುತ್ತಾರೆ. ಇಲ್ಲಿ ಹೊರಗಿನ ವ್ಯವಹಾರವನ್ನೆಲ್ಲ ಪುರುಷರೇ ನೋಡಿಕೊಳ್ಳುತ್ತಾರೆ. ಇಲ್ಲಿ ಮಹಿಳೆಯೇನಿದ್ದರೂ ಮನೆಯ ಚೌಕಟ್ಟಿನೊಳಗೆ ಬರುವ ಅಡಿಗೆ ಕೆಲಸ, ಮಜ್ಜಿಗೆ ಕಡೆಯುವುದು, ಉಪ್ಪುಹುಳಿ ಹಾಕಲು, ನೀರೆತ್ತಲು, ಹೊಸ ಸೀರೆಯುಟ್ಟು ವಿವಾಹ, ಉಪನಯನ ಸಮಾರಂಭಗಳಿಗೆ ಹೋಗಲು ಮಾತ್ರ ಸೀಮಿತವಾಗಿದ್ದರು. ಆದರೆ ಯುವತಿಯಾದ ಅಕ್ಕು ಗಂಡನಿದ್ದರೂ ಪರಿತ್ಯಕ್ತೆಯಾಗಿ ಬದುಕು ನಡೆಸುತ್ತಿದ್ದಳು. ಇವಳು ಮಾನಸಿಕ ಅಸ್ವಸ್ಥಳಾದ ಕಾರಣ ಈ ಮನೆಯಲ್ಲಿ ಉಳಿದ ಹೆಣ್ಣುಮಕ್ಕಳಿರುವಂತೆ ಅಡುಗೆ ಕೆಲಸ, ರೀತಿ ನೀತಿಗಳು, ಕಟ್ಟುಪಾಡುಗಳು ಹಾಗೂ ನಿರ್ಬಂಧಗಳಿಂದ ಹೊರತಾಗಿದ್ದಾಳೆ. ಮನೆಯ ಇತರ ಸದಸ್ಯರಿಗೆ ಹೆಣ್ಣು ಮಿತಿಮೀರಿ ಮಾತನಾಡುವ ನಿರ್ಬಂಧವಿದೆ. ಆದರೆ ಆಕೆಗೆ ಅದಕ್ಕಾಗಿ ಸ್ವಾತಂತ್ರ್ಯವಿದೆ. ಕಾರಣ ಆಕೆ ಮನೋರೋಗಿಯಾಗಿರುವುದು. ಆರ್ಥಿಕವಾಗಿ ಇಲ್ಲಿ ಎಲ್ಲಾ ಮಹಿಳೆಯರು ಅತಂತ್ರರು.

ಪುರುಷರ ಅವಲಂಬಿತರು. ಇಲ್ಲಿನ ಹೆಣ್ಣುಮಕ್ಕಳಿಗೆ(ಅಕ್ಕು) ತಮ್ಮ ವಿವಾಹದ ಬಗ್ಗೆ ಯಾವುದೇ ಆಯ್ಕೆಗಳಿಲ್ಲ. ಇಲ್ಲಿ ದೊಡ್ಡವರ ಇಚ್ಛೆಯಂತೆ ಹೆಣ್ಣುಮಕ್ಕಳ ವಿವಾಹ ಏರ್ಪಡುತ್ತದೆ. ಅಂತಹ ಗಂಡನನ್ನು ಒಪ್ಪಿಕೊಂಡು ಬದುಕಬೇಕು. ಮಧ್ಯವಯಸ್ಸಿನ ಅಕ್ಕು ಗಂಡ ಬಿಟ್ಟ ಮಹಿಳೆ. ಇಲ್ಲಿ ಅಕ್ಕುವಿಗೆ ಪುರುಷನಂತೆ ಸಹಜ ಲೈಂಗಿಕ ಬಯಕೆಯಿದ್ದು, ಸಾಂಪ್ರದಾಯಿಕ ಮನೆತನದಲ್ಲಿ ಬಿಗಿ ವಾತಾವರಣದಿಂದ ಅದನ್ನು ಈಡೇರಿಸಿಕೊಳ್ಳಲಾಗದೆ ಮಾನಸಿಕ ರೋಗಿಯಾಗಿ ಪರಿವರ್ತನೆಗೊಳ್ಳುತ್ತಾಳೆ. ಇಲ್ಲಿ ಅಕ್ಕುವಿಗೆ ಗಂಡ, ಮನೆ, ಮಕ್ಕಳ ಅಗತ್ಯವಿದೆ. ಅದನ್ನು ಬಿಟ್ಟು ಬರಲಾರಳು. ಆದರೆ ಅದು ಸಾಧ್ಯವಾಗದಿದ್ದಾಗ ಮಾನಸಿಕ ಅಸ್ವಸ್ಥಳಾಗಿ ರೂಪುಗೊಂಡಿದ್ದಾಳೆ. ಇಲ್ಲಿನ ಮಹಿಳೆಯರಿಗೆ ಗಂಡ, ಗಂಡನ ಮನೆ ಮುಳ್ಳಾಗಿದೆ. ಇವರು ಮನೋರೋಗಿಯಾಗಿ ಪರಿವರ್ತನೆಗೊಳ್ಳುತ್ತಾರೆ. ಕಾರಣವಿಲ್ಲದೆ ಬಿಟ್ಟು ಹೋದ ಗಂಡ ಸಂಕ್ರಪ್ಪ ಪುನಃ ಹಿಂದಿರುಗಿದಾಗ ಅಕ್ಕು ಆ ಗಂಡನನ್ನು ನಿರಾಕರಿಸುತ್ತಾಳೆ. ಆದರೆ ಅಜ್ಜಯ್ಯನ ನಿರ್ಧಾರದಂತೆ ಅಕ್ಕು ಗಂಡನ ಮನೆಯಲ್ಲಿರಬೇಕೆಂದು ತೀರ್ಮಾನವಾಗುತ್ತದೆ. ಸಾಂಪ್ರದಾಯಿಕ ಅಜ್ಜಯ್ಯನ ಮನೆಯಲ್ಲಿ ಲೈಂಗಿಕ ವಿಷಯಗಳನ್ನು ಅತ್ಯಂತ ಮುಚ್ಚುಮರೆಯಿಂದ ಕಾಪಾಡಲಾಗುತ್ತದೆ. ಅಕ್ಕುವು ಗಂಡನಿಲ್ಲದ ಸಮಯದಲ್ಲಿ ಗಂಡನಿಗಾಗಿ, ಮಕ್ಕಳಿಗಾಗಿ ಹಂಬಲಿಸುತ್ತಾಳೆ. ಅಲ್ಲದೇ ಅತ್ತೆಮಗ ತಿಮ್ಮಪ್ಪಯ್ಯನ ಜೊತೆಗೆ ಲೈಂಗಿಕ ಸಂಬಂಧವನ್ನು ಬೆಳೆಸುತ್ತಾಳೆ. ಸ್ವತಃ ಅಕ್ಕುವಿನ ಪಾತ್ರದ ವಿವರಣೆಯಲ್ಲಿ ಈ ಮಾಹಿತಿ ದೊರೆಯುತ್ತದೆ. ಅಕ್ಕುವಿನ ಈ ಮೀರುವಿಕೆ ಅಜ್ಜಯ್ಯನ ಆಜ್ಞೆಯಂತೆ ಹೊಡೆತ, ದೈಹಿಕ ಮಾನಸಿಕ ಹಿಂಸೆಗೆ ಅಕ್ಕು ಒಳಗಾಗುತ್ತಾಳೆ. ತನ್ನ ಈ ಹಿಂಸೆಗೆ ವಾಸುವಿನ ಪರ ಅನೈತಿಕ ಸಂಬಂಧವನ್ನು ಹೇಳುವುದರ ಮೂಲಕ ಪ್ರತಿಭಟಿಸುತ್ತಾಳೆ. ಆದರೆ ಪುರುಷರ ಲೈಂಗಿಕ ಸಂಬಂಧ ಸಹಜವೆಂಬಂತೆ ಹೆಣ್ಣಿನ ಮಟ್ಟಿಗೆ ಇದು ಮಹಾ ಅಪರಾಧವಾಗಿ ಪರಿಗಣಿತವಾಗುತ್ತದೆ. ಹೀಗೆ ಇಲ್ಲಿ ಅಕ್ಕು ತನ್ನ ಗಂಡನನ್ನು ತಿರಸ್ಕರಿಸಿದರೂ ಗಂಡ, ಮಕ್ಕಳಿಗಾಗಿ ಹಂಬಲಿಸುತ್ತಾಳೆ. ಅದು ಈಡೇರದಾದಾಗ ಅನ್ಯ ಮಾರ್ಗದ ಮುಖಾಂತರ ಈಡೇರಿಸಿಕೊಳ್ಳುತ್ತಾಳೆ.

ವೈದೇಹಿ ಕಥೆಗಳಲ್ಲಿ ಮಾತೃಪ್ರಧಾನ ಕುಟುಂಬಗಳು ಕಂಡುಬರುತ್ತವೆ. 'ಹಕ್ಕಿಲ್ಲದವರು' ಕಥೆಯ ದೊಡಕ ಎಂಬ ಮಹಿಳೆಯ ನೇತೃತ್ವದಲ್ಲಿ ಮಾತೃಪ್ರಧಾನ ಕುಟುಂಬವಿದೆ. ಇಲ್ಲಿ ಹೆಣ್ಣುಮಕ್ಕಳಾದ ಸಿರಿ, ರಾಧ, ಮಗ ಪದ್ಮನಾಭಯ್ಯ, ವಾಸು ತಾಯಿಯ ಅಧೀನದಲ್ಲಿ ಬದುಕನ್ನು ನಡೆಸುತ್ತಾರೆ. ಆದರೆ ಈ ಕಥೆಯಲ್ಲಿ ತಂದೆಯ ಪಾತ್ರ ನೇಪಥ್ಯದಲ್ಲಿದೆ. ಸಿರಿ ಗಂಡನನ್ನು ಬಿಟ್ಟಿರುವ ಪರಿತ್ಯಕ್ತ ಮಹಿಳೆ. ಅಣ್ಣನ ಆಣತಿಯಂತೆ ತನಗೂ ಅನುಕೂಲವಾಗುವಂತೆ ಮಕ್ಕಳಸಮೇತ ತಾಯಿ ಮನೆಯಲ್ಲಿ ನೆಲೆಸಿ ಅವಳು, ತನ್ನ ತಂಗಿ ರಾಧ, ಎರಡು ಮಕ್ಕಳನ್ನು ಸಾಕಿ ಸಲಹುವುದರ ಮೂಲಕ ಆ ಕುಟುಂಬವನ್ನು ಪೋಷಿಸುತ್ತಾಳೆ. ಆದರೆ ಇಲ್ಲಿ ಸಿರಿ ಮನೆಯಲ್ಲಿ ಗಂಡು ದಿಕ್ಕಿಲ್ಲದ ಕಾರಣ ಆ ಮನೆಗೆ ತಾನೇ ಗಂಡಾಗಿ ತೋಟದ ಕೆಲಸ ಹಾಗೂ

ಮನೆ ಕೆಲಸ ಎರಡನ್ನು ನಿರ್ವಹಿಸುತ್ತಾಳೆ. ಆದರೆ ತನ್ನ ದಿನದ ಬಹುಸಮಯವನ್ನು ತೋಟದ ದುಡಿಮೆಯಲ್ಲಿ ಕಳೆಯುತ್ತಾಳೆ. ಮನೆಯ ತಾಯಿ, ತಂಗಿಯವರಿಗೆ ಅಡುಗೆ ಮಾಡಿ ಆಹಾರ ಒದಗಿಸುವಲ್ಲಿ ಸೋಲುತ್ತಾಳೆ. ಮಗಳ ಈ ವರ್ತನೆಯಿಂದ ದೊಡಕ ಬೇಸತ್ತಿದ್ದಾಳೆ. ತಾಯಿ ದೊಡಕನ ಪ್ರಕಾರ ಗಂಡನಿಲ್ಲದ ಮಹಿಳೆಗೆ ಅಸ್ತಿತ್ವವಿಲ್ಲ ಎಂಬಂತಾಗಿದೆ. ಹೀಗೆ ಪಾಳುಬಿದ್ದ ತೋಟವನ್ನು ಹಸನು ಮಾಡಿ ಒಂದು ಹದಕ್ಕೆ ತಂದು ಫಸಲು ಪಡೆಯುತ್ತಿರುವಾಗ ಈ ಭೂಮಿಯನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳಲು ಹವಣಿಸುತ್ತಿರುವ ಹಿರಿಯ ಅಣ್ಣನ ಬಗ್ಗೆ ಕೋಪ ಮತ್ತು ತಿರಸ್ಕಾರವಿದೆ. ಸಿರಿ ಪ್ರಕಾರ ತಾಯಿ ಮತ್ತು ತಂಗಿಯನ್ನು ನೋಡಿಕೊಳ್ಳುವ ತನಗೆ ಈ ಭೂಮಿ ಸೇರಬೇಕಾದದ್ದು ಎಂಬ ತುಡಿತವಿದ್ದು ಅದನ್ನು ಪಡೆಯಬೇಕೆಂಬ ಹಂಬಲವಿದೆ.

ಆದರೆ ಭೂಮಿ ಪಡೆಯುವ ಈ ಹಂಬಲಕ್ಕೆ ಕಿರಿ ಅಣ್ಣ ಪದ್ಮನಾಭಯ್ಯ ಅವಳ ಪರ ವಹಿಸುವುದಿಲ್ಲ. ತಾಯಿ ಮೌನಿಯಾದಾಗಲೇ ತಮ್ಮ ವಾಸು ಅವಳ ಪರವಾಗಿದ್ದುದೇ ಅವನ ಮಾನವೀಯತೆ ವ್ಯಕ್ತವಾಗುತ್ತದೆ. ಆದರೆ ಕೊನೆಗೂ ಸಿರಿಯ ಭೂಮಿ ಪಡೆಯುವ ಕನಸು ಕನಸಾಗಿ ಉಳಿಯುತ್ತದೆ. ಹೆಣ್ಣುಮಕ್ಕಳು ಅದನ್ನು ಪಡೆಯಲು ಸಾಧ್ಯವಾಗಿಲ್ಲ. ಈ ಕಥೆಯಲ್ಲಿ ರಕ್ತಸಂಬಂಧವನ್ನು ಎರಡು ಕುಟುಂಬಗಳು, ಎರಡು ವರ್ಗಗಳಲ್ಲಿ ಕಂಡುಬರುತ್ತವೆ. ಸಿರಿಯದು ಬಡಕುಟುಂಬ. ಸಿರಿಯ ಅಣ್ಣ ಪದ್ಮನಾಭಯ್ಯನದು ಶ್ರೀಮಂತ ಕುಟುಂಬ. ಸಿರಿ ಆರ್ಥಿಕವಾಗಿ ಅಸಹಾಯಕಳಾಗಿದ್ದಾಳೆ. ಅಣ್ಣನಾದ ಪದ್ಮನಾಭಯ್ಯ ಶ್ರೀಮಂತನಾಗಿದ್ದು ವಿದ್ಯಾವಂತ ಕುಟುಂಬವಾಗಿದೆ. ಸಿರಿ ತನ್ನ ಅಣ್ಣನ ಸಂಸಾರ ಮತ್ತು ತನ್ನ ಸಂಸಾರದ ಬಗ್ಗೆ ವ್ಯತ್ಯಾಸವನ್ನು ಕಂಡುಕೊಂಡ ಹಾಗೆ ಕಂಡುಕೊಳ್ಳುವಂತೆ ಅಣ್ಣನ ವರ್ತನೆ ಅವಳನ್ನು ಮತ್ತಷ್ಟು ಕುಗ್ಗಿಸುತ್ತದೆ. ಅಲ್ಲದೇ ಆತನ ವಿದ್ಯಾವಂತ ಮಕ್ಕಳ ಮುಂದೆ ಸಿರಿಯ ಮಕ್ಕಳು ಹೆಚ್ಚು ಅವಮಾನಕ್ಕೀಡಾಗುತ್ತಾರೆ. ಇಲ್ಲಿ ಹೆಣ್ಣುಮಕ್ಕಳು ತಾಯಿಯ ಆಣತಿಯಂತೆ ಅವಳ ಸ್ವಭಾವವನ್ನು ಹೆಚ್ಚು ಆಹ್ವಾನಿಸಿಕೊಳ್ಳುತ್ತಾರೆ. ತಾಯಿಯಂತೆ ಹೆಣ್ಣುಮಕ್ಕಳು ಹೆಚ್ಚು ಸಮಾಜೀಕರಣಗೊಳ್ಳುತ್ತಾರೆ. ಸಿರಿಯ ಅನಕ್ಷರಸ್ಥ ಮಕ್ಕಳು ತನ್ನ ಅಣ್ಣನ ವಿದ್ಯಾವಂತ ಮಕ್ಕಳ ನಡುವೆ ಮಾನಸಿಕವಾಗಿ ಕುಗ್ಗುವಿಕೆಯನ್ನು ಕಾಣುತ್ತಾರೆ. ಸಿರಿಯ ಮಗಳು ದನ ಮೇಯಿಸುವ ಕೆಲಸವನ್ನು ಅತ್ಯಂತ ಕೀಳರಿಮೆಯೆಂದು ತಿಳಿದು ಅದನ್ನು ಬಿಟ್ಟು ತನ್ನ ಸಮವಯಸ್ಕರೊಡನೆ ಮಾಡಲು ನಿರಾಕರಿಸುತ್ತಾಳೆ. ತನ್ನ ಅಣ್ಣನ ನೆರವು ಸಿಕ್ಕಾಗ ಆ ಕೆಲಸವನ್ನು ಮಾಡಲು ಮುಂದಾಗುತ್ತಾಳೆ. ಆದರೆ ಸಿರಿ ಮಗ ಹೆಚ್ಚು ಸ್ವತಂತ್ರ ಮನೋಭಾವದವನಾಗಿದ್ದು ಇತರ ಸಹಪಾಠಿಗಳೊಡನೆ ಯಾವುದೇ ಸಂಕೋಚವಿಲ್ಲದೆ ಬೆರೆಯುತ್ತಾನೆ. ಅಲ್ಲದೇ ಗ್ರಾಮ ಪರಿಸರದಲ್ಲಿ ಹಳ್ಳಿಹುಡುಗರಂತೆ ಮರ ಹತ್ತುವುದು, ಅಳಿಲು ಹಿಡಿಯುವುದು ಇವೇ ಮುಂತಾದವುಗಳ ಮೂಲಕ ತನ್ನ ಸಾಹಸವನ್ನು ಪ್ರದರ್ಶಿಸುವ ಮೂಲಕ ನಗರದ ಮಾವನ ವಿದ್ಯಾವಂತ ಮಕ್ಕಳು ಬೆರಗುಗೊಳ್ಳುವಂತೆ ಮಾಡುತ್ತಾನೆ. ಸಿರಿಯ ಅಣ್ಣ ಪದ್ಮನಾಭಯ್ಯ

ತನ್ನ ಹೆಣ್ಣುಮಕ್ಕಳನ್ನು ಅನುಕೂಲಸ್ಥ ಹುಡುಗರಿಗೆ ಕೊಟ್ಟು, ಅವರು ವಿದೇಶಗಳಲ್ಲಿ ನೆಲೆಸಿದ್ದು ಸುಖವಾಗಿದ್ದಾರೆ ಎಂದು ದೊಡಕನಿಗೆ ಅವರ ಹಿರಿಮೆಯನ್ನು ತಿಳಿಸುವುದರ ಮೂಲಕ ಸಿರಿಯನ್ನು ಅವಮಾನಿಸುತ್ತಾರೆ. ಸಿರಿಗೆ ಗಂಡಸನ್ನು ಅವಲಂಬಿಸಿ ಅವರ ಸೇವೆ ಮಾಡುತ್ತಾ ಸುಖದ ಪಟ್ಟಿ ಕಟ್ಟಿಕೊಂಡಿರುವ ಮಹಿಳೆಯ ಬಗ್ಗೆ ತಿರಸ್ಕಾರವಿದೆ. ಅಲ್ಲದೇ ತಾನು ತಾಯಿ, ತಂಗಿ, ತೋಟ ನೋಡಿಕೊಂಡು ತನ್ನ ಈ ಸೇವೆಗೆ ಯಾವ ಮೌಲ್ಯವಿಲ್ಲವೆಂದು ನೊಂದುಕೊಳ್ಳುತ್ತಾಳೆ. ಅಲ್ಲದೇ ತಾಯಿಗೆ ಸೇವೆ ಮಾಡದೆ ಯಾವುದೇ ಜವಾಬ್ದಾರಿಯಿಲ್ಲದೆ ಸ್ವತಂತ್ರವಾಗಿ ಸುಖವಾಗಿರುವ ತನ್ನ ಅಣ್ಣಂದಿರ ಬಗ್ಗೆ ಸಿರಿಕೋಪವಿದೆ. ಆದರೂ ಕೂಡ ಅಸೂಯೆಗೊಳ್ಳದೆ ತನ್ನ ಸಾಮರ್ಥ್ಯದಿಂದ ಸಹಿಸಿಕೊಂಡು ಬದುಕುವ ಧಾರಣ ಶಕ್ತಿಯಿದೆ. ಇಲ್ಲಿ ಸಿರಿಯ ನಾದಿನಿ ಜಲಜಬಾಯಿ ನಾದಿನಿಯ ಬಗ್ಗೆ ಆಗಾಗ ಕೊಂಕು ನುಡಿದರೂ ಅದು ಪ್ರೀತಿಯಿಂದಲೇ ಹೊರತು ನೈಜವಾದುದಲ್ಲ. ಹೀಗಾಗಿ ಗಂಡ ತನ್ನ ಹೆಣ್ಣುಮಕ್ಕಳ ವಿದೇಶ ವಾಸದ ಬಗ್ಗೆ ಹಿರಿಮೆಯನ್ನು ಹೇಳಿಕೊಳ್ಳುವಾಗ ಅನಗತ್ಯ, ಅನಾವಶ್ಯಕವೆಂದು ಸುಮ್ಮನಿರುತ್ತಾಳೆ. ಹೀಗೆ ತನ್ನ ಅಣ್ಣನ ಮನೆಯ ಅಂತಸ್ತಿಗೆ ಎದುರಾಗಿ ತಾನು ಸಹ ತನ್ನ ಸ್ವಂತ ದುಡಿಮೆಯಿಂದ ಮಗಳಿಗೆ ಒಡವೆಗಳನ್ನು ಮಾಡಿಸಿರುವುದಾಗಿ ತೋರಿಸಿಕೊಳ್ಳುತ್ತಾಳೆ. ಆದರೆ ಸಿರಿ ಹೆಚ್ಚು ಕುಗ್ಗುತ್ತಾಳೆ. ತನ್ನ ಸ್ಥಿತಿಯ ಬಗ್ಗೆ ಮರುಗುತ್ತಾಳೆ. ಇರುವ ಸ್ಥಿತಿಯನ್ನು ಒಪ್ಪಿಕೊಂಡು ಬದುಕುತ್ತಾಳೆ.

ಹೀಗೆ ಇಲ್ಲಿ ಪ್ರತಿ ಕ್ಷಣಕ್ಕೂ ಅಣ್ಣ ತನ್ನ ಹಿರಿಮೆಯನ್ನು ವ್ಯಕ್ತಪಡಿಸುವಾಗ ಸಿರಿ ಆದಷ್ಟು ಸಹನೆಯಿಂದ ವರ್ತಿಸಿ ಕಲಹಕ್ಕೆ ಎಡೆ ಮಾಡಿಕೊಡದೆ ಸಂಭಾಳಿಸುವ ಧಾರಣಶಕ್ತಿ ಇಲ್ಲಿನ ಸ್ತ್ರೀಯರಿಗೆ ಒದಗಿಬಂದಿದೆ. ಸಿರಿ ಅದೆಷ್ಟೇ ಕಾಪಾಡಿಕೊಂಡು ಬಂದರೂ ವಿಷಯ ಬಹಿರಂಗಗೊಂಡಾಗ ಹೆಚ್ಚು ಕುಗ್ಗುತ್ತಾಳೆ. ತನ್ನ ತಪ್ಪಿಲ್ಲದಿದ್ದರೂ ಗಂಡ ಹಾಗೆ ಬಿಟ್ಟು ಹೋಗುವುದು ಹೆಣ್ಣಿನ ಅಪರಾಧವೆಂಬಂತೆ ತಲೆತಗ್ಗಿಸುತ್ತಾಳೆ. ಗಂಡನ ವಿಕಾರತೆಯನ್ನು ಮರೆಮಾಚಿ ಆತನ ಪರವಾಗಿ ಮಾತನಾಡಿ ಆತನನ್ನು ಸಂರಕ್ಷಿಸುವ ಮೂಲಕ ಮರ್ಯಾದೆಗೆ ಕಟ್ಟುಬಿದ್ದು ಸಾಂಪ್ರದಾಯಿಕ ಹೆಣ್ಣಾಗಿ ಕಾಣುತ್ತಾಳೆ. ಅಲ್ಲದೇ ದೊಡಕ ತಾಯಿ ತನ್ನ ಮೊಮ್ಮಕ್ಕಳಾಗಿ ಸಿಕ್ಕಿರುವ ಬಗ್ಗೆ ಸಂತೋಷಪಡುತ್ತಾ ಅದು ಅವರ ಪುಣ್ಯ ಎಂಬಂತೆ ಮಾತನಾಡುತ್ತಾಳೆ. ಸಿರಿಗೆ ಅದು ಲಭ್ಯವಿಲ್ಲವೆಂಬಂತೆ ನೋಡುತ್ತಾಳೆ. ಹೀಗೆ ಸಿರಿ ತಾಯಿ, ಹುಚ್ಚು ತಂಗಿ ರಾಧ, ಮಕ್ಕಳು ತೋಟ ನೋಡಿಕೊಳ್ಳುತ್ತಾ ಆ ಮನೆಯನ್ನು ನೋಡಿಕೊಂಡಳು. ಅವಳಿಗೆ ಗಂಡ ಇಲ್ಲ ಎಂಬ ಕಾರಣದಿಂದ ತಾಯಿಯಾದ ಆಕೆಯನ್ನು ಮನೆಯ ಇತರ ಸದಸ್ಯರು ಕೀಳಾಗಿ ಕಾಣುತ್ತಾರೆ. ಹೀಗೆ ಇಲ್ಲಿ ಸಿರಿಯು ತಾಯಿಯ ಆರೈಕೆ ಮಾಡುವ ಜವಾಬ್ದಾರಿ ನಿರ್ವಹಿಸುತ್ತಿದ್ದು ಇತರ ಗಂಡುಮಕ್ಕಳು ಉದ್ಯೋಗ, ಮಕ್ಕಳ ಒಳಿತಿಗಾಗಿ ಬೇರೆ ಸ್ಥಳದಲ್ಲಿ ವಾಸಿಸುತ್ತಾ ತನ್ನ ಕರ್ತವ್ಯದಿಂದ ನುಸುಳಿಕೊಳ್ಳುತ್ತಾರೆ. ಆದರೆ ಸಿರಿ ತಾಯಿಯ ಆರೈಕೆ ಮಾಡುತ್ತಾ ಆ ಕುಟುಂಬವನ್ನು ಪೋಷಿಸುತ್ತಿದ್ದು, ಅವಳಿಗೆ ತಾನು ಉತ್ತು ಬಿತ್ತು ಬೆಳೆಸಿದ

ಭೂಮಿಯ ಮೇಲೆ ಹಕ್ಕನ್ನು ಹೊಂದಲು ಆ ಮನೆಯ ಒಡೆಹುಟ್ಟಿದವರು ಅನುವು ಮಾಡಿಕೊಡುವುದಿಲ್ಲ. ಹೀಗೆ ಇಲ್ಲಿ ಗಂಡನಿಲ್ಲದ ಮಹಿಳೆ ಆರ್ಥಿಕವಾಗಿ ಅಸಹಾಯಕವಾಗಿದ್ದರೂ ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಬದುಕುವ ಧಾರಣಶಕ್ತಿಯನ್ನು ಕಾಣುತ್ತೇವೆ. ರಕ್ತಸಂಬಂಧಿಗಳ, ಹುಟ್ಟಿದವರ, ಸಹೋದರ, ಸಹೋದರಿಯರ ನಡುವೆ ವರ್ಗತಾರತಮ್ಯವನ್ನು ಕಾಣುತ್ತೇವೆ.

ಈ ಕುಟುಂಬಕ್ಕೆ ಪೂರಕವಾಗಿರುವ ಮತ್ತೊಂದು ಕಥೆ "ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ" ಕಥೆಯ ವಾಗತ್ತೆ ಮನೆತನದ್ದು. ವಾಗಿತ್ತೆಯ ಮೊಮ್ಮಗಳ ವಿವಾಹ ಸಮಾರಂಭದಲ್ಲಿ ಪ್ರಾರಂಭವಾಗುವ ಈ ಕಥೆಯಲ್ಲಿ ವಾಗಿತ್ತೆ ಹಿರಿಯ ಮಹಿಳೆ. ವಿಧವೆ, ವಾಗಿತ್ತೆಯ ಸಮಾನ ವಯಸ್ಸಾದ ಹಿರಿಯ ತಲೆಮಾರುಗಳಾದ ಮುತ್ತಜ್ಜಿ, ಕಾಟಜ್ಜಿ, ಹೆಬ್ಬಾಗಿಲಜ್ಜಿ, ಸರಸಜ್ಜಿ ಮುಂತಾದವರು ವಿಧವೆಯರಾಗಿದ್ದು ವಿವಾಹ ಮಂಟಪದಿಂದ ದೂರ ತಮಗೆ ಕಾಯ್ದಿರಿಸಿದ ಜಾಗದಲ್ಲಿ ಕುಳಿತು ತಮ್ಮ ಆಚಾರ ವಿಚಾರ, ವಿವಾಹಶಾಸ್ತ್ರ, ಮಡಿಮೈಲಿಗೆಯ ಕುರಿತು ತಾವು ಅನುಸರಿಸಿಕೊಂಡು ಬಂದ ಸಂಪ್ರದಾಯದ ಬಗ್ಗೆ ಅವರಿಗೆ ಸಮಾಧಾನವಿದೆ. ಅಲ್ಲದೇ ಇಂದಿನ ಕಿರಿಯ ತಲೆಮಾರುಗಳು ಅದನ್ನು ಉಲ್ಲಂಘಿಸುತ್ತಿರುವ ಬಗ್ಗೆ ಕೋಪವಿದೆ. ಈ ಉಲ್ಲಂಘನೆಗೆ ಕಾರಣವಾಗುವ ಅವರ ತಾಯಂದಿರ ಬಗ್ಗೆ ಸಿಟ್ಟಿದೆ. ಕಾರಣ ಈ ಕುಟುಂಬವನ್ನು ತಾಯಿ ಮಗಳನ್ನು ಸಮಾಜೀಕರಣಗೊಳಿಸುವುದು ಪ್ರಮುಖ ಕರ್ತವ್ಯವಾಗಿದೆ. ಇಲ್ಲಿ ವಿವಾಹ ಸಂಬಂಧ ಹಾಗೂ ಕುಟುಂಬಗಳು ಹೆಚ್ಚು ಏರ್ಪಡುವುದು ರಕ್ತಸಂಬಂಧಗಳಲ್ಲಿ. ಅಲ್ಲದೇ ಇಲ್ಲಿ ವಾಗಿತ್ತೆಗೆ ತನ್ನ ಕಿರಿಯ ಪುರುಷರಿಗೆ ಮಾರ್ಗಸೂಚಿಯಾಗಿ ಅವರ ಹೆಣ್ಣುಮಕ್ಕಳನ್ನು ವಿವಾಹಬಂಧನಕ್ಕೆ ಒಳಪಡಿಸುವಂತೆ ಸೂಚಿಸಲಾಗುತ್ತದೆ. ಅದೇ ರೀತಿ ಅಲ್ಲಿನ ಪುರುಷರು ತನ್ನ ಮಕ್ಕಳನ್ನು ಹಿರಿಯರ ಆಣತಿಯಂತೆ ಮೊದಲು ಸಿದ್ಧರಿರುತ್ತಾರೆ. ವಾಗಿತ್ತೆಯ ದೂರದ ಸಂಬಂಧ ವಾಸುದೇವರ ಮಗಳು ಇಲ್ಲಿ ಇಷ್ಟವಿರಲಿ ಬಿಡಲಿ ತಂದೆ, ಹುಡುಗನ ತಂದೆ, ವರ ವಿವಾಹಕ್ಕೆ ಒಪ್ಪಿದರೆ ಸಂಬಂಧ ಕುದುರಿದಂತೆ ಭಾವಿಸುತ್ತಾರೆ. ಇಲ್ಲಿ ಅವಳಿಗೆ ಆಯ್ಕೆಗಳಿಲ್ಲ. ಅಲ್ಲದೇ ಇಲ್ಲಿ ಹೆಣ್ಣು ತನ್ನ ಆಯ್ಕೆಯು ಅವಶ್ಯಕ ಎಂದು ಆಲೋಚನೆ ಮಾಡುವಷ್ಟು ಅಸಮರ್ಥಳಾಗಿದ್ದಾಳೆ. ಈ ಹಿರಿಯ ಅಜ್ಜಿಯರಿಗೆ ತಮ್ಮ ಕಾಲದಲ್ಲಿ ಮಾಡಿದ ಸುಬ್ಬಕ್ಕನ ವಿವಾಹದ ಬಗ್ಗೆ ಮಾತನಾಡುವುದು ಹಿರಿಮೆಯ ಸಂಗತಿಯಾಗಿದೆ. ಕಾರಣ ಸುಬ್ಬಕ್ಕ ಸಿರಿವಂತಳು. ಇಲ್ಲಿ ಸುಬ್ಬಕ್ಕ ತನ್ನ ವಿವಾಹದಲ್ಲಿ ಗಂಡಿನ ಮದುವೆ ದಿಬ್ಬಣ ನೋಡಿದ್ದು ಮಹಾ ಅಪರಾಧವಾಗಿ ಅಲ್ಲಿನ ಹಿರಿಯ ಅಜ್ಜನಿಂದ ಅವಮಾನಗೊಂಡಿದ್ದಳು. ಈಗಲೂ ಸಹ ಗಂಡನ ಆಣತಿಯಂತೆ ನಡೆಯುವಳು. ಗಂಡ ಎಲ್ಲಿ ಹೋದರೂ ಬಂದರೂ ಅದನ್ನು ಕೇಳುವ ಹಕ್ಕು ನಮ್ಮದಲ್ಲ ಎಂದು ಭಾವಿಸುವ ಮನೋಭಾವದವಳು. ಆದರೆ ಸುಬ್ಬಕ್ಕನ ಮೈದಿನಿಯ ಮಗಳು ವಿದ್ಯಾವಂತೆ. ಮಗಳು ತಡೆಯದೆ "ಅರರೆ! ಮದುವೆ ಮನೆಗೆ ಬರುತ್ತೇನೆ ಅಥವಾ ಇಲ್ಲ ಎನ್ನಲೂ

ಆಗುವುದಿಲ್ಲವಂತಾ ಮಾವಯ್ಯನಿಗೆ? ಇದು ಯಾವ ದೊಡ್ಡ ಕೆಲಸ? ಅದನ್ನು ಹೆಂಗಸರ ಹತ್ತಿರ ಹೇಳಿದರೆ ಏನಾಗುತ್ತದೆಯಂತೆ?"(ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ, ಪುಟ-೩೬೨) ಎಂದು ಪ್ರಶ್ನಿಸುವ ಅವಳ ಮನೋಭಾವನೆಯನ್ನು ತಾಯಿಯಾಗಿ ಹಿರಿಯ ಅಜ್ಜಿ ವಾಗತ್ತೆಯಿಂದ ಎಲ್ಲರೂ ನಿಂದನೆಯನ್ನು ಕೇಳಬೇಕಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ ವಾಗಿತ್ತೆ "ಹೆಣ್ಣೇ, ಏನಂತ ತಿಳಿದಿದ್ದಿ? ಮುಂಚಿನ ಕಾಲದ ಗಂಡಸರೇ ಹೀಗೆ, ಹೆಂಗಸರನ್ನು ಎಲ್ಲಿ ಇಡಬೇಕೋ ಅಲ್ಲೇ ಇಟ್ಟಿದ್ದಕ್ಕೆ ಬಚಾವಾದರು. ಆಸ್ತಿ, ಮನೆ, ಚಿನ್ನ, ಬಣ್ಣ ಮಾಡಿದರು. ಈಗಿನವರಂತೆ ಹೆಂಡತಿ ಕೂತದ್ದೆ ಚಂದ, ನಿಂತಿದ್ದೆ ಚಂದ ಎಂದಿದ್ದರೆ ಗಂಡನಾದವ ಕವುಂಚಿಯೇ ಹೋಗುವುದಲ್ಲವೆ? ನಮ್ಮ ತಮ್ಮಣ್ಣಯ್ಯನಂತಹ ಗಂಡಸರು ಇಂತಹ ರಾಷ್ಟ್ರದೊಳಗೆ ಸಿಗಲಿಕ್ಕಿಲ್ಲ"(ಅದೇ ಪುಟ ೩೬೨). ಇಲ್ಲಿ ಅಧಿಕಾರವನ್ನು ಮನ್ನಿಸುತ್ತಾ ಪುರುಷಪ್ರಧಾನ ಕುಟುಂಬದ ವಾಹಕಿಯಾಗಿ ಅದನ್ನು ತಲೆತಲಾಂತರಗಳಿಗೆ ಮುಂದುವರಿಸುತ್ತಾರೆಯೇ ಹೊರತು ತಮ್ಮ ಆಲೋಚನೆಗಳನ್ನು ಬದಲಾಯಿಸರು. ಮೂಢರು, ಸಂಪ್ರದಾಯವಾದಿಗಳು. ಮೈದಿನಿಗೆ ವಾಗತ್ತೆ ತನ್ನ ಮಗಳಿಗೆ ಬೇರೆ ರೀತಿಯಲ್ಲಿ ತಿಳುವಳಿಕೆ ನೀಡದೆ ನೇರವಾಗಿ ನಿಂದಿಸಿದ್ದ ಸುಬ್ಬಕ್ಕ ಹಾಗೂ ಮೈದಿನಿ ಮಾತನಾಡದೆ ಮೂಕರಾದರು. ಮೈದಿನಿಗೆ ಕೋಪ ಬರಲು ಹತ್ತಿರ ಸಂಬಂಧಿಯಾದ ತನಗೆ ವಾಗತ್ತೆ ಕೇವಲ ರವಿಕೆ ಕೊಟ್ಟು ತನಗಿಂತಲೂ ದೂರದ ಸಂಬಂಧಿಯಾದ ಸಿರಿವಂತ ಸುಬ್ಬಕ್ಕನಿಗೆ ರೇಷ್ಮೆ ಸೀರೆ ಕೊಟ್ಟಿದ್ದು ಸಹಿಸಲಾರದಾಗಿ ಪ್ರತಿಭಟಿಸಿದಳು. ಹಾಗೆ ಇಲ್ಲಿ ಗಂಡನಿಲ್ಲದ ಮೈದಿನಿ ಬಡವಳಾಗಿದ್ದು, ಗಂಡನಿರುವ ಸಿರಿವಂತ ಸುಬ್ಬಕ್ಕ ಎಲ್ಲರಿಂದ ಗೌರವಕ್ಕೆ ಪಾತ್ರವಾಗಿ ಬೆಲೆಬಾಳುವ ವಸ್ತುಗಳನ್ನು ಪಡೆಯುವುದರ ಮೂಲಕ ಒಡಹುಟ್ಟಿದವರ ಮನೆತನಗಳ ನಡುವೆ ವರ್ಗಸಂಘರ್ಷವನ್ನು ಕಾಣಬಹುದಾಗಿದೆ. ಇಲ್ಲಿ ಸುಬ್ಬಕ್ಕನ ತಂದೆ, ಅವಳ ಗಂಡ ತಮ್ಮಣ್ಣಯ್ಯ ವ್ಯಭಿಚಾರಿಯಾದರೂ ಹಣವುಳ್ಳವನು ಎಂಬ ಕಾರಣದಿಂದ ಮಗಳ ಒಪ್ಪಿಗೆ ಕೇಳದೆ ವಿವಾಹ ಮಾಡಿದರು. ಸುಬ್ಬಕ್ಕ ತಂದೆಯಂತೆ ನಡೆದುಕೊಂಡಳು. ಆದರೆ ಅವಳ ಮಗಳು ಲತಾ ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಂಡಿದ್ದರೂ ಅದನ್ನು ಹೇಳುವ ಧೈರ್ಯ ಸಾಲದು. ಹೀಗೆ ಅಲ್ಲಿನ ಪತಿಯರು ಸಂಗಾತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ ಅದನ್ನು ಪಡೆದುಕೊಳ್ಳುವ ಧೈರ್ಯ ಈ ಯುವತಿಯರಿಗೆ ಇರದೆ ಸಂಪ್ರದಾಯವಾದಿಗಳಾಗಿದ್ದಾರೆ. ಆದರೆ ಎಲ್ಲ ವಿವಾಹ ಸಮಾರಂಭದಲ್ಲಿ ವಾಸು ಮಗನ ಮಗಳಿಗೆ ಹಾಗೂ ಭೀಮರಾಯನ ಮಗನಿಗೆ ವಿವಾಹಸಂಬಂಧ ನಿಶ್ಚಯವಾಗಿ ಹಿರಿಯರ ಆಣತಿಯಂತೆ ಜಾತಕ ನೋಡಲು ಪ್ರಾರಂಭಿಸುತ್ತಾರೆ. ಆದರೆ ಈ ಆಚರಣೆಯನ್ನು ಕುರಿತು ಅಂದಿನ ಯುವಪೀಳಿಗೆ ಸಮಾಜಶಾಸ್ತ್ರಜ್ಞೆ ಹಾಗೂ ಸುಬ್ಬಕ್ಕನ ಮಗಳು ಲತಾ "ಅಲ್ಲ ಹುಡುಗ ಒಪ್ಪಿದ ಮೇಲೆ ಹುಡುಗಿಗೂ ಒಪ್ಪಿಗೆಯೇ ಎಂದು ವಿಚಾರಿಸಿ, ಆಕೆ ಒಪ್ಪಿದಳೆಂದಾದರೆ ಸ್ವಸ್ಥ ಮದುವೆ ಮಾಡುವುದು ಬಿಟ್ಟು, ಭೀಮರಾಯರಿಗೆ ಮತ್ತು ಆ ವಾಸುದೇವರಾಯರ ಮಗನಿಗೆ ಜಾತಕದ ಸುದ್ದಿಯೇಕೆ?"(ಅದೇ, ಪುಟ ೩೬೫) ಎಂದು

ತನ್ನಲ್ಲೇ ಹೇಳಿಕೊಳ್ಳುತ್ತ ಹೆಣ್ಣಿನ ಆಯ್ಕೆಯೇ ಅಗತ್ಯ ಎಂಬುದನ್ನು ಹೇಳುತ್ತಾ ಧಾರ್ಮಿಕ ಕಂದಾಚಾರಗಳನ್ನು ವಿರೋಧಿಸುತ್ತಾರೆ. ಆದರೆ ಇದು ಸ್ವಗತ ಮಾದರಿಯಲ್ಲೇ ಹೊರತು ಅದನ್ನು ಸಾಧಿಸುವ ಮನೋಭಾವ, ಧೈರ್ಯ ಈ ಪಾತ್ರಗಳಲ್ಲಿ ಮೂಡಿಬಂದಿಲ್ಲ.

ಈ ಕಥೆಯನ್ನು ಹೋಲುವ ಮತ್ತೊಂದು ಕಥೆ 'ಮರಗಿಡಬಳ್ಳಿ'ಯ ಮಂದಕ್ಕನ ಪಾತ್ರ ಚಿತ್ರಣ. ಮಂದಕ್ಕ ಮಧ್ಯವಯಸ್ಸು ದಾಟಿರುವ ಮಹಿಳೆ. ಆಕಸ್ಮಿಕವಾಗಿ ಬಿದ್ದು ಹಾಸಿಗೆ ಹಿಡಿದು ಬಾಯಿ ಕಳೆದುಕೊಂಡು ಅಳುವಿನ ಮೂಲಕ ತನ್ನ ಭಾವನೆಗಳನ್ನು ವ್ಯಕ್ತಪಡಿಸುವ ವಯಸ್ಸಾದ ಮಹಿಳೆ. ಈ ಮಹಿಳೆ ತನ್ನ ಕೋಮಾವಸ್ಥೆಯಲ್ಲಿ ತಾನು ವಿವಾಹವಾಗಿ ಬಂದು, ಜನರಿಂದ ಕೂಡಿರುವ ಗಂಡನ ಮನೆಯಲ್ಲಿ ಬಿಡುವಿಲ್ಲದ ಕೆಲಸದಲ್ಲಿ ಹಿರಿಯರ ಆಣತಿಯಂತೆ, ಗಂಡನ ಇಚ್ಛೆಯಂತೆ ಯಾವುದೇ ಸ್ವಾತಂತ್ರ್ಯವಿಲ್ಲದೆ ಬದುಕಿದಳು. ತಾನು ಬಾಳಿದ ಈ ಕೂಡುಕುಟುಂಬದ ಕಷ್ಟ ಮಗಳು ಶಾರದೆಗೆ ಬಾರದಿರಲು ಹಳ್ಳಿಯ ಜೀವನದಿಂದ ಮುಕ್ತವಾದ ನಗರ ಪರಿಸರದಲ್ಲಿ ಗಂಡ ಮಾತ್ರವಿರುವ ಅತ್ತೆ ಮಾವಂದಿರ, ಇತರ ಸದಸ್ಯರ ಹಿಂಸೆಯಿಲ್ಲದ ಮನೆಗೆ ಮಗಳನ್ನು ವಿವಾಹ ಮಾಡಿದ್ದು ನೆಮ್ಮದಿಯೆನಿಸಿದೆ. ಹೀಗೆ ಇಲ್ಲಿ ಕೂಡುಕುಟುಂಬದಿಂದ ಸರಳಕುಟುಂಬಕ್ಕೆ ಹಿರಿಯರ ಮನ ಪರಿವರ್ತನೆಯಾಗಲು ಕಾರಣ ಅವಳು ತನ್ನ ಗಂಡನ ಮನೆಯಲ್ಲಿ ಅನುಭವಿಸಿದ ಸ್ವ ಅನುಭವದ ದುಡಿಮೆ ಕಾರಣವಾಗಿದೆ. ಈ ಮಂದಕ್ಕ ತಾನು ತನ್ನ ಗಂಡ, ಮನೆ, ಮಕ್ಕಳಿಗಾಗಿ ತನ್ನ ಜೀವನವನ್ನು ಸವೆಸಿದಳು. ಅದಕ್ಕೆ ಪ್ರತಿ ಉಪಕಾರವೆಂಬಂತೆ ತನ್ನ ಈ ಇಳಿವಯಸ್ಸಿನಲ್ಲಿ ತನ್ನ ಮಕ್ಕಳು ತನ್ನನ್ನು ರಕ್ಷಿಸಲಿ, ಸೇವೆ ಮಾಡಲಿ ಎಂದು ಬಯಸುತ್ತಾಳೆ. ಆದರೆ ಈ ಬಯಕೆಯ ಹಿಂದೆ ಅವಳ ಸ್ವಾರ್ಥವಿರದೆ ತಾಯಿ ಮಗುವಾಗಿ, ಮಕ್ಕಳು ತಂದೆ–ತಾಯಿಯಂತೆ ಅವರಿಂದ ನಿಸ್ವಾರ್ಥ ಪ್ರೀತಿಯನ್ನು ಬೇಡುವುದು ತನ್ನ ಹಕ್ಕು ಎಂಬ ಭಾವನೆ ಮಂದಕ್ಕನದು. ಆದರೆ ಅವಳ ಈ ಭಾವನೆಯನ್ನು ಅರ್ಥ ಮಾಡಿಕೊಂಡು ತಾಯಿಯ ಸೇವೆ ಮಾಡಬೇಕಾದದ್ದು ತನ್ನ ಕರ್ತವ್ಯವೆಂಬಂತೆ ಹಿರಿಯ ಮಗ ಶ್ರೀಧರ ಮತ್ತು ಸೊಸೆ ಅವಳ ಆರೈಕೆ ಮಾಡುತ್ತಾರೆ. ಅವಳ ಮಲಮೂತ್ರಗಳನ್ನು ತೆಗೆಯುವ ಅವಳ ಕೊಳಕಾದ ಬಟ್ಟೆಗಳನ್ನು ಶುಚಿಗೊಳಿಸುವುದರ ಮೂಲಕ ಅವಳಿಗೆ ಬೇಕಾದ ಆಹಾರ ಪದಾರ್ಥಗಳನ್ನು ಇರುವಲ್ಲಿ ಸಕಾಲಕ್ಕೆ ಒದಗಿಸುವುದರ ಮೂಲಕ ತಮ್ಮ ಕರ್ತವ್ಯವನ್ನು ಮಾಡುತ್ತಾರೆ. ಮಂದಕ್ಕನಿಗೆ ಸೊಸೆಯ ಕಾಳಜಿಯ ಬಗ್ಗೆ ಮೆಚ್ಚುಗೆಯಿದೆ, ಪ್ರೀತಿಯಿದೆ. ಆದರೆ ಈ ಪ್ರೀತಿಯನ್ನು ಮಗಳು ಶಾರದೆಯಲ್ಲಿ ಕಾಣಬಯಸುತ್ತಾಳೆ. ತನಗಾದ ಈ ವ್ಯವಸ್ಥೆಯನ್ನು, ಕಷ್ಟವನ್ನು ಮನಸ್ಸು ಬಿಚ್ಚಿ ಹೇಳಿಕೊಂಡು ನಿರಾಳವಾಗಲು ಬಯಸುತ್ತಾಳೆ. ಆದರೆ ಶಾರದೆ ತಾಯಿ ಬಯಸುವ ಸೇವೆ ಮಾಡದೆ ತನಗಾದಷ್ಟು ಮಾಡಿ ಕರ್ತವ್ಯದಿಂದ ನುಣುಚಿಕೊಳ್ಳುತ್ತಾಳೆ. ಅದೇ ರೀತಿ ತಾನು ಸಾಕಿದ ಕಿರಿ ಮಗ ವಾಸು ವಿದೇಶದಲ್ಲಿ ವೃತ್ತಿನಿರತನಾಗಿದ್ದು ಅವನ ಬರುವಿಕೆಗಾಗಿ ಕಾಯುತ್ತಾಳೆ. ಅವನ ಪ್ರೀತಿಯನ್ನು ಬಯಸುತ್ತಾಳೆ. ಆದರೆ ಕಿರಿಮಗ ತಡವಾಗಿ ಬಂದು ತಾಯಿಯ

ಯೋಗಕ್ಷೇಮವನ್ನು ವಿಚಾರಿಸಿ ಹೋಗುತ್ತಾನೆ. ಅಲ್ಲದೇ ತಾಯಿಗೋಸ್ಕರ ಹಣ್ಣನ್ನು ತರುವುದು ಔಪಚಾರಿಕ ಪ್ರೀತಿಯೆಂದು ಭಾವಿಸುತ್ತಾನೆ. ಆದರೆ ಹೀಗೆ ತಾಯಿ ಯಾವುದೇ ವಸ್ತುವನ್ನು ತರುವುದರ ಹಿಂದೆ ವಾತ್ಸಲ್ಯ, ಪ್ರೀತಿ ಇರುತ್ತದೆ ಎಂದು ಅರಿಯದ ಮಗನ ಬಗ್ಗೆ ಅಸಮಾಧಾನವಿದೆ. ಅಲ್ಲದೇ ತಾನು ಮಗನಿಗಾಗಿ ಮಾಡಿದ ತ್ಯಾಗವನ್ನು ನೆನೆದು ನೊಂದುಕೊಳ್ಳುವಳು. ಹಿರಿಯ ಮಗ ಶ್ರೀಧರ ಉದ್ಯೋಗದ ಸಲುವಾಗಿ ಮುಂಬಯಿಗೆ ಹೋಗುವ ಒತ್ತಡದಿಂದ ತಾಯಿಯನ್ನು ನೋಡಿಕೊಳ್ಳುವುದು ಸಮಸ್ಯೆಯಾಗಿ ಮಗಳು ತನ್ನ ಗಂಡನ ಮನೆಯ ಕರ್ತವ್ಯದಿಂದ ಹಿಂದೆ ಸರಿದಳು. ಕಿರಿಮಗ ವಿದೇಶಕ್ಕೆ ಹೋಗುವ ಕಾರಣ ತಾಯಿಯನ್ನು ನೋಡಿಕೊಳ್ಳಲಾಗುವುದಿಲ್ಲ. ಹಾಗಾಗಿ ಶ್ರೀಧರನು ವೃತ್ತಿಗಾಗಿ ಬೇರೆ ಊರಿಗೆ ಹೋಗುವ ಅನಿವಾರ್ಯವಾಗಿದೆ ಎಂದು ಹೇಳುವ ಕಿರಿಮಗನ ಕರ್ತವ್ಯದಂತೆ ವರ್ತಿಸುವುದು ತಾಯಿಗೆ ಅಸಮಾಧಾನವಾಗಿದೆ. ಹೀಗಾಗಿ ಸೊಸೆಯನ್ನು ತವರಿಗೆ ಕಳುಹಿಸುವ ತೀರ್ಮಾನವಾಯಿತು. ಅಲ್ಲದೇ ತಾಯಿಯನ್ನು ಸೊಸೆಯ ಮನೆಗೆ ಕಳುಹಿಸುವುದು ಸರಿಯಲ್ಲ. ಕಾರಣ ಅವರು ಹೆಣ್ಣು ಕೊಟ್ಟ ನೆಂಟರು. ಹಾಗಾಗಿ ಕಿರಿಮಗನ ಸಲಹೆಯಂತೆ ತಾಯಿಯನ್ನು ನೋಡಿಕೊಳ್ಳಲು ಒಬ್ಬ ದಾದಿಯನ್ನು ನೇಮಿಸುವ ಎಂದು ಮಂದಕ್ಕನ ಮಕ್ಕಳ ತೀರ್ಮಾನಿಸಿದರು. ಇಲ್ಲಿ ಮಂದಕ್ಕ ದಾದಿಯನ್ನು ನೇಮಿಸುವುದು ಒಪ್ಪಿಗೆಯಿಲ್ಲದಿದ್ದರೂ ತನ್ನ ಬದುಕಿಗಾಗಿ ಮಕ್ಕಳ ಭವಿಷ್ಯವನ್ನು ಹಾಳುಮಾಡಬಾರದೆಂದು ಒಲ್ಲದ ಮನಸ್ಸಿನಿಂದ ಮಕ್ಕಳ ತೀರ್ಮಾನವನ್ನು ಕಣ್ಣೀರ ಮೂಲಕ ಸಮ್ಮತಿಸುತ್ತಾಳೆ. ಹೀಗೆ ಒಪ್ಪಿಕೊಳ್ಳುವಾಗ ಮಕ್ಕಳ ಪ್ರೀತಿಗಾಗಿ ಹಾತೊರೆಯುತ್ತಾಳೆ. ಇಲ್ಲಿ ಮಂದಕ್ಕ ತನ್ನ ಹೆತ್ತ ಕರುಳಿಗಿಂತ ಯಾವುದೇ ರಕ್ತಸಂಬಂಧವಿಲ್ಲದ ಸೊಸೆಯಲ್ಲಿ ಮಗಳ ಪ್ರೀತಿಯನ್ನು ಕಾಣುತ್ತಾಳೆ. ಅದೇ ರೀತಿ ಸೊಸೆಯು ಅತ್ತೆಯನ್ನು ಬಿಟ್ಟುಕೊಡದೆ, ಒಪ್ಪಿಕೊಳ್ಳಲಾರದೆ ಅತಂತ್ರ ಸ್ಥಿತಿಯಲ್ಲಿರುತ್ತಾಳೆ. ಅಲ್ಲದೇ ಮಂದಕ್ಕ ತಾನು ಯೌವನಾವಸ್ಥೆಯಲ್ಲಿದ್ದಾಗ ತನ್ನ ತಾಯಿಗೂ ತಾನು ಹಂಗಿಸಿದ ಅವಳ ಕೆಲಸಗಳ ಬಗ್ಗೆ ಬೇಸರಿಸಿದ ಬಗ್ಗೆ ನೆನೆದು ತನ್ನ ಮಕ್ಕಳು ತನಗೆ ಹೀಗೆ ಬೇಸರವಾಗುವುದು ಸಹಜ ಎಂಬ ತೀರ್ಮಾನಕ್ಕೆ ಬರುತ್ತಾಳೆ. ಹೀಗೆ ವಯಸ್ಸಾದ ವ್ಯಕ್ತಿಯ ಬಗ್ಗೆ ಮಕ್ಕಳು ತೋರಿಸುವ ಔದಾರ್ಯ, ಪಲಾಯನವಾದಿತನ ಕರ್ತವ್ಯಗಳ ಬಗ್ಗೆ ತಿಳಿಸುತ್ತದೆ. ಹೀಗೆ ವೃತ್ತಿನಿಮಿತ್ತ ಬೇರೆ ಊರುಗಳಿಗೆ ಹೋಗಿ ನೆಲೆಸುವ ಸಂದರ್ಭ ಬಂದಾಗ ತಾಯಿ ಒಂಟಿಯಾಗಿ, ಅನಾಥರಾಗಿ ಬದುಕುವ ಪರಿಸ್ಥಿತಿ ಬರುತ್ತದೆ. ಈ ಸಂದರ್ಭದಲ್ಲಿ ಕಿರಿಮಗ ವಿದೇಶಕ್ಕೆ ಹೋಗಬೇಕಾದ್ದರಿಂದ ಅಲ್ಲಿನ ಪರಿಸರದಲ್ಲಿನ ಒಬ್ಬ ದಾದಿಯನ್ನು ನೇಮಿಸುವುದರ ಮೂಲಕ ಆ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಆದರೂ ಹಿರಿಯ ಮನಸ್ಸು ಅಸಮಾಧಾನಗೊಂಡರೂ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಹೊಂದಾಣಿಕೆ ಮಾಡಿಕೊಳ್ಳುವುದನ್ನು ಮಂದಕ್ಕನ ಪಾತ್ರದಲ್ಲಿ ಕಾಣಬಹುದಾಗಿದೆ.

ವೈದೇಹಿ ಕಥೆಗಳಲ್ಲಿ ಬರುವ ಕುಟುಂಬಗಳು ಅಜ್ಜ, ಅಜ್ಜಿ, ತಂದೆ, ತಾಯಿ, ಮಕ್ಕಳು, ಸೊಸೆಯರು, ಮೊಮ್ಮಕ್ಕಳು, ಅನಾಥ ಬಂಧುಗಳು ಹೀಗೆ ಹಲವು ಸದಸ್ಯರು ಕೂಡಿ ಬಾಳುವ ಕುಟುಂಬಗಳಾಗಿವೆ. 'ಪುಟ್ಟಮತ್ತೆ ಮತ್ತು ಮೊಮ್ಮಗಳು' ಕಥೆಯಲ್ಲಿ ಪುಟ್ಟ ಮಾತ್ರ, ಅವಳ ತಾಯಿ, ಮಗಳು ಮತ್ತು ಮೊಮ್ಮಗಳು ಇದ್ದಾರೆ. ಅಸ್ಪೃಶ್ಯರು ಕಥೆಯಲ್ಲಿ ಗೌರಮ್ಮ, ಅವಳ ಮಗಳು ರತ್ನಾ, ಮೊಮ್ಮಗಳು ಸುಗಣರೊಂದಿಗೆ ದೂರದ ಸಂಬಂಧಿ ಪಾತಕ್ಕ ಕೂಡ ಇದ್ದಾರೆ. ಈ ಕುಟುಂಬ ವ್ಯವಸ್ಥೆಯಲ್ಲಿ ಮಕ್ಕಳಿಗೆ ಮನೆ ಹಿರಿಯರ ಸಾಂಗತ್ಯವಿರುವುದರಿಂದ ಈ ಹಿರಿಯರ ಅನುಭವ ಕಥನಗಳು, ಉಪದೇಶಗಳು, ನಡೆನುಡಿಗಳು ಬೆಳೆಯುವ ಮಕ್ಕಳ ಮೇಲೆ ಪರಿಣಾಮ ಬೀರುವುದು ಸಹಜವಾಗಿದೆ.

ಹೆಣ್ಣುಮಕ್ಕಳ ಸಮಾಜೀಕರಣ ಪ್ರಕ್ರಿಯೆ ಕೌಟುಂಬಿಕ ಪರಿಸರದಲ್ಲಿ ಬಾಲ್ಯದಿಂದಲೇ ಪ್ರಾರಂಭಗೊಳ್ಳುವುದನ್ನು ಇಲ್ಲಿನ ಅನೇಕ ಕಥೆಗಳು ವಿವರಿಸುತ್ತವೆ. ಹೆಣ್ಣುಮಕ್ಕಳು, ಹೆಂಡಂದಿರು ಇವರನ್ನೆಲ್ಲ ಬಿಗಿ ವಾತಾವರಣದಲ್ಲಿ ಬೆಳೆಸುವುದು ಸಾಮಾನ್ಯ ಸಂಗತಿ. ಹೆಣ್ಣುಮಕ್ಕಳು ಮುಚ್ಚಟೆಯಾದಷ್ಟು ಜಾತಿ, ಧರ್ಮ, ದೇಶ, ಮನೆ ಎಲ್ಲವೂ ಉಳಿಯುತ್ತ ಹೆಂಗಸರನ್ನು ಹದ್ದುಬಸ್ತಿನಲ್ಲಿಡಲು ಅಜ್ಜಯ್ಯ, ಅಜ್ಜಿ, ಅಮ್ಮ, ಅಪ್ಪಯ್ಯ, ಮಾವಯ್ಯ ಮನೆಯಲ್ಲಿ ಇರಬೇಕು ಎನ್ನುವ ಅಭಿಪ್ರಾಯಕ್ಕೆ ಮನೆಯ ಎಲ್ಲ ಸದಸ್ಯರು ಅದರಲ್ಲಿಯೂ ಅದೇ ಪರಿಸರದಲ್ಲಿ ಹುಟ್ಟಿ ಬೆಳೆದು ಬದುಕು ಮಾಡಿದ ಹಿರಿಯ ಹೆಂಗಸರು ಸಮ್ಮತಿ ಸೂಚಿಸುತ್ತಾರೆ. ಗೌರಮ್ಮ ತನ್ನ ತವರು ಮನೆಯ ವಾತಾವರಣವನ್ನು ಬಣ್ಣಿಸುವುದು ಈ ರೀತಿಯಲ್ಲಿ. "ನನ್ನ ಅಜ್ಜಯ್ಯ ಮನೆಯ ಹೊಸ್ತಿಲು ದಾಟಲು ಬಿಟ್ಟಿದ್ದರೇ ಮದುವೆಯಾಗುವವರೆಗೆ? ಅಪ್ಪಯ್ಯ, ಅಣ್ಣಯ್ಯ ಮತ್ತೇನು! ಹೆಣ್ಣುಮಕ್ಕಳು ಎಲ್ಲಿಗೂ ಹೋಗಬಾರದು, ಅವರು ಕಡೆಗೊಂದು ನಗುವನ್ನಾದರೂ, ಮಾತಾದರೂ ಗಟ್ಟಿಯಾಗಿ ಆಡುವಂತಿಲ್ಲ. ಹೆಣ್ಣುಮಕ್ಕಳ ನಗು ಹಂಚಿಗೂ ಕಳಿಸಬಾರದು ಎನ್ನುತ್ತ ಬೆಳೆಸಿದರು(ಅಸ್ಪೃಶ್ಯರು, ಪುಟ ೧೨೦). ಮನೆಯ ಹಿರಿಯ ಗಂಡಸರ ಕಟ್ಟೆಚ್ಚರದಲ್ಲಿ ಬೆಳೆದ ಗೌರಮ್ಮನಿಗೆ ಹೆಣ್ಣುಮಕ್ಕಳನ್ನು ಇದೇ ರೀತಿ ಬೆಳೆಸುವುದು ಸಮ್ಮತವಾಗುತ್ತದೆ. ಹಿರಿಯರು ಏನೇ ನಿರ್ದೇಶನ ನೀಡಿದರೂ ಅದು ಹೆಣ್ಣುಮಕ್ಕಳಿಗೆ ಒಳ್ಳೆಯದನ್ನೇ ಮಾಡುತ್ತದೆ ಎನ್ನುವ ಭಾವನೆಯನ್ನು ಅವರು ಹುಟ್ಟಿನಿಂದಲೇ ಬೆಳೆಸಿಕೊಂಡಿದ್ದಾರೆ. ಗೌರಮ್ಮನಂತೆ ಪಾತಕ್ಕನಿಗೂ, ವಾಗಿತ್ತೆಗೂ ಗಂಡಸರು ಹೆಂಗಸರನ್ನು ತಮ್ಮ ಮುಷ್ಟಿಯಲ್ಲಿ ಇಟ್ಟುಕೊಳ್ಳುವುದು ಸರಿಯೆಂದು ಕಾಣುತ್ತದೆ.

"ಪಾತಕ್ಕನ ಮಟ್ಟಿಗೆ ಪೌರುಷ ಎಂಬುದಿದ್ದರೆ ಅದು ರತ್ನನ ಗಂಡನಿಗೆ ಹೇಗೆ ಹೆಂಡತಿಯನ್ನು ಮುಷ್ಟಿಯೊಳಗೆ ಇರಿಸಿಕೊಂಡಿದ್ದಾನೆ! ಹೆಣ್ಣುಮಕ್ಕಳು ಹಾಗೆ ಗಂಡನ ಮುಷ್ಟಿಯೊಳಗೆ ಇದ್ದರೆ ಒಂದು ಮನೆ, ಅಲ್ಲವಾದರೆ ಅದು ಮನೆಯೇ"(ಅದೇ, ಪುಟ ೫೯). ಹೆಣ್ಣುಮಕ್ಕಳನ್ನು ಇಲ್ಲಿ ಮದುವೆಯ ಸಲುವಾಗಿಯೇ ಬಳಸಲಾಗುತ್ತದೆ. ಯಶೋಧಾ ಹೇಗಿದ್ದಾಳೆ, ಹೇಗಿರಬೇಕು

ಎನ್ನುವುದನ್ನು ನಿರ್ಧರಿಸುವವರು ಅವಳ ತಂದೆ ಮತ್ತು ರಂಗಜ್ಜಿ. ಅವಳ ಮದುವೆ, ಅವಳ ಭವಿಷ್ಯ ಜೀವನ ಎಲ್ಲವನ್ನು ಈ ಹಿರಿಯರೇ ನಿರ್ಧರಿಸುತ್ತಾರೆ. ವಾರಿಜಾ ತನ್ನ ತಂದೆಯ ನೆರಳಿನಂತೆ ಬರುವವಳು, ಹೋಗುವವಳು. ಅವಳ ಚಹರೆ, ರೂಪ, ಬಣ್ಣಗಳೆಲ್ಲವೂ ಮದುವೆ ವಿಚಾರಕ್ಕಷ್ಟೇ ಸೀಮಿತವಾಗಿರುತ್ತದೆ.

ವೈದೇಹಿಯವರ ಕೆಲವು ಕಥೆಗಳಲ್ಲಿ ಹಿರಿಯ ಮನೆಗಳ ಪ್ರಸ್ತಾಪ ಬರುತ್ತದೆ. 'ಅಕ್ಕು' ಕಥೆಯ ಅಜ್ಜಯ್ಯನ ಮನೆ, ಯಾತ್ರೆಯ ಅಜ್ಜಯ್ಯನ ಅವಿಭಕ್ತ ಕುಟುಂಬದ ಒಡೆತನದ ಮನೆ, 'ಆರತಿ ತಟ್ಟೆ' ಕಥೆಯ ಅಪ್ಪಣ್ಣಜ್ಜಯ್ಯ ಮನೆ, 'ಭೂತ' ಕಥೆಯ ದೊಡ್ಡಪ್ಪಯ್ಯನ ಮನೆ ಇತ್ಯಾದಿ. ಈ ಹಿರಿಮನೆಗಳ ಒಳವಿವರಗಳನ್ನು ಕುತೂಹಲದಿಂದ ವೀಕ್ಷಿಸುವ ಅದರ ವಿಶ್ಲೇಷಣೆಯಲ್ಲಿ ತೊಡಗಿಸಿಕೊಳ್ಳುವ ಯುವತಿಯರಾದ ಸರಸ, ಮೀರಾ, ಯಶವಂತಿ, ಲತ ಮೊದಲಾದವರು ಇಲ್ಲಿದ್ದಾರೆ. ಹಿರಿಮನೆಗಳ ಯಜಮಾನ ಸ್ಥಾನದಲ್ಲಿ ಇರುವ ವ್ಯಕ್ತಿಗಳೆಂದರೆ ಮನೆಯ ಹಿರಿಯ ಗಂಡಸು. ಅಂದರೆ ಅಜ್ಜ, ದೊಡ್ಡಪ್ಪ, ತಂದೆ ಮೊದಲಾದವರು. ಅಕ್ಕುವಿನ ಮನೆಯಲ್ಲಿ ಅಜ್ಜಯ್ಯ, ದೊಡ್ಡತ್ತೆ, ವಾಸು ಚಿಕ್ಕಪ್ಪನವರನ್ನು ಒಳಗೊಳ್ಳುವ ಅಧಿಕಾರದ ಶ್ರೇಣೀಕೃತ ವ್ಯವಸ್ಥೆ ಇದೆ. ಒಲ್ಲದ ಗಂಡನನ್ನು ತೊರೆದು ತವರು ಮನೆ ಸೇರಿ ಸ್ವತಂತ್ರವಾಗಿ ತಿರುಗಾಡಿಕೊಂಡಿರುವ ಮನೆಮಗಳು ಅಕ್ಕುವಿನ ಮೇಲೆ ಈ ಹಿರಿಯರು ಅಧಿಕಾರ ಚಲಾಯಿಸುತ್ತಾರೆ. ಅವಳನ್ನು ಕೋಣೆಯೊಳಗೆ ಬಂಧಿಸಿ ಮಾನಸಿಕವಾಗಿ ದೈಹಿಕವಾಗಿ ಹಿಂಸೆ ನೀಡುತ್ತಾರೆ. ಅವಳ ಸ್ವಾತಂತ್ರ್ಯಾಭಿಲಾಷೆಗೆ ತಡೆಯೊಡ್ಡಿ ಒಲ್ಲದ ಗಂಡನೊಡನೆ ಕೂಡಿ ಬಾಳುವಂತೆ ಅವಳ ಮೇಲೆ ಒತ್ತಡ ಹೇರುತ್ತಾರೆ. ಅಕ್ಕುವಿನ ರೀತಿಯಲ್ಲಿ ಮನೆಯ ನಾಲ್ಕು ಗೋಡೆಗಳ ನಡುವೆ ಮನೆ ಗಂಡಸು ನೀಡುವ ದೈಹಿಕ, ಮಾನಸಿಕ ಹಿಂಸೆಗಳಿಗೆ ಬಲಿಯಾಗಿ ನೋವುಣ್ಣುವ ಅನೇಕ ಹೆಂಗಸರು ಇಲ್ಲಿದ್ದಾರೆ. ರತ್ನ, ಮೀನಾಕ್ಷಿ, ಅತ್ತೆ ಮೊದಲಾದವರು ಅಕ್ಕುವಿನ ಹಾಗೆ ನೋವಿನ ವೃತ್ತದೊಳಗೆ ಸುತ್ತುವ ಆರತಿ ತಟ್ಟೆಗಳಾಗಿದ್ದಾರೆ. ಕೌಟುಂಬಿಕ ಆವರಣದೊಳಗೆ ನಿಯಂತ್ರಣದ ಹೆಸರಿನಲ್ಲಿ ತಮ್ಮ ಮೇಲೆ ನಡೆಯುತ್ತಿರುವ ಹಿಂಸಾಚಾರಗಳಿಂದ ನಿರಂತರವಾಗಿ ನೋವು ಮತ್ತು ದುಃಖವನ್ನು ಅನುಭವಿಸುವ ಈ ಹೆಂಗಸರು ತಮ್ಮ ಭಾವನೆಗಳನ್ನು ಬೇರೆ ಬೇರೆ ವಿಧದಲ್ಲಿ ಬಹಿರಂಗಪಡಿಸುತ್ತಿರುತ್ತಾರೆ. ಅಕ್ಕುವಿನ ಹುಚ್ಚು, ಮೀನಾಕ್ಷಿ ಅತ್ತೆಯ ಭ್ರಾಂತು ಇದಕ್ಕೆ ಉದಾಹರಣೆಗಳು. ಮತಿ ವಿಕಲ್ಪವಾಗಿ ನಿರ್ವಚಿಸಿಕೊಂಡಿರುವ ಈ ಮನಸ್ಥಿತಿ ಹೆಂಗಸರು ಅನುಭವಿಸುತ್ತಿರುವ ನೋವಿನ ರೂಪಗಳಾಗಿವೆ.

ಇಂತಹ ಕೌಟುಂಬಿಕ ಪರಿಸರವನ್ನು ಹತ್ತಿರದಿಂದ ನೋಡುತ್ತ ಬೆಳೆದ ಆಧುನಿಕ ಪ್ರಜ್ಞೆಯ ಯಶವಂತಿ, ಲತ, ಕಲಾವತಿ, ಸರೋಜಾ, ಯಶೋಧಾ, ಅಚಲ ಮೊದಲಾದವರಿಗೆ ಹೆಂಡತಿಯಾಗಿ, ತಾಯಾಗಿ ತಾವು ನಿರ್ವಹಿಸಬೇಕಾದ ಸಾಮಾಜಿಕ ಪಾತ್ರಗಳಲ್ಲಿ ಕಿಂಚಿತ್ತೂ ಭರವಸೆ ಉಳಿದಿಲ್ಲ. ಈ ಹುಡುಗಿಯರು ತಮ್ಮ ಅತ್ತೆ, ಅಮ್ಮ, ದೊಡ್ಡಮ್ಮ, ಅಕ್ಕ ಮೊದಲಾದವರಿಂದ ತಮ್ಮನ್ನು

ಪ್ರತ್ಯೇಕಿಸಲು ಪ್ರಯತ್ನಿಸುತ್ತಾರೆ. ಕ್ರೂರಿ ಗಂಡನ ಸೇವೆಗೆ ಸದಾ ಸಿದ್ಧಳಾಗುವ ಅಕ್ಕ ರತ್ನಾಳ ವರ್ತನೆಯನ್ನು ಕಣ್ಣಾರೆ ಕಾಣುತ್ತಿರುವ ಸರೋಜಾ ತಾನು ಈ ಸ್ಥಿತಿಯಲ್ಲಿದ್ದರೆ ಯಾವ ರೀತಿ ವರ್ತಿಸಬೇಕು ಎಂದು ಮಾನಸಿಕ ಸಿದ್ಧತೆ ಮಾಡಿಕೊಳ್ಳುತ್ತಾಳೆ. ಯಶೀ, ರಂಗಜ್ಜಿಯ ಪ್ರಭಾವದಿಂದ ತನ್ನನ್ನು ಬಿಡಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುತ್ತಾಳೆ. ಅಜ್ಜಿ, ಅಮ್ಮ, ಅಪ್ಪ, ನೆರೆಹೊರೆಯವರು ತಾನು ಹುಟ್ಟಿದ ಮೊದಲೆ ಸೃಷ್ಟಿಸಿ ಇಟ್ಟರೂ ಹಳೆಯ, ನಾರುವ, ಬೋಳು ಬೇಲಿಯ ಒಳಗೆ ತನ್ನ ನಾಲಿಗೆ ಬಂಧಿತವಾಗಬೇಕೆ? ಈ ಬೇಲಿ ಹರಿದುಕೊಂಡು ಹೊರಗೆ ಬರಬೇಕು ತಾನು ಎಂದು ಅವಳು ಯೋಚಿಸುತ್ತಾಳೆ(ಅಲೆಗಳಲ್ಲಿ ಅಂತರಂಗ, ಪುಟ ೧೦೩).

ಕುಟುಂಬವ್ಯವಸ್ಥೆಯ ಪಾರಂಪರಿಕ ಮೌಲ್ಯವನ್ನು ಒಪ್ಪಿ ನಡೆಯುವ, ಪ್ರತಿಭಟಿಸುವ ಮತ್ತು ನಿರಾಕರಿಸುವ ಬೇರೆ ಬೇರೆ ತಲೆಮಾರಿನ ಸ್ತ್ರೀ ಪಾತ್ರಗಳನ್ನು ಚಿತ್ರಿಸುವುದರ ಮೂಲಕ ಪರಿವರ್ತನೆ ಹೊಂದುತ್ತಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ಬದಲಾಗುತ್ತಿರುವ ಹೆಣ್ಣಿನ ಸ್ವರೂಪದ ಚಿತ್ರಣವನ್ನು ಲೇಖಕಿ ನೀಡಿದ್ದಾರೆ.

ವೈದೇಹಿ ಕಟ್ಟಿಕೊಡುವ ದಾಂಪತ್ಯ ಬದುಕಿನಲ್ಲಿ ಗೃಹಿಣಿ ಪಾತ್ರವನ್ನು ನಿರ್ವಹಿಸುವ ಹೆಣ್ಣುಮಕ್ಕಳು ಕಾಣಿಸಿಕೊಂಡಿದ್ದಾರೆ. ಇವರು ಹೆಂಡತಿಯಾಗಿ ತನ್ನ ಗಂಡನ ಮನೆ, ಮಕ್ಕಳೆಂದು ಸಮರ್ಪಣಭಾವದಲ್ಲಿ ಬದುಕು ಸಾಗಿಸುವ ಹೆಣ್ಣುಗಳು. ಪ್ರತ್ಯೇಕ ಅಸ್ತಿತ್ವವಿಲ್ಲದೆ ಊಟ, ತಿಂಡಿ, ತಿರುಗಾಟಗಳಲ್ಲಿ ತಮ್ಮ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುವ ಈ ಗೃಹಿಣಿಯರನ್ನು ಒಂದು ಗುಂಪಿನಲ್ಲಿ ಲೇಖಕಿ ಪರಿಗಣಿಸುತ್ತಾರೆ. ಮನೆಯ ಚೌಕಟ್ಟಿನೊಳಗೆ ಅಡುಗೆ ಮನೆ ಮತ್ತು ಅದಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ತಮ್ಮ ಪ್ರಪಂಚವನ್ನಾಗಿಸಿಕೊಂಡಿರುವ ಗೃಹಿಣಿಯರು ಇಲ್ಲಿ ಸುಖ ಶಾಂತಿಗಳಿಂದ, ನೋವು ಸಂಕಷ್ಟಗಳನ್ನು ಹೆಚ್ಚು ಅನುಭವಿಸುತ್ತಿರುತ್ತಾರೆ.

ಹೆಣ್ಣು ಸುಖವಾಗಿರಬೇಕಾದರೆ ಅವಳ ಕೈಹಿಡಿದ ಗಂಡು ನಿಯಂತ್ರಿಸುವವನೂ, ಒಳ್ಳೆಯವನೂ ಆಗಿರಬೇಕು. ಇಲ್ಲದಿದ್ದರೆ ಅವಳ ಬಾಳು ಗೋಳಾಗುತ್ತದೆ. ದಾಂಪತ್ಯ ಸುಖ ಮರೀಚಿಕೆಯಾದರೆ ಹೊಂದಾಣಿಕೆ ಅನಿವಾರ್ಯ. ಹೊಂದಾಣಿಕೆಯಲ್ಲಿ ಬದುಕುವವರಿಗೆ ಹೆಂಡತಿ ಧರ್ಮವನ್ನು ಅನುಸರಿಸುವುದಲ್ಲದೆ ಬೇರೆ ವಿಧಿಯಿಲ್ಲ. ವಿರೋಧಿಸಿದವರಿಗೆ ದೈಹಿಕ ಹಿಂಸೆ, ಒಂಟಿತನ, ಸಾವು ಇತ್ಯಾದಿ.

'ಸೌಗಂಧಿಯ ಸ್ವಗತಗಳು' ಕಥೆಯಲ್ಲಿ ಕೆಲಸ ಸಿಕ್ಕ ಅವಿವಾಹಿತ ಮಹಿಳೆ ತಂದೆ-ತಾಯಿ, ಕುಟುಂಬದಿಂದ ಹೊರ ಹೋದರೂ ಬೇಕಾದದ್ದನ್ನು ಆಲೋಚಿಸಲು ಸ್ವಾತಂತ್ರ್ಯ ಪಡೆಯಲು ಹಿಂಜರಿಯುತ್ತಾಳೆ. ಸೌಗಂಧಿ ತಾನಿರುವ ಪರಿಸರವನ್ನು ತೊರೆದು ದೂರ ಮನೆ ಮಾಡಿ ತನ್ನ ಸ್ವಂತದ ಗುರುತನ್ನು ಉಳಿಸುವ ಪ್ರಯತ್ನ ನಡೆಸುತ್ತಾಳೆ. ಕುಟುಂಬ ಸಂಬಂಧಗಳಲ್ಲಿ ಬಂಧಿಯಾಗುವುದಕ್ಕಿಂತ ಸ್ವತಂತ್ರವಾಗಿ ತನ್ನ ಪಾಡಿಗೆ ತಾನಿರುವುದರಲ್ಲಿ ತೃಪ್ತಿ ಇದೆ ಎಂದುಕೊಳ್ಳುವ

ಸೌಗಂಧಿಗೆ ಗದ್ದಲದಲ್ಲಿ ತನ್ನನ್ನು ಕಳೆದುಕೊಳ್ಳುವ ಮನಸ್ಸಿಲ್ಲ. ಆದರೂ ಅವಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಅವಳಿಗೆ ಬೇಡವಾದ ರಕ್ಷಣೆಯನ್ನು ನೀಡಲು ಅವಳ ತಂದೆ–ತಾಯಿ, ಮನೆಯೊಡತಿ ಕಾವಲು ನಿಂತುಕೊಳ್ಳುತ್ತಾರೆ. ಬಂಧನದಲ್ಲಿರುವುದು ಸೌಗಂಧಿಗೆ ಅನಿವಾರ್ಯವೆಂಬಂತೆ, ಬಂಧುತ್ವವನ್ನು ವೈಯಕ್ತಿಕ ಸ್ವಾತಂತ್ರ್ಯವೆಂಬ ಭಾವದಲ್ಲಿ ಸ್ವೀಕರಿಸಿದವರು ಅಚಲ ಮತ್ತು ಸೌಗಂಧಿಯರು ತಮ್ಮ ಪಾಡಿಗೆ ಬದುಕುವ ಆಯ್ಕೆ ಸ್ವಾತಂತ್ರ್ಯದಲ್ಲಿ ಹೆಚ್ಚಿನ ನೆಮ್ಮದಿ, ಸಂತೋಷ ಇದೆ ಎಂದು ನಂಬಿಕೊಂಡವರು. ಸೌಗಂಧಿ, ಅಚಲ, ಸರಿತರು ಸಾಂಪ್ರದಾಯಿಕ ಸ್ತ್ರೀ ಪರಿಕಲ್ಪನೆಗಿಂತ ಭಿನ್ನ ಸ್ವರೂಪದ ವ್ಯಕ್ತಿತ್ವವನ್ನು ಹೊಂದಿದವರು ಸಂಪ್ರದಾಯದ ಕೋಟೆಯಿಂದ ಹೊರನಡೆದು ಮಾನಸಿಕ, ದೈಹಿಕ ಸುಖ, ಶಾಂತಿ, ನೆಮ್ಮದಿಗಳನ್ನು ಪಡೆದು ಪರಿಪೂರ್ಣತೆಯನ್ನು ಸಾಧಿಸಬೇಕೆಂಬ ಹಂಬಲವುಳ್ಳವರು. ಆದರೆ ಅದೂ ಕಷ್ಟವೇ.

'ಗೂಡಿನೊಳಗೆ ಒಂದು ಹಕ್ಕಿ' ಕಥೆಯ ಮಾಲತಿ ವಿಚಿತ್ರ ಬಯಕೆ ಹೊಂದಿದವಳು. "ಗಂಡನಿಗೆ ಕೆಲಸಕ್ಕೆ ಹೋಗುವಾಗ ಮನೆಯ ಹೊರಗೆ ಬೀಗ ಹಾಕಿಕೊಂಡು ಹೋಗು. ನಾನು ಒಳಗೆ ಒಬ್ಬಳೇ ಇರಬೇಕೆಂಬ ಆಸೆ" ಎಂದು ಹೇಳುತ್ತಾಳೆ. 'ಇದೆಂತ ಆಸೆ! ನಾನ್ಸೆನ್ಸ್'(ಅಲೆಗಳಲ್ಲಿ ಅಂತರಂಗ, ಪು.೧೬೦) ಎಂದು ಬೀಗ ಹಾಕಿ ಹೋಗುತ್ತಾನೆ. ಮಾಲತಿಯ ಹುಚ್ಚು ಆಸೆಗಳು ಮುತ್ತಿದಂತೆಲ್ಲ ಒಂದೊಂದೇ ಮಾಡುತ್ತ ಹೋಗುತ್ತಾಳೆ. ಗಂಡನ ಬಟ್ಟೆ ತೊಡುತ್ತಾಳೆ. ಅದು ಸಾಕಾಗುತ್ತದೆ. ಬಟ್ಟೆ ಹಾಕಿಕೊಳ್ಳದೇ ಬಾಗಿಲು ಮುಚ್ಚಿಕೊಳ್ಳದೆ ಸ್ನಾನದ ಮನೆಯಲ್ಲಿ ಕುಳಿತು ಸ್ನಾನ ಮಾಡುತ್ತಾಳೆ. ಅದರ ಒಳಗೆ ಅಳುಕು, ಭಯ, ಜೋರಾಗಿ ಹಾಡು ಕೇಳಬೇಕೆಂದೋ ಹಾಡಬೇಕೆಂದೋ ಬಯಕೆ. ಹೊರಗಿನವರು ಕೇಳಿಸಿಕೊಂಡು ಬಂದರೆ? ಬೀಗ ಹಾಕಿದೆ. ಒಳಗೆ ಒಬ್ಬಳೆಯೇ ಎಂದು ಕೇಳಿದರೆ? ಹೀಗೆ ಏನು ಮಾಡಲಾರದೆ ಬಸವಳಿದು ನೆಲ ಹಿಡಿಯುತ್ತಾಳೆ. ಅವಳ ಸ್ವಾತಂತ್ರ್ಯ ಅವಳಿಗೆ ಮುಳ್ಳಾಗುತ್ತದೆ.

ವೈದೇಹಿ ಅವರು ಚಿತ್ರಿಸಿರುವ ಸ್ತ್ರೀಯರು ಕೂಡ ಸ್ತ್ರೀ ಸ್ವಾತಂತ್ರ್ಯವನ್ನು, ಕುಟುಂಬದಲ್ಲಿ ಅವರ ಸ್ಥಾನವನ್ನು ನಿರ್ಧರಿಸುವ ಹುಡುಕಾಟಕ್ಕೆ ಒಂದು ನೆಲೆ ಸಿಕ್ಕಿಲ್ಲವೆಂದು ಹೇಳಬೇಕಾಗಿದೆ. ಕತೆಗಾರ್ತಿಯ ಹುಡುಕಾಟ ನಿಂತಿಲ್ಲ.

ಇಲ್ಲಿನ ಕಥೆಗಳಲ್ಲಿ ಬರುವ ಹೆಂಗಸರು ಅಧೀನ ಸ್ಥಿತಿಯನ್ನು ಅನಿವಾರ್ಯವೆಂಬಂತೆ ಸ್ವೀಕರಿಸಿದವರು ಮತ್ತು ಅಧೀನತೆಯಿಂದ ಬಿಡುಗಡೆ ಬೇಕೆಂದು ಬಯಸುವವರು. ಹೀಗೆ ಎರಡು ಮಾದರಿಯ ಸ್ತ್ರೀ ವ್ಯಕ್ತಿತ್ವವನ್ನು ಚಿತ್ರಿಸಿರುವ ವೈದೇಹಿ ಹೆಣ್ಣಿನಲ್ಲಿ ಮೂಡಿರುವ ಸಂಘರ್ಷದ ಭಾವನೆಯನ್ನು, ಬಿಡುಗಡೆಯ ಆಶಯವನ್ನು ಸರಿಯಾದ ರೀತಿಯಲ್ಲಿಯೇ ಗುರುತಿಸಿದ್ದಾರೆ. ಹೆಂಡತಿ, ತಾಯಿ ಪಾತ್ರಗಳಾಗಿ ಪ್ರಾಮುಖ್ಯತೆ ದೊರೆತಾಗ ಸ್ವಂತಿಕೆ ಕಳೆದುಕೊಳ್ಳುವ ಭೀತಿಯಲ್ಲಿರುವ ರೋಹಿಣಿ, ಮಾಲತಿ ಮತ್ತು ಕುಸುಮರ ಪಾತ್ರಗಳಲ್ಲಿ ತಮ್ಮತನದ ಅರಿವನ್ನು

ಹೊಂದಿ ಭವಿಷ್ಯದ ನಿರ್ಧಾರಕ್ಕೆ ಸಿದ್ಧರಾಗುವ ಅಚಲ, ಸೌಗಂಧಿ ಮತ್ತು ಸರೋಜೆಯ ಪಾತ್ರಗಳಲ್ಲಿ ಲೇಖಕಿ ಇದನ್ನು ಸ್ಪಷ್ಟಪಡಿಸಿದ್ದಾರೆ. ತನ್ನತನದ ಅರಿವಿನೊಂದಿಗೆ ಸ್ವಂತಿಕೆಯ ಶೋಧವೂ ಅಷ್ಟೇ ಮುಖ್ಯ ಎನ್ನುವುದನ್ನು ಭಾರತಿಯ ಶೋಧದಲ್ಲಿ ತೊಡಗಿಸಿಕೊಂಡಿರುವ ಕೃಷ್ಣಾಳ ಪ್ರಯತ್ನದಲ್ಲಿ ವ್ಯಕ್ತಪಡಿಸಲಾಗಿದೆ. ವರ್ತಮಾನಗಳನ್ನು ಒಳಗೊಳ್ಳುವ ಈ ಶೋಧವು ತಲೆಮಾರುಗಳ ಬದುಕಿನ ಸ್ಥಿತಿಯನ್ನು ಮುಂದುವರಿಸುವುದು ಸೂಕ್ತವೆಂದು ಬಿಂಬಿಸುತ್ತದೆ. ಹೆಣ್ಣು ಬದುಕಿದ ರೀತಿ ಶತಮಾನದ ಗತ ಇತಿಹಾಸದ ನೆಲೆಗಟ್ಟಿನ ಮೇಲೆ ಇಂದಿನ ಹೆಣ್ಣು ತನ್ನ ಬದುಕಿನ ನೆಲೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಡೆಸಬೇಕಾಗಿದೆ ಎಂಬ ಆಶಯವಿದೆ.

೪.೫. ಸಾರಾ ಅಬೂಬಕರ್

ಸಾರಾ ಅಬೂಬಕರ್ ಅವರು ರಚಿಸಿದ ಕಥೆಗಳಲ್ಲಿ ಮುಸ್ಲಿಂ ಸ್ತ್ರೀ ಸಮುದಾಯದ ಸಂಕಷ್ಟಗಳನ್ನು ಕುರಿತು ಅಭಿವ್ಯಕ್ತಿಯಿದೆ. ಇವರ ಬಹುಪಾಲು ಕಥೆಗಳಲ್ಲಿ ಮುಖ್ಯವಾಗಿ 'ಚಪ್ಪಲಿಗಳು' ಕತೆಯಲ್ಲಿ ಬರುವ ಹಸನ್‌ಬ್ಯಾರಿ(ಚಪ್ಪಲಿಗಳು), 'ಧರ್ಮ ಬಲೆ ಬೀಸಿದಾಗ' ಕತೆಯಲ್ಲಿ ಬರುವ ಕರೀಂಸಾಬ, 'ಅಂಕುರ' ಕತೆಯಲ್ಲಿ ಬರುವ ಸಲೀಂ ಎಂಬ ಪುರುಷರ ಹಿನ್ನೆಲೆಯಿದೆ. ಅವರ ಕುಟುಂಬಗಳು ಪ್ರಧಾನವಾಗಿ ಮುಸ್ಲಿಂ ಸಮಾಜವನ್ನು ಗುರುತಿಸಿಕೊಳ್ಳುತ್ತವೆ. ಈ ಮೂಲಕ ಇಲ್ಲಿನ ಕುಟುಂಬಗಳು ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರತಿನಿಧಿಸುತ್ತವೆ.

'ಚಪ್ಪಲಿಗಳು' ಕಥೆಯಲ್ಲಿ ಬರುವ ಹಸನ್‌ಬ್ಯಾರಿ ಕುಟುಂಬದಲ್ಲಿ ಆತನ ಪತ್ನಿ ಫಾತೀಮಾ, ಹಿರಿಯ ಮಗಳು ಸಮೀರ ಮತ್ತು ವರ್ಷ ಒಂದರಂತೆ ಹುಟ್ಟುವ ಮಕ್ಕಳು ಒಳಗೊಂಡು ಮೇಲುಸ್ತರದಲ್ಲಿ ಸರಳಕುಟುಂಬ ಎಂದುಕೊಂಡು ಬಂದರೂ ಅಧಿಕಾರದ ಹಿನ್ನೆಲೆಯಲ್ಲಿ ಗಮನಿಸಿದಾಗ ಹಸನ್‌ಬ್ಯಾರಿಯ ತಂಗಿ ಶಬೀರ ಅಳಿಯ ಆತನ ನಿಯಂತ್ರಣಕ್ಕೆ ಒಳಪಟ್ಟಿದ್ದರು. ಹೀಗೆ ಈ ರಕ್ತಸಂಬಂಧಗಳು ಒಂದು ನೆಲೆಯಲ್ಲಿ ವಾಸಿಸದಿದ್ದರೂ ಅಧಿಕಾರದ ನೆಲೆಯಲ್ಲಿ ಗಮನಿಸಿದಾಗ ಇದು ಕೂಡುಕುಟುಂಬವಾಗಿ ಕಂಡುಬರುತ್ತದೆ. ಇಲ್ಲಿ ಹಸನ್‌ಬ್ಯಾರಿ ಕುಟುಂಬದ ಮೇಲೆ ಧರ್ಮದ ಪ್ರಭಾವ ಅಧಿಕವಾಗಿದ್ದು ಅದರಂತೆ ತನ್ನ ಮನೆಯ ಹೆಣ್ಣುಮಕ್ಕಳನ್ನು ಜೀವಿಸಬೇಕೆಂದು ಬಯಸುವವನು. ಹಸನ್‌ಬ್ಯಾರಿ ಗಂಡನಾಗಿ ತನ್ನ ಪತ್ನಿಯನ್ನು ಕೇವಲ ದೇಹದ ನೆಲೆಯಲ್ಲಿ ಮಾತ್ರ ನೋಡಿ ತನ್ನ ಕಾಮಾಸಕ್ತಿಯನ್ನು ಪೂರೈಸುವ ವಸ್ತುವಾಗಿ ಕಾಣುವ ಅವಳನ್ನು ನಿರಂತರವಾಗಿ ತಾಯ್ತನದ ಅವಸ್ಥೆಯಲ್ಲಿ ಬದುಕುವಂತೆ ಮಾಡುತ್ತಿದ್ದನು. ಅಲ್ಲದೆ ಮಗಳು ಘೋಷಾಯಿಲ್ಲದೆ ಸ್ನೇಹಿತೆಯರ ಜೊತೆ ಸ್ವಚ್ಛಂದವಾಗಿ ಇರುವ ಪರಿಸ್ಥಿತಿಯು ಮಹಾಪರಾಧವಾಗಿ ವಿದ್ಯಾಭ್ಯಾಸದ ಸೌಲಭ್ಯದಿಂದ ವಂಚಿತಳಾಗಿಸಿದರು. ಅಲ್ಲದೆ ಅಪ್ರಾಪ್ತ ವಯಸ್ಸಿನಲ್ಲಿ ತನ್ನ ಮಗಳನ್ನು ತನ್ನ ಸೋದರ ಅಳಿಯನಿಗೆ ಮದುವೆ ಮಾಡಲು ನಿಶ್ಚಯಿಸುವುದರ

ಮೂಲಕ ಇಲ್ಲಿ ರಕ್ತಸಂಬಂಧಗಳ ವಿವಾಹ ಇಲ್ಲಿದೆ. ತಂದೆಯ ಈ ಕ್ರೌರ್ಯವನ್ನು ಮೌನವಾಗಿ ಸಹಿಸುತ್ತಿದ್ದ ಮಗಳು ತನ್ನ ವಿವಾಹದ ಮೂಲಕ ಗಂಡನ ಸಾಮೀಪ್ಯದಲ್ಲಿ ಪರಸ್ಪರ ಪ್ರೀತಿಯ ಆತ್ಮೀಯ ಸ್ನೇಹಭಾವನೆಗಳನ್ನು ಕಂಡು ಅವಳನ್ನು ತಂದೆಯ ಅಧಿಕಾರದ ಬಗ್ಗೆ ಮನದಲ್ಲಿ ಪ್ರಶ್ನಿಸಲು ಕಾರಣವಾಯಿತು. ಇಲ್ಲಿ ಸಮೀರಾಳ ಗಂಡ ಬದುಕಿಗಾಗಿ ಹೊರದೇಶಗಳಿಗೆ ಹೋಗಿ ದುಡಿಯುವುದು ಅನಿವಾರ್ಯವಾಗಿದ್ದು ಬಹಳ ದಿನಗಳ ಮೇಲೆ ಪತ್ನಿಯನ್ನು ಸಂಧಿಸುತ್ತಿದ್ದನು. ಇಲ್ಲಿ ಶಬೀರ ಮಾವನಂತೆ ತನ್ನ ಪುರುಷಾಧಿಕಾರವನ್ನು ಚಲಾಯಿಸದೆ ತಾಯಿ ಮತ್ತು ಪತ್ನಿಯನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದನು. ಅಲ್ಲದೆ ಮನೆಯಿಂದ ಹೊರಗಿನ ವಾತಾವರಣಕ್ಕೆ ಪತ್ನಿ, ತಾಯಿಯನ್ನು ಕರೆದುಕೊಂಡು ಸಿನಿಮಾ ನೋಡಿ ಹೋಟೆಲ್ ಊಟ ಮಾಡಿ ಸ್ವಚ್ಛಂದವಾಗಿ ಕಾಲ ಕಳೆದದ್ದು ಮಾವನಿಗೆ ಅಳಿಯ ದೊಡ್ಡ ಅಪರಾಧವಾಗಿ ಕಂಡುಬಂದಿತಲ್ಲದೆ ಅಳಿಯನನ್ನು ಕುರಿತು "ಶಬೀರ ನೀನು ಗಂಡಸು, ಏನು ಮಾಡಿದರೂ ನಡೆಯುತ್ತದೆ. ನಿನ್ನನ್ನೂ ಯಾರೂ ತಡೆಯಲಾರರು. ಆದರೆ ಸಮೀರಾ ಹೆಣ್ಣು, ಆಕೆಗೆ ಇಂತಹದೆಲ್ಲ ರುಚಿ ಹತ್ತಿಸಿದರೆ ಅವಳ ಬುದ್ಧಿ ಹಾಳಾಗುತ್ತದೆ. ನಾಳೆ ತಾನೊಬ್ಬಳೇ ಸಿನಿಮಾಕ್ಕೆ ಹೋಗುತ್ತೇನೆಂದು ಹೊರಟರೆ ಏನು ಮಾಡುವುದು? ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು. ಬೇಕೆಂದಾಗ ಉಪಯೋಗಿಸಿ ಬೇಡವೆಂದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು. ಅದು ಬಿಟ್ಟು ತಲೆಯ ಮೇಲಿಟ್ಟುಕೊಂಡರೆ ಹೇಗೆ? ಚಪ್ಪಲಿಯನ್ನು ಎಲ್ಲಿ ಬೇಕೋ, ಅಲ್ಲೇ ಇಡಬೇಕು"(ಚಪ್ಪಲಿಗಳು, ಪುಟ.೧೦) ಎಂದು ಸಲಹೆ ನೀಡುತ್ತಾನೆ. ಹಸನ್‌ಬ್ಯಾರಿ ಪಾತ್ರದಲ್ಲಿ ನಿರಂತರವಾಗಿ ತಾನು ಹೆಣ್ಣಿನ ಮೇಲೆ ಚಲಾಯಿಸಿಕೊಂಡು ಬಂದ ಅಧಿಕಾರವನ್ನು ಮುಂದುವರಿಸುವಂತೆ ಕಾಣುತ್ತದೆ. ಅಲ್ಲದೆ ಗಂಡಸಿಗೆ ಎಲ್ಲ ರೀತಿಯ ಸ್ವಾತಂತ್ರ್ಯವಿದ್ದು ಹೆಣ್ಣಿಗೆ ಯಾವುದೇ ಸ್ವಾತಂತ್ರ್ಯವಿಲ್ಲದೆ ಅವಳನ್ನು ಗಂಡಸಿನ ಅಧೀನವಾಗಿರುವಂತೆ ಮಾಡಲಾಗುತ್ತದೆ. ಹೆಣ್ಣು ತನ್ನ ಮನೆಯ ನಾಲ್ಕು ಗೋಡೆಗಳ ಮಧ್ಯೆ ಮಾತ್ರ ತನ್ನ ಜೀವನ ನಡೆಸುವ ಸ್ವಾತಂತ್ರ್ಯ ಪಡೆದಿದ್ದಾಳೆ. ಹೆಣ್ಣು ಗಂಡಸಿನ ದೃಷ್ಟಿಯಲ್ಲಿ ಅತ್ಯಂತ ಕೀಳಾಗಿ ಭಾವಿಸಲ್ಪಟ್ಟ ಗಂಡಸಿನ ಅವಶ್ಯಕತೆಗೆ ಅನುಗುಣವಾಗಿ ಅಂದರೆ ಅವಳನ್ನು ಭಾವನಾತ್ಮಕವಾಗಿ ನೋಡದೆ ಅವಳನ್ನು ದೈಹಿಕವಾಗಿ ನೋಡಲಾಗುತ್ತದೆ. ಹೀಗೆ ಹೆಣ್ಣು ಮನೆಯಲ್ಲಿ ಆಳಾಗಿ ಪುರುಷನ ನಿಯಂತ್ರಣಕ್ಕೆ ಒಳಗಾಗಿರುವುದನ್ನು ಸೂಚಿಸುತ್ತದೆ. ಅದಕ್ಕೆ ಹಿರಿಯ ಹಸನ್‌ಬ್ಯಾರಿ ಪಾತ್ರದಂತೆ ಕಿರಿಯ ಪಾತ್ರ ಶಬೀರ ಪ್ರತಿಕ್ರಿಯೆಯಾಗಿ "ನಾನು ಚಪ್ಪಲಿಗೆ ಹುಟ್ಟಲಿಲ್ಲ, ನನಗೆ ಜನ್ಮ ನೀಡಿದವಳು ಒಂದು ಹೆಣ್ಣು!"(ಚಪ್ಪಲಿಗಳು, ಪುಟ.೧೦) ಎಂದು ಹೇಳುವ ಧೈರ್ಯವಿಲ್ಲದೆ ಮನದಲ್ಲೇ ಒಳನುಡಿದರೂ ಶಬೀರ ತನ್ನ ತಾಯಿ, ಪತ್ನಿಯ ಬಗ್ಗೆ ಪ್ರೇಮದ ವಾತ್ಸಲ್ಯದ ಭಾವನೆಯನ್ನು ಉಂಟುಮಾಡಿದ. ಅಲ್ಲದೆ ಹೆಣ್ಣನ್ನು ಒಂದು ವ್ಯಕ್ತಿಯಾಗಿ ನೋಡುವುದರ ಮೂಲಕ ತನ್ನ ತಾಯಿಯ ಕುಟುಂಬದ ಬಗ್ಗೆ ಪ್ರೀತಿಯನ್ನು ಕಾಣಬಹುದು. ಸಮೀರಾ ಪತಿಯ ಮನೆಯಲ್ಲಿ ನೆಮ್ಮದಿಯ ವಾತಾವರಣದಲ್ಲಿ

ಸ್ವಚ್ಛಂದವಾಗಿ ಬದುಕುತ್ತಿದ್ದಳು. ಆದರೆ ತಂದೆಯ ಮನೆಯ ವಾತಾವರಣ ಅವಳನ್ನು ಹೆಚ್ಚು ಕಾಡಿಸುತ್ತಿತ್ತು. ಅಲ್ಲದೆ ತಾಯಿಯ ಕೊನೆಯಿಲ್ಲದ ಬಸಿರು, ಬಾಣಂತನಗಳಿಗೆ ತಂದೆಯಿಂದ ಆಹ್ವಾನ, ಬಿಡುವಿಲ್ಲದ ಕೆಲಸ, ಮನೆಯ ನಾಲ್ಕು ಗೋಡೆಗಳ ಮಧ್ಯೆ ಯಾವುದೇ ಮನೋರಂಜನೆಯಿಲ್ಲದೆ ದಿನನಿತ್ಯದ ನಿರಂತರ ಕೆಲಸಗಳಿಂದ ಮಾನಸಿಕ, ದೈಹಿಕ ಆಯಾಸದಿಂದ ಸೋತು ಪತಿಯ ವಿರಹದಿಂದ ಮಾನಸಿಕ ರೋಗಿಯಾಗಿ ಮಾರ್ಪಡುತ್ತಾಳೆ. ಅಲ್ಲದೆ ಸಮೀರಾ ಮಹತ್ವಾಕಾಂಕ್ಷೆಯುಳ್ಳ ಹೆಣ್ಣಲ್ಲ. ತನ್ನದೇ ಆದ ಸ್ವಂತ ಮನೆಯಿರುವ ಗಂಡನ ಪ್ರೀತಿಗಾಗಿ ಮಾತ್ರ ಹಾತೊರೆಯುವ ಹೆಣ್ಣಾಗಿ ಕಂಡುಬರುತ್ತಾಳೆ. ಅಲ್ಲದೆ ತಂದೆಯ ಸರ್ವಾಧಿಕಾರದಿಂದ ಬೇಸತ್ತು ಪತಿಯ ಬಳಿ ಹೋಗಲು ಹಂಬಲಿಸುತ್ತಾಳೆ. ಆದರೆ ಆರ್ಥಿಕ ಅಸಹಾಯಕತೆಯಿಂದ ಅವಳ ಪತಿ ಅದನ್ನು ಈಡೇರಿಸಲು ಸಾಧ್ಯವಿಲ್ಲ. ಹೀಗೆ ಮಾವನು ಅತ್ತೆಯ ಮೇಲೆ ನಡೆಸುವ ದೈಹಿಕ ಹಿಂಸೆ, ಮಗಳ ಮೇಲೆ ನೀಡುವ ಮಾನಸಿಕ ಹಿಂಸೆ ಎಲ್ಲವನ್ನೂ ಅರಿತು ಅದನ್ನು ಪ್ರತಿಭಟಿಸಲಾರದೆ ಅಸಹಾಯಕತೆಯಿಂದ ಎಲ್ಲರೂ ಆ ಮೂಲಪುರುಷನ ಅಧಿಕಾರದ ನಿಯಂತ್ರಣಕ್ಕೆ ಒಳಗಾಗಿದ್ದಾರೆ. ಇಲ್ಲಿ ಸಮೀರಾ ತಾಯಿ ತನ್ನ ಮಗಳು ಮನೆ ಕೆಲಸದಲ್ಲಿ ನೆರವಾಗದೆ, ಹೆಣ್ಣಿಗೆ ಎಂದಿಗೂ ನಿಷೇಧವಿರುವ ಮನೆಯ ಜಗುಲಿ ಮೇಲೆ ಬುರಕಾ ಇಲ್ಲದೆ ಮಗಳು ನಿಂತಿರುವುದು ಮಾತ್ರ ಅಪರಾಧವಾಗಿ ಭಾವಿಸುತ್ತಾಳೆಯೇ ವಿನಹ ಮಗಳ ಈ ಮಾನಸಿಕ ಸ್ಥಿತಿಗೆ ತನ್ನ ಪತಿಯಲ್ಲಿ ಕಾರಣವನ್ನು ಹುಡುಕುವುದಿಲ್ಲ. ತನ್ನ ಪತಿಗೆ ಮಗಳ ವಿರುದ್ಧ ದೂರು ನೀಡುವಳು. ಹೀಗೆ ಮಗಳ ಮಾನಸಿಕ ಅಸ್ವಸ್ಥತೆಗೆ ತಾಯಿ ತಂದೆಯರು ಅರ್ಥ ಮಾಡಿಕೊಳ್ಳದಿದ್ದರೂ ಶಬೀರ ಪತ್ನಿಯ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಅದಕ್ಕೆ ಚಿಕಿತ್ಸೆ ನೀಡಿ ತಾನು ಪತ್ನಿಯ ಬಳಿಯೇ ಶಾಶ್ವತವಾಗಿ ಉಳಿಯುವ ಮೂಲಕ ಪರಸ್ಪರ ಪ್ರೇಮದಾಂಪತ್ಯವನ್ನು ಈ ಪಾತ್ರದಲ್ಲಿ ಕಾಣಬಹುದು. ಅಲ್ಲದೆ ಹಸನ್‌ಬ್ಯಾರಿ ಹಿರಿಯ ಗಂಡಸು ತನ್ನ ತೀರ್ಮಾನಗಳಿಂದ ಬದಲಾದ ವ್ಯಕ್ತಿಯಾಗಿ ಕಂಡುಬರುತ್ತಾನೆ. ಕುಟುಂಬದ ಮೇಲೆ ಧರ್ಮದ ಪ್ರಭಾವವಿದ್ದು ಆ ಮೂಲಕ ಮನೆಯ ಪುರುಷರು ತಮ್ಮ ಹೆಣ್ಣುಮಕ್ಕಳನ್ನು ಅಧೀನದಲ್ಲಿಡಲು ನಿರಂತರ ಪ್ರಯತ್ನಿಸುತ್ತಿರುತ್ತಾರೆ. ಹೀಗೆ ಇಲ್ಲಿ ಹೆಣ್ಣುಮಕ್ಕಳು ಮನೆಯ ನಾಲ್ಕುಗೋಡೆಯ ಮಧ್ಯೆ ಆ ಮನೆಯ ಪುರುಷನ ಅಧೀನದಲ್ಲಿ ಯಾವುದೇ ಬದಲಾವಣೆಗಳಿಲ್ಲದೆ, ಮನೋರಂಜನೆಯಿಲ್ಲದೆ ಮನೆಯಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಲಾಗದಂತಹ ಅಸಹಾಯಕ ಸ್ಥಿತಿಯ ಬದುಕನ್ನು ನಡೆಸುತ್ತಿದ್ದಾರೆ. ಈ ರೀತಿಯ ಹೆಣ್ಣಿನ ಬದುಕು ವಿನಾಶವಾಗುವುದರ ಮೂಲಕ ಅವಳ ಕುಟುಂಬದ ಶಾಂತಿಯನ್ನು ಕಳೆದುಕೊಳ್ಳುವಳು. ಹಾಗಾಗಿ ಹೆಣ್ಣಿಗೆ ಮುಕ್ತ ವಾತಾವರಣದ ಅವಶ್ಯಕತೆಯಿರುವುದನ್ನು ಸಮೀರಾ ಪಾತ್ರದ ಮೂಲಕ ಸೂಚನೆ ನೀಡಿದ್ದಾರೆ.

ಹೀಗೆ ಧರ್ಮದ ನೆಲೆಯಲ್ಲಿ ಗುರುತಿಸಿಕೊಳ್ಳುವ ಮತ್ತೊಂದು ಕುಟುಂಬ ಕರೀಂಸಾಬ್‌ದು. ಕರೀಂಸಾಬ್ ಆತನ ಪತ್ನಿ ಖತೀಜ, ಮಗ, ಸೊಸೆ, ಕಿರಿಯ ಮಕ್ಕಳು ಈ ಕುಟುಂಬದಲ್ಲಿದ್ದಾರೆ.

ಆ ಮನೆಯ ಯಜಮಾನ ಪುರುಷನಾದರೂ, ತನ್ನ ಮನೆಯ ಆರ್ಥಿಕ ಪರಿಸ್ಥಿತಿಯನ್ನು ಪೂರೈಸಲು ಹೊರದೇಶಗಳಿಗೆ ಹೋಗಿ ದುಡಿಯುವುದು ಈ ಮನೆಯ ಪುರುಷರಿಗೆ ಅನಿವಾರ್ಯ. ಅದರಂತೆ ಆ ಮನೆಯ ಯಜಮಾನಿ ಖತೀಜ ಗಂಡ ಊರಿನಲ್ಲಿದ್ದು ಕಡಿಮೆ ಸಂಪಾದನೆಯಿಂದ ಮನೆಯನ್ನು ನಡೆಸಲಾರದೆ ಗಂಡ ಹೊರದೇಶಕ್ಕೆ ಹೋಗಿ ದುಡಿಯುವುದರ ಬಗ್ಗೆ ಸಂತೃಪ್ತಿ ಹೊಂದಿದವಳು. ಗಂಡನ ಅನುಪಸ್ಥಿತಿಯಲ್ಲಿ ಆ ಮನೆಯ ಎಲ್ಲ ಜವಾಬ್ದಾರಿಗಳನ್ನು ಖತೀಜ ನಿರ್ವಹಿಸುವಳು. ಅಲ್ಲದೆ ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ಆ ಮನೆಯ ಹೆಣ್ಣುಮಕ್ಕಳು ಸಹ ತರಕಾರಿ ವ್ಯಾಪಾರ ಮಾಡುವುದರ ಮೂಲಕ ಮನೆಯ ದುಡಿಮೆಗೆ ಸಹಾಯಕರಾಗುತ್ತಾರೆ. ತಾಯಿಗೆ ಮನೆಯ ಹೆಣ್ಣುಮಕ್ಕಳ ಬಗ್ಗೆ ಅತೀವ ಕಾಳಜಿಯಿರುವುದು ಕಂಡುಬರುತ್ತದೆ. ತಾಯಿ ತನ್ನ ಹೆಣ್ಣುಮಕ್ಕಳಿಗೆ ವಿವಾಹ ಸಂಬಂಧವನ್ನು ಒಳಪಡಿಸುವುದರ ಮೂಲಕ ಜೀವನ ಸಾರ್ಥಕತೆಯನ್ನು ಬಯಸುತ್ತಾರೆ. ಅಲ್ಲದೆ ವಿವಾಹ ನೆರವೇರಿಸಲು ತಮ್ಮ ಪತಿಗೆ ಒತ್ತಾಯ ಮಾಡುತ್ತಾರೆ. ಇಲ್ಲಿ ಹೆಣ್ಣಿನ ಜೀವನ ಸಾರ್ಥಕಗೊಳ್ಳುವುದು ವಿವಾಹದಿಂದ. ಆದರೆ ತನ್ನ ಮಗಳಿಗೆ ಅವಳ ತಂದೆ ವಯಸ್ಸಿನ ಪುರುಷ ವಿವಾಹವಾಗಲು ಇಚ್ಛಿಸಿದಾಗ ಅದನ್ನು ಪ್ರತಿಭಟಿಸುತ್ತಾಳೆ. ತನ್ನ ಈ ಪ್ರತಿಭಟನೆಯಿಂದ ಮಸೀದಿಯ ಅಧ್ಯಕ್ಷನಿಂದ ಅನೈತಿಕತೆಯ ಅಪವಾದ ಹೊತ್ತು ಶಿಕ್ಷೆಗೆ ಒಳಗಾಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅಲ್ಲದೆ ತನ್ನ ಈ ಪರಿಸ್ಥಿತಿಯಿಂದ ರಕ್ಷಣೆಗಾಗಿ ಗಂಡನ ಮೊರೆ ಹೋದರೂ, ಅಲ್ಲಿಯೂ ರಕ್ಷಣೆ ಸಿಗದಾದಾಗ ಗಂಡನ ಮನಃಪರಿವರ್ತನೆಗಾಗಿ ಅವನ ಪುರುಷ ಆಲೋಚನೆಯನ್ನು ಬದಲಾಯಿಸಿ ಕಾನೂನು ನೆರವು ಪಡೆಯುವುದರ ಮೂಲಕ ತನ್ನ ಮೇಲಿನ ಅಪವಾದವನ್ನು ಬಗೆಹರಿಸಿಕೊಳ್ಳುವ ದಿಟ್ಟ ಮಹಿಳೆಯನ್ನು ಖತೀಜಳ ಪಾತ್ರದಲ್ಲಿ ಕಾಣಬಹುದಾಗಿದೆ. ಈ ಮೂಲಕ ಇಲ್ಲಿ ಹೆಣ್ಣು ವ್ಯವಸ್ಥೆಯ ನಿಯಂತ್ರಣಕ್ಕೆ ಒಳಗಾಗಿದ್ದಾಳೆ. ಈ ವ್ಯವಸ್ಥೆಯ ಎಲ್ಲೆಯನ್ನು ಮೀರಿ ತನ್ನ ಸ್ವಂತ ಇಚ್ಛೆಯಂತೆ ಬದುಕಲು ಹೋದಾಗ ಆ ವ್ಯವಸ್ಥೆಯಿಂದ ತನ್ನ ಗಂಡನ ಕುಟುಂಬದಿಂದಲೇ ಅಭದ್ರತೆಗೆ ಒಳಗಾಗುವ ಪರಿಸ್ಥಿತಿಯಿದೆ. ಹೀಗೆ ಪುರುಷವ್ಯವಸ್ಥೆ ಹೆಣ್ಣನ್ನು ಯಾವಾಗಲೂ ತನ್ನ ಅಧೀನದಲ್ಲೇ ಇರಲು ಬಯಸಿ ವ್ಯಕ್ತಿ ಸ್ವಾತಂತ್ರ್ಯವಿಲ್ಲದೆ ಬದುಕುವಂತೆ ಮಾಡುತ್ತದೆ.

'ಮೂಲೆ ಮುಟ್ಟಿದ ಹುಳು' ಕಥೆಯ ಸುಂದರಮ್ಮ ಗಂಡನಿಲ್ಲದ ಪರಿತ್ಯಕ್ತ ಮಹಿಳೆ. ತಾಯಿ, ಮಗನಿರುವ ತಂದೆಯಿಲ್ಲದ ಕುಟುಂಬ. ಇಲ್ಲಿ ಸುಂದರಮ್ಮನ ಪಾತ್ರದಲ್ಲಿ ಗಂಡನಿಲ್ಲದ ಬದುಕು ಕತ್ತಲೆಯಂತೆ ಆವರಿಸಿದ್ದು, ತನ್ನ ಬದುಕಿನ ಬೆಳಕನ್ನು ತನ್ನ ಮಗನಲ್ಲಿ ಕಾಣುತ್ತಾಳೆ. ಇಲ್ಲಿ ಸುಂದರಮ್ಮ ಗಂಡನಿದ್ದರೂ ಅವಳನ್ನು ತಿರಸ್ಕರಿಸಿ ಪರಸ್ತ್ರೀಯನ್ನು ವಿವಾಹವಾದ ಅನುಕೂಲಸ್ಥ ಗಂಡಸು. ಅಲ್ಲದೆ ತನ್ನ ಪತ್ನಿಗೆ ಜೀವನಾಂಶ ಕೊಡದೆ ಗಂಡುಮಗುವನ್ನು ಅವಳಿಗೆ ದಯಪಾಲಿಸಿರುವುದು ಅತ್ಯಂತ ಮಹತ್ವವಾದದ್ದು ಎಂದು ಭಾವಿಸಿ ಪಲಾಯನವಾದಿ ಪುರುಷನಾಗಿ ಕಂಡುಬರುತ್ತಾನೆ. ಆದರೆ ಸುಂದರಮ್ಮ ನೆರೆಹೊರೆಯ ಮನೆಯಲ್ಲಿ ಅಕ್ಕಿ ಕೇರುವ

ಕೆಲಸ, ಹಪ್ಪಳ ಸಂಡಿಗೆ ಮಾಡುವ ಕೆಲಸ, ಇಂತಹ ಕೂಲಿ ಕೆಲಸ ಮಾಡುವುದರ ಮೂಲಕ ತನ್ನ ಮಗ, ಮನೆಗಾಗಿ ಅವಿರತವಾಗಿ ದುಡಿಯುತ್ತಿದ್ದಾಳೆ. ಅಲ್ಲದೆ ಮಗನಿಗೆ ವಿದ್ಯಾಭ್ಯಾಸ ಕೊಡಿಸಿ, ಆ ಮೂಲಕ ಕೆಲಸ ಸಿಕ್ಕಿದರೆ ಅವಳ ಮಗ ಬರದೆ ಕೆಲಸದಿಂದ ನಿವೃತ್ತಿ ಹೊಂದು ಮನಸ್ಸು. ಇಲ್ಲಿ ತಾನು ಕಲಿತ ವಿದ್ಯಾಭ್ಯಾಸದಿಂದ ಉತ್ತಮ ನಡವಳಿಕೆಗಳು ಕಂಡುಬಂದು ಅದರಿಂದ ಒಂದು ರೀತಿಯ ಸ್ವಾಭಿಮಾನವನ್ನು ಬೆಳಸಿಕೊಂಡು ತಾಯಿಯನ್ನು ಅತ್ಯಂತ ತಾತ್ಸಾರದಿಂದ ಕಾಣುತ್ತಾನೆ. ಅಲ್ಲದೆ ತಾಯಿಯು ಮಗನಿಗೆ ಮಾಡುವ ಪ್ರತಿಯೊಂದು ಸೇವೆಯಲ್ಲೂ ಪ್ರೀತಿಯನ್ನು ತೋರುತ್ತಾಳೆ. ಅದನ್ನು ಮಗ ಭಾವಿಸದೆ ಅವನು ಒಬ್ಬ ಗಂಡಸಾಗಿಯೇ ಉಳಿಯುತ್ತಾನೆ. ಇಲ್ಲಿ ತಾಯಿ ಮಗನ ದಿನನಿತ್ಯದ ಬೇಡಿಕೆಗಳನ್ನು ಈಡೇರಿಸುವುದರಲ್ಲೇ ತನ್ನ ಜೀವನವನ್ನು ಕಳೆಯುತ್ತಾಳೆ. ಅಲ್ಲದೆ ತನ್ನ ಕಷ್ಟಗಳಿಗೆ ಮಗ ಸ್ಪಂದಿಸಬೇಕೆಂದು ಬಯಸುತ್ತಾಳೆ. ಆದರೆ ಅದು ಸಾಧ್ಯವಾದಾಗ ಯಾವುದೇ ಆಕಾಂಕ್ಷೆಯಿಟ್ಟುಕೊಳ್ಳದೆ ನಿಸ್ವಾರ್ಥ ವಾತ್ಸಲ್ಯವನ್ನು ತೋರಿಸುತ್ತಾಳೆ. ಹೀಗೆ ಮನೆಯ ಒಳ ಹಾಗೂ ಹೊರಗಿನ ದಿನನಿತ್ಯದ ದುಡಿಮೆಯಿಂದ ಮಾನಸಿಕವಾಗಿ, ದೈಹಿಕವಾಗಿ ಕೃಶಳಾಗುತ್ತಾಳೆ. ಮಗನ ಬದಲಾದ ಸ್ವಭಾವಗಳಿಗಾಗಿ ಹಾತೊರೆಯುತ್ತಾಳೆ. ಅಲ್ಲದೆ ತನ್ನ ಕಷ್ಟಗಳಿಗೆ ಸ್ಪಂದಿಸುವ ಸಂಗಾತಿಯ ಅಪೇಕ್ಷೆಯಿದ್ದರೂ ಮಗನ ಬದುಕಿಗಾಗಿ ಅದನ್ನು ತಿರಸ್ಕರಿಸುತ್ತಾಳೆ. ಆದರೆ ಮಗ ತನ್ನ ಜವಾಬ್ದಾರಿಯನ್ನು ಅರಿಯದೆ ಹೋದಾಗ ವಿವಾಹಪೂರ್ವದಲ್ಲೇ ಬಾಲ್ಯಾವಸ್ಥೆಯಲ್ಲಿ ಹೆಣ್ಣಿನ ಸಹವಾಸ ಕಂಡು ತಾಳ್ಮೆ ಮೀರಿ ಅ ಮನೆಯನ್ನು ತೊರೆದು ಮತ್ತೊಂದು ಬದುಕನ್ನು ಕಟ್ಟಿಕೊಳ್ಳಲು ನಿರ್ಧರಿಸುತ್ತಾಳೆ. ಆದರೆ ಇಲ್ಲಿ ಸುಂದರಮ್ಮ ಬಯಸಿದ ಅಪ್ಪಣ್ಣ ಎಂಬ ಮೂಲಪುರುಷ ಅವಳನ್ನು ಬಯಸುವುದು ತನ್ನ ಕೆಲಸಕ್ಕೆ ಸಹಾಯಕವಾಗಲೆಂದೇ ಹೊರತು ಅವಳನ್ನು ಒಬ್ಬ ಸಹಧರ್ಮಿಣಿಯಾಗಿ ಕಾಣುವ ಭಾವನೆಯಿಂದಲ್ಲ. ಅದು ಈ ಮಹಿಳೆಗೆ ಅವಶ್ಯಕವಾಗಿ ತೋರುವುದಿಲ್ಲ. ಮುಗ್ದ ಮಹಿಳೆ ಸುಂದರಮ್ಮ ಆಲೋಚನೆ ಮಾಡದಷ್ಟು ಪ್ರಬುದ್ದೆಯಲ್ಲ.

'ಅಂಕುರ' ಕಥೆಯಲ್ಲಿ ಬರುವ ಶಕೀಲಾಳ ತಂದೆ ವ್ಯಾಪಾರಿಯಾಗಿದ್ದು ಮಧ್ಯಮವರ್ಗದ ಬದುಕನ್ನು ನಡೆಸುತ್ತಿದ್ದರು. ಮೂರು ಹೆಣ್ಣುಮಕ್ಕಳ ತಂದೆಯಾದ ಇವರಿಗೆ ಹೆಣ್ಣುಮಕ್ಕಳಿಗೆ ಮದುವೆ ಮಾಡುವುದು ಅವರ ಕರ್ತವ್ಯವಾಗಿತ್ತು. ಈ ಮನೆಯಲ್ಲಿ ಹೆಣ್ಣುಮಕ್ಕಳು ಹುಟ್ಟುವುದೇ ಗಂಡನ ಮನೆ ಸೇರಲು ಎಂಬ ನಂಬಿಕೆಯಿತ್ತು. ಅವರು ಶಿಕ್ಷಿತರಾಗಬೇಕೆಂಬ, ತಮ್ಮನ್ನು ತಾವು ಹೊರ ಪ್ರಪಂಚಕ್ಕೆ ತೆರೆದುಕೊಳ್ಳಬೇಕೆಂಬ ಯಾವ ಆಕಾಂಕ್ಷೆಯೂ ಇಲ್ಲದವರು. ವಿವಾಹವಾಗುವ ಹೆಣ್ಣು ಗಂಡನ ಮನೆಯಲ್ಲಿ ಸುರಕ್ಷಿತವಾಗಿ ಬದುಕಬೇಕಾದರೆ ತವರಿನ ಮನೆಯಿಂದ ಗಂಡನ ಮನೆಗೆ ಬರಬೇಕಾದ ಸಂಪತ್ತು ಒದಗಿದಾಗ ಮಾತ್ರ. ಹೀಗೆ ಇಲ್ಲಿ ಪುರುಷಸಮಾಜ ಹೆಣ್ಣನ್ನು ವ್ಯಕ್ತಿಯಾಗಿ ನೋಡದೆ ಹಣದ ಮೌಲ್ಯವನ್ನು ನೋಡುತ್ತಾರೆ. ಹೀಗೆ ಹಣವಿಲ್ಲದೆ ಗಂಡನ ಮನೆ

ಸೇರಿದ ಶಕೀಲಾಗೆ ವಿವಾಹವಾದ ನಂತರ ಗಂಡನ ಮನೆಯಲ್ಲಿ ಆರ್ಥಿಕ ದುಸ್ಥಿತಿ ಒದಗಿದಾಗ ಹೆಣ್ಣಿನ ತಂದೆತಾಯಿಗಳನ್ನು ಕಾಡಿಸುವುದು ಸಹಜ. ಹೆಣ್ಣಿನ ತವರಿನವರು ಆರ್ಥಿಕವಾಗಿ ಅಸಹಾಯಕರಾದಾಗ ಹೆಣ್ಣುಮಕ್ಕಳು ತವರಿನ ಸಂಬಂಧವನ್ನು ಕಡಿದುಕೊಳ್ಳುವಂತೆ ಗಂಡನಿಂದ ಆಜ್ಞಾಪಿಸಲಾಗುತ್ತದೆ. ಇಲ್ಲಿ ಶಕೀಲಾಳ ತಂದೆ ತಾಯಿಗಳು ತನ್ನ ಮಗಳನ್ನು ಸಂತೈಸುವುದು ಈ ರೀತಿ. "ಹೋಗಿ ಬಾ ಮಗಳೆ! ತಾಯಿ ಮಕ್ಕಳ ಸಂಬಂಧ ಅಳಿಸಲಾರದ ಸಂಬಂಧ. ನೀನು ಎಲ್ಲಿದ್ದರೂ ನನ್ನ ಮಗಳೇ ಅಲ್ಲವೆ? ಆದರೆ ಪತಿಪತ್ನಿಯರ ಸಂಬಂಧ ಮೂರು ತಲಾಖಗಳ ಸಂಬಂಧ ತಾನೇ? ಅದು ತುಂಡಾಗದಂತೆ ಜಾಗ್ರತೆಯಿಂದಿರು"(ಚಪ್ಪಲಿಗಳು, ಪುಟ.೧೯೩). ಹೆಣ್ಣುಮಕ್ಕಳನ್ನು ಹೆತ್ತವರೇ ಅಳಿಯ ಮಗಳ ಸಂಬಂಧ ಶಾಶ್ವತವಾದುದು ಎಂದು ಒಪ್ಪಿಕೊಳ್ಳುವ ಮೂಲಕ ಹೆಣ್ಣು ಗಂಡನ ಮನೆಯಲ್ಲಿ ಅಭದ್ರತೆಯನ್ನು ಸದಾಕಾಲ ಉಳಿಯುವಂತೆ ಪುರುಷವ್ಯವಸ್ಥೆ ನಿರ್ಮಿಸಿದೆ. ಅದನ್ನು ಸಹಿಸಿಕೊಂಡು ಅತ್ಯಂತ ಸಹನೆಯಿಂದ ತನ್ನ ಗಂಡನ ಮನೆಯಲ್ಲಿ ತನ್ನ ಸ್ಥಾನವನ್ನು ಸ್ಥಾಪಿಸಿಕೊಳ್ಳಬೇಕು ಎಂದು ತಿಳಿಹೇಳುತ್ತಾರೆ. ಆ ಮೂಲಕ ಇರುವ ವ್ಯವಸ್ಥೆಯನ್ನು ಒಪ್ಪಿ ಮನಗಾಣಿಸಿ ಮುಂದುವರಿಸಿಕೊಂಡು ಹೋಗುವ ಹೆತ್ತವರ ಕುಟುಂಬವನ್ನು ಇಲ್ಲಿ ಕಾಣಬಹುದು. ಆದರೆ ಅಳಿಯನ ವರ್ತನೆಯನ್ನು ಪ್ರಶ್ನಿಸುವ ಸಾಮರ್ಥ್ಯ ಹೆತ್ತವರಿಗೆ ಇಲ್ಲ ಎಂಬುದು ಇಲ್ಲಿ ತಿಳಿಯುತ್ತದೆ. ಹೆಣ್ಣುಮಕ್ಕಳಿಗೆ ಹೀಗೆ ಹೆತ್ತವರು ಮಕ್ಕಳ ಕಷ್ಟಗಳನ್ನು ನೋಡಿಯೂ ಸಹನೆಯಿಂದ ಬಾಳಬೇಕು ಎಂಬ ಹೊಂದಾಣಿಕೆಯ ಮನೋಭಾವನೆಯನ್ನು ಅವರಲ್ಲಿ ಒಡಮೂಡುವಂತೆ ಮಾಡುವ ಅವರು ಇಲ್ಲಿ ಅಸಹಾಯಕರಾಗಿ ಕಾಣುತ್ತಾರೆ. ತವರಿಂದ ಹಣ ತರದೇ ತವರಿನ ಸಂಬಂಧ ಕಡಿದು, ಗಂಡನ ಮನೆಯವರಾದ ಅತ್ತೆ ಮೈದುನನಿಂದ ಮಾನಸಿಕ, ದೈಹಿಕ ಹಿಂಸೆ ಅನುಭವಿಸುವ, ಮನೆಯಲ್ಲಿ ಬಿಡುವಿಲ್ಲದ ದುಡಿಮೆ, ವರ್ಷಕ್ಕೊಂದರಂತೆ ಹುಟ್ಟುವ ಮಕ್ಕಳ ಲಾಲನೆ ಪಾಲನೆಯಿಂದ ಹೆಣ್ಣು ಕೃಶಳಾಗುವ ಪರಿಸ್ಥಿತಿಯಿದೆ. ಶಕೀಲಾಳ ಅತ್ತೆ ಹೆಣ್ಣಿಗಿರದ ಪುರುಷ ಸ್ವಭಾವವನ್ನು ಪಡೆದಿದ್ದು ಗಂಡಸಿನ ಅಧಿಕಾರವನ್ನು ವಿಧೇಯಳಾಗಿ ಪಾಲಿಸುವಂತೆ ಸೊಸೆಯ ಮೇಲೆ ಒತ್ತಡ ತರುತ್ತಾಳೆ. ಶಕೀಲಾಳ ಅತ್ತೆಯ ಮನೆಯಲ್ಲಿ ಗಂಡನ ವಿದೇಶಿ ಹಣ ಸಂಪಾದನೆಯಿಂದ ಆ ಮನೆಯು ಚಲಾವಣೆಯಲ್ಲಿತ್ತು. ಇಲ್ಲಿ ಶಕೀಲಾ ಅನಕ್ಷರಸ್ಥಳಾಗಿದ್ದು ಗಂಡನ ಅನುಪಸ್ಥಿತಿಯಲ್ಲಿ ಮಕ್ಕಳ ಬೇಡಿಕೆಗಳನ್ನು ಈಡೇರಿಸಲಾಗದೆ ಅವುಗಳ ಈಡೇರಿಕೆಗಾಗಿ ಮೈದುನನಲ್ಲಿ ಹಣ ಕೇಳುತ್ತಾಳೆ. ಸಹಜವಾಗಿ ಗಂಡನ ದುಡಿಮೆಯನ್ನು ತನ್ನ ಹೆಸರಿಗೆ ಬರುವಂತೆ ಮಾಡಿದ್ದು ಅವಳ ಅಪರಾಧವಾಗಿ ಅತ್ತೆ ಮತ್ತು ಮೈದುನನ ಕೋಪಕ್ಕೆ ಗುರಿಯಾಗುತ್ತಾಳೆ. ಇದರಿಂದ ಅವಳನ್ನು ನೀತಿಗೆಟ್ಟ ನಡತೆಯವಳೆಂದು ಅಪವಾದ ಹೊರಿಸಿ ಗಂಡನ ಆದೇಶದಂತೆ ಅವಳನ್ನು ಗಂಡನ ಮನೆಯಿಂದ ತವರುಮನೆಗೆ ಒತ್ತಾಯವಾಗಿ ಕಳುಹಿಸುತ್ತಾರೆ. ಇಲ್ಲಿ ಹೆಣ್ಣಿಗೆ ತನ್ನ ಗಂಡನ ಮೇಲೆ ವಿಶ್ವಾಸವಿದ್ದು ಅವನ ಬರುವಿಕೆಗಾಗಿ ಕಾಯುವವಳು. ಅಲ್ಲದೆ ಗಂಡನ ರಕ್ಷಣೆಗಾಗಿ ಹಾತೊರೆಯುವಳು. ಹೆಣ್ಣು

ಗಂಡನ ಅನುಪಸ್ಥಿತಿಯಿಂದ, ಗಂಡನ ಮನೆಯವರ ಕಿರುಕುಳದಿಂದ ಬೇಸತ್ತರೂ ಗಂಡನ ಮನೆಯನ್ನು ತೊರೆಯಲು ಇಷ್ಟಪಡದವರು. ಆದರೆ ಗಂಡನ, ಗಂಡನ ಮನೆಯವರ ತಿರಸ್ಕಾರದಿಂದ ತವರುಮನೆ ಸೇರುವವರು. ಅಲ್ಲದೆ ಗಂಡನ ಮನೆ, ಮಕ್ಕಳಿಗಾಗಿ ಹಪಹಪಿಸುವವರು. ಇಲ್ಲಿ ಗಂಡನು ತಿರಸ್ಕರಿಸಿದಾಗ, ಮಕ್ಕಳಿಗಾಗಿ ಅವರನ್ನು ಸಾಕುವ ಹೊಣೆ ಹೊರಲು ಇಲ್ಲಿನ ತಾಯಂದಿರು ಹಪಿಹಪಿಸುವವರು. ಹೆಣ್ಣುಮಕ್ಕಳನ್ನು ಹೆರುವುದು ಅವಳ ಕರ್ತವ್ಯ. ಅವುಗಳ ಲಾಲನೆ-ಪಾಲನೆ ಮಾಡುವುದು ಇವರ ಕರ್ತವ್ಯ. ಆದರೆ ಹೆಣ್ಣಿಗೆ ಅವಳ ಗಂಡನ ಮನೆ ಇಲ್ಲದಾಗ ಮಕ್ಕಳು ಗಂಡನಿಗೆ ಸೇರುತ್ತವೆ. ಇಲ್ಲಿ ತಾಯಿಗೆ ಮಕ್ಕಳ ಮೇಲೆ ಯಾವ ಹಕ್ಕೂ ಇಲ್ಲದಂತಾಗುತ್ತದೆ. ಹೀಗೆ ಗಂಡನ ವರ್ತನೆಯನ್ನು ಕುರಿತು ಶಕೀಲಾ "ಮಕ್ಕಳಿಗಾಗಿ ದೈಹಿಕವಾಗಿ, ಮಾನಸಿಕವಾಗಿ ಯಾತನೆಯನ್ನು ಅನುಭವಿಸಿದವಳು ತಾನು. ಒಂಬತ್ತು ತಿಂಗಳು ಹೊಟ್ಟೆಯಲ್ಲಿಟ್ಟು ಅವುಗಳಿಗೆ ರಕ್ಷಣೆ ನೀಡಿದವಳು. ಸಾವಿನೊಡನೆ ಸೆಣಸಾಡಿ ಅವುಗಳಿಗೆ ಜನ್ಮ ನೀಡಿದವಳು. ಆದರೆ ಈಗ ನನಗೂ ಆ ಮಕ್ಕಳಿಗೂ ಯಾವ ಸಂಬಂಧವೂ ಇಲ್ಲ, ಹುಟ್ಟಿದಂದಿನಿಂದ ಒಂದು ವರ್ಷದವರೆಗೆ ಅವುಗಳ ಮುಖವನ್ನೇ ನೋಡಿರದ ಆ ತಂದೆ" ಎನಿಸಿಕೊಂಡವನು ಅವುಗಳ ಸಂಪೂರ್ಣ ಹಕ್ಕುದಾರನಾಗಿದ್ದಾನೆ! ಇದು ಹೇಗೆಂದು ಆಕೆಗೆ ಈಗಲೂ ಅರ್ಥವಾಗಲೇ ಇಲ್ಲ. ಆದರೆ ಆಕೆಯ ಮನದಾಳದಿಂದ ಪ್ರಶ್ನೆಯೊಂದು ಉದ್ಭವಿಸತೊಡಗಿತು. "ಧರ್ಮ ಎಂದರೇನು?" (ಚಪ್ಪಲಿಗಳು, ಪುಟ.೧೯೧)

ಹೀಗೆ ಹೆಣ್ಣನ್ನು ಕೇವಲ ದೈಹಿಕವಾಗಿ ನೋಡುವ ಮುಸ್ಲಿಂ ಸಮಾಜ ತನ್ನ ದೇಹದಿಂದ ಹೆತ್ತ ಮಕ್ಕಳನ್ನು ಸಾಕುವ ಹೊಣೆಗಾರಿಕೆ ಕೇವಲ ತಾಯಿಯದು ಎನ್ನುತ್ತದೆ. ಆ ಮಗುವಿಗಾಗಿ ಗಂಡನ ಮನೆಯ ಹಿಂಸೆ, ಸಹನೆ, ದೈಹಿಕವಾಗಿ, ಮಾನಸಿಕವಾಗಿ ತೊಳಲಾಟವನ್ನು ಅನುಭವಿಸುತ್ತಾಳೆ. ಗಂಡನ ಅನುಪಸ್ಥಿತಿಯಲ್ಲಿ ಮಕ್ಕಳ ಸಂಪೂರ್ಣ ರಕ್ಷಣೆ ಮಾಡಿದವಳು ಹೆಣ್ಣು. ಆದರೆ ಅ ಮಕ್ಕಳ ಆರ್ಥಿಕ ಹೊಣೆಗಾರಿಕೆ ತಂದೆಯದಾಗಿದ್ದು, ಈ ಹೊಣೆಗಾರಿಕೆಯೇ ಹೆಚ್ಚು ಮೌಲ್ಯ ಪಡೆದು ಕೊನೆಗೆ ಗಂಡನಿಂದ ವಿಚ್ಛೇದನೆಪಡೆದ ಮಹಿಳೆ ಮಕ್ಕಳ ಮೇಲೆ ಯಾವ ಹಕ್ಕಿಲ್ಲದೆ ಅವು ಅವರ ತಂದೆಗೆ ಸೇರಬೇಕಾದ್ದು ಎಂದು ರೂಪಿಸಿದ ಮುಸ್ಲಿಂ ಧಾರ್ಮಿಕತೆಯ ಲಿಂಗ ಅಸಮಾನತೆಯನ್ನು ಕುರಿತು ಆ ಮಹಿಳಾ ಪಾತ್ರದಲ್ಲಿ ಪ್ರಶ್ನೆಯನ್ನು ಮೂಡಿಸುವಷ್ಟು ಜಾಗೃತಳಾಗುತ್ತಾಳೆ ಹೊರತು ಯಾವುದೇ ಬದಲಾವಣೆ ಆ ಪಾತ್ರದಲ್ಲಿ ಕಾಣಲಾಗುವುದಿಲ್ಲ. ಈ ಕುಟುಂಬದಲ್ಲಿ ಮಹಿಳೆ ತನ್ನ ಆರ್ಥಿಕ ಅಸಹಾಯಕತೆಯಿಂದ, ವಿದ್ಯೆಯಿಲ್ಲದೆ, ಹೊರಗಿನ ವ್ಯವಹಾರದ ಜ್ಞಾನವಿಲ್ಲದೆ, ಗಂಡನ ಮನೆಯಲ್ಲಿ ಅಭದ್ರತೆಯನ್ನು ಅನುಭವಿಸಿ, ಆ ಮನೆಯಿಂದ ತಿರಸ್ಕೃತಳಾಗಿ, ನೆಲೆಯಿಲ್ಲದ ಸ್ಥಿತಿಯಿರುವುದನ್ನು ಕಾಣುತ್ತೇವೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಹುಟ್ಟುವುದು ಹೊರೆಯೆಂದು ಭಾವಿಸುವಂತೆ ಸಮಾಜ ರೂಪಿತವಾಗಿದೆ. ಇದಕ್ಕೆ ಪೂರಕವಾಗಿರುವಂತೆ 'ವಿಜ್ಞಾನ ಭವಿಷ್ಯ ನುಡಿದಾಗ' ಕಥೆಯಲ್ಲಿ

ಮಧುಕರನ ವರ್ತನೆಯಿದೆ. ಮಧುಕರ, ಅವನ ತಾಯಿ, ಆತನ ಪತ್ನಿ ಇಬ್ಬರು ಹೆಣ್ಣುಮಕ್ಕಳಿರುವ ಈ ಕುಟುಂಬದಲ್ಲಿ ತಾಯಿಯು ಹಳ್ಳಿಯಲ್ಲಿ ವಾಸಿಸುತ್ತಿದ್ದಳು. ಮಧುಕರ ನಗರದಲ್ಲಿ ವೃತ್ತಿನಿರತನಾಗಿದ್ದ. ತನ್ನ ತಾಯಿಯಿರುವ ಹಳ್ಳಿಗೆ ಪತ್ನಿ ಮಕ್ಕಳೊಡನೆ ಹೋಗಿಬರುವ ರೂಢಿಯನ್ನು ಇಟ್ಟುಕೊಂಡಿದ್ದ. ಇದನ್ನು ಗಮನಿಸಿದಾಗ ವಾಸದ ನೆಲೆಯಲ್ಲಿ ಗಂಡ–ಹೆಂಡತಿ–ಮಕ್ಕಳಿರುವ ಸರಳ ಕುಟುಂಬ ಕಂಡುಬಂದರೂ ಸಂಬಂಧದ ನೆಲೆಯಲ್ಲಿ ಕೂಡುಕುಟುಂಬ ಕಾಣಿಸುತ್ತದೆ. ಉದ್ಯೋಗದ ಅನಿವಾರ್ಯತೆಯಿಂದ ಕುಟುಂಬಗಳು ಒಡೆದರೂ ಅವು ಸಂಬಂಧಗಳ ನೆಲೆಯಲ್ಲಿ ಸಂಕೀರ್ಣವಾಗಿವೆ. ಮಾಲಿನಿಯನ್ನು ಆ ಮನೆಯ ಗಂಡ, ಅತ್ತೆ ಅವಳನ್ನು ಒಂದು ವ್ಯಕ್ತಿಯಾಗಿ ನೋಡದೆ ಮನೆಯ ಆಳಾಗಿ, ಮಗುವನ್ನು ಹೆರುವ ತಾಯಿಯಾಗಿ ಮಾತ್ರ ಭಾವಿಸುತ್ತಾರೆಯೇ ಹೊರತು ಅವಳ ಕಷ್ಟಗಳಿಗೆ ಸ್ಪಂದಿಸುವುದಿಲ್ಲ. ಸೊಸೆ ಗಂಡುಮಗುವನ್ನು ಹೆರುವುದು, ಹೆರಲೇಬೇಕೆಂಬ ಒತ್ತಾಯ, ಇವುಗಳ ನಡುವೆ ಹೆಣ್ಣು ಹೆತ್ತರೆ ಅತ್ತೆ ಗಂಡನ ನಿಂದನೆಗಳಿಗೆ ಗುರಿಯಾಗಬೇಕಾದ ಅನಿವಾರ್ಯ, ಅಲ್ಲದೆ ಹುಟ್ಟುವ ಮಕ್ಕಳ ಪಾಲನೆ, ಲಾಲನೆ, ಮನೆಗೆಲಸ ಆ ಹೆಂಗಸಿನ ಕರ್ತವ್ಯ. ಅದು ಗಂಡಸಿಗೆ ಸಂಬಂಧಪಟ್ಟದ್ದಲ್ಲ. ಹೀಗೆ ತಾಯ್ತನದಿಂದ ಹೆಣ್ಣು ಮಾನಸಿಕವಾಗಿ, ದೈಹಿಕವಾಗಿ ತೃಶಳಾಗುತ್ತಾಳೆ. ಅದನ್ನು ತಡೆಗಟ್ಟಲು ಗಂಡನ ಇಚ್ಛೆಯಂತೆ ಆಧುನಿಕ ಶಸ್ತ್ರಚಿಕಿತ್ಸೆಗೆ ಒಳಪಟ್ಟು ಗರ್ಭಪಾತಕ್ಕೆ ಗುರಿಯಾಗುವುದು, ವೈದ್ಯರ ಬೇಜವಾಬ್ದಾರಿತನದಿಂದ ಗರ್ಭದಲ್ಲಿ ಗಂಡು–ಹೆಣ್ಣು ಎಂದು ಗುರುತಿಸದೆ ಚಿಕಿತ್ಸೆ ಕೊಡುವುದು, ಆದರೆ ಗರ್ಭದಲ್ಲಿರುವ ಮಗು ಗಂಡುಮಗು ಎಂದು ತಿಳಿದ ಮೇಲೆ ಹೆಚ್ಚು ಆಘಾತಕ್ಕೊಳಗಾದವರು ತಾಯಿ ಮಾಲಿನಿ. ಈ ಅವಧಿಯಲ್ಲಿ ಮಾನಸಿಕ ಅಸ್ವಸ್ಥತೆಗೆ ಒಳಗಾಗಿ ತನ್ನ ಮಕ್ಕಳು ಮನೆಯ ಎಲ್ಲ ಜವಾಬ್ದಾರಿಗಳಿಂದ ದೂರವಾದ ಪಾತ್ರವಾಗಿ ವರ್ತಿಸುತ್ತಾಳೆ. ಹೀಗೆ ಹೆಣ್ಣು ಗಂಡನ ಮನೆಯ ಹೊಣೆಗಾರಿಕೆಯಿಂದ ಬಿಡುಗಡೆಗೊಳ್ಳುವುದು, ಮಾನಸಿಕ ರೋಗಿಯಾದಾಗ ಮಾತ್ರ. ಅದು ಹೆಣ್ಣಿಗೆ ಅಸಹಜವಾದದ್ದು. ಏಕೆಂದರೆ ತನ್ನ ಮಾನಸಿಕ ಸಮತೋಲನ ಹಿಂದಿರುಗಿದ ಮೇಲೆ ಅವಳು ಪುನಃ ತನ್ನ ಗಂಡನ, ಮಕ್ಕಳ ಕೆಲಸ ಕಾರ್ಯಗಳಲ್ಲಿ ನಿರತಳಾಗುವುದರ ಮೂಲಕ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುತ್ತಾಳೆ. ಹೀಗೆ ಹೆಣ್ಣು ಮಾನಸಿಕವಾಗಿ ನೊಂದಾಗ ಆ ಮನೆಯ ಗಂಡಸು ತನ್ನ ವರ್ತನೆಯಲ್ಲಿ ಬದಲಾವಣೆ ತಂದುಕೊಂಡು ಮಕ್ಕಳ, ಮನೆಯ ಜವಾಬ್ದಾರಿ ಹೊರುತ್ತಾನೆ. ಆದರೆ ಪತ್ನಿ ಸ್ವಸ್ಥಳಾದಾಗ ಪುನಃ ಆ ವ್ಯಕ್ತಿ ಗಂಡಸಾಗಿಯೇ ಉಳಿದು ಎಂದಿನಂತೆ ಆ ಹೆಣ್ಣಿನ ದೇಹದ ಮೇಲೆ, ಮನಸ್ಸಿನ ಮೇಲೆ ಅಧಿಕಾರ ಚಲಾಯಿಸುತ್ತಾ ಅವಳನ್ನು ಮಾತ್ರ ತಾಯಿಯಾಗುವ, ಅದರಲ್ಲೂ ಗಂಡುಮಗುವಿನ ತಾಯಿಯಾಗುವಂತೆ ಒತ್ತಾಯಿಸುತ್ತಾನೆ. ಹೀಗೆ ಹೆಣ್ಣು ಗಂಡನ ಬದಲಾದ ವರ್ತನೆಯಿಂದ ಮಕ್ಕಳನ್ನು ಹೆರುವ ಕ್ರಿಯೆಯಿಂದ ಮುಕ್ತಿಯೆಂದು ಭಾವಿಸುವುದು ಕ್ಷಣಿಕ. ಆ ಮನೆಯ ಪುರುಷ ಗಂಡುಮಗುವಿನ ತಾಯಿಯಾಗುವಂತೆ ಒತ್ತಾಯಿಸಿದಾಗ(ಚಪ್ಪಲಿಗಳು, ಪುಟ.೧೫೭) ಪುನಃ ಮಾನಸಿಕ ರೋಗಿಯಾಗಿ

"ಹೆಂಡತಿ ಎಂದರೇನು? ಎಂದು ತನ್ನನ್ನು ಪ್ರಶ್ನಿಸುವ ಮೂಲಕ ತಾಯ್ತನವು ಅವಳಿಗೆ ಸುಖವಿಲ್ಲದ ಹೊಣೆಗಾರಿಕೆಯಾಗಿ ಪುರುಷಸಮಾಜ ನಿರ್ಮಿಸುವುದನ್ನು ಇಲ್ಲಿ ಗ್ರಹಿಸಬಹುದು.

ಸಾರಾ ಅವರ ಕಥೆಗಳಲ್ಲಿನ ಸ್ತ್ರೀ ಪಾತ್ರಗಳು ಮುಖ್ಯವಾಗಿ ಹಿರಿಯ ಪಾತ್ರಗಳಾದ ಫಾತೀಮಾ(ಚಪ್ಪಲಿಗಳು), ಶಕೀಲಾಳ ತಾಯಿ(ಅಂಕುರ), ಇತ್ಯಾದಿ ಹೆಂಗಸರಿಗೆ ಯಾವುದೇ ಮಹಾತ್ವಾಕಾಂಕ್ಷೆಗಳಲ್ಲಿ ಪಿತೃಪ್ರಧಾನ ವ್ಯವಸ್ಥೆ ಹಾಕಿಕೊಟ್ಟ ಚೌಕಟ್ಟಿನೊಳಗೆ, ಅದರಲ್ಲೂ ಮನೆಯ ಚೌಕಟ್ಟಿನೊಳಗೆ ಬಂಧನದಲ್ಲಿ ಉಸಿರುಗಟ್ಟಿಸುವ ವಾತಾವರಣದಲ್ಲಿ ಗಂಡನ ಇಚ್ಛೆಯಂತೆ ಅವನ ಆಸೆ ಆಕಾಂಕ್ಷೆಗಳಿಗೆ ಪೂರಕವಾಗಿ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಉತ್ತೇಜಿಸುವರು. ಇವರು ಹೀಗೆ ಮಾಡಲು ಆ ಕಥೆಗಳಲ್ಲಿ ವ್ಯಕ್ತವಾಗಿರುವಂತೆ ಅನಕ್ಷರಸ್ಥರಾಗಿದ್ದು, ಹೊರವಾತಾವರಣದ ಪರಿಚಯವಿಲ್ಲದೆ ಜೀವಿಸುತ್ತಿರುವುದೇ ಪ್ರಮುಖ ಕಾರಣವಾಗಿದೆ. ಅಲ್ಲದೆ ಈ ಹೆಂಗಸರು ತಮ್ಮ ದೇಹದ ಮೇಲೆ ಯಾವುದೇ ಹಕ್ಕುಗಳಿಲ್ಲದೆ ಬದುಕುತ್ತಿದ್ದಾರೆ. ಹೆಣ್ಣಿಗೆ ಯಾವುದೇ ಆಸೆ ಆಕಾಂಕ್ಷೆಗಳಲ್ಲದೆ ತಮ್ಮ ಪುರುಷರಿಗಾಗಿ, ಅವರ ಮಕ್ಕಳಿಗಾಗಿ ದುಡಿಯುವುದೇ ತಮ್ಮ ಕರ್ತವ್ಯವೆಂದು ಭಾವಿಸಿದ್ದಾರೆ. ಇಲ್ಲಿ ಈ ಹೆಂಗಸರನ್ನು ಪುರುಷರು ಲೈಂಗಿಕವಾಗಿ ನಿರಂತರವಾಗಿ ಬಳಸಿಕೊಂಡು ಶೋಷಿಸುತ್ತಿದ್ದರೂ ಅದರ ವಿರುದ್ಧ ಚಕಾರವೆತ್ತುವುದಿಲ್ಲ. ಹಾಗೆ ಉತ್ತರಿಸುವುದು ಕೂಡ ಅವರಿಂದ ಸಾಧ್ಯವಿಲ್ಲ. ಏಕೆಂದರೆ ಆರ್ಥಿಕವಾಗಿ ಅಸಹಾಯಕರಲ್ಲದೆ ಹೆಣ್ಣು ಹುಟ್ಟಿರುವುದೇ ಗಂಡನ, ಮಕ್ಕಳ ಸೇವೆಗಾಗಿ ಎಂದು ಭಾವಿಸಿದವರು. ತಮ್ಮ ಗಂಡನಿಂದ ದೊರೆಯದ ಪ್ರೀತಿ ವಿಶ್ವಾಸವನ್ನು ಅಳಿಯ ಮಗಳಲ್ಲಿ ಕಂಡಾಗ ಆ ಸುಖವೇ ಇಮ್ಮಡಿಯಾಗಿ ಭಾವಿಸುವ ಮನೋಭಾವದವರು. ಇಲ್ಲಿನ ಹೆಂಗಸರು ತಮ್ಮ ಹೆಣ್ಣುಮಕ್ಕಳು ಪೋಷಕಿಯಿಲ್ಲದೆ, ಮನೆಯ ಜಗುಲಿಯ ಮೇಲೆ ನಿಂತಿದ್ದೇ ದೊಡ್ಡ ಅಪರಾಧವಾಗಿ ಪರಿಗಣಿಸಿದವರು. ಅಲ್ಲದೆ ಗಂಡ ತರುವ ಬೆಲೆಬಾಳುವ ವಸ್ತ್ರಗಳಲ್ಲಿ ಅತ್ತೆಯ ಕಾಟವಿಲ್ಲದೆ ತವರಿನಲ್ಲೇ ವಾಸಿಸುವ ಮಗಳ ಸುಖವನ್ನು ಕಂಡು ಸುಖಿಸುವರು. ಹೆಣ್ಣುಮಕ್ಕಳು ಗಂಡಸು ವಿಧಿಸಿದ ನಿಯಮ ಮೀರಿದಾಗ ಅದರ ಕಾರಣಗಳನ್ನು ಅರಿಯದೆ ಹೋದರು. ಅಲ್ಲದೆ ಶಬೀರ ತಾಯಿ(ಚಪ್ಪಲಿಗಳು) ಮಗ ಸಿನಿಮಾಕ್ಕೆ ಕರೆದಾಗ "ನೋಡು ಶಬೀರ, ನಾನೀವರೆಗೆ ಅಂತಹ ಕೆಲಸವನ್ನು ಮಾಡಿಲ್ಲ. ಈಗ ಗೋರಿಯೊಳಗೆ ಒಂದು ಕಾಲಿಟ್ಟು ಕುಳಿತಿರುವಾಗ ಅಂತಹ ಕೆಲಸ ಮಾಡುವುದು ಆಗಲ್ಲ. ಇಲ್ಲಿ ನಾನು ಹೀಗೆಯೇ ಬದುಕು ಮುಗಿಸಿ ಬಿಡುತ್ತೇನೆ. ಆದರೆ ನೀವೆಲ್ಲರೂ ಹೋಗಿ ಬನ್ನಿ. ನೀನು ಹೋದ ಬಳಿಕ ಸಮೀರಾ ಒಬ್ಬಳೇ ಇದ್ದು ಬೇಸರ ಪಡುವುದಂತೂ ಇದ್ದೇ ಇದೆ. ಈಗಲಾದರೂ ಸುಖಪಡಲಿ"(ಚಪ್ಪಲಿಗಳು, ಪುಟ.೮) ಎಂದು ಮಗನಿಗೆ ಹೇಳುವ ತಾಯಿ ತಾನು ಮಾತ್ರ ತನ್ನ ಎಲ್ಲೆಯನ್ನು ಮೀರಿ ಬದುಕದವಳು. ಆದರೆ ತಮಗೆ ವಿಧಿಸಿದ ಈ ನಿಯಮಗಳು ಮುಂದಿನ ಪೀಳಿಗೆಗೂ ಮುಂದುವರಿಯದೆ ಬದಲಾಗಲಿ ಎಂದು ಸೊಸೆಯನ್ನು ಮಗನ ಜೊತೆ ಕಳುಹಿಸುವುದರ ಮೂಲಕ ಬದಲಾದ ಕಾಲಕ್ಕೆ ತನ್ನನ್ನು ತಾನು ಹೊಂದಿಸಿಕೊಳ್ಳುವ

ಮನೋಭಾವದವಳಾಗಿದ್ದಾಳೆ. ಅದು ಈ ರೀತಿ ಶಬೀರ ತಾಯಿಯ ಬದಲಾವಣೆಗಳಿಗೆ ಆತನ ಮನೆಯಲ್ಲಿ ಪುರುಷರಿಲ್ಲದೆ ಇರುವುದೇ ಕಾರಣವೇ? ಹೀಗಿದ್ದರೂ ಶಬೀರ ತಾಯಿ ಅಣ್ಣನ ಅಧಿಕಾರ ನಿಯಂತ್ರಣಕ್ಕೆ ಒಳಗಾಗಿ ತನ್ನ ಈ ಕೆಲಸಕ್ಕೆ ಪಶ್ಚಾತ್ತಾಪ ಪಡುವವಳು. ಹೀಗೆ ಇಲ್ಲಿ ಈ ಹೆಂಗಸರು ಮನೆಯ ಗಂಡನಿರಲಿ, ಇಲ್ಲದಿರಲಿ ಆ ಮನೆಯ ಹಿರಿಯ ಪುರುಷರ ನಿಯಂತ್ರಣಕ್ಕೆ ಒಳಗಾಗಿ ಬದುಕುವವರೇ ಹೊರತು ಯಾವುದೇ ಕಾರಣಕ್ಕೂ ಸ್ವಚ್ಛಂದವಾಗಿ ಅವರಿಗೆ ಬದುಕಲು ಸಾಧ್ಯವಿಲ್ಲದ ಪರಿಸ್ಥಿತಿಯಿದೆ. ಅಲ್ಲದೆ ಹಿರಿಯ ಮಹಿಳೆಯರು ತಮ್ಮ ಪುರುಷರನ್ನು ಮನಃ ಪರಿವರ್ತಿಸುವ ದುಸ್ಸಾಹಸವನ್ನು ಮಾಡುವುದು ಅಸಹಜವಾಗಿದೆ. 'ಅಂಕುರ' ಕಥೆಯಲ್ಲಿನ ಶಕೀಲಾಳ ತಾಯಿಗೆ, ಮಗಳಿಗೆ ಅವಳ ಗಂಡನ ಮನೆಯಲ್ಲಿ ಕಷ್ಟಗಳಿದ್ದರೂ ಕ್ಷಣಕಾಲಕ್ಕೆ ಅಳಿಯ ತಂದುಕೊಡುವ ಹೊಸ ವಸ್ತುಗಳನ್ನು ಕಂಡು ತಮ್ಮ ಹೆಣ್ಣುಮಕ್ಕಳಿಗೆ "ಅತ್ತೆಯ ಕಿರುಕುಳವನ್ನು ಹೇಗಾದರೂ ಸಹಿಸಿಕೋ ಮಗಳೇ, ನಿನ್ನ ಗಂಡ ಒಳ್ಳೆಯವನು" ಎಂದು ಎಲ್ಲ ಕಷ್ಟಗಳಿಗೂ ಹೊಂದಾಣಿಕೆ ಮಾಡಿಕೊಳ್ಳುವಂತೆ ಉತ್ತೇಜಿಸುತ್ತಾರೆಯೇ ಹೊರತು ಅದಕ್ಕಿಂತ ಮಿಗಿಲಾಗಿ ಅಲೋಚಿಸುವವರಲ್ಲ. ಅಲ್ಲದೆ ತಾವು ಬೆಳೆಸಿದ ಹೆಣ್ಣುಮಕ್ಕಳ ಬಗ್ಗೆ ವಿಶ್ವಾಸವಿದ್ದವರು. ಆದರೆ ಅನೈತಿಕ ಅಪವಾದ ಹೊತ್ತು ಗಂಡನ ತಿರಸ್ಕಾರಕ್ಕೆ ಒಳಗಾದಾಗ ಅದನ್ನು ಪರಾಮರ್ಶಿಸುವ ಆಲೋಚನೆಯಿಲ್ಲದೆ ತಮ್ಮ ಮಗಳ ಬಗ್ಗೆ ಅವಿಶ್ವಾಸ ಮೂಡಿಬರುವ ಮೂಲಕ "ಅಯ್ಯೋ ಮಗಳೇ, ಇಂತಹ ನೀಚ ಕೆಲಸ ಮಾಡಿ ಮನೆತನಕ್ಕೆ ಅಪಕೀರ್ತಿ ತಂದೆಯಾ?(ಚಪ್ಪಲಿಗಳು, ಪುಟ.೧೯೬) ಮದುಮಗಳನ್ನು ನಿಂದಿಸುವರೇ ಹೊರತು ತಮ್ಮ ಮಗಳ ಬಗ್ಗೆ ಅಚಲವಾದ ವಿಶ್ವಾಸ ಅವರಲ್ಲಿ ಕಂಡುಬರುವುದಿಲ್ಲ. ಅಲ್ಲದೆ ಹೆಣ್ಣುಮಕ್ಕಳು ಹುಟ್ಟಿದ ಮನೆ, ಗಂಡನ ಮನೆಯನ್ನು, ಅವರ ಗೌರವವನ್ನು ಉಳಿಸಲು ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ಬದುಕುವುದು ಅನಿವಾರ್ಯವಾಗಿ. ಅದರಂತೆ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಹಂಬಲಿಸುವ ಪಾತ್ರವಾಗಿ ಕಂಡುಬರುತ್ತದೆ. ಆದರೆ ಇದಕ್ಕಿಂತ ಭಿನ್ನ ಪಾತ್ರವಾಗಿ ಖತೀಜ(ಧರ್ಮ ಬಲೆ ಬೀಸಿದಾಗ) ಪಾತ್ರದಲ್ಲಿ ಕಾಣಬಹುದು. ಇಲ್ಲಿ ಈ ಹೆಂಗಸರು ತಮ್ಮ ಹೆಣ್ಣುಮಕ್ಕಳನ್ನು ಬೆಳೆಸುವುದೇ ವಿವಾಹದ ಮೂಲಕ ಗಂಡನ ಮನೆ ಸೇರಿಸಲು. ಅಲ್ಲಿ ನೆಮ್ಮದಿಯನ್ನು ಕಾಣುವುದು ಮುಖ್ಯ ಉದ್ದೇಶವಾದರೂ ತಮ್ಮ ಹೆಣ್ಣುಮಕ್ಕಳಿಗೆ ಸಮವಯಸ್ಕ ಸಂಗಾತಿಯನ್ನು ಆಯ್ದು ವಿವಾಹ ಮಾಡುವ ಮನೋಭಾವದವಳು. ಹೀಗೆ ಅವರ ಆಲೋಚನೆಯಲ್ಲಿ ಬದಲಾವಣೆಯನ್ನು ಕಾಣಬಹುದು. ಅಲ್ಲದೆ ವಯಸ್ಸಾದ ಧಾರ್ಮಿಕ ಮುಖಂಡ ಕರೀಂಸಾಬ್‌ಗೆ ತನ್ನ ಮಗಳನ್ನು ಕೊಡದ ಕಾರಣ ಅನೈತಿಕತೆಯ ಅಪವಾದವನ್ನು ಹೊರಿಸಿದಾಗ ಅದನ್ನು ಪ್ರತಿಭಟಿಸುವ ಮನೋಭಾವ ಬೆಳೆಯುತ್ತಿದೆ. ಈ ಪಾತ್ರದಲ್ಲಿ ಆ ಸಾಮರ್ಥತೆ ಮೂಡಲು ಕಾರಣ ಗಂಡನ ಅನುಪಸ್ಥಿತಿಯಲ್ಲೂ ಮನೆಯ ಹೊಣೆಗಾರಿಕೆಯನ್ನು ನಿಭಾಯಿಸುವ ಮೂಲಕ ಅವಳಿಗೆ ಸಹಜವಾಗಿ ಈ ಸಮಸ್ಯೆಯನ್ನು ಎದುರಿಸುವ ಸಾಮರ್ಥ್ಯ ಒದಗಿದೆ. ಇಲ್ಲಿನ

ಪುರುಷರಿಗೆ ತಮ್ಮ ಹೆಂಗಸರ ಬಗ್ಗೆ ವಿಶ್ವಾಸವಿಲ್ಲದಿದ್ದರೂ ವ್ಯವಸ್ಥೆಯನ್ನು ಮೀರಿ ಬದುಕುವ ಸಾಮರ್ಥ್ಯವಿಲ್ಲದೆ ತಮ್ಮ ಹೆಂಗಸರು ಮಾಡಿರದ ಅಪರಾಧಕ್ಕೆ ಶರಣಾಗತಿಯಾಗಿ, ತಪ್ಪನ್ನು ಒಪ್ಪಿಕೊಳ್ಳುವಂತೆ ಅವರ ಮನ ಒಲಿಸುವವರೇ ಹೊರತು ವ್ಯವಸ್ಥೆಯನ್ನು ಎದುರಿಸಿ ತಮ್ಮ ಮನೆಯ ಹೆಣ್ಣುಮಕ್ಕಳನ್ನು ಆ ಅಪವಾದದಿಂದ ಮುಕ್ತಗೊಳಿಸುವವರಲ್ಲ. ಗಂಡನ ಈ ವರ್ತನೆಯನ್ನು ಸಹಿಸದೆ "ನೀವೂ ಇಷ್ಟು ಸಣ್ಣವರಾಗುತ್ತೀರಿ ಎಂದು ನಾನು ಭಾವಿಸಿರಲಿಲ್ಲ. ನೀವು ಈ ನಾಯಿಗಳಿಂದ ನನ್ನನ್ನು ರಕ್ಷಿಸುತ್ತೀರಿ ಎಂದುಕೊಂಡಿದ್ದೆ. ಎಷ್ಟಾದರೂ ನೀವೂ ಕೂಡ ಅದೇ ಗಂಡು ಜಾತಿ ತಾನೇ? ಹೆಣ್ಣನ್ನು ತುಳಿಯಲು ಅವಕಾಶ ಎಲ್ಲಿ ಸಿಗುತ್ತದೆ ಎಂದು ಕಾದು ಕುಳಿತುಕೊಳ್ಳವವರಲ್ಲವೆ?"(ಚಪ್ಪಲಿಗಳು, ಪುಟ.೮೦) ಎಂಬ ಧ್ವನಿ ಹಿಂದೆ ಹೆಣ್ಣು ಯಾವಾಗಲೂ ಗಂಡನ ಬಗ್ಗೆ ವಿಶ್ವಾಸವಿಡುವಳು. ಗಂಡ ಇರುವುದೇ ನಮ್ಮನ್ನು ರಕ್ಷಿಸಲು, ಈ ಗಂಡನ ಮನೆ ತಮ್ಮ ಸುರಕ್ಷಾ ಸ್ಥಳ ಎಂದು ಭಾವಿಸಿದವರಿಗೆ ಅದು ದುರ್ಲಭವಾದಾಗ ಅವರ ವಿರುದ್ಧ ಸಾಗುವವರು. ಅಲ್ಲದೆ ತಾವು ಎಲ್ಲೆಯನ್ನು ಮೀರದೆ ಗಂಡನ ಮನವೊಲಿಸುವುದರ ಮೂಲಕ ಕಾನೂನು ನೆರವು ಪಡೆದು ಅ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವ ಸಾಮರ್ಥ್ಯವನ್ನು ಹೊಂದಿದವರು.

೪.೬. ಬಾನು ಮುಷ್ತಾಕ್

ಬಾನು ಮುಷ್ತಾಕ್ ಅವರು ೮೦ರ ದಶಕದಲ್ಲಿ ಬಂದ ಕಥೆಗಾರ್ತಿ. 'ಬೆಂಕಿಮಳೆ', 'ಎದೆಯ ಹಣತೆ', 'ಹೆಜ್ಜೆ ಮೂಡಿದ ಹಾದಿ', 'ಸಫೀರಾ' ಇತ್ಯಾದಿ ಕಥಾಸಂಕಲನಗಳನ್ನು ರಚಿಸಿದ್ದಾರೆ. ಇವರ ಕಥಾಸಂಕಲನಗಳಲ್ಲಿ ವಿವಿಧ ವರ್ಗದ ಮಹಿಳೆಯರಿದ್ದಾರೆ. ಮೊದಲನೆಯದಾಗಿ ಅವಿವಾಹಿತ ಉದ್ಯೋಗಸ್ಥ ಮಹಿಳೆ, 'ರಾಹಿಲ ಎಂಬ ಕನ್ಯೆಯ ಕಥೆ'ಯ ರಾಹಿಲ ಗೃಹಿಣಿ, 'ಲವಬರ್ಡ' ಕಥೆಯ ಸುಜಾತ ಹದಿಹರೆಯದ ಮಹಿಳೆ 'ಪುಟ್ಟ ನಕ್ಷತ್ರ' ಕಥೆಯಲ್ಲಿ ರಶ್ಮಿ ಪರಿತ್ಯಕ್ತ ಮಹಿಳೆ, 'ಬೊಗಸೆ ನೀರು' ಕಥೆಯ ಪ್ರತಿಭಾ ಗೃಹಿಣಿ, 'ಜಬೀನ' ಪತಿಯಿಂದ ತಿರಸ್ಕೃತಗೊಂಡ ಮಹಿಳೆ, ವಿಧವೆ ಹೀಗೆ ಭಿನ್ನ ಭಿನ್ನ ವರ್ಗದ ಮಹಿಳೆಯರ ಚಿತ್ರಣ ಅನೇಕ ಕತೆಗಳಲ್ಲಿದೆ. ಇಲ್ಲಿ ಮೇಲ್ವರ್ಗದ ಹಾಗೂ ಕೆಳವರ್ಗದ ಕುಟುಂಬಗಳಿವೆ. ಕೂಡುಕುಟುಂಬ ಹಾಗೂ ಸರಳ ಕುಟುಂಬಗಳಿವೆ. ಮುಸ್ಲಿಂ ಸಮುದಾಯದ ಈ ಕುಟುಂಬದಲ್ಲಿನ ಮಹಿಳೆಯರ ಸಮಸ್ಯೆಗಳನ್ನು ಕುರಿತು ತಮ್ಮದೇ ಆದ ತಾತ್ವಿಕ ನೆಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ.

'ರಾಹಿಲ ಎಂಬ ಕನ್ಯೆಯ ಕಥೆ' ಈ ಕಥೆಯಲ್ಲಿ ಅವಿವಾಹಿತ ಉದ್ಯೋಗಸ್ಥ ಮುಸ್ಲಿಂ ಮಹಿಳೆಯ ಚಿತ್ರಣವಿದೆ. ಇಲ್ಲಿ ಮಹಿಳೆ ಉದ್ಯೋಗಸ್ಥಳಾಗಿದ್ದರೂ ವಿವಾಹದ ವಯಸ್ಸು ಮೀರುತ್ತಿದ್ದರೂ ವಿವಾಹವಾಗದ ಪರಿಸ್ಥಿತಿಯಿದೆ. ಕೊನೆಗೆ ವಿವಾಹವಾಗಲು ಮುಂದೆ ಬಂದಿದ್ದು ಅಂಗವಿಕಲ ಶೌಕತ್ ಹಾಗೂ ಬೇರೆ ಜಾತಿಯ ಪ್ರಸಾದ್. ಸಂಗಾತಿಯ ಆಯ್ಕೆಯಲ್ಲಿ

ದ್ವಂದ್ವತೆಯಿಂದ ಕೂಡಿದ್ದು ಕೊನೆಗೆ ತನ್ನ ಕುಟುಂಬದ ಇಚ್ಛೆಯಂತೆ ಅಂಗವಿಕಲನನ್ನು ವಿವಾಹವಾಗಲು ಸಮ್ಮತಿಸಿದ್ದರೂ, ಕೊನೆಗೆ ಅದು ದಕ್ಕುವುದಿಲ್ಲ. ಬೇರೆ ಜಾತಿಯ ಪರಪುರುಷನನ್ನು ವಿವಾಹವಾಗಲು ಕೌಟುಂಬಿಕ ಸಾಂಪ್ರದಾಯಿಕತೆ ಅಡ್ಡ ಬಂದು ಅತಂತ್ರ ಸ್ಥಿತಿಯಲ್ಲಿ ತೊಳಲಾಡುವ ಅಸಹಾಯಕ ಹೆಣ್ಣಿನ ಚಿತ್ರ ಈ ಕಥೆಯಲ್ಲಿ ಕಂಡುಬರುತ್ತದೆ. ಇಲ್ಲಿ ಸುಶಿಕ್ಷಿತ ಮಧ್ಯಮ ವರ್ಗದ ರಾಹಿಲ ಕುಟುಂಬ ಇದಕ್ಕೆ ವಿರುದ್ಧವಾಗಿ ಅಶಿಕ್ಷಿತ ಕೂಲಿಕೆಲಸದ ಹಫೀಜ ಕುಟುಂಬ ಬರುತ್ತದೆ. ಇಲ್ಲಿ ಈ ಎರಡೂ ಕುಟುಂಬದಲ್ಲಿ ದುಡಿಯುವ ಮಹಿಳೆಯರಿದ್ದಾರೆ. ಇಲ್ಲಿ ಲೇಖಕಿಗೆ ಮಹಿಳೆಯ ಬದುಕು ಮತ್ತು ಕುಟುಂಬ ಮುಖ್ಯವಾಗಿದೆ. ಹಾಗಾಗಿ ಮಹಿಳೆ ತನ್ನ ಬದುಕನ್ನು ಕಟ್ಟಿಕೊಳ್ಳಲು, ಅಂತರ್‌ಜಾತಿ ವಿವಾಹ ಮಾಡಿಕೊಳ್ಳಲು ಅವಕಾಶವಾಗುವಂತೆ ಮಹಿಳೆ ಅದನ್ನು ಪಡೆಯಲು ತೀರ್ಮಾನಗಳನ್ನು ತೆಗೆದುಕೊಳ್ಳಲು ಪರಸ್ಪರ ದ್ವಂದ್ವತೆಯಲ್ಲಿ ತೊಡಗುವ ಮಹಿಳಾ ಚಿತ್ರಣವಿದೆ.

'ಸರಿದ ಕಾರ್ಮೋಡ' ಕತೆಯಲ್ಲಿ ಜಬೀನ ಎಂಬ ಗೃಹಿಣಿಯ ಚಿತ್ರಣವಿದೆ. ಇಲ್ಲಿ ಜಬೀನ ಗಂಡ ನವಾಬ್ ಆಕೆಯನ್ನು ಹೆಚ್ಚು ಪ್ರೀತಿಸುತ್ತಿದ್ದು ಆಕೆಯ ಎಲ್ಲಾ ಬೇಕು ಬೇಡಗಳನ್ನು ಈಡೇರಿಸುವವನು. ಆದರೆ ತನ್ನ ಕುಟುಂಬದವರ ವರ್ತನೆ ಸರಿಯಿರಲಿ, ತಪ್ಪಿರಲಿ, ಅದನ್ನು ಪ್ರಶ್ನಿಸುವ ಹಕ್ಕನ್ನು ವಿರೋಧಿಸುವ ಹಕ್ಕನ್ನು ಜಬೀನಳಿಗೆ ಕೊಡದೇ ನಿಯಂತ್ರಿಸುತ್ತಾನೆ. ಕುಟುಂಬದ ಹಿರಿಯರಂತೆ ತನ್ನ ಗಂಡ ಮತ್ತೊಂದು ವಿವಾಹವಾದರೂ ಅದನ್ನು ವಿರೋಧಿಸುವ ಅವಕಾಶ ಅವಳಿಗಿಲ್ಲ. ಬದಲಿಗೆ ಅದನ್ನು ಅನುಸರಿಸಿಕೊಂಡು ಹೋಗುವ ಅಸಹಾಯಕ ಹೆಣ್ಣಿನ ಚಿತ್ರಣವಿದೆ. ಲೇಖಕಿ ಮಹಿಳಾ ಪಾತ್ರವನ್ನು ದುರಂತಗೊಳಿಸುವುದಿಲ್ಲ. ಬದಲಿಗೆ ಒಳ್ಳೆಯ ಪುರುಷ ಪಾತ್ರಗಳನ್ನು ತರುವುದರ ಮೂಲಕ ಕುಟುಂಬ ವಿಘಟನೆಗೆ ಅವಕಾಶ ಕೊಡುವುದಿಲ್ಲ. ಬದಲಾಗಿ ಪರಸ್ಪರ ಹೊಂದಾಣಿಕೆಯಿಂದ ಕುಟುಂಬವನ್ನು ರಕ್ಷಿಸುವ ಪಾತ್ರಗಳು ಮೂಡಿ ಬಂದಿವೆ. ಇಲ್ಲಿ ಪುರುಷ ಅಥವಾ ಮಹಿಳೆಯ ಪಾತ್ರಗಳು ಕುಟುಂಬದ ಪ್ರಾಧಾನ್ಯತೆ ಸಾರುವ ಕತೆಗಳಾಗಿ ಕಾಣುತ್ತೇವೆ. ಸ್ತ್ರೀ ಶೋಷಣೆಗಳನ್ನು ಕತೆಯಲ್ಲಿ ಮುಖ್ಯವಾಗಿಸದೇ ಕುಟುಂಬಕ್ಕೆ ಮಹತ್ವವನ್ನು ಲೇಖಕಿ ನೀಡಿದ್ದಾರೆ. ಅವಳ ಬದುಕು ಬಹಳ ಮುಖ್ಯವಾಗಿದೆ. ಇಲ್ಲಿ ಕೂಡು ಕುಟುಂಬವಿರದಿದ್ದರೂ ಸರಳಕುಟುಂಬವಿದ್ದರೂ ಸಹ ಅದು ಕುಟುಂಬದ ಹಿರಿಯರ ಸದಸ್ಯರ ನಿಯಂತ್ರಣದಲ್ಲಿರುವ ಕುಟುಂಬ ವ್ಯವಸ್ಥೆಯಿದೆ. ಇಲ್ಲಿ ಕುಟುಂಬದ ಇತರ ಮಹಿಳೆ ಹಾಗೂ ಪುರುಷ ಸದಸ್ಯರ ನಡುವೆ ವೈಮನಸ್ಸು ಆಂತರಿಕ ಸಂಘರ್ಷವಿದ್ದರೂ ಅದು ಅಬ್ಬರವಾಗಿರುವುದಿಲ್ಲ. ಇಲ್ಲಿ ಲೇಖಕಿಗೆ ಮಹಿಳೆಯ ಸ್ವಾತಂತ್ರ್ಯ ಮುಖ್ಯವಾಗಿ ಕಾಡುತ್ತದೆ. ಅಲ್ಲದೆ ಮುಸ್ಲಿಂ ಪುರುಷಪ್ರಧಾನ ವ್ಯವಸ್ಥೆಯ ಕ್ರೌರ್ಯದಿಂದ ಮಹಿಳೆಗೆ ಒದಗುವ ಹಿಂಸೆಯನ್ನು ಕುರಿತ ಚಿತ್ರಣವಿದೆ.

'ಶಾಹಿಸ್ತ ಮಹಲ್‌ನ ಕಲ್ಲು ಚಪ್ಪಡಿಗಳು' ಈ ಕಥೆಯಲ್ಲಿ ಮಹಿಳೆ ಪುರುಷನಿಗೆ ಒಂದು ವಸ್ತುವಾಗಿ ಬಳಕೆಯಾಗುತ್ತಾಳೆ. ಬದುಕಿನ ಭಾಗವಾಗಿ ಅಲ್ಲ. ಇಲ್ಲಿ ಹೆಂಡತಿಯನ್ನು ಅತಿಯಾಗಿ ಪ್ರೀತಿಸುವ ಪುರುಷರು ತಮ್ಮ ಪತ್ನಿ ವಿನಾಕಾರಣ ಸತ್ತಾಗ, ಸತ್ತ ೪೦ ದಿನದಲ್ಲಿ ಮತ್ತೊಂದು ಹೆಣ್ಣನ್ನು ಮದುವೆಯಾಗುವ ಸ್ವಾರ್ಥವಿದೆ. ಅಲ್ಲದೆ ಮಹಿಳೆ ಇಲ್ಲಿ ಹೆರುವ ಯಂತ್ರವಾಗಿದ್ದಾಳೆ. ಪುರುಷಪ್ರಧಾನ ವ್ಯವಸ್ಥೆಯಿಂದ ಮಹಿಳೆ ತನ್ನತನವನ್ನು ಕಳೆದುಕೊಂಡು ಬದುಕುವ ಸ್ಥಿತಿಯ ಬಗ್ಗೆ ಧ್ವನಿ ಕೊಡುವ ಪ್ರಯತ್ನ ಈ ಎಲ್ಲಾ ಕಥೆಗಳಲ್ಲಿ ವ್ಯಕ್ತವಾಗಿದೆ.

'ಕಥೆಯಾದ ಕಥೆ' ಕಥೆಯಲ್ಲಿ ಸೀಮಾ, ಆಸೀಪ್, ಶಮೀಮ್ ಪಾತ್ರಗಳು ಬರುತ್ತವೆ. ಇದರಲ್ಲಿ ವಿಧವೆ ಮಹಿಳೆಯಿದ್ದಾಳೆ. ಮಹಿಳೆ ಸೀಮಾ ತನ್ನ ಕುಟುಂಬವನ್ನು ಮೀರಲು ಸಾಧ್ಯವಾಗದೆ ತಾನು ಪ್ರೀತಿಸಿದ ಸಂಗಾತಿಯನ್ನು ವಿವಾಹವಾಗದೆ ಬೇರೊಬ್ಬ ಪರಪುರುಷರನ್ನು ವಿವಾಹವಾಗಿ ಆಕಸ್ಮಿಕವಾಗಿ ತನ್ನ ಪತಿಯನ್ನು ಕಳೆದುಕೊಂಡಾಗ ಈ ಕೊರತೆಯನ್ನು ತುಂಬಲು ಮೊದಲ ಪ್ರೇಮಿಯೊಂದಿಗೆ ಮರುವಿವಾಹದ ಆಯ್ಕೆಯನ್ನು ಪರಸ್ಪರ ವಿರೋಧತೆಯಲ್ಲಿ ತೊಡಗಿರುವ ಮಹಿಳೆಯ ತೀರ್ಮಾನಗಳನ್ನು ಕಾಣಬಹುದಾಗಿದೆ. ಮತ್ತೊಂದು ಕಥೆಯಾದ 'ಸಫೀರಾ'ದಲ್ಲಿ ಸುಶಿಕ್ಷಿತ ಮಹಿಳೆ ಇದ್ದಾಳೆ. ಸಫೀರಾ ಉದ್ಯೋಗದ ಆಕಾಂಕ್ಷೆಯನ್ನು ಹೊಂದಿದ್ದು, ಅದನ್ನು ಸಾಧಿಸಲು ಪತಿಯು ಅಡ್ಡ ಬಂದಾಗ ಆತನನ್ನು ಮತ್ತು ಕುಟುಂಬವನ್ನು ತೊರೆಯುವ ಮಹಿಳೆ ಇಲ್ಲಿದ್ದಾಳೆ. ಇಲ್ಲಿ ಕುಟುಂಬವನ್ನು ಒಡೆಯಲು ಕುಟುಂಬದ ಹಿರಿಯರ ಪಾತ್ರ ಹೆಚ್ಚಾಗಿ ಕಂಡುಬರುತ್ತದೆ. ಎಂತಹ ಪರಿಸ್ಥಿತಿಯಲ್ಲೂ ಸ್ತ್ರೀ-ಪುರುಷರು ಪರಸ್ಪರ ಹೊಂದಾಣಿಕೆಯಿಂದ ಬದುಕನ್ನು ನಿರ್ವಹಿಸುವ ಮಹಿಳಾ ಪಾತ್ರದ ಚಿತ್ರಣ ಈ ಕಥೆಯಲ್ಲಿದೆ. 'ಪುಟ್ಟ ನಕ್ಷತ್ರ' ಕಥೆಯಲ್ಲಿ ರಶ್ಮಿಯು ಮಹಿಳಾ ಆತ್ಮಾಭಿಮಾನದ ಸಂಕೇತವಾಗಿದ್ದಾಳೆ. ಮಹಿಳೆಯು ತನ್ನ ಅಸ್ತಿತ್ವವನ್ನು ಪ್ರತಿಪಾದಿಸುವ ಮಹಿಳಾ ಚಿತ್ರಣವಿದೆ. ಲೇಖಕಿಗೆ ಸ್ತ್ರೀ-ಪುರುಷರ ಪರಸ್ಪರ ಪ್ರೇಮವನ್ನು ಅಭಿವ್ಯಕ್ತಿಸಿದ್ದಾರೆ. ಅದರಿಂದ ಆಗುವ ಪರಿಣಾಮಗಳನ್ನು ಕುರಿತು ಯಾವುದೇ ನಿಲುವು ತಾಳದೆ ಇರುವುದು ಕತೆಗಳಲ್ಲಿ ಕಾಣುತ್ತೇವೆ. ಬಾಲಕಾರ್ಮಿಕ ಸ್ತ್ರೀ-ಪುರುಷರ ಬಗ್ಗೆ ಲೇಖಕಿಗೆ ಹೆಚ್ಚು ಆಸಕ್ತಿಯಿದ್ದು ಅವರ ಬದುಕನ್ನು ಮತ್ತು ಅವರ ಸಮಸ್ಯೆಗಳನ್ನು ಕುರಿತು ಚಿತ್ರಿಸಿದ್ದಾರೆ. ಅವರ ಎಲ್ಲ ಕಥಾಸಂಕಲನಗಳಲ್ಲಿ ಸುಶಿಕ್ಷಿತ ಉದ್ಯೋಗಸ್ಥರಾಗಿರುವ ಮಹಿಳೆಯಿದ್ದರೂ ಉದ್ಯೋಗದ ಬದುಕನ್ನು ಕಟ್ಟಿಕೊಳ್ಳಲಾಗದ ಪರಿಸ್ಥಿತಿಯಿದೆ. ಸಾಂಪ್ರಾದಾಯಿಕ ಕುಟುಂಬದ ನಿಯಂತ್ರಣಕ್ಕೆ ಒಳಪಟ್ಟಿರುವ ಮಹಿಳೆ ರಾಹಿಲ. ಈ ಮಹಿಳೆ ಬದುಕನ್ನು ಕಟ್ಟಿಕೊಳ್ಳಲು ಅನ್ಯಜಾತಿಯ ಪುರುಷನಿಂದ ಅವಕಾಶ ಸಿಕ್ಕಾಗ ಮುಸ್ಲಿಂ ಕುಟುಂಬವನ್ನು ಸಾಂಪ್ರದಾಯಿಕತೆಯನ್ನು ಮೀರದೆ ದ್ವಂದ್ವ ಪರಿಸ್ಥಿತಿಯಲ್ಲಿ, ಅಸಹಾಯಕ ಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ಇಲ್ಲಿನ ಮಹಿಳೆಯರು ತನ್ನ ಆಯ್ಕೆಯ ಸಂಗಾತಿಯನ್ನು ತಂದೆಯ ಕುಟುಂಬದ ವಿರುದ್ಧ ವಿವಾಹವಾಗಿ ಬದುಕನ್ನು ಕಟ್ಟಿಕೊಂಡರೂ, ತನ್ನದೇ ಮಗುವನ್ನು ಪಡೆಯಲು ಅವಕಾಶ ಮಾಡಿಕೊಡದಂತೆ

ಸಮಾಜವು ಅಡ್ಡಿಪಡಿಸುತ್ತದೆ. ಪುರುಷನ ನಿಯಂತ್ರಣದ ಕ್ರೌರ್ಯಕ್ಕೆ ಒಳಪಡುವ, ಇಂತಹ ಪರಿಸ್ಥಿತಿಯಲ್ಲೂ ಹೊಂದಾಣಿಕೆ ಮಾಡಿಕೊಳ್ಳುವ, ಮೌನಪ್ರತಿಭಟನೆ ತೋರುವ ಅಸಹಾಯಕ ಹೆಣ್ಣಿನ ಪರಿಸ್ಥಿತಿಯು ಸುಜಾತ ಪಾತ್ರದ ಮೂಲಕ ಕಾಣಬಹುದು. ಮುಸ್ಲಿಂ ಮಹಿಳೆಯರು ಸಾಂಪ್ರಾದಾಯಿಕ ಪುರುಷಪ್ರಧಾನ ವ್ಯವಸ್ಥೆಯ ಕುಟುಂಬದ ನಿಯಂತ್ರಣಕ್ಕೆ ಒಳಪಟ್ಟಿದ್ದಾರೆ. ಮಹಿಳೆಯರು ಸ್ವಂತ ಗಂಡನಿಂದ ಇಲ್ಲವೇ ಕುಟುಂಬದ ಹಿರಿಯ ಪುರುಷನಿಂದ ಹಿಂಸೆಗೆ ಒಳಗಾಗಿದ್ದಾರೆ. ಇಲ್ಲವೇ ಪರ ಮಹಿಳೆಯರಿಂದ ಹಿಂಸೆಗೆ ಒಳಗಾಗಿದ್ದಾರೆ. ಈ ಸಮಾಜದಲ್ಲಿ ಪುರುಷನು ಹಲವು ವಿವಾಹವಾಗುವುದು ಸಹಜವಾಗಿದೆ. ವಿವಾಹವಾಗಲು ಆತನಿಗೆ ಗಂಡುಮಗು ಕಾರಣವಾಗಿರಬಹುದು ಅಥವಾ ಯಾವುದೇ ಕಾರಣವಿರದೆಯೂ ಇರಬಹುದು, ಆತನು ಮರುವಿವಾಹವಾಗುವುದು ಸಹಜವಾಗಿದೆ. ಹೀಗೆ ವಿವಾಹವಾಗುವ ಮಹಿಳೆಯ ಇಚ್ಛೆ ಅಥವಾ ಒಪ್ಪಿಗೆಯು ಪುರುಷಪ್ರಧಾನ ವ್ಯವಸ್ಥೆಗೆ ಅವಶ್ಯಕತೆಯಿಲ್ಲದಂತೆ ವರ್ತಿಸುವುದು ಸಹಜವೆಂಬಂತೆ ಚಿತ್ರಿಸಲಾಗಿದೆ. ಹೀಗೆ ಇಷ್ಟೆಲ್ಲಾ ತಲ್ಲಣವನ್ನು ಮಹಿಳೆ ಅನುಭವಿಸಿದರೂ ಬದುಕನ್ನು ಒಡೆದುಕೊಳ್ಳದೆ ಈ ಎಲ್ಲಾ ಕಷ್ಟಗಳ ನಡುವೆಯೂ ಸ್ತ್ರೀ-ಪುರುಷ ಹೊಂದಾಣಿಕೆ ಮಾಡಿಕೊಳ್ಳುವುದರ ಮೂಲಕ ಬದುಕನ್ನು ಸಾಗಿಸುತ್ತಾಳೆ. ಮಹಿಳೆಯ ಚಿತ್ರಣವನ್ನು ಅಸಹಾಯಕವಾಗಿ ಚಿತ್ರಿಸುವುದರ ಮೂಲಕ ಲೇಖಕಿಗೆ ಬದುಕಿನ ಬಗೆಗೆ ಪ್ರೀತಿಯನ್ನು ತೋರಿಸುತ್ತಾಳೆ. ಲೇಖಕಿ ಮುಸ್ಲಿಂ ಕುಟುಂಬದಲ್ಲಿ ಮಹಿಳೆಯು ಅನುಭವಿಸುವ ಕಷ್ಟಗಳ ಚಿತ್ರಣವನ್ನು ಮೌನಧ್ವನಿಯಲ್ಲಿ ಚಿತ್ರಿಸಿದ್ದಾರೆ. ಆ ಮೂಲಕ ಅವಳ ಅಸಹಾಯಕತೆಯನ್ನು ತೋರಿದ್ದಾರೆ. ಅಲ್ಲದೆ ಮಹಿಳೆಗೆ ಸ್ವಾತಂತ್ರ್ಯದ ಅವಶ್ಯಕತೆಯನ್ನು ದಕ್ಕಿಸುವ ಪ್ರಯತ್ನ ಮಾಡಿದ್ದಾರೆ. ಲೇಖಕಿಗೆ ಮುಖ್ಯವಾಗಿರುವುದು ಮಹಿಳೆಯ ಸ್ವಾತಂತ್ರ್ಯ.

ಇವರ ಕತೆಗಳಲ್ಲಿ ಪುರುಷಪ್ರಧಾನ ಕುಟುಂಬ ವ್ಯವಸ್ಥೆಯಿದೆ. ಕೂಡುಕುಟುಂಬ, ಸರಳಕುಟುಂಬ, ತಾಯಿಕುಟುಂಬಗಳಿವೆ. ಮೇಲ್ವರ್ಗದ ಕುಟುಂಬ, ಕೆಳವರ್ಗದ ಮುಸ್ಲಿಂ ಕುಟುಂಬವಿದೆ. ಮುಸ್ಲಿಂ ಕುಟುಂಬದಲ್ಲಿ ಮಹಿಳೆ, ಪುರುಷ ತನ್ನ ಹಿರಿಯ ಕುಟುಂಬದ ಕ್ರೌರ್ಯಕ್ಕೆ ಒಳಗಾಗುತ್ತಾರೆ. ಆ ಮೂಲಕ ತಮ್ಮ ಸ್ವಂತ ಆಯ್ಕೆಯಿಂದಲ್ಲದೆ ಹಿರಿಯರ ಒತ್ತಾಯಕ್ಕೆ ಮಣಿದು ಕುಟುಂಬ ವಿಘಟನೆಗೆ ಕಾರಣವಾಗುವ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಆದರೆ ಎಂತಹ ಪರಿಸ್ಥಿತಿಯಲ್ಲೂ ಲೇಖಕಿ ಕುಟುಂಬದ ಕಲಹಕ್ಕೆ ಎಡೆ ಮಾಡಿಕೊಡದೆ ಪರಸ್ಪರ ಸ್ತ್ರೀ-ಪುರುಷ ಹೊಂದಾಣಿಕೆಯಿಂದ ಕುಟುಂಬವನ್ನು ರಕ್ಷಿಸುವುದರ ಮೂಲಕ ಕೌಟುಂಬಿಕ ಪ್ರೀತಿಯನ್ನು ಮಹಿಳೆಯರಲ್ಲಿ ವ್ಯಕ್ತಪಡಿಸುತ್ತಾರೆ. ಅಲ್ಲದೆ ಇಲ್ಲಿ ಸರಳ ಮುಸ್ಲಿಂ ಕುಟುಂಬಗಳಿದ್ದರೂ ಅವು ಕುಟುಂಬದ ಹಿರಿಯ ಸದಸ್ಯರ ನಿಯಂತ್ರಣಕ್ಕೆ ಒಂದಲ್ಲಾ ಒಂದು ರೀತಿಯಲ್ಲಿ ಒಳಪಟ್ಟಿವೆ. ಕುಟುಂಬದ ಇತರ ಸದಸ್ಯರ, ಪರಸ್ಪರ ಸ್ತ್ರೀಪುರುಷರ

ನಡುವೆ ಸಂಘರ್ಷಗಳಿದ್ದರೂ ಅವು ಅತಿರೇಕಕ್ಕೆ ಹೋಗದಂತೆ ಪಾತ್ರಗಳನ್ನು ಚಿತ್ರಿಸಲಾಗಿದೆ. ಹೀಗೆ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಗೆ ತನ್ನದೇ ಆದ ಅಸ್ತಿತ್ವವಿಲ್ಲದಿರುವುದನ್ನು ಕಾಣುತ್ತೇವೆ. ಅಸಹಾಯಕ ಹೆಣ್ಣಿನ ಚಿತ್ರಣವನ್ನು ಎಲ್ಲಾ ಕಥೆಗಳಲ್ಲಿ ಚಿತ್ರಿಸಿ ಅಂತಹ ಸ್ವಾತಂತ್ರ್ಯವನ್ನು ಮಹಿಳೆ ಅನುಭವಿಸಬೇಕು ಎಂಬ ಧ್ವನಿ ಲೇಖಕಿಯಲ್ಲಿದೆ. ಮರುವಿವಾಹದ ಮೂಲಕ ಹಾಗೂ ಹೊಂದಾಣಿಕೆಯ ಮೂಲಕ ಸ್ತ್ರೀಯ ಬದುಕನ್ನು ಹಾಗೂ ಕುಟುಂಬವನ್ನು ರಕ್ಷಿಸುವುದು ಲೇಖಕಿಯ ಮುಖ್ಯ ಉದ್ದೇಶವಾಗಿದೆ.

೪.೭. ನೇಮಿಚಂದ್ರ

ಹೊಸತಲೆಮಾರಿನ ಪ್ರಮುಖ ಕತೆಗಾರ್ತಿಯೆಂದು ಗುರುತಿಸಿಕೊಂಡವರು ನೇಮಿಚಂದ್ರ. ಇವರು **'ಒಂದು ಶ್ಯಾಮಲ ಸಂಜೆ', 'ಮತ್ತೆ ಬರೆದ ಕತೆಗಳು', 'ಇತ್ತೀಚಿನ ಕಥೆಗಳು', 'ನಮ್ಮ ಕನಸುಗಳಲ್ಲಿ ನೀವಿದ್ದಿರಿ'** ಇತ್ಯಾದಿ ಕಥಾಸಂಕಲನಗಳನ್ನು ರಚಿಸಿದ್ದಾರೆ. ಇವರ ಎಲ್ಲಾ ಕಥೆಗಳು ಸ್ತ್ರೀ ಕೇಂದ್ರಿತವಾಗಿವೆ. ಈ ಹೆಣ್ಣುಮಕ್ಕಳ ಮನೋಲೋಕವನ್ನು ಗ್ರಹಿಸಿ ಅವರ ಆಸೆ-ಆಕಾಂಕ್ಷೆಗಳನ್ನು ಗುರುತಿಸಿದ್ದಾರೆ. ಆದರೆ ಈ ಸ್ತ್ರೀಪರ ಒಲವು ಕೇವಲ ಸ್ತ್ರೀಪರ ಅಥವಾ ಪುರುಷವಿರೋಧಿ ಅಭಿವ್ಯಕ್ತಿಯಾಗದೆ ಗಂಡು ಹೆಣ್ಣುಗಳ ನಡುವೆ ಇರುವ ಕಂದಕಗಳನ್ನು ಹೋಗಲಾಡಿಸಿ ತಮ್ಮ ಅನುಭವಗಳಿಂದ ಪ್ರಬುದ್ಧರಾಗಿ ಬದುಕು ನಡೆಸಬೇಕೆಂಬ ತುಡಿತ ಅವರ ಈ ಎಲ್ಲಾ ಕಥೆಗಳಲ್ಲಿ ಬಿಂಬಿತವಾಗಿದೆ.

ಇವರ ಕತೆಗಳಲ್ಲಿರುವ ಹೆಣ್ಣುಮಕ್ಕಳು ಪ್ರತಿಷ್ಠಿತ ನಗರಗಳಾದ ಮುಂಬಯಿ, ಬೆಂಗಳೂರು, ದೆಹಲಿ, ಗೋವಾ, ಕಾಶ್ಮೀರ ಹೀಗೆ ಭಾರತಾದ್ಯಂತ ನೆಲೆಸಿ ಶಿಕ್ಷಣ, ಉದ್ಯೋಗವನ್ನು ಹುಡುಕಿಕೊಂಡು ತಮ್ಮ ಮೂಲ ನೆಲೆಯಿಂದ ಮತ್ತೊಂದು ಪ್ರದೇಶದತ್ತ ತಮ್ಮನ್ನು ತಾವು ವಿಸ್ತರಿಸಿಕೊಂಡಿರುವ ಈ ಮಹಿಳೆಯರು ವಿದ್ಯಾವಂತರು, ಉದ್ಯೋಗಸ್ಥರು, ಗೃಹಿಣಿಯರು. ಇವರು ಕಾರ್ಪೋರೇಟ್ ಜಗತ್ತಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸ್ವನೆಲೆಯಿಂದ ಗುರುತಿಸಿಕೊಂಡವರು. ಇವರ ಕಥೆಗಳಲ್ಲಿ ಮಹಿಳೆಯರು ತಾವು ಪಡೆದ ಉನ್ನತ ಶಿಕ್ಷಣದಿಂದ ವೃತ್ತಿಯನ್ನು ಪಡೆದುಕೊಂಡು ಸ್ವತಂತ್ರ್ಯವಾಗಿ ಬದುಕನ್ನು ಸಾಗಿಸುತ್ತಿರುವರು. ಇಲ್ಲಿ ಸ್ತ್ರೀ-ಪುರುಷರು ಸಮಾನ ನೆಲೆಯಲ್ಲಿ ಶಿಕ್ಷಣ ಪಡೆದು ಈ ಶಿಕ್ಷಣಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗುವುದು ಸಹಜ. ಸಾಮಾನ್ಯವಾಗಿ ಹದಿಹರೆಯದ ಈ ಹೆಣ್ಣು-ಗಂಡುಗಳು ಸಮಾನ ಶಿಕ್ಷಣ, ಉದ್ಯೋಗ ಹೊಂದಿದ್ದು ಪರಸ್ಪರ ಸಮಾನ ಹಿತಾಸಕ್ತಿಗಳನ್ನು ಹೊಂದಿ, ಆಕರ್ಷಿತರಾಗಿ, ಪರಸ್ಪರ ಪ್ರೀತಿ ವಿಶ್ವಾಸವನ್ನು ಹೊಂದಿ ಈ ಪ್ರೇಮ ಅವರನ್ನು ವೈವಾಹಿಕ ಜೀವನದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುವಂತೆ ತಮ್ಮ ಬದುಕಿನ ಬಗ್ಗೆ ತಾವೇ ತೀರ್ಮಾನ ಕೈಗೊಳ್ಳುವುದರಲ್ಲಿ ಸಮರ್ಥರಾಗಿದ್ದಾರೆ. ಹಾಗಾಗಿ ತಾವು ವಿವಾಹ ಸಂಗಾತಿಯನ್ನು ತಾವೇ

ಆಯ್ಕೆ ಮಾಡಿಕೊಳ್ಳುವರು. ಹೆತ್ತವರ ವಿರೋಧದಲ್ಲಿಯೇ ಅದನ್ನು ಕಡೆಗಣಿಸಿ ತಮಗೆ ಇಷ್ಟವಾದ ಬದುಕನ್ನು ಸಂಗಾತಿಯನ್ನು ಆಯ್ಕೆ ಮಾಡಿಕೊಂಡು ಬದುಕುವರು. ಸ್ತ್ರೀ-ಪುರುಷರ ಈ ಪ್ರೇಮವು ದೇಶ, ಗಡಿ, ಜಾತಿ ಎಲ್ಲೆಯನ್ನು ಮೀರುವ ಪಾವಿತ್ರ್ಯತೆಯನ್ನು ಗುರುತಿಸಿಕೊಂಡಿದೆ. ಈ 'ಪ್ರೇಮ' ಪರಿಕಲ್ಪನೆಯನ್ನು ಲೇಖಕಿ ಒಂದು ಸಂಕೀರ್ಣತೆಯಲ್ಲಿ ಗುರುತಿಸಿಕೊಂಡಿದ್ದಾರೆ ಹೊರತು ಅದು ಸರಳವಾಗಿಲ್ಲ. ಸಮಾನ ಶಿಕ್ಷಣ, ಉದ್ಯೋಗವಿರುವ ಗಂಡು-ಹೆಣ್ಣುಗಳಲ್ಲಿ ಪರಸ್ಪರ ಆಕರ್ಷಣೆಯಿದ್ದು, ಅದು ಕೆಲವು ಸಮಯದ ನಂತರ ಮರೆಯಾಗುವ ಮೂಲಕ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಲೇಖಕಿ ಪ್ರಕಾರ ಪ್ರೇಮ ಕ್ಷಣಿಕ, ಬದುಕು ಮುಖ್ಯ. ಈ ಕ್ಷಣಿಕವಾದ ಆಕರ್ಷಣೀಯ ಪ್ರೀತಿ ಬದುಕನ್ನು ಕಟ್ಟಿಕೊಡಲಾರದು ಎಂಬ ಧೋರಣೆ ಈ ಕಥೆಗಳ ಗಂಡು-ಹೆಣ್ಣುಗಳಲ್ಲಿ ಅಭಿವ್ಯಕ್ತಗೊಂಡಿದೆ. ಸ್ತ್ರೀ-ಪುರುಷರ ನಡುವಿನ ಈ ಪ್ರೇಮವು ವೈವಾಹಿಕ ಜೀವನದ ಮೂಲಕ ನೆಲೆಯನ್ನು ಕಂಡುಕೊಂಡರೆ, ಕೆಲವೊಮ್ಮೆ ಈ ಪ್ರೇಮ ಗಂಡು-ಹೆಣ್ಣುಗಳಲ್ಲಿ ವಿವಾಹಪೂರ್ವದಲ್ಲಿಯೇ ಬಿಡುಗಡೆಯನ್ನು ಬಯಸುತ್ತವೆ. ಈ ಬಿಡುಗಡೆಯನ್ನು ಲೇಖಕಿ ಇಲ್ಲಿ ವ್ಯಾಪಕವಾಗಿ ಅನಿವಾರ್ಯದ ತೀರ್ಮಾನಗಳಾಗಿ ಪರಿಗಣಿಸಿದ್ದಾರೆ.

ಇವರ ಕಥೆಗಳಲ್ಲಿ ಅಭಿವ್ಯಕ್ತವಾಗಿರುವ ಕುಟುಂಬಗಳು ಪ್ರಾದೇಶಿಕತೆಯಿಂದ ಭಿನ್ನವಾಗಿವೆ. ಇಲ್ಲಿನ ಕುಟುಂಬಗಳು ಗಂಡ-ಹೆಂಡತಿ ಒಳಗೊಂಡಿರುವ ವೈಯಕ್ತಿಕ ಕುಟುಂಬವಾಗಿದ್ದು ಪ್ರಾದೇಶಿಕ ಭಿನ್ನತೆಯಿಂದ ಕೂಡಿವೆ. ಈ ಗಂಡು-ಹೆಣ್ಣುಗಳ ಪ್ರೇಮ ವಿವಾಹವು ವೈವಾಹಿಕ ಜೀವನದ ಮೂಲಕ ಸಾಫಲ್ಯತೆಯನ್ನು ಪಡೆಯುತ್ತವೆ. ತಾಯಿ ಮಗಳಿರುವ ಕುಟುಂಬಗಳು ಇವರ ಕಥೆಯಲ್ಲಿವೆ.

'ಮರಳಿ ಬದುಕಿಗೆ ಪಯಣ' ಕಥೆಯಲ್ಲಿ ನಿರೂಪಕಿ ಪುರುಷ ಪಾತ್ರದ ಹಿನ್ನೆಯಲ್ಲಿ ನಿರೂಪಿಸಲಾಗಿದ್ದ ರಿಪು ಎಂಬ ನಿರ್ದಿಷ್ಟ ಹೆಸರನ್ನು ಗುರುತಿಸಿಕೊಂಡಿದ್ದಾರೆ. ನಿರೂಪಕಿ ಪುರುಷ ಪಾತ್ರದ ಹಿನ್ನೆಲೆಯಲ್ಲಿ ಮಹಿಳೆಯ ಬದುಕಿನ ಅನಾವರಣ ಮಾಡಿರುವ ನಿರೂಪಣೆಯಿದೆ. ಇಲ್ಲಿನ ಕಥೆಯು ಅಂತ್ಯದಿಂದ ಆರಂಭಗೊಳ್ಳುತ್ತದೆ. ಇಲ್ಲಿನ ಗಂಡು-ಹೆಣ್ಣುಗಳು ಶಿಕ್ಷಣ, ಉದ್ಯೋಗಕ್ಕಾಗಿ ಅರಸಿ ಭಿನ್ನ ಪ್ರದೇಶಗಳಲ್ಲಿ ನೆಲೆಸಿ ಸಮಾನ ಹಿತಾಸಕ್ತಿಗಳುಳ್ಳ ಸ್ತ್ರೀ-ಪುರುಷರಲ್ಲಿ ಪ್ರೇಮವು ಸಹಜವಾಗಿದ್ದು ಅದು ವಿವಾಹದಲ್ಲಿ ಅಂತ್ಯವನ್ನು ಪಡೆದುಕೊಳ್ಳುತ್ತದೆ. ಈ ಪಾತ್ರದ ನಾಯಕ ಮೂಲತಃ ಪಂಜಾಬಿನವನಾಗಿದ್ದು, ಸೈನಿಕ ಕುಟುಂಬದಿಂದ ಗುರುತಿಸಿಕೊಂಡವನು. ಹೆತ್ತವರ ಆಕಾಂಕ್ಷೆಯಂತೆ ಸೈನಿಕನಾಗದೆ ತನ್ನ ಇಚ್ಛೆಯಂತೆ ವಿಜ್ಞಾನಕ್ಷೇತ್ರದಲ್ಲಿ ಅಧ್ಯಾಪಕನಾಗಿ ಗುರುತಿಸಿಕೊಂಡವನು. ತಮ್ಮ ಬೌದ್ಧಿಕ ವಿಸ್ತರಣೆಗೆ ಅವಕಾಶವಿರುವ ಸ್ಥಳಕ್ಕೆ ಹೋಗಿ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸುವಲ್ಲಿ ಸಫಲರಾಗುವರು. ಪುರುಷರಂತೆ ಮಹಿಳೆಯೂ ಸಮಾನ ಶಿಕ್ಷಣ ಪಡೆದು ವಿಜ್ಞಾನ ಕ್ಷೇತ್ರದಲ್ಲಿ ಗುರುತಿಸಿಕೊಂಡು ಬೌದ್ಧಿಕ ಪರೀಕ್ಷೆಗೆ ಒಳಗಾಗಿದ್ದಾಳೆ, ಸಫಲವಾಗಿದ್ದಾಳೆ. ಈ ಮಹಿಳೆ ಕನ್ನಡದವಳು. ಹೀಗೆ ಇಲ್ಲಿ ಸಮಾನ ಶಿಕ್ಷಣ, ಉದ್ಯೋಗ,

ಹಿತಾಸಕ್ತಿಗಳು ಗಂಡು–ಹೆಣ್ಣುಗಳಲ್ಲಿ ಪ್ರೇಮವು ಉದಯಿಸಲು ಕಾರಣವಾಗಿದ್ದು, ಈ ಪ್ರೇಮಕ್ಕೆ ಜಾತಿ, ಧರ್ಮ, ಪ್ರಾದೇಶಿಕತೆಯನ್ನು ಮೀರುವ ಸಾಮರ್ಥ್ಯವಿರುತ್ತದೆ. ಈ ಯುವಕ–ಯುವತಿಯರು ತಮ್ಮ ಪ್ರೇಮಕ್ಕಾಗಿ ಹೆತ್ತವರನ್ನು ವಿರೋಧಿಸಿ ವೈವಾಹಿಕ ಬದುಕನ್ನು ಕಟ್ಟಿಕೊಂಡವರು. ಹೀಗೆ ಹೆತ್ತವರಿಂದ ದೂರ ಸರಿದು ತಾವು ವೃತ್ತಿ ಮಾಡುವ ಸ್ಥಳದಲ್ಲಿ ನೆಲೆಯನ್ನು ಕಂಡುಕೊಂಡವರು. ಈ ಕಥೆಯ ನಾಯಕ ರಿಪು. ತಾನು ಕಟ್ಟಿಕೊಂಡಿರುವ ಈ ಕುಟುಂಬದಲ್ಲಿ ಸರ್ವಾಧಿಕಾರಿಯಲ್ಲ, ಯಜಮಾನನಲ್ಲ, ತನ್ನ ಮಹಿಳೆಯನ್ನು ಕೇವಲ ಅಡಿಗೆ ಕೋಣೆಯಲ್ಲಿ ಹಾಗೂ ಮಲಗುವ ಕೋಣೆಯಲ್ಲಿ ಕಾಣಲು ಇಚ್ಛಿಸದೆ ಗಣಕಯಂತ್ರದಲ್ಲಿ ಸದಾ ತೊಡಗಿರುವ ಮಹಾತ್ವಾಕಾಂಕ್ಷೆಯ ಹೆಂಡತಿಯನ್ನು ಕಾಣಲು ಬಯಸುತ್ತಾನೆ. ಇಲ್ಲಿ ಸ್ತ್ರೀ–ಪುರುಷರು ಸಮಾನ ಶಿಕ್ಷಣ ದುಡಿಮೆಯಿದೆ. ಪರಸ್ಪರ ಅವಲಂಬಿತರಾಗಿಲ್ಲ. ಹಾಗಾಗಿ ಈ ಸ್ತ್ರೀ–ಪುರುಷರಲ್ಲಿ ಅಧಿಕಾರ, ಅಧೀನ ಸಂಬಂಧ ನೆಲೆಗೊಂಡಲ್ಲಿ ಇಲ್ಲಿ ಮಹಿಳೆ ಪತ್ನಿಯಾಗಿ ಮನೆಯ ಹೊರವಲಯದಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದಾಳೆ. ಅಲ್ಲದೆ ಮನೆಯ ಮಕ್ಕಳ ಜವಾಬ್ದಾರಿಯನ್ನು ಗಂಡನಿಗೆ ಹೊರಿಸಿದ್ದಾಳೆ. ಇಲ್ಲಿ ಮಹಿಳೆ ಪತ್ನಿ, ತಾಯಿಯಾಗಿ ತನ್ನ ಕರ್ತವ್ಯವನ್ನು ನಿಭಾಯಿಸಲೇಬೇಕೆಂಬ ಒತ್ತಡವಿಲ್ಲ. ಕೆಲಸದ ನಿಮಿತ್ತ ಕುಟುಂಬದ ಜವಾಬ್ದಾರಿಗಳಿಂದ ನುಣಚಿಕೊಳ್ಳಬಹುದು. ಅವಳ ಈ ತೀರ್ಮಾನದ ಬಗ್ಗೆ ಗಂಡನಿಗೆ ಕೋಪವಿಲ್ಲ. ಆದರೆ ಸಂಸಾರಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ಹೊರವಲಯದಲ್ಲಿ ತೊಡಗಿಸಿಕೊಂಡಿರುವ ಬಗ್ಗೆ ವಿಷಾದವಿದೆ. ಹಾಗಾಗಿ ಇಲ್ಲಿ ಮಹಿಳೆ ತನ್ನನ್ನು ತಾನು ಗುರುತಿಸಿಕೊಳ್ಳುವ ಪ್ರಯತ್ನದಲ್ಲಿ ಕೌಟುಂಬಿಕ ಸಂಬಂಧಗಳನ್ನು ಕಳೆದುಕೊಳ್ಳುತ್ತಿದ್ದಾಳೆ. ಮಹಿಳೆ ಮಹತ್ವಾಕಾಂಕ್ಷೆಯುಳ್ಳವಳಾಗಿದ್ದು ಬದುಕಿನಲ್ಲಿ ಉನ್ನತ ಸ್ಥಾನವನ್ನು ಪಡೆಯಲು ಹೆಣಗುತ್ತಿದ್ದಾಳೆ. ಆದರೆ ಆಕಸ್ಮಿಕವಾಗಿ ಸಂಬಂಧಿಸಿದ ಅಪಘಾತದಲ್ಲಿ ಸಾವು–ಬದುಕಿನ ಮಧ್ಯೆ ಹೋರಾಡುವ ಅತಂತ್ರಸ್ಥಿತಿಗೆ ತಲುಪಿದ್ದಾಳೆ. ಹೀಗೆ ಇಲ್ಲಿ ರಿಪು ಪತ್ನಿ ಆಕಸ್ಮಿಕವಾಗಿ ಸಂಭವಿಸಿದ ಅಫಘಾತದಲ್ಲಿ ಮಿದುಳು ನಿಷ್ಕ್ರಿಯವಾಗಿದ್ದು ಕೋಮಾಸ್ಥಿತಿಗೆ ತಲುಪಿದ್ದಾಳೆ. ಇಲ್ಲಿ ಮಹಿಳೆಯ ಈ ಸ್ಥಿತಿಯಿಂದ ಕುಟುಂಬದ ಚಲನೆ ನಿಂತಿಲ್ಲ. ಏಕೆಂದರೆ ಎಂದಿನಂತೆ ಅದನ್ನು ಮನೆಯ ಗಂಡಸು ನಡೆಸುತ್ತಾನೆ. ಇಲ್ಲಿ ಮಹಿಳೆಯನ್ನು ಅವಳ ಮನೆ ಕೆಲಸಗಳಿಂದ ಗುರುತಿಸಿಕೊಳ್ಳದೆ ಆ ಮನೆಯಲ್ಲಿ ಅವಳು ನೆಲೆಸಿರುವುದೇ ಗಂಡಿಗೆ ಒಂದು ಶಕ್ತಿಯಾಗಿದೆ. ಹೀಗೆ ಇಲ್ಲಿ ಹೆಣ್ಣು ಗಂಡಸಿನ ಸ್ಫೂರ್ತಿಯಾಗಿದ್ದಾಳೆ. ಅವಳಿಲ್ಲದೆ ಕಂಗಾಲಾಗಿದ್ದಾನೆ. ಆದರೆ ಅವಳನ್ನು ಈ ಸ್ಥಿತಿಯಿಂದ ಹೊರತರಲು ಪ್ರಯತ್ನಿಸುತ್ತಾನೆ. ಜಡವಾಗಿರುವ ಅವಳ ದೇಹದಲ್ಲಿ ಕಾಮಾಸಕ್ತಿಗಳಿಲ್ಲ, ಕಾರಣ ಅಲ್ಲಿ ಜೀವವಿದೆ ಮನಸ್ಸಿಲ್ಲ. ಮನಸ್ಸಿರುವ ಮಹಿಳೆಯು ಪುರುಷನಲ್ಲಿ ಕಾಮಾಸಕ್ತಿಯನ್ನುಂಟು ಮಾಡುತ್ತದೆ. ಪುರುಷ ಇಲ್ಲಿ ಮಹಿಳೆಯನ್ನು ದೇಹದ ನೆಲೆಯಲ್ಲಿ ನೋಡದೆ ಮನಸ್ಸಿನ ಆಳದಿಂದ ಸಮಾನ ನೆಲೆಯಲ್ಲಿ ಅವಳನ್ನು ಗುರುತಿಸುವುದೇ ಕಾರಣವಾಗಿದೆ. ಇಲ್ಲಿ ರಿಪುವಿನ ಈ ಸ್ಥಿತಿಯನ್ನು ಕಂಡು ತಾಯಿ

–ತಂದೆ ಸೊಸೆಯ ಜವಾಬ್ದಾರಿಯನ್ನು ಅವರ ಕುಟುಂಬ ಸಂಬಂಧಿಕರಿಗೆ ಹೊರಿಸಿ ಬೇರೆ ವಿವಾಹ ಮಾಡಿಕೊಳ್ಳುವಂತೆ ಮಗನಿಗೆ ಸಲಹೆ ನೀಡುತ್ತಾರೆ. ಆದರೆ ರಿಪು ತಂದೆಯ ಈ ನಿರ್ಧಾರವನ್ನು ತಿರಸ್ಕರಿಸುತ್ತಾನೆ. ಅದೇ ರೀತಿ ತನ್ನ ಪತ್ನಿಯ ಸ್ಮೃತಿ ಸ್ಮರಣೆಗೆ ಅವಳು ನೆಲೆಸಿರುವ ಎಲ್ಲಾ ಸ್ಥಳಗಳಿಗೆ ಭೇಟಿ ನೀಡಿ ಅವಳನ್ನು ಮೊದಲಿನಂತೆ ಗುರುತಿಸಲು ಪ್ರಯತ್ನಿಸುತ್ತಾನೆ. ರಿಪು ತನ್ನ ತವರಿನ ಪಂಜಾಬಿನ ತಾಯಿಯ ಆಹಾರ ಪದಾರ್ಥ ಪತ್ನಿ ಒಗ್ಗಿದಾಗ ಬೇರೆ ಆಹಾರ ಪದಾರ್ಥ ಮಾಡಿಕೊಡಲು ಸಿದ್ಧನಾಗುತ್ತಾನೆ. ಆದರೆ ಸೈನಿಕ ಕುಟುಂಬದಲ್ಲಿ ಬೆಳೆದ ಮಗ ರಿಪು ಅಡಿಗೆ ಮಾಡುವುದು ಕೀಳಾಗಿ ಪರಿಣಮಿಸುತ್ತಾಳೆ. ತಾಯಿಯ ಈ ಅಸಹನೆಯನ್ನು ಕಡೆಗಣಿಸಿ ಪತ್ನಿಯ ಅವಶ್ಯಕತೆಯನ್ನು ಪೂರೈಸುವ ಮನೋಭಾವ ಪುರುಷನಲ್ಲಿದೆ. ರಿಪು ತನ್ನ ಪತ್ನಿಯ ತವರಿನಲ್ಲಿ ಅವಳ ಈ ಸ್ಥಿತಿಗೆ ಎದುರಾಗುವ ಸೋದರಮಾವ ರಿಪುವನ್ನು ಸಮಾಧಾನಿಸುವ ಮೂಲಕ ಅವನಲ್ಲಿ ಮೊದಲಿನ ಕೋಪ ಇಲ್ಲವಾಗುತ್ತದೆ. ಹೀಗೆ ಇಲ್ಲಿ ಮಾನವೀಯತೆಯನ್ನು ರಿಪು ತನ್ನ ಪತ್ನಿಯ ಸಂಬಂಧದಲ್ಲಿ ಕಂಡುಕೊಳ್ಳುತ್ತಾನೆ ಹೊರತು ಸ್ವಂತ ರಕ್ತಸಂಬಂಧಿಗಳಾದ ತಂದೆ–ತಾಯಿಗಳಿಂದಲ್ಲ. ಹೀಗೆ ಇಲ್ಲಿ ಈ ಪ್ರೇಮವಿವಾಹದಲ್ಲಿ ವ್ಯಕ್ತಿಗಳು ತಮಗೆ ತಾವೇ ಜವಾಬ್ದಾರಿಗಳಾಗುತ್ತಾರೆ ಹೊರತು ಅನ್ಯರ ಸಾಂತ್ವನವನ್ನು ಬಯಸಿದಾಗ ರಿಪುವಿನ ತಂದೆ–ತಾಯಿಗಳಿಗೆ ಮಗನ ಮೇಲಿನ ಪ್ರೀತಿಯೇ ಈ ತೀರ್ಮಾನ ಕೈಗೊಳ್ಳಲು ಸಾಧ್ಯವಾಗಿದೆ. ಆದರೆ ರಿಪು ತನ್ನ ಬದುಕಿನಲ್ಲಿ ಒದಗಿದ ಈ ಯುದ್ಧದಲ್ಲಿ ಸೋಲದೆ ತನ್ನ ಪತ್ನಿಯ ರಕ್ಷಕನಾಗಿ ಅವಳಿಗೆ ಆಸರೆಯಾಗಿ ನಿಲ್ಲುತ್ತಾನೆ.. ಇಲ್ಲಿ ಈ ಕುಟುಂಬದ ಪುರುಷ ಪತ್ನಿಯನ್ನು ಮಗುವಂತೆ ಸಂರಕ್ಷಿಸುತ್ತಾನೆ. ಅಲ್ಲದೆ ಅವಳು ಮರೆತಿರುವ ಎಲ್ಲಾ ಸಂಬಂಧಗಳನ್ನು, ಸ್ಥಳಗಳನ್ನು, ಕೆಲಸವನ್ನು ಪ್ರಯತ್ನಪೂರ್ವಕವಾಗಿ ನೆನಪಿಸಲು ಪ್ರಯತ್ನಿಸುತ್ತಾನೆ. ತನ್ನ ಪ್ರಯತ್ನದಲ್ಲಿ ಸೋಲದೆ ದಿನಕಳೆದಂತೆ ಅವಳಲ್ಲಾಗುವ ಬದಲಾವಣೆಯನ್ನು ಗುರುತಿಸಿ ತನ್ನ ಮಹಿಳೆ ಮೊದಲಿನಂತೆ ಗುಣಮುಖವಾಗುವ ಮಹಾತ್ವಾಕಾಂಕ್ಷೆಯಲ್ಲಿ ಬದುಕು ಸಾಗಿಸುತ್ತಾನೆ. ಬದುಕಿನಲ್ಲಿ ವಿಮುಖನಾಗುವುದಿಲ್ಲ. ಈ ಮೂಲಕ ಪ್ರೇಮಪೂರ್ವ ದಾಂಪತ್ಯವಲ್ಲದ ಸಫಲತೆಯನ್ನು ಪಡೆಯುತ್ತಾನೆ. ಮತ್ತೊಂದು ನೆಲೆಯಲ್ಲಿ ಹೆಣ್ಣು ಎಷ್ಟು ವಿದ್ಯೆ ವೃತ್ತಿಯನ್ನು ಪಡೆದು ಉನ್ನತ ಸ್ತರದಲ್ಲಿ ತನ್ನನ್ನು ತಾನು ಗುರುತಿಸಿಕೊಂಡರೂ ಸಹಾ ಅವಳಿಗೆ ಗಂಡ, ಗಂಡನ ಮನೆ ಅವಶ್ಯಕವಾಗಿದೆ. ಹಾಗಾಗಿ ಗಂಡ, ಮಕ್ಕಳು, ಮನೆಗಾಗಿ ಸಮಯವನ್ನು ಕಾಯ್ದುಕೊಳ್ಳುವುದು ಹೆಣ್ಣಿಗೆ ಅವಶ್ಯಕವಾಗಿದೆ.

'ಬದುಕು ನಿನ್ನಲೆಂಥಾ ಮುನಿಸು' ಕಥೆಯಲ್ಲಿ ಗಂಡ–ಹೆಂಡತಿ–ಮಗಳನ್ನೊಳಗೊಂಡ ಸರಳಕುಟುಂಬವಿದೆ. ಈ ಕುಟುಂಬವು ಬೆಂಗಳೂರು ನಗರದ ವಲಯದಲ್ಲಿ ತನ್ನ ನೆಲೆಯನ್ನು ಪಡೆದುಕೊಂಡಿದೆ. ಇಲ್ಲಿ ನಿರೂಪಕಿ ಉತ್ತಮ ಪುರುಷದಲ್ಲಿ ಕಥೆಯನ್ನು ನಿರೂಪಿಸುತ್ತಿದ್ದಾಳೆ. ಇಲ್ಲಿ ಶಶಿ ಆದರ್ಶ ಗೃಹಿಣಿ. ತನ್ನನ್ನು ಮೆಚ್ಚಿಕೊಂಡ ಪುರುಷರಲ್ಲಿ ಬದುಕನ್ನು ಸಾಗಿಸುವ

ನಿರ್ಧಾರವನ್ನು ಕೈಗೊಂಡವಳು. ರಮೇಶ ಬೆಂಗಳೂರು ನಗರದಲ್ಲಿ ಸರ್ಕಾರಿ ನೌಕರಿಯಲ್ಲಿದ್ದು ಅದರಿಂದ ಬರುವ ಆದಾಯದಿಂದ ಕುಟುಂಬವನ್ನು ನಿಭಾಯಿಸುವಲ್ಲಿ ಸಫಲವಾಗಿತ್ತು. ಇಲ್ಲಿ ಶಶಿ ಸಾಂಪ್ರದಾಯಿಕ ಹೆಣ್ಣು. ಮನೆಯ ಒಳ ಕೆಲಸ ತನ್ನ ಕರ್ತವ್ಯ. ಗಂಡ ಮಕ್ಕಳ ಸೇವೆ ತನ್ನ ಜವಾಬ್ದಾರಿಯೆಂದು ನಿಭಾಯಿಸುವಳು. ಅಲ್ಲದೆ ಕುಟುಂಬಕ್ಕೆ ದುಡಿದು ಹಾಕುವುದು ಗಂಡನ ಕರ್ತವ್ಯವೆಂದು ಭಾವಿಸಿದವಳು. ಹೊರದುಡಿಮೆಯನ್ನು ಈ ಮಹಿಳೆಯಲ್ಲಿ ಕಾಣುವುದಿಲ್ಲ. ಆದರೆ ಶಶಿ ಸ್ತನಕ್ಯಾನ್ಸರ್‌ಗೆ ಒಳಗಾಗಿ ಬದುಕು–ಸಾವಿನ ಮಧ್ಯೆ ಹೋರಾಡುತ್ತಿದ್ದಾಳೆ. ಅಲ್ಲದೆ ತನ್ನ ಈ ರೋಗದಿಂದ ತನ್ನ ದೇಹಸೌಂದರ್ಯವನ್ನು ಕಳೆದುಕೊಂಡು ಗಂಡನಿಂದ, ಸಮಾಜದಿಂದ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಮುನ್ಸೂಚನೆ ಅವಳಲ್ಲಿದೆ. ಅಲ್ಲದೆ ಸಾವು ಅವಳಿಗೆ ಭಯವಾಗಿದೆ. ಈ ಸಾವಿನಿಂದ ಹೊರಬರಲು ಅಪ್ಪನ, ಗಂಡನ ಆಸರೆಯನ್ನು ಬಯಸುತ್ತಾಳೆ. ಹಾಗೆ ತನ್ನ ರೋಗದಿಂದ ಮಾನಸಿಕ ಅಸ್ವಸ್ಥಳಾಗುತ್ತಾಳೆ. ಅಲ್ಲದೆ ಮನೆಯ ಎಲ್ಲಾ ಜವಾಬ್ದಾರಿಯನ್ನು ಗಂಡ ಹೊರುತ್ತಾನೆ. ಅಡಿಗೆ, ಮಕ್ಕಳ ಹೊಣೆಗಾರಿಕೆಯನ್ನು ಅಚ್ಚುಕಟ್ಟಾಗಿ ನಿಭಾಯಿಸುವುದು ಅವಳಲ್ಲಿ ಅಸಹನೆಯುಂಟಾಗಿ ಜೊತೆ ಕುಟುಂಬದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾಳೆ. ಇಲ್ಲಿ ಗಂಡ ತನ್ನ ಪತ್ನಿಗೆ ಎಲ್ಲಾ ವಿಧದ ಸೇವೆ ಮಾಡಲು ಸಿದ್ಧನಿರುತ್ತಾನೆ. ಹೆಣ್ಣು ತನ್ನ ಈ ಸ್ಥಿತಿಯಲ್ಲಿ ಗಂಡನ ಸಾಮೀಪ್ಯ ನಿರೀಕ್ಷಿಸುತ್ತಿದ್ದು ಅದು ಅಸಾಧ್ಯವಾದಾಗ ಅವನ ಪ್ರತಿಯೊಂದು ಕೆಲಸಕಾರ್ಯಗಳಲ್ಲಿ ತಪ್ಪನ್ನು ಹುಡುಕುತ್ತಾಳೆ. ಗಂಡ ಕಾಳಜಿ ವಹಿಸಿದಾಗ ತಿರಸ್ಕರಿಸುವಳು, ಗಂಡನ ಪೋಷಣೆ ಸಿಗದಾಗ ತನ್ನ ಈ ಸ್ಥಿತಿಯಿಂದ ತಾನು ಬೇಡವಾದ ವಸ್ತುವಾಗಿದ್ದೇನೆ, ತನ್ನನ್ನು ತಿರಸ್ಕರಿಸುತ್ತಾನೆ ಎಂದು ಭಾವಿಸುತ್ತಾಳೆ. ಅಲ್ಲದೆ ಗಂಡ ತನ್ನ ಮಹಿಳೆಯ ಈ ಕಾಯಿಲೆಯ ವಾಸಿಗೆ ಬೇಕಾದ ಹಣ ಒದಗಿಸಲು ದುಪ್ಪಟ್ಟು ದುಡಿಮೆ ಮಾಡಬೇಕಾದ ಅನಿವಾರ್ಯಕ್ಕೆ ಒಳಗಾಗಿ ಹಗಲು ರಾತ್ರಿಯೆನ್ನದೆ ತನ್ನ ಕುಟುಂಬಕ್ಕೆ ದುಡಿಯುತ್ತಾನೆ. ಗಂಡ ಸರಿಯಾದ ಸಮಯಕ್ಕೆ ಬರದೆಯಿರುವುದು ಪತ್ನಿಯ ಕೋಪಕ್ಕೆ ಕಾರಣವಾದಾಗ ಅದನ್ನು ಅರ್ಥ ಮಾಡಿಸಲು ಸೋತು ಸಂಘರ್ಷಕ್ಕಿಳಿಯುತ್ತಾನೆ. ತನ್ನ ಈ ಸ್ಥಿತಿಗೆ ಶಶಿ ಬದುಕುವ ಉತ್ಸಾಹ ಕಳೆದುಕೊಂಡು ಸಾವನ್ನು ಬಯಸುತ್ತಿರುವುದೇ ಕಾರಣವೆಂದು ಕೊರಗಿ ಹೊರದುಡಿಮೆಯಿಂದ ತಪ್ಪಿಸಿ ಅವಳಲ್ಲಿ ಅಸಹಾಯಕನಾಗಿ ಸಾಂತ್ವನವನ್ನು ಬಯಸುತ್ತಾನೆ. ಅವಳ ಜೀವಂತಿಕೆ ತನ್ನ ಬದುಕಿಗೆ ಅನಿವಾರ್ಯ ಎಂಬುದನ್ನು ವ್ಯಕ್ತಪಡಿಸಿದಾಗ ಹೆಣ್ಣು ಗಂಡನ ಈ ಶರಣಾಗತಿಯೇ ಅವಳಲ್ಲಿ ಬದುಕುವ ಉತ್ಸಾಹವನ್ನು ಉಂಟುಮಾಡಿತು. ಹೆಣ್ಣು ತನ್ನ ನೋವನ್ನು ಮರೆತು ಸ್ತನ ಕ್ಯಾನ್ಸರ್ ಕುರಿತು ಲೇಖನ ಬರೆಯುವ ಮೂಲಕ ಇತರ ಮೂಲಗಳಿಂದ ಈ ಕಾಯಿಲೆ ಬಗ್ಗೆ ಮಾಹಿತಿ ಪಡೆದು, ತನ್ನ ಅನುಭವವನ್ನು ಸೇರಿಸಿ ಆ ಮೂಲಕ ಪರ್ಯಾಯ ದಾರಿಗಳನ್ನು ಕಂಡುಕೊಂಡು ಬದುಕುವ ಉತ್ಸಾಹ ತೋರುತ್ತಾಳೆ. ಅಲ್ಲದೆ ತನ್ನ ಬರವಣಿಗೆಯಿಂದ ಬಂದ ಹಣದಿಂದ ಮನೆಯನ್ನು ನಿಭಾಯಿಸಲು ಗಂಡನಿಗೆ

ನೆರವಾಗುತ್ತಾಳೆ. ಪತ್ನಿಯ ಬದುಕುವ ಉತ್ಸಾಹವೇ ಅವನನ್ನು ಮತ್ತೆ ಅವಳತ್ತ ಆಕರ್ಷಿಸುವಂತೆ ಮಾಡುತ್ತದೆ. ಹೀಗೆ ಗಂಡು ಮನಸ್ಸಿನ ಮೂಲಕ ಅವಳ ದೇಹವನ್ನು ಪಡೆಯಲು ಬಯಸುತ್ತಾನೆ. ಹಾಗಾಗಿ ಅವಳಲ್ಲಿನ ಅಂಗ ನ್ಯೂನತೆಯು ಅವನಿಗೆ ಸಮಸ್ಯೆಯಾಗದೆ, ಅವಳ ಇರುವಿಕೆ ಅವನಿಗೆ ಮುಖ್ಯವಾಗಿದೆ. ಹೆಣ್ಣು ತನ್ನ ದೇಹಸ್ಥಿತಿಯಿಂದ ಖಿನ್ನತೆಗೆ ಒಳಗಾಗಿದ್ದಳು. ಆದರೆ ತನ್ನ ಈ ದೇಹವನ್ನು ಗಂಡ ತಿರಸ್ಕರಿಸದೆ ಒಪ್ಪಿಕೊಂಡಾಗ ಅವಳಲ್ಲಿ ಬದುಕು ಸಹನೀಯವಾಗುತ್ತದೆ. ಹೀಗೆ ಗಂಡು-ಹೆಣ್ಣುಗಳ ಇರುವಿಕೆಯು ಸಮಾನ ಸ್ಥಿತಿಯಲ್ಲಿದ್ದು, ಆ ವ್ಯಕ್ತಿಗಳ ಕುಟುಂಬದ ಸುರಕ್ಷತೆಗೆ ಅವಶ್ಯಕವಾಗಿದೆ. ಇಲ್ಲಿ ಹೆಣ್ಣು ತನಗಾಗಿ ಒದಗಿದ ಸ್ಥಿತಿಯಿಂದ ಹೊರಬರಲು ಉದ್ಯೋಗ ಅವಶ್ಯಕತೆಯಿದೆ. ಅಲ್ಲದೆ ಕುಟುಂಬ ಸ್ಥಿರವಾಗಿರಲು ಗಂಡು-ಹೆಣ್ಣುಗಳು ಅನಿವಾರ್ಯವಾಗಿದ್ದಾರೆ.

ಇದೇ ವಸ್ತುವನ್ನು ಹೋಲುವ ಮತ್ತೊಂದು ಕಥೆ **'ನೀನಿರುವೆ ನಮ್ಮೊಡನೆ',** ಇಲ್ಲಿ ಕಥೆಯು ದಿನಚರಿ ಹೇಳುವ ರೀತಿಯಲ್ಲಿ ನಿರೂಪಕಿಯ ನಿರೂಪಣೆಯಿದೆ. ಇಲ್ಲಿ ಕಥೆಯು ಮಧ್ಯಾಂತರದಿಂದ ಆರಂಭಗೊಳ್ಳುತ್ತದೆ. ಗಂಡನ ಮರಣ ಕಾಲದಲ್ಲಿ ಪತ್ನಿಯ ತಲ್ಲಣಗಳನ್ನು ಅಭಿವ್ಯಕ್ತಿಸುವ ನಿರೂಪಣೆಯಿದೆ. ಇಲ್ಲಿ ರವಿ, ರವಿಯ ಪತ್ನಿ, ಮಗಳು ಪುಟ್ಟಿಯಿರುವ ವೈಯಕ್ತಿಕ ಕುಟುಂಬವಾಗಿದ್ದು, ಬೆಂಗಳೂರು ನಗರದ ವಲಯದಲ್ಲಿ ನೆಲೆಯನ್ನು ಕಂಡುಕೊಂಡವರು. ಈ ಕುಟುಂಬದ ಮನೆಯ ಯಜಮಾನ ರವಿಯಾಗಿದ್ದು, ಸರ್ಕಾರಿ ಕೆಲಸದಲ್ಲಿ ನಿರತನಾಗಿದ್ದ. ಬದುಕಲು ಬೇಕಾದಷ್ಟು ಆದಾಯವಿದ್ದು, ಮನೆಯ ಒಳ-ಹೊರ ಸಂಬಂಧಗಳನ್ನು ಹೊಂದಿಸಿಕೊಂಡು ಸಂತೃಪ್ತ ಬದುಕು ನಡೆಸುತ್ತಿದ್ದರು. ಆದರೆ ಬದುಕಿಗಿಂತ ಹಣದ ಮೌಲ್ಯ ಹೆಚ್ಚಾಗಿದ್ದು, ಹಣ ಮಾಡುವ ಉದ್ದೇಶದಿಂದ ತನ್ನ ಕುಟುಂಬದವರನ್ನು ಹೆಚ್ಚು ಸುಖವಾಗಿಡುವ ಉದ್ದೇಶದಿಂದ ಸರ್ಕಾರಿ ವೃತ್ತಿಯನ್ನು ತ್ಯಜಿಸಿ ಖಾಸಗಿ ವಲಯದಲ್ಲಿ ಅವಿರತ ದುಡಿಮೆಗೆ ಹೊಂದಿಕೊಳ್ಳುತ್ತಾನೆ. ಇಲ್ಲಿ ಗಂಡಸಿನ ಈ ತೀರ್ಮಾನದ ಹಿಂದೆ ಹೆಣ್ಣಿನ ಆಕಾಂಕ್ಷೆಯು ಅಡಗಿದೆ. ಹೀಗಾಗಿ ಗಂಡಸು ಮನೆ, ಪತ್ನಿ, ಮಕ್ಕಳನ್ನು ಕಡೆಗಣಿಸಿ ಹೊರವಲಯದಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದು, ಬದುಕು ಯಾಂತ್ರಿಕವಾಗಿದೆ. ಇಲ್ಲಿ ಪುರುಷ ತನ್ನ ಅವಿರತ ದುಡಿಮೆಯಿಂದ ಮಿದುಳು ಕ್ಯಾನ್ಸರ್‌ಗೆ ಒಳಗಾಗಿದ್ದು, ಆ ಮನೆಯ ಶಾಂತಿಯನ್ನು ಕದಡಲು ಕಾರಣವಾಗಿದೆ. ಇಲ್ಲಿ ರವಿಯ ಪತ್ನಿ ಗೃಹಿಣಿಯಾಗಿದ್ದು, ಮನೆಯ ಕೆಲಸಕಾರ್ಯಗಳು ಹೆಣ್ಣಿನದಾಗಿದೆ. ದುಡಿದು ತರುವುದು ಗಂಡಿಸಿನ ಕರ್ತವ್ಯವೆಂದು ಭಾವಿಸಿರುವ ಸಾಂಪ್ರದಾಯಿಕ ಹೆಣ್ಣು. ಇಲ್ಲಿ ಹೆಣ್ಣು ಕುಟುಂಬವನ್ನು ರಕ್ಷಿಸು ತಾಣ ಎಂದು ಬಾವಿಸಿದಳು. ಗಂಡನಿಲ್ಲದ ಜೀವನ ಅವಳಲ್ಲಿ ತಲ್ಲಣವನ್ನು ಉಂಟುಮಾಡುತ್ತದೆ. ಇಲ್ಲಿ ಹೆಣ್ಣು ಗಂಡನಿಗೆ ಎಲ್ಲಾ ರೀತಿಯಿಂದಲೂ ಅವಲಂಬಿತಳಾಗಿ ಅಸಹಾಯಕಳಾಗಿದ್ದಾಳೆ. ಅಲ್ಲದೆ ತನ್ನ ಗಂಡನಿಗೆ ತಾನು ಮಗುವಿನಂತೆ ಇದ್ದು ಆತನಿಂದ ಸದಾ ಆಸರೆಯನ್ನು ಬಯಸುತ್ತಾಳೆ. ಆದರೆ ಗಂಡನಿಗೆ

ಒದಗಿದ ಈ ಕಾಯಿಲೆಯಿಂದ ಅವಳು ಧೃತಿಗೆಡದೆ ಅದರಿಂದ ಪಾರಾಗಲು ಪರ್ಯಾಯ ದಾರಿಗಳನ್ನು ಹುಡುಕುವ ದಾರಿಯನ್ನು ಕಂಡುಕೊಳ್ಳುತ್ತಾಳೆ. ತನ್ನ ಗಂಡನಿಗೆ ಒದಗಿರುವ ಮಿದುಳಿನ ಕ್ಯಾನ್ಸರ್‌ನಿಂದ ಮುಕ್ತಿಗೊಳಿಸಲು ಎಲ್ಲಾ ಮಾರ್ಗಗಳನ್ನು ಹುಡುಕುತ್ತಾಳೆ. ಆದರೆ ಪರಿಹಾರ ಕಾಣದೆ ನಿರಾಸೆಗೊಳ್ಳುತ್ತಾಳೆ. ಹೀಗೆ ಗಂಡನನ್ನು ಶಸ್ತ್ರಚಿಕಿತ್ಸೆ ಕ್ರಿಯೆಗೆ ಒಳಪಡಿಸುವುದರ ಮೂಲಕ ಅದರಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿ ಅಸಾಧ್ಯವಾದಾಗ ತನ್ನ ಗಂಡನನ್ನು ಆ ಸಾವಿನಿಂದ ಮುಕ್ತಿಗೊಳಿಸಲು ಅವನ ಸಾವನ್ನು ಬಯಸುತ್ತಾಳೆ. ಇಲ್ಲಿ ಪುರುಷ ಈ ಸಂದರ್ಭದಲ್ಲೂ ಹೆಣ್ಣಿಗೆ ಅಸಹಾಯಕನಾಗಿ ಕಂಡುಬರುತ್ತಾನೆ. ಅಲ್ಲದೆ ಇಲ್ಲಿ ಗಂಡಸು ಹೆಂಡತಿ ಮಕ್ಕಳು ತನ್ನ ಜವಾಬ್ದಾರಿ ಅವರ ಹೊಣೆಗಾರಿಕೆ ತನ್ನದು ಎಂದು ಭಾವಿಸಿ ಆದರಿಂದ ವಿಮುಖವಾಗುವ ಸಂದರ್ಭ ಒದಗಿದಾಗ ಹೆಚ್ಚು ಕಳವಳಗೊಳ್ಳುತ್ತಾನೆ. ಇಲ್ಲಿ ಹೆಣ್ಣು ಗಂಡನ ಸಾವು–ಬದುಕಿನ ಹೋರಾಟದಲ್ಲಿ ಅವನನ್ನು ಉಳಿಸಿಕೊಳ್ಳಲು ಪ್ರಯತ್ನಿಸುವುದು ರಕ್ಷಣೆಗೆ, ಆಶ್ರಯವನ್ನು ಬಯಸಿ, ಕೊನೆಗೆ ಅವನ ಜೀವಂತಿಕೆ ಅವಳಿಗೆ ಮುಖ್ಯವಾಗುತ್ತದೆ. ಆದರೆ ಅವನ ಬದುಕು ಅವನಿಗೆ ಹಿಂಸೆಯನ್ನು ನೀಡಿದಾಗ ಅವನ ಸಾವನ್ನು ಆಪೇಕ್ಷಿಸುವುದರ ಮೂಲಕ ಅವನಿಗೆ ಮುಕ್ತಿಯನ್ನು ನೀಡುತ್ತಾಳೆ. ಈ ಕುಟುಂಬದಿಂದ, ಜವಾಬ್ದಾರಿಗಳಿಂದ ಅಲ್ಲದೆ ತನ್ನ ಗಂಡನ ಹೊರತಾಗಿಯೂ ಬದುಕಲು ಶಿಕ್ಷಕಿ ಉದ್ಯೋಗವನ್ನು ಕೈಗೊಂಡು ಆ ಮೂಲಕ ಆ ಕುಟುಂಬಕ್ಕೆ ಆಸರೆಯಾಗಿ ನಿಂತು ಮಗುವಿನ ಪಾಲನೆ, ಪೋಷಣೆ ಮಾಡುವುದರ ಮೂಲಕ ತನ್ನ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಸಫಲವಾಗುತ್ತಾಳೆ. ಅಲ್ಲದೆ ಗಂಡನ ಅನುಪಸ್ಥಿತಿ ಅವಳಿಗೆ ಕಾಡದೆ ಅವನ ಪ್ರೀತಿ, ವಿಚಾರ, ಚಿಂತನೆಗಳು ಸದಾ ಕಾಲ ಅವಳಲ್ಲಿ, ಅವಳ ಮನೆಯಲ್ಲಿರುವುದು ಅನುಭವಿಸುವ ಮೂಲಕ ಜೀವಂತಿಕೆಯನ್ನು ಪಡೆಯುತ್ತಾಳೆ. ನೆನಪುಗಳನ್ನು ಹೊತ್ತು ಆ ನೆನಪುಗಳೇ ಬದುಕನ್ನು ಸಾಗಿಸಲು ಸ್ಫೂರ್ತಿಯನ್ನು ನೀಡುವುದು.

'ಬದುಕು ಕಾಯುವುದಿಲ್ಲ' ಕಥೆಯಲ್ಲಿ ವಿಸ್ಮಯ, ಚರಿತ ಮತ್ತು ಒಂದು ಮಗುವಿರುವ ವೈಯಕ್ತಿಕ ಕುಟುಂಬವಿದೆ. ಇವರು ಬೆಂಗಳೂರು ನಗರದಲ್ಲಿ ವಾಸವಾಗಿದ್ದು, ಈ ಗಂಡು–ಹೆಣ್ಣುಗಳು ವೃತ್ತಿನಿರತರಾಗಿದ್ದು, ವೈಯಕ್ತಿಕ ಆಕಾಂಕ್ಷೆಯುಳ್ಳವರಾಗಿದ್ದಾರೆ. ಇಲ್ಲಿ ಮನೆಯ ಒಡತಿ ಶಶಿ. ಗಂಡ ವಿಶುನ ಬಿಡುವಿಲ್ಲದ ಸಮಯದಲ್ಲಿ ತನಗಾಗಿ ಕಾಡಿಬೇಡಿ ಸಮಯವನ್ನು ಪಡೆದು ನಗರದಿಂದ ದೂರ ಪ್ರಕೃತಿರಮಣೀಯ ಸ್ಥಳವಾದ ಗೋವಾದಲ್ಲಿ ಬಾಗ್ಮೋಲ ಬೀಚ್‌ನಲ್ಲಿ ಎರಡು ದಿನಗಳ ಕಾಲ ಗಂಡನೊಂದಿಗೆ ಏಕಾಂತದಲ್ಲಿ ಕಳೆಯುವ ಮೂಲಕ ತನ್ನ ಭಾವನೆಗಳನ್ನು ಹಂಚಿಕೊಳ್ಳಲು ಬಯಸಿದಳು. ಆದರೆ ಚರಿತಳ ಗಂಡ ಈ ಸ್ಥಳದಲ್ಲಿಯೇ ಕಛೇರಿಯ ವಿಷಯ ಪ್ರಸ್ತಾಪ ಮಾಡಿದ್ದು ಅವಳನ್ನು ನಿರಾಸಗೊಳಿಸುತ್ತದೆ. ಇಲ್ಲಿ ವಿಸ್ಮಯ ಬದುಕಿನ ಮೌಲ್ಯ ಕಳೆದುಕೊಂಡು ಹಣಕ್ಕಾಗಿ ದುಡಿಯುವ ಮನೋಭಾವದವನು. ಇಲ್ಲಿ ಪುರುಷ ತನ್ನ ವೃತ್ತಿಯಲ್ಲಿ ತಾನು ಹೆಚ್ಚು ಸಮಯ ಕಳೆಯುತ್ತಿದ್ದು, ಮನೆಯ ಎಲ್ಲಾ

[illegible]

ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದ. ಮಗುವಿನ ಎಲ್ಲಾ ಅವಶ್ಯಕತೆಗಳನ್ನು ಇಲ್ಲಿ ತಾಯಿ ಪೂರೈಸುತ್ತಿದ್ದಳು. ಇಲ್ಲಿ ಚರಿತಳು ಸಹಾ ಉದ್ಯೋಗಿಯಾಗಿದ್ದು ಮನೆಯ ಮಕ್ಕಳ ಹೊಣೆಗಾರಿಕೆಯಿಂದ ತಲ್ಲಣಗೊಂಡಿದ್ದಾಳೆ. ತನ್ನ ಈ ಹೊಣೆಗಾರಿಕೆಯನ್ನು ಗಂಡಸು ನಿಭಾಯಿಸಲಿ ಎಂಬುದು ಅವಳ ಅಪೇಕ್ಷೆ.

ಆದರೆ ಗಂಡನಂತೆ ಮನೆಯ ಜವಾಬ್ದಾರಿಗಳಿಂದ ನುಣುಚಿಕೊಳ್ಳುವುದು ಹೆಣ್ಣಿಗೆ ಅಸಾಧ್ಯ. ಅಲ್ಲದೆ ಈ ಮಗುವಿನ ಜವಾಬ್ದಾರಿ ತನಗೆಂದೇ ಕಾದಿದೆ ಎಂದು ತನ್ನಲ್ಲಿ ಪ್ರಶ್ನಿಸಿಕೊಳ್ಳುತ್ತಾಳೆ ಹೊರತು ಗಂಡನಲ್ಲಿ ಉತ್ತರ ಬಯಸದೆ ತನ್ನ ಸ್ನೇಹಿತೆಯ ಸಹಾಯ ಪಡೆದು ಮಗುವಿನ ಹೊಣೆಯನ್ನು ಅವಳಿಗೆ ಒಪ್ಪಿಸಿ ತನ್ನ ಹೊರಗಿನ ಕೆಲಸವನ್ನು ನಿಭಾಯಿಸುತ್ತಾಳೆ. ಅಲ್ಲದೆ ಗಂಡನಿಂದ ಯಾವುದೇ ನೆರವು ಅವಳಿಗೆ ಸಿಗುವುದಿಲ್ಲ. ಇಲ್ಲಿ ಪುರುಷನು ತಾನು ಕೈಗೊಂಡಿರುವ ವೃತ್ತಿಯಲ್ಲಿ ತನ್ನ ಅಗತ್ಯಕ್ಕೆ ಅನಿವಾರ್ಯವೆಂದು ಭಾವಿಸುವುದೇ ಅವನ ಈ ವರ್ತನೆಗೆ ಕಾರಣವಾಗಿದೆ. ಇಲ್ಲಿ ವಿಶು ತನ್ನ ತಂದೆಯಂತೆ ಬದುಕು ರೂಪಿಸಿಕೊಂಡಿದ್ದಾನೆ. ಬದುಕುವುದೆಂದರೆ ವೃತ್ತಿ ಎಂದು ಭಾವಿಸಿದ ಅವನ ತಂದೆ ತನ್ನ ತಾಯಿಯ ಸಾವಿನ ವಿಷಯ ತಿಳಿದರೂ ಅದನ್ನು ಮರೆಮಾಡಿ ತನ್ನ ಅಧ್ಯಾಪಕ ವೃತ್ತಿಯನ್ನು ಕರ್ತವ್ಯವೆಂಬಂತೆ ನಿಭಾಯಿಸಿದನು. ಅಲ್ಲದೆ ಅಪ್ಪನ ದುಡಿಮೆಗೆ ಮೌಲ್ಯವಿದ್ದು. ಆ ದುಡಿಮೆಯಿಂದ ಮನೆಯ ಎಲ್ಲರ ಅವಶ್ಯಕತೆ ಈಡೇರುತಿತ್ತು. ಹಾಗಾಗಿ ಆ ಮನೆಯ ಎಲ್ಲಾ ಸದಸ್ಯರು ತಂದೆಯ ನಿಯಂತ್ರಣಕ್ಕೆ ಒಳಪಟ್ಟರು. ತಂದೆಯ ನಿವೃತ್ತಿಯ ನಂತರ ಬದುಕಿನಲ್ಲಿಯೂ ನಿವೃತ್ತಿ ಪಡೆದರು. ತನ್ನ ಜೊತೆ ಯಾವುದೇ ಆಪ್ತ ಒಡನಾಟವಿಲ್ಲದೆ ಏಕಾಂಗಿಯಾಗಿದ್ದರು. ಅಲ್ಲದೆ ತಂದೆ ತಾಯಿಯನ್ನು ತನ್ನ ಬೇಕು ಬೇಡಗಳನ್ನು ಪೂರೈಸಲು ಮಾತ್ರ ಅವಶ್ಯಕತೆಯಿದ್ದು ನಂತರದಲ್ಲಿ ಮೌನವಾಗಿದ್ದರು. ಆದರೆ ತಾಯಿ ದಿನದ ಎಲ್ಲಾ ಸಮಯವನ್ನು ಒಲ್ಲದ ಒಂದು ಕೆಲಸದಲ್ಲಿ ತೊಡಗಿಸಿಕೊಂಡು ಸಂಬಂಧಗಳನ್ನು ಉಳಿಸಿಕೊಂಡಿದ್ದರು. ಅಲ್ಲದೆ ತಾಯಿಯ ಮರಣವನ್ನು ತಿಳಿದು ತನ್ನ ಕಛೇರಿಯ ಕೆಲಸಕ್ಕೆ ಹೆಚ್ಚು ಮಹತ್ವ ನೀಡಿ ತಾಯಿಯ ಸಾವನ್ನು ಆಹ್ವಾನಿಸಿದ ಗಂಡನ ಬಗ್ಗೆ ಚರಿತಳಿಗೆ ವಿಷಾದವಿದೆ. ಆದರೆ ಹೆಣ್ಣು ತನ್ನ ಹೊರ ಕೆಲಸ ಒಳ ಕೆಲಸವನ್ನು ಸರಿದೂಗಿಸುವ ಮೂಲಕ ಕೌಟುಂಬಿಕ ಜವಾಬ್ದಾರಿಗಳನ್ನು ಚಾಚೂ ತಪ್ಪದೆ ನಿಭಾಯಿಸುತ್ತಾಳೆ. ಹೆಣ್ಣಿಗೆ ಎಲ್ಲಾ ಸಂಬಂಧಗಳು ಉಳಿಸಿಕೊಳ್ಳಲು ಮನಸ್ಸು ಮುಖ್ಯವಾಗಿದ್ದು, ಅದು ಪುರುಷನಿಗಿಲ್ಲದೆ ಇರುವುದರಿಂದ ಪಲಾಯನವಾದಿಯಾಗಿ ವರ್ತಿಸುವುದಕ್ಕೆ ಕಾರಣವಾಗಿದೆ. ಇಲ್ಲಿ ಪುರುಷನಿಗೆ ಸ್ಪರ್ಧಾತ್ಮಕ ಯುಗದಲ್ಲಿ ಮುನ್ನಡೆಯಬೇಕೆಂಬ ಉತ್ಸಾಹ, ಆಕಾಂಕ್ಷೆಯೇ ಅವನಿಂದ ಕೌಟುಂಬಿಕ ಸಂಬಂಧಗಳು ಸಡಿಲಗೊಳ್ಳಲು ಸಾಧ್ಯವಾಗಿದೆ. ಮನುಷ್ಯನ ಈ ವರ್ತನೆಗೆ ಬದಲಾದ ಬದುಕು ಕಾರಣವಾಗಿದೆ. ಮನಸ್ಸಿನ ಅಗತ್ಯಗಳು, ಅನುಕೂಲಗಳು ಕಾರಣವಾಗಿದೆ ಎಂಬುದನ್ನು ಚರಿತೆ, ವಿಸ್ಮಯನಿಗೆ ತಿಳಿಸುವ ಮೂಲಕ ಅವನಲ್ಲಿ ಪರಿವರ್ತನೆಯನ್ನು ಕಾಣಲು ಬಯಸುತ್ತಾಳೆ. ಪುರುಷನ

ದುಡಿಮೆ ಕುಟುಂಬಕ್ಕೆ ಅನಿವಾರ್ಯವಿಲ್ಲ. ಕಾರಣ ಮಹಿಳೆ ದುಡಿಯುತ್ತಿದ್ದಾಳೆ. ಹಾಗಾಗಿ ಕುಟುಂಬದ ಭದ್ರತೆಗೆ ಪತಿ-ಪತ್ನಿಯರ ಸಹಜ ಸಂಬಂಧಗಳ ಅವಶ್ಯಕತೆಯಿದೆ. ಹೀಗೆ ಪ್ರಯತ್ನಪೂರ್ವಕವಾಗಿ ತನ್ನತ್ತ ಸೆಳೆಯಲು ಪ್ರಯತ್ನಿಸಿ ಸೋತ ಚರಿತ ಮೌನವಾಗಿದ್ದು, ಅವಳ ಒಂಟಿತನದಿಂದ ಪ್ರಭಾವಿತನಾಗಿ ಪಶ್ಚಾತ್ತಾಪದಿಂದ ನೊಂದು ಪತ್ನಿಯ ಹೊಣೆಗಾರಿಕೆಯ ಮಹತ್ವ ಅರಿತು ಅವಳ ಮಡಿಲಲ್ಲಿ ಮಲಗಿ ನಿರಾಳವಾಗುವುದರ ಮೂಲಕ ತನ್ನಲ್ಲಿರುವ ಕ್ರೌರ್ಯವನ್ನು ಅಸಹನೆಯನ್ನು ತೊರೆದು ನಿರಾಳವಾಗುತ್ತಾನೆ. ಹಾಗೆ ಇಲ್ಲಿ ಬದುಕಲು ಕೌಟುಂಬಿಕ ಸಂಬಂಧಗಳ ಮಹತ್ವವನ್ನು ಗುರುತಿಸಿದ್ದಾರೆ.

ಇಲ್ಲಿನ ಇತರೆ ಕಥೆಗಳಾದ **'ನೆನಪಿನಂಗಳದಲ್ಲಿ ನೂರು ಚಿತ್ತಾರ', 'ನೆನಪುಗಳು ನೋಯಲಿಲ್ಲ'** ಕಥೆಯಲ್ಲಿ ನಿರೂಪಕಿ ತಾಯಿಯಾಗಿ, ಮಗಳಾಗಿ ಸಂಬಂಧಗಳ ನೆಲೆಯಲ್ಲಿ ಗುರುತಿಸಿಕೊಂಡು ನಿರ್ದಿಷ್ಟ ಪಾತ್ರವಾಗಿ ಹೆಸರು ಪಡೆದುಕೊಂಡಿದ್ದಾಳೆ. ಇಲ್ಲಿ ಕುಟುಂಬದಲ್ಲಿ ತಾಯಿ ಹೆಣ್ಣುಮಗಳನ್ನು ಅತ್ಯಂತ ಜಾಗರೂಕತೆಯಿಂದ ಸಲಹುವವಳು. ತನ್ನ ಮಗಳ ಬಾಲ್ಯದಿಂದ ಹದಿಹರೆಯದ ವಯಸ್ಸಿನವರೆಗೂ ಅವಳ ನೆರಳಾಗಿ ನಿಲ್ಲುವವಳು. ಇಲ್ಲಿ 'ನೆನಪಿನಂಗಳದಲ್ಲಿ ನೂರು ಚಿತ್ತಾರ' ಕಥೆಯಲ್ಲಿ ತಾಯಿಯಾಗಿ ತನ್ನ ಮಗಳು ಹದಿಹರೆಯದ ವಯಸ್ಸಿನಲ್ಲಿ ತಾನು ಕಂಪ್ಯೂಟರ್ ಕಲಿಯುವ ಹುಡುಗನೊಂದಿಗೆ ಆಕರ್ಷಣೆಗೊಂಡು ಅದನ್ನು ಪ್ರೀತಿ ಎಂದು ಪರಿಭಾವಿಸುತ್ತಾಳೆ. ಅಲ್ಲದೆ ಆ ಪ್ರೀತಿಯನ್ನು ಪಡೆಯಲು ಮನೆ, ತಂದೆ ತಾಯಿ, ಆಹಾರ ಸೇವನೆಯನ್ನು ನಿರಾಕರಿಸುತ್ತಾಳೆ. ಅಲ್ಲದೆ ಸಂತೈಸಲು ಬಂದ ತಾಯಿಯ ಸಾಂತ್ವನವನ್ನು ನಿರಾಕರಿಸುತ್ತಾಳೆ. ಮಗಳ ಈ ವರ್ತನೆಯಿಂದ ತಂದೆಗಿಂತ ತಾಯಿ ಹೆಚ್ಚು ತಲ್ಲಣಗೊಳ್ಳುತ್ತಾಳೆ. ತನ್ನ ಮಗಳನ್ನು ಈ ಪ್ರೀತಿಯ ಸೆರೆಯಿಂದ ಹೊರತರಲು ಅವಳಿಗೆ ಸ್ನೇಹಿತೆಯಾಗಿ ಸಂಭಾಷಿಸುತ್ತಾಳೆ. ಅಲ್ಲದೆ ತನ್ನ ಜೀವನದ ವಿವಾಹಪೂರ್ವ ಪ್ರೇಮ ಸಂಬಂಧವನ್ನು ಅಳುಕಿನಿಂದ ಮಗಳ ಜೊತೆ ಹಂಚಿಕೊಳ್ಳುವಳು. ಹದಿಹರೆಯದಲ್ಲಿ ಪುರುಷರಂತೆ ಸ್ತ್ರೀಯು ಪರಸ್ಪರ ಆಕರ್ಷಿತರಾಗಿ ಅದನ್ನು ಪ್ರೀತಿಯೆಂದು ಭಾವಿಸುವುದು ಭ್ರಮೆಯಾಗಿದೆ. ಇಲ್ಲಿ ಹಿರಿಯ ಮಗಳೇ ತನ್ನ ಹರೆಯದಲ್ಲಿ ಸೋದರಮಾವನೊಂದಿಗೆ ಆಕರ್ಷಿತಳಾಗುತ್ತಾಳೆ. ವಿದ್ಯೆ ಕಾರಣ ನೀಡಿ ಅವನ ಆಹ್ವಾನವನ್ನು ನಿರಾಕರಿಸುತ್ತಾಳೆ. ಅಲ್ಲದೆ ಕಾಲೇಜಿನಲ್ಲಿ ಜೊತೆಗಾರನೊಂದಿಗೆ ಆಕರ್ಷಿತಳಾಗುತ್ತಾಳೆ. ಆದರೆ ಆ ಪ್ರೀತಿ ಮನಸ್ಸಿನಲ್ಲಿ ಬೆಳೆದು ಅಭಿವ್ಯಕ್ತಗೊಳ್ಳುವುದಿಲ್ಲ. ಅಲ್ಲದೆ ವಯಸ್ಕ ಹಂತದಲ್ಲಿ ಪುರುಷನಿಂದ ನಿರಾಕರಿಸಲ್ಪಡುತ್ತಾಳೆ. ಹೀಗೆ ಹರೆಯದಲ್ಲಿ ಕಳೆದುಹೋದ ಪ್ರೀತಿ ಕ್ಷಣಿಕವಾದದ್ದು. ಆದರೆ ವಿವಾಹದಲ್ಲಿ ಹುಟ್ಟುವ ಪ್ರೀತಿ ಶಾಶ್ವತವಾದದ್ದು ಎಂಬ ಭಾವನೆಯಿದೆ. ಹೀಗೆ ಇಲ್ಲಿ ತಾಯಿ ತನ್ನ ಮಗಳ ಹರೆಯದ ಪ್ರೇಮದಿಂದ ಹೊರತರಲು ದಿನಚರಿಯನ್ನು ಹೇಳುವ ತಂತ್ರಗಾರಿಕೆ ಬಳಸಿಕೊಳ್ಳಲಾಗಿದೆ. ಅಲ್ಲದೆ ತಾಯಿಯ ಜೀವನಾನುಭವ ಮಗಳಲ್ಲಿ ತಾನು ಕೈಗೊಂಡಿರುವ ನಿರ್ಧಾರದಿಂದ ಸಡಿಲಗೊಂಡು ಬದುಕನ್ನು ದುರಂತವಾಗಿಸದೆ ಬದುಕಿನಲ್ಲಿ ಪ್ರೀತಿಯನ್ನು

ಕಾಣಬಯಸುತ್ತಾಳೆ. ಅಲ್ಲದೆ ಇಲ್ಲಿ **'ನೆನಪುಗಳು ನೋಯಲಿಲ್ಲ'** ಕಥೆಯಲ್ಲಿ ತಾಯಿ-ಮಗಳಿರುವ ಕುಟುಂಬವಿದೆ. ಇಲ್ಲಿ ತಾಯಿ ಉದ್ಯೋಗಸ್ಥಳು. ಮಗಳು ತನ್ನ ಸಹಪಾಠಿಯೊಂದಿಗೆ ದಿನ ಕಳೆಯುವುದು, ಬೇಡವಾದ ಸಂಗಾತಿಯಾಗಿ ಮಗಳ ಸ್ನೇಹಿತನನ್ನು ನಿರಾಕರಿಸುವ ಕಾರಣ ಅವನ ಮುಗ್ಧತೆಯೇ ತಾಯಿ-ಮಗಳ ಸಂಕಟಕ್ಕೂ ಕಾರಣವಾಗಿದೆ. ಇಲ್ಲಿ ಮಗಳಿಗೆ ತಾಯಿ ತನ್ನ ತಂದೆಯನ್ನು ತಿರಸ್ಕರಿಸಲು ಕಾರಣವನ್ನು ತಿಳಿದುಕೊಳ್ಳುವ ಉತ್ಸಾಹ. ಅಲ್ಲದೆ ತನ್ನ ಕೆಲಸದ ವರ್ಗಾವಣೆಯನ್ನು ತಂದೆಯಿರುವ ಬೆಂಗಳೂರಿನಲ್ಲಿ ವರ್ಗಾಯಿಸಿಕೊಳ್ಳುವ ಅವಕಾಶವಿದ್ದರೂ ಅದನ್ನು ತಿರಸ್ಕರಿಸಿದ ಬಗ್ಗೆ ಮಗಳಿಗೆ ಕುತೂಹಲವಿದೆ. ಇಲ್ಲಿ ತಾಯಿಯ ಈ ವರ್ತನೆಯನ್ನು ಅವಳ ಡೈರಿ ಓದುವುದರ ಮೂಲಕ ತಿಳಿಯಲು ಪ್ರಯತ್ನಿಸುತ್ತಾಳೆ. ಅಲ್ಲದೆ ತಾಯಿಯ ಡೈರಿ ಓದಿರುವುದನ್ನು ಸಂಕೋಚದಲ್ಲಿ ತಿಳಿಸುತ್ತಾಳೆ. ಇತ್ತ ತಾಯಿ ಮಗಳು ತನ್ನ ತಂದೆ ತಾಯಿಯನ್ನು ಬಿಡಲು ಕಾರಣವಾದ ಪ್ರಶ್ನೆಗಳನ್ನು ನಿರೀಕ್ಷಿಸಿ ಹೆಚ್ಚು ಗಂಭೀರವಾಗುವಾಗುವಳು. ಇಲ್ಲಿ ಹಿರಿಯ ಮಹಿಳೆಗೆ ವೈವಾಹಿಕ ಸಂಬಂಧವು ಏರ್ಪಡಿಸುವುದು ರಕ್ತಸಂಬಂಧಿಗಳಲ್ಲಿ ತಾನಿಲ್ಲದೆ ಬದುಕುವುದಿಲ್ಲ ಎಂದು ಬೇಡಿಕೊಂಡ ಸೋದರಮಾವನೊಂದಿಗೆ ಹೆತ್ತವರ ವಿರೋಧದಲ್ಲಿ ವಿವಾಹವಾಗುತ್ತಾಳೆ. ತನ್ನ ಕಛೇರಿಯ ಸಹೋದ್ಯೋಗಿಯೊಂದಿಗೆ ಕೆಲಸದ ನಿಮಿತ್ತ ಪ್ರವಾಸ ಕೈಗೊಂಡು ಗಂಡನೊಂದಿಗೆ ಪ್ರಯಾಣಿಸುತ್ತಾಳೆ. ಅಲ್ಲಿ ಸಾವಿನ ಅಂಚಿನಲ್ಲಿದ್ದಾಗ ತನ್ನನ್ನು ರಕ್ಷಿಸದೆ ನಿಂತ ಗಂಡನ ಬಗ್ಗೆ ಅಸಹನೆಯನ್ನು, ತನ್ನ ಬದುಕನ್ನು ಲೆಕ್ಕಿಸದೆ ಕಾಪಾಡಿದ ಸಹೋದ್ಯೋಗಿಯಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾಳೆ. ಹೀಗೆ ತಾನು ಆಯ್ಕೆ ಮಾಡಿಕೊಂಡ ಸಂಗಾತಿ ಗಂಡ ತನ್ನನ್ನು ರಕ್ಷಿಸಲಿಲ್ಲ ಎಂಬುದು ಕುಟುಂಬದ ಕಲಹಕ್ಕೆ ಕಾರಣವಾಯಿತು. ಹೀಗೆ ಗಂಡನಿಂದ ದೂರವಾದ ಹಿರಿಯ ಮಗಳ ಗಂಡನ ಮರಣಶಯ್ಯೆಯಲ್ಲಿ ತನ್ನ ಪತ್ನಿಯ ಎಲ್ಲಾ ಕರ್ತವ್ಯಗಳನ್ನು ನಿಭಾಯಿಸುತ್ತಾಳೆ. ಗಂಡನ ಮರುಕವನ್ನು ಕಂಡು ತಾನು ಮಾಡಿರುವ ಈ ಸೇವೆಯ ಹಿಂದೆ ತಾನು ತೆಗೆದುಕೊಂಡಿರುವ ನಿರ್ಧಾರಗಳ ಬಗ್ಗೆ ಅವಳಿಗೆ ಅಸಮ್ಮತವಿತ್ತೆ ಅದರ ಪೂರೈಕೆಗಾಗಿ ಈ ಸೇವೆ ಮಾಡಿದೆನೇ ಎಂಬ ಪ್ರಶ್ನೆಗಳು ಮಹಿಳೆಯಲ್ಲಿ ಉದ್ಭವಿಸುತ್ತವೆ. ಸಾವಿನ ಕ್ಷಣದಲ್ಲಿ ತೆಗೆದುಕೊಳ್ಳುವ ನಿರ್ಧಾರಗಳಿಂದ ಮನಸ್ಸು ಸಂಬಂಧಗಳನ್ನು ನಿರ್ಧರಿಸಲು ಸಾಧ್ಯವಿಲ್ಲ ಎಂಬ ಪ್ರಜ್ಞೆಯನ್ನು ಮಗಳೊಂದಿಗೆ ತಾಯಿ ಹಂಚಿಕೊಳ್ಳುವುದರ ಮೂಲಕ ಗಂಡನ್ನೊಳಗೊಂಡ ಪೂರ್ಣಕುಟುಂಬವನ್ನು ಹೊಂದುವ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾಳೆ. **'ತಣ್ಣನೆಯ ಕಣಿವೆಯಲ್ಲಿ ಒಂದು ಪ್ರೀತಿಯ ಕನಸು'** ಕಥೆಯಲ್ಲಿ ಮಹಿಳೆ ತನ್ನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದು, ಕೆಲವೊಮ್ಮೆ ತಾನು ಆಯ್ದುಕೊಂಡ ಸಂಗಾತಿಯಲ್ಲಿ ಆಕರ್ಷಣೆ ಹೊಂದುತ್ತಾಳೆ. ಇಲ್ಲಿ ಮಗಳಿಗೆ ಬೆಂಗಳೂರಿನ ಯಾಂತ್ರಿಕ ಜೀವನದಲ್ಲಿ ಬೇಸತ್ತು ಕಾಶ್ಮೀರದ ಪ್ರಶಾಂತ ಹುಡುಗನನ್ನು ಅವನ ಮುಗ್ಧತೆಹಗೆ ಸೋಲುತ್ತಾಳೆ. ಅವನ ಅವಸರವಿಲ್ಲದ ಬದುಕು ಪ್ರಕೃತಿ ನೀಡಿರುವ ಎಲ್ಲಾ ಆತಂಕಗಳಿಗೆ ಒಗ್ಗಿಕೊಂಡು ಪ್ರಶ್ನಿಸದೆ ಬದುಕುವ ಅವನ

ಸಹನೆ ಪ್ರಿಯವಾಗಿ ದಿನ ಕಳೆದಂತೆ ಆ ಪ್ರಶಾಂತತೆ ಅಸಹನೆ ಹುಟ್ಟಿಸಿ, ಬೆಂಗಳೂರಿನ ಯಾಂತ್ರಿಕ ಬದುಕೇ ಇಷ್ಟವಾಗಿ ಅದರಲ್ಲಿ ತನ್ನತನವನ್ನು ಹುಡುಕುವ ಪ್ರಯತ್ನ ಮಾಡುತ್ತಾಳೆ. ಹೀಗೆ ತಾನು ಪ್ರೀತಿಸಿದ ಸಂಗಾತಿ ಪರಿಸರಕ್ಕೆ ತಾನು ಒಗ್ಗಿಕೊಳ್ಳವುದು ಅಸಾಧ್ಯವಾದಾಗ ತನ್ನ ಪ್ರೀತಿಯ ಮಿತಿಯನ್ನು ಹೊಂದಿ ಆ ಸಂಗಾತಿಯನ್ನೇ ಬಿಟ್ಟು ಬದುಕುವ ಹಿಂದೆ ಬದುಕು ಮುಖ್ಯವಾಗಿ ಕಾಣುತ್ತದೆ. ಅಲ್ಲದೆ ಮಹಿಳೆಯಲ್ಲಿ ತಾನು ಬಿಟ್ಟುಹೋದ ಈ ಸಂಗಾತಿ ತನ್ನನ್ನು ಸ್ಮರಿಸುವನೇ ಎಂಬ ಪ್ರಶ್ನೆಯು ಅವಳಲ್ಲಿ ಕಾಡುತ್ತದೆ. ಆದರೆ ಇಲ್ಲಿ ಮಹಿಳೆ ತನ್ನ ಸ್ವಾರ್ಥಕ್ಕಾಗಿ ತನ್ನ ಸಂಗಾತಿಯನ್ನು ಒತ್ತಾಯಪಡಿಸದೆ ಇರುವ ಸ್ಥಿತಿಯಲ್ಲಿ ಬದುಕುವ ನಿರ್ಣಯವನ್ನು ಕೈಗೊಳ್ಳುತ್ತಾಳೆ. ಆದರೆ ಮಹಿಳೆಯ ಈ ತೀರ್ಮಾನದ ಹಿಂದೆ ಪುರುಷನ ಸಮ್ಮತಿಯಿದೆ. ಕಾರಣ ತಾನು ಬೆಳೆದಿರುವ ಪರಿಸರ ಅವನ ಮಿತಿಯಾಗಿದೆ. ತನ್ನ ಎಲ್ಲೆಯನ್ನು ಮೀರಲು ಅಸಾಧ್ಯವಾದ ಪ್ರಾದೇಶಿಕತೆ, ಪ್ರೀತಿ ಈ ಪುರುಷನಲ್ಲಿ ಕಾಣಬಹುದಾಗಿದೆ. ಹೀಗೆ ಬದುಕು ಇರುವಂತೆಯೇ ಸ್ವೀಕರಿಸುವ ಮೂಲಕ ಬದುಕಿನ ಸಾರ್ಥಕತೆಯನ್ನು ಕಾಣಬಹುದಾಗಿದೆ.

ಹೀಗೆ ಇಲ್ಲಿ ಸ್ತ್ರೀ-ಪುರುಷರ ಪ್ರೇಮ ವೈವಾಹಿಕ ಸಂಬಂಧಗಳಾಗಿ ಪ್ರಾದೇಶಿಕತೆಯನ್ನು ಮೀರಿದ ವಿಶ್ವಕುಟುಂಬವಾಗಿದೆ. ಅಲ್ಲದೆ ಕುಟುಂಬದಲ್ಲಿ ಎದುರಾಗುವ ಸಮಸ್ಯೆಗಳಿಗೆ ಎದುರಾಗಲು ಸ್ತ್ರೀ-ಪುರುಷರ ಸಹಕಾರ, ಹೊಂದಾಣಿಕೆ ಮುಖ್ಯವಾಗಿವೆ. ಅಲ್ಲದೆ ವ್ಯಕ್ತಿಗಳಿಗೆ ಬದುಕು ಮುಖ್ಯವಾಗಿದೆ. ಬದುಕಲು ಕೌಟುಂಬಿಕ ಸಂಬಂಧಗಳು ಮುಖ್ಯವಾಗಿದೆ. ಈ ಮನುಷ್ಯ ಸಂಬಂಧಗಳು ಉಳಿಸಿಕೊಳ್ಳುವ ತುಡಿತ ಗಂಡು-ಹೆಣ್ಣುಗಳಲ್ಲಿ ಕಾಣಬಹುದಾಗಿದೆ.

ಅಡಿ ಟಿಪ್ಪಣಿ

೧. ವೀಣಾ ಶಾಂತೇಶ್ವರ, ನಡೆದದ್ದೇ ದಾರಿ, ೨೦೦೯, ಪುಟ-೩೨,೨೦೨,೨೧೧.

೨. ಗೀತಾ ನಾಗಭೂಷನ, ಕ್ಯಾದಿಗೆ ಬನದಾಗ ಕತೆಯಾಗಿ ನಿಂತವರು, ಪುಟ-೩೫,೮೬,೨೭೩.

೩. ವೈದೇಹಿ, ಅಲೆಗಳಲ್ಲಿ ಅಂತರಂಗ, ೨೦೦೯, ಪುಟ-೮೨,೧೦೩,೧೬೦,೩೬೨,೩೬೫.

೪. ಸಾರಾ ಅಬೂಬಕ್ಕರ್, ಚಪ್ಪಲಿಗಳು, ೨೦೧೧, ಪುಟ-೮,೧೦,೮೦,೧೫೭,೯೯೧, ೯೯೨,೯೯೩,೯೯೬.

ಅಧ್ಯಾಯ ಐದು

ಹೊಸ ಶತಮಾನದ ಕಥೆಗಾರ್ತಿಯರು: ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬದ ಸ್ವರೂಪ

೫.೧. ಪ್ರವೇಶಿಕೆ

೫.೨. ಸುನಂದಾ ಪ್ರಕಾಶ ಕಡಮೆ

೫.೩. ಸುಮಂಗಲಾ

೫.೪. ಸಂಧ್ಯಾ ಹೊನಗುಂಟಿಕರ

೫.೫. ನೀಲಾ ಕೆ.

೫.೬. ಜಾಹ್ನವಿ ಬಿ.ಟಿ

೫.೭. ವಿನಯಾ

ಅಧ್ಯಾಯ ಐದು

ಹೊಸ ಶತಮಾನದ ಕಥೆಗಾರ್ತಿಯರು: ಕಥಾಸಾಹಿತ್ಯದಲ್ಲಿ ಮಹಿಳೆ ಮತ್ತು ಕುಟುಂಬದ ಸ್ವರೂಪ

೫.೧. ಪ್ರವೇಶಿಕೆ

'ಹೊಸ ಶತಮಾನ ಸಾಹಿತ್ಯ' ಈ ಹೊಸ ಸಾಹಿತ್ಯವು ಹಲವು ಪ್ರಕಾರಗಳಲ್ಲಿ ಹುಟ್ಟಿ ಬೆಳೆದಿರುತ್ತದೆ. ಬೆಳೆಯುತ್ತಲೆ ಇರುತ್ತದೆ. ಶತಮಾನ ಹೊಸದಿರಬಹುದು. ಹೊಸ ಶತಮಾನದಲ್ಲಿ ಹಳಬರೂ ಬರುತ್ತಿರುತ್ತಾರೆ. ಹಳಬರು ಹೊಸತಲೆಮಾರಿನಲ್ಲಿ ಬರುತ್ತಿರಬಹುದು. ಪ್ರಶ್ನೆ ಎಂದರೆ ಅವರ ಸಾಹಿತ್ಯ ಹೊಸದಾಗಿರುತ್ತದೆಯೇ? ಅಂದರೆ ಈ ಹಳಬರು ಎಂದು ಕರೆಯುವ ಬರಹಗಾರರು ತಮ್ಮ ಮುಂದಿನ ಅಂದರೆ ತಮಗಿಂತ ಒಂದು ದಶಕವೋ, ಅದಕ್ಕಿಂತ ಹೆಚ್ಚೋ ಚಿಕ್ಕವರಾಗಿದ್ದು ಬರೆಯುವ ಬರೆಹಗಾರರಿಗಿಂತ ಭಿನ್ನವಾಗಿ ಬರೆಯುತ್ತಿರುತ್ತಾರೋ? ಅಥವಾ ಬರಹಗಾರರು ಚಿಕ್ಕವರಾಗಿದ್ದರೂ ತಮ್ಮ ಹಿಂದಿನವರ ಜಾಡಿನಲ್ಲಿ ಬರೆಯುತ್ತಿರುತ್ತಾರೂ ಅದಕ್ಕಿಂತ ಭಿನವಾಗಿ ಬರಿಯುತ್ತಿರುತ್ರಾರೂ? ಇದೊಂದು ಚರ್ಚಾರ್ಹವಾದ ವಿಷಯ. ವಯಸ್ಸಿನಲ್ಲಿ ಒಂದೋ ಎರಡೋ ದಶಕಗಳ ಅಂತರ ಇದ್ದ ಮಾತ್ರಕ್ಕೆ ಸಾಹಿತ್ಯ ರಚನೆಯಲ್ಲಿ ಹೊಸತನ ಬರುತ್ತದೆಯೆ? ಸಾಮಾನ್ಯವಾಗಿ ಸಾಹಿತ್ಯದಲ್ಲಿ ಹೊಸತನ ಬರುವುದಕ್ಕೆ ಹಲವಾರು ಕಾರಣಗಳಿರುತ್ತವೆಂದು ತೋರುತ್ತದೆ.

ಸಮಾಜದಲ್ಲಿ ಬದಲಾವಣೆ ಕಂಡು ಬಂದರೆ, ಅದನ್ನು ಗ್ರಹಿಸುವ ದೃಷ್ಟಿಕೋನಗಳು ಹುಟ್ಟಿಕೊಂಡರೆ ಮಾತ್ರ ಸಾಹಿತ್ಯದಲ್ಲಿ ಹೊಸತನ ಬರಲು ಸಾಧ್ಯವಾಗುತ್ತದೆ. ಡಿ.ಆರ್. ನಾಗರಾಜ ಒಂದು ಕಡೆ ಹೇಳುವಂತೆ ಸ್ಥಿತ್ಯಂತರಗಳ ಕಾಲದಲ್ಲಿ ಹುಟ್ಟುವ ಲೇಖಕನೇ ಭಾಗ್ಯವಂತ ಎಂದಿದ್ದಾರೆ. ಈ ಸ್ಥಿತ್ಯಂತರಗಳನ್ನು ಗ್ರಹಿಸುವ ಸವಾಲು ಮತ್ತು ಅವಕಾಶ ಆ ಕಾಲದ ಲೇಖಕನಿಗೆ ಸಿಗುತ್ತದೆ. ಸ್ಥಿತ್ಯಂತರ, ಪಲ್ಲಟಗಳು ಯಾವ ಸಮಾಜದಲ್ಲಿ ಕಾಣಿಸುತ್ತವೆಯೋ ಅಲ್ಲಿ ಸಂಘರ್ಷಗಳು ಹೆಚ್ಚಾಗಿರುತ್ತವೆ. ಈ ಸಂಘರ್ಷಗಳನ್ನು ಮನುಷ್ಯನೇ ಎದುರಿಸುತ್ತಲೇ ಅನುಭವಿಸುತ್ತಿರುತ್ತಾನೆ. ಈ ಅನುಭವಗಳನ್ನು ಬರಹಗಾರನೇ ಅನುಭವಿಸಿರಬೇಕೆಂದೇನೂ ಇಲ್ಲ. ಸಂಘರ್ಷಗಳ ಕಾಲದಲ್ಲಿ ಇರುವುದರಿಂದ ಅವುಗಳಿಂದ ಲೇಖಕನಿಗೆ ದೂರವಿರಲು ಸಾಧ್ಯವಿಲ್ಲ.

ಅವುಗಳನ್ನು ಅರಿಯುವ, ಅವುಗಳನ್ನು ತಿಳಿದು ನೋಡುವ ಸಾಹಸ ಲೇಖಕನದಾಗಿರುತ್ತದೆ. ಅದರಿಂದಾಗಿಯೇ ಹೊಸಸಾಹಿತ್ಯ ಹುಟ್ಟುವ ಕಾರಣವಾಗುತ್ತದೆ. ಇದರಿಂದ ಹೊಸ ಸಾಹಿತ್ಯಕ್ಕೂ ಹೊಸ ತಲೆಮಾರಿಗೂ ಸಂಬಂಧ ಏರ್ಪಡುತ್ತದೆ.

ಪರಂಪರೆಯಲ್ಲಿ ಇದರ ಕುರುಹುಗಳಿರುವುದನ್ನು ನೋಡಬಹುದು. ಹೊಸಗನ್ನಡ ಸಾಹಿತ್ಯ ಬೆಳೆದು ಬಂದ ಬಗೆಯನ್ನು ನೋಡಬಹುದು. ೨೦ನೇ ಶತಮಾನದ ಆದಿ ಭಾಗದಲ್ಲಿ ಹುಟ್ಟಿ ಬೆಳೆದ, ಸಾಹಿತ್ಯ ರಚಿಸಿದ ಲೇಖಕರ ದೊಡ್ಡ ವರ್ಗವೇ ಇದೆ. ಪದ್ಯ ಲೇಖಕರಾಗಿ, ಗದ್ಯ ಲೇಖಕರಾಗಿ ಕಾಣಿಸಿಕೊಂಡಿದ್ದಾರೆ. ಸಂಶೋಧಕರಾಗಿ ಅನೇಕರು ಇದ್ದಾರೆ. ಬ್ರಿಟೀಷ್ ಆಳ್ವಿಕೆಯಿತ್ತು. ಇಂಗ್ಲೆಂಡಿನ ವಿದ್ವಾಂಸರು ಭಾರತ–ಕರ್ನಾಟಕದ ನೆಲಕ್ಕೆ ಬಂದು ತಮ್ಮ ವಿದ್ವತ್ತು ಮತ್ತು ವೈಧಾನಿಕತೆಯಿಂದ ಬೇಕಾದಷ್ಟು ಕೆಲಸ ಮಾಡಿ ಈ ನೆಲದ ಲೇಖಕರನ್ನು ಪ್ರಭಾವಿಸಿದರು. ಅದೇ ರೀತಿ ಇಂಗ್ಲೀಷ್ ಕಲಿಕೆಯಿಂದ ಇಂಗ್ಲೀಷ್ ಸಾಹಿತ್ಯದಲ್ಲಿ ಆಗಿದ್ದ, ಆಗುತ್ತಿದ್ದ ಸಾಹಿತ್ಯ ಬೆಳವಣಿಗೆಯನ್ನು ಗ್ರಹಿಸಿದ ಕನ್ನಡ ಲೇಖಕರು ಸೃಜನಶೀಲ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಲು ಪ್ರೇರಣೆ ಪಡೆದರು. ಅದರ ಪರಿಣಾಮವಾಗಿ ಕವಿತೆ, ಕತೆ, ಕಾದಂಬರಿ ಮುಂತಾದ ಪ್ರಕಾರಗಳು ಹುಟ್ಟಿಕೊಂಡವು. 'ಬ್ರಿಟೀಷ್ ಪೂರ್ವ' ಕಾಲದಲ್ಲಿ ಅಂದರೆ ಈ ನೆಲದಲ್ಲಿ 'ಹಳೆ ಸಾಹಿತ್ಯ' ವಿತ್ತು. ಬ್ರಿಟೀಷ್ ವಸಾಹತು ಕಾಲದಲ್ಲಿ ಹೊಸ ಸಾಹಿತ್ಯ, ಅಂದರೆ ಆಧುನಿಕ ಸಾಹಿತ್ಯ ರಚನೆಯಾಯ್ತು. ಇದರ ವಲಯದಲ್ಲಿದ್ದವರನ್ನು 'ಹೊಸತಲೆಮಾರು' ಎಂದು ಕರೆಯಲಾಯಿತು ಅಥವಾ 'ಮೊದಲ ತಲೆಮಾರು' ಎಂದು ಕರೆಯಬಹುದು. ಹೊಸಗನ್ನಡದ ಮೊದಲ ತಲೆಮಾರಿನವರೆಂದು ಎಂ.ಎಸ್. ಪುಟ್ಟಣ್ಣಯ್ಯ, ಗೋವಿಂದಪೈ, ಮಾಸ್ತಿ, ಬೇಂದ್ರೆ, ಕುವೆಂಪು ಅವರನ್ನು ಕರೆಯಲಾಗುತ್ತದೆ.

೨೦ನೇ ಶತಮಾನದ ಆದಿಯಲ್ಲಿ ಹುಟ್ಟಿದ ಮಾತ್ರಕ್ಕೆ ಹೊಸತಲೆಮಾರು ಎಂದು ಕರೆಯಲಾಗುವುದಿಲ್ಲ. ಇವರೆಲ್ಲರ ಸಾಹಿತ್ಯದಲ್ಲಿ ಹೊಸತನವೂ ಕಾಣಿಸಿಕೊಂಡಿತ್ತು. ಬ್ರಿಟೀಷ್ ವಸಾಹತು ಕಾಲಾವಧಿಯ ಆಡಳಿತದಿಂದ ಕಂಡ ಬದಲಾವಣೆಯನ್ನು, ಸ್ಥಿತ್ಯಂತರಗಳನ್ನು, ಅದರಿಂದ ಹುಟ್ಟಿದ ಸಂಘರ್ಷಗಳನ್ನು ಈ ತಲೆಮಾರಿನ ಲೇಖಕರು ಗ್ರಹಿಸಿ ತಮ್ಮದೇ ಆದ ತಾತ್ವಿಕತೆಯಿಂದ ಬರೆದರು. 'ನವೋದಯ ಸಾಹಿತ್ಯ'ವೆಂದು ಈಗ ಗುರುತಿಸುತ್ತ ಬಂದಿದ್ದೇವೆ. ಈ ತಲೆಮಾರಿನವರ ದೃಷ್ಟಿಕೋನವು ಹಿಂದಿನವರಿಗಿಂತ ಭಿನ್ನವಾಗಿತ್ತು. ಸಮಕಾಲೀನ ಸಂಘರ್ಷಗಳನ್ನು ಗ್ರಹಿಸಲು ಒಂದು ತತ್ವವನ್ನು ರೂಪಿಸಿಕೊಂಡಿದ್ದರು. ಅದನ್ನು ಹಲವು ಆಯಾಮಗಳಲ್ಲಿ ಗ್ರಹಿಸುತ್ತಾ, ಅಭಿವ್ಯಕ್ತಿಸಿದ್ದರು.

ಇವರಿಗಿಂತ ಭಿನ್ನ ತಾತ್ವಿಕತೆಯನ್ನು ರೂಪಿಸಿಕೊಂಡು 'ನವ್ಯ ಸಾಹಿತ್ಯ'ವನ್ನು ರಚಿಸಿದವರನ್ನು ಎರಡನೇ ತಲೆಮಾರಿನವರೆಂತಲೋ, ಹೊಸ ತಲೆಮಾರಿನವರೆಂತಲೋ ಕರೆಯಲಾಯಿತು.

ನವೋದಯ ಸಾಹಿತಿಗಳನ್ನು ನವ್ಯ ಸಾಹಿತಿಗಳಿಗೆ ಹೋಲಿಸಿದರೆ ಹಳೆಯ ತಲೆಮಾರು, ಹೊಸತಲೆಮಾರು ಎಂಬುದು ಹುಟ್ಟಿಕೊಳ್ಳುತ್ತದೆ. ವಯಸ್ಸು ಮಾತ್ರ ಕಾರಣವಲ್ಲ. ಬರಹದ ತಾತ್ವಿಕತೆಯೇ ಮುಖ್ಯ ಕಾರಣವಾಗುತ್ತದೆ. ೧೯೫೦ರಲ್ಲಿ ಕಾಣಿಸಿಕೊಂಡ ಲೇಖಕರು ಈ ಕಾಲಾವಧಿಯಲ್ಲಿ ಸಮಾಜದಲ್ಲಿ ಕಂಡ ಬದಲಾವಣೆಗಳನ್ನು ಗ್ರಹಿಸಿ ಬರೆದರು. ಬ್ರಿಟೀಷ್ ಆಳ್ವಿಕೆ ಕೊನೆಗೊಂಡಿತ್ತು. ರಾಜಕೀಯ ಸ್ವಾತಂತ್ರ್ಯ ಸಿಕ್ಕಿತ್ತು. ವಿದ್ಯಾವಂತರು ಕಾಣಿಸಿಕೊಂಡಿದ್ದರು. ಹೊಸ ಉದ್ಯೋಗ ಸೃಷ್ಟಿಯಾಗಿದ್ದವು. ನಗರಗಳು ಬೆಳೆಯುತ್ತಿದ್ದವು. ವಲಸೆ ಆರಂಭವಾಗಿತ್ತು. ಜೀವನ ಶೈಲಿ ಭಿನ್ನವಾಗಿತ್ತು. ಇದನ್ನು ಗ್ರಹಿಸಿ ಬರೆದವರು ನವ್ಯ ತಲೆಮಾರಿನವರು.

ಇವರಿಗಿಂತ ಭಿನ್ನವಾಗಿ ಬರೆದವರು ಬಂಡಾಯ–ದಲಿತ ಸಾಹಿತಿಗಳು. ಈ ಚಳುವಳಿ ೭೦ರ ದಶಕದಿಂದ ಆರಂಭವಾಯ್ತು. ನವ್ಯ ಹಳೆತಲೆಮಾರಿಗೆ ಸೇರಿದರೆ, ಬಂಡಾಯ–ದಲಿತ ಲೇಖಕರು ಹೊಸ ತಲೆಮಾರಿಗೆ ಸೇರಿದವರಾಗುತ್ತಾರೆ. ನವ್ಯ ಸಾಹಿತ್ಯ ಆರಂಭವಾಗಿ ೭೦ ವರ್ಷಗಳ ನಂತರ ಈ ಚಳುವಳಿ ಶುರುವಾಯಿತು. ವ್ಯಕ್ತಿ ಕೇಂದ್ರೀಕೃತವಾದ ನವ್ಯ ಸಾಹಿತ್ಯ ಚಳುವಳಿಯನ್ನು ಪ್ರತಿರೋಧಿಸಿ, ಸಮಾಜ ಕೇಂದ್ರೀತ, ದಮನಿತ, ಅವಮಾನಿತರ ನಡುವಿನಿಂದ ಬರೆಯತೊಡಗಿದ ಬಂಡಾಯ–ದಲಿತ ಲೇಖಕರು ಪರ್ಯಾಯ ಚಿಂತನೆ ನಡೆಸಿ ಹೊಸತಲೆಮಾರು ಎಂದೆನಿಸಿಕೊಂಡರು.

ಹೀಗೆ ತಾತ್ವಿಕತೆಯನ್ನು ಕಾಲಕಾಲಕ್ಕೆ ಭಿನ್ನ ಭಿನ್ನವಾಗಿ ಕಟ್ಟಿಕೊಂಡು ಸಾಹಿತ್ಯ ರಚನೆ ಮಾಡುತ್ತ ಬಂದಿದ್ದಾರೆ. ಸಾಹಿತ್ಯ ಚಳುವಳಿ ಅಥವಾ ಪಂಥ–ಘಟ್ಟಗಳು ಅವುಗಳ ಚೌಕಟ್ಟುಗಳಲ್ಲಿ ಬರೆಯುವುದು ಸಾಮಾನ್ಯವಾಗಿ ಕಂಡು ಬಂದರೂ ದೀರ್ಘಕಾಲ ಬದುಕಿ ಬರೆಯುತ ಬಂದ ಲೆಖಕರು ತಮ್ಮ ಕಾಲದ ಸಾಹಿತ್ಯ ಚಳುವಳಿ ನಿಂತರೂ ಬರೆಯುವುದನ್ನೇನೂ ಬಿಡಲಿಲ್ಲ. ತಮ್ಮ ಕಾಲದಲ್ಲಿ ನಡೆದ ಎಲ್ಲ ಸಾಹಿತ್ಯ ಚಳುವಳಿಯನ್ನು ಕಂಡು ಗ್ರಹಿಸುತ್ತಿದ್ದರೂ ಮೂಲದ ತಾತ್ವಿಕತಯನ್ನು ಬದಲಿಸಿಕೊಂಡವರು ಕಡಿಮೆ, ಕುವೆಂಪು, ಮಾಸ್ತಿ, ಕಾರಂತರು ನವೋದಯ ಸಾಹಿತ್ಯ ಚಳುವಳಿಯ ಕಾಲದಲ್ಲಿ ಅದಕ್ಕೆ ಸಂವಾದಿಯಾಗಿ ಬರೆದರೂ, ನವ್ಯ ಸಾಹಿತ್ಯ ಚಳುವಳಿ ಹುಟ್ಟಿಕೊಂಡರೂ ಅದಕ್ಕೆ ಸ್ಪಂದಿಸಲಿಲ್ಲ. ಆದರೂ ತಮ್ಮದೇ ನೆಲೆಯಲ್ಲಿ ಬರೆಯುತ್ತಿದ್ದರು.

ಹಾಗೆಯೇ ನವ್ಯ ಸಾಹಿತ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಸ್ಪಂದಿಸಿ ಬರೆಯಲು ಆರಂಭಿಸಿ ನವ್ಯ ಸಾಹಿತ್ಯ ಚಳುವಳಿ ಕಾಲ ಮುಗಿದು, ಬಂಡಾಯ, ದಲಿತಸಾಹಿತ್ಯ ಚಳುವಳಿ ಆರಂಭವಾಗಿ ಅದೂ ಮುಗಿದರೂ ಯು.ಆರ್.ಅನಂತಮೂರ್ತಿ, ಯಶವಂತ ಚಿತ್ತಾಲರು, ತೇಜಸ್ವಿ, ಲಂಕೇಶ ಮುಂತಾದವರು ಬರೆಯುತ್ತಲೇ ಇದ್ದರು. ತಮ್ಮ ತಮ್ಮ ಹಿಂದಿನ ಮತ್ತು ಮುಂದಿನ ಸಾಹಿತ್ಯ ಚಳುವಳಿಗಳ ಬಗ್ಗೆ ಭಿನ್ನಮತವಿಟ್ಟುಕೊಂಡು ಬರೆಯುತ್ತಿದ್ದರು. ಹಾಗಂತ ಇವರನ್ನು ಹೊಸ ತಲೆಮಾರು ಅಂತ ಕರೆಯಲಾಗುವುದಿಲ್ಲ. ೯೦ ದಶಕದವರೆಗೆ ಸಾಹಿತ್ಯ ಚಳುವಳಿಗಳಿದ್ದವು.

ದೇವನೂರ ಮಹದೇವ, ಸಿದ್ದಲಿಂಗಯ್ಯ, ಕುಂ.ವೀರಭದ್ರಪ್ಪ ಮುಂತಾದವರು ಬಂಡಾಯ-ದಲಿತ ಸಾಹಿತ್ಯ ಚಳುವಳಿಗೆ ಸೇರಿದವರಾಗಿದ್ದು, ೯೦ರ ದಶಕದ ಹೊತ್ತಿಗೆ ಈ ಚಳುವಳಿ ಸಕ್ರಿಯವಾಗಿತ್ತು. ಸಕ್ರಿಯವಾಗಿದ್ದವರೆಲ್ಲ ೯೦ರ ನಂತರ ಬರೆಯಲು ತೊಡಗಿದ್ದ ಹೊಸ ತಲೆಮಾರಿನವರಿಗೆ ಈ ಚಳುವಳಿಯ ಅರಿವಿದ್ದರೂ ಅದರ ಗುಂಟ ಸಾಗಲಿಲ್ಲ. ಭಿನ್ನವಾಗಿ ಯೋಚಿಸುತ್ತ ತಮ್ಮದೇ ತಾತ್ವಿಕತೆಯನ್ನು ರೂಪಿಸಿಕೊಂಡು ಬರೆಯತೊಡಗಿದರು. ೯೦ರ ದಶಕದಿಂದ ಭಾರತ-ಕರ್ನಾಟಕದಲ್ಲಿ ಜಾಗತೀಕರಣದ ಪ್ರಕ್ರಿಯೇ ತೀವ್ರವಾಯ್ತು. ಉದಾರೀಕರಣ, ಖಾಸಗೀಕರಣಗಳು ಸಮಾಜವನ್ನು ತುಂಬಿಕೊಂಡವು. ತಂತ್ರಜ್ಞಾನವು ಶಿಕ್ಷಣವನ್ನು ಪ್ರಭಾವಿಸಿತು. ಶಿಕ್ಷಣದ ಸ್ವರೂಪ ಬದಲಾಯಿತು. ಉದ್ಯೋಗದ ಸ್ವರೂಪವೂ ಭಿನ್ನವಾಯಿತು. ಐ.ಟಿ.,ಬಿ.ಟಿ., ಕಂಪೆನಿಗಳು ಯುವಕರ ಬದುಕಿನ ವಿನ್ಯಾಸವನ್ನೇ ಬದಲಿಸಿದವು. ನಗರಕ್ಕೆ ಎಲ್ಲ ಬಗೆಯ ದುಡಿಮೆಗಾರರು ವಲಸೆ ಹೋದರು. ಖಾಸಗಿ ಬಂಡವಾಳಗಾರರ ಹಿಡಿತ ಬಲವಾಯಿತು. ಸರ್ಕಾರವು ಬಗ್ಗಿ ನಡೆಯುವ ಸಂದರ್ಭ ರೂಪುಗೊಂಡಿತು. ಜಾಗತೀಕರಣದಿಂದ ಗುಡಿಕೈಗಾರಿಕೆಗಳು ಹಿನ್ನೆಲೆಗೆ ಸರಿದವು. ತಾಯಿ ನುಡಿಯಲ್ಲಿ ಕಲಿಕೆ ಕೇವಲ ಆದರ್ಶವಾಯ್ತು. ಇಂಗ್ಲೀಷ್ ಮಾಧ್ಯಮದ ಕಲಿಕೆಯೇ ಪ್ರಧಾನವಾಯ್ತು. ಸಮಾಜ ವಿಜ್ಞಾನಗಳು ಹಿನ್ನೆಲೆಗೆ ಸರಿದವು. ವಿಜ್ಞಾನವೇ ಮುಂಚೂಣಿಗೆ ಬಂದವು.

ಜಾಗತೀಕರಣದಿಂದ ಸಮಾಜ ತೀವ್ರವಾಗಿ ಬದಲಾಯಿತು. ಉದ್ಯೋಗಗಳು ಹೆಚ್ಚಾದವು. ಯುವಕರು ಯುವತಿಯರು ಕಲಿತರೆ ಉದ್ಯೋಗ ಸಿಗುವಂತಾಯಿತು. ಬೇರೆ ಬೇರೆ ವಲಯಗಳಲ್ಲಿಯೂ ಪಲ್ಲಟಗಳಾದವು. ವ್ಯಾಪಾರ ಮನೋಭಾವ ಹೆಚ್ಚಾಯಿತು. ಜತೆಗೆ ಉದಾರೀಕರಣದಿಂದ ನೆಲದ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಯ್ತು. ರೈತರು ಬೆಳೆದ ಬೆಳೆಗಳಿಗೆ ನಿಜವಾದ ಬೆಲೆ ಸಿಗದೆ ಸಾವಿಗೆ ಶರಣಾಗಬೇಕಾಯಿತು. ವ್ಯಾಪಾರ ಮಾಡಿ ಬದುಕುವ ಬೀದಿ ಬದಿಯ ವ್ಯಾಪಾರಸ್ಥರನ್ನೂ ನಿಯಂತ್ರಿಸುವ, ಆ ಮೂಲಕ ವ್ಯಾಪಾರವನ್ನೂ ಕೇಂದ್ರೀಕರಿಸಿ ಮಾಲ್‌ಗಳು ಹುಟ್ಟಿಕೊಳ್ಳತೊಡಗಿವೆ. ಇಂಥ ಪರಿಣಾಮಗಳು ಜಾಗತೀಕರಣದಿಂದ ಉಂಟಾಗಿವೆ. ಇದನ್ನು ಗ್ರಹಿಸುವ ತಲೆಮಾರು ಹುಟ್ಟಿಕೊಂಡಿತು. ಬರವಣಿಗೆಗಳಲ್ಲಿ ಜಾಗತೀಕರಣದ ಪರಿಣಾಮಗಳನ್ನು ಬಿಂಬಿಸಲು ಪ್ರಯತ್ನಿಸಲಾಯಿತು. ೯೦ ರಿಂದ ೨೧ನೇ ಶತಮಾನದ ಹೊತ್ತಿಗೆ ಸಮಾಜವು ಅತ್ಯಂತ ತೀವ್ರವಾಗಿ ಬದಲಾಯಿತು. ಈ ಬದಲಾವಣೆಯನ್ನು ಗ್ರಹಿಸುವುದೇ ಯುವಕರಿಗೆ-ಯುವತಿಯರಿಗೆ ಕಷ್ಟವಾಯಿತು. ಯಾಕೆಂದರೆ ಯುವ ಬರಹಗಾರರಿಗೆ ಬದಲಾಗುವ ಸಮಾಜವನ್ನು ಗ್ರಹಿಸುವ ಒಂದು ನಿರ್ದಿಷ್ಟ ತಾತ್ವಿಕ ಚೌಕಟ್ಟು ರೂಪಿತವಾಗಿರುವುದಿಲ್ಲ. ಈ ತಾತ್ವಿಕ ಚೌಕಟ್ಟು ಸಾಹಿತ್ಯ ಚಳುವಳಿಯಿಂದ ಸಿಗುತ್ತದೆ. ಅದನ್ನು ದತ್ತವಾಗಿ ಪಡೆದು, ಮುಂದೆ ತಮ್ಮ ಸಾಮರ್ಥ್ಯದಿಂದ ವಿಸ್ತಾರಮಾಡಿಕೊಳ್ಳುತ್ತಿದ್ದಾರೆ. ೯೦ರ ದಶಕದ ಹೊತ್ತಿಗೆ ಎಲ್ಲ ಸಾಹಿತ್ಯ ಚಳುವಳಿಗಳು ಸ್ಥಗಿತವಾದವು. ಹೊಸ ತಲೆಮಾರಿನವರಿಗೆ, ದೃಷ್ಟಿಕೋನ ದತ್ತವಾಗಲಿಲ್ಲ.

ಆದರೂ ಯುವಕ-ಯುವತಿಯರು ಬರವಣಿಗೆಯನ್ನು ನಿಲ್ಲಿಸಲಿಲ್ಲ. ತಮ್ಮ ಅನುಭವವನ್ನೇ ಲೋಕಾನುಭಾವವಾಗಿ ಪರಿವರ್ತಿಸಿಕೊಂಡು ಬರೆಯಲಾರಂಭಿಸಿದರು. ಭಿನ್ನತೆ ಸಾಹಿತ್ಯದಲ್ಲಿ ಕಾಣಿಸಿತು ಆದರೂ ಹಿಂದಿನ ಕನ್ನಡ ಸಾಹಿತ್ಯ ಚಳುವಳಿಗಳ ಪ್ರಭಾವವೇನೂ ಮಾಸಿರಲಿಲ್ಲ.

ಆದರೆ ೨೧ನೇ ಶತಮಾನದ ಹೊತ್ತಿಗೆ ಈ ಜಾಗತೀಕರಣದ ಸ್ವರೂಪ ನಿಚ್ಚಳವಾಗಿ ತುಂಬಿ ಕಾಣಿಸಿತು. ಯಾವ ಬಗೆಯ ಪ್ರತಿರೋಧಗಳು ಸಮಾಜದಲ್ಲಿ ಇರದಂತೆ ಎಚ್ಚರವಹಿಸಿತು. ವ್ಯಕ್ತಿ ಸ್ವಕೇಂದ್ರೀತವಾಗತೊಡಗಿದಂತೆ ಕಂಡಿತು. ಸಾಹಿತ್ಯದ ಮೂಲಕ ಚಿಂತಿಸುವ 'ಸಮಾಜಿಕ ನ್ಯಾಯ', 'ಜೀವಪರ', 'ಜನಪರ' ಅನ್ಯಾಯದ ವಿರುದ್ಧದ ದನಿ ಇವುಗಳು ಹೊಸ ತಲೆಮಾರಿನ ಬರಹಗಾರರಿಂದ ಮಾಯವಾಗತೊಡಗಿವೆ. ಆದರೂ ಈ ಕಾಲದ ಬಿಕ್ಕಟ್ಟುಗಳು ಬೇಕಾದಷ್ಟಿದ್ದು ಅವುಗಳನ್ನು ಕತೆಗಳಲ್ಲಿ ಅಭಿವ್ಯಕ್ತಿಸುವ ಕೆಲಸದಲ್ಲಿ ತೊಡಗಿದ್ದಾರೆ. ಹೊಸ ತಲೆಮಾರಿನ ಯುವಕ-ಯುವತಿಯರು ಮುಕ್ತವಾಗಿ ಬರೆಯುವ ಹಾದಿಯನ್ನು ಕಂಡುಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ೨೦೦೦ ದಿಂದ ೨೦೧೪ರ ಅವಧಿಯಲ್ಲಿ, ಕಾಣಿಸಿಕೊಂಡ ಕಥಾ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡುವ ಉದ್ದೇಶವಿದೆ. 'ಹೊಸ ಶತಮಾನ-ಹೊಸ ತಲೆಮಾರು' ಎಂಬ ಪರಿಕಲ್ಪನೆಯನ್ನು ಮೇಲಿನಂತೆ ವ್ಯಾಖ್ಯಾನಿಸಿಕೊಂಡು ಅಧ್ಯಯನ ಕೈಗೊಳ್ಳಲಾಗುವುದು. ಕಥಾಸಾಹಿತ್ಯವನ್ನು ಮಾತ್ರ ಕೇಂದ್ರೀಕರಿಸಲಾಗಿದೆ.

೫.೨. ಸುನಂದಾ ಪ್ರಕಾಶ ಕಡಮೆ

ಮಹಿಳೆ ಎಂದರೆ ಕುಟುಂಬ. ಇದರ ಪಾಲನೆಯ ಮುಖ್ಯ ಕಾರ್ಯ ಮಹಿಳೆಯದ್ದು. ಬಹುಪಾಲು ಮಹಿಳೆಯರನ್ನು ನೋಡುವ ಹಾಗೂ ಅದಕ್ಕನುಗುಣವಾಗಿ ರೂಪಿಸುವ ರಾಜಕಾರಣದ ಎಳೆಗಳು ಪಿತೃಪ್ರಧಾನ ಸಮಾಜದ ಬೇರುಗಳಾಗಿವೆ. 'ಕುಟುಂಬ ಎಂದರೆ ಗಂಡ-ಹೆಂಡತಿ ಲೈಂಗಿಕ ಬಯಕೆಯ ಪೂರೈಕೆಗಾಗಿ ಒಟ್ಟುಗೂಡಿದ ಸಾಮಾಜಿಕ ವ್ಯವಸ್ಥೆ' ಎಂದು ಸಮಾಜಶಾಸ್ತ್ರವು ವ್ಯಾಖ್ಯಾನಿಸುತ್ತದೆ. ಈ ಪರಿಕಲ್ಪನೆಯು ಇಷ್ಟೆ ಎಂದು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಹಾಗೆಯೇ ಕುಟುಂಬದ ನೆಲೆಯಲ್ಲಿಯೇ ಮಹಿಳೆಯನ್ನು ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ತನ್ನ ಸಂಸಾರದೊಳಗೂ ಒಂದು ಅಸ್ಮಿತೆ ಹಾಗೂ ಅವಳದ್ದೇ ಒಂದು ಲೋಕವಿದೆ. ಕುಟುಂಬದ ಹೊರಗೂ ಒಂದು ಅನುಭವಲೋಕವಿದೆ. ಈ ಹಿನ್ನೆಲೆಯಲ್ಲಿ ವಿವಿಧ ವಿನ್ಯಾಸದ ಕುಟುಂಬಗಳು ಸಮಾಜದಲ್ಲಿ ರೂಪುಗೊಂಡಿವೆ, ರೂಪುಗೊಳ್ಳುತ್ತಿವೆ.

ಕುಟುಂಬ, ಅದರ ವಿನ್ಯಾಸ, ಅದರಲ್ಲಿ ಮಹಿಳೆ, ಅವಳ ಅಸ್ಮಿತೆ ಹಾಗೂ ಕುಟುಂಬದಲ್ಲಿ ಮಹಿಳೆಯ ಲೋಕದೃಷ್ಟಿ 'ಮಹಿಳೆ' ಎಂದರೆ ಲಿಂಗಸಂಬಂಧಿ ನಿರ್ವಚನವೇ, ಸಾಮಾಜಿಕ ನೆಲೆಯ ನಿರ್ವಚನವೇ ಎಂಬ ಇತ್ಯಾದಿ ಆಲೋಚನೆಯನ್ನು ವಿಸ್ತರಿಸುವ ಹಾಗೂ ವಿಶ್ಲೇಷಿಸುವ, ಗುರುತಿಸುವ ಸಲುವಾಗಿ 'ಸುನಂದಾ ಪ್ರಕಾಶ ಕಡಮೆ' ಅವರ 'ಗಾಂಧಿ ಚಿತ್ರದ ನೋಟು',

'ಕಂಬಗಳ ಮರೆಯಲ್ಲಿ', 'ಪುಟ್ಟ ಪಾದದ ಗುರುತು' ಈ ಮೂರು ಕಥಾಸಂಕಲನಗಳ ಕೆಲವು ಕತೆಗಳನ್ನು ಬಳಸಿಕೊಳ್ಳಲಾಗಿದೆ. ಸುನಂದಾ ಅವರು ಮುಖ್ಯವಾಗಿ ಕುಟುಂಬದೊಳಗಿನ ಮಹಿಳೆಯ ಲೋಕವನ್ನೇ ನಿರೂಪಿಸುತ್ತಾರೆ. ಇಲ್ಲಿ ಮಹಿಳೆಯೇ ಕುಟುಂಬವನ್ನು ರೂಪಿಸುತ್ತಾಳೆ. ಅದರ ಚಲನೆಗೆ ಮಹಿಳೆಯನ್ನೇ ಸಾಕ್ಷೀಕರಿಸಿದ್ದಾರೆ. ಗಂಡ-ಹೆಂಡತಿ ಇಬ್ಬರೇ ರೂಪಿಸುವ ಕುಟುಂಬ, ಗಂಡ-ಹೆಂಡತಿ-ಮಕ್ಕಳು ಇರುವ ಕುಟುಂಬ, ಅತ್ತೆಯನ್ನು ಜೊತೆಗಿರಿಸಿಕೊಂಡಿರುವ ದಂಪತಿಯ ಕುಟುಂಬ, ತಂದೆ-ಮಗಳಿರುವ, ತಂದೆ-ಮಗನಿರುವ, ತಾಯಿ-ಮಕ್ಕಳಿರುವ ಕುಟುಂಬಗಳು, ಮಕ್ಕಳನ್ನು ಹೊಂದಿರುವ, ಮಕ್ಕಳು ಆಗಿರದ ಕುಟುಂಬ, ಸಂಪ್ರದಾಯಪ್ರಧಾನ ಕುಟುಂಬ, ಮಕ್ಕಳನ್ನು ದತ್ತು ಪಡೆದ ಕುಟುಂಬ, ಮಗವನ್ನು ಹೆತ್ತು ಬೇರೆಯವರಿಗೆ ಕೊಟ್ಟು ಊರು ಬಿಟ್ಟು ನಡೆಯುವ ಕುಟುಂಬ, ಶ್ರೀಮಂತಿಕೆಯ ಕುಟುಂಬ, ಬಡವರ ಕುಟುಂಬ ಹೀಗೆ ಅನೇಕ ವಿನ್ಯಾಸದ ಕುಟುಂಬಗಳೂ ಕಥೆಯಲ್ಲಿ ಕಂಡುಬರುತ್ತವೆ. ಪ್ರತಿಯೊಂದು ಕುಟುಂಬವು ಪರಿಪೂರ್ಣತೆಗೆ ಯತ್ನಿಸುತ್ತದೆ. ಕೊನೆಗೆ ಸಾಧ್ಯವಾಗದೆ ಯಥಾಸ್ಥಿತಿಯಲ್ಲಿಯೇ ಮುಂದುವರಿಯುತ್ತದೆ. ಕುಟುಂಬದೊಳಗೆ ಸಂಬಂಧಗಳೇ ಪ್ರಧಾನ. ಮಹಿಳೆ ಪಾಲನೆಯಲ್ಲಿ ತನ್ನ ಲೋಕವನ್ನು ಕಟ್ಟಿಕೊಳ್ಳುವುದನ್ನೇ ಕಾಣುತ್ತೇವೆ. ತಾಯಿಗಾಗಿ, ಮಗುವಿಗಾಗಿ, ಗಂಡನಿಗಾಗಿ, ತಂದೆಗಾಗಿ ಹುಡುಕುವ, ಒಳಗೊಳಗೆ ಕನಸು ಕಾಣುವ, ಮರುಗುವ ಮಹಿಳೆಯರೇ ಕಥೆಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ.

ಮಹಿಳೆಯು ಕುಟುಂಬದಲ್ಲಿ ತಾಯಿಯಾಗಿ, ಅತ್ತೆಯಾಗಿ, ಮಗಳಾಗಿ, ತಂಗಿಯಾಗಿ, ಹೆಂಡತಿಯಾಗಿ ವ್ಯವಸ್ಥೆಯ ಪಡಿಯಚ್ಚಿಗೆ ಅನುಗುಣವಾಗಿಯೇ ಬದುಕುವ ಜೀವವಾಗಿದೆ. ಈ ಮಹಿಳೆಯರು ಪುರುಷನ ಆಲೋಚನೆಗೆ ತಕ್ಕಂತೆ ನಡೆಯುತ್ತಾರೆ. ಸ್ವಲ್ಪ ಸಂಪ್ರದಾಯ ಮೌಲ್ಯದಿಂದ ಆಚೆಗೆ ಕಾಲಿಟ್ಟರೂ ಮಹಿಳೆಯನ್ನು ಕಿವಿ ಹಿಂಡಿ, ಶಿಕ್ಷಿಸಿ ತನ್ನ ಪರಿಧಿಯೊಳಗೆ ಇಟ್ಟುಕೊಳ್ಳಲು ಗಂಡನಾದವನು, ತಂದೆಯಾದವನು, ಅಣ್ಣನಾದವನು ಪ್ರಯತ್ನಿಸುವುದನ್ನು, ಅದರಲ್ಲಿ ಯಶಸ್ಸು ಕಾಣುವುದನ್ನು ಕಥೆಗಳಲ್ಲಿ ಕಾಣುತ್ತೇವೆ. ಆಧುನಿಕ ವಿದ್ಯಮಾನದ ಸುತ್ತ ಬದುಕುವ ಪ್ರತಿಯೊಂದು ಪಾತ್ರವೂ ಸಂಬಂಧಕ್ಕೆ ಮಹತ್ವ ನೀಡಿರುವುದನ್ನು ಕಾಣುತ್ತೇವೆ. ಹೊಂದಿಕೊಂಡು ಹೋಗುವ ವಿಶಾಲ ಮನೋಧರ್ಮ ಇವರ ಕಥೆಗಳಲ್ಲಿ ವ್ಯಕ್ತವಾಗಿರುವುದು ಸುನಂದಾ ಅವರ ಸಾಮಾಜಿಕ ಪ್ರಜ್ಞೆಯೇ ಆಗಿದೆ. ಕುಟುಂಬದ ವಿನ್ಯಾಸ ಹಾಗೂ ಮಹಿಳೆಯು ಈ ಕಥೆಯಲ್ಲಿ ಮೂಡಿಬಂದಿರುವುದನ್ನು ನೋಡೋಣ:

ಸುಭದ್ರಕ್ಕ ಕತೆಯಲ್ಲಿ ಕುಟುಂಬವು ಕೇವಲ ಗಂಡ-ಹೆಂಡತಿ, ಮಕ್ಕಳು, ತಾಯಿ-ತಂದೆಯ ನಡುವಿನ ಸಂಬಂಧ ಹಾಗೂ ಮನೆಯೊಳಗಿನ ವಿದ್ಯಮಾನಕ್ಕೆ ಸೀಮಿತವಾಗದೆ ಸುತ್ತಮುತ್ತಲಿನ ಪರಿಸರಕ್ಕೂ ಸಂಬಂಧಿಸಿದೆ. ಅದು ಕುಟುಂಬವನ್ನು ಕಟ್ಟಬಲ್ಲದು ಹಾಗೂ ಕೆಡಬಲ್ಲದು. ಹಳ್ಳಿಯಿಂದ ನಗರದಲ್ಲಿರುವ ಮಗ-ಸೊಸೆಯ ಮನೆಗೆ ಬಂದ ಸುಭದ್ರಕ್ಕನಿಗೆ

ನುಂಗಲಾರದ ತುತ್ತಾದುದು 'ಪಾಯಿಖಾನೆ.' ಕತೆಯಲ್ಲಿದೆ. ಪಾಯಿಖಾನೆಯಲ್ಲಿ ಮಾಡುವುದನ್ನು ಬಟ್ಟೆಯಲ್ಲಿ ಮಾಡಿಕೊಂಡಿದ್ದು, ತಾನು ಮಾಡಿದ್ದನ್ನು ತೊಳೆದು ಸ್ವಚ್ಛ ಮಾಡುತ್ತೇನೆಂದು ಕಣ್ಣು ಕಾಣದಿದ್ದರೂ ದಣಿದು ಶ್ರಮಿಸುವುದರ ಹಿಂದೆ ಸುಭದ್ರಕ್ಕನ ಅಸ್ತಿತ್ವದ ಪ್ರಶ್ನೆಯೂ ಇದೆ. ಮಗನ ಹೆಂಡತಿ ತುಂಬ ಶಿಸ್ತು ಹಾಗೂ ಸ್ವಚ್ಛವಾಗಿ ಬದುಕುವ ಸ್ವಭಾವದಳು. ಎಲ್ಲಾದರೂ ತನ್ನ ಸಂಬಂಧ ಕೆಡುವುದೋ ಎಂದು ಮಗ-ಸೊಸೆ ಸೇರಿ ತೊಳೆಯುತ್ತಾರೆ. ಆಕೆ ನೀರು ಹಾಕುತ್ತಾಳೆ, ಉಜ್ಜುತ್ತಾಳೆ, ತಿಕ್ಕುತ್ತಾಳೆ, ವಾಸನೆ ಬರಬಾರದೆಂದು ಶತಪ್ರಯತ್ನ ಮಾಡುವ ಸುಭದ್ರಕ್ಕನಿಗೆ ಕುಟುಂಬವನ್ನು ಇಡಿಯಾಗಿ ಉಳಿಸುವ ಹಂಬಲವಿದೆ. ಕೆಲಸ ಮುಗಿಸಿ ಬಂದ ಸೊಸೆ-ಮಗನ ಪರಿಸ್ಥಿತಿಯನ್ನು ಗಮನಿಸಿ ಗಂಡ-ಹೆಂಡತಿ ಇಬ್ಬರೂ ಒಂದೊಂದು ಕೆಲಸ ಮಾಡುವ ಮೂಲಕ ಮನೆಯನ್ನು ಸ್ವಚ್ಛ ಮಾಡುತ್ತಾರೆ. ಸುಭದ್ರಕ್ಕನ ಮನಸ್ಸಿನ ಗೊಂದಲ, ಇಕ್ಕಟ್ಟಿನ ಸ್ಥಿತಿಯನ್ನು ತಿಳಿಯಾಗಿಸುತ್ತಾರೆ.

'ಪತ್ರೊಡೆ' ಕತೆಯಲ್ಲಿ ಅತ್ತೆ ಹಾಗೂ ಸೊಸೆಯ ಕುಟುಂಬದೊಳಗಿನ ಬದುಕನ್ನು, ನೈಜ ಸಂಬಂಧದ ಎಳೆಗಳನ್ನು ನಿರೂಪಿಸಿರುವುದನ್ನು ಗುರುತಿಸಲಾಗಿದೆ. 'ಪತ್ರೊಡೆ' ಎಂಬ ತಿಂಡಿಯ ಸುತ್ತ ಇಬ್ಬರು ಮಹಿಳೆಯ ಲೋಕ ಚಿತ್ರಿತವಾಗಿದೆ. ಅತ್ತೆ-ಮಗ-ಸೊಸೆ ಇರುವ ಕುಟುಂಬದಲ್ಲಿ ಹೊರಜಗತ್ತಿನ ವ್ಯವಹಾರ ಪುರುಷನದ್ದಾದರೆ, ಮನೆಯೊಳಗಿನ ಯಜಮಾನಿಕೆ ಮಹಿಳೆಯದ್ದೆ. ಈ ಯಜಮಾನಿಕೆ ಹಾಗೂ ಅಧಿಕಾರದ ಮಾತು ಕಳೆದುಹೋಗುತ್ತಿದೆ ಎಂಬ ಅರಿವಿನಿಂದಲೇ ಯಮುನಜ್ಜಿ ತನ್ನ ಸವತಿಯ ಶ್ರಾದ್ಧದಂದು 'ಪತ್ರೊಡೆ' ಮಾಡಬೇಕೆಂದು ಹಿಡಿಯುವ ಹಟ, ಸೊಸೆಯ ತಿರಸ್ಕಾರ ಈ ತಿರಸ್ಕಾರದ ಹಿಂದೆ ಶಾಲಿನಿಗೆ ಶ್ರಾದ್ಧದ ಕೆಲಸದ ಒತ್ತಡ, ಶಾಲಿನಿ ಪತ್ರೊಡೆ ಮಾಡುವುದಿಲ್ಲ ಎಂದು ಹೇಳಿದ ಬಳಿಕ, ವಯಸ್ಸಾದ ಯಮುನಜ್ಜಿ ತನ್ನ ಅಸ್ತಿತ್ವವನ್ನು ತೋರಿಸುತ್ತೇನೆಂದು ದೇಹದಲ್ಲಿ ಕಸುವಿಲ್ಲದಿದ್ದರೂ 'ಈಗೀಗ ಬಂದು ಹೊಕ್ಕವರಿಗೆಲ್ಲ ಎಂಥ ಅಹಂಕಾರ ನೋಡು'(ಗಾಂಧೀಚಿತ್ರದ ನೋಟು, ಪು.೧೦) ಎಂದು ಸೊಸೆಯನ್ನು ಜರಿಯುತ್ತಾಳೆ. ಕೆಸುವನ ಪರಸಕ್ಕೆ ಹೋಗಿ ಎಲೆಯನ್ನು ಕಿತ್ತು ತಂದು ತೊಳೆದು ಪತ್ರೊಡೆಗೆ ಬೇಕಾದ ಪದಾರ್ಥಕ್ಕಾಗಿ ತಡಕಾಡುವ ಸೊಸೆಯನ್ನು ಬೈಯುವ ಮೂಲಕ ತನ್ನ ಸವತಿಯಾಗಿದ್ದ ಗಂಗಜ್ಜಿಯನ್ನು ಗುಣಗಾನ ಮಾಡುವ ಮೂಲಕ ಯಮುನಜ್ಜಿಯ ಪತ್ರೊಡೆಯ ಮೇಲಿನ ಆಸೆಯು, ವಯಸ್ಸಾದ ಅಜ್ಜಿಯರ ಸ್ವಭಾವು ಕಥೆಯ ಉದ್ದಕ್ಕೂ ಜೀವಂತವಾಗಿ ಕಂಡುಬರುತ್ತದೆ. ಶಾಲಿನಿ ತನ್ನ ಕೆಲಸ ಮುಗಿದ ಮೇಲೆ ಅತ್ತೆ ಬೈದ ಮಾತುಗಳನ್ನೆಲ್ಲ ಬಿಟ್ಟುಹಾಕಿ ಪತ್ರೊಡೆ ಮಾಡಿ ಪ್ಲೇಟಿನಲ್ಲಿ ಹಾಕಿಕೊಟ್ಟಾಗ ಯಮುನಜ್ಜಿ ಸೊಸೆಯನ್ನು ಹೊಗಳಿ, ಪತ್ರೊಡೆಯ ಸವಿಯನ್ನು ಸವಿಯುವಾಗ ಹಿಂದಿನ ಸಿಟ್ಟು ಸೆಡವು ಯಾವುದೂ ಇರಲಿಲ್ಲ. ಇದೇ ಕಥೆ ಅತ್ತೆ-ಸೊಸೆಯ ಕುಟುಂಬದೊಳಗಿನ ಸಂಬಂಧ, ತಮ್ಮ-ತಮ್ಮ ಅಸ್ತಿತ್ವದ ಪ್ರಶ್ನೆ, ಕೈಯಲ್ಲಿ ಬಲವಿಲ್ಲದಿದ್ದರೂ

ಕೆಲಸ ಮಾಡಬೇಕೆಂಬ ಛಲ, ವ್ಯಂಗ್ಯಮಾತಿನಲ್ಲಿ ಮೂಡುವ ಪ್ರೀತಿ, ಇವುಗಳಿಂದಾಚೆಗೆ ಹೊಂದಿಕೊಂಡು ಹೋಗುವ ಕೌಟುಂಬಿಕ ಸಂಬಂಧದ ಬಲವಾದ ಬೇರು ಈ ಕತೆಯಲ್ಲಿದೆ.

'ನಿನ್ನದೊಂದು ನೋಟ ಬೇಕು' ಕತೆಯು ಹೆಣ್ಣಿಗೆ ಕುಟುಂಬದಲ್ಲಿ ಉಂಟಾಗುವ ಸಂದಿಗ್ಧತೆಯಿದೆ. ತಾನು ಕಳೆದುಕೊಂಡ ತಾಯಿಯನ್ನು ನೋಡುವ ಬಯಕೆಗೆ ಉಂಟಾಗುವ ಪ್ರತಿರೋಧ, ತನ್ನ ತಂದೆ ಮೇಲೆ ಉಂಟಾಗುವ ರೋಷ, ಚಿಕ್ಕಮ್ಮನ ಅಧಿಕಾರ ಇತ್ಯಾದಿ ಕೌಟುಂಬಿಕ ವ್ಯವಸ್ಥೆಯ ರಾಜಕೀಯವನ್ನು ಚಿತ್ರಿಸುತ್ತದೆ. ಈರಾಚಾರಿಯು ತನ್ನ ಮೊದಲ ಹೆಂಡತಿಯನ್ನು ಬಿಟ್ಟು ನಾಲ್ಕು ವರ್ಷದ ಚಂದ್ರಿಕಳನ್ನು ನೋಡಿಕೊಳ್ಳಲು ಯಾರೂ ಇಲ್ಲ ಎಂಬ ಕಾರಣಕ್ಕಾಗಿ ಕಸ್ತೂರಿ ಟೀಚರ್ ಎಂಬುವವಳನ್ನು ಲಗ್ನವಾಗಿ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಈರಾಚಾರಿ ತನ್ನ ಮಗಳಿಗೆ ನಿನ್ನ ಹೆತ್ತಮ್ಮ ಸತ್ತಿದ್ದಾಳೆ, ನೀನು ಇವಳನ್ನೆ(ಅಂದರೆ ಕಸ್ತೂರಿ ಟೀಚರ್) ಅಮ್ಮ ಎಂದು ಕರಿ ಎನ್ನುವುದು ಪುರುಷಪ್ರಧಾನ ಕುಟುಂಬದ ನಿಲುವುಗಳನ್ನು ಸೂಚಿಸುತ್ತದೆ. ಮುಖ್ಯವಾಗಿ ಕಸ್ತೂರಿ ಟೀಚರ್ ತಾನು ಕಟ್ಟಿಕೊಂಡ ಕುಟುಂಬದಲ್ಲಿ ಯಾರಿಗೂ ಲೋಪವಾಗಬಾರದೆಂದು ಯೋಚಿಸುತ್ತಾಳೆ. ಚಂದ್ರಿಕೆಗೆ ತನ್ನ ತಾಯಿಯ ನೆನಪು ಬಾರದಂತೆ ಎಚ್ಚರ ವಹಿಸಿ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿ ಕೊನೆಗೆ ತಾನೇ ಸೋಲುತ್ತಾಳೆ. ತಾಯಿಗಾಗಿ ಹಂಬಲಿಸುವ ಮಗುವಿಗೆ ತಾಯಿಯನ್ನು ತೋರಿಸುವುದು ನನ್ನ ಧರ್ಮವೆಂದು ಭಾವಿಸಿ, ಚಂದ್ರಿಕಳನ್ನು ಅತ್ತೆಮನೆಗೆಂದು ಕರೆದುಕೊಂಡು ಬಂದು ಶಾಲೆಯ ಕ್ರಾಸಿನಲ್ಲಿ ನಿಲ್ಲಿಸುತ್ತಾಳೆ, ಮಕ್ಕಳನ್ನು ಸ್ಕೂಲಿನಿಂದ ಕರೆದುಕೊಂಡು ಹೋಗುತ್ತಿರುವಾಗ 'ಹಾ... ಅದೋ... ಅಲ್ಲಿ... ಹಿಂದೆ... ಹಳದಿಸೀರೆ ಹಳದೀಸೀರೆ' ಎಂದು ಗೋಣು ಮಾತ್ರ ಎತ್ತಿ ತೋರಿಸುವ ಮೂಲಕ ಮಗುವಿನ ಹಸಿವನ್ನು ಅರ್ಥ ಮಾಡಿಕೊಂಡ ಹೆಣ್ಣಿನಂತೆ ಕಾಣುತ್ತಾಳೆ. ಇಲ್ಲಿ ಇಬ್ಬರು ಸ್ತ್ರೀಯರಿಗೂ ತನ್ನ ಕುಟುಂಬವನ್ನು ಕಟ್ಟಿಕೊಳ್ಳಬೇಕೆಂಬ ಬಲವಾದ ಆಸೆ ಇರುವುದನ್ನು ಕಾಣಬಹುದು. ಅದಕ್ಕಾಗಿ ಅವರ ಹೋರಾಟವನ್ನು ಗುರುತಿಸಬಹುದು.

'ನನ್ನ ಪೊರೆವ ತೊಟ್ಟಿಲು' ಕತೆಯಲ್ಲಿ ಹೆಣ್ಣುಮಗಳೊಬ್ಬಳು ಬಡತನದಲ್ಲೂ ತನ್ನ ಕುಟುಂಬವನ್ನು ಆರೋಗ್ಯಪೂರ್ಣವಾಗಿ ಕಟ್ಟಿಕೊಳ್ಳುವ, ದುಡಿಮೆಯ ಮೂಲಕ ಸಬಲಳಾಗಿ, ಕುಟುಂಬವನ್ನು ನಿಭಾಯಿಸುವುದನ್ನು ಕಾಣುತ್ತೇವೆ. ಸೂಜಿ ತಾಯಿಯನ್ನು ಕಳೆದುಕೊಂಡು ಸಾವಂತ್ರಜ್ಜಿಯ ಆರೈಕೆಯಲ್ಲಿ ಬೆಳೆದವಳು. ತಂದೆ ಕುಡುಕ ಹಾಗೂ ಬೇಜವಾಬ್ದಾರಿ ಮನುಷ್ಯನಾಗಿದ್ದರಿಂದ ಕುಟುಂಬದ ಹೊಣೆಯನ್ನು ತಾನೇ ಹೊತ್ತು, ತನ್ನದೇ ಆದ ಬದುಕನ್ನು ಕಟ್ಟಿಕೊಂಡರೂ ತನ್ನ ತಾಯಿಯ ಗೈರು ಅವಳ ನೆನಪಿಗೆ ಸುಳಿಯುತ್ತದೆ. ತಂದೆ ತಾಯಿಯೆಂದು ಭಾವಿಸಿ, ಅವಳಿಗೆ ತನ್ನ ಮನಸ್ಸನ್ನು ಶರಣಾಗಿಸಿ ತಾಯಿಯನ್ನು ಕಾಣಳು ಬಯಸುತ್ತಾಳೆ. ಕುಟುಂಬವನ್ನು ನಡೆಸುವ ಶಕ್ತಿಯನ್ನು ಪಡೆದರೂ ಸೂಜಿಗೆ ತನ್ನ ತಾಯಿಯ ಕೊರತೆ ಎದ್ದು ಕಾಣುತ್ತದೆ. ಕಥೆಯು ಆರ್ಥಿಕ ಸಂಬಂಧ ಹಾಗೂ ಮನುಷ್ಯ ಸಂಬಂಧವನ್ನು ಪಡೆಯಲು

ಹಂಬಲಿಸುವ ಮತ್ತು ಶ್ರಮಿಸುವ ಹೆಣ್ಣಿನ ಲೋಕವನ್ನು ಗುರುತಿಸುತ್ತದೆ. ಇಲ್ಲಿ ಮಹಿಳೆಯರೇ ತಮ್ಮ ಸ್ವಾವಲಂಬನೆಯಿಂದ ಬದುಕನ್ನು ಕಟ್ಟಿದವರು, ಕುಟುಂಬವನ್ನು ನಿರ್ವಹಿಸಿದವರು. ಸಾವಂತ್ರಜ್ಜಿಯು ಗಂಡಸಿನಂತೆ ದುಡಿದು ತನ್ನ ಬದುಕನ್ನು ಹಾಗೂ ಸೂಜಿ ಬದುಕನ್ನು ನಿಭಾಯಿಸಿದವಳು. ಇಲ್ಲಿ ಗಂಡಸಿನ ಆಶ್ರಯ ಹಾಗೂ ಆರ್ಥಿಕ ಸಹಾಯವಿಲ್ಲದೆ ಬದುಕು ಕಾಣುವ ಮಹಿಳೆಯರ ಅನುಭವಲೋಕವನ್ನು ಗುರುತಿಸಬಹುದಾಗಿದೆ.

'ಕುಡಿಕಟ್ಟಿದ ದೀಪ' ಕತೆಯಲ್ಲಿ ಎರಡು ಕುಟುಂಬಗಳನ್ನು ಮುಖಾಮುಖಿಯಾಗಿಸಿ ಅಲ್ಲಿನ ಹೆಣ್ಣಿನ ಕೌಟುಂಬಿಕ ಲೋಕವನ್ನು ಹಾಗೂ ವಿವಾಹ ಸಂಬಂಧವನ್ನು ರೂಪಿಸುವ ರಾಜಕೀಯ, ಅದರಿಂದ ಹೆಣ್ಣಿಗುಂಟಾಗುವ ಮಾನಸಿಕ ವೇದನೆಗಳನ್ನು ಕಾಣಬಹುದು. ಗಂಡ ದಿವಾಕರನನ್ನು ಕಳೆದುಕೊಂಡ ಸುರೇಖಳ ಕುಟುಂಬ, ದಿವಾಕರನ ತಮ್ಮ ವಿನೋದ ಹಾಗೂ ಅವನ ತಂದೆಯ ಇನ್ನೊಂದು ಕುಟುಂಬವಿದೆ. ಈ ಎರಡು ಕುಟುಂಬಗಳ ನಡುವೆ ವೈವಾಹಿಕ ಸಂಬಂಧವಿದೆ. ಮಗ ಮರಣ ಹೊಂದಿದ ನಂತರ ಆಸ್ತಿಯನ್ನು ತನ್ನ ಸೊಸೆಗೆ ನೀಡಿದರೆ ಇದರಿಂದ ತನ್ನ ಆಸ್ತಿ ಬೇರೆಯವರ ಪಾಲಾಗುತ್ತದೆ ಎಂದು ಸುರೇಖಾಳ ಮಾವ ಆತಂಕ ಪಡುತ್ತಾನೆ. ಎಂದು "ಗಂಡನ ನೆನಪನ್ನು ಬಿಟ್ಟು ಮನಸ್ಸು ಮಾರಿಕೊಳ್ಳುವುದು ಆಟವೇ" (ಕಂಬಗಳ ಮರೆಯಲ್ಲಿ, ಪು.೩೮) ಎನ್ನುವ ಸ್ಥಿತಿಯಲ್ಲಿ ಸುರೇಖ ಇರುತ್ತಾಳೆ. ಸುರೇಖಳಿಗೆ ಪಿತೃಪ್ರಧಾನ ಕುಟುಂಬದ ಆಸ್ತಿಯ ಆಸೆಯಲ್ಲಿರುವ ಮಾವನ ಬಲೆಯಿಂದ ತಪ್ಪಿಸಿಕೊಳ್ಳುವುದು ಸಂಕಟವಾದರೂ ಕೊನೆಗೆ ತಂದೆಯಿಂದ ಈ ವಿವಾಹದ ಹಿಂದಿನ ರಾಜಕೀಯ ತಿಳಿಯುತ್ತಾಳೆ. ವಿನೋದನ ಮನಸ್ಸಿನಲ್ಲಿ ಈ ವಿವಾಹಕ್ಕೆ ಒಪ್ಪಿಗೆ ಇಲ್ಲ ಎಂಬುದನ್ನು ಕೇಳಿದಾಗ, ನಿರಾಶಳಾದ ಸುರೇಖ ತನ್ನ ಬದುಕಿನಲ್ಲಿ ಜಾರಿದಳು. ಇಲ್ಲಿ ಮುಖ್ಯವಾಗಿ ವಿವಾಹದ ಹಿಂದಿನ ರಾಜಕೀಯ ಆಸ್ತಿಯ ಆಸೆಯ ನಡುವೆ ಹೆಣ್ಣಿನ ಮನಸ್ಸನ್ನು ಕಡೆಗಣಿಸುವ, ಸಂಬಂಧವನ್ನು ರೂಪಿಸುವ ಕೆಲಸವನ್ನು ಮಾಡುವ ಕುಟುಂಬಗಳಲ್ಲಿ ಹೆಣ್ಣಿನ ಲೋಕವನ್ನು ಚಿತ್ರಿಸಿದೆ.

'ನಡುಹಗಲಿನ ಮೌನ' ಕತೆಯಲ್ಲಿ ಎರಡು ಕುಟುಂಬಗಳ ಒಂದೊಂದು ಸಮಸ್ಯೆಯನ್ನು ಕೊಡುಕೊಳ್ಳುವಿಕೆಯ ಮೂಲಕ ಪೂರೈಕೆ ಮಾಡಿಕೊಳ್ಳುವ, ಈ ಪೂರೈಕೆಯ ಸಂದರ್ಭದಲ್ಲಿ ಬಡಕುಟುಂಬವು ಅನುಭವಿಸಿದ ತಲ್ಲಣವನ್ನು, ಮಾನಸಿಕ ವಿಕಲತೆಯನ್ನು ಕಾಣಬಹುದು.

ಆಧುನಿಕತೆಯ ಆಲೋಚನೆಯನ್ನು ಅಳವಡಿಸಿಕೊಂಡು ಬದುಕುತ್ತಿರುವ ಶ್ರೀಮಂತ ಕುಟುಂಬ ಆಶಾತಾಯಿ ಹಾಗೂ ಕಲ್ಯಾಣಪುಕರ್‌ದು. ಈ ಕುಟುಂಬ ಎಲ್ಲ ಸೌಲಭ್ಯವನ್ನು ಹೊಂದಿದ ಹಣವಂತ ಕುಟುಂಬ. ಆದರೆ ಮಕ್ಕಳನ್ನು ಪಡೆಯುವ ಶಕ್ತಿ ಅವರಲ್ಲಿ ಇರಲಿಲ್ಲ. ಇಲ್ಲಿನ ಇನ್ನೊಂದು ಕುಟುಂಬ ಮೂಲ ಊರನ್ನು ಬಿಟ್ಟು ಬಂದು ಬೇರೆ ಊರಿನಲ್ಲಿ ಕೆಲಸಕ್ಕೆ

ಬಂದು ಕಲ್ಯಾಣಪುಕರ್‌ರ ಮನೆ ಮುಂದೆ ಟೆಂಟಿನಲ್ಲಿ ಬದುಕುತ್ತಿರುವ ಶಿನಪ್ಪ–ನೀಲಮ್ಮನವರದು. ಇವರಿಗೆ ಶ್ರೀಮಂತಿಕೆ ಇಲ್ಲದಿದ್ದರೂ ದುಡಿಮೆ, ಊಟ, ಮಕ್ಕಳು ನೆಮ್ಮದಿಯ ಕಾಣುತ್ತೇವೆ.

ಈ ಎರಡು ಕುಟುಂಬಗಳು ಪರಸ್ಪರ ಪರಿಚಯವಾದ ಮೇಲೆ ಆಶಾತಾಯಿ ನೀಲಮ್ಮನಿಂದ ಮಗುವನ್ನು ಪಡೆಯುತ್ತಾಳೆ. ಆ ಮಗು ಭ್ರೂಣಕಸಿ ಮಾಡಿದ ಮಗು. ನೀಲಮ್ಮ ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತು, ಮೂರು ತಿಂಗಳು ಮೊಲೆಹಾಲು ಉಣಿಸಿದರೆ ಸಾಕು, ನೀಲಮ್ಮ ಮಗುವನ್ನು ಹೆತ್ತು ಕೊಡುವ ಸಾಧನ ಎಂಬ ಧೋರಣೆಗೆ ಬಂದ ಶ್ರೀಮಂತ ಕುಟುಂಬ ಬರುತ್ತದೆ. ನೀಲಮ್ಮನಿಗೆ ಹಣ ಕೊಟ್ಟು ಸಹಿ ಮಾಡಿಸಿಕೊಂಡು, ಭ್ರೂಣಕಸಿ ಇತ್ಯಾದಿ ವೈದ್ಯಕೀಯ ಕಾರ್ಯ ಮಾಡಿ ಮುಗಿಸಿದ ನಂತರ ನೀಲಮ್ಮನನ್ನು ಕಾಳಜಿಯಿಂದ ಆಶಾತಾಯಿ ಅವರ ಮನೆಯಲ್ಲಿ ನೋಡಿಕೊಳ್ಳುತ್ತಾಳೆ.

ನೀಲಮ್ಮ ತನ್ನ ಭೂಮಿಯನ್ನು ಉಳಿಸಿಕೊಳ್ಳಲು ಹಣ ಪಡೆದು ಸಹಿ ಮಾಡಿರುತ್ತಾಳೆ. ಆದರೆ ಇದು ಗಂಡ ಶೀನಪ್ಪನಿಗೆ ತಿಳಿದಿರುವುದಿಲ್ಲ. ಗಂಡುಮಗುವನ್ನು ಹೆತ್ತ ಮೇಲೆ ಮಗುವಿನ ಮೇಲಿನ ಅಧಿಕಾರ ಆಶಾತಾಯಿಯ ಕಡೆಗಾಗುತ್ತದೆ. ನೀಲಮ್ಮನನ್ನು ಕಾಲಿನ ಕಸದಂತೆ ಕಾಣಲಾರಂಬಿಸುತ್ತಾಳೆ. ನೀಲಮ್ಮ ಮತ್ತು ಶೀನಪ್ಪನ ನಡುವೆ ವೈಮನಸ್ಸು ರೂಪುಗೊಳ್ಳುತ್ತ ಹೆಂಡತಿಯ ಮೇಲೆ ಅನುಮಾನ, ಬೈಗಳು, ಶ್ರೀಮಂತರ ಮೇಲೆ ದ್ವೇಷ ಕಾರುತ್ತಾನೆ. ಬಡವನ ಸಿಟ್ಟು ದವಡೆಗೆ ಮೂಲವೆಂಬಂತೆ ಯಾವುದೇ ಪರಿಣಾಮ ಬೀರುವುದಿಲ್ಲ. ಶೀನಪ್ಪ ಮಾನಸಿಕ ಸ್ಥಿರತೆಯನ್ನು ಕಳೆದುಕೊಳ್ಳುತ್ತಾನೆ. ನೀಲಮ್ಮ ಗಂಡನಿಗೆ ಭ್ರೂಣಕಸಿ ಇತ್ಯಾದಿಯನ್ನು ವಿವರಿಸಲು ಹೆಣಗುತ್ತಾಳೆ, ಮಗುವನ್ನು ಹೆತ್ತ ತಾಯಿತನದ ಅರಿವಿಲ್ಲದೆ ಹಣದಿಂದಲೇ ಎಲ್ಲವನ್ನು ಪಡೆದ ಆಶಾತಾಯಿ ಧೋರಣೆ ನೀಲಮ್ಮಳನ್ನು ಮನೆಯಿಂದ ಹೊರಹಾಕಿಸುವ ಮನಸ್ಥಿತಿ, ನಗರ ಬದುಕಿನ ಕೌಟುಂಬಿಕ ಎಳೆಗಳನ್ನು ಬಿಚ್ಚಿಡುತ್ತದೆ.

'ಪೇಟೆ ಬಂಧನದೊಳಗೆ' ಕತೆಯಲ್ಲಿ ಹೂ ಮಾರಿಕೊಂಡು ಬದುಕುವ ನೀಲಮ್ಮನ ವ್ಯಾಪಾರ ಚತುರತೆ, ಹೂವಿನ ಬಗೆಗಿನ ಜ್ಞಾನ, ಶ್ರಮಜೀವನ, ಅದು ಕಾಣದಂತೆ ಕೈಚಳಕದಲ್ಲೇ ಎಲ್ಲರನ್ನು ಆಕರ್ಷಿಸುವ ಕೆಲಸ ಮಾಡುತ್ತದೆ. ಇಡೀ ತನ್ನ ಸುತ್ತಮುತ್ತಲಿನ ಅಂಗಡಿಗಳಿಗಿಂತಲೂ ಅವಳಿಂದ ಕೊಂಡ ಹೂವಿನ ಮಾಲೆಯ ಅಲಂಕಾರವನ್ನು ಎಲ್ಲರೂ ಕಾಣುವರು. ಹೀಗೆ ವ್ಯಾಪಾರದ ವಿಸ್ತಾರವನ್ನು ರೂಪಿಸಿಕೊಂಡು ಒಂದು ನೆಲೆಯನ್ನು ಕಂಡ ನೀಲಮ್ಮನಿಗೆ ತನ್ನ ತಮ್ಮನನ್ನು ಓದಿಸಿ ದೊಡ್ಡವನನ್ನಾಗಿ ಬೆಳೆಸಬೇಕೆಂಬ ಹಂಬಲದಿಂದ ಸ್ಕೂಲಿಗೆ ಸೇರಿಸಿ ಹಿಟ್ಟು ಬಟ್ಟೆ ಒದಗಿಸುವಳು. ಇವಳ ಹೂವಿನ ವ್ಯಾಪಾರಕ್ಕೆ ತಮ್ಮ ಬಸ್ಯಾನ ಅಳಿಲುಸೇವೆ ಇರುವುದು ಯಾರ ಕಣ್ಣಿಗೂ ಕಾಣದೆ ನಡೆಯುತ್ತದೆ.

ಹೀಗೆ ಬದುಕು ಕಟ್ಟಿಕೊಂಡ ನೀಲಮ್ಮನಿಗೆ ಎದುರಾಗಿದ್ದು ಬೀರಣ್ಣನ ಆರೋಪ. 'ಸೇಟ್‌ಜೀ, ಮರಣ ಹೊಂದಿದಾಗ ಅವರ ಹೆಣದ ಮೇಲೆ ಹಾಕಲು ಹೂವಿನ ಹಾರವನ್ನು

ಸಾಮಾನ್ಯವಾಗಿ ಎಲ್ಲಾ ವ್ಯಾಪಾರಿಗಳು ನೀಲಮ್ಮನಿಂದಲೇ ಕೊಂಡು ಹೋಗಿ ಹಾರ ಹಾಕಿ ಗೌರವ ಸೂಚಿಸಿದರು. ಹಾಗೆ ಗೌರವ ಸೂಚಿಸಿದವರಲ್ಲಿ ಬೀರಪ್ಪನೂ ಒಬ್ಬ. ಹೆಣವನ್ನು ದಫನ್ ಮಾಡುವಾಗ ಹೂವಿನ ಮಾಲೆಯನ್ನು ಮರದ ಬುಡಕ್ಕೆ ಹಾಕಿ ಮುಂದಿನ ಕಾರ್ಯ ಮಾಡಿದರು. ಆ ಹೂವಿನ ಹಾರವನ್ನು ಬಸ್ಯಾ ಹಾಗೂ ಸ್ನೇಹಿತರು ಎತ್ತಿಕೊಂಡು ಓಡಿದುದನ್ನು ಬೀರಣ್ಣ ಗಮನಿಸಿದ್ದ. ಮರುದಿನ ಅದೇ ಹೂ ನೀಲಮ್ಮಳ ಅಂಗಡಿಯಲ್ಲಿ ಸುಂದರವಾಗಿ ಜೋತುಬಿದ್ದದ್ದನ್ನು ಕಂಡು, ನೀಲಮ್ಮಳ ವ್ಯಾಪಾರವನ್ನು ದಂಧೆ ಎಂದು ಕರೆದು ಬಸ್ಯಾನಿಗೆ ನಾಲ್ಕು ಏಟು ಹಾಕಿ ಸಿಡಿಮಿಡಿಗೊಂಡ ಬೀರಣ್ಣ.

ಈ ಕತೆಯು ಮಹಿಳೆಯ ವ್ಯಾಪಾರ ಚತುರತೆ, ಹೂವಿಗೆ ಮೈಲಿಗೆ ಎಂಬುದಿಲ್ಲವೆಂದು ಭಾವಿಸಿ ತನ್ನ ಬದುಕನ್ನು ಕಟ್ಟಿಕೊಳ್ಳುವ ಉದ್ದೇಶದಿಂದ ಶವದ ಮೇಲೆ ಹಾಕಿ, ಬಿಸಾಕಿದ ಹೂವನ್ನು ತಂದು ಪುನಃ ಮಾರಾಟ ಮಾಡುವ ನೀಲಮ್ಮನಿಗೆ ತಾನು ಮಾಡುತ್ತಿರುವುದು ದಂಧೆ ಎನಿಸಿಲ್ಲ ಎಂಬುದನ್ನು ತಿಳಿಸುತ್ತದೆ. ಬೀರಣ್ಣನನ್ನು ಬಿಟ್ಟು ಉಳಿದ ಅಂಗಡಿಯ ವ್ಯಾಪಾರಿಗಳಿಗೆ ಹೂ ಮೈಲಿಗೆ ಎನಿಸಿಲ್ಲ. ವ್ಯಾಪಾರದಲ್ಲಿ ಎದುರಾಗುವ ಸಮಸ್ಯೆ, ಅವುಗಳನ್ನು ಸಮರ್ಥಿಸುವ ನೀಲಮ್ಮನ ಮನಸ್ಸು ಹಾಗೂ ಬದುಕಿನ ಹೋರಾಟ ಇತ್ಯಾದಿಗಳನ್ನು ಈ ಕತೆಯಲ್ಲಿ ಗುರುತಿಸಬಹುದು.

'ಕಿಚನ್ ಪ್ಯಾರಡೈಸ್' ಕತೆಯಲ್ಲಿ ಮಕ್ಕಳನ್ನು ಪಡೆಯದ ಕುಟುಂಬ, ದತ್ತುಮಕ್ಕಳಿಗೆ ಹಂಬಲಿಸಿ ಕೊನೆಗೆ ವಿಫಲವಾದಾಗ, ನೆರೆಯ ಮಕ್ಕಳನ್ನು ತನ್ನ ಮಕ್ಕಳೆಂದು ಭಾವಿಸಿ ಆಟವಾಡಿಸಿ, ಉಣಿಸಿ, ಕುಣಿಸಿ ಕುಟುಂಬವನ್ನು ನಡೆಸುವುದನ್ನು ಕಾಣಬಹುದು. ವೀಣಾ ಹಾಗೂ ಶಿವರಾಮ ದಂಪತಿಗಳಿಗೆ ಲಗ್ನವಾಗಿ ಹಲವು ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಮಕ್ಕಳಿಲ್ಲದ ಕೊರಗಿನಲ್ಲಿಯೇ ಬದುಕು ಸಾಗಿಸುತ್ತಿದ್ದ ವೀಣಾಗೆ ತನ್ನ ತಂಗಿ ರೇಖಾ ಒಂದು ಮಗುವನ್ನು ಹೆತ್ತು ಕೊಡುತ್ತೇನೆಂದು ಭರವಸೆ ನೀಡಿದ ಮೇಲೆ, ತಂಗಿಯ ಆರೈಕೆಗೆ ವೀಣಾ ಶಿವರಾಮ ಇಬ್ಬರೂ ನಿಂತರು. ಮಗು ಹುಟ್ಟಿದ ಮೇಲೆ ಎಲ್ಲರ ಬಾಯಿಯಲ್ಲೂ ವೀಣಾ–ಶಿವರಾಮನ ಮಗು ಎಂಬುದೇ ಆಗಿತ್ತು ಆದರೆ ರೇಖಾಳ ಗಂಡ ತನ್ನ ಮಗುವನ್ನು ದತ್ತು ನೀಡುವ ವಿಚಾರ ತಿಳಿದು ಸಿಡಿಮಿಡಿಗೊಂಡ. ಮಗು ನನಗೆ ಬೇಕು ಎಂದನಲ್ಲದೆ ರೇಖಾಳಿಗೆ ತನ್ನ ಅಕ್ಕನಿಗೆ ದತ್ತು ನೀಡಬಾರದೆಂದು ಆಜ್ಞಾಪಿಸಿದ. ಈ ಸನ್ನಿವೇಶವನ್ನು ಅರಿತ ವೀಣಾ ದಂಪತಿಗಳು ತಂಗಿಯ ಮನೆಯಿಂದ ವಾಪಸ್ಸಾಗಿ ಅಕ್ಕಪಕ್ಕದ ಮಕ್ಕಳಾದ ಚಿಂಟೂ, ಪಿಂಕಿ, ಆನು, ಸೋನುಗಳ ಜೊತೆಯಲ್ಲಿ ಕಾಲ ಕಳೆಯಹತ್ತಿದರು. ವೀಣಾಳ ತಂಗಿ ರೇಖಾಗೆ ಮಗುವನ್ನು ಹೆತ್ತು ಕೊಡುತ್ತಾಳೆ ಎಂದಾಗ ಇದ್ದ ಉತ್ಸಾಹ ಇಂದಿಗೂ ಆನು, ಸೋನು ಪಿಂಕಿಯರ ಆಟ–ಓಟ ಮಾತುಕತೆಯಲ್ಲಿದೆ. ರೇಖಾ ಗಂಡನ ಮಾತಿಗೆ ಒಪ್ಪಿ ಮಗುವನ್ನು ಕೊಡಲಾಗುವುದಿಲ್ಲ ಎಂದಾಗ ವೀಣಾ–ಶಿವರಾಮ ಯಾವ ಪ್ರತಿರೋಧವನ್ನೂ ಮಾಡುವುದಿಲ್ಲ.

ಒಪ್ಪಿಕೊಂಡ ರೇಖಾಳ ಸಂಕಟ ಹಾಗೂ ಇಕ್ಕಟ್ಟನ್ನು ಅರಿತು ವಾಪಸ್ಸಾಗುತ್ತಾರೆ. ಇಲ್ಲಿ ಒಪ್ಪಂದ ಸಂಬಂಧದೊಳಗೆ ಮಾತಿನಲ್ಲಿ ನಡೆದಿರುತ್ತದೆ. ಇದು ಯಾವುದೇ ಹೆಚ್ಚು ಪರಿಣಾಮವನ್ನು ಉಂಟುಮಾಡುವುದಿಲ್ಲ. ಇದೇ ರೀತಿಯಲ್ಲಿ 'ನಾಡುಹಗಲಿನ ಮೌನ' ಕತೆಯಲ್ಲಿ ನೀಲಮ್ಮ ಮಗುವನ್ನು ಹೆತ್ತುಕೊಡುತ್ತೇನೆ ಎಂದು ಒಪ್ಪಿಕೊಂಡು ಆಶಾತಾಯಿ ಕುಟುಂಬದಿಂದ ಹಣ ಪಡೆದು ಸಹಿ ಮಾಡಿಕೊಟ್ಟಿದ್ದು ನೀಲಮ್ಮನ ಗಂಡನಿಗೆ ತಿಳಿಯದೇ ಮಗುವನ್ನು ಹೆತ್ತಾಗ ನೀಲಮ್ಮ ಗಂಡ ಶೀನಪ್ಪ ಮಗು ಬೇಕೆಂದು ಪಟ್ಟು ಹಿಡಿದು ಹೆಂಡತಿಯನ್ನು ಬೈದು ಹೊಡೆದು ಅವಮಾನಿಸಿದರು. ಅವಳಿಗೆ ಮಗುವನ್ನು ತನ್ನಲ್ಲಿ ಇಟ್ಟುಕೊಳ್ಳಲಾಗಲಿಲ್ಲ. ಮಗು ಮತ್ತು ಹೆತ್ತ ತಾಯಿ ಬಗ್ಗೆ ದತ್ತು ಪಡೆದವರು ತೋರುವ ಕ್ರೂರವಾದ ಧೋರಣೆಗೆ ಕಾರಣ ನೀಲಮ್ಮ ಆಶಾತಾಯಿ ಕುಟುಂಬದ ಸಂಬಂಧಿಯಲ್ಲದಿರುವುದು. ಆದರೆ ವೀಣಾ-ಶಿವರಾಮ ಸಂಬಂಧಿಯಾದ್ದರಿಂದ ಏನನ್ನೂ ಹೇಳದೆ ಹಿಂದಿನ ಬದುಕಿಗೆ ಬರುತ್ತಾರೆ.

ವೀಣಾ ತಾನು ಹೆತ್ತ ಮಕ್ಕಳಿಲ್ಲದಿದ್ದರೂ ಆಂಟಿ ಎಂದು ಬರುವ ಎದುರುಮನೆಯ ಮಕ್ಕಳನ್ನು ತನ್ನವೆಂದು ಕಂಡು ಪ್ರೀತಿ ವಾತ್ಸಲ್ಯ ನೀಡಿ ತನ್ನ ದುಃಖವನ್ನು ಕಡಿಮೆ ಮಾಡಿಕೊಳ್ಳುತ್ತಾಳೆ. ಚಿಂಟೂ, ಪಿಂಕಿ, ಆನು, ಸೋನು ತನ್ನ ಕುಟುಂಬದವೇ ಆಗಿಹೋಗಿರುತ್ತಾರೆ. ವೀಣಾಳ ಮನೆಯಲ್ಲಿ ಊಟ, ಆಟ, ಪಾಠವಾಗುತ್ತದೆ. ಕನಸಿನಲ್ಲಿ ಮಕ್ಕಳೂ ವೀಣಾನೇ ಕನವರಿಸುತ್ತವೆ. ವೀಣಾನಂತೆ ಶಿವರಾಮನಿಗೂ ಈ ಮಕ್ಕಳ ಬಗ್ಗೆ ಪ್ರೀತಿ ಇದೆ. ಆದರೆ ಮಕ್ಕಳು ಮಾಡುವ ಕೆಲವು ಕೆಲಸ ಇವನಿಗೆ ಹಿಡಿಸದು. ತನ್ನ ಸ್ನೇಹಿತ ಕೊಟ್ಟ ಪೌಡರನ್ನು ಸೋನು ನೆಲದ ಮೇಲೆ ಬೀಳಿಸಿದಾಗ, ವೀಣಾ ತಂದುಕೊಟ್ಟ ಕಿಚನ್ ಪ್ಯಾರ್‌ಡೈಸ್‌ನಲ್ಲಿ ಪೌಡರ್ ಸಾರು ಮಾಡಿದಾಗ ವೀಣಾಳಿಗೆ ಸಂಕಟ ಎದುರಾಗುತ್ತದೆ. ಶಿವರಾಮ ಕೋಪಗೊಂಡು ಮಕ್ಕಳನ್ನು ತನ್ನಿಂದ ದೂರ ಮಾಡಿದರೆ ಎಂದು ಇಲ್ಲಿ ಗಂಡನನ್ನು ಬಿಡಲಾಗದ, ಮಕ್ಕಳನ್ನು ದೂರ ಮಾಡಲಾಗದ ಸ್ಥಿತಿ ವೀಣಾಳದ್ದು. ಎರಡನ್ನೂ ಸ್ನೇಹಯುತವಾಗಿ ಸರಿದೂಗಿಸಿಕೊಂಡು ಹೋಗುವಲ್ಲಿ ವೀಣಾಳು ಯಶಸ್ಸು ಕಾಣುವುದನ್ನು ಈ ಕತೆಯಲ್ಲಿ ಮೂಡಿಬಂದಿದೆ.

'ಬೇಡರ ಬಲೆ', 'ಚೆನ್ನಿದಾಂಡು', 'ಮಗು ಚಿತ್ರ ಬರೆಯಿತು', 'ಗಾಂಧಿಚಿತ್ರದ ನೋಟು' ಇತರೆ ಕತೆಗಳು ಸಹಾ ಮಹಿಳೆಯ ನೆಲೆ ಮತ್ತು ಕುಟುಂಬದ ಎಳೆಗಳನ್ನು ಆಧುನಿಕ ಸಮಾಜದ ಪರಿಧಿಯಲ್ಲಿ ಚಿತ್ರಿಸುತ್ತವೆ. ಹೆಣ್ಣು ತನಗೆ ಬೇಕಾದ ವಸ್ತು ಸಿಗದಿದ್ದಾಗ ಬೇರೆ ವಸ್ತುವಿನ ಮೇಲೆ ನೋಟವನ್ನು, ಸಿಟ್ಟನ್ನು ತೀರಿಸುವ ಗಂಡನೊಂದಿಗೆ ಗುದ್ದಾಡುವ, ಮಕ್ಕಳನ್ನು ಜೋಪಾನ ಮಾಡುವ ನೆಲೆಯಲ್ಲಿ ಹೆಣ್ಣಿನ ಶ್ರಮ, ಹೋರಾಟ, ಕನಸು, ದುಡಿಮೆಗಳು ಕತೆಗಳುದ್ದಕ್ಕೂ ಕಾಣುತ್ತದೆ.

ಪ್ರತಿ ಕತೆಯಲ್ಲೂ ಭಿನ್ನಭಿನ್ನವಾದ ಕುಟುಂಬಗಳ ಚಿತ್ರಣವಿದೆ. ಇವು ಬಹುಪಾಲು ಸ್ತ್ರೀಕೇಂದ್ರಿತವಾಗಿವೆ. ಇಲ್ಲಿ ಮಹಿಳೆ ಕುಟುಂಬವನ್ನು ನಿರ್ವಹಿಸುವ ಹಾಗೂ ದುಡಿಯುವ ಮೂಲಕ ತನ್ನ ತಂಗಿಯೋ-ತಮ್ಮನೋ-ಮಗಳನ್ನೋ ಓದಿಸಬೇಕೆಂಬ, ಓದಿಸಿ ಒಳ್ಳೆಯ ವ್ಯಕ್ತಿಯಾಗಿಸಬೇಕೆಂಬ ನಿಲುವು ಪ್ರತಿಯೊಂದು ಕುಟುಂಬದ ಮಹಿಳೆಯದ್ದಾಗಿದೆ. ಎಲ್ಲ ಕತೆಗಳಲ್ಲೂ ಸಾಮಾನ್ಯವಾಗಿ ಮಹಿಳೆಯ ಕೌಟುಂಬಿಕ ಲೋಕವೇ ಪ್ರಧಾನವಾಗಿದೆ. ಕೌಟುಂಬಿಕ ಜಗತ್ತಿನಲ್ಲಿ ಅವಳ ಅಸ್ತಿತ್ವ, ಹೊಂದಾಣಿಕೆ, ಆರೈಕೆ, ದಿನಚರಿ, ಮಾನಸಿಕ ತಲ್ಲಣಗಳು, ಮೌಲ್ಯ, ಸಂಪ್ರದಾಯದ ಕಟ್ಟುಪಾಡುಗಳು, ಮಕ್ಕಳ ಕೊರತೆ, ಮಕ್ಕಳಿದ್ದರೂ ಅವುಗಳನ್ನು ಬೆಳೆಸಲು ಇನ್ನಾವುದೋ ಕೊರತೆಯ ಎಳೆಗಳು ಕಾಣಿಸಿಕೊಂಡದ್ದನ್ನು ಗುರುತಿಸಬಹುದು. ಈ ಕೊರತೆಯನ್ನು ಹೋಗಲಾಡಿಸಲು ಮಹಿಳೆಯ ಹೋರಾಟ, ಹೊಂದಾಣಿಕೆ ಸಂಬಂಧದ ಆಲೋಚನೆಗಳು ಅವಳ ಬದುಕಿನುದ್ದಕ್ಕೂ ಸೇರಿಕೊಂಡಿದ್ದನ್ನು ಗಮನಿಸಬಹುದು.

೫.೩. ಸುಮಂಗಲಾ

ಸುಮಂಗಲಾ ಅವರು ಹೆಣ್ಣಿನ ಸಂವೇದನೆಗಳನ್ನು, ವಿಮೋಚನೆಯ ಮಾರ್ಗಗಳನ್ನು ಹೆಚ್ಚೆಚ್ಚು ಪರಿಣಾಮಕಾರಿಯಾಗಿ ತಮ್ಮ ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಮಧ್ಯಮ ಮತ್ತು ಕೆಳವರ್ಗದ ಬದುಕನ್ನು ನಿರ್ವಹಿಸುತ್ತಿರುವ ಹೆಣ್ಣಿನ ಸಂಕಟ, ಆತಂಕದ ಬದುಕಿನೊಂದಿಗಿನ ಅನುಸಂಧಾನವನ್ನು ತಮ್ಮ ಸಮಕಾಲೀನ ಲೇಖಕಿಯರಿಗಿಂತ ಭಿನ್ನವಾದ ಮಾರ್ಗದಲ್ಲಿ ಕಂಡುಕೊಂಡಿರುವ ಕಥೆಗಾರ್ತಿ. ಇವರು ಶೋಷಿತ ಸಮುದಾಯಗಳಲ್ಲಿ ಒಂದಾಗಿರುವ ಹೆಣ್ಣಿನ ಅವಸ್ಥೆಯ ಬಗ್ಗೆ ಖಚಿತವಾದ ಕಾರಣಗಳನ್ನು ಗುರುತಿಸಲು ತೊಡಗಿದ್ದಾರೆ. ಹೆಣ್ಣುಲೋಕದ ತೀರ ಖಾಸಗಿ ವಿಚಾರಗಳನ್ನು ಭಿನ್ನವಾಗಿ ಗ್ರಹಿಸಿ, ಆ ಗ್ರಹಿಕೆಯ ಅನುಭವಗಳನ್ನು ಸಾಮಾಜಿಕ ಪ್ರಜ್ಞೆಯ ನೆಲೆಯ ಮೇಲೆ ಕಲೆಯ ಸಾಮಗ್ರಿಗಳನ್ನಾಗಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ. ಅಂತೆಯೇ ಇವರ ಕಥೆಗಳು ಮನುಷ್ಯತ್ವದ ಪಾತಳಿಯ ಮೇಲೆಯೇ ಬೇರೆ ಬೇರೆ ಸ್ತರದ ಕುಟುಂಬಗಳಲ್ಲಿನ ಹೆಣ್ಣು ನಿರ್ವಹಿಸುತ್ತಿರುವ ಬದುಕನ್ನು ಪರ-ವಿರೋಧದ ನಡುವಿನ ತೆಳುಗೆರೆಯ ಮೇಲೆ ನಿಂತು ಪರಾಮರ್ಶಿಸುತ್ತವೆ.

ಇಲ್ಲಿಯವರೆಗೆ ಮೂರು ಕಥಾಸಂಕಲನ('ಜುಮುರು ಮಳೆ', 'ಕಾಲಿಟ್ಟಲ್ಲಿ ಕಾಲುದಾರಿ' ಮತ್ತು 'ಹನ್ನೊಂದನೇ ಅಡ್ಡರಸ್ತೆ')ಗಳನ್ನು ಸುಮಂಗಲಾ ಅವರು ಹೊರತಂದಿದ್ದಾರೆ. ಈ ಸಂಕಲನಗಳಲ್ಲಿರುವ ಎಲ್ಲ ಕಥೆಗಳು ಹೆಣ್ಣಿನ ಸಂವೇದನೆಗಳನ್ನು, ವಿಮೋಚನೆಯ ಮಾರ್ಗಗಳನ್ನು ಹೆಚ್ಚೆಚ್ಚು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತವೆ. ಅಲ್ಲದೇ, ಪರಂಪರೆಯಿಂದ ಬಂದ ಪುರುಷಪ್ರಧಾನವಾದ ಕುಟುಂಬ ವ್ಯವಸ್ಥೆಯಿಂದ ಬೇರ್ಪಟ್ಟ ಹೆಣ್ಣಿನ ಪ್ರಾತಿನಿಧ್ಯ ಈ ಸಮಾಜದಲ್ಲಿ

ಸಾಧ್ಯವಿಲ್ಲವೆ? ಅಥವಾ ಸ್ವತಃ ಹೆಣ್ಣಿಗೆ ಈ ಬಂಧನದಿಂದ ಮುಕ್ತಳಾಗಲು ಸಾಧ್ಯವಾಗುತ್ತಿಲ್ಲವೆ? ಎಂಬ ಪ್ರಶ್ನೆಗಳನ್ನೂ ಸಹ ಈ ಕಥೆಗಳು ಹುಟ್ಟುಹಾಕುತ್ತವೆ.

ಸುಮಂಗಲಾ ಅವರ ಕಥೆಗಳು, ಹೆಣ್ಣನ್ನು ಸಹಜೀವಿಯಾಗಿ ಕಾಣುವ ಮತ್ತು ಕುಟುಂಬ ಸಂಬಂಧದ ಆಚೆಗೂ ಹೆಣ್ಣಿನ ಇರುವಿಕೆಯನ್ನು ಒತ್ತಾಯಿಸುವ, ಗುರುತಿಸುವ ಕ್ರಮದಲ್ಲಿ ಮೂಡಿಬಂದಿವೆ. ದೇಹ ಕಾಮದಾಚೆಗೆ ಹೆಣ್ತನದ ಅಸ್ಮಿತೆಯನ್ನು ಶೋಧಿಸುವ ತೆರದಲ್ಲೂ ಈ ಕಥೆಗಳಿವೆ. ಅಲ್ಲದೇ, ಹೆಣ್ಣು ಈ ವ್ಯವಸ್ಥೆಯಲ್ಲಿ ಆಗಾಗ ಎದುರಾಗುವ ಸಂಕಟಗಳಿಗೆ ವಿಮುಖಳಾಗದೆ ವ್ಯವಸ್ಥೆಯನ್ನು ಪರಾಮರ್ಶಿಸುವ, ಸ್ವೀಕರಿಸುವ, ನಿರಾಕರಿಸುವ ಗುಣವನ್ನು ಹೊಂದಲೇಬೇಕಾದ ಅನಿವಾರ್ಯತೆಯ ಬಗ್ಗೆಯೂ ಹೇಳುತ್ತವೆ.

ಸುಮಂಗಲಾ ಅವರ ಕಥೆಗಳು ಪುರುಷಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿನ ಅಂತರಂಗದ ಅನಂತ ಸಾಧ್ಯತೆಯ ಅಪರಿಮಿತವಾದ ಬಯಕೆಗಳು ಕಮರಿಹೋಗಲು ಆಕೆಯು ದೈಹಿಕ, ಮಾನಸಿಕ ನಿಯಂತ್ರಣವನ್ನು ಕಳೆದುಕೊಂಡು ನೈತಿಕವಾಗಿ ಶೋಷಣೆಗೊಳಗಾಗುವ ಬಗೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ. ಈ ಹಿನ್ನೆಲೆಯಲ್ಲಿ ಸಮಕಾಲೀನ ಹೆಣ್ಣು ಜಗತ್ತನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುತ್ತವೆ.

ಇವರ 'ಜುಮುರು ಮಳೆ' ಸಂಕಲನದ ಎಲ್ಲ ಕಥೆಗಳು ಉತ್ತರ ಕರ್ನಾಟಕದ ಸರಹದ್ದಿನಲ್ಲಿರುವ ಅನಕ್ಷರಸ್ಥ ಶ್ರಮಿಕ ವರ್ಗದ ಮಹಿಳೆಯರ ಬದುಕಿನ ಸುತ್ತಲೇ ಸುತ್ತುತ್ತವೆ. ಈ ಸಂಕಲನದ 'ಆಲಿಕಲ್ಲು' ಕಥೆಯಲ್ಲಿ ಅಸಾಧ್ಯವಾದುದನ್ನು ಸಾಧ್ಯಮಾಡಿ, ಗಮ್ಯಸ್ಥಾನವನ್ನು ತಲುಪಲೇಬೇಕೆಂದುಕೊಂಡ ಹೆಣ್ಣಿಗೆ ತನ್ನ ಸುತ್ತಲಿನ ಸಮಾಜವೇ ಶತ್ರುವಾಗಿ ಹೇಗೆ ಪರಿಣಮಿಸುತ್ತದೆ ಎಂಬ ಕಟುಸತ್ಯವನ್ನು ಹೇಳುತ್ತದೆ.

ಇಲ್ಲಿ ಎಸ್‌ಟಿಡಿ ಬೂತ್‌ವೊಂದನ್ನು ಕೇಂದ್ರವಾಗಿಟ್ಟುಕೊಂಡು ಅತ್ಯಂತ ಕೆಳಸ್ತರದ ಬದುಕನ್ನು ನಿರ್ವಹಿಸಲು ಪರದಾಡುತ್ತಿರುವ ಶ್ರಮಿಕ ವರ್ಗದ ಪುರುಷಕೇಂದ್ರಿತ ಸಮಾಜದ ಕುಟುಂಬಗಳಲ್ಲಿನ ಮಹಿಳೆಯರ ಆಂತರಿಕ ವ್ಯಕ್ತಿತ್ವದ ಚಹರೆಗಳನ್ನು ಕೂಡ ಸಮಾಜವೇ ರೂಪಿಸುತ್ತದೆ ಎಂಬುದನ್ನು ಅನಾವರಣ ಮಾಡುತ್ತದೆ.

ಎಸ್‌ಟಿಡಿ ಬೂತ್‌ನ ಮಾಲೀಕ ಲತ್ಯಾಮಾಮು(ಲತೀರ್ಫ)ನ ಕುತೂಹಲಕ್ಕೆ ಕಾರಣರಾಗುವ ತರಕಾರಿ ಮಾರುವ ಕಮಲವ್ವ, ಆಗಾಗ ಎಸ್‌ಟಿಡಿ ಬೂತ್‌ಗೆ ಬರುವ ಆಧುನಿಕ ಬದುಕಿನ ಸವಲತ್ತುಗಳಿಂದ ವಂಚಿತಳಾಗಿ, ಗಂಡನ ಆಜ್ಞೆಯಂತೆ ಮನೆ ಕೆಲಸವನ್ನು ಪೂರೈಸುತ್ತ. ತನ್ನ 'ಆಶೆ, ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲಾಗದೆ ಒಳಗೊಳಗೆ ಯಾತನೆಯನ್ನು ಅನುಭವಿಸುತ್ತಿರುವ ಅನಾಮಿಕ ಹೆಂಗಸು, ದಾಂಪತ್ಯದಿಂದ ಸುಖವಂಚಿತಳಾದ ಲತ್ಯಾಮಾಮು(ಲತೀಫ್)ನ ದೊಡ್ಡಣ್ಣನ ಹೆಂಡತಿ ಇವೆಲ್ಲ ಪಾತ್ರಗಳು ವಾಸ್ತವದಲ್ಲಿ ಜೀವಂತ ಪಾತ್ರಗಳೇ ಆಗಿವೆ.

ಗಂಡನಿಂದ ಪರಿತ್ಯಕ್ತಳಾಗಿ, ಅಪಾಪೋಲಿತನ ಮಾಡಿ, ರಿಮ್ಯಾಡ್ ಹೋಂ ಸೇರಿದ ಮಗನನ್ನು ಬೆನ್ನಿಗೆ ಕಟ್ಟಿಕೊಂಡು, ಹೊಟ್ಟೆಪಾಡಿಗಾಗಿ ತರಕಾರಿ ಮಾರಿಕೊಂಡಿದ್ದ ಕಮಲವ್ವ, ಲೋಕದ ಕಣ್ಣಲ್ಲಿ ಬೇರೆಯದೇ ರೀತಿಯ ಬದುಕನ್ನು ನಿರ್ವಹಿಸುತ್ತಿರುವಂತೆ ಕಾಣುವುದಕ್ಕೆ ಪರೋಕ್ಷವಾಗಿ ಆಕೆಯ ಗಂಡ ಮತ್ತು ಮಗ ಇಬ್ಬರೂ ಕಾರಣರಾಗುವುದು ಪರಿಸ್ಥಿತಿಯ ವ್ಯಂಗ್ಯದಂತೆ ಕಂಡುಬರುತ್ತದೆ.

ಕಮಲವ್ವ ಮಗನ ಮೇಲೆ ನಂಬಿಕೆಯನ್ನಿಟ್ಟುಕೊಂಡು, ಓಡಿಹೋದ ಗಂಡ ವಾಪಸು ಬಂದರೂ ಆತನ ಬೆನ್ನಿಂದೆ ಹೋಗದ ಆಕೆ, ಅದೇ ಮಗ ಹುಡುಗಿಯ ಕೇಸಿನಲ್ಲಿ ಸಿಕ್ಕಿಬಿದ್ದು ರಿಮ್ಯಾಂಡ್ ಹೋಂ ಸೇರಿದಾಗ ಅದರ ಅವಮಾನವನ್ನು ತಾಳಲಾಗದೇ ತರಕಾರಿ ಮಾರುವ ಸ್ಥಳವನ್ನು ಉಪ್ಪಲಿ ಬುರುಜಿನ ಬಳಿ ಸ್ಥಳಾಂತರಿಸುವುದು ಇದೆಯಲ್ಲ... ಅದು, ಗಂಡಿನ ಆಸರೆಯನ್ನೇ ಧಿಕ್ಕರಿಸಿ ಸ್ವಯಂ ಹೊಸಬದುಕನ್ನು ಕಟ್ಟಿಕೊಳ್ಳಬೇಕೆಂಬ ಆಕೆಯ ಕನಸಿಗೆ ಪ್ರತಿಮೆಯಂತಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಲತ್ಯಾಮಾಮು ತನಗೇ ಗೊತ್ತಿಲ್ಲದಂತೆಯೇ ಕಮಲವ್ವನೊಳಗೆ ಅನುರಕ್ತನಾಗುವುದು, ಆಕೆ ತರಕಾರಿ ಬಜಾರಿನಲ್ಲಿ ಕಾಣದಾದಾಗ ಚಡಪಡಿಸುವುದು– ಇದೆಲ್ಲ ಆಕೆಯ ಕನಸನ್ನು ಹೊಸಕಿಹಾಕುವ ಗಂಡಿನ ಅಮಾನವೀಯವಾದ ತಣ್ಣನೆಯ ಆಕ್ರಮಣಕಾರಿ ಬಯಕೆಯಂಥ ಕ್ರೌರ್ಯವನ್ನು ಸೂಚಿಸುತ್ತದೆ.

ಇನ್ನು ಗಂಡನಿದ್ದೂ ಅಸಹನೀಯ ಬದುಕನ್ನು ನಿರ್ವಹಿಸುತ್ತಿದ್ದ ಲತ್ಯಾಮಾಮುನ ಎಸ್‌ಟಿಡಿ ಬೂತ್‌ಗೆ ಬರುತ್ತಿದ್ದ ಒಂದು ಹೆಣ್ಣುಮಗುವಿನ ತಾಯಿಯಾಗಿದ್ದ ಆ ಅನಾಮಿಕ ಹೆಂಗಸು, ಫೋನಿನೊಂದಿಗೆ ಒಡನಾಡುತ್ತಲೇ ತನ್ನ ದಾಂಪತ್ಯ ಜೀವನದ ತಳಮಳ, ಸಂಕಟ, ಸಂದಿಗ್ಧತೆಗಳ ಅಗಾಧತೆಯ ಪರಿಯನ್ನು ಓದುಗನ ಎದೆಗೆ ಸೂಚ್ಯವಾಗಿ ದಾಟಿಸುತ್ತಾಳೆ. ಹೀಗೆ ತನ್ನನ್ನು ಆವರಿಸಿರುವ ಆ ಹೊತ್ತಿನ ಎಲ್ಲ ಉದ್ವೇಗಗಳನ್ನು ಒಳಗೊಳಗೆ ನುಂಗಿಕೊಂಡು, ಎಸ್‌ಟಿಡಿ ಬೂತ್‌ಗೆ ಬಂದಾಗಲೆಲ್ಲ ಲತ್ಯಾಮಾಮುನೊಂದಿಗೆ ಹುಡುಗಾಟದ ಹಗುರ ನಗುವಿನೊಂದಿಗೆ ಬೆರೆಯುವುದು ಒಂದರ್ಥದಲ್ಲಿ ಆ ಅರೆಕ್ಷಣವಾದರೂ ತನ್ನೆಲ್ಲ ನೋವುಗಳಿಂದ ಪಾರಾಗಿ, ಹಗುರವಾಗಬೇಕೆಂಬುದೇ ಆಗಿದೆ.

ಇದು ಹೀಗಾದರೆ, 'ಅರ್ಧ ಹೆಣೆದ ಗುಲಾಬಿ ಕಾಲುಚೀಲ' ಕಥೆಯಲ್ಲಿ ಬರುವ ಹೆಣ್ಣು, ಸಹನೆಯ ಗುಣದಿಂದಾಗಿಯೇ ನೈತಿಕ ಮತ್ತು ಲೈಂಗಿಕ ಶೋಷಣೆಯನ್ನು ಎದುರಿಸುವ ನಿಟ್ಟಿನಲ್ಲಿ ಸೋತು ಆಕೆಯಿಂದ ವ್ಯವಸ್ಥೆಯು ಅಪೇಕ್ಷಿಸುವ ತಾಯ್ತನದಿಂದಲೂ ವಂಚಿತಳಾಗುವಂಥ ದುರಂತವನ್ನು ಎದುರಿಸುತ್ತಾಳೆ. ಮಧ್ಯಮವರ್ಗದ ಕುಟುಂಬವ್ಯವಸ್ಥೆಯಲ್ಲಿನ ಹೆಣ್ಣಿನ ಲೋಕದ ಇಂಥವೇ ಸಂಗತಿಗಳನ್ನು ನಿರ್ದಿಷ್ಟ ನೆಲೆಯಲ್ಲಿ ಗ್ರಹಿಸುವ, ಗುರುತಿಸುವ ಪ್ರಯತ್ನ ಈ ಕಥೆಯಲ್ಲಿದೆ.

ಈ ಕಥೆಯ ಮುಖ್ಯಪಾತ್ರ ನಾಗವೇಣಿಯ ಅಕ್ಕ ಪ್ರತಿಭಾಳದು ಈಗಲೂ ಶೀಲಾ ಮೇಡಂ ನೆನಪಾಗಿ ಕಾಡುವುದಕ್ಕೆ ಕಾರಣ ಆಕೆ ಕೊನೆಯವರೆಗೂ ಮದುವೆಯಾಗದೇ ಉಳಿದಿರುವುದಷ್ಟೇ ಆಗಿರದೇ ಆ ರೀತಿಯ ಬದುಕಿಗೆ ಯಾರಿಗೂ ಗೊತ್ತಿರದ ದುರಂತವೊಂದು ಪ್ರತಿಭಾಳೊಂದಿಗೆ ಬೆಸೆದುಕೊಂಡಿರುವುದು. ಆ ದುರಂತವೇ ಆಕೆಯ ತಾಯ್ತನವನ್ನು ಕಸಿದುಕೊಂಡಿರಬಹುದೆಂಬ ಅನುಮಾನವೂ ಕೂಡ ಆಗಿದೆ. ಕಥೆಯ ಪ್ರಾರಂಭದಲ್ಲಿ, ತನ್ನ ಅಕ್ಕನಿಂದ ಬಂದ ಪತ್ರದಲ್ಲಿದ್ದ ಸಣ್ಣ ವಿಚಾರವೊಂದರ ನೆಪದಲ್ಲಿ ಶೀಲಾ ಮೇಡಂನ ಬದುಕನ್ನು ನಾಗವೇಣಿ ಶೋಧಿಸುತ್ತ ಹೋಗುತ್ತಾಳೆ. ಹೊರಜಗತ್ತಿಗೆ ಕಾಣಿಸದಂತೆ ಯಾವ ಗಂಡಸಿನ ಮೇಲೂ ಪ್ರೀತಿ, ಪ್ರೇಮದ ಕಡೆಗೆ ಮೋಹವೂ ಸಹ ಹುಟ್ಟದ ಏಕಾಂತದಲ್ಲಿ ಯಾರೊಂದಿಗೂ ಬೆತ್ತಲೆಯಾಗಿ ಬಿಚ್ಚಿಕೊಳ್ಳದ, ಕಾಮವನ್ನೇ ಮೆಟ್ಟಿನಿಂತು ವಿರಹ ವೇದನೆಯಲ್ಲಿ ಬೇಯುತ್ತಿದ್ದ ಶೀಲಾ ಮೇಡಂನ ಆ ರೀತಿಯ ಬದುಕಿಗೂ ಒಂದು ಹಿನ್ನೆಲೆ ಇದೆ.

ಪ್ರತಿಭಾಳ ಬದುಕಲ್ಲಿ ಒಂದೊಮ್ಮೆ ಸುಳಿದು ಹೋಗಿದ್ದ ಶ್ರೀನಿವಾಸ ಎಷ್ಟೋ ವರ್ಷಗಳ ನಂತರ ಹೆಂಡತಿಯೊಂದಿಗೆ ಎದುರಾದಾಗ ಹೆಣ್ಣುಮಗುವಿನ ತಾಯಿಯಾಗಿದ್ದ ಪ್ರತಿಭಾಳಿಗೆ ಮಧುರವಾದ ಪುಳಕವೊಂದು ಆವರಿಸಿ, ಕಂಪಿಸುವಂತೆ ಮಾಡಿತ್ತು. ಪ್ರೀತಿ–ಪ್ರೇಮದಂಥ ತೋರಿಕೆಯ ಕ್ರಿಯೆಗಳನ್ನು ಮೀರಿದ ಸಂಬಂಧವೊಂದನ್ನು ಹೊಂದುವಲ್ಲಿ ತಾನು ವಿಫಲಳಾಗಿದ್ದಕ್ಕೆ ಆಕೆಯಲ್ಲಿರಬಹುದಾದ ನೈತಿಕತೆಯ ಪಾತಳಿಯನ್ನು ಮೀರಬಾರದೆಂಬ ಸಹನೆಯ ಗುಣವೇ ಕಾರಣವಾಗಿದೆ ಎಂಬುದನ್ನು ಸೂಚಿಸುತ್ತದೆ. ಹಾಗೆಯೇ ಆಕೆಯ ಗಂಡನ ಹಡಪದಲ್ಲಿ ಶೀಲಾ ಮೇಡಂನ ಪುಸ್ತಕ ಸಿಗುವುದು ಒಂದರ್ಥದಲ್ಲಿ ಶೀಲಾ ಮೇಡಂನ ಬದುಕಿನ ಏನೆಲ್ಲ ತಳಮಳ, ತಲ್ಲಣ, ನೋವಿಗೆ ಸಾಕ್ಷಿಯೆಂಬಂತ ಕಾರಣದೊಂದಿಗೇನೆ ಪ್ರತಿಭಾಳ ಬದುಕು ಬೆಸೆದುಕೊಂಡಿದೆ ಎಂಬುದನ್ನು ಸೂಚ್ಯವಾಗಿ ಹೇಳುತ್ತದೆ.

ಕಥೆಯ ಕೊನೆಯಲ್ಲಿ ನಾಗವೇಣಿಯ ಕಣ್ಣಿಗೆ ಬೀಳುವ(ಶೀಲಾ ಮೇಡಂನ ಮನೆಯಲ್ಲಿ) ಹಳೆಬಟ್ಟೆಗಳ ಗಂಟಿನ ಆಚೆ ಮೂಲೆಯಲ್ಲಿ ಜೋತುಬಿದ್ದ ಅರ್ಧ ಹೆಣೆದ ಕಾಲುಚೀಲವು ದೊಡ್ಡ ಆಫೀಸರ್ ಜೊತೆಗೇನೆ ಮದುವೆ ಮಾಡುವೆ ಎಂಬ ಅಪ್ಪನ ಭರವಸೆಯ ಮಾತುಗಳಿಗೆ ಕಟ್ಟುಬಿದ್ದು, ಲೋಕ ಒಪ್ಪಿತವಾದ ದಾಂಪತ್ಯ ಬದುಕಿನಿಂದ ವಂಚಿತಳಾಗಿದ್ದ ಶೀಲಾ ಮೇಡಂಳೂ ಸಹ ತನ್ನ ಸಹನೆಯ ಗುಣದಿಂದಾಗಿಯೇ ಮುಂದೊಮ್ಮೆ ಸಾಮಾಜಿಕ ಪಾತಳಿಯನ್ನು ಮೀರಿದ ಅನೈತಿಕ ಸಂಬಂಧವನ್ನು ಹೊಂದುವುದರ ಮೂಲಕ ಗರ್ಭಪಾತ ಮಾಡಿಸಿಕೊಂಡು ಲೈಂಗಿಕ ಶೋಷಣೆಗೊಳಗಾಗಿದ್ದಳು ಎಂಬ ಕ್ರೂರಸತ್ಯವನ್ನು ಬಿಚ್ಚಿಡುತ್ತದೆ.

ಹೀಗೆ ಬದುಕಿನಲ್ಲಿ ಎಲ್ಲವನ್ನೂ ಹೊಂದಿದ್ದ ಪ್ರತಿಭಾ, ಕಳೆದುಕೊಂಡಿರುವುದರ ಬಗ್ಗೆ ಸಂಕಟಪಡುವುದು ಏನನ್ನೂ ಹೊಂದಿರದ, ಅನಿರೀಕ್ಷಿತವಾಗಿ ಒದಗಿ ಬಂದ ಶೀಲಾ ಮೇಡಂನ ತಾಯ್ತನ ಕೊನೆಗೂ ಇಲ್ಲದಂತಾಗುವುದು, ಇವೆಲ್ಲ ವಾಸ್ತವದಲ್ಲಿ ಮಧ್ಯಮವರ್ಗದ ಕುಟುಂಬಗಳಲ್ಲಿನ

ಹೆಣ್ಣಿನ ತಾಳಿಕೆಯ ಗುಣದಿಂದಾಗಿಯೇ ನೈತಿಕ ಮತ್ತು ಲೈಂಗಿಕ ಶೋಷಣೆಯನ್ನು ಎದುರಿಸುವುದಕ್ಕೆ ಕಾರಣವಾಗುತ್ತದೆ ಎಂಬ ಮಾತಿಗೆ ಪ್ರತಿಮೆಯಂತಿವೆ.

ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿನ ಇರುವಿಕೆಗೆ ಪ್ರಾಮುಖ್ಯತೆಯನ್ನು ಕೊಡದೇ ಇರುವುದು ಸಹ ಶೋಷಣೆ ಎಂದೆನಿಸಿಕೊಳ್ಳುತ್ತದೆ. ಕುಟುಂಬ ಜಗತ್ತಿನ ಇಂಥ ಅರೆಕೊರೆಗಳನ್ನು ಮೀರಿ ಸಂಬಂಧಗಳ ಮಾನವೀಯ ನೆಲೆಯ ಮೇಲೆ ಪುರುಷ ಸಮನಾಗಿ ಹೆಣ್ಣನ್ನು ಪರಿಗಣಿಸಿದಾಗ ಕಾಲಾಂತರದಲ್ಲಿ ಉಳಿದುಕೊಂಡು ಬಂದ ಈ ಗೆರೆಗಳನ್ನು ಅಳಿಸಿ ಹಾಕಿ ಹೆಣ್ಣಿನ ಬದುಕನ್ನು ಹಸನಾಗಿಸಬಹುದು. ಆಗ ಹೆಣ್ಣಿನ ಅಸಹನೀಯ ಬದುಕಿನಿಂದ ಉಂಟಾದ ಎದೆಯ ಗಾಯಗಳು ರಕ್ತಸಂಬಂಧ ಮತ್ತು ಅದರಾಚೆ ಹೊರ ಜಗತ್ತಿನಲ್ಲಿ ಒದಗಿಬರುವ ಸಂಬಂಧಗಳಿಂದಾಗಿ ಮೆಲ್ಲಗೆ ಅಡಗಿ ಸಹನೀಯ ಬದುಕಿಗೆ ನಾಂದಿ ಹಾಡುತ್ತದೆ ಎಂಬ ನಂಬಿಕೆಗೆ ಅವರ 'ಎದೆಯಲ್ಲೊಂದು ಬಳೆಚೂರು' ಕಥೆ ಪುಷ್ಟಿ ನೀಡುತ್ತದೆ.

ತನ್ನವ್ವನ ಸಾವನ್ನು ಅರಗಿಸಿಕೊಳ್ಳಲಾಗದೆ ಆ ಸಾವಿನ ನಂತರ ತನ್ನಪ್ಪನ ಉದ್ಧಟತನವನ್ನು ಸಹಿಸದೆ ಊರು ತೊರೆದು ಬಂದಿದ್ದ ದಿವಾಕರನ ಬದುಕಿನಲ್ಲಿ ತೀರ ಅನೀರೀಕ್ಷಿತವಾಗಿ ಬರುವ ಪಾತ್ರೆ ತೊಳೆಯುವ ಕೆಲಸದಾಕೆ ಜಿಲ್ಲಿ(ಜುಲೇಖಾ) ಆತನ ಬದುಕನ್ನು ಸಹ್ಯವಾಗಿಸುತ್ತಲೇ ತಾನು ನಿರ್ವಹಿಸುತ್ತಿರುವ ತೀರ ಕೆಳಸ್ತರದ ಬದುಕಿನ ಸಂಕಟಗಳನ್ನು ಬಿಚ್ಚಿಡುತ್ತ ಹೋಗುತ್ತಾಳೆ.

ವಯಸ್ಸಾದ ಗಂಡನಿಗೆ ಎರಡನೇ ಹೆಂಡತಿಯಾಗಿ ಬರುವ ಜಿಲ್ಲಿ(ಜುಲೇಖಾ) ತನ್ನ ದುಡಿಮೆಯಿಂದಲೇ ಬಸಿರು–ಬಾಣಂತನಗಳನ್ನು ನಿಭಾಯಿಸಿಕೊಂಡು, ರೋಗಿಷ್ಠ ಗಂಡನನ್ನು ಪೊರೆಯುತ್ತ ಅಸಹನೀಯ ಬದುಕನ್ನು ನಿರ್ವಹಿಸುವುದು ವಾಸ್ತವದಲ್ಲಿ ಇಂಥ ಅನೇಕ ಕುಟುಂಬಗಳಲ್ಲಿ ಹೆಣ್ಣು ಈ ತರಹದಲ್ಲೂ ಶೋಷಣೆಗೀಡಾಗುತ್ತಾಳೆ ಎಂಬ ಸತ್ಯವನ್ನು ಅನಾವರಣ ಮಾಡುತ್ತದೆ. ಅಲ್ಲದೇ ಪಂಚಮಿ ಹಬ್ಬಕ್ಕೆ ದಿವಾಕರನಿಂದ ಬಳೆ ತೊಟ್ಟುಕೊಳ್ಳಲು ಕೇಳಿ ಪಡೆದ ಐವತ್ತು ರೂಪಾಯಿಗಳನ್ನು ತನ್ನ ಗಂಡನ ಆಸ್ಪತ್ರೆಯ ಖರ್ಚಿಗೆ ಬಳಸುವುದು ಅನೈತಿಕ ಸಂಬಂಧದಿಂದ ಬಸುರಿಯಾಗಿದ್ದ ಅಪರಿಚಿತ ಹೆಂಗಸು ಬಾವಿಗೆ ಬೀಳಲೆಂದು ಹೋದಾಗ, ಆಕೆಯನ್ನು ರಕ್ಷಿಸಿ ತಂದು ತನ್ನ ಮನೆಯಲ್ಲಿ ಇಟ್ಟುಕೊಳ್ಳುವುದು ಇವೆಲ್ಲ ತಾನು ಶೋಷಣೆಗೊಳಪಡುತ್ತಿರುವಾಗಲೇ ಇಂಥ ಕ್ರಿಯೆಗಳಿಗೆ ಜಿಲ್ಲಿ(ಜುಲೇಖಾ) ತನ್ನನ್ನು ಒಡ್ಡಿಕೊಳ್ಳುವುದು ಆಕೆಯಲ್ಲಿರಬಹುದಾದ ಮಾನವೀಯ ಗುಣಗಳ ಮೇಲೆ ಬೆಳಕು ಚೆಲ್ಲುತ್ತದೆ. ಜೊತೆಗೆ ಕ್ರೌರ್ಯ ಮೆರೆಯುವ ಪುರುಷಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಮಾನವೀಯತೆ ಎಂಬುದು ಹೆಣ್ಣು ಲೋಕಕ್ಕಷ್ಟೇ ಸೀಮಿತವಾದುದು ಎಂಬ ಅರ್ಥವನ್ನು ಕಥೆ ಧ್ವನಿಸುತ್ತದೆ.

ಹಾಗೆಯೇ ಇದೇ ಪುರುಷ ಸಮಾಜವು ಮಧ್ಯಮವರ್ಗದ ಅಸಹಾಯಕ ಹೆಣ್ಣನ್ನು ನಿರ್ಲಕ್ಷಿಸುವುದರ ಮೂಲಕವೇ ಎಲ್ಲ ಕಾಲದೇಶವನ್ನು ಮೀರಿ ಕಟ್ಟಳೆಗಳ ಸಂಕೋಲೆಯನ್ನು ತೊಡಿಸಿದ್ದು, ಆ ಸಂಕೋಲೆಯ ಬಂಧದಿಂದ ಹೆಣ್ಣಿಗೆ ಮುಕ್ತಿಯೆಂಬುದೇ ಇಲ್ಲವಾಗಿದೆ.

ಈ ಮಾತಿಗೆ ಪೂರಕವೆಂಬಂತೆ ಸುಮಂಗಲಾ ಅವರ 'ಕಾಲಿಟ್ಟಲ್ಲಿ ಕಾಲುದಾರಿ' ಕಥಾಸಂಕಲನದ 'ಎಂದೂ ಒಡೆಯದ ಬಳೆಗಳು' ಕಥೆ ಎರಡು ಭಿನ್ನ ಭಾಷೆ ಮತ್ತು ಭಿನ್ನ ಪ್ರದೇಶಗಳ ಹೆಣ್ಣುಲೋಕದ ಅನುಭವಗಳನ್ನು ಮುಖಾಮುಖಿಯಾಗಿಸುವುದರ ಮೂಲಕ ಅವರ ಬದುಕಿನ ತಲ್ಲಣಗಳನ್ನು ಶೋಧಿಸುತ್ತದೆ.

ಕನ್ನಡ ಭಾಷೆ ಬಲ್ಲ ಕಥಾ ನಿರೂಪಕಿಯು ಗುಜರಾತಿ ಭಾಷೆ ಮಾತಾಡುವ ರಾಜೋರಿಗೆ ತನ್ನ ಬದುಕಿನ ಬಗ್ಗೆ, ಕುಟುಂಬದ ಬಗ್ಗೆ ಹೇಳಿಕೊಳ್ಳುತ್ತಲೇ ತಾನಿರುವ ಪರಿಸರದಲ್ಲಿ ಮಧ್ಯಮ ವರ್ಗದ ಕುಟುಂಬದಲ್ಲಿನ ಅಸಹಾಯಕ ಹೆಣ್ಣು ನಿರ್ವಹಿಸುತ್ತಿರುವ ಬದುಕಿನ ಅತಿಘೋರ ಸ್ವರೂಪವನ್ನು ಬಿಚ್ಚಿಡುತ್ತಾಳೆ.

ತುಂಬು ಕುಟುಂಬದಲ್ಲಿ ಅಂಗವಿಕಲೆ ಎಂಬ ಕಾರಣಕ್ಕಾಗಿ ನಿರ್ಲಕ್ಷ್ಯಕ್ಕೊಳಗಾದ ರಾಜೋರಿ, ಅಪ್ಪ-ಅಮ್ಮನ ಅನಾಸಕ್ತಿಯಿಂದಾಗಿ ಮದುವೆಯಾಗದೆ ಉಳಿದರೂ ಯಾರೊಬ್ಬರಿಗೂ ಹೊರೆಯಾಗದೆ ತನ್ನ ಪಾಡಿಗೆ ತಾನು ದುಡಿದು ಬದುಕುತ್ತಿರುವುದು ನಿಜದಲ್ಲಿ ನಮ್ಮ ವ್ಯವಸ್ಥೆಯಲ್ಲಿರಬಹುದಾದ ಇಂಥದೇ ಹೆಣ್ಣಿನ ನೋವಿನ ಬದುಕನ್ನು ಕಣ್ಮುಂದೆ ತಂದು ನಿಲ್ಲಿಸುತ್ತದೆ. ಕಥೆಯಲ್ಲಿ, 'ಲೇಖಿನ್ ಕೋಯಿನೆ ಮೇರಾಸಾದಿ ನಯಿ ಕಿಯಾ'(ಕಾಲಿಟ್ಟಲ್ಲಿ ಕಾಲುದಾರಿ, ಪು.೭೦) ಎಂದು ರಾಜೋರಿ ಕಥಾ ನಿರೂಪಕಿಗೆ ಹೇಳುವುದು, ಆಕೆಯ ಕುಟುಂಬ ಸದಸ್ಯರ ಜಡಗೊಂಡ ಮನಸ್ಥಿತಿಗೆ ಕನ್ನಡಿ ಹಿಡಿಯುತ್ತದೆ. ಆಕೆ ಮದುವೆಯಾಗಿರುವ ಅಣ್ಣ-ತಮ್ಮ, ಅಕ್ಕ ಮತ್ತು ಅವರ ಮಕ್ಕಳು ಹೀಗೆ ಎಲ್ಲರೂ ಅಂಗವಿಕಲೆ ಎಂಬ ಕಾರಣಕ್ಕಾಗಿ ರಾಜೋರಿಯ ಮದುವೆಯನ್ನು ಮಾಡದೆ ಕಡೆಗಣಿಸಲ್ಪಟ್ಟಿರುವ ಕ್ರಿಯೆಯು ಈ ಜಗದಲ್ಲಿ ಯಾವತ್ತಿಗೂ ಕೂಡುಕುಟುಂಬಗಳು ಅಮಾಯಕ ಹೆಣ್ಣಿನ ವಿಚಾರದಲ್ಲಿ ಅಳವಡಿಸಿಕೊಂಡಿರುವ ಸಂಬಂಧಗಳ ಮಾನವೀಯ ನೆಲೆಯನ್ನು ಮೀರಿದ ನಿರ್ಲಕ್ಷ್ಯಕ್ಕೀಡು ಮಾಡುವಂಥ ತಣ್ಣನೆಯ ಕ್ರೌರ್ಯವನ್ನು ಬಿಂಬಿಸುತ್ತದೆ.

ಈ ಕಥೆಯಲ್ಲಿರುವಂಥ ಇನ್ನೊಂದು ಪಾತ್ರ ಕಮಲಾ ದುಡಿಯುವ ವರ್ಗದ ಹೆಣ್ಣಿನ ಪರಿಧಿಯೊಳಗಿನ ವರ್ತಮಾನದ ಬದುಕನ್ನು ಕಣ್ಮುಂದೆ ತರುತ್ತದೆ. ಇದರೊಂದಿಗೆ ಕಮಲಾಳಂಥದೇ ಬದುಕನ್ನು ನಿರ್ವಹಿಸುತ್ತಿರುವ ಕಥಾ ನಿರೂಪಕಿಯೂ ಸೇರಿ ಬದುಕೆಂದರೆ ಇಷ್ಟೇ. ಇನ್ನೇನು ಸಾಧ್ಯವೇ ಇಲ್ಲ ಎಂಬಂಥ ಹತಾಶೆಯೂ ಕೂಡ ತಟ್ಟದ ಹಾಗೆ ತಮ್ಮ ಮನಸ್ಸಿನ ಯಾವ ಭಾವವನ್ನೂ ಅದಕ್ಕೆ ಮೆತ್ತದೆ ವರ್ತಮಾನದ ಎಲ್ಲ ಕ್ಷಣವನ್ನೂ ಅದಿರುವ ಹಾಗೆಯೇ ಎದುರುಗೊಳ್ಳುವುದು ಇದೆಯಲ್ಲ... ಅದು ಈ ಸಂಕೋಲೆಯಿಂದ ದುಡಿಯುವ ವರ್ಗದ ಹೆಣ್ಣು ಮುಕ್ತವಾಗಿ ಬದುಕಲು ಸಾಧ್ಯವೇ ಇಲ್ಲ ಎಂಬ ಸತ್ಯವನ್ನು ಬಿಚ್ಚಿಡುತ್ತದೆ.

ಈ ಸಂಕಲನದ ಇನ್ನೊಂದು ಕಥೆ, 'ಒಂಟಿಗೆಜ್ಜೆ' ಆಧುನಿಕ ಸಮಾಜದಲ್ಲಿನ ಕೂಡು ಕುಟುಂಬಗಳಲ್ಲಿನ ಹಳೆಯ ಕಾಲದ ಸಾಂಪ್ರದಾಯಿಕ ಬದುಕನ್ನು ನಿರ್ವಹಿಸಿದ ಹೆಣ್ಣಿನ ಸಂಕಟಗಳ ಮೇಲೆ ಬೆಳಕು ಚೆಲ್ಲುತ್ತದೆ.

ಒಂದು ಸಂಸಾರ ಸುಖಕ್ಕಾಗಿ ತನ್ನ ದೈಹಿಕ ಸುಖವನ್ನೂ ಕಡೆಗಣಿಸಿ ಬದುಕಿಡೀ ಯಾತನೆಯನ್ನು ಅನುಭವಿಸಿದ ವಿನುಳ ತಾಯಿಯು ವಾಸ್ತವದಲ್ಲಿ ಸಾಂಪ್ರದಾಯಿಕವಾದ ಕೂಡುಕುಟುಂಬದ ಹೆಣ್ಣುಮಗಳನ್ನು ಪ್ರತಿನಿಧಿಸುತ್ತಾಳೆ. ನೃತ್ಯ ಕಲಾವಿದೆಯಾದ ಆಕೆ ಮರಾಠಿ ಸಾಂಪ್ರದಾಯಿಕ ಕುಟುಂಬದ ಸೊಸೆಯಾಗಿ ಬಂದ ಮೇಲೆ ಅಖಂಡ ಹತ್ತುವರ್ಷ ಕುಟುಂಬದ ಸದಸ್ಯರಿಂದ ಕುಣಿಯೋಳು ಅಂತ ಹೇಳಿಸಿಕೊಂಡು ನೋವು, ಯಾತನೆ, ಅವಮಾನಗಳನ್ನು ನುಂಗಿಕೊಂಡು ಬದುಕು ಸವೆಸುತ್ತಾಳೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಆಧುನಿಕ ಕಾಲದ, ನಗರದ ಒತ್ತಡದ ಬದುಕನ್ನು ನಿರ್ವಹಿಸುತ್ತಿದ್ದ ವಿನು ಎಲ್ಲ ರೀತಿಯಿಂದಲೂ ತನಗೆ ಹೊಂದಿಕೊಂಡು ಬಾಳುವ, ತನ್ನನ್ನು ಮತ್ತೇರಿಸುವಂತೆ ಮಾಡಿ ದೈಹಿಕ ಸುಖ ಕೊಡುವ ಗಂಡ ಗಿರಿಯನ್ನು ಹೊಂದಿದ್ದರೂ ಒಳಗೊಳಗೆ ಆಕೆ ಮಾರ್ಕನ ಮೇಲೆ ಮನಸ್ಸು ಮಾಡುವುದು ನಗರ ಜೀವನದ ಒತ್ತಡದಲ್ಲಿ ಉಂಟಾಗುವ ತಾತ್ಕಾಲಿಕ ಸಂಬಂಧಗಳಾಗಿದೆ. ಆಧುನಿಕ ಬದುಕಿಗೆ ಒಗ್ಗಿ ಹೋಗಿರುವ ಹೆಣ್ಣನ್ನು ಕಾಡುತ್ತಿರುವ ಸುಖದ ಸ್ವರೂಪವೇ ಅಂಥದ್ದು ಎಂದೆನಿಸುತ್ತದೆ.

'ಮುತ್ತಿನ ಬುಗುಡಿ' ಕಥೆ ಈ ವ್ಯವಸ್ಥೆಯಲ್ಲಿ ಜಾರಿಯಲ್ಲಿರುವ ಪುರುಷಪ್ರಧಾನವಾದ ಕುಟುಂಬಗಳಲ್ಲಿ ಮಹಿಳೆಯರ ಹಕ್ಕನ್ನು ಹತ್ತಿಕ್ಕುವ ಬಗೆಯನ್ನು ವಿವರಿಸುತ್ತದೆ. ಇಡಿಯಾಗಿ ಕಥೆ ಹೆಣ್ಣು ತನ್ನದೇ ಒಂದು ಛಾಪನ್ನು ಬಿತ್ತುವುದು, ಕಾರಣವೇ ಇಲ್ಲದೇ ಬರಿಯ ಸಂಬಂಧವನ್ನು ಸಹಜವಾಗಿ ಬೆಳೆಸಿಕೊಳ್ಳುವುದನ್ನು ಗಂಡು ಯಾವತ್ತಿಗೂ ಕೂಡ ಸಹಿಸಲಾರ ಎಂಬ ಕ್ರೂರಸತ್ಯವನ್ನು ಅನಾವರಣ ಮಾಡುತ್ತದೆ.

ಇನ್ನೊಂದು 'ನಗು ಕಳೆಯದಿರಲಿ' ಕಥೆಯಲ್ಲಿ ಮೂರು ಸ್ತ್ರೀ ಪಾತ್ರ(ವಿಂದ್ಯಾ, ಲತಾ ಮತ್ತು ನಿರೂಪಕಿ)ಗಳು ಮೇಲ್ನೋಟಕ್ಕೆ ಒಂದೇ ರೀತಿಯ ಬದುಕನ್ನು ನಿರ್ವಹಿಸಿದರಂತೆ ಕಂಡರೂ ಅದರ ಆಳದಲ್ಲಿ ಉಂಟಾಗಿರಬಹುದಾದ ಆ ಪಾತ್ರಗಳ ಬೇರೆಯದೇ ಭಿನ್ನಭಿನ್ನ ಅನುಭವಗಳನ್ನು ಗುರುತಿಸುತ್ತದೆ. ಏಕಾಂಗಿ ಬದುಕನ್ನು ನಿಭಾಯಿಸುತ್ತಿರುವ ವಿಂದ್ಯಾ, ಗಂಡ–ಮಗಳು ಇದ್ದೂ ಅಸಹನೀಯ ಬದುಕನ್ನು ಬಾಳಿ, ಕೊನೆಗೆ ಸತ್ತುಹೋದ ಲತಾಳ ತಂಗಿ ಮತ್ತು ಗಂಡ ಶ್ರೀಧರ ಹಾಗೂ ಮಗನೊಂದಿಗೆ ಸಂತೃಪ್ತಿಯ ಬಾಳನ್ನು ಬಾಳುತ್ತಿರುವ ವಿಂದ್ಯಾಳ ಗೆಳತಿ(ನಿರೂಪಕಿ) ಈ ಮೂರು ಪಾತ್ರಗಳು ಆಧುನಿಕ ಜಗತ್ತಿನಲ್ಲಿ ಹೆಣ್ಣು ನಿರ್ವಹಿಸುತ್ತಿರುವ ಬದುಕಿನಲ್ಲಿರಬಹುದಾದ ವ್ಯತ್ಯಾಸಗಳನ್ನು ತೆರೆದಿಡುತ್ತದೆ.

'ಮೌನಕ್ಷಣಗಳು' ಕಥೆ ಲೋಕದ ದೃಷ್ಟಿಯಲ್ಲಿ ಗಂಡಿನ ಜೀವಸ್ಪರ್ಶ ಸುಖ ಬೇಕೆಂಬ ತನ್ನ ಆತ್ಮದಾಳದ ಅದಮ್ಯ ಆಕಾಂಕ್ಷೆಯನ್ನು ಮೆಟ್ಟಿ ಬದುಕುತ್ತಿರುವ, ವಯಸ್ಸಿಗೆ ಬಂದ ಮಗಳಿಗೂ, ಮಗನಿಗೂ ತಾಯಿಯಾಗಿರುವ ಹೆಣ್ಣಿಗೂ ಸಹ ಒಂದು ಸಹಜವಾದ ವೈಯಕ್ತಿಕ ಕ್ಷಣವನ್ನು ಅನುಭವಿಸುವ ಸ್ವಾತಂತ್ರ್ಯವಿರುವುದು ಅಸಹಜವೇನಲ್ಲ ಎಂಬುದನ್ನು ಮಾನವೀಯ ನೆಲೆಯಲ್ಲಿ ಶೋಧಿಸುತ್ತದೆ.

ಸುಮಂಗಲಾ ಅವರ ಮತ್ತೊಂದು ಕಥಾಸಂಕಲನ 'ಹನ್ನೊಂದನೇ ಅಡ್ಡರಸ್ತೆ'ಯಲ್ಲಿನ 'ಸ್ಕೂಬಿ' ಕಥೆ ನಾಯಿಯೊಂದರ ಮೂಲಕ ಅಪಾರ್ಟ್‌ಮೆಂಟ್ ಸಂಸ್ಕೃತಿ ಗೊತ್ತಿರದ ಚಾಳಿನಲ್ಲಿ ವಾಸಿಸುತ್ತಿದ್ದ. ಆ ಮೂಲಕ ಅಲ್ಲಿನ ಸಂಸ್ಕೃತಿ, ಸಂಪ್ರದಾಯ, ಸಂಬಂಧಗಳ ಕುರಿತಾದ ಖಚಿತ ನಿಲುವುಗಳನ್ನು ಹೊಂದಿದ್ದ ಲಲಿತಮ್ಮ ಎಂಬ ಹೆಣ್ಣಿನ ಆಂತರಿಕ ವ್ಯಕ್ತಿತ್ವವನ್ನು ತೆರೆದಿಡುತ್ತದೆ. ನಾಯಿಯ ಯಜಮಾನ ಗಿರಿಧರನು ಅದನ್ನು ಕಠಿಣವಾಗಿ ತರಬೇತಿಗೊಳಿಸುವ ಕ್ರಿಯೆಯೊಳಗೆ ತೊಡಗಿದಾಗ ಕೆಳಗಿನ ಮನೆಯಲ್ಲಿ ಬಾಡಿಗೆ ಇರುವ ಲಲಿತಮ್ಮ ವಿರೋಧಿಸುವುದಕ್ಕೆ ಆಕೆ ಬೆಳೆದು ಬಂದ ಪರಿಸರವೇ ಕಾರಣವಾಗುತ್ತದೆ. ಆತ ಎಲ್ಲೆಂದರಲ್ಲಿ ಹೊಲಸು ಮಾಡುವ ನಾಯಿಗೆ ಬೆಲ್ಟ್‌ನಿಂದ ಹೊಡೆಯುವುದನ್ನು ಕಂಡು ತಳಮಳಕ್ಕೀಡಾಗುವ ಲಲಿತಮ್ಮ ಅದೇ ಬೆಲ್ಟ್‌ನಿಂದ ಅವನಿಗೆ ಒಂದೇಟು ಹಾಕುವುದಕ್ಕೆ ಬಾಲ್ಯದಲ್ಲಿ ಆಕೆ ಕಂಡ ಇಂಥದೇ ಅತಿಯಾದ ಪ್ರೀತಿಯ ಮಧ್ಯೆಯೇ ಕಟ್ಟಳೆಗೊಳಪಟ್ಟು ಬದುಕುವುದರ ಹಿಂದಿನ ಹಿಂಸೆಯನ್ನು ಕಣ್ಣಾರೆ ಕಂಡಿರುವುದೇ ಆಗಿದೆ. ಇಂಥ ಘಟನೆಯಿಂದಾಗಿಯೇ ರೂಪಿತವಾಗಿರುವ ಲಲಿತಮ್ಮನ ವ್ಯಕ್ತಿತ್ವ ಇಡಿಯಾಗಿ ಬಂದು ಚಾಳಿನಲ್ಲಿ ಬದುಕುತ್ತಿರುವ ಕುಟುಂಬಗಳಲ್ಲಿನ ಹೆಣ್ಣಿನ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ.

ಸುಮಂಗಲಾ ಅವರ ಕಥೆಗಳು ಸಾಮಾಜಿಕ ಪ್ರಜ್ಞೆಯ ನೆಲೆಯಲ್ಲಿ ಬೇರೆಬೇರೆ ಸ್ತರದ ಕುಟುಂಬಗಳಲ್ಲಿ ಹೆಣ್ಣು ನಿರ್ವಹಿಸುತ್ತಿರುವ ಬದುಕನ್ನು ಮನುಷ್ಯತ್ವದ ನೆಲೆಯ ಮೇಲೆ ಅನಾವರಣ ಮಾಡುವುದರ ಮೂಲಕ ಹೆಣ್ಣಿನ ಜಗತ್ತನ್ನು ಭಿನ್ನವಾಗಿ ಗ್ರಹಿಸುವಂತೆಯೂ, ಆ ಜಗತ್ತನ್ನು ಒಳಹೊಕ್ಕು ನೋಡುವಂತೆಯೂ ಮಾಡುತ್ತದೆ.

೫.೪. ಸಂಧ್ಯಾ ಹೊನಗುಂಟಿಕರ್

೯೦ರ ದಶಕದ ನಂತರ ಕಥಾಸಾಹಿತ್ಯ ತನ್ನದೇ ಆದ ತಾತ್ವಿಕ ಚೌಕಟ್ಟು ಒಳಗೊಂಡು ಬೆಳವಣಿಗೆ ಹೊಂದಿದೆ. ಈ ಕಾಲಘಟ್ಟದ ಸಣ್ಣಕಥಾ ಸಾಹಿತ್ಯದ ರಚನೆಯಲ್ಲಿ ಮಹಿಳೆಯರು ಹಿಂದೆಂದಿಗಿಂತಲೂ ಹೆಚ್ಚು ತೊಡಗಿಸಿಕೊಂಡಿರುವುದು ವಿಶೇಷವಾಗಿದೆ. ಸಾಮಾಜಿಕ ಸಮಸ್ಯೆಗಳಾದ ಬಾಲ್ಯವಿವಾಹ, ವರದಕ್ಷಿಣೆ ಪಿಡುಗು, ವಿಧವಾಸಮಸ್ಯೆ, ದೇವದಾಸಿ ಪದ್ಧತಿ, ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಬದುಕಿನ ಸಂಧಿಕಾಲದಲ್ಲಿರುವ ವೃದ್ಧೆಯರ ತೊಳಲಾಟಗಳು,

ಸ್ತ್ರೀಯರಿಗೆ ನೀಡಿರುವ ದ್ವಿತೀಯ ದರ್ಜೆಯ ಸ್ಥಾನಮಾನ, ಶಿಕ್ಷಣದಿಂದ ವಂಚಿತವಾಗಿರುವ ಸ್ತ್ರೀ, ಸಂಪ್ರದಾಯದ ಹೆಸರಲ್ಲಿ ಹೆಣ್ಣಿನ ಮೇಲೆ ವಿಧಿಸಿರುವ ನಿರ್ಬಂಧಗಳು, ಜೊತೆಗೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹೆಣ್ಣನ್ನು ದಮನಗೊಳಿಸುವ, ಅವಕಾಶಗಳಿಂದ ವಂಚಿತಗೊಳಿಸುತ್ತಿರುವ ಅನೇಕ ಸಂಗತಿಗಳನ್ನು ಕುರಿತು ಮಹಿಳಾ ಕಥೆಗಾರ್ತಿಯರು ಪ್ರತಿಭಟಿಸುವ ಮತ್ತು ಪರಿಹಾರಗಳನ್ನು ಸೂಚಿಸುವ ನೆಲೆಯಲ್ಲಿ ಕಥೆಗಳನ್ನು ರಚನೆ ಮಾಡಿದ್ದಾರೆ. ಸಂಧ್ಯಾ ಹೊನಗುಂಟಿಕರ್. 'ಹರಿದ ಹಾಸಿಗೆ ಹಂಬಲ', 'ಹಾರಲಾಗದ ನೊಣ' ಇವರ ಕಥಾಸಂಕಲನಗಳಾಗಿವೆ. ಸಂಧ್ಯಾ ಹೊನಗುಂಟಿಕರ್ ಅವರು 'ಹಾರಲಾಗದ ನೊಣ' ಎಂಬ ಕಥಾಸಂಕಲನವನ್ನು ಪ್ರಕಟಿಸಿದ್ದಾರೆ. ಕಥೆಗಾರ್ತಿಯು ತಮ್ಮ ಸುತ್ತಮುತ್ತ ಕಾಣುವ ಘಟನೆ, ಸನ್ನಿವೇಶಗಳನ್ನು ವಸ್ತುವಾಗಿಟ್ಟುಕೊಂಡು ಕಥೆಗಳನ್ನು ಬರೆಯಲು ಪ್ರಯತ್ನಿಸಿದ್ದಾರೆ.

ಉಭಯಲಿಂಗಿಗಳ ಲಿಂಗಬೇಧವನ್ನು ನೋಡುವ ಹೊಸ ದೃಷ್ಟಿಕೋನವೊಂದನ್ನು ನೀಡುವ 'ಕ್ಯಾಕ್ಟಸ್ ಮತ್ತು ಒಂದು ರೂಪಾಂತರ', ಆಧುನಿಕ ಬದುಕಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ವೃದ್ಧೆಯೊಬ್ಬಳ ಉದಾರ ಮನಸ್ಥಿತಿಯನ್ನು ಹೇಳುವ 'ಕಪ್ಪೆಯಂತಲ್ಲದವರು', ಪುರುಷಕೇಂದ್ರಿತ ಸಮಾಜದ ಸ್ತ್ರೀಶೋಷಣೆಯುನ್ನು ವಿರೋಧಿಸುವ ಹೆಣ್ಣಿನ ಮೌನಪ್ರತಿಭಟನೆಯಾಗಿರುವ 'ಸಾಗುವಾನಿ ಬಾಗಿಲು', ಸ್ತ್ರೀಯೊಬ್ಬಳ ಭವಿಷ್ಯದ ಕನಸನ್ನು ಕಟ್ಟಿಕೊಡುವ 'ಪಾಯಲಿಯಾ ಝುನಕಾರೆ', ಮನುಷ್ಯನು ತನಗರಿವಿಲ್ಲದಂತೆ ಹಾಕಿಕೊಳ್ಳುವ ಪರತಂತ್ರ ಸಂಕೋಲೆಗಳು ಮತ್ತು ಮನುಷ್ಯನ ಪರಾವಲಂಬಿ ಬದುಕಿನ ದುರಂತವನ್ನು ಹೇಳುವ 'ಹಾರಲಾಗದ ನೊಣ', ಆಸ್ಪತ್ರೆಗಳೆಂಬ ಸುಲಿಗೆಯ ಕೇಂದ್ರಗಳ ಚಿತ್ರಣ ನೀಡುವ 'ಬಾರಾ ನಂಬರ್', ಮನುಷ್ಯನ ಮಹತ್ವಾಕಾಂಕ್ಷೆಯಾದ ವಿಜ್ಞಾನದ ಅನ್ವೇಷಣೆಗಳು ಉಂಟುಮಾಡುವ ದುರಂತದ ಸಾಧ್ಯತೆಯನ್ನು ಸೂಕ್ಷ್ಮವಾಗಿ ತಿಳಿಸುವ 'ಗೆಲಿಲಾರ್ಯ', ವೃದ್ಧರ ಬದುಕಿನ ತಲ್ಲಣಗಳು ಮತ್ತು ಆಧುನಿಕ ವಿದ್ಯಾವಂತವರ್ಗದ ನೈತಿಕ ಅಧಃಪತನವನ್ನು ಸಾರುವ 'ಹಾಗೊಂದು ಚುಕ್ಕಿ, ಹೀಗೊಂದು ಚುಕ್ಕಿ', ಸ್ವಾವಲಂಬಿ ಹೆಣ್ಣಿನ ಜೀವನಗಾಥೆಯನ್ನು ಅನಾವರಣಗೊಳಿಸುವ 'ಅಪೂರ್ಣ', ಬಾಲಕಾರ್ಮಿಕ ಪದ್ಧತಿಯ ವಸ್ತುವನ್ನು ಒಳಗೊಂಡ 'ಅಪರಾಧಿ ನಾನಲ್ಲ' ಹೀಗೆ ಪ್ರತಿಯೊಂದು ಕಥೆಯ ವಸ್ತು ಭಿನ್ನ ಮತ್ತು ಅವುಗಳ ಆಶಯವು ಮೌಲ್ಯಯುತವಾದದ್ದು. ಇದು ಕಥೆಗಾರ್ತಿಯ ಸೂಕ್ಷ್ಮ ಗ್ರಹಿಕೆಗೆ ಹಿಡಿದ ಕನ್ನಡಿ ಎಂದೇ ಹೇಳಬಹುದು.

ಈ ಕತೆಗಳನ್ನು ಸ್ತ್ರೀಪಾತ್ರಗಳ ಕೇಂದ್ರವಾಗಿಟ್ಟುಕೊಂಡು ಗ್ರಹಿಸಬೇಕಾದ ಸಂದರ್ಭದಲ್ಲಿ ಇಲ್ಲಿ ಬರುವ ಸ್ತ್ರೀ ಪಾತ್ರಗಳೆಲ್ಲಾ ಕುಟುಂಬದ ಹಿತಕ್ಕಾಗಿ ಶ್ರಮಿಸುವ, ಅದಕ್ಕಾಗಿ ತಮ್ಮ ಹಿತಾಸಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುವ, ಪತಿಯ ಆಜ್ಞಾಪಾಲಿಕೆಯಾದ ಸದ್ಗೃಹಿಣಿಯ ಪಾತ್ರಗಳು ಒಂದು ಮುಖವಾದರೆ, ಪ್ರತಿಯೊಂದನ್ನು ಆಲೋಚನೆಯ ಒರೆಗೆ ಹಚ್ಚುವ,

ಸರಿತಪ್ಪುಗಳನ್ನು ಅವಲೋಕಿಸುವ, ಹೆಣ್ಣಿಗೂ ಸಹಾ ಆಯ್ಕೆಯ ಸ್ವಾತಂತ್ರ್ಯವಿದೆ. ತನ್ನ ಬದುಕಿನ ನಿರ್ಧಾರಗಳನ್ನು ಕೈಗೊಳ್ಳುವ ಅಧಿಕಾರವಿದೆ ಎಂಬುದನ್ನು ಬಲವಾಗಿ ಪ್ರತಿಪಾದಿಸುವ ಸ್ತ್ರೀಪಾತ್ರಗಳ ಇನ್ನೊಂದು ಮುಖ.

'ಕ್ಯಾಕ್ಟಸ್ ಮತ್ತು ಒಂದು ರೂಪಾಂತರ' ಕಥೆಯಲ್ಲಿ ಭಾರತಿ ಎಂಬ ಪಾತ್ರದ ಮೂಲಕವೇ ಕಥೆಯು ನಿರೂಪಣೆಗೊಳ್ಳುತ್ತದೆ. 'ಕ್ಯಾಕ್ಟಸ್' ಎಂಬುದು ಒಂದು ಪ್ರತಿಮೆಯಾಗಿ, ಸಂಕೇತವಾಗಿ ಕಾಣಿಸಿಕೊಂಡಿದೆ. ಭಾರತಿ ತನ್ನ ಅಕ್ಕನ ಮನೆಯ ನೆರೆಮನೆಯ ಹುಡುಗ ಸುನೀಲ, ಸುನೀತನಾಗಿ ಲಿಂಗಪರಿವರ್ತನೆ ಹೊಂದಿದ ಸಂಗತಿಯನ್ನು ಎಲೆಗಳೇ ಕಾಂಡವಾಗಿ ರೂಪಾಂತರ ಹೊಂದಿದ ಕ್ಯಾಕ್ಟಸ್‌ನೊಂದಿಗೆ ಸಮೀಕರಿಸಿ ನೋಡುತ್ತಾಳೆ. ಭಾರತಿ ತಾನು ಕಂಡ ಉಭಯಲಿಂಗಿಯ ಬದುಕಿನ ಚಿತ್ರಣವನ್ನು ನೀಡುವ ಮೂಲಕ ಅಂತಹವರಿಗೂ ಪ್ರೀತಿಯ ಅಗತ್ಯವೆಂಬುದು ಇದೆ ಎಂದು ಪ್ರತಿಪಾದಿಸುತ್ತಾಳೆ. ಇದು ಕೇವಲ ಪಾತ್ರದ ಆಶಯ ಮಾತ್ರವಾಗಿರದೆ ಕಥೆಗಾರ್ತಿಯ ಆಶಯವೂ ಆಗಿದೆ.

'ಕಪ್ಪೆಯಂತಲ್ಲದವರು' ಕಥೆಯು ಮನುಷ್ಯನು ಪೂರ್ವಗ್ರಹಗಳಿಂದ ಬಂಧಮುಕ್ತನಾಗುವ ಸಾಧ್ಯತೆಯೊಂದನ್ನು ಹೇಳುತ್ತದೆ. ಇಲ್ಲಿ ಅಜ್ಜಿ, ಆಕೆಯ ಮಗಳು ಚಿತ್ರಾ, ಮೊಮ್ಮಗಳು ಜ್ಯೋತ್ಸ್ನಾ ಎಂಬ ಮೂರು ತಲೆಮಾರುಗಳ ಸ್ತ್ರೀ ಪಾತ್ರಗಳು ಬರುತ್ತವೆ. ವೈನಿ(ಅಜ್ಜಿ) ಸೋಫಾ ಮೇಲೆ ಕೂತರೆ ಮಡಿ ಹಾಳಾಗುತ್ತದೆ, ಸ್ವೆಟರ್ ಧರಿಸುವುದೇ ತಪ್ಪು ಎಂಬ ಸಂಪ್ರದಾಯವಾದಿ ಮಗಳು ಸಂಪ್ರದಾಯ ಮತ್ತು ಆಧುನಿಕತೆಯ ಸೇತುವೆಯವಂತೆ ಕಂಡುಬರುತ್ತಾಳೆ. ಸಂಜೆಯ ಒಳಗೆ ಹೆಣ್ಣು ಮನೆ ಸೇರಬೇಕೆಂಬ ನಿರ್ಬಂಧವಿದ್ದ ಕಾಲದಿಂದ ದೂರಾಗಿ ರಾತ್ರಿ ವೇಳೆಯಲ್ಲೂ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ದುಡಿಯುವ, ಎಲ್ಲವನ್ನೂ ಚಿಂತನೆಯ ಮೂಲಕ ನೋಡುವ ಹೆಣ್ಣಾಗಿ ಜ್ಯೋತ್ಸ್ನಾ ಕಾಣುತ್ತಾಳೆ. ಕೊನೆಗೆ ಬದುಕಿನ ವಾಸ್ತವಕ್ಕೆ ಹೊಂದಿಕೊಳ್ಳುವ ಪಾತ್ರವಾಗಿ ವೈನಿಯ ಪಾತ್ರ ಕಂಡುಬರುತ್ತದೆ.

'ಸಾಗುವಾನಿ ಬಾಗಿಲು' ಪುರುಷಕೇಂದ್ರಿತ ಸಮಾಜ ಹೆಣ್ಣಿಗೆ ನೀಡುವ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಹೇಳುವ ಕಥೆಯಾಗಿದೆ. ಇಲ್ಲಿ ಬರುವ ಲಲಿತ ದಿಟ್ಟ ಹೆಣ್ಣು. ಮಗು ಗಂಡಾಗಲಿ, ಹೆಣ್ಣಾಗಲಿ ಅದಕ್ಕೆ ಜನ್ಮ ನೀಡುವುದು ತನ್ನ ಹಕ್ಕೆಂದು ದೃಢವಾಗಿ ನಂಬುತ್ತಾಳೆ. ಇದಕ್ಕಾಗಿ ಗಂಡ ಮತ್ತು ಕುಟುಂಬದವರನ್ನು ಕೂಡಾ ವಿರೋಧಿಸುತ್ತಾಳೆ. ಗರ್ಭಪರೀಕ್ಷೆಯನ್ನು ನಿರಾಕರಿಸುವ ಮತ್ತು ತನ್ನ ನಾದಿನಿ ಕರೆತಂದ ಸ್ವಾಮಿಗಳ ಎದುರಿಗೆ ಬರಲು ಸಹ ನಿರಾಕರಿಸುತ್ತಾಳೆ. 'ಸಾಗುವಾನಿ ಬಾಗಿಲು' ಲಲಿತಾಳ ದೃಢನಿರ್ಧಾರದ ಸಂಕೇತವಾಗಿದೆ.

'ಪಾಯಲಿನಾ ಝುನಕಾರೆ' ಕಥೆ ಹೆಣ್ಣಿಗೆ ತನ್ನ ಬದುಕಿನ ಗುರಿಯನ್ನು ನಿರ್ಧರಿಸುವಲ್ಲಿ ಎದುರಾಗುವ ಸಮಸ್ಯೆಗಳನ್ನು ಕುರಿತು ಹೇಳುತ್ತದೆ. ಇಲ್ಲಿ ಕಿನ್ನರಿ ಎಂಬ ಹುಡುಗಿಯೊಬ್ಬಳ ನೃತ್ಯಗಾರ್ತಿಯಾಗಬೇಕೆಂಬ ಆಸೆಗೆ ತಂದೆ-ತಾಯಿಗಳಿಂದ ಉಂಟಾದ ಪ್ರತಿಕ್ರಿಯೆಗಳು ಸಹ ಅವಳಿಗೆ ವಿರೋಧವಾದವುಗಳೇ ಆದರೂ ಸಹ ದೊಡ್ಡ ನೃತ್ಯಗಾರ್ತಿಯಾಗಬೇಕೆಂಬ ಅವಳ ಕನಸನ್ನು ಆಕೆ ಕೈಬಿಡುವುದಿಲ್ಲ. ಕಿನ್ನರಿ ತನ್ನ ಬದುಕನ್ನು ತಾನು ಆರಿಸಿಕೊಳ್ಳುವ ಸ್ವತಂತ್ರ ಆಲೋಚನೆ ಹೊಂದಿರುವ ಹೆಣ್ಣಾಗಿದ್ದಾಳೆ.

'ಬಾರಾ ನಂಬರ್' ಕಥೆಯಲ್ಲಿ ಪ್ರಭಾ ಎಂಬ ಪಾತ್ರದ ಮೂಲಕ ಜನರನ್ನು ಶೋಷಿಸುವ ಆಸ್ಪತ್ರೆಗಳ ನಿಜರೂಪವನ್ನು ಅನಾವರಣಗೊಳಿಸಿದ್ದಾರೆ.

'ಅಪೂರ್ಣ' ಎಂಬ ಕಥೆಯ ನಾಯಕಿ ಅನ್ನಪೂರ್ಣ. ಅದು ವಡ್ಡರಗಲ್ಲಿಯ ಜನರ ಬಾಯಲ್ಲಿ ಸವೆದು ಅಂಪೂರ್ಣ ಎಂದಾಗಿತ್ತು. ಅಂಪೂರ್ಣ ಚಿಕ್ಕಂದಿನಿಂದಲೂ ತನ್ನ ತಾಯಿಯೊಂದಿಗೆ ಮನೆಗೆಲಸಕ್ಕೆ ಹೋಗುತ್ತಿದ್ದ ಅನುಭವವೇ ಅವಳಿಗೆ ಕೆಲಸದಲ್ಲಿ ನಾಜೂಕುತನ ತಂದುಕೊಟ್ಟಿತ್ತು. ಅವಳ ಕೆಲಸದ ಸೂಕ್ಷ್ಮತೆ, ಅಚ್ಚುಕಟ್ಟುತನವೇ ಜನರ ಮನಸ್ಸಿನಲ್ಲಿ ಒಂದು ಸ್ಥಾನ ಕಲ್ಪಿಸಿಕೊಟ್ಟಿತು. ಇದು ಅನ್ನಪೂರ್ಣ ತನ್ನ ವೃತ್ತಿಯಲ್ಲಿ ಬೆಳೆಯಲು ಕಾರಣವಾಯಿತು. ಜೊತೆಗೆ ಸಿದ್ರಾಜನ ಒಡನಾಟ ಅವಳ ಬಾಳಿಗೆ ಭರವಸೆಯಾಗಿ ಬಂದಿತ್ತು. ಮನೋಹರ ಇವಳ ಮೇಲೆ ಕಣ್ಣು ಹಾಕಿದ್ದು ಸಹ ಉಳ್ಳವರ ದೌರ್ಜನ್ಯದ ಪ್ರತೀಕವೇ ಆಗಿತ್ತು.

'ಅಪರಾಧಿ ನಾನಲ್ಲ' ಎಂಬ ಕಥೆಯಲ್ಲಿ 'ರಾಜಿ' ಎಂಬ ಬಾಲಕಿಯ ದುಡಿತದ ಚಿತ್ರಣವಿದೆ. ಸಣ್ಣ ವಯಸ್ಸಿನಲ್ಲಿಯೇ ಪರರ ಮನೆಯಲ್ಲಿ ಮನೆಗೆಲಸಕ್ಕೆಂದು ಹೋಗುತ್ತಿದ್ದ ರಾಜಿಯ ಪಾತ್ರದ ಮೂಲಕ ಸಣ್ಣಮಕ್ಕಳಲ್ಲಿರುವ ಸಹಜ ಆಸೆ-ಆಕಾಂಕ್ಷೆಗಳನ್ನು ಕಟ್ಟಿಕೊಡುವುದರ ಜೊತೆಗೆ ಅನಾರೋಗ್ಯಕ್ಕೆ ಒಳಗಾದ ರಾಜಿಯ ಸ್ಥಿತಿ ಮನೆಯ ಮಾಲೀಕೆಗೆ 'ಅಪರಾಧಿ ಪ್ರಜ್ಞೆ' ಕಾಡುವಂತೆ ಮಾಡುತ್ತದೆ.

ಒಟ್ಟಾರೆಯಾಗಿ ಈ ಎಲ್ಲ ಕಥೆಗಳನ್ನು ಗಮನಿಸಿದಾಗ ಹೆಣ್ಣನ್ನು ಚಿತ್ರಿಸಿರುವ ರೀತಿಯು ವಿಶಿಷ್ಟವಾಗಿ ಕಂಡುಬರುತ್ತದೆ. ಕಥೆಗಳಲ್ಲಿ ಬಳಸಿರುವ ಸ್ತ್ರೀ ಬದುಕನ್ನು ಅನಾವರಣಗೊಳಿಸುತ್ತದೆ. ಭಾಷೆಯು ರೂಪಗೊಂಡಿದೆ. ಆಯಾ ಕುಟುಂಬ ವೃತ್ತಿಯ ಹಿನ್ನೆಲೆಯಲ್ಲಿ ಮತ್ತು ಪ್ರಾದೇಶಿಕತೆ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

೫.೫. ನೀಲಾ ಕೆ.

'ಜ್ಯೋತಿಯೊಳಗಣ ಕಾಂತಿ' ಕೆ.ನೀಲಾ ಕಥಾಸಂಕಲನವಾಗಿದೆ. ಕೆ.ನೀಲಾ ಅವರು ಕನ್ನಡದ ಸ್ತ್ರೀವಾದಿ ಚಿಂತಕಿಯಾಗಿದ್ದು ತಮ್ಮದೇ ತಾತ್ವಿಕ ನೆಲೆಗಟ್ಟಿನ ಮೇಲೆ ಸಾಹಿತ್ಯ

ನಿರ್ಮಾಣ ಕಾರ್ಯದಲ್ಲಿ ತೊಡಗಿದ ಕಥೆಗಾರ್ತಿಯಾಗಿದ್ದಾರೆ. ಪ್ರತಿಯೊಂದು ಕಥೆಯು ಕಥೆಗಾರ್ತಿಯ ಅನುಭವದಿಂದ ಹೊರಬಂದವುಗಳಾಗಿವೆ. ಈ ಎಲ್ಲ ಕಥೆಗಳನ್ನು ಲಿಂಗಪರಿಕಲ್ಪನೆ ಮತ್ತು ಜಾತಿಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ. ಈ ಕಥಾಸಂಕಲನದಲ್ಲಿ ವಚನಕಾರರ, ತತ್ವಪದಕಾರರ ದಟ್ಟವಾದ ಪ್ರಭಾವವನ್ನು ಕಾಣುತ್ತೇವೆ. ಕಥೆಗಳಿಗೆ ನೀಡಿರುವ ಶೀರ್ಷಿಕೆಗಳಿಂದ ವಚನಸಾಹಿತ್ಯದ ದಟ್ಟ ಪ್ರಭಾವ ನೀಲಾ ಅವರ ಮೇಲೆ ಉಂಟಾಗಿರುವುದನ್ನು ಗುರುತಿಸಬಹುದು.

ಕೆ.ನೀಲಾ ಅವರು ಸ್ತ್ರೀಯರ ಏಳಿಗೆಗಾಗಿ ಮತ್ತು ಸ್ತ್ರೀಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಹೋರಾಟಗಳನ್ನು ನಡೆಸುವ ಹೋರಾಟಗಾರ್ತಿ ಆಗಿರುವುದರಿಂದಲೇ ಅವರು ತಮ್ಮ ಅನುಭವಕ್ಕೆ ಬಂದ ಸಂಗತಿಗಳನ್ನು ತನ್ನ ಗೆಳತಿ ಮೀನಾಕ್ಷಿಗೆ ಬರೆಯುವ ಪತ್ರದಂತೆ ಕಥೆಗಳನ್ನು ನಿರೂಪಿಸಿರುವುದನ್ನು ಕಾಣಬಹುದಾಗಿದೆ.

ಎರಡು ಪ್ರಮುಖ ಕಥೆಗಳಾದ 'ಕೊಂದಹರುಳಿದರೆ' ಮತ್ತು 'ಜ್ಯೋತಿಯೊಳಗಣ ಕಾಂತಿ' ಕಥೆಗಳು ೧೯೪೭-೪೮ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಲು ನಡೆದ ಪರ ಮತ್ತು ವಿರೋಧದ ಹೋರಾಟವೇ ಇಲ್ಲಿ ವಸ್ತುವಾಗಿದೆ. ನಿಜಾಮಶಾಹಿ ಪರ ಮತ್ತು ಸ್ವತಂತ್ರ ಭಾರತದ ಪರ ನಡೆದ ಎರಡು ಗುಂಪುಗಳ ಸಂಘರ್ಷವನ್ನೇ ಈ ಕಥೆಗಳಲ್ಲಿ ಕಟ್ಟಿಕೊಡುತ್ತವೆ. ಇವುಗಳನ್ನು ಜಾತಿಕಲಹವೆಂದು ಗುರುತಿಸದೇ ರಾಜಪ್ರಭುತ್ವದ ಮತ್ತು ಪ್ರಜಾಪ್ರಭುತ್ವ ನಡುವೆ ನಡೆದ ಸಂಘರ್ಷವೆಂದೇ ಗ್ರಹಿಸಬೇಕು.

ಈ ಕಥೆಗಳನ್ನು ಹೊರತುಪಡಿಸಿ ಉಳಿದ ಕಥೆಗಳೆಲ್ಲ ಜಾತಿಯ ಹೆಸರಲ್ಲಿ ಮತ್ತು ಲಿಂಗಾಧಾರಿತವಾಗಿ ಹೆಣ್ಣಿನ ಮೇಲೆ ನಡೆದ ಶೋಷಣೆಯೇ ಕಥೆಗಳಿಗೆ ವಸ್ತುವಾಗಿರುವುದನ್ನು ನೋಡುತ್ತೇವೆ.

ಹೆಣ್ಣಿನ ಶೋಷಣೆ ಎಲ್ಲ ಕಾಲದಲ್ಲಿಯೂ ಎಲ್ಲ ವರ್ಗಗಳಲ್ಲಿಯೂ ನಿರಂತರವಾಗಿ ನಡೆಯುತ್ತದೆ ಎಂಬುದನ್ನು ಈ ಕತೆಗಳಲ್ಲಿ ಬರುವ ಅನೇಕ ಕಥೆಗಳ ಮೂಲಕ ಗುರುತಿಸಬಹುದು. ಶೋಷಣೆಗೆ ಕಾರಣಗಳು ಬೇರೆಬೇರೆಯಾದರೂ ಶೋಷಣೆಯ ಕೇಂದ್ರ ಮಾತ್ರ ಹೆಣ್ಣಾಗಿದ್ದಾಳೆ ಎಂಬುದು ಮಾತ್ರ ಇಲ್ಲಿ ಸ್ಪಷ್ಟವಾಗಿ ಮನವರಿಕೆಯಾಗುತ್ತದೆ.

'ಕರಾಳ ಸುತ್ತಹುತ್ತ' ಕಥೆಯಲ್ಲಿ ಮಹಿಳೆಯ ಶೋಷಣೆ ಎಂಬುದು ಭ್ರೂಣಾವಸ್ಥೆಯಲ್ಲಿಯೇ ಆರಂಭವಾಗುತ್ತದೆ. ಪತಿ ರಮೇಶನ 'ಒಂದೇ ಮಗು ಸಾಕು, ಅದು ಗಂಡು ಮಗುವೇ ಆಗಿರಬೇಕು' ಎಂಬ ಮಾತು ಪುರುಷಕೇಂದ್ರಿತ ಸಮಾಜದ ಮಾತಾಗಿದೆ. ಹೆಣ್ಣು ಮಗುವನ್ನು ಹೆರುವುದು ಹೆಣ್ಣಾಗಿ ಹುಟ್ಟುವುದೇ ತಪ್ಪು ಎಂಬಂತಹ ಸಮಾಜದ ದೃಷ್ಟಿಕೋನವನ್ನು ಹೇಳುತ್ತದೆ.

'ಹಸಿಯ ಬಿಸಿಲನೆ ಕೊಯ್ದು' ಎಂಬ ಕಥೆಯಲ್ಲಿ ಜಾತಿ ಆಧಾರಿತವಾಗಿ ನಡೆದ ಹೆಣ್ಣಿನ ಶೋಷಣೆಯ ಚಿತ್ರಣವಿದೆ. ದೇವದುರ್ಗ ಎಂಬ ಗ್ರಾಮದಲ್ಲಿ ಆದ ಅಂತರ್ಜಾತಿ ವಿವಾಹದಿಂದ ಕೆಳಜಾತಿಗೆ ಸೇರಿದ ಯುವಕನ ತಾಯಿಯನ್ನು ಒಡೆದು ವಿವಸ್ತ್ರಗೊಳಿಸಿ ಧ್ವಜದ ಕಂಬಕ್ಕೆ ಕಟ್ಟಿ ಥಳಿಸಿದ ಅಮಾನವೀಯ ಘಟನೆಯೊಂದರ ಸುತ್ತ ಹೆಣೆಯಲಾಗಿದೆ.

'ಕರುಳಿರಿಯುವ ನೋವು' ಕಥೆಯಲ್ಲಿ ಹೆಣ್ಣು ತಾಯಿಯಾಗಿ, ಹೆಂಡತಿಯಾಗಿ, ಹೆಣ್ಣು ಅನುಭವಿಸುವ ನೋವು ಎಂತಹದ್ದು ಎಂಬುದನ್ನು ಕಟ್ಟಿಕೊಟ್ಟಿದ್ದಾರೆ. ದುಶ್ಚಟಗಳಿಗೆ ಒಳಗಾದ ಗಂಡ, ಅದೇ ದಾರಿಯನ್ನು ತುಳಿಯುತ್ತಿರುವ ಮಗ ಇಂತಹ ಸಂದರ್ಭಗಳು ಹೆಣ್ಣಾದವಳಿಗೆ ಉಂಟುಮಾಡುವ ಮಾನಸಿಕ ಹಿಂಸೆಯನ್ನು ಕಥೆ ಕಟ್ಟಿಕೊಟ್ಟಿದೆ.

'ಕತ್ತಲೆಗೆ ಕಣ್ಣುಂಟೆ' ಎಂಬ ಕಥೆಯು ಸಹ ಅಂತರ್ಜಾತಿಯ ವಿವಾಹವೊಂದು ಕೆಳವರ್ಗದ ಕುಟುಂಬದ ಶೋಷಣೆಗೆ ಕಾರಣವಾದ ಸನ್ನಿವೇಶವನ್ನೇ ವಸ್ತುವಾಗಿಟ್ಟುಕೊಂಡು ಚಿತ್ರಿಸಲಾಗಿದೆ. ಈ ಕತೆಯಲ್ಲಿ ಹುಲಿಗೆಮ್ಮ ಮತ್ತು ಮರೆಪ್ಪ ದಂಪತಿಯನ್ನು ದಾರುಣವಾಗಿ ಥಳಿಸುತ್ತಾರೆ. ಅವರನ್ನು ಅವಮಾನಗೊಳಿಸುತ್ತಾರೆ. ಆದರೂ ಸಹ ತಮ್ಮ ಶೋಷಣೆಗೆ ಕಾರಣರಾದವರಿಗೆ ಶಿಕ್ಷೆ ಕೊಡಿಸಬೇಕೆಂಬ ಹುಲಿಗೆಮ್ಮನ ಛಲ ಇಲ್ಲಿ ಗಮನ ಸೆಳೆಯುತ್ತದೆ.

'ಬದುಕ ಬೆಳದಿಂಗಳ ಕದ್ದವರಾರು?' ಎಂಬ ಕಥೆಯಲ್ಲಿ ಕವಿತಾ ಎಂಬ ವಿದ್ಯಾವಂತೆ, ಧೈರ್ಯವಂತೆ ಹೆಣ್ಣೊಬ್ಬಳು ಕೊಲೆಯಾಗಿ ಹೋಗುತ್ತಾಳೆ. ಮದುವೆಯಾಗಿದ್ದರೂ ಕವಿತಾಳನ್ನು ಪ್ರೀತಿಸುವ ಲಿಂಗರಾಜ, ಮನೆತನದ ಗೌರವಕ್ಕಾಗಿ ಅವಳನ್ನು ಬಲವಂತದಿಂದ ವಿವಾಹ ಮಾಡುವ ತಂದೆ-ತಾಯಿ, ಗಂಡನ ಮನೆಯವರ ದೌರ್ಜನ್ಯ ಇವು ಕವಿತಾಳನ್ನು ಶೋಷಣೆಗೆ ಒಳಪಡಿಸುತ್ತವೆ. 'ಬದುಕ ಬೆಳದಿಂಗಳ ಕದ್ದವರಾರು?' ಎಂಬುದು ಇಲ್ಲಿ ಪ್ರಶ್ನೆಯಾಗಿದೆ.

'ಕಿಚ್ಚಿಲ್ಲದ ಬೇಗೆ' ಕಥೆಯು ಹೆಣ್ಣಿನ ಮನಸ್ಸಿನ ತೊಳಲಾಟವನ್ನು ಚಿತ್ರಿಸುವ ಕಥೆಯಾಗಿದೆ. ತಲೆತಲಾಂತರದಿಂದ ಹೆಣ್ಣು ಹೇಗೆ ಗಂಡಿನ ಸೂತ್ರದ ಗೊಂಬೆಯಾಗಿದ್ದಾಳೆ ಎಂಬುದನ್ನು ಈ ಕಥೆಯಲ್ಲಿ ಚಿತ್ರಿಸಲಾಗಿದೆ. ಅತಿ ಚಿಕ್ಕ ವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡ ಸಂಸಾರದ ನೊಗ ಹೊತ್ತ ಶಾರದ ಅಜ್ಜಿ ಕಮಲಾಬಾಯಿ, ಮದುವೆ ಎಂದರೆ ಏನು ಎಂಬುದು ತಿಳಿಯದ ವಯಸ್ಸಿನಲ್ಲಿಯೇ ಮಗುವಿಗೆ ತಾಯಾಗಿ ಗಂಡನ ಮನೆಯಲ್ಲಿ ಹಗಲು ರಾತ್ರಿ ದುಡಿದ ಶಾರದ, ಇವರು ಪುರುಷನಿರ್ಮಿತ ಸಮಾಜದ ಪ್ರತೀಕದಂತೆ ಕಂಡುಬಂದರೆ, 'ಎವ್ವಾ ನಂಗ್ ಮದುವಿ ಆಗಾಂವ್ ಯಾರ್ ಹೇಳು'(ಜ್ಯೋತಿಯೊಳಗಣ ಕಾಂತಿ, ಪು.೧೦೭) ಎಂದು ಪ್ರಶ್ನಿಸುವ ಕಮಲಾ ಸ್ವತಂತ್ರ ಆಲೋಚನೆ ಉಳ್ಳ ಹೆಣ್ಣಾಗಿ ಕಾಣುತ್ತಾಳೆ.

'ಅನ್ನಕ್ಕೆ ಅಡುವಾಯ್ತೆ ತನುವು' ಎಂಬ ಕಥೆಯಲ್ಲಿ ಕೇವಲ ಅನ್ನಕ್ಕಾಗಿ ತನ್ನ ದೇಹವನ್ನು ಮಾರಿಕೊಂಡು ಬದುಕುವ ಹೆಣ್ಣೊಬ್ಬಳ ದುರಂತ ಚಿತ್ರಣವಿದೆ.

'ಮನುಷ್ಯ ಬಳ್ಳಿಯ ಬಂಧದಲ್ಲಿ' ಎಂಬ ಕಥೆಯಲ್ಲಿ ಸಮಾಜದಲ್ಲಿ ಅತ್ಯಂತ ನಿಕೃಷ್ಟವಾಗಿ ಕಾಣಲಾಗುವ ತೃತೀಯ ಲಿಂಗಿ, ಮಂಗಳಮುಖಿ ಎಂದು ಕರೆಯಿಸಿಕೊಳ್ಳುವ ಹಿಜಡಾಗಳಿಗೂ ಸಹ ಇರುವ ಮಾನವೀಯ ಅಂತಃಕರಣವನ್ನು ಅನಾವರಣಗೊಳಿಸಲಾಗಿದೆ.

ಹೀಗೆ ಪ್ರತಿಯೊಂದು ಕಥೆಯು ಸಹ ಹೆಣ್ಣಿನ ಶೋಷಣೆಯ ವಿವಿಧ ಮುಖಗಳನ್ನು ಅನಾವರಣಗೊಳಿಸುತ್ತದೆ. ಜೊತೆಗೆ ಪುರುಷನಿಷ್ಠ ಸಮಾಜವನ್ನೇ ಪ್ರಶ್ನಿಸುವ ಕೆಲಸವನ್ನು ಕೆ.ನೀಲಾ ಅವರ ಕಥೆಗಳು ಮಾಡುತ್ತವೆ. ಕಥೆಗಾರ್ತಿ ಬಳಸುವ ಪ್ರಾದೇಶಿಕ ಭಾಷೆಯು ಸಹ ಕಥೆಗಳ ಮೆರುಗನ್ನು ಹೆಚ್ಚಿಸಿದೆ ಎಂದು ಹೇಳಬಹುದು.

'ಜ್ಯೋತಿಯೊಳಗಣ ಕಾಂತಿ' ಕಥಾಸಂಕಲನದ ಬಹುತೇಕ ಕಥೆಗಳಲ್ಲಿ ವಚನ ಸಾಹಿತ್ಯದ ಪ್ರಭಾವ ಮತ್ತು ತತ್ವಪದಕಾರರ ಪ್ರಭಾವ ಉಂಟಾಗಿರುವುದನ್ನು ಗುರುತಿಸಬಹುದು. ಹೀಗಾಗಿಯೇ ಕಥೆಗಳ ನಡುವೆ ತತ್ವಪದ, ವಚನದ ಸಾಲುಗಳನ್ನು ನೋಡಬಹುದು.

೧. ಚನ್ನೂರ ಜಲಾಲ್ ಸಾಬರ "ಸಬ್ ಕೆಹೆತೆ ಹೈ ಈಶ್ವರ ಅಲ್ಲಾ...",(ಜ್ಯೋತಿಯೊಳಗಣ ಕಾಂತಿ ಪು.೧೫) ನಾರಾಯಣಪ್ಪನವರ "ಮಂಡಬೆಟ್ಟನೊಳು ಬಂದು..." "ಆವ ಭಯಮ ಇನ್ನೇನವಗ..."(ಜ್ಯೋತಿಯೊಳಗಣ ಕಾಂತಿ ಪು.೨೬) ಎಂಬ ಸಾಲುಗಳು.

೨. "ಬರಬಾರದಿತ್ತು ಆ ಮನಿಗೆ..."(ಜ್ಯೋತಿಯೊಳಗಣ ಕಾಂತಿ ಪು.೩೨) ಎಂಬ ತತ್ವಪದ

೩. "ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ..."(ಜ್ಯೋತಿಯೊಳಗಣ ಕಾಂತಿ ಪು.೫೭) ವಚನ.

೪. ಕೈನೂರು ಕೃಷ್ಣಪ್ಪನ ತತ್ವಪದ "ಸಂಸಾರ ಎಂಬುಮದು ಬಲು ಕಷ್ಟ....." ಮಡಿವಾಳಪ್ಪನ "ಹಲವು ಚಿತ್ತಹಾರಿರಬೇಕೋ..."(ಜ್ಯೋತಿಯೊಳಗಣ ಕಾಂತಿ ಪು-೫೯).

೫. ನಿನ್ನೆ ದಿನ ನನ್ನ ಜನ ಬೆಟ್ಟದಂತೆ ಬಂದರು... ಎಂಬ ಸಿದ್ಧಲಿಂಗಯ್ಯನವರ ಕ್ರಾಂತಿಗೀತೆ.(ಜ್ಯೋತಿಯೊಳಗಣ ಕಾಂತಿ ಪು.೭೩)

೬. "ತನ್ನ ನಿಜವ ತಾ ತಿಳಿಯ ಬೇಕಾದರೆ...",(ಜ್ಯೋತಿಯೊಳಗಣ ಕಾಂತಿ ಪು.೮೭) "ಅಲ್ಲಂತ್ಯವುದ್ದೇಳಲಿ ನಾನು...",(ಪು.೮೮) "ಏನುಂಡು ಮೈನೆರೆದ"(ಪು.೯೦) ಎಂಬ ಸೋಬಾನೆ ಹಾಡು ಹೀಗೆ ಬರುವ ತತ್ವಪದಗಳ ವಚನದ ಸಾಲು, ಶಿಷ್ಟಸಾಹಿತ್ಯದ ಸಾಲು, ಜನಪದ ಗೀತೆಯ ಸಾಲುಗಳು ಕಥೆಗಳಿಗೆ ಕಾವ್ಯಾತ್ಮಕ ಗುಣವನ್ನು ತಂದುಕೊಟ್ಟಿವೆ.

೫.೬. ಜಾಹ್ನವಿ ಬಿ.ಟಿ.

ಇತ್ತೀಚಿನ ಕತೆಗಾರ್ತಿಯಾಗಿ ಗುರುತಿಸಿಕೊಂಡ ಜಾಹ್ನವಿಯವರು **'ಕಳ್ಳುಬಳ್ಳಿ'** ಎಂಬ ಕಥಾಸಂಕಲವನ್ನು ರಚಿಸಿದ್ದಾರೆ. ಇವರ ಎಲ್ಲಾ ಕತೆಗಳ ಕೇಂದ್ರಬಿಂದು ಮಹಿಳೆಯಾಗಿದ್ದಾಳೆ.

ಈ ಮಹಿಳೆಗೆ ಆಧುನಿಕವಾದ ಆಲೋಚನೆಯಿದೆ. ಈ ಚಿಂತನೆ ಮಹಿಳೆಯ ಜೀವನಕ್ರಮದಲ್ಲಾದ ಬದಲಾವಣೆಯಿಂದ ಬರದೆ ಜೀವನಮೌಲ್ಯಗಳ ಪಲ್ಲಟದಿಂದ ಬಂದಿರುವುದು ಮುಖ್ಯವಾಗಿದೆ. ಇವರ ಬಹುಪಾಲು ಕತೆಗಳು ಗಂಡು-ಹೆಣ್ಣುಗಳ ಸಂಬಂಧಗಳನ್ನು ಹಲವು ನೆಲೆಯಲ್ಲಿ ಶೋಧಿಸುವ ಪ್ರಯತ್ನವನ್ನು ಮಾಡಿರುವುದನ್ನು ಗುರುತಿಸಲಾಗಿದೆ.

ಇವರ ಕತೆಗಳಲ್ಲಿ ಅಭಿವ್ಯಕ್ತಗೊಂಡಿರುವ ಮಹಿಳೆಯರು ಮಧ್ಯಮವರ್ಗದ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಮುಖ್ಯವಾಗಿ ಅವಿವಾಹಿತ ಮಹಿಳೆ, ವಿವಾಹಕ್ಕೆ ಸಿದ್ಧವಾದ ಮಹಿಳೆ, ವಿವಾಹದಿಂದ ವಂಚಿತಳಾದ ಮಹಿಳೆ, ವಿವಾಹವಾಗದೆ ದಾಂಪತ್ಯದ ಚೌಕಟ್ಟಿಗೆ ಒಳಪಟ್ಟಿರುವ ಮಹಿಳೆ, ಗೃಹಿಣಿ ಪಾತ್ರ ನಿರ್ವಹಿಸುತ್ತಿರುವ ಮಹಿಳೆ, ಉದ್ಯೋಗಸ್ಥ ಮಹಿಳೆ, ವಿದ್ಯಾವಂತೆಯಾಗಿದ್ದರೂ ಮಾನವೀಯತೆಯನ್ನು ಕಳೆದುಕೊಂಡಿರುವ ಮಹಿಳೆ, ತಾಯ್ತನದಿಂದ ವಂಚಿತಳಾದ ಮಹಿಳೆ ಇತ್ಯಾದಿ ಸ್ತ್ರೀ ಪಾತ್ರಗಳು ಇವರ ಕತೆಗಳಲ್ಲಿ ಅಭಿವ್ಯಕ್ತಗೊಂಡಿದೆ.

ಈ ಮಹಿಳೆಯರು ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದು ಅವರು ವಾಸಿಸುವ ಕುಟುಂಬಗಳಲ್ಲಿ. ಮಹಿಳೆಯನ್ನೊಳಗೊಂಡ ಈ ಕುಟುಂಬಗಳು ಕಥೆಗಳಲ್ಲಿ ಹಲವು ರೀತಿಯಲ್ಲಿ ಅಭಿವ್ಯಕ್ತಗೊಂಡಿವೆ. ಮುಖ್ಯವಾಗಿ ವಿವಾಹ ಚೌಕಟ್ಟಿಗೆ ಒಳಪಡದೆ ಗಂಡ-ಹೆಂಡತಿ ಜೀವಿಸುವ ವೈಯಕ್ತಿಕ ಕುಟುಂಬಗಳು; ಶಿಥಿಲಗೊಂಡ ದಾಂಪತ್ಯ, ತಂದೆ-ತಾಯಿ ಅವಿವಾಹಿತ ಮಗಳಿರುವ ಸರಳ ಕುಟುಂಬಗಳು; ಸ್ತ್ರೀ-ಪುರುಷ ಮಗಳಿರುವ ವೈಯಕ್ತಿಕ ಕುಟುಂಬಗಳು. ತಂದೆಯಿಲ್ಲದ ತಾಯಿ-ಮಗ ಸೊಸೆಯಿರುವ ಕೂಡು ಕುಟುಂಬಗಳು; ಗಂಡ- ಮಕ್ಕಳಿದ್ದರೂ ಪರಪುರುಷನೊಂದಿಗೆ ಮಗುವನ್ನು ಪಡೆದು ಬದುಕುವ ಕುಟುಂಬಗಳು; ಗಂಡನಿದ್ದರೂ ಪರಪುರುಷನೊಂದಿಗೆ ದಾಂಪತ್ಯ ನಡೆಸುವ ಮಹಿಳೆಯರ ಈ ಕುಟುಂಬಗಳು ಹೆಚ್ಚು ಸಂಕೀರ್ಣತೆಯನ್ನು ಒಳಗೊಂಡಿವೆ.

'ವಿಮುಖ' ಕಥೆಯಲ್ಲಿ ಇಲ್ಲಿನ ಸ್ತ್ರೀ-ಪುರುಷರಾದ ರಘು-ಮೈತ್ರಾ ವಿವಾಹದ ಚೌಕಟ್ಟಿಗೆ ಒಳಪಡದೆ ಪತಿ-ಪತ್ನಿಯರಾಗಿ ಬದುಕುವ ಇವರ ದಾಂಪತ್ಯವು ಹೆಚ್ಚು ಸಂಕೀರ್ಣತೆಯನ್ನು ಪಡೆದುಕೊಂಡಿದೆ. ರಘು-ಮೈತ್ರಾಳಿಗೆ ಸೋದರತ್ತೆಯ ಮಗನಾಗಿರುವ ಕಾರಣದಿಂದ ವೈವಾಹಿಕ ನೆಲೆಯಿಂದ ಗುರುತಿಸಿದಾಗ ಇದು ರಕ್ತ ಸಂಬಂಧಿಗಳ ಕುಟುಂಬವಾಗಿದೆ. ತಂದೆಯಿಲ್ಲದೆ ತಾಯಿಯಿರುವ ಮೈತ್ರಾಳ ಕುಟುಂಬದ ಆಸರೆಯಾಗಿ ನಿಂತ ಸೋದರಮಾವನ ಔದಾರ್ಯಕ್ಕೆ ಒಳಗಾಗಿ ಕರ್ತವ್ಯಕ್ಕೆ ಕಟ್ಟುಬಿದ್ದು ಹಿರಿಯರ ಆಣತಿಯಂತೆ ವಿವಾಹಬಂಧನಕ್ಕೆ ಸಿದ್ಧವಾಗಿರುವ ಈ ಸ್ತ್ರೀ-ಪುರುಷರಿಗೆ ವೈಯಕ್ತಿಕ ಆಸೆ ಆಕಾಂಕ್ಷೆಗಳಿಲ್ಲ. ಹಾಗೆ ಇಲ್ಲಿ ಈ ವೈವಾಹಿಕ ಸಂಬಂಧವು ಏರ್ಪಟ್ಟಿರುವುದು ಸ್ವಇಚ್ಛೆಯಿಂದ ಅಥವಾ ಹಿರಿಯರ ಒತ್ತಾಯದಿಂದ ಎಂಬುದು ನಿರೂಪಣೆಯಲ್ಲಿ ಸ್ಪಷ್ಟವಾಗಿಲ್ಲ.

ಕಥೆಯಲ್ಲಿ ನಿರೂಪಕಿ ಕಥೆಯನ್ನು ನಿರೂಪಿಸುತ್ತಿದ್ದಾಳೆ. ಕಥೆಯ ಒಂದು ಪಾತ್ರವಾಗಿ ರೂಪನಿರ್ದಿಷ್ಟ ಹೆಸರನ್ನು(ಮೈತ್ರ) ಒಳಗೊಂಡ ನಿರೂಪಣೆಯಿದೆ. ಈ ಕತೆಯ ಸ್ತ್ರೀ-ಪುರುಷರ ಬದುಕನ್ನು ನಿರೂಪಕಿ(ಮೈತ್ರಾ)ಯ ನಿರೂಪಣೆಯಲ್ಲಿ ಅನಾವರಣಗೊಳಿಸಲಾಗಿದೆ.

ಇವರ ಕತೆಯಲ್ಲಿ ಅಭಿವ್ಯಕ್ತಗೊಂಡಿರುವ ಸ್ತ್ರೀ- ಪುರುಷರು ಉದ್ಯೋಗವನ್ನು ಹುಡುಕಿಕೊಂಡು ಹಳ್ಳಿಯಿಂದ ನಗರಕ್ಕೆ ಬಂದು ನೆಲೆ ನಿಂತು ಬದುಕನ್ನು ಕಟ್ಟಿಕೊಂಡಿದ್ದಾರೆ. ಹೀಗೆ ಯುವ ಪೀಳಿಗೆಯು ಉದ್ಯೋಗ ಹಾಗೂ ಶಿಕ್ಷಣದ ನಿಮಿತ್ತ ಹೆತ್ತವರ ಕುಟುಂಬದಿಂದ ಬಹುದೂರ ವಾಸಿಸುವ ಅನಿವಾರ್ಯಕ್ಕೆ ಒಳಗಾಗಿದ್ದಾರೆ. ಹಿರಿಯರ ಇಚ್ಛೆಯಂತೆ ವಿವಾಹಕ್ಕೆ ಸಿದ್ಧರಾದ ರಘು- ಮೈತ್ರಾ ಎಂಬ ಗಂಡು-ಹೆಣ್ಣುಗಳು ಉದ್ಯೋಗ ನಿಮಿತ್ತ ಒಂದೇ ನಗರದಲ್ಲಿ ನೆಲೆಸಿದ್ದು ಭಿನ್ನ ಸ್ಥಳದಲ್ಲಿ ವಾಸಿಸುತ್ತಿದ್ದರು. ಇಲ್ಲಿ ರಘು ತನ್ನ ವಿದ್ಯಮಾನಗಳು, ವ್ಯವಹಾರಗಳಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಿದ್ದನು. ಹೀಗೆ ಈ ವ್ಯವಹಾರದ ಸಲುವಾಗಿ ಹೊರವಲಯಗಳಿಗೆ ಭೇಟಿನೀಡುತ್ತಾ ತನ್ನ ಕೆಲಸಕಾರ್ಯಗಳಲ್ಲಿ ಮಗ್ನನಾಗಿದ್ದನು. ವಿವಾಹವಾಗುವ ಮೈತ್ರಾಳಿಗಾಗಿ ಯಾವುದೇ ಸಮಯವನ್ನು ನೀಡದೆ ತನ್ನಿಷ್ಟದಂತೆ ಬದುಕನ್ನು ರೂಪಿಸಿಕೊಂಡಿದ್ದನು. ಆದರೆ ಮೈತ್ರಾ ಎಂಬ ಹೆಣ್ಣುಮಗಳಿಗೆ ಈ ಅವಕಾಶವಿಲ್ಲ. ಇಲ್ಲಿ ಈ ಹೆಣ್ಣುಮಗಳು ತನ್ನ ವೃತ್ತಿಯಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದರೂ ಅವನಿಗಾಗಿ ಸಮಯವನ್ನು ಕಾಯ್ದಿರಿಸುತ್ತಾಳೆ. ಅವರ ಸಾಮೀಪ್ಯಕ್ಕೆ ಹಂಬಲಿಸುತ್ತಾಳೆ. ಅವನ ಬಿಡುವಿನ ಸಮಯದಲ್ಲಿ ಅವನೊಂದಿಗೆ ನೆಲೆಸಿ ಅವನ ಬೇಕು-ಬೇಡಗಳನ್ನು ಈಡೇರಿಸುತ್ತಾಳೆ. ಅವನೊಂದಿಗೆ ದೈಹಿಕ ಸಂಪರ್ಕವನ್ನು ಇಟ್ಟುಕೊಂಡು ಲೈಂಗಿಕ ಸಂತೃಪ್ತಿಯನ್ನು ನೀಡುತ್ತಾಳೆ. ಹೀಗೆ ಇಲ್ಲಿ ಗಂಡನು ತನ್ನ ಯಾಜಮಾನ್ಯದ ನೆಲೆಯಲ್ಲಿ ಹೆಣ್ಣಿನ ಮೇಲೆ ದೈಹಿಕವಾಗಿ ಮಾನಸಿಕವಾಗಿ ಅಧಿಕಾರ ಚಲಾಯಿಸುತ್ತಾನೆ. ಹೆಣ್ಣು ಗಂಡಸಿನ ಈ ಅಧಿಕಾರದ ಪರಿಣಾಮವನ್ನು ಅರಿತೂ ಅರಿಯದಂತಿದ್ದು ಅದನ್ನು ಒಪ್ಪಿಕೊಂಡು ಬದುಕುತ್ತಿದ್ದಾಳೆ. ಇಲ್ಲಿ ರಘು ಮೈತ್ರಾಳನ್ನು ಒಂದು ಹೆಣ್ಣು ಎಂದು ಭಾವಿಸದೆ ಭೋಗದ ವಸ್ತುವಾಗಿ ಕಾಣುವುದರಿಂದ ಅವಳೊಂದಿಗೆ ಈವರೆಗಿನ ಎಲ್ಲಾ ಒಡನಾಟವು ಯಾಂತ್ರಿಕವಾಗಿ ಕಾಣುತ್ತದೆ. ಇಲ್ಲಿ ರಘು ಎಂಬ ಪುರುಷ ಪಾತ್ರಕ್ಕೆ ಹೆಣ್ಣಿನ ಸಾಮೀಪ್ಯ ಪರಿಪೂರ್ಣತೆ ದೊರಕದೆ ಆ ಪರಿಪೂರ್ಣತೆಗೆ ಮತ್ತೊಂದು ಹೆಣ್ಣನ್ನು ಬಯಸುತ್ತಾನೆ. ಮೈತ್ರಾಳಿಂದ ಬಿಡುಗಡೆ ಹೊಂದಲು ಬಯಸುತ್ತಾನೆ. ಈ ಬಿಡುಗಡೆಗೆ ತನ್ನ ಕಾಮುಕ ಗೆಳೆಯನನ್ನು ತನ್ನ ಮನೆಯಲ್ಲಿ ಸ್ಥಳಾವಕಾಶ ನೀಡಿ ತನ್ನ ಹೆಣ್ಣನ್ನು ಅವನಿಗೆ ಒಪ್ಪಿಸುವ ನಾಟಕೀಯ ತಂತ್ರಗಾರಿಕೆ ಕಥೆಯಲ್ಲಿದೆ.

ಇಲ್ಲಿ ಮೈತ್ರಾ ಎಂಬ ಮಹಿಳೆಗೆ ತಂದೆಯಿಲ್ಲ. ಈ ಹೆಣ್ಣು ತನ್ನ ತಾಯಿ, ಸೋದರ ಸೋದರಿಯೊಂದಿಗೆ ವಾಸಿಸುತ್ತಿದ್ದಳು. ತಂದೆಯಿಲ್ಲದ ಕಾರಣದಿಂದ ಮೈತ್ರಾಳ ತಾಯಿ ಕುಟುಂಬದ ಸಂಪೂರ್ಣ ಹೊಣೆಗಾರಿಕೆಯನ್ನು ರಘುವಿನ ತಂದೆ ನಿಭಾಯಿಸುತ್ತಿದ್ದಾರೆ. ಹಾಗಾಗಿ ಮೈತ್ರಾ ಹಾಗೂ ಅವರ ಮನೆಯ ಎಲ್ಲಾ ಸದಸ್ಯರು ರಘುವಿನ ತಂದೆಯ ಅಧಿಕಾರದ ನಿಯಂತ್ರಣಕ್ಕೆ ಒಳಗಾಗಿದ್ದಾರೆ. ಆದರೆ ಕಥೆಯಲ್ಲಿ ಮಾವನ ಸರ್ವಾಧಿಕಾರದ ನಿರೂಪಣೆ ಎಲ್ಲಿಯೂ ಅಭಿವ್ಯಕ್ತಗೊಂಡಿಲ್ಲ. ಆದರೆ ಮೈತ್ರಾಳು ರಘುವಿನೊಂದಿಗೆ ವಿವಾಹ ಸಂಬಂಧಕ್ಕೆ ಒಪ್ಪಿಕೊಂಡಿರುವುದು ಕರ್ತವ್ಯ ಪ್ರಜ್ಞೆಯಿಂದ ಎಂಬುದು ವ್ಯಕ್ತವಾಗುತ್ತದೆ. ರಘು ಪಾತ್ರವು ಸಹ ತಂದೆಯ ಮೇಲಿನ ಅಭಿಮಾನದಿಂದ ಈ ವಿವಾಹಕ್ಕೆ ಒಪ್ಪಿಕೊಂಡಿದ್ದಾನೆ ಹೊರತು ಪರಸ್ಪರ ಆಯ್ಕೆಯಿಂದಲ್ಲ. ಹೀಗೆ

ಕಥೆಯಲ್ಲಿ ಈ ಗಂಡು-ಹೆಣ್ಣುಗಳು ಹಿರಿಯರ ಇಚ್ಛೆಯಂತೆ ವಿವಾಹವಾಗಲು ಒಪ್ಪಿಕೊಂಡಿದ್ದಾರೆಯೇ ಹೊರತು ವೈಯಕ್ತಿಕ ಹಿತಾಸಕ್ತಿಗಳಿಂದಲ್ಲ. ಮೈತ್ರಾಳಿಗೆ ದೊರಕಿರುವ ಉದ್ಯೋಗವು ಸ್ವಬಲದಿಂದ ದಕ್ಕಿಸಿಕೊಳ್ಳದೆ ತನ್ನ ಪುರುಷನ(ರಘು) ಹಿರಿಮೆ ಇದಕ್ಕೆ ಕಾರಣವಾಗಿದೆ ಎಂಬುದು ಕಥೆಯಿಂದ ತಿಳಿಯುತ್ತದೆ.. ಹೀಗೆ ಇಲ್ಲಿ ಮೈತ್ರಾ ಎಂಬ ಸ್ತ್ರೀಯು ತನ್ನ ಗಂಡನ, ಅವನ ಕುಟುಂಬದವರ ಸಂಪೂರ್ಣ ನಿಯಂತ್ರಣಕ್ಕೆ ಒಳಪಟ್ಟು ಒಳಪಡದಂತೆ ಬದುಕುತ್ತಿದ್ದಾಳೆ. ಇಲ್ಲಿ ಸ್ತ್ರೀಗೆ ಕರ್ತವ್ಯ ಪರಿಪಾಲನೆಯು ಮುಖ್ಯವಾಗಿ ಕಂಡುಬರುತ್ತದೆ. ಇಲ್ಲಿ ಸ್ತ್ರೀಯು ತನಗಿಷ್ಟವಿರಲಿ ಬಿಡಲಿ ತನ್ನ ಈ ವೈವಾಹಿಕ ಸಂಬಂಧವನ್ನು ನಿಭಾಯಿಸಲು ಮುಂದಾಗುತ್ತಾಳೆ. ಮೈತ್ರಾಳಿಗೆ ರಘುವಿನ ಮೇಲೆ ಒಲವಿದೆ. ಈ ಒಲವಿನಿಂದ ಅವನು ತನ್ನೊಂದಿಗೆ ನಡೆಸುವ ಕ್ರೌರ್ಯವನ್ನು ಸಹಿಸಿಕೊಂಡು ಬದುಕುತ್ತಾಳೆ. ಇಲ್ಲಿ ಹೆಣ್ಣಿಗೆ ಗಂಡಸಿನ ದೈಹಿಕ ಸಾಮೀಪ್ಯದೊಂದಿಗೆ ಅವನ ಸ್ನೇಹ, ಅವನ ವಿಶ್ವಾಸವನ್ನು ಪರಸ್ಪರ ಮುಕ್ತವಾಗಿ ಬಯಸುತ್ತಾಳೆ. ಅದು ಗಂಡನಿಂದ ಹಂಬಲಿಸಿ ದೊರಕದಾಗ ನಿರಾಸೆಗೊಳ್ಳುತ್ತಾಳೆ. ಈ ನಿರಾಸೆಯನ್ನು ಬದಿಗಿಟ್ಟು ವಿವಾಹಕ್ಕೆ ಸಿದ್ಧವಾಗುತ್ತಾಳೆ. ವಿವಾಹವನ್ನು ನಿರಾಕರಿಸುವುದಿಲ್ಲ. ತನ್ನ ಚೌಕಟ್ಟನ್ನು ಮೀರುವುದಿಲ್ಲ. ಇಲ್ಲಿ ಮೈತ್ರಾ ಉದ್ಯೋಗಸ್ಥಳಾದರೂ ಸಹ ತನ್ನ ಗಂಡಸಿಗೆ ಅವಲಂಬಿತಳಾಗಿಯೇ ಬದುಕುತ್ತಿದ್ದಾಳೆ. ಈ ಅವಲಂಬನೆಯಿಂದ ಹೆಣ್ಣು ತನ್ನ ಪುರುಷ ಕರೆದುಕೊಂಡು ಬಂದ ಕಾಮುಕ ಸ್ನೇಹಿತನ ನಡಾವಳಿಗಳನ್ನು ಅರಿತು ಅರಿಯದಂತೆ ಮೌನವಹಿಸುತ್ತಾಳೆ. ತನ್ನ ಗಂಡಸೇ ತನ್ನ ಹೆಣ್ಣನ್ನು ರಕ್ಷಿಸದೆ ಗೆಳೆಯನ ಕೆಟ್ಟದೃಷ್ಟಿಯನ್ನು ತಿಳಿದು ತಿಳಿಯದಂತಿರುವ ಪರಿಯನ್ನು ಕಂಡು ಚಕಿತಳಾಗುತ್ತಾಳೆ. ಆದರೆ ತನ್ನ ಗಂಡನ ಈ ನಡುವಳಿಕೆಯನ್ನು ಪ್ರಶ್ನಿಸುವ ಸಾಮರ್ಥ್ಯ ಪಡೆದುಕೊಳ್ಳುವುದಿಲ್ಲ. ಹೀಗೆ ಇಲ್ಲಿ ಹೆಣ್ಣು ತನ್ನ ಗಂಡಸಿನಿಂದಲೇ ರಕ್ಷಣೆಯಿಲ್ಲದೆ ಮತ್ತೊಬ್ಬ ಪರಪುರುಷನ ಕ್ರೌರ್ಯಕ್ಕೆ ಬಲಿಯಾಗುವ ಸಂದಿಗ್ಧತೆ ಹೆಣ್ಣಿಗೆ ಒದಗಿದೆ. ಇಲ್ಲಿ ಲೇಖಕಿಗೆ ಪುರುಷ ದ್ವೇಷಿಯಲ್ಲ, ಹಾಗಾಗಿ ಪುರುಷನಲ್ಲಿರುವ ಒಳ್ಳೆಯ ತನವನ್ನು ಗುರುತಿಸುವ ಪ್ರಯತ್ನ ಮಾಡಿದ್ದಾಳೆ.

ಈ ಕಥೆಯಲ್ಲಿ ಬರುವ ಮತ್ತೊಬ್ಬ ಪುರುಷ ಪಾತ್ರ ಭರತ. ರಘುವಿನ ಸ್ನೇಹಿತ. ಇವನು ಕಾಮುಕ. ಅವನ ಈ ಕಾಮುಕತೆಗೆ ಕಥೆಯ ಪಾತ್ರದ ಹಿನ್ನಲೆಯಲ್ಲಿ ಅದಕ್ಕೆ ಕಾರಣವನ್ನು ಲೇಖಕಿ ನಿರೂಪಿಸುತ್ತಾಳೆ. ತಂದೆ ತಾಯಿಯಿಲ್ಲದೆ ಅನಾಥನಾಗಿ ವಯಸ್ಸಾದ ಹೆಣ್ಣಿನ ಆಸರೆಯಲ್ಲಿ ಬದುಕನ್ನು ಸಾಗಿಸುತ್ತಿದ್ದನು. ಹೀಗೆ ಅವನ ಕಾಮುಕತೆಗೆ ಕಾರಣ ಕುಟುಂಬದ ಕೊರತೆಯನ್ನು ಲೇಖಕಿ ಗುರುತಿಸಿದ್ದಾರೆ. ಇಲ್ಲ ಭರತ ಹೆಣ್ಣನ್ನು ಒಂದು ಭೋಗದ ವಸ್ತುವಾಗಿ ಕಾಣುತ್ತಾನೆ. ದೈಹಿಕ ನೆಲೆಯಲ್ಲಿ ಗುರುತಿಸಿದ್ದಾನೆ. ಇದುವರೆಗೆ ಅವನು ಅನುಭವಿಸಿದ ಹೆಣ್ಣುಗಳು ಅವನ ಬಲಾತ್ಕಾರವನ್ನು ಹಿಂಸಾಪೂರ್ವಕವಾಗಿ ಪರಿಗಣಿಸಿ ಅವನನ್ನು ವಿರೋಧಿಸುತ್ತಾರೆ. ಈ ವಿರೋಧವೇ ಗಂಡಸಿನಲ್ಲಿ ತನ್ನ ಅಧಿಕಾರವನ್ನು ಮತ್ತಷ್ಟು ಬಳಸಿ ಹೆಣ್ಣನ್ನು, ಅವಳ ದೇಹವನ್ನು ಹಿಂಸಿಸುತ್ತಾನೆ. ಈ ಹಿಂಸಾತ್ಮಕವಾದ ಲೈಂಗಿಕತೆ ಅವನಲ್ಲಿ ತೃಪ್ತಿ ನೀಡದೆ ಮತ್ತಷ್ಟು ಹೆಣ್ಣಿನ ಹಂಬಲವನ್ನು ಹೆಚ್ಚಿಸುತ್ತಿತ್ತು. ಇಲ್ಲಿ ಭರತ ಎಲ್ಲಾ ಹೆಣ್ಣುಗಳನ್ನು ಲೈಂಗಿಕವಾಗಿ ಕಾಣುವನು.

ಆದರೆ ಸ್ನೇಹಿತನ ಹೆಣ್ಣಾದ ಮೈತ್ರಾಳಿಂದ ದೂರವಿರಲು ಪ್ರಯತ್ನಿಸುತ್ತಾನೆ. ಆದರೆ ತನ್ನ ಸ್ನೇಹಿತನೇ ತನ್ನ ಮೈತ್ರಾಳ ಸಂಬಂಧದ ನೀರಸತೆಯನ್ನು ಕುರಿತು ಹೇಳಿದಾಗ ಈ ನಿರಾಸೆಯನ್ನು ಅವಳಲ್ಲಿ ಗುರುತಿಸಲು ಪ್ರಯತ್ನಿಸುತ್ತಾನೆ ಅಲ್ಲದೆ ಅವಳ ಗಂಭೀರತೆ ಅವಳನ್ನು ಪಡೆಯುವ ಹಂಬಲವನ್ನು ಇಮ್ಮಡಿಗೊಳಿಸುತಿತ್ತು. ಇಲ್ಲಿ ರಘು ತಾನು ಮನೆಯಿಲ್ಲದ ದಿನವನ್ನು ಸ್ನೇಹಿತನಿಗೆ ತಿಳಿಸುವ ಹಿಂದೆ ತನ್ನ ಹೆಣ್ಣನ್ನು ಅವನಿಗೆ ಒಪ್ಪಿಸುವ ಮೂಲಕ ಹೆಣ್ಣು ತನ್ನ ಗಂಡ ಹಾಗೂ ಪರಪುರುಷ ಎರಡೂ ನೆಲೆಯಲ್ಲೂ ಅಸುರಕ್ಷಿತಳಾಗಿದ್ದಾಳೆ. ಹೀಗೆ ಇಲ್ಲಿ ಹೆಣ್ಣಿಗೆ ಮನೆ ಎಂಬುದು ಅಭದ್ರವಾಗಿದೆ. ಅಸುರಕ್ಷತೆಯಿಂದ ಕೂಡಿದೆ.

ಇಲ್ಲಿ ಮೈತ್ರಾ ತನ್ನ ಗಂಡನಿಲ್ಲದ ಸಮಯದಲ್ಲಿ ತನ್ನನ್ನು ಬಲಾತ್ಕರಿಸಲು ಬಂದ ಪುರುಷನಿಂದ ತನ್ನನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿ ಸೋಲುತ್ತಾಳೆ. ಹಾಗೆ ಇಲ್ಲಿ ಹೆಣ್ಣು ಗಂಡಸಿನ ಅಧಿಕಾರವನ್ನು ಒಪ್ಪಿಕೊಳ್ಳುವುದು ಅವನ ದೈಹಿಕ ಸಾಮರ್ಥ್ಯದಿಂದ. ತನ್ನ ದೈಹಿಕ ಶಕ್ತಿ ಅವನ ದೈಹಿಕ ಸಾಮರ್ಥ್ಯದ ಮುಂದೆ ನಿಲ್ಲದೆ ಅಸಹಾಯಕಳಾಗಿ ಅವನನ್ನು ಒಪ್ಪಿಕೊಳ್ಳುತ್ತಾಳೆ. ಇಲ್ಲಿ ಹೆಣ್ಣು ಗಂಡಸಿನ ಈ ಕ್ರೌರ್ಯವನ್ನು ವಿರೋಧಿಸದೆ ಅವನಿಗೆ ಸಹಕರಿಸುವುದು ತನಗಾಗುವ ಹಿಂಸೆಯನ್ನು ಕಡಿಮೆ ಮಾಡಿಕೊಳ್ಳಲು.

ಮೈತ್ರಾ ಭರತನ ದೈಹಿಕ ಸಂಪರ್ಕವನ್ನು ತಿಳಿದ ಮೈತ್ರಾಳ ಗಂಡ ಅವಳನ್ನು ಪ್ರಶ್ನಿಸಲು ಮುಂದಾಗುತ್ತಾನೆ. ಈ ಪ್ರಶ್ನಿಸುವ ಮನೋಭಾವ ಅವನಲ್ಲಿ ಹುಟ್ಟಿಕೊಂಡಿದ್ದು ಅವಳು ತನ್ನ ಸ್ನೇಹಿತನ ಕಾಮತೃಷೆಗೆ ಬಲಿಯಾದಳು ಎಂಬ ಮರುಕದಿಂದಲ್ಲ. ಬದಲಿಗೆ ತನ್ನ ಸ್ನೇಹಿತನನ್ನು ವಿರೋಧಿಸದೆ ಅವನೊಂದಿಗೆ ಸಹಕರಿಸಿದ್ದು ದೊಡ್ಡ ಅಪರಾಧವಾಗಿ ಪರಿಣಮಿಸಿದೆ. ಇಲ್ಲಿ ಗಂಡಸು ಹೆಣ್ಣಿನ ಲೈಂಗಿಕ ವಿಚಾರದಲ್ಲಿ ಸ್ವಂತ ಇಚ್ಛೆಯನ್ನು, ಅಭಿಪ್ರಾಯವನ್ನು ವ್ಯಕ್ತಪಡಿಸುವುದನ್ನು ಸಹಿಸದ ಪುರುಷನ ಸ್ವಾರ್ಥದ ಹಿಂದೆ ದಾಂಪತ್ಯದ ಯಾಜಮಾನಿಕೆಯನ್ನು ತೋರ್ಪಡಿಸುತ್ತದೆ. ಗಂಡಸು ಹೆಣ್ಣನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಹಾತೊರೆಯುತ್ತಾಯೇ ಹೊರತು ಅವಳಲ್ಲಿ ಲೈಂಗಿಕ ಮುಕ್ತತೆಯನ್ನು ಕಾಣಲು ಬಯಸುವುದಿಲ್ಲ. ಈ ಮೂಲಕ ಲೇಖಕಿ ಪುರುಷ ಪಾತ್ರದಲ್ಲಿನ ಅಧಿಕಾರದ ರಾಜಕಾರಣವನ್ನು ನಿರೂಪಿಸುತ್ತಾರೆ.

ಇಲ್ಲಿ ಮೈತ್ರಾ ತನ್ನ ಗಂಡಸಿನ ಸೇಹಿತನಿಂದ ಅತ್ಯಾಚಾರಕ್ಕೊಳಗಾಗಿದ್ದಾಳೆ. ಆದರೆ ಈ ಘಟನೆ ಅವಳಿಗೆ ಹಿಂಸಾತ್ಮಕವಾಗಿ ಕಂಡು ಬರುವುದಿಲ್ಲ. ಬದಲಾಗಿ ಈ ಘಟನೆ ಅವಳಲ್ಲಿ ಮೊದಲಿಗಿಂತಲೂ ಹೆಚ್ಚು ಕ್ರೀಯಾಶೀಲಳನ್ನಾಗಿ ಮಾಡಿದೆ. ತನ್ನ– ಭರತನ ಸಂಬಂಧವನ್ನು ತನ್ನ ಗಂಡನಿಂದ ಮುಚ್ಚಿಡಲು ಕಾರಣ ತನ್ನ ಹಾಗೂ ತನ್ನ ಪುರುಷನ ಮನಸ್ಸು ಒಂದಾಗಿರಲು ಈ ಆಕಸ್ಮಿಕ ಘಟನೆ ತಮ್ಮಿಬ್ಬರ ಸಂಬಂಧವನ್ನು ಹಳಿಸದು ಎಂದು. ಆದರೆ ಮೈತ್ರಾಳ ಗಂಡಸು ಅವಳ ಸಹಕರಿಸುವಿಕೆ ದೊಡ್ಡ ಅಪರಾಧವೆಂದು ಪರಿಗಣಿಸಿ ತನ್ನ ಅಧಿಕಾರದ ಮೂಲಕ ಅವಳಿಂದ ಬರುವ ಉತ್ತರಗಳನ್ನು ನಿರ್ಲಕ್ಷಿಸಿ ತನ್ನತನವನ್ನು ಬಲಿ

ಕೊಡದೆ ಅವಳೊಂದಿಗಿನ ವೈವಾಹಿಕ ಸಂಬಂಧದಿಂದ ಬಿಡುಗಡೆಗೊಳ್ಳುತ್ತಾನೆ. ಮತ್ತೊಂದು ಹೆಣ್ಣಿನೊಂದಿಗೆ ವೈವಾಹಿಕ ಬಾಂಧವ್ಯಕ್ಕೆ ಒಪ್ಪಿಕೊಳ್ಳುತ್ತಾನೆ.

ಹೀಗೆ ತನ್ನ ಗಂಡಸಿನಿಂದ ವಿಚ್ಛೇದನಗೊಂಡ ಮೈತ್ರಾ ತನ್ನ ಗಂಡಸಿಗಾಗಿ ಮರುಗದೆ ತನ್ನ ಪ್ರೀತಿ, ಸ್ನೇಹ, ಒಡನಾಟವನ್ನು ಬಯಸಿ ಬಂದ ಕಾಮಕನ ಕ್ರೌರ್ಯವಾದ ಮನಸ್ಸಿನಲ್ಲೂ ತನಗಾಗಿ ಹಪಹಪಿಸುವ ಮನುಷ್ಯತ್ವವನ್ನು ಗುರುತಿಸಿ ಅವನೊಂದಿಗೆ ವೈವಾಹಿಕ ಸಂಬಂಧಕ್ಕೆ ಅಣಿಗೊಳ್ಳುತ್ತಾಳೆ.

ಹೀಗೆ ಗಂಡು–ಹೆಣ್ಣುಗಳ ನಡುವೆ ಏರ್ಪಡುವ ದಾಂಪತ್ಯ ಪರಿಕಲ್ಪನೆಯನ್ನು ಲೈಂಗಿಕತೆಯನ್ನು ಪ್ರಮುಖವಾಗಿ ಲೇಖಕಿ ಈ ಕಥೆಯಲ್ಲಿ ಚರ್ಚಿಸಿದ್ದಾರೆ. ಗಂಡಸು ಹೆಣ್ಣನ್ನು ಕೇವಲ ದೇಹದ ನೆಲೆಯಲ್ಲಿ ಮಾತ್ರ ಪರಿಗಣಿಸದೆ ಅದರಾಚೆ ಅವಳಿಗಿರುವ ಮನಸ್ಸನ್ನು ತಿಳಿದು ಅವಳ ಅಗತ್ಯಗಳಿಗೆ ಸ್ಪಂದಿಸಿ ಬೇಕು ಬೇಡಗಳನ್ನು ಈಡೇರಿಸುವುದು ಮುಖ್ಯವಾಗಿದೆ. ಗಂಡು–ಹೆಣ್ಣುಗಳ ನಡುವೆ ದೈಹಿಕ ಸಂಪರ್ಕವು ಕೂಡುಕೊಳ್ಳುವಿಕೆ ಮೂಲಕ ಏರ್ಪಟ್ಟಾಗ ಅದು ಇಬ್ಬರು ವ್ಯಕ್ತಿಗಳ ನಡುವೆ ಪರಿಪೂರ್ಣತೆಯನ್ನು ಹೊಂದಿ ಗಂಡು–ಹೆಣ್ಣಿನ ನಡುವೆ ಆಕರ್ಷಣೆ ಕಳೆದು ಸಹಜ ಸಂಬಂಧವಾಗಿ ಮೂಡಿ ಶಾಶ್ವತ ಸಂಬಂಧವಾಗಿ ಉಳಿಯಲು ಸಹಾಯಕವಾಗುತ್ತದೆ ಆ ಮೂಲಕ ವ್ಯಕ್ತಿಯ ವಿಕಸನಕ್ಕೆ ಸಹಾಯಕವಾಗುತ್ತದೆ.

ಇಲ್ಲಿ ಲೇಖಕಿಗೆ ಪುರುಷರ ಸ್ವಾರ್ಥ ಹಾಗೂ ನಿಸ್ವಾರ್ಥ ಭಾವನೆಗಳನ್ನು ಎರಡು ಹಿನ್ನೆಲೆಯಲ್ಲಿಯೂ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಈ ಮೂಲಕ ಲೇಖಕಿ ಪುರುಷ ದ್ವೇಷಿಯಲ್ಲ. ಬದಲಾಗಿ ಅವರು ಬೆಳೆದಿರುವ ಕೌಟುಂಬಿಕ ಪರಿಸರವನ್ನು ಕಾರಣವಾಗಿಸುತ್ತಾಳೆ. ಇಲ್ಲಿ ಹೆಣ್ಣು ಹೆಣ್ಣಿನ ದೈಹಿಕ ಸಾಮೀಪಕ್ಕೆ ಹೆಚ್ಚು ಮಹತ್ವವನ್ನು ನೀಡಿದ್ದಾಳೆ. ಹೆಣ್ಣಿನ ದೈಹಿಕ ಶಕ್ತಿ ಪುರುಷನ ಕೊರತೆಯನ್ನು ಹೋಗಲಾಡಿಸಿ ಅವನ ಮಾನವೀಯತೆಯನ್ನು ಜಾಗೃತಗೊಳಿಸುವ ಧಾರಣಾಶಕ್ತಿಯನ್ನು ಪಡೆದುಕೊಂಡಿದೆ.

ಹೆಣ್ಣಿಗೆ ವಿವಾಹ ಮತ್ತು ಕುಟುಂಬ ಎರಡೂ ಮುಖ್ಯವಾಗಿವೆ. ಹೆಣ್ಣು ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವುದು ಕುಟುಂಬದಲ್ಲಿ. ಕುಟುಂಬವು ಶಾಶ್ವತವಾಗಿರಲು ಲೈಂಗಿಕ ಸಂತೃಪ್ತಿಯು ಅತ್ಯಂತ ಮುಖ್ಯವಾಗಿದೆ. ಲೈಂಗಿಕ ಅತೃಪ್ತಿಯು ಕುಟುಂಬವನ್ನು ಅಸ್ಥಿರಗೊಳಿಸುತ್ತದೆ. ಸ್ತ್ರೀ–ಪುರುಷರ ಲೈಗಿಂಕ ಸಂಬಂಧವು ಪರಿಪೂರ್ಣತೆಯನ್ನು ಪಡೆದುಕೊಂಡಾಗ ಕುಟುಂಬ ಶಾಶ್ವತವಾಗಿ ಉಳಿಯಲು ಸಾಧ್ಯವೆಂದು ಈ ಮೂಲಕ ಗುರುತಿಸಬಹುದು.

ಇಲ್ಲಿ ಲೇಖಕಿ ಹೆಣ್ಣಿನ ಕ್ರಿಯಾಶೀಲತೆಯನ್ನು ಅವಳ ಅಸ್ಮಿತೆಯನ್ನು ಲೈಂಗಿಕತೆಯಲ್ಲಿ ಕಾಣಿಸಿದ್ದಾರೆ. ಹೆಣ್ಣಿನ ಲೈಂಗಿಕ ಬದ್ಧತೆ ಪುರುಷನನ್ನು ಬಿಡುಗಡೆಗೊಳಿಸಿದೆ. ಆದರೆ ಅವಳ ಈ ಲೈಂಗಿಕ ಮುಕ್ತತತೆಯು ಗಂಡಿಗೆ ಒಂದು ಪ್ರಶ್ನೆಯಾಗಿ ಕಂಡಿದೆ. ಇದನ್ನು ಸಹಿಸದ ಪುರುಷನ ಮನೋಭಾವದ ಹಿಂದೆ ಕುಟುಂಬ ರಾಜಕಾರಣದ ಪರಿಣಾಮವನ್ನು ಹೆಣ್ಣಿಗಿಂತ ಗಂಡಸು

ಹೆಚ್ಚು ಅನುಭವಿಸುವಂತೆ ಓದುಗರಿಗೆ ಕಾಣಿಸುವುದು ಲೇಖಕಿಯ ಅಭಿವ್ಯಕ್ತಿಯ ಮಹತ್ವವನ್ನು ಗುರುತಿಸಬಹುದು.

'ಕಳೆದುಕೊಂಡವಳು' ಕಥೆಯಲ್ಲಿ ಅಭಿವ್ಯಕ್ತವಾಗಿರುವ ಕುಟುಂಬವು ತಂದೆ–ತಾಯಿ, ಅವಿವಾಹಿತ ಮೂರು ಹೆಣ್ಣುಮಕ್ಕಳು, ಎರಡು ಗಂಡುಮಕ್ಕಳು ಮತ್ತು ವಿವಾಹಿತ ಮಗಳು ಅಳಿಯ ಒಂದೇ ಸ್ಥಳದಲ್ಲಿ ವಾಸಿಸುವ ಮೂಲಕ ವಿಸ್ತೃತ ಕುಟುಂಬಕ್ಕೆ ಕಾರಣವಾಗಿದೆ. ಮಧ್ಯಮ ವರ್ಗ ಕುಟುಂಬವೆಂದು ಗುರುತಿಸಿಕೊಳ್ಳುವ ಈ ಕೂಡುಕುಟುಂಬದಲ್ಲಿ ತಂದೆಯು ಮನೆಯ ಯಜಮಾನನಾಗಿದ್ದಾನೆ. ತಾಯಿ ತಂದೆಯಂತೆ ಪ್ರಧಾನ ಸಮಾಜದ ಪೂರ್ವಗ್ರಹಪೀಡಿತ ಪಾತ್ರವಾಗಿ ಕಾಣಿಸಿಕೊಳ್ಳುತ್ತಾಳೆ. ಇಲ್ಲಿ ಮಿತಸಂತಾನಕ್ಕೆ ಕಡಿವಾಣ ಹಾಕದೆ ಅಗತ್ಯಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದುಕೊಂಡು ಅದನ್ನು ಹೊರಲಾರದೆ ಕಂಗೆಟ್ಟ ಸ್ಥಿತಿಯನ್ನು ತಂದೆಯ ಪಾತ್ರದಲ್ಲಿ ಕಾಣಲಾಗಿದೆ. ತಂದೆಯು ಗುಮಾಸ್ತನಾಗಿ ಬರುವ ಆದಾಯದಿಂದ ಕುಂಟುಬವನ್ನು ನಿಭಾಯಿಸುವ ಸಾಮರ್ಥ್ಯವಿದ್ದರೂ ತನ್ನ ಸ್ವಾರ್ಥತೆ ಜಿಪುಣತೆಯಿಂದ ಆ ಮನೆಯಲ್ಲಿ ಅಶಾಂತಿಗೆ ಕಾರಣಕರ್ತನಾಗಿದ್ದಾನೆ. ಇಲ್ಲಿ ತಂದೆ ಹಿರಿಯ ಮಗಳಾದ ಕೀರ್ತಿಯ ಜಾಣತನವನ್ನು ಗುರುತಿಸಿ ಅವಳ ವಿದ್ಯೆಗೆ ನೆರವಾಗಿ ಉದ್ಯೋಗ ಕೊಡಿಸುವಲ್ಲಿ ಸಪಲನಾಗುತ್ತಾನೆ. ವಿದ್ಯೆಯಿಲ್ಲದ ಇತರ ಹೆಣ್ಣುಮಕ್ಕಳನ್ನು ಕುಟುಂಬದ ಹೊರೆಯಾಗಿ ಪರಿಗಣಿಸುತ್ತಾನೆ. ತಂದೆ ಜಾಣೆಯಾದ ಹಿರಿಯ ಮಗಳನ್ನು ವಿವಾಹವಾಗಲು ಬಿಡುವುದಿಲ್ಲ. ಕಾರಣ ಹಿರಿಯ ಮಗಳು ದುಡಿಯುವ ಮಹಿಯಾಗಿದ್ದಾಳೆ. ಹೀಗೆ ಮಗಳ ದುಡಿಮೆಯಿಂದ ತನ್ನ ಕುಟುಂಬದ ಹೊರೆಯನ್ನು ಕಡಿಮೆಮಾಡಲು ಬಯಸುವ ಸ್ವಾರ್ಥ ತಂದೆಯ ಪಾತ್ರವನ್ನು ಕಾಣಬಹುದಾಗಿದೆ. ಆದರೆ ಖರ್ಚಿಲ್ಲದೆ ವಿವಾಹವಾಗಲು ಮುಂದಾದ ಮಹೇಶ ಎಂಬ ಗಂಡಸಿನ ಔದಾರ್ಯದಿಂದ ಮನಸಿಲ್ಲದ ಮನಸ್ಸಿನಿಂದ ಹಿರಿಯ ಮಗಳ ವಿವಾಹವನ್ನು ನಿಶ್ಚಿಯಿಸುತ್ತಾನೆ. ಹಿರಿಯ ಮಗಳು ವಿವಾಹವಾದ ನಂತರವೂ ತಂದೆಯ ಹಣದ ದಾಹ ಅರಿತು ಗಂಡನ ಮುಂದೆ ಕೀಳಾಗಿಸದೆ ತಂದೆಯ ಬೇಡಿಕೆಯನ್ನು ಈಡೇರಿಸುತ್ತಾಳೆ. ಹೀಗೆ ಇಲ್ಲಿ ಮಹಿಳೆ ಆರ್ಥಿಕವಾಗಿ ಸಬಲಳಾದರೂ ಅದನ್ನು ಪೂರ್ಣವಾಗಿ ಅನುಭವಿಸುವುದು ಅಸಾಧ್ಯವಾಗಿದೆ. ಹೀಗೆ ಸುರಕ್ಷಿತ ವೃತ್ತಿನಿರತ ಹೆಣ್ಣು ಸಹ ತಂದೆಯ ಕುಟುಂಬದಲ್ಲಿ ಶೋಷಣೆಗೆ ಒಳಗಾಗಿದ್ದಾರೆ.

ಇಲ್ಲಿ ಹೆಣ್ಣಿಗೆ ವಿವಾಹ ಎಂಬುದು ಒಂದು ಸುಖದ ಭರವಸೆಯ ತಾಣವೆಂದು ಬಾವಿಸುತ್ತಾಳೆ. ವಿವಾಹದ ಪ್ರಾರಂಭದ ದಿನಗಳಲ್ಲಿದ್ದ ಈ ಸುಖವು ಕ್ರಮೇಣ ತನ್ನ ಅಂತಃ ಸತ್ವವನ್ನು ಕಳೆದುಕೊಳ್ಳುತ್ತದೆ. ಇದಕ್ಕೆ ಮಹಿಳೆಯು ಉದ್ಯೋಗದ ನಿಮಿತ್ತ ವರ್ಗಾವಣೆಯು ಪ್ರಮುಖ ಕಾರಣವಾಗಿ ಕಥೆ ಅಭಿವ್ಯಕ್ತಿ ಪಡೆದುಕೊಂಡಿದೆ.

ಹೀಗೆ ವಿವಾಹವಾದ ಹೆಣ್ಣು(ಕೀರ್ತಿ) ಉದ್ಯೋಗನಿಮಿತ್ತ ಗಂಡನ ಮನೆಯಿಂದ ಬಹುದೂರ ಹೊರವಲಯದಲ್ಲಿ ವಾಸಿಸುವುದು ಅನಿವಾರ್ಯವಾಗಿದೆ. ಮಗಳ ಈ ವರ್ಗಾವಣೆ ತಂದೆಗೆ ವರವಾಗಿ ಮಗಳಿಲ್ಲದ ಸಮಯದಲ್ಲಿ ಅಳಿಯನಿಗೆ ಊಟ ಉಪಚಾರಗಳನ್ನು

ನೆರವೇರಿಸಿ ಮತ್ತೊಬ್ಬ ಹೆಣ್ಣುಮಗಳಾದ ಸ್ವರ್ಣಳನ್ನು ಪುನರ್ವಿವಾಹ ಮಾಡಿಸುವ ಆಲೋಚನೆಯು ಇದೆ. ಆರ್ಥಿಕತೆ ಮುಖ್ಯವಾಗಿದೆ. ಹಾಗೆ ಇಲ್ಲಿ ದುಡಿಯದ ಹೆಣ್ಣು ಕುಟುಂಬದ ಹೊರೆಯಾಗಿ ಪರಿಗಣಿಸಲಾಗುತ್ತಧೆ. ತಂದೆಯ ಈ ತೀರ್ಮಾನದ ಹಿಂದೆ ಹಿರಿಯ ಮಗಳ ಜೀವನದ ಪ್ರಶ್ನೆ ಮುಂದಾಗದೆ ಕಿರಿಯ ಮಗಳ ಹೊಣೆಗಾರಿಕೆಯೇ ಮುಖ್ಯವಾಗಿ ಕಾಣುವ ತಂದೆಯ ಆಲೋಚನೆಯ ಹಿಂದೆ ಗಂಡಸಿನ ಸಹಜವಾದ ಕ್ರೌರ್ಯವನ್ನು ಕಾಣಬಹುದಾಗಿದೆ ಹೊರತು ತಾಯಿ- ಮಕ್ಕಳ ವಾತ್ಸಲ್ಯವನ್ನು ಈ ಸಂಬಂಧದಲ್ಲಿ ಗುರುತಿಸಲು ಸಾಧ್ಯವಿಲ್ಲ.

ಕೀರ್ತಿಯ ತಾಯಿಯಾಗುವ ಹಂಬಲವನ್ನು ಮುಂದೂಡಿದ ಅವಳ ಗಂಡ ಮಹೇಶ ಸೊಸೆಯಾದ ಸ್ವರ್ಣಳಲ್ಲಿ ತಾಯ್ತನವನ್ನು ತುಂಬುತ್ತಾನೆ. ಲೇಖಕಿ ಪುರುಷಪಾತ್ರದ ಈ ಜಾರುವಿತೆಗೆ ಲೈಂಗಿಕ ಸಂಯಮವಿಲ್ಲದಿರುವಿಕೆಯನ್ನು ಗುರುತಿಸುತ್ತಾಳೆ ಹೊರತು ಅಪರಾಧಿಯನ್ನಾಗಿ ಮಾಡುವುದಿಲ್ಲ.

ಹಾಗೆ ಇಲ್ಲಿ ವೃತ್ತಿನಿರತ ಮಹಿಳೆ(ಕೀರ್ತಿ) ಗಂಡನಿಂದ ಅಂತರ ಕಾಯ್ದುಕೊಂಡಿದ್ದಾಳೆ. ಇದರ ಪರಿಣಾಮವಾಗಿ ತನ್ನದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಾಳೆ. ಹೆಣ್ಣು ಹೆತ್ತ ತಂದೆ ತಾಯಿ, ಸಹೋದರಿ ಮತ್ತು ಗಂಡನ ಸ್ವಾರ್ಥದಿಂದ ತನ್ನ ಬದುಕನ್ನು ನಾಶಗೊಳಿಸಿದ ಗಂಡನನ್ನು, ಹೆತ್ತವರನ್ನು ನಿರಾಕರಿಸಿ ಸ್ವತಂತ್ರ ಸ್ವಾವಾಲಂಬನೆಯ ಬದುಕನ್ನು ಆಯ್ದುಕೊಳ್ಳುವ ದಿಟ್ಟತನವನ್ನು ಮಹಿಳೆಯಲ್ಲಿ ಕಥೆಗಾರ್ತಿ ಗುರುತಿಸಿದ್ದಾರೆ.

ವಿಚ್ಛೇದನಗೊಂಡ ಈ ಮಹಿಳೆಯು ತನ್ನ ಗಂಡನ ಹಾಗೂ ಹೆತ್ತವರನ್ನು ಕಾಣುವುದು ನಾಲ್ಕು ವರ್ಷಗಳ ದೀರ್ಘಕಾಲಾವಧಿಯ ಅನಂತರ. ಗಂಡನ ಸಾವು ಬದುಕಿನ ಹೋರಾಟದ ಸಂದರ್ಭದಲ್ಲಿ ಆಕೆ ಕಾಣಿಸಿಕೊಳ್ಳುತ್ತಾಳೆ. ಗಂಡನ ಈ ಅವಸ್ಥೆಯನ್ನು ಕಂಡು ಮರುಗದ ತನ್ನ ಕುಟುಂಬದ ಇತರ ಸದಸ್ಯರಂತೆ ಕಂಡು ಕರ್ತವ್ಯ ನಿರ್ವಹಿಸುತ್ತಾಳೆ ಹೊರತು ಪತ್ನಿಯ ಸ್ಥಾವವನ್ನು ಕೊಡುವುದಿಲ್ಲ. ಅವನನ್ನು ಗಂಡನೆಂದು ಪರಿಗಣಿಸುವುದಿಲ್ಲ.

ಗಂಡನ ಮರಣದ ತರುವಾಯ ದುಃಖದಲ್ಲಿ ಮರುಗುವ ಹೆತ್ತ ತಂದೆ ತಾಯಿ, ತಂಗಿಯ(ಸವತಿಯ) ರೋದನಕ್ಕೆ ಸ್ಪಂದಿಸದೆ ವ್ಯಂಗದ ನಗುವಿನ ಮೂಲಕ ವಿರೋಧ ವ್ಯಕ್ತ ಪಡಿಸುತ್ತಾಳೆ.

ಇಲ್ಲಿ ಕೀರ್ತಿ ಗಂಡನಿಂದ ಬಿಡುಗಡೆ ಹೊಂದಿ ಬದುಕುತ್ತಿದ್ದರೂ ಅವನ ಸಾವಿನ ನಂತರವೂ ಅವನ ಹಿನ್ನೆಲೆಯಲ್ಲಿ ತನ್ನನ್ನು ಗುರುತಿಸಿ ವಿಧವೆಯು ಸಂಸ್ಕಾರಕ್ಕೆ ಅಣಿಗೊಳ್ಳಲು ಒತ್ತಾಯಿಸುವ ಹೆತ್ತ ತಾಯಿ, ನಾದಿನಿ, ಕ್ರೂರ ಸಮಾಜವನ್ನು ವಿರೋಧಿಸುವ ಮೂಲಕ ತನ್ನ ಹೆಣ್ಣುತನವನ್ನು ಕಾಪಾಡಿಕೊಳ್ಳುತ್ತಾಳೆ. ಗಂಡ ಪುನಃ ವಿವಾಹವಾಗುವುದರ ಹಿಂದೆ ಹೆತ್ತವರು, ಗಂಡ; ಕಪಟವರಿಯದ ಸಮಾಜ ಅವಳ ತಾಯ್ತನವೇ ಕಾರಣವೆಂದು ನಿಂದಿಸುತ್ತದೆ. ಆದರೆ ಈ ನಿಂದನೆಯನ್ನು ಕಡೆಗಣಿಸಿ ಆ ಕುಟುಂಬ, ಮತ್ತು ಸಮಾಜವನ್ನು ಮೀರುವ ಮೂಲಕ

ಮತ್ತೊಮ್ಮೆ ತನ್ನ ಸ್ವಾವಲಂಬಿ ಬದುಕಿನತ್ತ ದಿಟ್ಟಹೆಜ್ಜೆಯನ್ನಿಡುವ ಮಹಿಳೆಯನ್ನು ಈ ಕಥೆಯಲ್ಲಿ ಅಭಿವ್ಯಕ್ತಸಲಾಗಿದೆ.

ಹೀಗೆ ಸ್ವರ್ಣ ಗಂಡ, ಮನೆ ಮಕ್ಕಳು ಎಂಬ ದಾಂಪತ್ಯವನ್ನು ಪಡೆದುಕೊಂಡು, ಗಂಡನಿಲ್ಲದೆ ಅಶ್ರಯವಿಲ್ಲದೆ ಬದುಕುವ ತನ್ನ ಈ ಸ್ಥಿತಿಗೆ ತನ್ನಲ್ಲೇ ಕಾರಣವನ್ನು ಹುಡುಕುತ್ತಾಳೆ. ಇಲ್ಲಿ ಸ್ವರ್ಣ ತನ್ನ ಭಾವನೊಂದಿಗೆ ವಿವಾಹ ಸಂಬಂಧಕ್ಕೆ ಒಳಗಾದರೂ ವಿವಾಹ ನಂತರ ತನ್ನ ಗಂಡನಿಂದ ಯಾವುದೇ ಸುಖವನ್ನು ಅನುಭವಿಸಿಲ್ಲ. ಕಾರಣ ಕೀರ್ತಿಯ ಗಂಡ ಮಹೇಶ ಮೊದಲನೇ ಹೆಂಡತಿಯ ಪ್ರೀತಿಯನ್ನು ಮರೆಯದೆ ಸ್ವರ್ಣಳನ್ನು ಸ್ವೀಕರಿಸಲಾಗದೆ ತನ್ನ ಈ ಜಾರುವಿಕೆಯಿಂದ ತಾನು ಸುಖವಾಗಿರದೆ, ಕೀರ್ತಿಯನ್ನು ವಂಚಿಸಿ, ಸ್ವರ್ಣಳಿಗೂ ಸುಖ ಕೊಡದೆ ಮಹಿಳೆಯರ ಬದುಕಿನ ದುರಂತಕ್ಕೆ ಕಾರಣವಾಗಿದ್ದಾನೆ. ಕುಂಟುಂಬದಲ್ಲಿ ಸದಸ್ಯರ ನಡುವೆ ಹಿರಿಯ ಕಿರಿಯರ ನಡುವೆ ಪರಸ್ಪರ ಪ್ರೀತಿ, ವಿಶ್ವಾಸ ಸಹಕಾರ, ಹೊಂದಾಣಿಕೆಯಿಲ್ಲದೆ ಸ್ವಾರ್ಥ ಮುನ್ನೆಲೆಯಾಗಿ ಮಾನವೀಯ ಸಂಬಂಧಗಳು ಹಿನ್ನಲೆಗೆ ಸರಿದಾಗ ಪರಪ್ಪರ ಅರಿವಿನ ಕೊರತೆಯಿಂದ ಕುಟಂಬ ಸಂಬಂಧಗಳು ಒಡೆದು ಸಾಮರಸ್ಯ ಕಳೆದುಕೊಂಡು ಛಿದ್ರಗೊಂಡ ಕುಟುಂಬಗಳಾಗಿ ಮಾರ್ಪಡುತ್ತವೆ.

'ವ್ಯಭಿಚಾರ' ಕಥೆಯಲ್ಲಿ ತಂದೆ, ತಾಯಿ, ಅವಿವಾಹಿತ ಮಹಿಳೆಯಿರುವ ಕುಟುಂಬ; ಪತಿ–ಪತ್ನಿ ಇಬ್ಬರು ಮಕ್ಕಳಿರುವ ಮಿತ ಕುಟುಂಬ; ಗಂಡ–ಹೆಂಡತಿ ಮಕ್ಕಳಿದ್ದರೂ ಹೆಂಡತಿ ಪರಪುರುಷನೊಂದಿಗೆ ಲೈಂಗಿಕ ಸಂಬಂಧ ಹೊಂದಿ ಬದುಕುತ್ತಿರುವ ದಾಂಪತ್ಯ ಹೀಗೆ ಈ ಕಥೆಯಲ್ಲಿ ಮೂರು ಕುಟುಂಬಗಳು ಪರಸ್ಪರ ಮುಖಾಮುಖಿಯಾಗುವುದರ ಮೂಲಕ ಗಂಡು–ಹೆಣ್ಣುಗಳ ವೈವಾಹಿಕ ಸಂಬಂಧವನ್ನು ಕುರಿತು ಬದಲಾದ ಆಲೋಚನೆಯನ್ನು ಉಂಟುಮಾಡುವುದು ಪ್ರಧಾನವಾಗಿ ಕಂಡುಬರುತ್ತದೆ.

ಕಥೆಯ ಹಂದರವನ್ನು ನಿರೂಪಕಿ ಮತ್ತು ನಿರೂಪಕಿ ತಂಗಿ (ಸವಿ) ಮೂಲಕ ನೆರಮನೆಯ ಮಹಿಳೆಯ (ಲೀಲಕ್ಕ) ದಾಂಪತ್ಯವನ್ನು ಕುರಿತು ಹೇಳುವ ನಿರೂಪಣೆಯಿದೆ. ಈ ಕಥೆಯಲ್ಲಿ ನಿರೂಪಕಿ ಒಂದು ರೂಪನಿರ್ದಿಷ್ಟವಾದ ಹೆಸರುಳ್ಳ ಪಾತ್ರ (ಸುಚಿ)ವಾಗಿ ನಿರೂಪಿತಗೊಂಡಿದ್ದಾರೆ. ನಿರೂಪಕಿಯ ಕಥೆಯನ್ನು ನಿರೂಪಿಸುವ ಮೂಲಕ ಕಥನಕ್ರಿಯೆಯಲ್ಲಿ ಪಾತ್ರವಾಗಿ ಕಾಣಿಸಿಕೊಂಡಿದ್ದಾರೆ. ಈ ಕಥೆಯಲ್ಲಿ ನಿರೂಪಕಿಯು ವಿವರಿಸುವಂತೆ ಲೀಲಕ್ಕಳ ದಾಂಪತ್ಯವು ಗಂಡ–ಹೆಂಡತಿ ಎರಡು ಮಕ್ಕಳನ್ನು ಒಳಗೊಂಡ ಸುಖೀ ಸಂಸಾರವಾಗಿದೆ. ಈ ಮಹಿಳೆಗೆ ಗಂಡ ಮಕ್ಕಳ ಸೇವೆ ಮಾಡುವುದು ಕರ್ತವ್ಯವಾಗಿದೆ. ಈ ಹೊಣೆ ಗಾರಿಕೆಯನ್ನು ಜಾಗರೂಕತೆಯಿಂದ ನಿಭಾಯಿಸುವುದು, ಮನೆಕೆಲಸದಾಚೆ ತನ್ನ ಬಿಡುವಿನ ಸಮಯದಲ್ಲಿ ಇತರ ಕುಶಲ ಕಲೆಗಾರಿಕೆಯಲ್ಲಿ ತನ್ನನ್ನು ಗುರುತಿಸಿಕೊಂಡಿದ್ದಾಳೆ. ಲೀಲಾಳ ಗಂಡ ತನ್ನ ಹೆಚ್ಚು ಸಮಯವನ್ನು ಹೊರಗಿನ ಕೆಲಸಕಾರ್ಯಗಳಲ್ಲಿ ತೊಡಗಿರುತ್ತಿದ್ದನು. ಮನೆ ಹೆಂಡತಿ ಮಕ್ಕಳ ಬಗ್ಗೆ ಬೇಜವಾಬ್ದಾರಿ ಪುರುಷನಾಗಿ ಕಂಡುಬರುತ್ತಾನೆ. ಮಹಿಳೆಯನ್ನು ಮನೆಯ ಬಂಧನದಲ್ಲಿರಿಸಿ

ಹೊರಗಿನ ಸಂಪರ್ಕವಿಲ್ಲದೆ ನಿಯಂತ್ರಣಕ್ಕೊಳಪಡಿಸಿದ್ದಾನೆ. ತರುಣಿಯಾದ ಲೀಲಾಳು ವಯಸ್ಸಾದ ಪುರುಷನಲ್ಲಿ ತನ್ನ ಮನೋಕಾಮನೆಯನ್ನು ಪೂರೈಸಿಕೊಳ್ಳಲು ಅಸಾಧ್ಯವಾದಾಗ ಪರಪುರುಷನೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿ ಬದುಕನ್ನು ಸಾಗಿಸುತ್ತಾಳೆ. ಹೀಗೆ ಇಲ್ಲಿ ಹೆಣ್ಣು ಗಂಡನ ಸಮಾಜದ ದೃಷ್ಟಿಯಲ್ಲಿ ಪರಿತ್ಯಕ್ತಳಾಗಿ ಕಂಡುಬಂದರೂ ತನ್ನ ಈ ಸಂಬಂಧಕ್ಕೆ ತನ್ನದೇ ಆದ ರೀತಿಯಲ್ಲಿ ಮೌಲ್ಯವನ್ನು ಕೊಟ್ಟು ಬದುಕುವ ಗಟ್ಟಿತನವನ್ನು ಕಾಣಬಹುದಾಗಿದೆ. ಹೀಗೆ ಮಹಿಳೆಯ ಬದುಕನ್ನು ಸಾಂಪ್ರದಾಯಿಕ ದೃಷ್ಟಿಯಿಂದ ನೋಡುವ ನಿರೂಪಕಿ(ಸವಿ), ನಿರೂಪಕಿ ತಂಗಿ(ಸುಚಿ) ಆ ಮಹಿಳೆಯೊಂದಿಗೆ ಒಡನಾಟವನ್ನು ಕಳೆದುಕೊಂಡು ಮರ್ಯಾದಸ್ಥೆ ಮಹಿಳೆಯಾಗಿ ಕಂಡುಬರುತ್ತಾರೆ.

ಇಲ್ಲಿ ನಿರೂಪಕಿ ರೂಪವಂತೆಯಲ್ಲದ ಕಾರಣದಿಂದ ಗಂಡುಗಳ ತಿರಸ್ಕಾರಕ್ಕೆ ಒಳಗಾಗಿದ್ದಾಳೆ. ರೂಪವತಿಯಾದ ತಂಗಿಯ ವಿವಾಹವನ್ನು ಮಾಡಲು ತಂದೆ ತಾಯಿಯನ್ನು ಒಪ್ಪಿಸುವುದರ ಮೂಲಕ ತಾನು ಅವಿವಾಹಿತಳಾಗಿ ಉಳಿಯುತ್ತಾಳೆ. ತಂದೆ ತಾಯಿಯರ ರಕ್ಷಣೆಯಲ್ಲಿ ಬದುಕನ್ನು ಕಟ್ಟಿಕೊಳ್ಳುತ್ತಾಳೆ.

ವಿವಾಹವಾದ ನಿರೂಪಕಿ ತಂಗಿ(ಸವಿ) ವಿವಾಹ ಜೀವನವು ನಿರೂಪಕಿ ಮೂಲಕವೇ ನಿರೂಪಣೆಗೊಳ್ಳುತ್ತದೆ. ಸವಿಯ ದಾಂಪತ್ಯವು ಗಂಡ ಮತ್ತು ಎರಡು ಮಕ್ಕಳಿಂದ ಕೂಡಿದ ವೈಯಕ್ತಿಕ ಕುಟುಂಬವಾಗಿದೆ. ಶ್ರೀಮಂತ ಕುಟುಂಬವೂ ಆಗಿದೆ. ವಿವಾಹಪೂರ್ವದಲ್ಲಿ ಹೆಣ್ಣಿಗೆ ಕುಟುಂಬದ ಬಗ್ಗೆ ಇರುವ ಭರವಸೆ, ಉತ್ಸುಕತೆ ವಿವಾಹದ ನಂತರದಲ್ಲಿ ಕಣ್ಮರೆಯಾಗುವುದನ್ನು ಗುರುತಿಸುತ್ತಾಳೆ. ಅಲ್ಲದೆ ನೆರಮನೆಯ ಲೀಲಾಳ ಬದುಕನ್ನು ಕುರಿತು ಅಸಹನೀಯಹೊಳ್ಳುವ ಸವಿಯ ಪಾತ್ರವೇ ಲೀಲಾಳ ರೀತಿಯನ್ನು ಕುರಿತು "ಸುಚಿ ನಿನ್ನ ಆ ಲೀಲಕ್ಕ ರಿಯಲೀ ಗ್ರೇಟ್ ಕಣೇ...! ಈ ಮನುಷ್ಯ, ಆಕೆ ಇಬ್ರೂ ತುಂಬಾ ದೈರ್ಯವಂತರು...!"(ಕಳ್ಳುಬಳ್ಳಿ ಪುಟ-೨೪) ಎಂದು ಮೆಚ್ಚುಗೆಯನ್ನು ಸೂಚಿಸುವ ಮೂಲಕ ತನ್ನ ಈ ಬದಲಾದ ಆಲೋಚನೆಗೆ ತನ್ನ ದಾಂಪತ್ಯ ಅನುಭವವೇ ಕಾರಣವೆಂದು ವಿವರಿಸುತ್ತಾಳೆ.

ಸವಿಯ ದಾಂಪತ್ಯವು ವಿವಾಹದ ಮೊದಲ ದಿನಗಳಲ್ಲಿ ಅತ್ಯಂತ ಸಂತೋಷಕರವಾಗಿದ್ದು. ದಿನಕಳೆದಂತೆ ಗಂಡು- ಹೆಣ್ಣು ಸಂಬಂಧಗಳು ಅನ್ಯೋನತೆಯನ್ನು ಕಳೆದುಕೊಳ್ಳುತ್ತದೆ. ದಾಂಪತ್ಯದಲ್ಲಿ ಮಹಿಳೆ(ಸವಿ) ಮಕ್ಕಳ ಪಾಲನೆ ಪೋಷಣೆಯ ಎಲ್ಲಾ ಜವಾಬ್ದಾರಿಯನ್ನು ನಿಭಾಯಿಸುವ ಅನಿವಾರ್ಯಕ್ಕೆ ಒಳಗಾಗಿದ್ದಾಳೆ. ಮನೆಯ ಮಕ್ಕಳ ಬಿಡುವಿಲ್ಲದ ಅರೈಕೆಯಲ್ಲಿ ಗಂಡನ ದೈಹಿಕ ಸಂಪರ್ಕಕ್ಕೆ ತನ್ನನ್ನು ತೊಡಗಿಸಿಕೊಳ್ಳಲಾಗದೆ ಗಂಡನ ತಿರಸ್ಕಾರಕ್ಕೆ ಒಳಗಾಗಿದ್ದಾಳೆ. ಅಲ್ಲದೆ ಮಹಿಳೆ ಹೆರಿಗೆ ನಂತರ ದೈಹಿಕ ಸ್ವಾಸ್ಥ್ಯವನ್ನು ಕಳೆದುಕೊಂಡು ಗಂಡನ ಕಾಮತೃಷೆಗೆ ಸಹಕರಿಸದಾಗ ಅವನಿಂದ ಅವಮಾನಗೊಳ್ಳುತ್ತಾಳೆ. ಗಂಡ ಹೆಣ್ಣಿನ ಈ ಮೇಲಿನ ಕೋಪವನ್ನು ಮನೆಗೆ ಸರಿಯಾದ ವೇಳೆಯಲ್ಲಿ ಬರದೆ ತನ್ನ ದೈಹಿಕ ಮಾನಸಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಮಾತ್ರ ಮನೆಯಲ್ಲಿ ನೆಲೆಸಿ ಮಿಕ್ಕ ಸಮಯವನ್ನು ಹೊರವಲಯದಲ್ಲಿ ಕಳೆಯುವ ಮೂಲಕ

ಹೆಂಡತಿಯನ್ನು ಹಿಂಸಿಸುತ್ತಿದ್ದನು. ಮಹಿಳೆ ಗಂಡನ ಈ ವರ್ತನೆಯನ್ನು ಬದಲಾಯಿಸಲು ಮನೆಯ ಮಕ್ಕಳ ಆರೈಕೆಗೆ ಮತ್ತೊಂದು ಹೆಣ್ಣಾಳನ್ನು ನೇಮಿಸಿ ಹೆಚ್ಚಿನ ಸಮಯವನ್ನು ಗಂಡನೊಂದಿಗಿರಲು ಬಯಸುತ್ತಾಳೆ. ಆದರೆ ಗಂಡಸು ಅವಳನ್ನು ದೈಹಿಕ ಕಾಮನೆಗಾಗಿ ಬಳಸಿಕೊಂಡು ಅವಳೊಂದಿಗೆ ಯಾವ ಸಮಸ್ಯೆಯನ್ನು ಹಂಚಿಕೊಳ್ಳದೆ ಮೌನವಹಿಸುತ್ತಿದ್ದನು. ಇಲ್ಲಿ ಹೆಣ್ಣು ಗಂಡನ ಇಚ್ಛೆಯಿದ್ದಾಗ ತನ್ನ ದೇಹಕಾಮನೆಯನ್ನು ಪೂರೈಸಿಕೊಳ್ಳಬೇಕು ಹೊರತು ಮಹಿಳೆಯ ಈ ಮನೋಕಾಮನೆಯನ್ನು ಪೂರೈಸುವುದು ತನ್ನ ಕರ್ತವ್ಯವೆಂದು ಭಾವಿಸದೆ ಅದನ್ನು ನಿರಾಕರಿಸಿ ಅವಳನ್ನು ಅಪಮಾನಕ್ಕೊಳಗಾಗುವಂತೆ ಮಾಡುತ್ತಾನೆ. ಹೀಗೆ ಗಂಡನ ಸಾಮೀಪ್ಯದಿಂದ ವಂಚಿತಳಾದ ಮಹಿಳೆ ತನ್ನ ಈ ನ್ಯೂನತೆಯನ್ನು ಹತ್ತಿಕ್ಕಲಾರದೆ ಮನಸ್ಸಿನಲ್ಲಿ ಪರಪುರುಷನನ್ನು ಬಯಸುವುದರ ಮೂಲಕ ತನ್ನ ಬದುಕಿಗೆ ದಾರಿಯನ್ನು ಕಂಡುಕೊಳ್ಳುತ್ತಾಳೆ. ಸಾಂಪ್ರದಾಯಿಕ ಕುಟುಂಬದಲ್ಲಿ ಬೆಳೆದ ಮಹಿಳೆ(ಸವಿ) ತನ್ನ ಎಲ್ಲೆಯನ್ನು ಮೀರಲಾಗದೆ ಕನಸಿನಲ್ಲಿ ಪರಪುರುಷನನ್ನು ಕಾಣುವುದರ ಮೂಲಕ ಬದುಕಿನಲ್ಲಿ ಸಾರ್ಥಕತೆಯನ್ನು ಪಡೆಯುತ್ತಾಳೆ ಹೊರತು ತನ್ನನ್ನು ಅವಮಾನಿಸಿದ ಗಂಡನಲ್ಲಿ ತನ್ನ ಮನೋಕಾಮನೆಯನ್ನು ವ್ಯಕ್ತಪಡಿಸದೆ ಬದುಕುತ್ತಾಳೆ.

ಹೀಗೆ ಇಲ್ಲಿ ಸವಿ ತನ್ನ ಸಂಸಾರದ ಗಂಡನ ಸಹವಾಸದಿಂದ ಅನುಭವಿಸಿದ ಹಿಂಸೆಯನ್ನು ತನ್ನ ಜೀವಾನುಭವದಿಂದ ಕಂಡುಕೊಂಡು ಅದುವರೆಗೂ ನೆರಮನೆಯ ಲೀಲಕ್ಕಳ ಪರಿತ್ಯಕ್ತ ಬದುಕನ್ನು ಸಹ್ಯವಾಗಿಸುವ ಮೂಲಕ ಬದಲಾದ ಆಲೋಚನೆಯನ್ನು ಕಾಣಬಹುದಾಗಿದೆ. ಲೀಲಕ್ಕ ಪರಪುರುಷನೊಂದಿಗೆ ಹೊಂದಿರುವ ಸಂಬಂಧಕ್ಕೆ ಅವಳಲ್ಲಿ ಕಾರಣ ಹುಡುಕದೆ ಅವಳ ಗಂಡ ಅದಕ್ಕೆ ಕಾರಣವಾಗಿರುವುದನ್ನು ಗುರುತಿಸುತ್ತಾಳೆ. ಹೀಗೆ ಗಂಡನ ಸಮಾಜದ ಹಂಗಿಲ್ಲದೆ ತನಗೆ ಬೇಕಾದ ಬದುಕನ್ನು ಆಯ್ದುಕೊಂಡು ಜೀವಿಸುತ್ತಿರುವ ಲೀಲಕ್ಕಳ ಬದುಕನ್ನು ಪ್ರಶಂಸಿಸುವುದರ ಮೂಲಕ ಸಮಾಜಕ್ಕೆ ಹೆದರಿ ತನ್ನ ಮನೋಕಾಮನೆಯನ್ನು ಪೂರೈಸಿಕೊಳ್ಳಲಾಗದೆ ಮನಸ್ಸಿನಲ್ಲಿ ಪರಪುರುಷನನ್ನು ನೆನೆಯುವುದು ಹೆಚ್ಚು ಅನ್ವೆತಿಕವಾದದ್ದು ಎಂದು ನಿರೂಪಕಿ ಸವಿಯ ದಾಂಪತ್ಯವನ್ನು ನಿರೂಪಿಸುವುದರ ಮೂಲಕ ಏಕಕಾಲದಲ್ಲಿ ನಿರೂಪಕಿ ತನ್ನ ಚಿಂತನೆಯನ್ನು ಬದಲಾಯಿಸುವುದರ ಮೂಲಕ ಲೀಲಕ್ಕಳ ಅಂತಃಕರಣವನ್ನು ಅರಿಯುವ ಮೂಲಕ ಓದುಗರಲ್ಲಿಯೂ ಆ ಮಹಿಳೆಯ ಬಗ್ಗೆ ಹೊಸ ಆಲೋಚನೆಯನ್ನು ಉಂಟಾಗುವಂತೆ ಮಾಡುವ ಶಕ್ತಿ ಈ ಕಥೆಯಲ್ಲಿದೆ. ಹೀಗೆ ಮೂರು ಸ್ತ್ರೀ ಪಾತ್ರಗಳು ತಮ್ಮ ಚೌಕಟ್ಟಿನೊಳಗೆ ತಮ್ಮದೇ ರೀತಿಯಲ್ಲಿ ತಮ್ಮ ಅಸ್ಮಿತೆಯನ್ನು ಗುರುತಿಸಿಕೊಂಡಿದ್ದಾರೆ.

"ಕಳ್ಳುಬಳ್ಳಿ" ಕಥಾಸಂಕಲನವು ಹೆಸರೇ ಸೂಚಿಸುವಂತೆ ಇಲ್ಲಿನ ಗಂಡು-ಹೆಣ್ಣು ಸಂಬಂಧಗಳು ಬೆಸೆದುಕೊಂಡಿರುವುದೇ ರಕ್ತಸಂಬಂಧಿಗಳ ವ್ಯವಸ್ಥೆಯಿಂದ. ಗಂಡು-ಹೆಣ್ಣುಗಳ ವೈವಾಹಿಕ ಜೀವನವೂ ಸಹ ಈ ರಕ್ತಸಂಬಂಧಿಗಳ ವ್ಯವಸ್ಥೆಯಿಂದ ಏರ್ಪಡುತ್ತದೆ. ಆದರೆ ಈ ರಕ್ತಸಂಬಂಧಿಗಳ ಕುಟುಂಬವ್ಯವಸ್ಥೆಯಲ್ಲಿ ಹೆಣ್ಣಿನೊಂದಿಗೆ ಗುರುತಿಸಿಕೊಂಡಿರುವ ಪಾತ್ರಗಳಾದ

ಗಂಡ–ತಂದೆ–ತಾಯಿ–ಅತ್ತೆ–ಮಾವ–ನಾದಿನಿ ಇತ್ಯಾದಿ ಪಾತ್ರಗಳು ಕುಟುಂಬದಲ್ಲಿ ತಾನು ಹೊಂದಿರುವ ಅಧಿಕಾರವನ್ನು ಸಾಬೀತುಪಡಿಸಲು ಪ್ರಯತ್ನಿಸುವರು. ಇಲ್ಲಿ ಹೆಣ್ಣು ತನ್ನ ಸಂಬಂಧಿಕರ ಪುರುಷರಿಂದ ಸುರಕ್ಷಿತವಾಗಿಲ್ಲ ಬದಲಿಗೆ ಯಾವುದೇ ಸಂಬಂಧವಿಲ್ಲದ ಪರಪುರುಷನು ಹೆಣ್ಣಿನ ಸಾಮೀಪ್ಯದಿಂದ ತನ್ನ ಕ್ರೌರ್ಯವನ್ನು ಕಳೆದುಕೊಂಡು ಅವಳಿಗೆ ರಕ್ಷಣೆ ನೀಡಲು ಮುಂದಾಗುವ ಮನುಷ್ಯತ್ವವನ್ನು ಚಿತ್ರಿಸಿರುವುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ರಕ್ತಸಂಬಂಧಿಗಳ ಕುಟುಂಬದ ಅಧಿಕಾರದ ರಾಜಕಾರಣವನ್ನು ಬಯಲು ಮಾಡುವ ನಿರೂಪಣೆಯಿದೆ.

ಇಲ್ಲಿ ವಿವಿಧ ನೆಲೆಯಲ್ಲಿ ಗುರುತಿಸಿಕೊಂಡಿರುವ ಮಹಿಳಾ ಪಾತ್ರಗಳು ಪರಿತ್ಯಕ್ತಳಾಗಿ, ಪಥವೀಧರೆಯಾಗಿ, ಉದ್ಯೋಗಸ್ಥಳಾಗಿ, ಶಿಕ್ಷಕಿಯಾಗಿ ಸ್ವಾವಲಂಬಿ ಜೀವನ ಸಾಗಿಸುತ್ತಿದ್ದರು. ಈ ಮಟ್ಟವನ್ನು ಹೊಂದಲು ತಂದೆ–ಗಂಡನ ಆಸರೆ ಮುಖ್ಯವಾಗಿದೆ. ಹೀಗೆ ತಂದೆ– ಗಂಡನ ಅವಲಂಬಿತನವೇ ಮುಖ್ಯವಾಗಿ ಕಾಣವುದರ ಮೂಲಕ ಕರ್ತವ್ಯ ಪ್ರಜ್ಞೆಯಿಂದ ಜವಾಬ್ದಾರಿಯನ್ನು ನಿಭಾಯಿಸುವ ಸಲುವಾಗಿ ದಾಂಪತ್ಯದಲ್ಲಿ ಗಂಡಸರ ಅಧೀನತೆಗೆ ಒಳಗಾಗುವ ಹುನ್ನಾರಕ್ಕೆ ಒಳಗಾಗಿದ್ದಾಳೆ.

ಪಿತೃಪ್ರಧಾನ ಕುಟುಂಬವ್ಯವಸ್ಥೆಯಲ್ಲಿ ಹೆಣ್ಣನ್ನು ಪುರುಷ ಆರ್ಥಿಕವಾಗಿ, ಲೈಂಗಿಕವಾಗಿ ಅವಲಂಬಿತಳಾಗಿಸುವುದರಲ್ಲಿ ದಾರಿಗಳನ್ನು ಕಂಡುಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ಮಹಿಳೆಯು ಅಧಿಕಾರವನ್ನು ಪ್ರಶ್ನಿಸಿ ಹೊಂದಾಣಿಕೆ ಮಾಡಿಕ್ಕೊಳ್ಳುವ ಇಲ್ಲವೆ ಗಂಡನ ಪ್ರಧಾನ ವ್ಯವಸ್ಥೆಯನ್ನು ಧಿಕ್ಕರಿಸುವ ಮೂಲಕ ತನ್ನದೇ ಆದ ನೆಲೆಯಲ್ಲಿ ಕುಟುಂಬ ವ್ಯವಸ್ಥೆಯಲ್ಲಿ ತನ್ನ ಅಸ್ಮಿತೆಯನ್ನು ಕಾಯ್ದುಕೊಳ್ಳುವ ಧಾರಣಶಕ್ತಿಯುಳ್ಳ ಮಹಿಳೆಯರಾಗಿದ್ದಾರೆ.

೫.೭. ವಿನಯಾ

ವಿನಯಾ ಅವರು ಹೊಸತಲೆಮಾರಿನ ಕತೆಗಾರ್ತಿಯರಲ್ಲಿ ಪ್ರಮುಖರಾಗಿದ್ದಾರೆ. ಇವರು **'ಊರ ಒಳಗಣ ಬಯಲು', 'ಉರಿ'** ಎಂಬ ಕಥಾಸಂಕಲಗಳನ್ನು ರಚಿಸುವ ಮೂಲಕ ಹೆಣ್ಣಿನ ಹಲವು ವ್ಯಕ್ತಿತ್ವಗಳನ್ನು ಶೋಧಿಸುವ ಪ್ರಯತ್ನ ಮಾಡಿದ್ದಾರೆ. ಈ ಹೆಣ್ಣುಮಕ್ಕಳ ದಾರಿಗಳು ಸುಗಮವಾಗಿಲ್ಲ. ಸಂದಿಗ್ಧತೆಗಳಿಂದ ಕೂಡಿವೆ. ಈ ಸಂದಿಗ್ಧತೆಗಳನ್ನು ಮೀರಿ ಬದುಕುವ ಕುಂದಿಲ್ಲದ ಜೀವನಪ್ರೀತಿ ಇವರ ಕತೆಯ ಆಸ್ಥೆಯಾಗಿದೆ. ಇಲ್ಲಿ ಅಭಿವ್ಯಕ್ತವಾಗಿರುವ ಈ ಮಹಿಳೆಯ ಕುಟುಂಬಗಳು ವಿಶ್ವಕುಟುಂಬವಾಗಿ ಕಾಣುವ ಅನನ್ಯತೆಯನ್ನು ಈ ಮಹಿಳೆಯರಿಗೆ ಒದಗಿಸಿಕೊಟ್ಟಿದೆ.

ಈ ಕಥೆಯಲ್ಲಿ ಮೂಡಿಬಂದಿರುವ ವಿವಿಧ ಸ್ತ್ರೀಯರು ತಮ್ಮ ಬದುಕಿನ ಹಿನ್ನೆಲೆಯಿಂದ ವಿವಿಧ ಪಾತ್ರಗಳಾಗಿ ಗುರುತಿಸಿಕೊಂಡಿದ್ದಾರೆ. ಮುಖ್ಯವಾಗಿ ಪರಿತ್ಯಕ್ತ ಮಹಿಳೆ, ವಿಧವೆ, ಹುಚ್ಚುತನದ ಮಹಿಳೆ, ಸಂಗೀತಗಾರ್ತಿ, ವಿದ್ಯಾವಂತ ಮಹಿಳೆ, ತಾಯಿಯಾಗದ ಮಹಿಳೆ,

ಅತ್ತೆಯಾಗಿ, ತಾಯಿಯಾಗಿ, ಹೆಂಡತಿಯಾಗಿ, ಚಿಕ್ಕಮ್ಮನಾಗಿ, ಕೂಲಿ ಆಳಾಗಿ ಹೀಗೆ ವಿವಿಧ ಸಂಬಂಧಗಳ ನೆಲೆಯಲ್ಲಿ ಗುರುತಿಸಿಕೊಂಡಿದ್ದಾಳೆ. ಇಲ್ಲಿ ಬರುವ ಕುಟುಂಬಗಳು ಸಾಮಾನ್ಯವಾಗಿ ಊರೊಟ್ಟಿಗಿನ ಕುಟುಂಬಗಳಾಗಿ ಕಂಡುಬರುತ್ತವೆ. ಗಂಡನಿಲ್ಲದ ಹೆಂಡತಿಯಿರುವವರು, ತಂದೆ–ತಾಯಿ–ಮಕ್ಕಳಿರುವ ಕುಟುಂಬಗಳು ಹಾಗೂ ಮೀನುಗಾರರ ಕುಟುಂಬಗಳಿವೆ.

ಈ ಕತೆಗಳಲ್ಲಿ ಕಾಣಿಸಿಕೊಳ್ಳುವ ಮಹಿಳೆಯರಾದ ಪಳನಿ(ಎಲ್ಲಿ ಹುಟ್ಟಿ ಎಲ್ಲಿ ಚಾಚ್ಯಾದೋ), ಮಾದೇವಿ(ಮಾದೇವಿಯ ಮಳ್ಳು), ಬಾಯಕ್ಕ(ಮಾದೇವಿಯ ಮಳ್ಳು) ಇತ್ಯಾದಿ ಮಹಿಳೆಯರಿಗೆ ಮನೆಯೆಂಬುದು ಊರ ಸಮುದಾಯವಾಗಿದೆ. ಪಳನಿ ಸರ್ಕಸ್ ವೃತ್ತಿಯನ್ನವಲಂಬಿಸಿ ಬದುಕಿಗಾಗಿ ಒಂದೂರಿನಿಂದ ಮತ್ತೊಂದೂರಿಗೆ ಗುಳೆ ಹೋಗುತ್ತಿರುವ ಒಂದು ಕಡೆ ನೆಲೆಯಿಲ್ಲದ ಕುಟುಂಬಗಳಾಗಿವೆ. ಈ ಮಹಿಳೆಯರು ಗಂಡನಿದ್ದರೂ ಇಲ್ಲದಂತೆ ಬದುಕುತ್ತಿದ್ದಾರೆ. ಈ ಗಂಡಂದಿರು ಉಪಪತ್ನಿಯನ್ನು ತನ್ನ ಇಚ್ಛೆಯಂತೆ ಪಡಿಯುವ ಅಧಿಕಾರವುಳ್ಳವರು. ಈ ಉಪಪತ್ನಿ ಸ್ವಂತ ತನ್ನ ಹೆಂಡತಿಯ ತಂಗಿಯಾಗಿರಬಹುದು. ಹೀಗೆ ರಕ್ತಸಂಬಂಧಿಗಳಲ್ಲಿ ಬಹುಪತ್ನಿತ್ವ ಕುಟುಂಬವನ್ನು ಕಾಣಬಹುದಾಗಿದೆ. ಹೀಗೆ ಇಲ್ಲಿ ಕೆಳವರ್ಗದ ಕುಟುಂಬಗಳಲ್ಲಿ ಮಹಿಳೆಗೆ ಸುರಕ್ಷತೆಯಿಲ್ಲ. ಈ ಮಹಿಳೆಯರು ತಮ್ಮ ಸ್ಥಾನವನ್ನು ಪಡೆಯಲು ಹೋರಾಡುವರು. ಅಲ್ಲದೇ ಇಲ್ಲಿ ಹೆಣ್ಣಿಗೆ ಕುರೂಪಿತನವೇ ಅವಳನ್ನು ಈ ಸ್ಥಿತಿಗೆ ತರುವಲ್ಲಿ ಕಾರಣವಾಗಿದೆ. ತನ್ನ ಈ ಸ್ಥಿತಿಯನ್ನು ಅರಿತು ವಿವಾಹವಾಗಿ ತಿರಸ್ಕರಿಸುವ ಗಂಡಸನ್ನು ಪ್ರಶ್ನಿಸುವ ಮನೋಭಾವನೆಯನ್ನು ಹೊಂದಿದ್ದಾಳೆ. ಉತ್ತರವಾಗಿ "ಏನು ಏನ ತಪ್ಪು? ನಿನಗಿಂತ ಇವ್ಳೇ ಚಂದಾಗವ್ಳೆ. ಲೋಕ ದಾಗ್ಯಾರೂ ಹಿಂಗಿಲ್ವಾ?"(ಉರಿ, ಪು–೧೭). ಹೀಗೆ ಇಲ್ಲಿ ಗಂಡಸರ ಸಮಾಜದಲ್ಲಿ ಗಂಡು ತನ್ನಭಯಕೆಗೆ ಮತ್ತೊಂದು ಹೆಣ್ಣನ್ನು ಸ್ವೀಕರಿಸುವ ಹಾಗೂ ತಿರಸ್ಕರಿಸುವ ಅಧಿಕಾರವನ್ನು ಹೊಂದಿದ್ದು ಇದು ಸಹಜವಾಗಿದೆ. ಮಹಿಳೆ ಈ ಕುಟುಂಬವನ್ನು ಮತ್ತು ಗಂಡನನ್ನು ತಿರಸ್ಕರಿಸುತ್ತಾಳೆ, ಊರೂಟ್ಟಿನ ಕುಟುಂಬದಲ್ಲಿ ಮಗಳಾಗಿ ತಾಯಿಯಾಗಿ ಅಕ್ಕನಾಗಿ, ಗೆಳತಿಯಾಗಿ ತನ್ನ ಪಾತ್ರಗಳನ್ನು ನಿರ್ವಹಿಸುವ ಮೂಲಕ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಅಲ್ಲದೆ ಯಾವುದೇ ಸಂಬಂಧವಿಲ್ಲದ ವ್ಯಕ್ತಿಗಳು ತಂದೆಯಾಗಿ ಬಿಡುವರು. ಆಸರೆಯಾಗಿ ಊರಿನ ಮಠವೊಂದರಲ್ಲಿ ಬ ಭಿಕ್ಷೆ ಬೇಡುತ್ತಾ ಬದುಕುವ ರೀತಿ ಅನನ್ಯವಾಗಿದೆ. ಈ ಊರೊಟ್ಟಿಗಿನ ಬದುಕಿನ ಬಗ್ಗೆ ಹಿರಿ ತಲೆಮಾರಿನವರಿಗೆ ಇರುವ ಮಾನವಿಯತೆ ಕಿರಿ ತಲೆಮಾರಿನವರಲ್ಲಿ ಕಾಣದೆ ಪರಸ್ಪರ ಕೋಮುಗಲಭೆಗೆ ಕಾರಣರಾಗಿದ್ದಾರೆ. ಊರೊಟ್ಟಿಗಿನ ಸಂಬದವನ್ನು ಕೌಟುಂಬಿಕ ಸಂಬಂದವೆಂದು ಭಾವಿಸಿಸುವ ಪಳನಿಯನ್ನು ಅಪರಾಧಿಯಾಗಿಸಿದ್ದಾರೆ. ತಾನು ಆಡಿಸಿದ ಹುಡುಗರೆ ತನ್ನದೊಂದಿಗೆ ಅಮಾನೀಯವಾಗಿ ನಡೆದು ಕೊಂಡಾಗ ಮಕ್ಕಳ ಮೇಲಿನ ಸಹಜ ವಾತ್ಸಲ್ಯದಿಂದ ಅವರನ್ನು ಕ್ಷಮಿಸುವ ಮೂಲಕ ಸಾಮಾಜಿಕ ತಾಯ್ತನವನ್ನು ಈ ಪಾತ್ರದಲ್ಲಿ ಕಾಣಬಹುದಾಗಿದೆ.

[illegible]

ಈ ಕಥೆಗಳಲ್ಲಿ ಹೆಣ್ಣುಮಕ್ಕಳ(ಮಾದೇವಿ) ಹುಚ್ಚುತನಕ್ಕೆ ಅವರು ನೆಲೆಸಿರುವ ಕೌಟುಂಬಿಕ ಪರಿಸರವೇ ಮುಖ್ಯಕಾರಣವಾಗಿದೆ. ಇಲ್ಲಿ ಹೆಣ್ಣು ತನ್ನನ್ನು ಒಂದಲ್ಲ ಒಂದು ಚಟುವಟಿಕೆಗಳಲ್ಲಿ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾಳೆ. ಮನೆಯ ಗಂಡ, ಮಕ್ಕಳ ಸೇವೆಯ ಜೊತೆಗೆ ತಮ್ಮ ಪರಿಸರಕ್ಕೆ ಹೊಂದಿಕೊಳ್ಳುವಂತಹ ಮೀನುಮಾರುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಂದ ದುಡಿಮೆಯಿಂದ ಮನೆಯ, ಮಕ್ಕಳ ಬೇಕುಬೇಡಗಳನ್ನು ಈಡೇರಿಸುತ್ತಿದ್ದರು. ಈ ಮೀನುಗಳ ವ್ಯಾಪಾರವನ್ನು ದೊಡ್ಡ ವ್ಯಾಪಾರಿಗಿಗಳು ತಮ್ಮ ವಶಕ್ಕೆ ತೆಗೆದುಕೊಂಡಿರುವುದರಿಂದ ಮಹಿಳೆಯರು ಈ ವೃತ್ತಿಯಿಂದ ವಂಚಿತರಾದರು. ಅಲ್ಲದೆ ಮನೆಯಲ್ಲಿರುವ ಹೊಸ ಸಾಧನ ಸಂಪರ್ಕಗಳು (ದೂರವಾಣಿ] ಮನೆಯ ವಾತವರಣವನ್ನು ಕಲುಕುತ್ತದೆ. ಅದರಲ್ಲಿ ಹೆಚ್ಚು ಒಂಟಿತನವನ್ನು ಅನುಭವಿಸುವವಳು ಅ ಮನೆಯ ತಾಯಂದಿರು. ಹೀಗೆ ಗಂಡ ಮತ್ತು ಮಕ್ಕಳ ಅವಗಣನೆಗೆ ಒಳಗಾದ ಈ ಮಹಿಳೆಯರು ಮಾನಸಿಕ ಸ್ವಾಸ್ಥವನ್ನು ಕಳೆದುಕೊಂಡು ಹುಚ್ಚರಾಗುತ್ತಾರೆ. ಮನೆಯ ಗಂಡಸು ರೋಗಗ್ರಸ್ಥನಾದಾಗ ಚಿಕ್ಕಪುಟ್ಟ ವ್ಯಾಪಾರವಹಿವಾಟನ್ನು ಮಾಡುವುದರ ಮೂಲಕ ಮನೆಯ ಆರ್ಥಿಕ ಸಮತೋಲನವನ್ನು ಕಾಪಾಡುವವರು ಮಹಿಳೆಯರಾಗಿದ್ದಾರೆ. ಹೀಗೆ ಮಹಿಳೆಯರು ಸಂಕಷ್ಟಕ್ಕೀಡಾದಾಗ ಅವರಿಗೆ ನೆರವಾಗುವವರು ನೆರೆಹೊರೆಯ ಮಹಿಳೆಯರು. ಹೀಗೆ ಆರ್ಥಿಕವಾಗಿ ನೆರವಾಗುವ ಮೂಲಕ ಆ ಕುಟುಂಬವನ್ನು ರಕ್ಷಿಸುವ ಹೊಣೆಗಾರಿಕೆಯನ್ನು ಹೊತ್ತುವರು ಧೀಮಂತ ಮಹಿಳೆಯರು(ಬಾಯಕ್ಕ). ಇಲ್ಲಿ ಕುಲೀನ ಮನೆತನದಲ್ಲಿ ಕೆಲಸಮಾಡುವ ಕೂಲಿಮಹಿಳೆ ಮತ್ತು ಯಜಮಾನಿಯ ಸಂಬಂಧಗಳು ಅಧಿಕಾರ-ಅಧೀನತೆಯ ನೆಲೆಯಲ್ಲಿರದೆ ಸಹೋದರಿತ್ವದಿಂದ ಕೂಡಿದೆ. ಈ ಮಹಿಳೆಯರು ತಮ್ಮ ತಮ್ಮ ಕೌಟುಂಬಿಕ ಸಮಸ್ಯೆಗಳನ್ನು ಹಂಚಿಕೊಳ್ಳವ ಮೂಲಕ ಸಂಬಂಧಗಳ ವಿಸ್ತಾರತೆಯನ್ನು ಅರಿಯಬಹುದು. ಈ ಮಹಿಳೆಯರು ಮನೆಯಲ್ಲಿ ತಮ್ಮ ಗಂಡಸರಿಗೆ ಹೆಚ್ಚು ಅವಲಂಬಿತರು. ಕುಟುಂಬದಲ್ಲಿ ಗಂಡಸು ತಾನು ಪಡೆದ ಅಧಿಕಾರದ ಹಿನ್ನೆಲೆಯಲ್ಲಿ ಪತ್ನಿಯಿರುವಾಗಲೇ ಮತ್ತೊಂದು ಹೆಣ್ಣಿನೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿರುವರು. ಈ ಸಂದರ್ಭದಲ್ಲಿ ಮಹಿಳೆಯರು ತನ್ನ ಆಕ್ರೋಶವನ್ನು ವ್ಯಕ್ತಪಡಿಸುವುದು ಸಹಾ ಅವರು ತಾವು ಮಾಡಿದ ಆಹಾರಪದಾರ್ಥಗಳಲ್ಲಿ ಹುಳಿಕಾರವನ್ನು ಹೆಚ್ಚಿಸಿ ಗಂಡಸರ ಕಣ್ಣಲ್ಲಿ ಕಣ್ಣೀರನ್ನು ಕಾಣುವ ಮೂಲಕ ಪ್ರತಿಭಟನೆಯನ್ನು ತೋರಿಸುತ್ತಾರೆ. ಬೇರೆ ದಾರಿಯಿಲ್ಲದೆ ತನ್ನ ಮನೆಮಕ್ಕಳ ನೆರೆಹೊರೆಯ ಸಂಬಂಧಗಳ ಒಡನಾಟದಿಂದ ತಮ್ಮ ನೌವನ್ನು ಮರೆತು ಬಾಳುವ ಧಾರಣ ಶಕ್ತಿಯುಳ್ಳ ಮಹಿಳೆಯರಾಗಿದ್ದಾರೆ. ಈ ಮಹಿಳೆಯರು ತಮ್ಮ ಮನೆತನದ ಕಷ್ಟಗಳಿಗೆ ಸ್ಪಂದಿಸಿದ ಕುಲೀನ ಮಹಿಳೆಯರನ್ನು ಸ್ಮರಿಸುವರು. ಆದರೆ ಈ ಸ್ಮರಣೀಯ ಗುಣ ಅವಳ ಗಂಡಸರಲ್ಲಿ ಕಾಣದೆ ಆಮನೆಯ ಒಡತಿ ಹಾಗೂ ಅವಳ ನೀಡುವ ಕೆಲಸವನ್ನು ಕಡೆಗಣಿಸಿ ಹಣದ ಮೌಲ್ಯದಿಂದ ಅದನ್ನು ಪರಿಹರಿಸುವ ಸಂಕುಚಿತ ಮನೋಭಾವದ ಪುರುಷರನ್ನು ಕಾಣಬಹುದಾಗಿದೆ. ಬದುಕಿನ ಬಗ್ಗೆ ಅಪಾರ ಶ್ರದ್ಧೆಯುಳ್ಳ ಈ ಮಹಿಳೆಯರು ಹೆಣ್ತನದ ಸಹಜ ಆಕಾಂಕ್ಷೆಗಳಿವೆ. ಉಡುವ-ತೊಡುವ ಅಭಿಲಾಷೆವುಳ್ಳವರು. ಅದನ್ನು ಮನೆಯ

ಪರಿಸರದಲ್ಲಿ ಈಡೇರಿಸಿಕೊಳ್ಳಲು ಅಸಾಧ್ಯವಾದಾಗ ಹೊರಗಿನಿಂದ ಪಡೆಯಲು ಬಯಸುತ್ತಾರೆ. ಉನ್ನತ ಅಧಿಕಾರಗಳು ತಾವು ಸಮಾಜದಲ್ಲಿ ಗುರುತಿಸಿಕೊಳ್ಳಲು ಜನಸಾಮಾನ್ಯರಿಗೆ ಉಚಿತ ಉಡುಗೊರೆಗಳನ್ನು ನೀಡುವರು. ಬಡಮಹಿಳೆಯರು ಅದನ್ನು ಪಡೆದುಕೊಳ್ಳುವ ಆತುರದಲ್ಲಿ ತಮ್ಮತನವನ್ನು ಮಾರಿಕೊಳ್ಳುವ ಇಲ್ಲವೆ ಸಾವಿಗೀಡಾಗುವ, ಇಲ್ಲವೆ ಮಾನಸಿಕ ಸ್ವಾಸ್ಥ್ಯವನ್ನು ಕಳೆದುಕೊಳ್ಳುವ ಮೂಲಕ ಮನೆಯಲ್ಲಿ ಮಕ್ಕಳ ಮತ್ತು ಗಂಡನ ತಿರಸ್ಕಾರಕ್ಕೆ ಗುರಿಯಾಗುವ ಮೂಲಕ ಒಂಟಿತನವನ್ನು ಅನುಭವಿಸುವರು. ಇಲ್ಲಿ ಮಹಿಳೆಯರು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಗಂಡನ ಕುಟುಂಬದಲ್ಲಿ ದೊರಕದಾಗ ಸಹೋದರಿತ್ವದ ಕುಟುಂಬದಲ್ಲಿ ಪಡೆಯುವ ಮೂಲಕ ಕುಟುಂಬದಲ್ಲಿ ವಿಶ್ವವನ್ನು ಕಾಣುವ ವಿಶ್ವಕೌಟುಂಬಿಕ ವಾತಾವರಣವನ್ನು ಸಂಬಂಧಗಳ ಮೂಲಕ ಅದರಲ್ಲೂ ಮಹಿಳಾ ಸಂಬಂಧಗಳ ನೆಲೆಯಲ್ಲಿ ಗುರುತಿಸಲಾಗಿದೆ.

ಬಹುಪಾಲು ಕಥೆಗಳಲ್ಲಿ ಮುಖ್ಯವಾಗಿ **'ನೀ ಬಿಟ್ಟರೂ ನಿನ್ನ ಮನೆ ನನ್ನ ಬಿಡದವ್ವಾ', 'ನಾ ನಿಲ್ಲುವವಳಲ್ಲ', 'ನಿನ್ನ ಕಂಡ ಮಾಯಿ', 'ಕಂಡವರಿಗಲ್ಲ ಕಂಡವರಿಗಷ್ಟೆ'** ಇತ್ಯಾದಿ ಕಥೆಗಳಲ್ಲಿ ನಿರೂಪಕಿಯೇ ಕಥೆಯ ನಿರೂಪಣೆ ಮಾಡುತ್ತಿದ್ದು ಆ ಮೂಲಕ ಕಥೆಯಲ್ಲಿ ಒಂದು ಪಾತ್ರವಾಗಿ ಹೆಸರನ್ನು ಹೊಂದಿ ಕಥೆಯ ಕ್ರಿಯೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ನಿರೂಪಕಿ ಬಹುಪಾಲು ಕಥೆಗಳಲ್ಲಿ 'ನಾನು' ಆಗಿ ಆ ಮೂಲಕ ಮತ್ತೊಂದು ಪಾತ್ರದ ಅಥವಾ ಆ ಕುಟುಂಬದ ಸದಸ್ಯಳಾಗಿ ಅಂದರೆ ಮಗಳಾಗಿ, ಗೆಳತಿಯಾಗಿ, ಸೊಸೆಯಾಗಿ, ಪತ್ನಿಯಾಗಿ, ತನ್ನ ಕರ್ತವ್ಯವನ್ನು ನಿಭಾಯಿಸುವುದರ ಮೂಲಕ ಮತ್ತೊಂದು ಪಾತ್ರದ ಹಿರಿಮೆಯನ್ನು ಆ ಮೂಲಕ ಕುಟುಂಬದಲ್ಲಿ ಅವರ ಸ್ಥಾನವನ್ನು ತಿಳಿಸುವ ಪ್ರಯತ್ನವನ್ನು ಲೇಖಕಿ ಮಾಡಿದ್ದಾರೆ.

'ನಾ ನಿಲ್ಲುವವಳಲ್ಲ' ಕಥೆಯಲ್ಲಿ ನಿರೂಪಕಿ ಸೊಸೆಯಾಗಿ ತನ್ನ ಸೋದರತ್ತೆಯಾದ ಲಲಿತತ್ತೆಯ ಕುಟುಂಬವನ್ನು ನಿರೂಪಿಸುವ ನಿರೂಪಣೆಯಿದೆ. ನಿರೂಪಕಿ ಲಲಿತತ್ತೆಯ ಮನೆಗೆ ಬಂದಿರುವುದು ಒಣಮೀನು ತಿನ್ನುವ ನೆಪ ಮಾಡಿ ಆ ಮೂಲಕ ಅತ್ತೆಯ ಮಮತೆಯನ್ನು ಸವಿದು ಸಂಬಂಧಗಳನ್ನು ಗಟ್ಟಿಗೊಳಿಸುವ ಪ್ರಯತ್ನವನ್ನು ಕಾಣಬಹುದಾಗಿದೆ. ಇಲ್ಲಿ ಲಲಿತತ್ತೆ ದೇಹ ದಣಿಯುವಂತೆ ದುಡಿದು ಆ ಮನೆಯ ನೆಮ್ಮದಿಯನ್ನು ಕಾಪಾಡಿಕೊಳ್ಳುವಲ್ಲಿ ಶಕ್ತಳಾಗಿದ್ದಾಳೆ. ಮಹಿಳೆಯರ ಬಿಡುವಿಲ್ಲದ ದುಡಿಮೆಯೇ ಇತರ ಸದಸ್ಯರ ಜೀವಂತಿಕೆಗೆ ಸಾಕ್ಷಿಯಾಗಿದೆ. ಇಲ್ಲಿ ಲಲಿತತ್ತೆಯ ಗಂಡ ಹಾಗೂ ಮಗ ಗೋಪಣ್ಣ ಅಂಗನ್ಯೂನತೆಯಿಂದ ನರಳುತ್ತಿದ್ದು ಆ ಮೂಲಕ ಬದುಕುವ ಆಸೆಯನ್ನು ಬಿಟ್ಟವರು. ಬದುಕುತ್ತಿರುವವರು. ಗೋಪಣ್ಣನಿಗೆ ತನ್ನ ದೈಹಿಕ ಸ್ಥಿತಿಯಿಂದ ವಿಧ್ಯಾಭ್ಯಾಸ, ವಿವಾಹದಿಂದ ವಂಚಿತನಾದ. ಸೊಸೆಯಾದ ನಿರೂಪಕಿಯ ಬದುಕಿನಲ್ಲಿ ಇವೆಲ್ಲವನ್ನು ಕಂಡು ಅಸೂಯೆ ಪಡದೆ ತಮಗಾಗಿ ತನ್ನ ಕುಟುಂಬವನ್ನು ಬಿಟ್ಟು ಬಂದಿರುವ ನಿರೂಪಕಿ(ಸೊಸೆ)ಯ ದೊಡ್ಡತನವನ್ನು ಹೊಗಳುವನು. ಅಲ್ಲದೆ ನಿರೂಪಕಿ(ಸೂಸೆ)ಯು ಸಹಾ ಗಂಡ ಮಕ್ಕಳನ್ನು ಬಿಟ್ಟು ಬಂದಿರುವ ಉದ್ದೇಶ ಸಹ ಲಲಿತತ್ತೆಯ ಕುಟುಂಬದವರಿಗೆ ತನ್ನ ಸಂಸಾರವನ್ನು ಕಂಡು ಅದರಿಂದ ವಂಚಿತನಾದ ಗೋಪಣ್ಣನನ್ನು ಹೋಲಿಸಿ ಕೊರಗಬಾರದೆಂಬ

ಅಳಕಿನಿಂದ. ಹೀಗೆ ಪರಸ್ಪರ ಅರಿವಿನ ಮೂಲಕ ತಮಗೆ ಎದುರಾದ ಸಂಕಷ್ಟಗಳನ್ನು ನುಂಗಿಕೊಳ್ಳುವ ಪ್ರಯತ್ನವನ್ನು ಮಾಡುವವರು. ಇಲ್ಲಿ ನಿರೂಪಕಿ(ಸೊಸೆ) ಮರುದಿನವೇ ತನ್ನ ಗಂಡನ ಮನೆಗೆ ಹಿಂದಿರುಗುವ ನಿರ್ಧಾರ ತನ್ನ ಅತ್ತೆಯ ಕುಟುಂಬದಲ್ಲಿ ಒಡಕು ಮೂಡದಿರಲೆಂದು. ಇಲ್ಲಿ ಗಂಡನ ಮನೆಗೆ ಹೊರಟ ಸೂಸೆಯನ್ನು(ನಿರೂಪಕಿ) ಲಲಿತ್ತತೆಯ ಕುಟುಂಬದವರು ಅವಳನ್ನು ಕುಟುಂಬ ಸಮೇತವಾಗಿ ಪುನಃ ಕರೆಯುವುದರ ಹಿಂದೆ ತಮಗೊದಗಿದ ಕಷ್ಟಗಳನ್ನು ಎದುರಿಸಿ ಬದುಕುವ ಶಕ್ತಿಯಿದೆ ಎಂಬ ಧೋರಣೆ. ನಿರೂಪಕಿ ಇದೇ ಕಥೆಯಲ್ಲಿ ಉಪಕತೆಯನ್ನು ತಂದು ಮೀನುಗಾರ ಕುಟುಂಬದ ಬವಣೆಯನ್ನು ನಿರೂಪಿಸಿದ್ದಾರೆ. ಈ ಕುಟುಂಬದಲ್ಲಿ ಪಾರ್ವತಿ ಮನೆಯ ಒಡತಿ. ಎಂಟ ಪಾರ್ವತಿಯ ಗಂಡ. ಕೆಳಜಾತಿಯವರಾದ ಇವರು ವಾಸಿಸುವುದು ಊರ ಹೊರವಲಯದಲ್ಲಿ. ಮೀನು ಮಾರಾಟದಿಂದ ಊರ ಜನರ ಜೀವಕಳೆಗೆ ಸಾಕ್ಷಿಯಾಗಿದ್ದಾರೆ. ಪಾರ್ವತಿ ಕುಡುಕ ಗಂಡನನ್ನು ಬಡಿಯುವಳು. ಆ ಮೂಲಕ ಅವನನ್ನು ಸರಿದಾರಿಗೆ ತರುವಳು. ಹೊಡೆದು ಅವನ ದೇಹವನ್ನು ಪೂರೈಯುವಳು ಅವಳೇ. ಇಲ್ಲಿ ಪಾರ್ವತಿ ತಾಯ್ತನದಿಂದ ವಂಚಿತಳಾಗಿದ್ದಾಳೆ. ಹೀಗೆ ಯಾವುದೇ ಅಪೇಕ್ಷೆಯಿಲ್ಲದೆ ಕೂಡಿ ಬದುಕುವ ದಾಂಪತ್ಯವು ಅಸಹಜವಾದದ್ದು. ಹೀಗೆ ಬದುಕುವ ಛಲವೇ ಇವರಿಬ್ಬರನ್ನು ಬೆಸೆಯುವ ಕೊಂಡಿಯಾಗಿದೆ. ಪಾರ್ವತಿ–ಎಂಟನ ದಾಂಪತ್ಯವನ್ನು ಪಾರ್ವತಿ–ಪರಮೇಶ್ವರ ದಾಂಪತ್ಯಕ್ಕೆ ಲಲಿತ್ತತೆ ಹೊಲಿಸುವಿಕೆ ನಿರೂಪಕಿ(ಸೂಸೆ)ಯಲ್ಲಿ ತಾನು ತನ್ನ ಬದುಕಿನಲ್ಲಿ ಇಂತಹ ವ್ಯಕ್ತಿಗಳ ಬಗ್ಗೆ ತೋರುವ ಉದಾಸಿನದ ನಿರ್ಲಕ್ಷ್ಯತೆಯನ್ನು ಆತ್ಮಾವಲೋಕನ ಮಾಡಿಕ್ಕೂಳ್ಳುವ ಮೂಲಕ ತನ್ನ ವ್ಯಕ್ತಿತ್ವವನ್ನು ಬದಲಾಯಿಸಿಕೊಳ್ಳುವ ಧೋರಣೆಯಿದೆ. ಅಲ್ಲದೆ ನಿರೂಪಕಿ ಲಲಿತ್ತೆಯ ಕುಟುಂಬದವರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಕೌಂಟುಬಿಕ ಬಾಂಧವ್ಯವನ್ನು ಉಳಿಸಿಕೊಳ್ಳುವ ಆಲೋಚನೆಯನ್ನು ಕಾಣಬಹುದಾಗಿದೆ. ವ್ಯಕ್ತಿ ತನ್ನ ಸಮಸ್ಯೆಗಳಿಗೆ ತಾನೇ ಪರಿಹಾರ ಕಂಡುಕೊಳ್ಳುವ ಮೂಲಕ ಕೌಟುಂಬಿಕ ಸಂಬಂಧಗಳ ಆಚೆಗೂ ವ್ಯಕ್ತಿ ತಾನಾಗಿ ಉಳಿಯುವುದು ಸಹಜವಾಗಿದೆ. ಹೀಗೆ ವ್ಯಕ್ತಿ ಸಂಬಂಧಗಳ ನಡುವಿನ ಸಂಘರ್ಷವನ್ನು ಈ ನಿರೂಪಣೆಯಲ್ಲಿ ಕಾಣಬಹುದಾಗಿದೆ.

'ಕಂಡವರಿಗಲ್ಲ ಕಂಡವರಿಗಷ್ಟೇ' ಕತೆಯಲ್ಲಿ ನಿರೂಪಕಿ ಒಂದು ಪಾತ್ರವಾಗಿ ತನ್ನನ್ನು ಮಗಳ ಪಾತ್ರದಲ್ಲಿ ಗುರುತಿಸಿಕೊಂಡು ತನ್ನ ಚಿಕ್ಕಮಳಾದ ರಂಜು ಚಿಕ್ಕಿಯ ಕುಟುಂಬವನ್ನು ಅನಾವರಣಗೊಳಿಸಿದ್ದಾರೆ. ನಿರೂಪಕಿ ತನ್ನ ಬಾಲ್ಯದ ದಿನಗಳನ್ನು ತನ್ನ ಅಜ್ಜನ ಮನೆಯಲ್ಲಿ ಚಿಕ್ಕಮ್ಮಳಾದ ರಂಜು ಚಿಕ್ಕಿಯ ಆರೈಕೆಯಲ್ಲಿ ಬೆಳೆದವಳು. ಹೀಗಾಗಿ ನಿರೂಪಕಿಗೆ ತಾಯಿಯೊಂದಿಗಿನ ಒಡನಾಟ ಕಡಿಮೆಯಿದೆ. ಈ ತಾಯಿ ಪ್ರೀತಿಯನ್ನು ಚಿಕ್ಕಮ್ಮನಲ್ಲಿ ಕಂಡಿದ್ದಾರೆ. ಇಲ್ಲಿ ರಂಜು ಚಿಕ್ಕಿ ನರ್ಸ ವೃತ್ತಿಯಲ್ಲಿ ತನ್ನನ್ನು ತೊಡಗಿಸಿಕೊಂಡ ಕಾರಣದಿಂದ ನಿರೂಪಕಿ ತನ್ನ ತಾಯಿಯ ಕುಟುಂಬದಲ್ಲಿ ನೆಲೆಸಿದಳು.. ನಿರೂಪಕಿಯ ಚಿಕ್ಕಮ್ಮಳಾದ ರಂಜು ಚಿಕ್ಕಿಯನ್ನು ಹೀರೇಗುತ್ತಿಯ ಗೌಂವಕರ ಸಣ್ಣಪ್ಪ ವಿವಾಹವಾಗುತ್ತಾನೆ. ಸಣ್ಣಪ್ಪ ಮುಂಬೈನಲ್ಲಿ ವ್ಯಾಪಾರಿ ವೃತ್ತಿಯನ್ನು

ಮಾಡುವವನು. ಚಿಕ್ಕಿ ತನ್ನ ಗಂಡನ ಇಚ್ಛೆಯಂತೆ ನರ್ಸ್ ವೃತ್ತಿಯನ್ನು ಬಿಟ್ಟು ಮನೆಯೊಡತಿಯಾಗಿರಲು ಹೊಂದಿಕೊಂಡಳು. ದೂರದ ಮುಂಬೈನಲ್ಲಿ ವಾಸಿಸುವ ಅನಿವಾರ್ಯದಿಂದ ಚಿಕ್ಕಿಯ ಬಾಣಂತನಕ್ಕೆ ತಾಯಿಯ ಕುಟುಂಬವಾಗಲಿ, ಸಹೋದರ, ಸಹೋದರರಾಗಲಿ ನೆರವಾಗದೆ ಯಾತನೆಯನ್ನು ಅನುಭವಿಸಿದಳು. ಇಲ್ಲಿ ಚಿಕ್ಕಿ ನಿರೂಪಕಿ(ಮಗಳು)ಯನ್ನು ತಾನೂ ಸಲುಹಿದ ಪರಿಣಾಮ ತನ್ನನ್ನು ನಿರೂಪಕಿಯ ತಾಯಿಂದ ತನ್ನ ರಕ್ಷಣೆಯನ್ನು ಅಪೇಕ್ಷಿಸುವುದು ಸಹಜ. ಅಂದರೆ ಅವಳ ಸಹೋದರಿಯ ರಕ್ಷಣೆಯನ್ನು ಅಪೇಕ್ಷಿಸುವುದು ಸಹಜ. ಆದರೆ ನಿರೂಪಕಿಯ ತಾಯಿ ಅವಳ ವಾತ್ಸಲ್ಯವನ್ನು ಹಣದ ಮೌಲ್ಯದಿಂದ ಅಳೆದು ಅದನ್ನು ಪರಿಹರಿಸಲು ಮುಂದಾಗುತ್ತಾಳೆ. ಈ ವರ್ತನೆ ನಿರೂಪಕಿಯನ್ನು ಆಸಹನೆಗೆ ಗುರಿಮಾಡುತ್ತದೆ. ಚಿಕ್ಕಿ ಗಂಡ ಸಣ್ಣಪ್ಪ ವ್ಯಾಪಾರದ ನಷ್ಟದಿಂದ ಆರ್ಥಿಕ ದುಸ್ಥಿತಿ ಒದಗಿದಾಗ ಚಿಕ್ಕಿ ತನ್ನ ತಂದೆಯ ಭೂಮಿಯಲ್ಲಿ ಪಾಲನ್ನು ತನ್ನ ಹಕ್ಕು ಎಂಬಂತೆ ಪಡೆಯುತ್ತಾಳೆ. ಮುಂಬೈಯಲ್ಲಿ ಗುಡಿಸಲು ವಾಸ ಮಾಡುತ್ತಾಳೆ. ಅಲ್ಲದೆ ತನ್ನ ಕುಟುಂಬವನ್ನು ರಕ್ಷಿಸುವ ಸಲುವಾಗಿ ಉಪಕಸುಬಗಳನ್ನು ಆಶ್ರಯಿಸಿದ್ದಾಳೆ. ಕೋಳಿ, ಎಮ್ಮೆ ಸಾಕಾಣಿಕೆ, ಶಾಲೆಯಲ್ಲಿ ಅಡುಗೆ ಕೆಲಸ ಮುಂತಾದ ಕೆಲಸಗಳನ್ನು ನಿರ್ವಹಿಸುವ ಮೂಲಕ ತನ್ನನ್ನು ಅವಮಾನಿಸಿದವನ ಮುಂದೆ ಬದುಕಿ ತೊರಿಸುವ ಧ್ಯೇಯವನ್ನು ಕಾಣಬಹುದಾಗಿದೆ. ಹೀಗೆ ತನ್ನ ಕುಟುಂಬವನ್ನು ನಿರ್ವಹಿಸಿದ ಚಿಕ್ಕಿಯ ಕಿರಿಯ ಸಹೋದರ ಆಕೆಯ ಮಗಳಿಗೆ ಆಶ್ರಯ ನೀಡುವ ನೆಪದಲ್ಲಿ ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಾನೆ. ಈ ಅಘಾತದಿಂದ ಪಾರಾಗಲು ಚಿಕ್ಕಿ ಮಗಳು ಮನೆಬಿಟ್ಟು ತನ್ನ ಪ್ರಿಯತಮನ ಜೊತೆ ಬದುಕನ್ನು ಸಾಗಿಸಲು ತಾಯಿ ಕುಟುಂಬವನ್ನು ತೊರೆದಳು. ಕಿರಿಯ ಸಹೋದರ ತನ್ನ ಕುಟುಂಬಕ್ಕೆ ಮಾಡಿದ ಅನ್ಯಾಯಕ್ಕೆ ಪರಿಹಾರವಾಗಿ ಹಣವನ್ನು ಬೇಡುವ ಅವಳ ಆಲೋಚನೆಯ ಹಿಂದೆ ಅಸಹಾಯಕತೆಯಿದೆ. ಕುಟುಂಬ ಪ್ರೀತಿ ಮುಖ್ಯವಾಗಿದೆ. ಆದರೆ ತನ್ನ ಕಿರಿಯ ಅಣ್ಣನ ಅಂಗ ವೈಕಲ್ಯತೆಯನ್ನು ಕಂಡು ಮರುಗುತ್ತಾಳೆ. ಕೊರಗುತ್ತಾಳೆ. ಇದು ಅವಳನ್ನು ನಿರ್ಲಿಪ್ತವಾಗಿಸುತ್ತದೆ. ಯಾವುದನ್ನು ನಿರೀಕ್ಷಿಸದೆ ಹಿಂದಿರುಗುತ್ತಾಳೆ ನಿರೂಪಕಿ ಚಿಕ್ಕಿಯ ಯಾತನೆಯನ್ನು ನೋಡಿಯು ಸಹ ತನ್ನ ಬಿಡುವಿಲ್ಲದ ಸಮಯದಲ್ಲಿ ಅವಳ ಕಷ್ಟಗಳಿಗೆ ನೆರವಾಗದ ಹಿಂಸೆ ಪಡುತ್ತಾಳೆ. ಆದರೆ ಚಿಕ್ಕಿಯ ಮಗನಿಗೆ ಹಣದ ಸಹಾಯ ಮಾಡುವುದರ ಮೂಲಕ ತಾಯಿಯ ಋಣವನ್ನು ತೀರಿಸುವ ಆಲೋಚನೆಯ ಹಿಂದೆ ಮಾನವೀಯತೆಯನ್ನು ಗುರುತಿಸಬಹುದಾಗಿದೆ.

'ತಾಯಿ ಎಂಬ ಹೆಣ್ಣು' ಎಂಬ ಕತೆಯಲ್ಲಿ ಸ್ವಗತದ ಮೂಲಕ ನಿರೂಪನೆಗೊಳ್ಳುತ್ತದೆ. ಇಲ್ಲಿ ನಿರೂಪಕಿ ಮಗನ ಪಾತ್ರದಲ್ಲಿ ಗುರುತಿಸಿಕೊಂಡು ತನ್ನ ತಾಯಿಯ ಬದುಕಿನ ಚಿತ್ರಣವನ್ನು ನೀಡುವುದರ ಮೂಲಕ ಮಗನಾಗಿ ತನ್ನ ಜವಾಬ್ದಾರಿಯನ್ನು ಆತ್ಮಾವಲೋಕನ ಮಾಡಿಕೊಳ್ಳುವ ನಿರೂಪಣೆಯಿದೆ. ಇಲ್ಲಿ ನಿರೂಪಕಿ ತಂದೆ ತಹಸೀಲ್ದಾರ್. ಅಧಿಕಾರಸ್ಥ. ತನ್ನ ಅಧಿಕಾರವನ್ನು ಕುಟುಂಬದಲ್ಲಿಯೂ ನೆಲೆಗೊಳಿಸಿದ್ದಾನೆ. ಇಲ್ಲಿ ನಿರೂಪಕ ಆಯಿಯ ವರ್ಷಾಂತ್ಯವನ್ನು

ಆಚರಿಸುವ ಹಿನ್ನಲೆಯಲ್ಲಿ ಆಯಿ ಹಾಗೂ ನಿರೂಪಕ(ಮಗ) ಬಾಂಧ್ಯವವನ್ನು ನಿರೂಪಿಸಲಾಗಿದೆ. ನಿರೂಪಕನ ತಂದೆ ಮನೆಯ ಯಾವ ವ್ಯವಹಾರಗಳನ್ನು ಗಮನಿಸದ ಬೇಜವಬ್ದಾರಿ ವ್ಯಕ್ತಿ. ಇಲ್ಲಿ ತಾಯಿ ಮನೆಯ ಹಾಗೂ ಮಗನ ಸಂಪೂರ್ಣ ಹೊಣೆಗಾರಿಕೆಯನ್ನು ನಿಭಾಯಿಸುತ್ತಾಳೆ. ಇಲ್ಲಿ ತಂದೆ ಮಗನ ಬಾಂಧವ್ಯ ಸಡಿಲವಾಗಿದೆ. ತಾಯಿ ತನ್ನ ಮಗ ಬದುಕಿನಲ್ಲಿ ಸೋತರು ಅವಮಾನಿಸದೆ ಸಂತೈಸಿ, ಸಮಾಧಾನಿಸಿ ಶಿಕ್ಷಿಸಿ ತಿದ್ದುವ ಮೂಲಕ ಬದುಕನ್ನು ರೂಪಿಸುತ್ತಾಳೆ. ಆಯಿ ತನ್ನ ಗಂಡನ ಬೇಕು ಬೇಡಗಳನ್ನು ಈಡೇರಿಸುವಳು. ಆಯಿ ಗಂಡನ ಪರಸ್ತ್ರೀಯ ಸಹವಾಸವನ್ನು ತಿಳಿದು ಪ್ರತಿಭಟಿಸುವುದಿಲ್ಲ. ಬದಲಾಗಿ ಮಗ ಹಾಗೂ ಸಂಬಂಧಿಕರ ಒಡನಾಟದಲ್ಲಿ ಜೀವನವನ್ನು ಕಳೆಯುವಳು. ತನ್ನ ಗಂಡನ ಸಾಮೀಪ್ಯ ಬರುವ ಸವತಿಯರನ್ನು ಸಹ ಅವಮಾನಿಸದೆ ಗಂಡನ ಅವರ ಸಂಬಂದವನ್ನು ಕುರಿತು 'ನಿಮ್ಮ ಅಣ್ಣೋರ್ರಾ' ಎಂದು ಸಂಭೋಧಿಸುವುದರ ಮೂಲಕ ತನ್ನ ಗಂಡನನ್ನು ನೀವು ಹೇಗೆ ಕಾಣಬೇಕು ಎಂದು ಉಪದೇಶಿಸುವ ಪರಿಯಿದೆ. ಅಲ್ಲದೆ ತನ್ನ ಗಂಡನ ಸಹವಾಸದಿಂದ ಸಿಕ್ಕಿಹಾಕಿಕೊಂಡು ಅವರ ಗಂಡದಿರಿಂದ ಅವಮಾನಗೊಂಡಾಗ ಅವರನ್ನು ಸಮಾಧಾನಿಸಿ ರಕ್ಷಿಸುವಳು. ಆಯಿ ತನ್ನ ಗಂಡನ ಎಲ್ಲ ಅಧಿಕಾರವನ್ನು ಸಹಿಸುವುದು ಸಹ ಅತ್ಯಂತ ಸಂಯಮದಿಂದ ಕಾರಣ ಆ ಗಂಡಸು ನಮ್ಮನ್ನು ಅರ್ಥಮಾಡಿಕೊಳ್ಳುವನು ಎಂಬ ಮಹತ್ವಾಕಾಂಕ್ಷೆಯಿಂದ. ಇಲ್ಲಿ ಹೆಣ್ಣು ತನ್ನ ಗಂಡನ ಅಧಿಕಾರದ ಬಲದಿಂದ ಸೋತರು ಆ ಸೋಲಿನಲ್ಲಿ ಗೆಲುವನ್ನು ಕಾಣಬಯಸುತ್ತಾಳೆ.

ಮುಪ್ಪಿನ ಕಾಲದಲ್ಲಿ ಗಂಡ ಮನೆಯಲ್ಲಿರುವ ಮೂಲಕ ಹೆಣ್ಣಿನ ಮಹತ್ವವನ್ನು ಕಾಣಿಸುವುದು ಕತೆಗಾರ್ತಿಯ ಉದ್ದೇಶವಾಗಿದೆ. ಆಯಿಯ ಮನೋಕಾಮನೆಯಾಗಿದೆ. ತನ್ನ ಗಂಡನ ಮುಂಚೆ ತಾನೇ ಸಾವನ್ನು ಸ್ವೀಕರಿಸುವುದರ ಮೂಲಕ ತನ್ನ ಅನುಪಸ್ಥಿತಿಯಲ್ಲಿ ತನ್ನ ಮಹತ್ವವನ್ನು ಗಂಡ ಅರಿಯಬಹುದು ಎಂಬ ಅಭಿಲಾಷೆ. ಆದರೆ ಅದು ನೆರವೇರಲಿಲ್ಲ. ಗಂಡ ಮರಣದ ತರುವಾಯ ತನ್ನ ಸವತಿಯರನ್ನು ಶಿಕ್ಷಿಸುವ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾಳೆ. ಆಯಿ ತನ್ನ ಅಸಹಾಯಕ ಸ್ಥಿತಿಗೆ ಮರಗುವ ಮೂಲಕ ಸಾವಿಗೀಡಾಗುತ್ತಾಳೆ. ಆಯಿಯ ಈ ಸ್ಥಿತಿಗೆ ಗಂಡ ಕಾರಣನಾಗುವಂತೆ ಮಗನು(ನಿರೂಪಕ) ಕಾರಣಕರ್ತನಾಗಿದ್ದಾನೆ. ಆಯಿಯನ್ನು ರಕ್ಷಿಸುವ ಶಕ್ತಿಯಿದ್ದರೂ ತನ್ನ ಬೇಜವಾಬ್ದಾರಿಯ ಬಗ್ಗೆ ಹಪಹಪಿಸುತ್ತಾನೆ. ಆಯಿಯ ಸಾವಿಗೆ ತಂದೆಯಂತೆ ತಾನು(ನಿರೂಪಕ) ಕಾರಣಕರ್ತ ಎಂದು ಆತ್ಮಾವಲೋಕನ ಮಾಡಿಕೊಳ್ಳುವ ನಿರೂಪಣೆ ಇಲ್ಲಿ ಕಾಣುತ್ತೇವೆ. ನಿರೂಪಕ ತನ್ನ ಹೆಂಡತಿಯಲ್ಲಿ ತಾಯಿಯನ್ನು ಕಾಣುವ ಮೂಲಕ ಅವಳನ್ನು ಪ್ರೀತಿಯಿಂದ ಕಾಣುವ ಗಂಡನಾಗುತ್ತಾನೆ.

ಇವರ ಕಥೆಗಳಲ್ಲಿ ಮೇಲವರ್ಗದ ಕುಟುಂಬಗಳು ಅಭಿವ್ಯಕ್ತಗೊಂಡಿವೆ. ಗಂಡ–ಹೆಂಡತಿ–ಮಗಳಿರುವ ಸರಳಕುಟುಂಬ ದಿನೇಶನದು. ಈ ಕತೆಯ ನಾಯಕಿ ಮಾಲತಿ. ಪದವೀಧರೆಯಾದ ಈ ಹೆಣ್ಣು ವಿದ್ಯಾಭ್ಯಾಸ ಮುಗಿಸಿದ್ದು ಅಂಜಿಕೆಯಿಂದ. ಅಲ್ಲದೆ ಸರ್ಕಾರಿ ನೌಕರಸ್ಥನಾದ ದಿನೇಶನು ವಿವಾಹವಾಗಲು ಒಪ್ಪಿಕೊಂಡಿದ್ದು ಹೆಣ್ಣಿನ ಅದೃಷ್ಟವೆಂಬಂತೆ ಬಿಂಬಿತವಾಗಿದೆ.

ಗ್ರಾಮಸೇವಕಿ ಶಾಂತಕ್ಕಳ ಮುದ್ದಿನ ಮಗಳು ಮಾಲತಿ. ತನ್ನ ವೈಯಕ್ತಿಕ ಸುಖಕ್ಕಾಗಿ ಗಂಡ-ಮಗಳನ್ನು ತೊರೆದು ಕುಟುಂಬವನ್ನು ತೂರೆಯುತ್ತಾಳೆ. ಹೆಣ್ಣಿನ ಈ ನಿರ್ಧಾರ ಮಾಲತಿಯ ತಂದೆಯನ್ನು ಕುಗ್ಗಿಸಿತು. ಅಲ್ಲದೆ ಆ ಕುಟುಂಬದ ಬಳಗದವರು ಶಾಂತಕ್ಕಳನ್ನು ಜಾರಿಣಿ ಎಂದು ಭಾವಿಸಿ ತಿರಸ್ಕರಿಸಿತು. ಅಲ್ಲದೆ ತಾಯಿಯಿದ್ದು ಇಲ್ಲದಂತಿದ್ದ ಮಾಲತಿಯ ಬಗ್ಗೆ ಸಮಾಜದ ಅನುಕಂಪ ಹೇಳತೀರದು. ವಿವಾಹವಾದ ನಂತರ ಮಾಲತಿ ತನ್ನನ್ನು ತಾಯಿಯ ಮಗಳಾಗಿ ಗುರುತಿಸಿಕೊಳ್ಳದೆ ತನ್ನ ಪತಿಯ ಹೆಂಡತಿಯಾಗಿ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಹೀಗೆ ಇಲ್ಲಿ ಹೆಣ್ಣು ತಂದೆ, ಗಂಡ, ತಾಯಿ ಮತ್ತೊಬ್ಬರ ನೆಲೆಯಲ್ಲಿ ಗುರುತಿಸಿಕೊಳ್ಳುತ್ತಾಳೆ ಹೊರತು ಸ್ವಂತ ವ್ಯಕ್ತಿತ್ವ ಅವಳಿಗಿಲ್ಲ. ಹೀಗೆ ತನ್ನನ್ನು ಒಂಟಿಯಾಗಿಸಿದ ತಾಯಿಯ ನಿರ್ಧಾರ ಮಾಲತಿಯನ್ನು ಮನೋರೋಗಿಯನ್ನಾಗಿಸಿತು. ಈ ಮನೋರೋಗವು ಅವಳ ಗಂಡನ ಕುಟುಂಬದ ಶಾಂತಿಯನ್ನು ಕದಡಲು ಕಾರಣವಾಯಿತು. ದಿನೇಶನಿಗೆ ಮಾಲತಿಯ ಮೇಲೆ ಅತಿಯಾದ ಪ್ರೇಮವಿದ್ದರೂ ತನ್ನ ದಿನನಿತ್ಯದ ಬಿಡುವಿಲ್ಲದ ವ್ಯವವಹಾರಗಳಲ್ಲಿ ಹೆಚ್ಚು ಸಮಯವನ್ನು ಕಳೆಯುವುದರಿಂದ ಅವಳನ್ನು ಸಮಾದಾನಿಸುವುದು ಅಸಾಧ್ಯವಾಗಿದೆ..ಇದು ಅವಳ ಮನೋರೋಗಕ್ಕೆ ಕಾರಣವಯಿತು. ಅವಳನ್ನು ಇರುವ ಸ್ಥಿತಿಯಲ್ಲಿ ಹೊಂದಿಕೊಂಡನು. ಅದೇ ರೀತಿ ಮಾಲತಿ ತನ್ನ ಗಂಡನ ಬೇಕು ಬೇಡಗಳಿಗೆ ತಕ್ಕಂತೆ ತನ್ನ ಬದುಕನ್ನು ರೂಪಿಸಿಕೂಂಡಳು. ಆದರೆ ತನ್ನನ್ನು ಮೀರಿಬರುವ ಈ ದುಃಖವನ್ನು ತಡೆಯಲು ಅಸಾಧ್ಯವಾಗಿ ಮರುಗುತ್ತಿದ್ದಳು. ಮಾಲತಿ ತಾಯಿಯಾಗಿ ತಾಯ್ತನವನ್ನು ಅನುಭವಿಸುತ್ತಿರುವ ಈ ಹೊತ್ತಿನಲ್ಲಿ ತನ್ನ ತಾಯಿಯ ನಿರ್ಧಾರದ ಬಗ್ಗೆ ಹೆಚ್ಚು ಘಾಸಿಗೊಳ್ಳುತ್ತಾಳೆ. ತಾಯಿಯ ತೀರ್ಮಾನದ ಹಿಂದೆ ಅಡಗಿರುವ ಸತ್ಯವನ್ನು ಅರಿಯಬೇಕೆಂಬ ತುಡಿತವಿದೆ. ಮಾಲತಿ ತಾಯಿಯನ್ನು ಆಕಸ್ಮಿಕವಾಗಿ ಎದುರಾದಾಗ ಮನದಾಳದ ಪ್ರಶ್ನೆಯನ್ನು ಕೇಳದೆ ಮೌನವಹಿಸುತ್ತಾಳೆ, ತಾಯಿಯು ತನ್ನ ಮಗಳು ಮಾಲತಿಯೆಂದು ತಿಳಿದು ತಿಳಿಯದಂತಿರುವ ಸ್ವಭಾವದವಳು. ಮಾಲತಿ ತಾಯಿಯ ಈ ಪಲಾಯನವಾದಿತನ ರಹಸ್ಯವಾಗಿಯೇ ಉಳಿಯುವುದು. ದಿನೇಶ ಮಾಲತಿಯ ತಾಯಿಯನ್ನು ಮತ್ತೊಮ್ಮೆ ಕಂಡಾಗ ಅವಳನ್ನು ಹಿಡಿಯುತ್ತೇನೆ ಎಂಬ ಭರವಸೆ ಮೂಡಿಸಿ ಅವಳ ಕಷ್ಟಗಳಿಗೆ ಸ್ಪಂದಿಸುವ ಮೂಲಕ ಅವಳನ್ನು ಸಂತೈಸುತ್ತಾನೆ. ಹೀಗೆ ಗಂಡನ ಸಾಂತ್ವನ ಅವಳಲ್ಲಿ ಬದುಕುವ ಆಕಾಂಕ್ಷೆಯನ್ನು ಇಮ್ಮಡಿಗೊಳಿಸುತ್ತದೆ.

'ತೇರೆ ಬಿನಾ' ಕಥೆಯಲ್ಲಿ ನಿರೂಪಕಿ ಪತ್ನಿ ಪಾತ್ರದಲ್ಲಿ ಗುರುತಿಸಿಕೊಂಡಿದ್ದಾಳೆ. ತನ್ನ ತಂದೆಯ ಆಕಾಂಕ್ಷೆಯಂತೆ ಒಳ್ಳೆ ಸಂಗೀತಗಾರ್ತಿಯಾಗುವ ಆಕಾಂಕ್ಷೆಯನ್ನು ಹೊತ್ತ ಈ ಹೆಣ್ಣಿಗೆ ಗಂಡನ ನಿಂದನೆ ಸಹಕಾರವಿಲ್ಲದೆ ತಲ್ಲಣಿಸುತ್ತಾಳೆ. ವಿವಾಹಪೂರ್ವದಲ್ಲಿ ಹೆಣ್ಣಿನ ಸಾಧನೆಗೆ ಸಹಕರಿಸುವ ಭರವಸೆಯಿತ್ತ ಗಂಡ ಕ್ರಮೇಣ ದಿನಗಳಂತೆ ಅವಳ ಯಶಸ್ಸನ್ನು ಕಂಡು ಅಸಹನೆಗೊಳ್ಳುತ್ತಾನೆ. ಅಲ್ಲದೆ ಇಲ್ಲಿ ಗಂಡಸು ತನಗೆ ಮಕ್ಕಳಾಗದಿರುವುದು ದೂಡ್ಡ ಅವಮಾನ ಎಂದು ಬಾವಿಸುವನು. ತನ್ನ ಮೇಲಿನ ಈ ಕಳಂಕವನ್ನು ಹೋಗಲಾಡಿಸಲು ಹೆಂಡತಿಯನ್ನು

ಪರಪುನಿಂದ ಮಕ್ಕಳನ್ನು ಪಡೆಯಲು ಬಯಸುತ್ತಾನೆ. ಸಂಪ್ರದಾಯಸ್ಥಳಾದ ಶಾಂತ ನಿರಾಕರಿಸಿದಾಗ ಅವಳನ್ನು ಪರಪುರುಷರೊಂದಿಗೆ ಸಂಬಂಧವನ್ನು ಕಟ್ಟಿ ಹೋಲಿಸುವ ಮೂಲಕ ಅವಳನ್ನು ಮಾನಸಿಕವಾಗಿ ಹಿಂಸಿಸುತ್ತಾನೆ. ಗಂಡನ ಹಿಂಸೆ ಸಹಿಸದೆ ತನ್ನ ಸಾಧನೆಯನ್ನು ಬದಿಗೊತ್ತಿ ಗಂಡನ ಪತ್ನಿಯಾಗಿ ಗೃಹಿಣಿ ಸೇವೆ ಮಾಡಲು ನಿರ್ಧರಿಸುತ್ತಾಳೆ. ಮಗಳ ಈ ಸಮಸ್ಯೆಯನ್ನು ಅರಿತ ತಂದೆ ಕುಟುಂಬ ಅವಳಿಗೆ ಸಾಂತ್ವಾನ ನೀಡುವ ಮೂಲಕ ಅವಳ ಸಾಧನೆಗೆ ನೆರವಾಗುತ್ತಾನೆ. ಹೀಗೆ ತಂದೆಯ ಪ್ರೋತ್ಸಾಹದಿಂದ ತಾಯಿಯ ಆಕಾಂಕ್ಷೆಯನ್ನು ಪೂರೈಸಲು ನಿರ್ಧರಿಸಿ ಗಂಡನ ತಿರಸ್ಕಾರವನ್ನು ಕಡೆಗಣಿಸಿ ಸಂಗೀತಾಭ್ಯಾಸದಲ್ಲಿ ತನ್ನನ್ನು ತೊಡಗಿಸಿಕೊಂಡು ತನ್ನತನವನ್ನು ಉಳಿಸಿಕೊಳ್ಳುತ್ತಾಳೆ. ಅಲ್ಲದೆ ಗಂಡನು ತನ್ನ ಸಾಧನೆಯನ್ನು ಗುರುತಿಸಿ ಮೆಚ್ಚುವಂತೆ ಗಂಡನನ್ನು ಬದಲಾಯಿಸುವ ಪ್ರಯತ್ನದಲ್ಲಿ ತೊಡಗುತ್ತಾಳೆ. ಹೀಗೆ ಇಲ್ಲಿ ಹೆಣ್ಣು ಬದುಕಿನಲ್ಲಿ ಬಂದ ಸಮಸ್ಯೆಗಳಿಗೆ ಅದನ್ನು ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ತನ್ನಲ್ಲಿ ಪರಿಹಾರವನ್ನು ಕಾಣುತ್ತಾಳೆ. ಹೊರತು ಗಂಡನಿಂದ ಯಾವುದೇ ಪರಿಹಾರವನ್ನು ಬಯಸುವುದಿಲ್ಲ. ವಿನಯಾ ಅವರು ತಮ್ಮ ಕಥೆಗಳಲ್ಲಿ ಜನಸಾಮಾನ್ಯರ ಬದುಕಿನ ಹಲವು ಮಗ್ಗುಲುಗಳನ್ನು ಶೋಧಿಸುವ ಪ್ರಯತ್ನ ಮಾಡಿದ್ದಾರೆ. ಈ ಮೂಲಕ ಹೆಣ್ಣಿನ ಜೀವನ ಪ್ರೀತಿಯನ್ನು ನೋಡಬಹುದು. ಇಲ್ಲಿ ಹೆಣ್ಣು ತನ್ನ ನೆಲೆಯಲ್ಲಿ ನಿಂತು ನೋಡವುದಲ್ಲದೆ. ಇನ್ನೊಬ್ಬ ವ್ಯಕ್ತಿಯ ನೆಲೆಯಲ್ಲಿಯೂ ನಿಂತು ನೋಡುವ ಮೂಲಕ ಅವರ ಮನೋಭಾವನೆಗಳನ್ನು ಅರ್ಥೈಸಿಕೊಂಡು ಕೌಟುಂಬಿಕ ಸಂಬಂಧಗಳನ್ನು ಉಳಿಸಿಕೊಳ್ಳುವ ಪ್ರಯತ್ನವಿದೆ. ಈ ಗುಣವು ಹೆಣ್ಣಿನ ವ್ಯಕ್ತಿತ್ವದ ಮೂಲ ನೆಲೆ ಎಂಬಂತೆ ಬಿಂಬಿಸಲಾಗಿದೆ. ಹೆಣ್ಣು ತನಗಾದ ನೋವು-ನಲಿವು. ಸಂಕಟವನ್ನು ಮೌನದಲ್ಲಿ ವ್ಯಕ್ತಪಡಿಸುತ್ತಾಳೆ ಅವಳ ಸಂಕಟವನ್ನು ಅರ್ಥಮಾಡಿಕೊಳ್ಳುವ ಭಾಷೆಯನ್ನು ಗಂಡು ಕಲಿಯಬೇಕಾಗಿದೆ ಎಂಬ ನಿರೂಪಣೆಯಿದೆ. ಇಲ್ಲಿನ ಎಲ್ಲಾ ಹೆಣ್ಣುಮಕ್ಕಳು ತನ್ನನ್ನು ತಾನೇ ಅರಿಯುವ ಪ್ರಕ್ರಿಯೆ ಮುಖ್ಯವಾಗಿದೆ. ಹೆಣ್ಣು ಶ್ರಮಜೀವಿ, ಈಕೆಯ ಕೊನೆಯಿಲ್ಲದ ಶ್ರಮಕ್ಕೆ ಕುಟುಂಬದಿಂದ ಮನ್ನಣೆ ಸಿಗದಾಗ ರೋಗಗ್ರಸ್ತರಾಗುತ್ತಾರೆ. ಇದಕ್ಕೆ ಕಾರಣವನ್ನು ಪುರುಷನಲ್ಲಿ ಕಾಣದೆ ವ್ಯವಸ್ಥೆಯಲ್ಲಿ ಕಾಣುಬಹುದಾಗಿದೆ. ಇಲ್ಲಿನ ವ್ಯವಸ್ಥೆ ಎಂಬುದು ಗಂಡು-ಹೆಣ್ಣಿನ ಸಂಬಂಧವನ್ನು ಅಧಿಕಾರ ಮತ್ತು ಅಧೀನತೆಯ ನೆಲೆಯಲ್ಲಿ ರೂಪಿಸಿದೆ. ಇದಕ್ಕೆ **'ನಾ ನಿಲ್ಲುವವಳಲ್ಲ'** ಕಥೆಯ ನಾಯಕಿ ಪಾತ್ರ ಮುಖ್ಯ ಉದಾಹರಣೆಯಾಗಿದೆ. ಈ ನಾಯಕಿ ಕೌಟುಂಬಿಕ ಸಂಬಂಧಗಳಲ್ಲಿ ಬದುಕುತ್ತಿದ್ದರೂ ಸಹಾ ನಿರಾಳವಾಗಿ ಬದುಕಲು ಸಾಧ್ಯವಾಗದ ಪ್ರಶ್ನೆಯಾಗಿ ಕಾಡುತ್ತದೆ.

ಬಹುಪಾಲು ಹೆಣ್ಣಮಕ್ಕಳ ತಮ್ಮ ಬದುಕನ್ನು ಗೊಂದಲಗಳಲ್ಲಿ ಎದುರು ನೋಡುತ್ತಾರೆ. ಪ್ರತಿಯೊಂದು ಗೊಂದಲಗಳಿಗೂ ಪರಿಹಾರವನ್ನು ಆತ್ಮಾವಲೋಕನ ಮೂಲಕ ಮಾಡಲು ಯತ್ನಿಸುತ್ತಾರೆ ಹೀಗೆ ವಿನಯ ಅವರ ಕಥೆಗಳು ಹೆಣ್ಣಿನ ಆಂತರಿಕ ಸೌಂದರ್ಯವನ್ನು ಅನಾವರಣ ಮಾಡುವ ಮೂಲಕ ಹೆಣ್ಣಿನ ಅಭಿವ್ಯಕ್ತಿಗೆ ಒಳಧ್ವನಿಯಾಗಿದ್ದಾರೆ.

ಅಡಿಟಿಪ್ಪಣಿ

೧. ಜಾಹ್ನವಿ, ಕಳ್ಳುಬಳ್ಳಿ, ೨೦೧೪, ಪು.-೨೪.

೨. ವಿನಯ, ಉರಿ, ೨೦೧೪, ಪು-೧೭.

೩. ಸುನಂದಾ ಪ್ರಕಾಶ ಕಡಮೆ, ಗಾಂದೀ ಚಿತ್ರದ ನೋಟು, ೨೦೦೪, ಪು-೧೦.

೪. ಸುನಂದಾ ಪ್ರಕಾಶ ಕಡಮೆ, ಕಂಬಗಳ ಮರೆಯಲ್ಲಿ, ೨೦೧೨, ಪು-೩೮.

೫. ಸುಮಂಗಲಾ, ಕಾಲಿಟ್ಟಲ್ಲಿ ಕಾಲುದಾರಿ, ೨೦೦೯, ಪು-೭೦.

೬. ನೀಲಾ.ಕೆ, ಜ್ಯೋತಿಯೊಳಗಣ ಕಾಂತಿ, ೨೦೦೯, ಪು-೧೫, ೨೬, ೩೨, ೫೭, ೫೯, ೭೩, ೮೭,೮೮, ೯೦, ೧೦೭.

ಅಧ್ಯಾಯ ಆರು

ಸಮಾರೋಪ

ಫಲಿತಗಳು

ಅನುಬಂಧಗಳು

ಮೂಲ ಪದ್ಯಗಳು

ಸಹಾಯಕ ಗ್ರಂಥಗಳು

ಫಲಿತಗಳು

೧. ಆರಂಭದ ಕತೆಗಾರ್ತಿಯರು ಸಮಾಜದಲ್ಲಿ ಬ್ರಿಟಿಷ್ ವಸಾಹತು ಆಡಳಿತದಿಂದ ಹೊಸ ಶಿಕ್ಷಣ ಪದ್ಧತಿ ಆಧುನಿಕತೆ ಮತ್ತು ಸಂಪ್ರದಾಯದ ನಡುವೆ ಏರ್ಪಟ್ಟ ಸಂಘರ್ಷವನ್ನು ತಮ್ಮದೇ ನೆಲೆಯಲ್ಲಿ ಗ್ರಹಿಸಲು ಪ್ರಯತ್ನಿಸಿದ್ದಾರೆ. ಮುಖ್ಯವಾಗಿ ಪಾರಂಪರಿಕ ಬದುಕಿನ ವಿನ್ಯಾಸಗಳಲ್ಲಿ ಆಧುನಿಕತೆಯಿಂದ ಉಂಟಾದ ಬಿರುಕುಗಳನ್ನು ಗ್ರಹಿಸುವಾಗ ಈ ಮಹಿಳೆಯರು ಹೆಚ್ಚು ಕುಟುಂಬ ಮತ್ತು ಸ್ತ್ರೀ ಎದುರಿಸಿದ ಬಿಕ್ಕಟ್ಟುಗಳನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ.

೨. ಈ ಕಾಲಘಟ್ಟದಲ್ಲಿ ವೈದಿಕ ಸಂಪ್ರದಾಯದ ಮಹಿಳೆಯರು ಶಿಕ್ಷಣವನ್ನು ಅದರಲ್ಲೂ ಇಂಗ್ಲಿಷ್ ಶಿಕ್ಷಣವನ್ನು ಕಲಿತವರು. ಬ್ರಿಟಿಷರ ಸುಧಾರಣವಾದಿ ನಿಲುವುಗಳನ್ನು ಸ್ವಾಗತಿಸಿದರೂ ತಮ್ಮ ಪಾರಂಪರಿಕ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ನಿಂತ ಕುಟುಂಬ, ಆ ಕುಟುಂಬದ ಸ್ತ್ರೀಯ ಸ್ಥಾನಮಾನಗಳನ್ನು ಹೊಸದಾಗಿ ಕಥೆಗಳ ಮೂಲಕ ರಚಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಸಾಹಿತ್ಯ ಮತ್ತು ಬದುಕು ಇವುಗಳ ಅಂತರ್‌ಸಂಬಂಧವನ್ನು ಸರಿಯಾಗಿ ವ್ಯಾಖ್ಯಾನ ಮಾಡಿಕೊಳ್ಳಲಿಲ್ಲ ಎಂದು ತೋರುತ್ತದೆ. ಸಾಹಿತ್ಯದಲ್ಲಾದರೂ ಮಹಿಳೆಗೆ ಮತ್ತು ಕುಟುಂಬಕ್ಕೆ ಹೊಸತನ ಕಲ್ಪಿಸಲು ಸಾಧ್ಯವಾಗಿಲ್ಲ. ಆದರೆ ಆ ಪ್ರಯತ್ನಗಳಲ್ಲಿ ಆಲೋಚಿಸಿದಂತೆ ಕಾಣುತ್ತದೆ.

೩. ಆಧುನಿಕತೆ ಮತ್ತು ಸಂಪ್ರದಾಯದ ನಡುವಿನ ಸಂಘರ್ಷದಲ್ಲಿ ಪೆಟ್ಟನ್ನು ಅನುಭವಿಸುವುದು ಮಹಿಳೆಯೇ ಆಗಿದ್ದಾಳೆ ಎಂಬುದನ್ನು ಕತೆಗಾರ್ತಿಯರು ಚಿಂತಿಸಿದ್ದಾರೆ. ವಿಧವಾಸಮಸ್ಯೆ, ಬಾಲ್ಯವಿವಾಹ, ಮತ್ತು ಅತಂತ್ರ ಮಹಿಳೆಯರು ಅಂದರೆ ವೇಶ್ಯೆಯರ ಬದುಕುಗಳನ್ನು ಕುರಿತು ವೈಚಾರಿಕವಾಗಿ, ಕ್ರಾಂತಿಕಾರವಾಗಿ ಆಲೋಚಿಸಲು ಮೊದಲ ತಲೆಮಾರಿನ ಕತೆಗಾರ್ತಿಯರಿಗೆ ಸಾಧ್ಯವಾಗಿಲ್ಲ. ಆದರೆ ಮಾನವೀಯ ನೆಲೆಯಲ್ಲಿ ಪರಿಹಾರ ಸೂಚಿಸಿರುವುದು ಕಂಡುಬರುತ್ತದೆ.

೪. ಕೊಡಗಿನ ಗೌರಮ್ಮ, ಶ್ಯಾಮಲಾದೇವಿ ಬೆಳಗಾಂವಕರ ಮುಂತಾದವರು ಮಧ್ಯಮವರ್ಗದ ಕುಟುಂಬದ ಸ್ತ್ರೀಯರನ್ನು ಮತ್ತು ಅವರ ಸಮಸ್ಯೆಗಳನ್ನು ಮಾನವೀಯ ನೆಲೆಯಲ್ಲಿ ಗ್ರಹಿಸಿದ್ದಾರೆಯೇ ಹೊರತು ಅವರಿಗೆ ಬದುಕಿನಲ್ಲಿ ಹೊಸ ತಿರುವುಗಳನ್ನು ಕಲ್ಪಿಸುವುದು ಕಂಡುಬರುವುದಿಲ್ಲ. ಇದು ಈ ಕತೆಗಾರ್ತಿಯರ ಸೋಲು ಎಂದು ಭಾವಿಸಬೇಕಾಗಿಲ್ಲ, ವಿಧವೆ, ವೇಶ್ಯೆ ಇಂತಹ ಮಹಿಳೆಯರನ್ನು ಕುರಿತು ತಮ್ಮ ಬರಹಗಳಲ್ಲಿ ಚಿಂತನ ಮಂಥನ ನಡೆಸಿದ್ದು ಸಾಧನೆಯೇ ಸರಿ.

೫. ಈ ಕಾಲಾವಧಿಯಲ್ಲಿ ಕುಟುಂಬ ಮಧ್ಯಮವರ್ಗದಾಗಿದ್ದು ಅದರಲ್ಲಿ ಬೆಳೆದ ವಿದ್ಯಾವಂತ ಮಹಿಳೆಯರು ತಮ್ಮ ಗಂಡನನ್ನು ತಮಗಿಂತಲೂ ಮೇಲ್ಮಟ್ಟದ ಪುರುಷ ಮತ್ತು ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಮೇಲ್ವರ್ಗದ ಕುಟುಂಬಗಳ, ಕೆಳವರ್ಗದ ಕುಟುಂಬಗಳ ಸ್ತ್ರೀಯರನ್ನು ಪತ್ನಿಯಾಗಿ ಸ್ವೀಕರಿಸಿದರೂ ಮಧ್ಯಮವರ್ಗದ ಸ್ತ್ರೀಯರು ಸಮಾನ ಮನೋಭಾವದಿಂದ ಕೀಳರಿಮೆಯಿಂದ ತಪ್ಪಿಸಿಕೊಂಡು ಬದುಕಲು ಯತ್ನಿಸುತ್ತವೆಯೇ ಹೊರತು ಮೀರುವುದಿಲ್ಲ.

೬. ಈ ಕಾಲಾವಧಿಯಲ್ಲಿ ಕಾಣಿಸಿಕೊಳ್ಳುವ ಕತೆಗಾರ್ತಿಯರಲ್ಲಿ ವಾಣಿ, ಸರಿತಾ ಕುಸುಮಾಕರ, ಗೀತಾ ಕುಲಕರ್ಣಿ, ಶಾಂತಾದೇವಿ ಕಣವಿ ಮುಂತಾದವರು ಮಧ್ಯಮ, ಕೆಳಮಧ್ಯಮ ವರ್ಗದ ಕುಟುಂಬ ಮತ್ತು ಅಲ್ಲಿನ ಸ್ತ್ರೀಯರ ಸಮಸ್ಯೆಗಳನ್ನು ಕೌಟುಂಬಿಕ ಹಿನ್ನೆಲೆಯಲ್ಲಿ ಗ್ರಹಿಸಿದ್ದಾರೆ. ಆದರೆ ಸಾಮಾಜಿಕ ಸಮಸ್ಯೆಯಾಗಿರುವ ಅನೇಕ ಸಮಸ್ಯೆಗಳನ್ನು ಅಂದರೆ ಸ್ತ್ರೀ ಸಬಲೀಕರಣ, ಆರ್ಥಿಕ ಸ್ವಾತಂತ್ರ್ಯ ಮುಂತಾದ ವಿಸ್ತಾರವಾದ ನೆಲೆಯಲ್ಲಿ ಗ್ರಹಿಸಿಲ್ಲ. ಆದರೆ ಇದೇ ಕಾಲಾವಧಿಯಲ್ಲಿ ಬರೆಯಲು ಆರಂಭಿಸಿದ ತ್ರಿವೇಣಿ ಮತ್ತು ಅನುಪಮಾ ನಿರಂಜನ ಭಿನ್ನವಾಗಿ ಕಾಣಿಸುತ್ತಾರೆ. ಅದರಲ್ಲೂ ತ್ರಿವೇಣಿ ಮನಶ್ಶಾಸ್ತ್ರದ ಹಿನ್ನೆಲೆಯಲ್ಲಿ ಮಹಿಳೆಯ ಸಮಸ್ಯೆಗಳನ್ನು ಚಿಂತಿಸುತ್ತಾರೆ ಮತ್ತು ಮಹಿಳೆ ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ಅಭಿವ್ಯಕ್ತಿಸುತ್ತಾರೆ, ಅನುಪಮಾ ನಿರಂಜನ ಅವರ ಕತೆಗಳು ವಸ್ತು, ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ರೂಪ ತಾಳುತ್ತವೆ. ಹಾಗಾಗಿ ಕುಟುಂಬ ಮತ್ತು ಸ್ತ್ರೀ ಸಮಸ್ಯೆಗಳು ಬಂಡವಾಳಶಾಹಿ ನೀತಿಯಿಂದ ಸೃಷ್ಟಿಯಾಗುತ್ತವೆ ಮತ್ತು ಸಂಘರ್ಷಗಳಿದ್ದರೂ ದುಡಿಯುವ ಮತ್ತು ದುಡಿಸಿಕೊಳ್ಳುವ ಎರಡು ವರ್ಗಗಳ ನಡುವೆ ನಡೆಯುತ್ತದೆ.

೭. ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ರಚನೆಯಾದ ಕಥಾಸಾಹಿತ್ಯದಲ್ಲಿ ರೂಪ, ವಸ್ತು, ಭಾಷೆ ಮತ್ತು ನಿರೂಪಣೆಯಲ್ಲಿ ಹೊಸತನ ಕಾಣಿಸಿಕೊಳ್ಳುತ್ತದೆ. ಈ ಕಾಲಾವಧಿಯಲ್ಲಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ನವ್ಯ ಸಾಹಿತ್ಯ ಚಳುವಳಿ ಪ್ರಬಲವಾಗಿತ್ತು. ಈ ಸಾಹಿತ್ಯ ಚಳುವಳಿಯಲ್ಲಿ ಪುರುಷ ಕತೆಗಾರರು ಮುಂಚೂಣಿಯಲ್ಲಿದ್ದರು ಮತ್ತು ಹೊಸ ನೈತಿಕ ನೆಲೆ ಕಂಡುಕೊಳ್ಳುವ ನೆಪದಲ್ಲಿ ನವ್ಯ ಕತೆಗಳಲ್ಲಿ ಶಾಂತಿನಾಥ ದೇಸಾಯಿ ಅವರನ್ನು ಹೊರತುಪಡಿಸಿ ಉಳಿದವರು ಸ್ತ್ರೀಯನ್ನು ಸರಿಯಾಗಿ ಗ್ರಹಿಸಲಿಲ್ಲ ಎಂದೇ ಹೇಳಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ವೀಣಾಶಾಂತೇಶ್ವರ ಅವರು ಇಂಗ್ಲಿಷ್ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾಲಯದಲ್ಲಿದ್ದು ನವ್ಯ ಸಾಹಿತ್ಯವನ್ನು ಓದಿಕೊಂಡು ಅದರ ತಾತ್ವಿಕ ನೆಲೆಯಲ್ಲಿ ಕತೆಗಳನ್ನು ರಚಿಸಿದ್ದಾರೆ. ಅವರ ಕಥೆಗಳ ರೂಪ, ಭಾಷೆ ಮತ್ತು ತಂತ್ರ ನವ್ಯ ಚೌಕಟ್ಟಿನಲ್ಲಿ ನಿರೂಪಣೆಗೊಂಡಿವೆ. ಹಾಗೆಯೇ ಕುಟುಂಬ ಮತ್ತು ಅದರಲ್ಲಿನ ಸ್ತ್ರೀಯರು ತಮ್ಮ ಅಸ್ತಿತ್ವವನ್ನು ಗಳಿಸಿಕೊಳ್ಳಲು ಪ್ರಯತ್ನಿಸುತ್ತವೆ. ಪುರುಷನ ಮುಂದೆ ತಮ್ಮ ಸ್ವಾತಂತ್ರ್ಯವನ್ನು ಆಲೋಚಿಸುತ್ತವೆ. ಈ ಸಂಘರ್ಷದಲ್ಲಿ ಮಹಿಳೆ ಭ್ರಮನಿರಸನ, ಹತಾಶೆ, ವಿಲಕ್ಷಣತೆ, ಆತ್ಮಹತ್ಯೆ ಅಂತಹ ಸುಳಿಯಲ್ಲಿ ಸಿಕ್ಕು ನಲುಗುವುದೂ ಇದೆ. ಆದರೂ ಸ್ತ್ರೀಯರು

ತಮ್ಮ ಸ್ವಾತಂತ್ರ್ಯದ ನೆಲೆಯನ್ನು ಪುರುಷರ ಮುಂದೆ ನೆಲೆಗೊಳಿಸಲು ಪ್ರಯತ್ನಿಸಿ ಯಶಸ್ವಿಯೂ ಆಗುತ್ತಾರೆ.

೮. ಇವರ ಸಮಕಾಲೀನರಾದ ವೈದೇಹಿಯವರು ತಮ್ಮದೇ ಆದ ಅನನ್ಯ ನೆಲೆಯನ್ನು ಸಾಹಿತ್ಯದಲ್ಲಿ ಕಂಡುಕೊಂಡಿದ್ದಾರೆ. ಕತೆಗಾರ್ತಿಯಾಗಿಯೇ ಗುರುತಿಸಿಕೊಂಡ ವೈದೇಹಿ ಅವರ ಕತೆಗಳು ಮಧ್ಯಮ ಮತ್ತು ಕೆಳಮಧ್ಯಮ ಕುಟುಂಬಗಳ ಸ್ತ್ರೀಯರು ಪುರುಷರ ಹಿಡಿತದಲ್ಲಿದ್ದಾಗಲೂ ಅದನ್ನು ಮೀರುವ ನೆಲೆಗಳನ್ನು ಕುಟುಂಬದ ಒಳಗಿದ್ದೆ, ಯೋಚಿಸುತ್ತವೆ. ಈ ಕತೆಗಾರ್ತಿಗೆ ಕುಟುಂಬವೇ ಮೂಲ. ಅದೇ ಒಂದು ವಿಶ್ವ ಎಂಬಂತೆ ನೂರಾರು ಸ್ತ್ರೀ ಪಾತ್ರಗಳನ್ನು ಕತೆಗಳಲ್ಲಿ ತಂದಿದ್ದಾರೆ. ಬಡವರು, ದುಡಿಯುವವರು, ಕುಟುಂಬದ ಒಡತಿಯರು, ವಿದ್ಯಾವಂತರು ಹೀಗೆ ಹಲವು ಸ್ತರದ ಸ್ತ್ರೀಯರು ವೈದೇಹಿ ಅವರ ಕತೆಗಳಲ್ಲಿ ಸ್ಥಾನ ಪಡೆದಿದ್ದಾರೆ. ಪಿತೃಪ್ರಧಾನ ಕುಟುಂಬ ಮತ್ತು ಅದರ ಒಳಗಿನ ಸ್ತ್ರೀಯರನ್ನು ಸಂಘರ್ಷದ ನೆಲೆಯಲ್ಲಿ ಚಿತ್ರಿಸಿದ್ದಾರೆ. ಒಡೆದು ಕಾಣುವಂತೆ ಯಾವ ವೈಚಾರಿಕ ಬಂಡಾಯದ ನಿಲುವುಗಳು ಕಾಣದಿದ್ದರೂ ಸೂಕ್ಷ್ಮವಾಗಿ ಈ ಎರಡು ಅಂಶಗಳು ಜೀವಂತವಾಗಿ ಅವರ ಕತೆಗಳಲ್ಲಿ ನೆಲೆಗೊಂಡಿವೆ.

೯. ಈ ಕಾಲಾವಧಿಯಲ್ಲಿಯೇ ಗೀತಾನಾಗಭೂಷಣ ಕತೆ ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಕತೆಗಳಲ್ಲಿ ಕುಟುಂಬ ಮತ್ತು ಸ್ತ್ರೀಯರು ಕಾಣಿಸುತ್ತಾರೆ. ಆದರೆ ಕುಟುಂಬಕ್ಕೂ ನೆಲೆಯಿಲ್ಲದ ಸ್ತ್ರೀಯರಿಗೂ ನೆಲೆಯಿಲ್ಲದ ಕೆಳವರ್ಗದ ಸಮುದಾಯಗಳು ಇವರ ಕತೆಯ ಕೇಂದ್ರದಲ್ಲಿವೆ. ನಿತ್ಯ ದುಡಿತವೇ ಅವರ ಬದುಕಿಗೆ ಆಸರೆ. ಹೀಗಾಗಿ ಕುಟುಂಬಕ್ಕಾಗಲೀ, ಸ್ತ್ರೀಗಾಗಲೀ ಸ್ಥಿರವಾದ ಭದ್ರತೆಗಳಿಲ್ಲ. ಸಾಮಾಜಿಕ ನೆಲೆಯಲ್ಲಿಯೇ ಇವರಿಗೆ ಅಸ್ತಿತ್ವ ಇದೆಯೆಂದು ಕಾಣಿಸುತ್ತದೆ. ಆದರೂ ಅದೂ ನಿಜವಲ್ಲ. ಕುಟುಂಬವಾಗಲೀ, ಸ್ತ್ರೀಯಾಗಲೀ ನೆಲದ ಮೇಲಿನ ಅವರ ಬದುಕು ತಾತ್ಕಾಲಿಕವಾಗಿದೆ ಎಂಬುದು ಎದ್ದು ಕಾಣುತ್ತದೆ.

೧೦. ಇದೇ ಘಟ್ಟದಲ್ಲಿ ಬರೆಯಲು ತೊಡಗಿದ ಇನ್ನಿಬ್ಬರು ಕತೆಗಾರ್ತಿಯರಾದ ಸಾರಾ ಅಬೂಬಕ್ಕರ್ ಮತ್ತು ಭಾನುಮುಷ್ತಾಕ್ ಅವರ ಕತೆಗಳಲ್ಲಿ ಮಧ್ಯಮ, ಮೇಲ್ಮಧ್ಯಮ ಕುಟುಂಬ ಮತ್ತು ಸ್ತ್ರೀಯರು ಇವರ ಕಾಣಿಸಿಕೊಳ್ಳುತ್ತಾರೆ. ಮುಸ್ಲಿಂ ಕುಟುಂಬಗಳು ಇಲ್ಲಿವೆ. ಆರ್ಥಿಕವಾಗಿ ಸಬಲವಿಲ್ಲದ ಕುಟುಂಬಗಳಲ್ಲಿ ಪುರುಷ ಅಧಿಕಾರವೇ ಅಂತಿಮ. ಸ್ತ್ರೀಯರು ಅವರಿಗಿರುವ ಚೌಕಟ್ಟುಗಳು ಪುರುಷರಿಂದ ನಿರ್ಮಿಸಲ್ಪಟ್ಟಿದ್ದರಿಂದ ಅವು ಭದ್ರವಾಗಿವೆ. ಧರ್ಮದ ಹೆಸರಿನಲ್ಲಿ ಸ್ತ್ರೀಯರಿಗೆ ಅನೇಕ ಬಂಧನಗಳಿದ್ದು ಆ ಬಂಧನಗಳನ್ನು ಯೋಚಿಸುವುದಕ್ಕೆ ಸ್ತ್ರೀಯರಿಗೆ ಆಧುನಿಕ ಶಿಕ್ಷಣವಿಲ್ಲ ಮತ್ತು ಆಧುನಿಕತೆಯ ಯಾವ ದಾರಿಯೂ ಇವರಿಗೆ ಬೆಂಬಲವಾಗಿಲ್ಲ. ಧರ್ಮದ ಚೌಕಟ್ಟುಗಳು ಅಲ್ಲಿನ ಸ್ತ್ರೀ ಮತ್ತು ಪುರುಷರಿಗೆ ಬಂಧನಗಳಾಗಿವೆ; ಆಯುಧಗಳಾಗಿವೆ. ಈ ಇಬ್ಬರು ಲೇಖಕಿಯರು ಮುಸ್ಲಿಂ ಸಂವೇದನೆಯೊಂದಿಗೆ ಕುಟುಂಬ ಮತ್ತು ಸ್ತ್ರೀಯರ ಅನೇಕ ಸಮಸ್ಯೆಗಳನ್ನು ವೈಚಾರಿಕವಾಗಿ ಮೀರಲು ಪ್ರಯತ್ನಿಸಿದ್ದಾರೆ. ಈ ಇಬ್ಬರೂ ಕತೆಗಾರ್ತಿಯರಿಗೆ ದಲಿತ ಮತ್ತು ಬಂಡಾಯ ಸಾಹಿತ್ಯ ಚಳುವಳಿ ಪ್ರೇರಣೆ ಮತ್ತು ಪ್ರಭಾವ ಇರುವುದರಿಂದ

ವೈಚಾರಿಕತೆ ಇವರ ಕತೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಮುಸ್ಲಿಂ ಎಂಬ ಹೊಸ ಸಂವೇದನೆ ಕಂಡುಬರುತ್ತದೆ.

೧೧. ತೊಂಬತ್ತರ ದಶಕದಿಂದ ಈಚೆಗೆ ಬರೆಯಲು ತೊಡಗಿದ ಕತೆಗಾರ್ತಿಯರಿಗೆ ಯಾವುದೇ ಸಾಹಿತ್ಯ ಚಳುವಳಿ ಬೆನ್ನೆಲುಬಾಗಿ ನಿಂತಿಲ್ಲ. ಹೊಸ ಕತೆಗಾರ್ತಿಯರೆಂದು ಗುರುತಿಸುವುದಕ್ಕೆ ಇರುವ ಕಾರಣವೆಂದರೆ, ತೊಂಬತ್ತರ ದಶಕದ ಹೊತ್ತಿಗೆ ಬಂಡಾಯ ಮತ್ತು ದಲಿತ ಸಾಹಿತ್ಯ ಚಳುವಳಿ ಸ್ಥಗಿತಗೊಂಡಿತ್ತು. ಹೊಸ ಸಾಹಿತ್ಯ ಚಳುವಳಿ ರೂಪಗೊಂಡಿರಲಿಲ್ಲ. ಇಂತಹ ಖಾಲಿ ಅಥವಾ ರಿಕ್ತ ಸಂದರ್ಭದಲ್ಲಿ ಬರೆಯಲು ತೊಡಗಿದ ಕತೆಗಾರ್ತಿಯರು ಹೊಸ ಸವಾಲುಗಳಿಗೆ ಮುಖಾಮುಖಿಯಾಗಿದ್ದಾರೆ. ಯಾವುದೇ ಸಾಹಿತ್ಯ ಚಳುವಳಿಗೆ ಒಂದು ತಾತ್ವಿಕ ಚೌಕಟ್ಟು ಇರುತ್ತದೆ. ಈ ತಾತ್ವಿಕ ಚೌಕಟ್ಟಿನ ಬಲದಿಂದ ಆಲೋಚನೆ ಮಾಡುವುದಕ್ಕೆ ಒಂದು ದಾರಿ ಸಿಗುತ್ತದೆ. ಇದು ಈ ಕಾಲಾವಧಿಯ ಕತೆಗಾರ್ತಿಯರಿಗೆ ಇರಲಿಲ್ಲ. ಜಾಗತೀಕರಣ, ಖಾಸಗೀಕರಣದ ಸಂದರ್ಭದಲ್ಲಿ ಸಮಾಜದಲ್ಲಿ ಹೊಸ ಆವಿಷ್ಕಾರಗಳಾದವು. ಶಿಕ್ಷಣ, ಉದ್ಯೋಗ, ನಗರ, ಕುಟುಂಬ, ಸ್ತ್ರೀ ಎಲ್ಲವೂ ಹೊಸ ವ್ಯಾಖ್ಯಾನ ಪಡೆದುಕೊಂಡವು. ಹಾಗೆಯೇ ಹೊಸ ಸಮಸ್ಯೆಗಳನ್ನು ಮುಖಾಮುಖಿಯಾದವು. ಇಂತಹ ಸಾಮಾಜಿಕ ಸಂದರ್ಭದಲ್ಲಿ ಹೊಸ ಕತೆಗಾರ್ತಿಯರು ಹೊಸ ಸಮಸ್ಯೆಗಳನ್ನು ಹೊಸ ಕುಟುಂಬದಲ್ಲಿ ಕಂಡುಕೊಂಡು ಅವುಗಳ ಸ್ವರೂಪವನ್ನು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ಇವರ ಕತೆಗಳಲ್ಲಿ ಕಾಣಿಸಿಕೊಳ್ಳುವ ಕುಟುಂಬಗಳು ಆರ್ಥಿಕವಾಗಿ ಸಬಲವಾಗಿವೆ. ಸ್ತ್ರೀಯರು ಸ್ವತಂತ್ರವಾಗಿದ್ದಾರೆ. ಆರ್ಥಿಕವಾಗಿಯೂ ಸಬಲರಾಗಿದ್ದಾರೆ. ಆದರೂ ಈ ಸ್ವಾತಂತ್ರ್ಯದಲ್ಲಿಯೇ ಸ್ತ್ರೀಗೆ ಸಮಸ್ಯೆಗಳಿವೆ. ಅಂದರೆ ಸ್ತ್ರೀಯರು ಉದ್ಯೋಗ ಪಡೆದು ಹೊರಗೆ ದುಡಿಯುವ ಮತ್ತು ಕುಟುಂಬದ ಒಳಗೆ ದುಡಿಯುವುದು ತಪ್ಪಿಲ್ಲ. ಇದು ಒಂದು ಸಮಸ್ಯೆಯೇ? ಕುಟುಂಬದ ಹೊರಗೆ ಮತ್ತು ಒಳಗೆ ದುಡಿಯುವುದು ಅನಿವಾರ್ಯತೆಯಿದೆ. ಸ್ತ್ರೀ ಪುರುಷರ ಸಂಬಂಧದಲ್ಲಿ ಬಿರುಕುಗಳು ಕಾಣುವುದಕ್ಕೆ ಆರ್ಥಿಕ ಸಬಲತೆ ಮತ್ತು ಅದರಿಂದ ದತ್ತವಾದ ಸ್ವಾತಂತ್ರ್ಯದು ಕಾರಣವಾಗಿದೆ. ಇದರಿಂದಾಗಿ ಮದುವೆ, ಕುಟುಂಬ ಶಿಥಿಲಗೊಂಡು ಕುಟುಂಬವೇ ಅಸ್ಥಿರತೆಯಿಲ್ಲದೆ ಮದುವೆ ಎಂಬ ಪರಿಕಲ್ಪನೆ ಕೂಡ ಹೊಸ ವ್ಯಾಖ್ಯಾನಕ್ಕೆ ಒಳಗಾಗುತ್ತಿದೆ. 'ಲಿವ್ ಇನ್' ಎನ್ನುವ ಹೊಸ ವ್ಯವಸ್ಥೆ ಹುಟ್ಟಿಕೊಂಡು ಕುಟುಂಬದ ವ್ಯವಸ್ಥೆಗೆ ಮಾರಕವಾದಂತೆ ಕಾಣುತ್ತದೆ. ಈ ಬಗೆಯ ಸಮಸ್ಯೆಗಳು ಇವರ ಕತೆಗಳಲ್ಲಿ ನಿರೂಪಣೆಗೊಂಡಿವೆ.

ಮೂಲ ಪಠ್ಯಗಳು

೧. **ಅನುಪಮಾ ನಿರಂಜನ**

'ಕಣ್ಮಣಿ', ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೫೨

'ನೀರಿಗೆ ನೈದಿಲೆ ಶೃಂಗಾರ', ಶಾರದಾ ಪ್ರಕಟನಾಲಯ, ಬೆಂಗಳೂರು, ೧೯೬೩

'ರೂವಾರಿಯ ಲಕ್ಷ್ಮಿ', ಸೀಮಾ ಸಾಹಿತ್ಯ ಪ್ರಕಾಶನ, ಬೆಂಗಳೂರು, ೧೯೭೦

'ಪುಷ್ಪಕ', ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೮೦

'ಒಂದು ಗಿಣಿಯ ಕಥೆ', ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೮೩

೨. **ಕಾತ್ಯಾಯಿನಿ, ಸುಮಿತ್ರಾಬಾಯಿ ಬಿ.ಎನ್.**(ಸಂ.), 'ಸಾಹಿತ್ಯ ವಾಚಿಕೆ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩. **ಕೊಡಗಿನ ಗೌರಮ್ಮ**, ಜೀವನ ಪ್ರೀತಿ, ಕಾಳೇಗೌಡ ನಾಗವಾರ(ಸಂ.), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨

೪. **ಗೀತಾ ಕುಲಕರ್ಣಿ**

'ಸುವರ್ಣೆಯ ಗ್ರೀನ್ ರೂಮು', ರವೀಂದ್ರ ಪುಸ್ತಕ ಭಂಡಾರ, ಧಾರವಾಡ, ೧೯೬೯

'ಪಾತಾಳ', ಸಾಹಿತ್ಯ ಭಂಡಾರ, ಹುಬ್ಬಳ್ಳಿ, ೧೯೮೧

೫. **ಗೀತಾ ನಾಗಭೂಷಣ**, 'ಕ್ಯಾದಿಗೆ ಬನದಾಗ ಕತೆಯಾಗಿ ನಿಂತವರು', ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೬

೬. **ಜಯಲಕ್ಷ್ಮೀ ಆರ್.ಶ್ರೀನಿವಾಸ್**, 'ಮೊಗ್ಗು', ಬೆಂಗಳೂರು ಪ್ರೆಸ್, ಬೆಂಗಳೂರು, ೧೯೪೩

೭. **ಜಾಹ್ನವಿ ಬಿ.ಟಿ.**, 'ಕಳ್ಳುಬಳ್ಳಿ', ಸುಯೋಧನ ಪ್ರಕಾಶನ, ಬಳ್ಳಾರಿ, ೨೦೧೪

೮. **ತ್ರಿವೇಣಿ**

'ಹೆಂಡತಿಯ ಹೆಸರು', ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು, ೨೦೦೮

'ಎರಡು ಮನಸ್ಸು', ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು, ೨೦೦೮

'ಸಮಸ್ಯೆಯ ಮಗು', ತ್ರಿವೇಣಿ ಪಬ್ಲಿಕೇಶನ್, ಮೈಸೂರು, ೨೦೦೮

೯. **ನೇಮಿಚಂದ್ರ,** 'ಇಲ್ಲಿಯವರೆಗಿನ ನೇಮಿಚಂದ್ರ ಕಥೆಗಳು', ಅಂಕಿತ ಪುಸ್ತಕ, ಬೆಂಗಳೂರು, ೨೦೦೧

೧೦. **ನೀಲಾ ಕೆ**

'ಜ್ಯೋತಿಯೊಳಗಣ ಕಾಂತಿ', ಚಿಂತನ ಪುಸ್ತಕ, ಬೆಂಗಳೂರು, ೨೦೦೯

'ತಿಪ್ಪೆಯನರಸಿ ಮತ್ತು ಇತರ ಕಥೆಗಳು', ಕನ್ನಡ ನಾಡು ಲೇಖಕರ ಮತ್ತು ಓದುಗರ ಸಂಘ, ಗುಲಬರ್ಗಾ, ೨೦೧೦

೧೧. **ಬಾನು ಮುಷ್ತಾಕ್,** 'ಹಸೀನಾ ಮತ್ತು ಇತರ ಕಥೆಗಳು'(ಸಮಗ್ರ ಕಥೆಗಳು), ಅಭಿರುಚಿ ಪ್ರಕಾಶನ, ಮೈಸೂರು, ೨೦೧೩

೧೨. **ಮೀರಾ ಎಲ್.ಜಿ., ರವಿಕುಮಾರ.ನ.(ಸಂ):** 'ಸಾವಿತ್ರಮ್ಮ ಎಚ್.ವಿ. ಸಮಗ್ರ ಕಥೆಗಳು', ಅಭಿನವ ಪ್ರಕಾಶನ, ಬೆಂಗಳೂರು, ೨೦೧೨

೧೩. **ವಾಣಿ**

'ಅರ್ಪಣೆ', ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೫೭

'ಬಾಬು ಬರ್‍ತಾನೆ', ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೭೬

'ಹ್ಯಾಪಿ ಬರ್ತ್‌ಡೇ', ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೮೬

'ತಾರತಮ್ಮಯ್ಯ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೮೮

೧೪. **ವಿನಯಾ**

'ಊರ ಒಳಗಣ ಬಯಲು', ಛಂದ ಪುಸ್ತಕ, ಬೆಂಗಳೂರು, ೨೦೦೮

'ಉರಿ', ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೪

೧೫. **ವೀಣಾ ಶಾಂತೇಶ್ವರ,** 'ನಡೆದದ್ದೇ ದಾರಿ', ಸುಂದರ ಪುಸ್ತಕ ಪ್ರಕಾಶನ, ಧಾರವಾಡ, ೨೦೦೬

೧೬. **ವೈದೇಹಿ,** 'ಅಲೆಗಳಲ್ಲಿ ಅಂತರಂಗ', ಅಕ್ಷರ ಪ್ರಕಾಶನ, ಸಾಗರ, ೨೦೦೬

೧೭. **ಶಾಮಲಾದೇವಿ ಬೆಳಗಾವಂಕರ್, ವಿಜಯಾ ದಬ್ಬೆ** (ಸಂ.), 'ಶ್ಯಾಮಲಾ ಸಂಚಯ', ಕರ್ನಾಟಕ ಲೇಖಕಿಯ ಸಂಘ, ಬೆಂಗಳೂರು,

೧೮. **ಶಾಂತಾದೇವಿ ಕಣವಿ,** 'ಶಾಂತಾದೇವಿ ಕಣವಿಯವರ ಇನ್ನೊಂದು ಸಂಪುಟ', ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೫

೧೯. **ಸರಸ್ವತಿದೇವಿ ಗೌಡರ,** 'ಪುಣ್ಯಸ್ಮೃತಿ', ಶ್ರೀಮತಿ ಸರಸ್ವತಿದೇವಿ ಗೌಡರ, ಧಾರವಾಡ, ೧೯೭೨

೨೦. **ಸರಸ್ವತಿಬಾಯಿ,** 'ಸರಸ್ವತಿಬಾಯಿ ರಾಜವಾಡೆಯವರ ಆಯ್ದ ಕತೆಗಳು', ಸಬಿಹಾ ಭೂಮಿಗೌಡ(ಸಂ.), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೪

೨೧. **ಸರಿತಾ ಕುಸುಮಾಕರ ದೇಸಾಯಿ**

'ರಾಶಿಯಲ್ಲಿ ಕಂಡದ್ದೇನು', ಸಂಜೀವಿನಿ ಪ್ರಕಾಶನ, ಗುಲ್ಬರ್ಗಾ, ೧೯೮೦

'ಧ್ರುವಮಿಲನ', ಸ್ವಯಂ ಜ್ಯೋತಿ ಪ್ರಕಾಶನ, ಕಲಬುರ್ಗಿ, ೧೯೮೨

'ಮಿಡಿಗಾದ ಮಿಡುಕು', ಹಂಸಧ್ವನಿ ಪ್ರಕಾಶನ, ಬೆಂಗಳೂರು, ೧೯೯೭

೨೨. **ಸಾರಾ ಅಬೂಬಕರ**

'ಚಪ್ಪಲಿಗಳು(ಭಾಗ-೧)', ಚಂದ್ರಗಿರಿ ಪ್ರಕಾಶನ, ಮಂಗಳೂರು, ೨೦೧೦

'ಸಾರಾ ಅಬೂಬಕರ ಅವರ ಸಮಗ್ರ ಕತೆಗಳು(ಭಾಗ-೨)', ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ, ಗುಲ್ಬರ್ಗಾ, ೨೦೧೧

೨೩. **ಸುನಂದಾ ಪ್ರಕಾಶ ಕಡಮೆ**

'ಪುಟ್ಟ ಪಾದದ ಗುರುತು', ಛಂದ ಪುಸ್ತಕ, ಬೆಂಗಳೂರು, ೨೦೦೫

'ಗಾಂಧಿ ಚಿತ್ರದ ನೋಟು', ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೮

'ಕಂಬದ ಮರೆಯಲ್ಲಿ', ಅಂಕಿತ ಪ್ರಕಾಶನ, ಬೆಂಗಳೂರು, ೨೦೧೪

೨೪. **ಸುಮಂಗಲಾ**

'ಜುಮುರು ಮಳೆ', ಛಂದ ಪುಸ್ತಕ, ಬೆಂಗಳೂರು, ೨೦೦೫

'ಕಾಲಿಟ್ಟಲ್ಲಿ ಕಾಲುದಾರಿ', ಛಂದ ಪುಸ್ತಕ, ಬೆಂಗಳೂರು, ೨೦೦೯

'ಹನ್ನೊಂದನೇ ಅಡ್ಡರಸ್ತೆ', ಛಂದ ಪುಸ್ತಕ, ಬೆಂಗಳೂರು, ೨೦೧೪

೨೫. **ಸಂಧ್ಯಾ ಹೊನಗುಂಟಿಕರ**

'ಹರಿದ ಹಾಸಿಗೆ ಹಂಬಲ', ಲೇಖಕಿಯರ ವೇದಿಕೆ, ಗುಲಬರ್ಗಾ, ೨೦೦೮

'ಹಾರಲಾಗದ ನೊಣ', ಕನ್ನಡನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ ನಿಯಮಿತ, ಗುಲಬರ್ಗಾ, ೨೦೧೨

ಸಹಾಯಕ ಗ್ರಂಥಗಳು

೧. ಅನುಪಮಾ ಎಚ್.ಎಸ್., ಮಹಿಳೆ: ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ, ಲಡಾಯಿ ಪ್ರಕಾಶನ, ಗದಗ, ೨೦೧೨.

೨. ಅನುಪಮಾ ನಿರಂಜನ, ಬರಹಗಾರ್ತಿಯ ಬದುಕು, ಡಿ.ವಿ.ಕೆ, ಮೂರ್ತಿ ಪ್ರಕಾಶನ, ಮೈಸೂರು, ೧೯೯೦.

೩. ಅಮರೇಶ ನುಗಡೋಣಿ, ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೪. ಅಶೋಕ ಟಿ.ಪಿ.(ಸಂ), ವೈದೇಹಿ ವಾಚಿಕೆ, ನುಡಿ ಪುಸ್ತಕ, ಬೆಂಗಳೂರು, ೨೦೦೯.

೫. ಅಶೋಕ ಟಿ.ಪಿ., ಕಥನ ಪ್ರೀತಿ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ), ೨೦೧೩.

೬. ಆಶಾದೇವಿ ಎಂ.ಎಸ್., ನಡುವೆ ಸುಳಿವ ಆತ್ಮ, ಅಹರ್ನಿಶಿ ಪ್ರಕಾಶನ ಶಿವಮೊಗ್ಗ, ೨೦೧೧.

೭. ಆಶಾದೇವಿ ಎಂ.ಎಸ್., ಸ್ತ್ರೀ ಮತವನುತ್ತರಿಸಲಾಗದೆ?, ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ, ೨೦೦೬.

೮. ಇಂದಿರಾ ಆರ್., ಮಹಿಳೆ ಮತ್ತು ಕೌಟುಂಬಿಕ ಹಿಂಸೆ, ಶ್ರೀ ರಾಜೇಂದ್ರ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಮೈಸೂರು, ೨೦೦೦.

೯. ಉಷಾ ಎಂ., ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೧೦. ಉಷಾದೇವಿ ಸಿ.ಜಿ, ಆರ್ಯಾಂಬ ಪಟ್ಟಾಭಿ(ಪ್ರ.ಸಂ) : ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ ಪ್ರಕಾಶನ, ೨೦೦೪.

೧೧. ಓಲ್ಗಾ(ಮೂಲ), ಸುಜ್ಞಾನಮೂರ್ತಿ ಬಿ.(ಅನು), ಕುಟುಂಬವ್ಯವಸ್ಥೆ ಮಾರ್ಕ್ಸ್‌ವಾದ–ಸ್ತ್ರೀವಾದ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ೨೦೧೦.

೧೨. ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೩.

೧೩. ಕವಿತಾ ರೈ, ಮಹಿಳೆ ಅಸ್ತಿತ್ವದ ಸಂಕಥನ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೦೫.

೧೪. ಕಿಶೋರಿ ನಾಯಕ ಕೆ, ಸ್ತ್ರೀವಾದ ನೆಲೆಗಳು ಹಾಗೂ ನಿಲುವುಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೧೯೯೯.

೧೫. ಗಾಯತ್ರಿ ಎನ್., ಮಹಿಳಾ ಮೀಸಲಾತಿ ಮತ್ತು ಲಿಂಗರಾಜಕಾರಣ, ಲಡಾಯಿ ಪ್ರಕಾಶನ, ಗದಗ, ೨೦೧೨.

೧೬. ಗಾಯತ್ರಿ ನಾವಡ, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೧೭. ಗೀತಾ ಪ್ರಸಾದ, ಆಧುನಿಕ ಮಹಿಳಾ ಅಭಿವ್ಯಕ್ತಿ, ಧಾತ್ರಿ ಪುಸ್ತಕ, ಬೆಂಗಳೂರು, ೨೦೦೯.

೧೮. ಗೀತಾ ಶೈಣಿ, ಕತೆಯಾದಳು ಹುಡುಗಿ, ಕಾರ್ತಿಕ್ ಎಂಟರ್‌ಪ್ರೈಸಸ್, ಬೆಂಗಳೂರು, ೨೦೧೦.

೧೯. ಗಿರಡ್ಡಿ ಗೋವಿಂದರಾಜ, ಕಲ್ಪಿತ ವಾಸ್ತವ, ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೯.

೨೦. ಗಿರಿಜಾ ಶಾಸ್ತ್ರಿ, ಆಧುನಿಕ ಸಣ್ಣಕಥೆಗಳು, ಒಂದು ಸ್ತ್ರೀವಾದಿ ಅಧ್ಯಯನ, ಮಂಟಪಮಾಲೆ–೭೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೧. ಫ್ರೆಡರಿಕ್ ಏಂಗೆಲ್ಸ್(ಮೂ), ಗೋಪಾಲಕೃಷ್ಣರಾವ್ ಕೆ.ಎಲ್.(ಅನು), ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ: ಇವುಗಳ ಉಗಮ, ಪ್ರಗತಿ ಪ್ರಕಾಶನ, ೧೯೮೦.

೨೨. ಚಂದ್ರಶೇಖರ ಬಿ. ದಾಮ್ಲೆ, ಭಾರತೀಯ ಸಾಮಾಜಿಕ ಅಧ್ಯಯನ, ನವೀನ ಪ್ರಕಾಶನ, ಬೆಂಗಳೂರು, ೧೯೯೭.

೨೩. ಛಾಯಾದಾತಾರ್(ಮೂಲ), (ಅನು)ಸರಸ್ವತೀ ರಿಸಬೂಡ, ಸ್ತ್ರೀ–ಪುರುಷ, ಇಳಾ ಪ್ರಕಾಶನ, ಬೆಂಗಳೂರು, ೧೯೯೨.

೨೪. ಜಗದೀಶ ವಿ., ಮಾನವಶಾಸ್ತ್ರ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫.

೨೫. ಜಯಶ್ರೀ(ಸಂ), ಲಿಂಗವ್ಯವಸ್ಥೆ ಮತ್ತು ಸಮಾಜ, ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೨೬. ಜ್ಯೋತಿ ಶಶಿಕುಮಾರ್, ಮಹಿಳಾ ಸಾಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೭. ತಾರಾಬಾಯಿ ಶಿಂಧೆ(ಮೂಲ), ಸುಜ್ಞಾನಮೂರ್ತಿ ಬಿ.(ಅನು), ಪುರುಷ ಅಹಂಕಾರಕ್ಕೆ ಸವಾಲ್, ಲಡಾಯಿ ಪ್ರಕಾಶನ, ಗದಗ, ೨೦೧೦.

೨೮. ತಾರಿಣಿ ಶುಭದಾಯಿನಿ ಆರ್., ಸನ್ನೆಗೋಲು, ಸಿವಿಜಿ ಇಂಡಿಯಾ, ಬೆಂಗಳೂರು, ೨೦೧೪.

೨೯. ತೇಜಸ್ವಿನಿ ನಿರಂಜನ(ಸಂ.), ಸೀಮಂತಿನಿ ನಿರಂಜನ(ಸಂ.), ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕನ್ನಡ ಸಂಘ, ಬೆಂಗಳೂರು, ೧೯೯೪.

೩೦. ನಂಜಮ್ಮಣ್ಣಿ ಎಂ, ಸಮಾಜಶಾಸ್ತ್ರ ಪರಿಚಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೨.

೩೧. ನಾಗಭೂಷಣ ಡಿ.ಎಸ್., ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ, ಲೋಹಿಯಾ ಪ್ರಕಾಶನ, ಬಳ್ಳಾರಿ, ೧೯೮೦.

೩೨. ನಾಗವೇಣಿ ಎಚ್, ಕನ್ನಡದ ಕಥೆಗಾರ್ತಿ ಗೌರಮ್ಮ, ಮಂಟಪಮಾಲೆ–೧೭೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೩೩. ನಾರಾಯಣ ಎಂ., ಸಮಾಜಶಾಸ್ತ್ರ ಪರಿಚಯ, ಚೇತನ ಬುಕ್ ಹೌಸ್, ಮೈಸೂರು, ೨೦೦೪.

೩೪. ನಂದೀಶ್ವರ ದಂಡೆ(ಸಂ.), ಸಣ್ಣಕತೆ ಎಂದರೇನು, ವಿಜಯಕಲ್ಯಾಣ ಪ್ರಕಾಶನ, ಹೊಸಪೇಟೆ, ೨೦೧೫.

೩೫. ನೇಮಿಚಂದ್ರ, ಮಹಿಳಾ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು, ೨೦೦೧.

೩೬. ಪೂರ್ವಾಚಾರ್ ಎಂ., ಭಾರತೀಯ ಸಮಾಜ ಪರಿಚಯ, ಚೇತನ ಬುಕ್ ಹೌಸ್, ಮೈಸೂರು, ೨೦೦೪.

೩೭. ಫೆಮಿನಿಸ್ಟ್ ಸ್ಟಡಿ ಸರ್ಕಲ್(ಮೂಲ), ಸುಜ್ಞಾನಮೂರ್ತಿ ಬಿ.(ಅನು.), ನಮಗೆ ಗೋಡೆಗಳಿಲ್ಲ, ಲಡಾಯಿ ಪ್ರಕಾಶನ, ಗದಗ, ೨೦೦೯.

೩೮. ಬಸವರಾಜ ಸಾದರ(ಸಂ), ಇಪ್ಪತ್ತನೆಯ ಶತಮಾನ ಕನ್ನಡ ಸಾಹಿತ್ಯ ಘಟ್ಟಗಳು, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೨೦೦೨.

೩೯. ಬಿದರಿ ಚಂದ್ರಕಲಾ, ಮಹಿಳಾ ಬದುಕು, ತನುಮನು ಪ್ರಕಾಶನ, ಮೈಸೂರು, ೨೦೦೯.

೪೦. ಬೋರಲಿಂಗಯ್ಯ ಹಿ.ಚಿ.(ಸಂ.), ಕುವೆಂಪು ಮಹಿಳಾ ಮಂಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೪೧. ಭೈರಪ್ಪ ಕೆ., ಭಾರತೀಯ ಸಮಾಜದ ಸಮಾಜಶಾಸ್ತ್ರ ಭಾಗ–೨, ಚೇತನ ಬುಕ್ ಹೌಸ್, ಮೈಸೂರು, ೨೦೦೭.

೪೨. ಮಲ್ಲಿಕಾ ಘಂಟಿ, ಕನ್ನಡದಲ್ಲಿ ಮಹಿಳಾ ಕಥಾಸಾಹಿತ್ಯ, ಯುವಲೋಕ ಪ್ರಕಾಶನ, ಧಾರವಾಡ, ೧೯೯೪.

೪೩. ಮಲ್ಲಿನಾಥಯ್ಯ ಡಿ.ಎಚ್.(ಅನು), ವಿಲಿಯಂ ಎಫ್. ಆಗ್ಬರ್ನ್, ಮೆಯರ್ ಎಫ್. ನಿಮ್ಕಾಫ್(ಮೂಲ), ಸಮಾಜಶಾಸ್ತ್ರ ಕೈಪಿಡಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೫.

೪೪. ಮೀರಾ ಎಲ್.ಜಿ, ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, ಶಕ್ತಿ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಬೆಂಗಳೂರು, ೨೦೦೪.

೪೫. ಯರ್ರಿಸ್ವಾಮಿ, ಗ್ರಹಿಕೆ, ಗೀತಾಂಜಲಿ ಪುಸ್ತಕ, ಪ್ರಕಾಶನ, ಶಿವಮೊಗ್ಗ, ೨೦೧೦.

೪೬. ರಹಮತ್ ತರೀಕೆರೆ(ಸಂ), ಹೊಸ ತಲೆಮಾರಿನ ತಲ್ಲಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೪೭. ರಹಮತ್ ತರೀಕೆರೆ, ಅಕ್ಕಮಹಾದೇವಿ ವಚನಗಳು: ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೪೮. ರಾಗೌ(ಸಂ.), ಮಹಿಳಾ ಅಧ್ಯಯನ ಆಯಾಮಗಳು, ಶ್ರೀಮತಿ ಯಶೋದಾ ರಾಗೌ ಟ್ರಸ್ಟ್, ಮೈಸೂರು, ೨೦೦೦.

೪೯. ರಾಜಶೇಖರ್ ಎಸ್, ಭಾರತೀಯ ಸಮಾಜ, ಭ್ರಮರ ಪ್ರಕಾಶನ, ಶಿವಮೊಗ್ಗ, ೨೦೦೧.

೫೦. ರಾಜಶೇಖರಯ್ಯ ಎಲ್., ವಿವಾಹ ಪದ್ಧತಿ, ಅಭಿರುಚಿ ಪ್ರಕಾಶನ, ೨೦೦೨.

೫೧. ರಾಜೇಂದ್ರ ತಗಡ್ಲಿ ಟಿ., ಶಿವರಾಮ ಕಾರಂತರ ಕಾದಂಬರಿಗಳು: ಸ್ತ್ರೀ ಸಂಕಥನದ ಸ್ವರೂಪ, ದೇಸಿ ಪುಸ್ತಕ, ಬೆಂಗಳೂರು, ೨೦೦೯.

೫೨. ರಾಮಚಂದ್ರ ಜೋಷಿ, ಭಾರತೀಯ ಸಮಾಜ ರಚನೆ ಮತ್ತು ಪರಿವರ್ತನೆ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, ೨೦೦೫.

೫೩. ರಾಮಚಂದ್ರನ್ ಸಿ.ಎನ್., ತ್ರಿವೇಣಿ(ಅನುಸೂಯ ಶಂಕರ), ಭಾರತೀಯ ಸಾಹಿತ್ಯ ನಿರ್ಮಾಪಕರು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೯.

೫೪. ರಾಹು(ಅನು), ಟೆರ್ರಿ ಈಗಲ್‌ಟನ್(ಮೂಲ), ಕಾರ್ಪೋರೇಟ್ ಕಾಲದಲ್ಲೂ ಕಾರ್ಲ್ ಮಾರ್ಕ್ಸ್ ಪ್ರಸ್ತುತ, ಚಿಂತನ ಪುಸ್ತಕ, ಬೆಂಗಳೂರು, ೨೦೧೪.

೫೫. ರಾಹು(ಅನು), ಕನಕ ಮುಖರ್ಜಿ(ಮೂಲ), ಭಾರತೀಯ ಮಹಿಳಾ ವಿಮೋಚನೆಯ ಆಂದೋಲನ, ಲಡಾಯಿ ಪ್ರಕಾಶನ, ಗದಗ, ೨೦೧೨.

೫೬. ಲತಾ ಅಭಯ್ಯ, ಕಲ್ಲು ಬೆಂಕಿಗಳಿಂದ ನಲಿವು ಬೆಳಕಿನೆಡೆಗೆ, ಸತ್ಯ ಎಂಟರ್ ಪ್ರೈಸಸ್, ಬೆಂಗಳೂರು, ೨೦೦೮.

೫೭. ವಿಜಯಲಕ್ಷ್ಮಿ ಕೆ.ಎಂ., ಹೊಸಗನ್ನಡದ ೭೫ ಲೇಖಕಿಯರು(ಬದುಕು, ಬರಹ ಮತ್ತು ಸಾಧನೆ), ಸುಮುಖ ಪ್ರಕಾಶನ, ಬೆಂಗಳೂರು, ೨೦೦೮.

೫೮. ವಿಜಯಶ್ರೀ ಸಬರದ(ಸಂ.), ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ವಿಚಾರ ಸಾಹಿತ್ಯ, ಸಂಪುಟ-೭, ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ, ೨೦೧೩.

೫೯. ವಿಠಲರಾವ್ ಟಿ. ಗಾಯಕ್ವಾಡ್(ಅನು), ಲೀಲಾ ಪಾಟೀಲ(ಮೂಲ), ಭಾರತೀಯ ಸ್ತ್ರೀ-ಜೀವನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೬೦. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೬೧. ವಿವಿಧ ಲೇಖಕರು, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬.

೬೨. ವೈದೇಹಿ, ಮುಂತಾದ ಕೆಲ ಪುಟಗಳು, ಸರಸ್ವತಿ ಬಾಯಿ ರಾಜವಾಡೆ ಅವರ ಬದುಕು ಮತ್ತು ಬರಹ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೮.

೬೩. ಶಕುಂತಲಾ ಸಿದ್ಧರಾಮ ದುರುಗಿ, ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ, ಉಜ್ವಲ ಪ್ರಕಾಶನ, ಗುಲಬರ್ಗಾ, ೧೯೯೯.

೬೪. ಶಾಂತಾ ಇಮ್ರಾಪುರ(ಪ್ರಸಂ), ನಿರ್ದಿಗಂತ, ಸಂಪುಟ–೧, ೨, ವೀಣಾ ಶಾಂತೇಶ್ವರ ಅಭಿನಂದನ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ, ೨೦೦೯.

೬೫. ಶಿವಾನಂದ ಎಸ್. ವಿರಕ್ತಮಠ(ಸಂ), ಮಹಿಳಾ ಅಧ್ಯಯನ, ಸಂಪುಟ–೭, ಸಂಚಿಕೆ–೧, ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೬೬. ಶಾರಾದ ಮುಳ್ಳೂರ, ಕೊಡಗಿನ ಗೌರಮ್ಮ ಮತ್ತು ತ್ರಿವೇಣಿ ಅವರ ಸಾಹಿತ್ಯ ಅವಲೋಕನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೧.

೬೭. ಶಾಂತಾ ಇಮ್ರಾಪುರ(ಸಂ), ಒಣಗಬಾರದು ಒಡಲ ಚಿಲುಮೆ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೫.

೬೮. ಶಿವಲಿಂಗಪ್ಪ ಆಯ್. ಭಂಡಾರಿ, ಕನ್ನಡ ಕಾದಂಬರಿಗಳಲ್ಲಿ ಸ್ತ್ರೀ, ಶರಣಸ್ಫೂರ್ತಿ ಎಸ್.ಬಿ. ಪ್ರತಿಷ್ಠಾನ, ಗುಲಬರ್ಗಾ, ೨೦೧೦.

೬೯. ಶಿವಾನಂದ ಎಸ್. ವಿರಕ್ತಮಠ, ಮಹಿಳೆ ಮತ್ತು ಧರ್ಮ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

೭೦. ಶ್ಯಾಮಚರಣ ದುಬೆ, ಭಾರತೀಯ ಸಮಾಜ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ನವದೆಹಲಿ, ೧೯೯೪.

೭೧. ಶೈಲಜ ಹಿರೇಮಠ, ಸ್ತ್ರೀ ಕಥನ, ಭುವನ ಪ್ರಕಾಶನ, ೨೦೦೩.

೭೨. ಶೈಲಜ ಹಿರೇಮಠ(ಸಂ), ಮಹಿಳಾ ಅಧ್ಯಯನ, ಸಂಪುಟ ೮, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೭೩. ಶೈಲಜ ಹಿರೇಮಠ(ಸಂ), ಮಹಿಳಾ ಅಧ್ಯಯನ, ಸಂಪುಟ–೯, ಸಂಚಿಕೆ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೭೪. ಶ್ರೀಮತಿ ಎಚ್.ಎಸ್., ಸ್ತ್ರೀವಾದ, ಚಿಂತನ ಮಾಲೆ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೭೫. ಶ್ರೀಮತಿ ಎಚ್.ಎಸ್.(ಸಂ), ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೭೬. ಶ್ರೀಮತಿ ಎಚ್.ಎಸ್.(ಅನು.), ಬೆಟ್ಟಿ ಫ್ರೀಡನ್(ಮೂಲ), ಹೆಣ್ಣುತನ ಎಂಬ ಕಣ್ಕಟ್ಟು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೦.

೭೭. ಶ್ರೀಮತಿ ಎಚ್.ಎಸ್, ಹೆಣ್ಣು ಬರಹದ ಒಳಬಂಡಾಯ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೦.

೭೮. ಶ್ರೀಮತಿ ಎಚ್.ಎಸ್., ಸಿಮೊನ್‌ದ ಬೋವಾ ಸೆಕೆಂಡ್ ಸೆಕ್ಸ್, ಅಧ್ಯಯನ ಮಂಡಲ, ಬೆಂಗಳೂರು, ೨೦೦೭.

೭೯. ಶ್ರೀಮತಿ ಎಚ್.ಎಸ್, ಸ್ತ್ರೀವಾದ ಆನ್ವಯಿಕತೆ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೨.

೮೦. ಶ್ರೀಮತಿ ಎಚ್.ಎಸ್, ಸ್ತ್ರೀವಾದ ತಾತ್ತ್ವಿಕತೆ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೨.

೮೧. ಶ್ರೀಮತಿ ಎಚ್.ಎಸ್., ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೮೨. ಶ್ರೀಮತಿ ಎಚ್.ಎಸ್., ಶಿವಾನಂದ ಎಸ್. ವಿರಕ್ತಮಠ, ಕೃಷ್ಣ ಜೆ.(ಸಂ), ಮಹಿಳೆ, ದುಡಿಮೆ ಮತ್ತು ಬಿಡುವು, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೮೩. ಶ್ರೀವಳ್ಳಿ ಟಿ.ಎಸ್., ಸರಸ್ವತಿಬಾಯಿ ರಾಜವಾಡೆ, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು, ೨೦೦೦.

೮೪. ಷರೀಫಾ ಕೆ, ಬತ್ತಳಿಕೆ, ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ, ಗುಲಬರ್ಗಾ, ೨೦೧೧.

೮೫. ಷರೀಫಾ ಕೆ, ಮುಸ್ಲಿಂ ಮಹಿಳಾ ಸಂವೇದನೆ, ಅಂಕಿತ ಪುಸ್ತಕ, ಬೆಂಗಳೂರು, ೨೦೧೧.

೮೬. ಸದಾಶಿವಯ್ಯ ಎಚ್.ಎಮ್., ಸಮಾಜಶಾಸ್ತ್ರ ಭಾಗ–೧, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೮೭. ಸತ್ಯನಾರಾಯಣ ಕೆ, ದಾಂಪತ್ಯಕ್ಕೊಂದು ಶೀಲ, ಅಭಿನವ ಪ್ರಕಾಶನ, ಬೆಂಗಳೂರು, ೧೯೯೫.

೮೮. ಸತ್ಯಲಿಂಗರಾಜು ಜಿ. ಆರ್, ಮಾನವಶಾಸ್ತ್ರದ ಮೂಲಾಂಶಗಳು, ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, ೨೦೦೬.

೮೯. ಸಬಿಹಾ ಭೂಮಿಗೌಡ, ಮಲ್ಲಿಕಾ ಘಂಟಿ(ಸಂ), ಕನ್ನಡ ಸಾಹಿತ್ಯ ಮತ್ತು ಮಹಿಳೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬.

೯೦. ಸಬಿಹಾ ಭೂಮಿಗೌಡ(ಸಂ), ಮಹಿಳಾ ಆತ್ಮಕಥೆಗಳು: ಅನುಸಂಧಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭.

೯೧. ಸಬಿಹಾ ಭೂಮಿಗೌಡ, ಮಹಿಳೆ ಇಂದಿನ ಸವಾಲುಗಳು, ಲಡಾಯಿ ಪ್ರಕಾಶನ, ಗದಗ, ೨೦೧೪.

೯೨. ಸಬಿಹಾ ಭೂಮಿಗೌಡ, ನಿಲುಮೆ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು, ೨೦೦೫.

೯೩. ಸಬಿಹಾ ಭೂಮಿಗೌಡ, ಲಿಂಗತ್ವ ಸಮನ್ಯಾಯದೆಡೆಗೆ, ಕರ್ನಾಟಕ ಸಂಘ, ಮಂಡ್ಯ, ೨೦೦೮.

೯೪. ಸುಮಿತ್ರಾಬಾಯಿ ಬಿ.ಎನ್., ಸ್ತ್ರೀವಾದ, ಕರ್ನಾಟಕ, ಸಾಹಿತ್ಯ, ಅಕಾಡೆಮಿ, ಬೆಂಗಳೂರು, ೧೯೯೯.

೯೫. ಸರಸ್ವತಿದೇವಿ ಗೌಡರ, ಮಹಿಳಾ ಜೀವನದ ಸಮಸ್ಯೆಗಳು ಮತ್ತು ಪರಿಹಾರ, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್, ಧಾರವಾಡ, ೧೯೯೮.

೯೬. ಹಾಲತಿ ಸೋಮಶೇಖರ, ಮಹಿಳಾ ಚಳುವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ವಿಸ್ಮಯ ಪ್ರಕಾಶನ, ಮೈಸೂರು, ೨೦೦೭.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ